Applications from Sec Grade or Hr. Grade Trained Teachers are received in person for the Temporary vacancy likely to commence from 1—11-1966. Selected candidate should be prepared to report for duty immediately.

R. Kotian.
Correspondent,
B. E. M. Jr. Basic Hr. Ele. School,
Parkala, S. K.

FOR MODERN MAN AN ACCURATE WRIST WATCH IS AN ESSENTIAL TOOL!



FOR ALL TYPES OF
- WATCHES
- CLOCKS
- TIMEPIECES

VISIT OUR NEW ENTERPRISE

KARNATAK WATCH Co.,
13, GUNBOW STREET,
BOMBAY-1

- We undertake all sorts of repairings of all types of watches clocks timepieces etc., under supervision of experts.

Prop Kadekar Krishna N. Shetty

ಪುಕ್ಕೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O S. 131/66.

A. H. ಇಸ್ಮಾಯಿಲ್ ಸಕಾ— ವಾದಿಯ.
ಮಹೇಶ ಕಡಾ —ಪ್ರತಿವಾದಿಯ.
1ನೇ ಪ್ರತಿವಾದಿ :— ಮಹೇಶ —

Driver, C/o Messrs. Saraswathi Rice Mills, Ediga, Mysore.

ಸದ್ರಿ 1ನೇ ಪ್ರತಿವಾದಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ಮೇಲಿನ 1ನೇ ವಾದಿಯು ರಜೀದಿಗೆ ಅವನಪ್ಪದ ಜಬ್ತು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯನ್ನು ತಾ. 26-11-66 ಕ್ಕೆ ನಿಮ್ಮ ನೇಮಕಾತಿನ ಬಗ್ಗೆ ಇಷ್ಟಾರ್ಥವಿದ್ದ. ಸದ್ರಿ ದಿವಸ ಈ ಕೋರ್ಟಿಗೆ ನುಂದೆ ಹಾಜರಾಗಿ ಉತ್ತರವನ್ನು ತಕ್ಕದ್ದು. ಕಪ್ಪುದ್ದಿಲ್ಲಿ ನಿಮ್ಮನ್ನು ನಿಮ್ಮ ವಿರುದ್ಧ ಯುಕ್ತಕಂಡಂತೆ ತೀರ್ಮಾನಿಸಲಾಗುವುದು.

(Sd) M. Sadashiva Rao
Vakil for plaintiff.

ಪುಕ್ಕೂರು, ತಾ. 26—10—66.

ವಿಶ್ವಶಾಂತಿಯ ಕ

ಉಪರಾಷ್ಟ್ರಪತಿ ಜಾಕೀರ್ ಹುಸೇನರನ್ನು ಬಲ್ಗೇರಿಯಾ ರಾಯಭಾರಿ ಸ್ವಾಗತಿಸಿ ರಾಷ್ಟ್ರೀಯ ದಿನದ ಸಭೆಗೆ ಕರೆದೊಯ್ದರು.

ಖ್ಯಾತ ಇತಿಹಾಸಕಾರ ಅರ್ನಾಲ್ಡ ಟ್ರಾಯನ್‌ಬಿ ನೆಹರೂ ಅವರನ್ನು ಕುರಿತು ಒಂದೆಡೆ ಹೀಗೆ ಹೇಳಿದ್ದಾರೆ.

"ನೆಹರೂ ಅವರ ಕಾಲದಲ್ಲಿ ವಿಶ್ವವು ಒಳಿತಿಗೇ ಆಗಲಿ ಅಥವಾ ಕೆಡುಕಿಗೇ ಆಗಲಿ ಒಂದಂಗಿ ಬೆಳೆಯಿತು. ಇಡೀ ವಿಶ್ವವನ್ನೇ ತಮ್ಮ ಕಾರ್ಯಾಚಟುವಟಿಕೆಗಳ ಕ್ಷೇತ್ರವನ್ನಾಗಿ ಮಾಡಿಕೊಂಡವರಲ್ಲಿ ನೆಹರೂ ಅವರೇ ಮೊದಲಿಗರು."

ಟ್ರಾಯನ್‌ಬಿ ಅವರ ಈ ಮಾತುಗಳು ನೆಹರೂ ಅವರ ವ್ಯಕ್ತಿತ್ವದ ಮಹತಿಯನ್ನು ಸಾರಿಹೇಳುತ್ತಿವೆ. ನೆಹರು ಅವರು ತಮ್ಮ ಜೀವಮಾನದುದ್ದಕ್ಕೂ ಹೋರಾಟಗಾರರಾಗಿದ್ದರು. ತಮ್ಮ ದೇಶಬಾಂಧವರಿಗಷ್ಟೇ ಅಲ್ಲದೇ, ಇಡಿ ಮಾನವ ಜನಾಂಗದ ಸ್ವಾತಂತ್ರ್ಯ ಹಾಗೂ ಘನತೆಗೌರವಗಳ ಸಾಧನೆಗಾಗಿ ಹೋರಾಡಿದರು.

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಮಹಾತ್ಮಾ ಗಾಂಧೀಜಿ ಅವರನ್ನು ಬಿಟ್ಟರೆ, ನೆಹರೂ ಅವರು ಭಾರತೀಯರ ಆಶೆ ಆಂಕಾಂಕ್ಷೆಗಳ ಸೂಕ್ಷ್ಮ ಪ್ರತಿರೂಪವಾಗಿದ್ದರು. ಅಗರ್ಭ ಶ್ರೀಮಂತರ ಮನೆಯಲ್ಲಿ ಜನಿಸಿದ, ಹ್ಯಾರೋ, ಕೇಂಬ್ರಿಜ್‌ಗಳಲ್ಲಿ ಶಿಕ್ಷಣಪಡೆದ ಜವಾಹರಲಾಲ್ ನೆಹರೂ, ಕಷ್ಟ—ಕಾರ್ಪಣ್ಯಗಳ ಹಾಗೂ ಸತತ ಪರಿಶ್ರಮದ ಮಾರ್ಗವನ್ನು ಆರಿಸಿಕೊಂಡದ್ದು ವಿರೋಧಾಭಾಸವೇ ಸರಿ.

ತಮ್ಮ ಜನರನ್ನು ಬಡತನ ಅಜ್ಞಾನ ಹಾಗೂ ಪರಕೀಯರ ದಾಸ್ಯದಿಂದ ಮುಕ್ತಗೊಳಿಸಲು ನೆಹರೂ ಈ ಕಠಿಣ ವೃತವನ್ನು ಕೈಗೊಂಡರು.

ನೆಹರೂ ಅವರು ಬಾಲ್ಯದಿಂದಲೂ ಸೂಕ್ಷ್ಮ ಪ್ರತಿಭಾವಂತರಾಗಿದ್ದರು. ರಷ್ಯಾ ಮತ್ತು ಜಪಾನ್‌ಗಳ ನಡುವೆ ನಡೆದ ಯುದ್ಧ ಬಾಲಕ ನೆಹರೂರ ಮನಸ್ಸಿನ ಮೇಲೆ ಗಹನವಾದ ಪ್ರಭಾವವನ್ನು ಬೀರಿತು. ಆನಂತರ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಒಬ್ಬ ಸ್ವಾತಂತ್ರ್ಯ ಭಾವನೆಗಳು ನನ್ನ ಮನಸ್ಸನ್ನು ಆಕ್ರಮಿಸಿದವು ಯೂರೋಪಿನ ಅಧಿಪತ್ಯದಿಂದ ಭಾರತ ಹಾಗೂ ಏಷ್ಯಾದ ರಾಷ್ಟ್ರಗಳನ್ನು ಹೇಗೆ ವಿಮೋಚನೆಗೊಳಿಸಬೇಕು ಎಂದು ನಾನು ಯೋಚಿಸುತ್ತಿದ್ದೆ. ಕೈಯಲ್ಲಿ ಖಡ್ಗ ಹಿಡಿದು ಭಾರತದ ಬಂಧವಿಮೋಚನೆಗಾಗಿ ಹೋರಾಡುತ್ತಿದ್ದ ಹಾಗೆ ಕನಸು ಕಾಣುತ್ತಿದ್ದೆ" ಎಂದು ಹೇಳಿದ್ದಾರೆ.

ಜವಾಹರಲಾಲ್ ನೆಹರೂ ಅವರು ೧೫ ವರ್ಷದವರಿದ್ದಾಗ ಅಂದರೆ ೧೯೦೫ರಲ್ಲಿ ಅವರನ್ನು ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲಾಯಿತು. ೧೯೦೬—೧೯೧೫ ವರ್ಷದುದ್ದಕ್ಕೂ ಭಾರತೀಯರ ಮನಸ್ಸಿನಲ್ಲಿ ಸ್ವರಾಜ್ಯ ಸ್ವಯಮೂಡಳಿತ ಭಾವನೆಗಳು ಬೆಚ್ಚನೆ ಪ್ರಧಾನ್ಯ ಪಡೆದವು. ಲಾರ್ಡ್ ಕರ್ಜನರ ಬಂಗಾಳ ವಿಭಜನೆಗೆ ದೇಶದಾದ್ಯಂತ ವಿರೋಧ ವ್ಯಕ್ತಪಟ್ಟಿತು. ಸ್ವದೇಶಿ ವೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ ನೀಡುವ ಪ್ರವೃತ್ತಿ ಬಲವಾಯಿತು. ಜೊತೆಗೆ ವ್ಯಾಪಕ ಸ್ವರೂಪದ ಶಿಕ್ಷಣಕ್ಕಾಗಿ ಆಂದೋಲನವೂ ಆರಂಭವಾಯಿತು.

'ಇವಲ್ಲವೂ ನನ್ನನ್ನು ಅದ್ಭುತ ರೀತಿಯಲ್ಲಿ ಜಾಗೃತಗೊಳಿಸಿದವು. ಆದರೆ ನಾನು ಅಧ್ಯಯನ ಮಾಡುತ್ತಿದ್ದ ಹ್ಯಾರೋ ನಗರದಲ್ಲಿನ್ನ ಅಭಿಪ್ರಾಯಗಳನ್ನು ಆರಿಸಿಕೊಳ್ಳುವಂತಹ ಜನ ಯಾರೂ ಇರಲಿಲ್ಲ' ಎಂದು ನೆಹರೂರವರು ಹೇಳಿದ್ದಾರೆ.

ಜವಾಹರಲಾಲ್ ನೆಹರೂ ಅವರು ಇಂಗ್ಲೆಂಡಿನಲ್ಲಿ ತಾಯ್ನಾಡಿಗೆ ಮರಳಿ ಬಂದರು ಅಲಹಾಬಾದ್ ಹೈಕೋರ್ಟಿನಲ್ಲಿ ವಕೀಲ ವೃತ್ತಿಯನ್ನು ಕೈಗೊಂಡರು. ಆದರೆ ಈ ವೃತ್ತಿ ಅವರಿಗೆ ನೀರಸವೆಂದು ಕಂಡು ಬಂತು. ಮುಂದೆ ಅವರು ರಾಜಕೀಯದ ಕ್ಷೇತ್ರದಿಂದ ಹೆಚ್ಚು ಆಕರ್ಷಿತರಾದರು. ೧೯೧೭ರಲ್ಲಿ ಪಾಟ್ನಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು ಬಳಿಕ ಲೋಕಮಾನ್ಯ ತಿಲಕ್ ಮತ್ತು ಶ್ರೀಮತಿ ಅನಿಬಿಸೆಂಟರವರ ಆತ್ಮೀಯತೆಯಲ್ಲಿ ಹೋಂ ರೂಲ್ ಲೀಗ್‌ಗೆ ಸದಸ್ಯರಾದರು.

೧೯೧೯ನೇ ವರ್ಷವು ನೆಹರೂ ಅವರ ಜೀವನದ ದಿಶೆಯನ್ನೇ ಬದಲಿಸಿತು. ಆ ವರ್ಷ ಅವರು ಮಹಾತ್ಮಾ ಗಾಂಧೀಜಿ ಅವರನ್ನು ಮೊತ್ತ ಮೊದಲಬಾರಿಗೆ ಭೇಟಿ ಮಾಡಿದರು. ಗಾಂಧೀಜಿ ಅವರು ದಕ್ಷಿಣ ಆಫ್ರಿಕೆಯಿಂದ ಆದೇ ಆಗ ಭಾರತಕ್ಕೆ ಆಗಮಿಸಿದ್ದರು. ಗಾಂಧೀಜಿ ಅವರು ಭಾರತದ ರಾಜಕೀಯದ ಮೇಲೆ ಹೆಚ್ಚಿನ ಪ್ರಭಾವ ಬೀರಿ, ಬ್ರಿಟಿಷ ಆಳರಸರ ವಿರುದ್ಧ ಅಹಿಂಸಾಕಾರ ಆಂದೋಲನಗಳನ್ನು ಆರಂಭಿಸಿದ್ದ ಕಾಲವದು. ಈ ಇಬ್ಬರು ಮಹಾನ್ ವ್ಯಕ್ತಿಗಳ ಮಿಲನವು, ಇತಿಹಾಸದ ದೃಷ್ಟಿಯಿಂದ ಭಾರೀ ಮಹತ್ವಪೂರ್ಣವೆನಿಸಿತು.

ಮುಂದೆ ಗಾಂಧೀಜಿ ಮತ್ತು ನೆಹರೂ ಇಬ್ಬರೂ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ್ನು ಸೇರಿದರು. ಆರಂಭದಿಂದಲೂ ಕಾಂಗ್ರೆಸ್ ಸಂಸ್ಥೆ, ರಾಷ್ಟ್ರೀಯ ಪ್ರಜ್ಞೆಯ ಸಂಕೇತವೆನಿಸಿತು.

ಅಂದಿನಿಂದ ಮುಂದೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಸಂಘಟನೆ ಹಾಗೂ ಕಾರ್ಯನೀತಿ ನಿರೂಪಣೆಗೆ ಗಾಂಧೀಜಿಯವರಂತೆ ನೆಹರೂ ಅವರು ಕಾರಣರಾದರು. ಬ್ರಿಟಿಷರ ವಿರುದ್ಧ ಅಹಿಂಸೆಯಿಂದ ಹೋರಾಡಬೇಕೆಂದು ಗಾಂಧೀಜಿ ಅವರು ಹೇಳುತ್ತಿದ್ದರು. ಈ ವಿಚಾರ ಸರಣಿಯನ್ನು ನೆಹರೂ ಒಪ್ಪಿಕೊಂಡರು. ಆಗಿನ ಬಡತನದ ಪರಿಸ್ಥಿತಿಯಲ್ಲಿ ಶೋಷಣೆಯ ವಿರುದ್ಧ ಹೋರಾಟ ನಡೆಸಲು, ಅಹಿಂಸಾತ್ಮಕ ವಿಧಾನಗಳಿಂದ ಮಾತ್ರ ಸಾಧ್ಯವೆಂದು ಅವರು ಅರಿತುಕೊಂಡರು. ೧೯೩೭ರ ನಂತರ ಅಸಹಕಾರ ಮತ್ತು ಅಹಿಂಸೆಗಳು ರಾಷ್ಟ್ರೀಯ ಹೋರಾಟದ ಎರಡು ಮಹತ್ವಪೂರ್ಣ ಅಂಶಗಳೆನಿಸಿದವು.

೧೯೩೭ರ ಡಿಸೆಂಬರ್ ೩೧ರಂದು ರಾವಿ ನದಿ ದಂಡೆಯ ಮೇಲೆ ನೆಹರು ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಮಾವೇಶಗೊಂಡು, ಸಂಪೂರ್ಣ ಸ್ವಾತಂತ್ರ್ಯವನ್ನು ತನ್ನ ಧ್ಯೇಯವನ್ನಾಗಿ ಸ್ವೀಕರಿಸಿತು. ನೆಹರೂ ಅವರಿಗೆ, ನೆರೆಮನೆಯು ಅವರ ಎರಡನೆಯ ಮನೆಯೊಗಿ ಪರಿಣಮಿಸಿತ ನೆಹರೂ ಅವರು ಒಟ್ಟು ಒಂಭತ್ತು ಸಲ ಜೈಲಿಗೆ ಹೋದರು. ಒಂಭತ್ತಕ್ಕೂ ಹೆ

ಅಪರೂಪ – ನೆಹರು

ಬೋರಿಸ್ ಜಾಜೀರು ಚಿತ್ರಿಸಿದ ಮಹಾತ್ಮಾ ಗಾಂಧಿ

ಚ್ಚು ವರ್ಷಗಳನ್ನು ಜೈಲಿನಲ್ಲಿಯೇ ಕಳೆದರು. ಸೆರೆಮನೆ ವಾಸವು ನೆಹರೂ ಜೀವನಕ್ಕೆ ಸ್ನೇಹಮುಗಳನ್ನು ಮೆಲುಕು ಹಾಕಲು ಅವಕಾಶವನ್ನು ಒದಗಿಸಿ ಕೊಟ್ಟಿತು. ದೂರದೃಷ್ಟಿ, ಸಾಹಿತ್ಯಿಕ ಪ್ರತಿಭೆಗೆ ಹೆಸರಾದ ಆಟೊಬಾಯೊಗ್ರಫಿ ಗ್ಲಿಂಪ್ಸ್ ಆಫ್ ವರ್ಲ್ಡ್ ಹಿಸ್ಟರಿ ಮತ್ತು ಡಿಸ್ಕವರಿ ಆಫ್ ಇಂಡಿಯಾ ಇವೇ ಮೊದಲಾದ ಖ್ಯಾತ ಕೃತಿಗಳನ್ನು ನೆಹರೂ ಸೆರೆಮನೆಯಲ್ಲಿದ್ದಾಗಲೇ ಬರೆದರು.

. ನೆಹರೂ ಅವರು ಕಾಂಗ್ರೆಸ್ಸಿನ ವ್ಯವಹಾರಗಳಲ್ಲಿ ಆಸಕ್ತಿ ತಳೆಯುವುದರ ಜೊತೆಗೆ ಭಾರತೀಯ ರೈತರ ಸಮಸ್ಯೆಗಳತ್ತ ಗಮನ ಹರಿಸಿದರು. ಅವರು ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿದರು. ಭಾರತೀಯರೆಲ್ಲರಿಗೂ ಪರಿಚಿತರಾದರು. ಇಷ್ಟು ಹೊತ್ತಿಗಾಗಲೇ ಜವಾಹರರ ಜನಪ್ರಿಯತೆ ಹೆಚ್ಚಿತು.

೧೯೩೦ರ ನಂತರ ಗಾಂಧೀಜಿ ಅವರನ್ನು ಬಿಟ್ಟರೆ ಜವಾಹರಲಾಲ್ ನೆಹರು ಅವರೇ ಎಂಡನೆಯ ರಾಷ್ಟ್ರೀಯ ನಾಯಕರೆಂದು ಮನ್ನಣೆ ಪಡೆದರು. ಪರಕೀಯರ ದಾಸ್ಯಕ್ಕೊಳಗಾದ ರಾಷ್ಟ್ರಗಳ ಜನತೆಯ ವಕ್ತಾರರೆಂದು ಖ್ಯಾತರಾದರು. ಅಂತರಾಷ್ಟ್ರೀಯ ಪರಿಸ್ಥಿತಿ ಸೂಕ್ಷ್ಮ ಪರಿಣತಿ. ನೆಹರೂ ಅವರೂ ರಾಷ್ಟ್ರೀಯ ಪ್ರಜ್ಞೆಯ ಬೆಳವಣಿಗೆ ಸಲ್ಲಿಸಿದ ವಿಶೇಷ ಕಾಣಿಕೆ ಎಂದೂ ಹೇಳಬಹುದು. ರಾಜಕೀಯ ಕ್ರಾಂತಿಯೊಂದಿಗೆ ಆರ್ಥಿಕ ಕ್ರಾಂತಿಯೊಂದು ನಡೆಯಬೇಕೆಂದು ಅವರು ಅರಿತುಕೊಂಡರು.

ಮುಂದೆ ಎರಡನೆಯ ವಿಶ್ವಸಮರ ಆರಂಭವಾಯಿತು. ನಾಯಿಗಳ ಉತ್ಕರ್ಷವನ್ನು ಕುತೂಹಲದಿಂದ ಗಮನಿಸುತ್ತಿದ್ದ ನೆಹರೂ ಅವರು ಫ್ಯಾಸಿಸಂ ವಿರುದ್ಧ ವಿಶ್ವವು ನಡೆಸಿದ ಹೋರಾಟದಲ್ಲಿ ಭಾರತವೂ ಭಾಗವಹಿಸಬೇಕೆಂದು ಪ್ರತಿಪಾದಿಸಿದರು. ಯುದ್ಧ ಕೊನೆಗೊಂಡ ಬಳಿಕ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಬ್ರಿಟಿಷ್ ಸರ್ಕಾರವು ಒಪ್ಪಿಕೊಂಡರೆ ಮಾತ್ರ ಭಾರತವು ವಿಶ್ವಸಮರದಲ್ಲಿ ಭಾಗಹಿಸುವುದೆಂದು ಸ್ಪಷ್ಟಗೊಳಿಸಿದರು ಬ್ರಿಟಿಷ್ ಸರ್ಕಾರವು ಯಾವುದೇ ಆಶ್ವಾಸನೆ ನೀಡಲು ನಿರಾಕರಿಸಿತು.

ವಿಶ್ವಸಮರದ ಕಾಲದಲ್ಲಿ ರಾಷ್ಟ್ರೀಯ ಹೋರಾಟವು ತೀವ್ರಗೊಂಡಿತು. ಜವಾಹರಲಾಲ್ ನೆಹರೂ ಅವರು ೧೯೪೦ರಲ್ಲಿ ವಸಂತ ಕಾಲದಲ್ಲಿ ಮಾತನಾಡುತ್ತಾ "ಯುದ್ಧದ ಅಂತಿಮ ಪರಿಣಾಮ ಏನೇ ಆಗಲಿ ನಮ್ಮ ಈ ಕ್ರಾಂತಿ ಯಶಸ್ವಿ ಸೂರ್ಯೋದಯ ಆಗುತ್ತದೆ..... ...ಹಳೆಯ ಜಗತ್ತು—ನಮಗೆ ಇಷ್ಟವಿರಲಿ ಇಲ್ಲದಿರಲಿ ನಾಶವಾಗಲೇ ಬೇಕು" ಎಂದು ಹೇಳಿದರು.

೧೯೪೦ರಲ್ಲಿ ಯುದ್ಧ ಕೊನೆಗೊಂಡಿತು. ಅಲ್ಲಿಗೇ ಹಳೆಯ ಜಗತ್ತಿನ ಕಥೆಯೂ ಮುಗಿಯಿತು! ಪರಿಸ್ಥಿತಿಯನ್ನು ಅರಿತು ಬ್ರಿಟಿಷರು ಭಾರತದ ಮೇಲಿನ ತಮ್ಮ ಹಿಡಿತವನ್ನು ಬಿಟ್ಟುಕೊಡಲು ಒಪ್ಪಿಕೊಂಡರು.

ಜವಾಹರಲಾಲ್ ನೆಹರು ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಮಂತ್ರಿಗಳಾದರು. ೧೯೪೭ರ ಆಗಸ್ಟ್ ೧೫ರ ಮಧ್ಯರಾತ್ರಿ ಭಾರತವು ಪರಕೀಯ ಪ್ರಭುತ್ವದಿಂದ ಸ್ವತಂತ್ರವಾಯಿತು. ಪ್ರಧಾನ ಮಂತ್ರಿ ನೆಹರೂ ಈ ಐತಿಹಾಸಿಕ ಸಂದರ್ಭದಲ್ಲಿ ಮಾತನಾಡುತ್ತ ಹೀಗೆ ಹೇಳಿದರು.

"ಅನೇಕ ವರ್ಷಗಳ ಕಾಲ ನಾವು ವಿಧಿಯೊಂದಿಗೆ ಹೋರಾಡಿದವು. ಈಗ ನಮ್ಮ ದೃಢ ಸಂಕಲ್ಪವನ್ನು ಸಾಧಿಸುವ ಸಮಯ ಬಂದಿದೆ... ಭಾರತೀಯರು ದೃಢ ವಿಶ್ವಾಸದಿಂದ ಶ್ರದ್ಧೆಯಿಂದ ನಾವು ಕೈಗೊಂಡಿರುವ ಈ ಮಹಾಕಾರ್ಯದಲ್ಲಿ ಭಾಗವಹಿಸಬೇಕು. ನಾವು ಸ್ವತಂತ್ರ ಭಾರತದ ಭವ್ಯ ಸೌಧವನ್ನು ನಿರ್ಮಿಸಬೇಕಾಗಿದೆ. ಈ ಸೌಧವು ಭಾರತ ಮಾತೆಯ ಎಲ್ಲಾ ಮಕ್ಕಳಿಗೂ ವಾಸಯೋಗ್ಯವಾಗಬೇಕು".

ಭಾರತವು ಸ್ವತಂತ್ರವಾದದಿನಿಂದ ನೆಹರೂ ಅವರು ಅನೇಕ ವರ್ಷಗಳವರೆಗೆ ಈ ದೇಶದ ಪ್ರಧಾನಮಂತ್ರಿಗಳಾಗಿದ್ದರು. ವಿದೇಶ ಮಂತ್ರಿಗಳೂ ಆಗಿದ್ದರು. ಅಂತಾರಾಷ್ಟ್ರೀಯ ಸಂಬಂಧಗಳ ಸಂಘಟನೆಗಾಗಿ ಅವರು ಅನುಸರಿಸಿದ ಮಾರ್ಗ ಚಿರಸ್ಥಿರ ತವಾಗಿದೆ ಶಾಂತಿಸ್ಥಾಪನೆಗಾಗಿ ನೆಹರೂ ಅವರು ಶ್ರಮಿಸಿದರು. ವಿಶ್ವದ ಸಂಸ್ಕೃತಿಗಳು ಅಣುಯುದ್ಧದಿಂದ ನಾಶಗೊಳ್ಳಬಾರದೆಂದು ಅವರು ಹೇಳಿದರು.

ಮಾ ಹತು ಶಾಹಿಯು ವಿರೋಧಿ ಏಷ್ಯಾ ಆಫ್ರಿಕ ಖಂಡಗಳಲ್ಲಿ ನವೋದಿತ ರಾಷ್ಟ್ರಗಳ ನಡುವೆ ಸರಕಾರ ಸಂವರ್ಧನೆಯಾಸ ವಿಶ್ವ ವ್ಯವಸ್ಥೆಯು ರಕ್ಷಕ ವಿಶ್ವ ಸಂಸ್ಥೆಗೆ ದೃಢವಾದ ಬೆಂಬಲ ನೀಡಿದೆ. ಇವುದೇ ಮಿಲಿಟರಿ ಗುಂಪುಗಳಿಗೆ ಸೇರದೇ ಅಲಿಪ್ತವಾಗಿ ಉಳಿಯುವುದು ನೆಹರೂ ಅವರ ನೀತಿಯ ಮುಖ್ಯಾಂಶಗಳಾಗಿದ್ದವು.

ಭಾರತವು ಸ್ವತಂತ್ರವಾದ ಬಳಿಕ ನೆಹರೂ ಇನ್ನೂ, ಪಾರತಂತ್ರ್ಯದ ಸಂಕೋಲೆಯಲ್ಲಿ ನರಳುತ್ತಿದ್ದ ರಾಷ್ಟ್ರಗಳ ಜನತೆಯ ವಿಮೋಚನೆಗೆ ಹೋರಾಟ ನಡೆಸಿದರು. ವಿಶ್ವ ವ್ಯವಹಾರಗಳಲ್ಲಿ ನಮಗೆ ಇರುವ ಅಶಕ್ತಿಯೇನು? ಎಂದು ನೆಹರೂ ಪ್ರಶ್ನಿಸಿದರು ಅವರೇ ಈ ಪ್ರಶ್ನೆಗೆ ಉತ್ತರ ಕೊಡುತ್ತ "ಯಾವುದೇ ರಾಷ್ಟ್ರದ ಆಂತರಿಕ ವ್ಯವಹಾರಗಳಲ್ಲಿ ನಾವು ಅಸ್ತಕ್ಷೇಪ ಮಾಡುವುದಿಲ್ಲ ವಿಶ್ವ ವ್ಯವಹಾರಗಳಲ್ಲಿ ನಮಗಿರುವ ಅಸಕ್ತಿಯಿಂದಲೇ ಶಾಂತಿ ಸ್ಥಾಪನೆ. ಗುಟ್ಟುಮಾಗಿರಿಯಲ್ಲಿ ಬಳಲುತ್ತಿರುವವರ ನಿರೋಜನೆ" ಎಂದು ಸ್ಪಷ್ಟಪಡಿಸಿದರು.

ನೆಹರೂ ಅವರ ಅಭಿಪ್ರಾಯದಲ್ಲಿ ಆರ್ಥಿಕ ನೀತಿ ಕ್ರಿಯಾಶೀಲ ನೀತಿ ಆದರೆ ಒಮ್ಮೆ ಈ ಬಗ್ಗೆ ಮಾತನಾಡುತ್ತ 'ನಾವು ಈ ಕಾರ್ಯನೀತಿಯನ್ನು ಅನುಸರಿಸಲು ನಿರ್ಧರಿಸಿದ್ದೇವೆ. ದೇಶಕ್ಕೆ ಇದು ಅಗತ್ಯವಾಗಿದೆ ಎಂದಷ್ಟೇ ಅಲ್ಲ. ವಿಶ್ವಶಾಂತಿ ಸ್ಥಾಪನೆಗೆ ಇದಿಂದ ಎಷ್ಟು ಪ್ರಯೋಜನವಾಗಬಲ್ಲುದೆಂಬ ಕಾರಣದಿಂದ ಅಲ್ಲ ಪ್ರಧಾನಿ ಅಗತ್ಯ" ಎಂದು ಹೇಳಿದರು.

ವಿಶ್ವಸಂಸ್ಥೆ ಮಾನವನ ಶಾಂತಿಯ ಅಖಿಲಾಶೆಯ ಪ್ರತೀಕ. ಈ ಸಂಸ್ಥೆ ೧೯೪೫ರ ಅಕ್ಟೋಬರ್ ೨೪ರಂದು ಸ್ಯಾನ್ ಫ್ರಾನ್ಸಿಸ್ಕೋ ನಲ್ಲಿ ಸ್ಥಾಪನೆಗೊಂಡಿತು. ನಂದೂ ನೆಹರೂ ಅವರು ತಮ್ಮ ದೃಢವಾದ ಬೆಂಬಲ ನೀಡುತ್ತ ಬಂದರು. ಲೀಗ್ ಆಫ್ ನೇಷನ್ಸ್ ಫೈಲ್ಯೂರ್ ಎಷ್ಟೇ ಘೋರವಾಗಿದ್ದರೂ ಹತ್ತಿದ ಎರಡು ದಶಕಗಳಲ್ಲೇ ಅಂತ್ಯಗೊಂಡಿತೆಂಬುದನ್ನು ಅವರು ಮರೆತಿರಲಿಲ್ಲ. ಆಶಾವಾದಿಯೂದ ನೆಹರೂ ಅವರಿಗೆ ಮಾನವನ ಜಾಗೂ ಅವನ ಅದೃಷ್ಟದಲ್ಲಿ ದೃಢವಾದ ನಂಬುಗೆಯಿತ್ತು. ವಿಶ್ವಸಂಸ್ಥೆಯ ಸ್ಥಾಪನೆ, ವಿಶ್ವಶಾಂತಿ ಸ್ಥಾಪನೆಯ ದಿಶೆಯಲ್ಲಿ ಕೈಗೊಂಡ ಮಹತ್ವದ ಹೆಜ್ಜೆ ಎಂದು ಹೇಳಿ ಸ್ವಾಗತಿಸಿದರು.

ವಿಶ್ವಸಂಸ್ಥೆಯು ಸ್ಥಾಪನೆಗೊಂಡಿತಿನಿಂದ ಈ ವರೆವಿಗೆ ಶಾಂತಿ ಸ್ಥಾಪನೆಗಾಗಿ ಶಕ್ತಿ ಮೀರಿ ಶ್ರಮಿಸಿದೆ. ಅನೇಕ ಸಂದರ್ಭಗಳಲ್ಲಿ ಅದು ತನ್ನ ನಿರ್ಧಾರಗಳನ್ನು ಕಾರ್ಯಗತಗೊಳಿಸುವಲ್ಲಿ ವಿಫಲವಾಗಿದೆ. ನೆಹರೂ ಅವರಿಗೆ ವಿಶ್ವಸಂಸ್ಥೆಯು ವಿಫಲತೆಗಳ ಜಾಗೂ ದೌರ್ಬಲ್ಯದ ಪರಿಜ್ಞಾನವಿತ್ತು. ಅವರು ಈ ಬಗ್ಗೆ ಮಾತನಾಡುತ್ತ "ವಿಶ್ವಸಂಸ್ಥೆ ಇದು ವಿಫಲತೆಗಳು ಏನೇ ಇರಲಿ—ಕಂಡಿನ ಪರಿಸ್ಥಿತಿಯಲ್ಲಿ ಇಂದು ಮೂಲಭೂತ ಅಗತ್ಯವನ್ನಿಸಿದೆ. ವಿಶ್ವಸಂಸ್ಥೆಯನ್ನು ನಿರಾಕರಿಸಿದರೆ ವಿಶ್ವಕ್ಕೆ ಇಂದು ಬಂದಿರುವ ಬಂದಿತೆ" ಎಂದು ಅಭಿಪ್ರಾಯಪಟ್ಟರು.

ನಿಶ್ಯಸ್ತ್ರೀಕರಣ ಸದಾ ನೆಹರೂರವರ ಮನಸ್ಸನ್ನು ಕೊರೆಯುತ್ತಿತ್ತು. ನೆಹರೂರವರ ಮಾರ್ಗದರ್ಶನದಲ್ಲಿ ಭಾರತವು ಶಾಂತಿ ಸ್ಥಾಪನೆಯ ಅನೇಕ ಹೆಜ್ಜೆಗಳನ್ನಿಡಲು ಯಶಸ್ವಿಯಾಗಿ ನಿರ್ವಹಿಸಿತು.

೧೯೬೪ ಮೇ ೨೭ರಂದು ವಿಶ್ವದ ಸಂತ

(ಪುಟಮುಂದೆ ಪುಟ ನೋಡಿರಿ)

ಶ್ರೀ ಅರವಿಂದ ಯೋಗಿ

(ಏಳನೇ ಪುಟದಿಂದ)

ದು ಸಕ್ರಮ ಸಾಧನೆಗೆ ಮೊಗಲು ಪಾಂಡಿ ಮೂರು ದಿನಗಳಲ್ಲಿ 'ನಿರ್ವಿಕಲ್ಪಾನುಭವ'ವನ್ನು ಸಾಧಿಸಿಕೊಂಡರು. ಅರವಿಂದರ ಆ ಪ್ರತಿಮ ಲೇಖಕರು. ಅವರ ಉಗ್ರ ಲೇಖನಗಳಿಗೆ ಬ್ರಿಂಗ್ಲ ಸರ್ಕಾರ ಅಂಜುಸ್ತಿತ್ತು. ಅವರ ಲೇಖನಗಳು ಓದುಗರ ನೇ ಲೆಜನತೆಯ ಮೇಲೆ ವಿಶೇಷ ಪರಿಣಾಮ ಬೀರುತ್ತಿದ್ದವು.

"ವಂದೇ ಮಾತರಂ' ಪತ್ರಿಕೆಯಲ್ಲಿ ಉಗ್ರಲೇಖನಗಳನ್ನೂ ಬರೆದು ಪ್ರಕಟಿಸಿ ಜನಜಾಗೃತಿಗಾಗಿ. ಪ್ರಯತ್ನಿಸಿದಾಗ ಸರ್ಕಾರ ಅರವಿಂದರನ್ನು 'ಕ್ರಾಂತಿಕಾರಿ' ಎಂದು ಬಂಧಿಸಿತು. ಮತ್ತೆ ಕೆಲ ದಿನಗಳಲ್ಲಿಯೇ ಬಿಡುಗಡೆಯೂ ಆಯಿತು. ಅರವಿಂದರ ತಮ್ಮ ಬರೀಂದ್ರರು ತಮ್ಮ ಸಾಹಸಮಯ ಚಟುವಟಿಕೆಗಳಿಂದ ಸರ್ಕಾರವನ್ನು ದಿಗ್ಭ್ರಮೆಗೊಳಿಸಿದರು. ಬರೀಂದ್ರರು ಹೋಂ ರೂಲ್, ಚಳವಳಿ ಚಟುವಟಿಕೆಗಳಿಗೆ ಅರವಿಂದರೇ ಹೊಣೆಗಾರರು. ಅವರೇ ಪ್ರಚೋದನೆ ಮಾಡಿರುವವರು ಎಂದುಸರ್ಕಾರ ತೀರ್ಮಾನಿಸಿ ಅರವಿಂದರನ್ನು ೧೯೦೪ನೇ ಇಸವಿ ಮೇ ತಿಂಗಳ ೫ನೇ ತಾರೀಖಿನಂದು ಬಂಧಿಸಿ, ಅಲೀಪುರದ ಸೆರೆಮನೆಯಲ್ಲಿಟ್ಟಿತು. ವಿಖ್ಯಾತ ವಕೀಲ ಚಿತ್ತರಂಜನ ದಾಸರ ಪ್ರಭಾವಪೂರ್ಣ ದಕ್ಷವಾದ ನೈಪುಣಿಯಿಂದ, ಇಂಗ್ಲೆಂಡಿನ ಚಿರಪರಿಚಿತ ಬೀಚ್ ಕ್ರಾಫ್ ಎಂಬ ಆಂಗ್ಲ ನ್ಯಾಯಾಧೀಶನ ವಿವೇಕಪೂರ್ಣ ತೀರ್ಪಿನ ಪರಿಣಾಮವಾಗಿ ಅರವಿಂದರು ಅಲೀಪುರದ ಸೆರೆಮನೆಯಿಂದ ಬಿಡುಗಡೆ ಹೊಂದಿ ಹೊರ ಬಂದರು. ಅಲೀಪುರದ ಸರೆಮನೆ ಅರವಿಂದರ ಜೀವನದ ಒಂದಷ್ಟು ದಿನವೂ ಅವರಿಗೆ 'ಯೋಗ ನಂದಿರ'ವಾಗಿ ಪರಿಣಮಿಸಿತ್ತು.

'ಕರ್ಮಯೋಗಿ" ಎಂಬ ಇಂಗ್ಲೀಷ್ ಪತ್ರಿಕೆ ಮತ್ತು ಧರ್ಮ ಎಂಬ ಬಂಗಾಳಿ ಪತ್ರಿಕೆಯನ್ನು ಅರವಿಂದರು ಪ್ರಕಟಿಸತೊಡಗಿದರು. ೧೯೧೦ರಲ್ಲಿ ಪತ್ರಿಕೆಗಳ ಕೀರ್ತಿ ಜನಪ್ರಿಯತೆಯಾಯಿತು. ಪತ್ರಿಕೆಗಳ ಪ್ರಭಾವದಿಂದ ಜನತೆಯಲ್ಲಿ ನವಜಾಗೃತಿ ಉಂಟಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳ ಮತ್ತು ಅರವಿಂದರ ಮುದ್ರೆಯ ಪ್ರಾಶಸ್ತ್ಯವನ್ನು ಗಮನಿಸಿದ ಆಂಗ್ಲ ಸರ್ಕಾರ ಅವರನ್ನು ಬಂಧಿಸುವಂತೆ ಆಜ್ಞೆ ಮಾಡಿತು. ಆದರೆ ಅರವಿಂದರು ೧೯೧೦ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಫ್ರೆಂಚರ ಚಂದ್ರನಾಗೂರಲ್ಲಿ ರಕ್ಷಣೆ ಪಡೆದರು. ೧೯೧೦ರ ಏಪ್ರಿಲ್ ೪ರಂದು ಪಾಂಡಿಚೇರಿಯಲ್ಲಿ ಯೋಗ ಸಾಧನೆಯನ್ನು ಕೈಕೊಂಡು ಮೌನವ್ರತ ಹಿಡಿದರು. ಸರಕಾರ ಹೊರಿಸಿದ ರಾಜದ್ರೋಹದ ಆಪಾದನೆಗಳಿಗೆ "ವಂದ್ಯಾಸ ಪತ್ರಿಕೆ" ಎಂಬ ಲಕ ಅರವಿಂದರು ಉತ್ತರ ನೀಡಿದರು. "ದೇಶ ಬಾಂಧವರಿಗೊಂದು ಬಹಿರಂಗ ಸತ್ಯ' ಎಂಬ ಲೇಖನ ಪ್ರಕಟಿಸಿದ ಕಾರಣಕ್ಕಾಗಿ ಪತ್ರಿಕೆಯ ಸಂಪಾದಕರನ್ನು ದಸ್ತಗಿರಿ ಮಾಡಿದರು. ಕೇಸು ವಿಚಾರಣೆಗಾಗಿ ನ್ಯಾಯಾಲಯಕ್ಕೆ ಬಂದಿತು. ನ್ಯಾಯಾಲಯ 'ನಿರಪರಾಧಿ' ಎಂದು ತೀರ್ಪು ನೀಡಿತು.

ಅರವಿಂದರು ತಮ್ಮ ಉಳಿದ ಪೂರ್ಣ ಆಯುಷ್ಯವನ್ನು ಅಂದರೆ ೧೯೧೦ರಿಂದ ೧೯೫೦ ವರೆಗೆ ನಲವತ್ತು ವರ್ಷಗಳ ಕಾಲ ಪಾಂಡುಚೇರಿಯಲ್ಲಿ ಯೋಗ ಸಾಧನೆಗಾಗಿ ಯೋಗಿ ಬಾಳುವೆಗಾಗಿ ಕಳೆದರು. ಅರವಿಂದಾಶ್ರಮದಿಂದ ಪ್ರಕಟವಾಗುತ್ತಿದ್ದ 'ಆರ್ಯ' ಮಾಸಪತ್ರಿಕೆ ಜ್ಞಾನ ಜ್ಯೋತಿಯಂತೆ ಬೆಳಕು ಬೀರಿತು. ಪಾಲ್ ಮತ್ತು ಮಿರಾ ರಿಚರ್ಡ್ಸ್ ಎಂಬ ಫ್ರೆಂಚ್ ದಂಪತಿಗಳು ಅರವಿಂದ ಶಿಷ್ಯರಾಗಿ ಉಳಿದರು. ಆ ಮಿರಾ ರಿಚರ್ಡ್ಸ್ ಇಂದು 'ತಾಯಿ' (Mother) ಎಂಬ ಯಶಸ್ಸಿನಿಂದ ಬೆರಪಣಿಚೆರಿಯಾಗಿದ್ದಾರೆ. ೧೯೫೦ ಡಿಸೆಂಬರ್ ೫ನೇ ತಾರೀಖು ಅರವಿಂದರು ಪಾಂಡುಚೇರಿಯಲ್ಲಿ ಮಹಾ ಸಮಾಧಿಸ್ಥರಾದರು.

ಅರವಿಂದರು ಹೆಸರಾಂತ ಬರಹಗಾರರು, ಕವಿಗಳು. ಇವರ ಕೃತಿಗಳು ಪುಟಸಿಂದ ಪುಟಕ್ಕೆ ಮಾತ್ರವೇ ಹರಿದಾಡುವಲ್ಲ, ಸತ್ಯ, ಶಕ್ತಿ, ಸೌಂದರ್ಯ, ವೈಲಿಗಳಿಂದಲೂ ದೊಡ್ಡವು. ಅವುಗಳ ಮೌಲ್ಯವೂ ದೊಡ್ಡದು. ೧೫೦೦ ಪುಟಗಳಿಗಿಂತಲೂ ದೂಡ್ಡದಾದ, ಎಲ್ಲ ಶಿಥ್ಯಾಯಿಗಳನ್ನೊಳಗೊಂಡ 'ದಿವ್ಯ ಜೀವನ' (Life-Divine) ಎಂಬಗದ್ಯ ಗ್ರಂಥ ಅಪೂರ್ವ ಕೃತಿ. ಪರಬ್ರಹ್ಮತ್ವರೂಪ ಅಧಾತ್ಮಿಕಶಕ್ತಿ-ವಿಕಾಸ, ವಿಶ್ವೆ ಮುಂತಾದವಿಷಯಗಳುಈಕೃತಿಯಲ್ಲಿ ಪ್ರಸ್ತಾಪಿಸಲ್ಪಟ್ಟಿವೆ "ವೇದ ರಹಸ್ಯ" ಸಂಶೋಧನ ಸಾಹಿತ್ಯಕ್ಕೆ ಸೇರಿದ ಗ್ರಂಥ ೮೦೦ ಪುಟಗಳ "ಗೀತಾ ಪ್ರಬಂಧ"ದಲ್ಲಿ ಗೀತೆಗೆ ಭಾಷ್ಯ ಬರೆದಿದ್ದಾರೆ. ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ರಾಜಯೋಗ, ಹಠಯೋಗ ಇವುಗಳ ಅಂತರಾಳವನ್ನು ತಮ್ಮ ವಿಶಿಷ್ಟಯೋಗದಂದ 'ಪೂರ್ಣಯೋಗ'ದ ಸವ ನ್ವಯವನ್ನು ಅರವಿಂದರು ತಮ್ಮ 'ಯೋಗ ಸಮನ್ವಯ" ದಲ್ಲಿ ಪ್ರಸ್ತಾಪಿಸಿದ್ದಾರೆ ಇನ್ನೊಂದು ಕೃತಿರತ್ನವೆಂದು ವಿದ್ವಾಂಸರ-ವಿಮರ್ಶಕರ ಅಭಿವ್ಯಾಯ.

ವೇಲಿನ ಒಲವ್ಹ ಕೃತಿಗಳನ್ನಲ್ಲದೆ ಅರವಿಂದರು ಉಪನಿಷತ್ತುಗಳಿಗೆ ಭಾಷ್ಯ, ಲೇಖನ, ಕವನ, ಭಾಷಾಂತರ, ಪತ್ರ ಲೇಖನ ಬರೆದಿದ್ದಾರೆ. ಈಗೆ ಸಾಹಿತ್ಯದ ಒಲವು ಪಾಂಡಿಯುಲ್ಲಿ ನಡೆದಿದ್ದಾರೆ. ಅವರು ರಚಿಸಿದುದು ಅಪಾರ ಅಪೂರ್ವ ಸಾಹಿತ್ಯರಾಶಿ.ಸಾವಿತ್ರಿ ಭಾಷ್ಯವನ್ನು ಸಂಕೇತವಾಗಿಟ್ಟುಕೊಂಡ, ರಚಿಸಿದ "ಸಾವಿತ್ರಿ" ಮಹಾ ಕಾವ್ಯ ಕವಿ ಅರವಿಂದರ ಅದ್ವಿತೀಯ ಕೃತಿ. ವಿಶ್ವ ವಿಚಾರಗಳು - ತತ್ವಗಳು ಅರವಿಂದರ ಯೋಗ ದೃಷ್ಟಿಗೆ ಅನುಸಾರವಾಗಿ ಮೂಲಸೂತ್ರವನ್ನ ಅನುಸರಿಸಿ ಪ್ರಸ್ತಾಪಿಸಲ್ಪಟ್ಟವೆ.

ಅಪಾರ ಅನುಭವದ ಶ್ರೀಮಂತ ಸಾಹಿತ್ಯ ಅರವಿಂದರದು. ಸಾಹಿತ್ಯ, ರಾಜಕಾರಣ, ಅಧ್ಯಾತ್ಮಿಕ ಕ್ಷೇತ್ರಿಗಳಲ್ಲಿ ಅವರು ಅತಂತ ಸಲುಚರದಷ್ಟುಸವೆಲ್ಲಸಿದ್ದಾರೆ. ಸಂಸ್ಕಾರ, ಶ್ರದ್ಧೆ, ಸಾಧನೆಗಳಲ್ಲಿ ಅರವಿಂದರು ಸಾಧಕರಾಗಿ, ಸಿದ್ಧರಾಗಿ, ಯೋಗಿಗಳಾಗಿ, ಕವಿಗಳಾಗಿ, ರಾಷ್ಟ್ರ ಕ್ತರಾಗಿ ಮೆರೆದು ಚಿರಂಜೀವಿಗಳಾಗಿದ್ದಾರೆ

-

ನವರಾತ್ರಿ ಸಮಾರಂಭ

ಉಡುಪಿ ಹಿಂದೀ ಸೇವಾಸಮಿತಿಯವರಿ ನವರಾತ್ರಿಯ ಅಂಗವಾಗಿ ಶಕ್ತ್ಯುಪಾಸನಾ ಸಮಾರಂಭವು ತಾ. 14-10-66ರಿಂದ 23-10-66 ವರೆಗೆ ನಿರಂತರ ಹತ್ತು ದಿನಗಳ ತನಕ ಪ್ರತಿದಿನ ಸಾಯಂಕಾಲ ೬ ಗಂಟೆಯಿಂದ ಭಜನೆ, ಕೀರ್ತನ, ಸ್ತೋತ್ರ ವಚನಗಳಿಗ ಸಹಿತಮಂತ್ರೋಚ್ಚಾರಣೆ ಸಹಿತ ಅಭಿಷೇಕ ರಾಜೋಪಚಾರ ಪೂಜೆಗಳು ಪ್ರತಿದಿನವೂ ನಡೆಯುತ್ತವೆ. ಆದಿನಂದ್ಯಾಕ್ಷಿ, ಆದ್ಯಾಕ್ಷಿಕ್ಯ, ಬಾಲಾ ಡೊಂದುರೂಪವನ್ನು ಅಸ್ಥೈರ್ಯಕ್ತ ಪೂರ್ವಕಲ್ಪನೆ ರಾಧಿಸಿ, ಪಂಚಾಂಗಪೂಜೆ ದಿನ ಸಂಜೆ ಸುಮಂಗಲಿಯರು ಹಾಗೂ ಕಿರ್ತ ಕುಮಾರಿಯ ವೇಲೆ ಆದ್ಯಾಶಕ್ತಿಯ ಪ್ರಭಾವಕೀರ್ತನೆಗಳ ಅವಾಹನೆಗೊಳಿಸಿ, ಅವನ್ನು ಬಾಗಿನ, ನೈವೇದ್ಯ ಲವಸ್ತ್ರಾಭರಣಗಳ ಸಹಿತ ಪೂಜಿಸಲಾಯಿತು. ಸರ್ವಶ್ರೀ ಎ ವಾಸುದೇವ ಶಾನುಭಾಗ್, ಬಿ ವೆಂಕಟಕೃಷ್ಣಕಿಲ್ಲಾಯ, ಎ.ಲಕ್ಷ್ಮೀನಾರಾಯಣ ಕಿಣಿ, ಎ. ಶಾರದಾ ಕಾಮತ್, ಎ. ಲೀಲಾವತಿ ಶರ್ಮ ಮೊದಲಾದವರು ನವರಾತ್ರಿಯ ವಿಶೇಷತೆ, ಶಕ್ತಿಯ ಅವಾಹನೆಯ ಪರಿಣಾಮ ಇತ್ಯಾದಿ ವಿಷಯಗಳ ಕುರಿತು ಮಾತನಾಡಿದರು. ಪ್ರಸಾದ ವಿತರಣೆಯು ನಂತರ ಕೊನೆಯ ದಿನ ವೇದಮೂರ್ತಿ ಶ್ರೀನಿವಾಸಾಯ ಭಟ್ಟರು ಸರೆದ ಸಮಸ್ತರನ್ನೂ ಆಶೀರ್ವದಿಸಿದರು.

ಸ್ಪೀಕರ್ ಬಾಳಿಗರಿಗೆ ಕೃತಜ್ಞತಾ ಸಮರ್ಪಣೆ

ಬೆಳ್ತಂಗಡಿಯ ಸಮಾಜ ಮಂದಿರದಲ್ಲಿ ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಬೆಳ್ತಂಗಡಿ ಮತ್ತಿತರ ಕ್ಷೇತ್ರದ ಸಾರ್ವಜನಿಕರು ಕಳೆದ ತಾ. 18ರಂದು ವೈಸೂರು ವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈ ಕೆ ಬಾಳಿಗಾರವರನ್ನು ಸತ್ಕರಿಸಿ ಬೆಳ್ತಂಗಡಿ ಪತದಾರ ಕ್ಷೇತ್ರಕ್ಕೆ ಅವರಿಂದ ಆಗಿರುವ ಉಪಕಾರಗಳಿಗೆ ತಮ್ಮ ಕಾರ್ಯಕ್ಷ ಕೃತಜ್ಞತೆ ಸಲ್ಲಿಸಿದರು.

ಬೆಳ್ತಂಗಡಿ ತಾಲೂಕಿನಲ್ಲಿರುವ ಸಂಬ್ಯ ಸಂಸ್ಥೆಗಳ ಪರವಾಗಿ ಶ್ರೀ ಬಾಳಿಗರಿಗೆ ಹಾರಾರ್ಪಣೆಯೊದ ಬಳಿಕ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಜಿ. ಎಸ್ ಭಿಡೆಯವರು ಸ್ವಾಗತಿಸಿ, ಶ್ರೀ ಬಾಳಿಗರಿಗೆ ಮಾನಪತ್ರವನ್ನು ಅರ್ಪಿಸಿದರು. ನಂತರ ರೆ॥ ಫಾ॥ ಇ. ಪಿ ಡಯಸ್ರವರು ಮಾತನಾಡುತ್ತಾ, ಶ್ರೀ ಬಾಳಿಗಾರವರುಈಭಾಗದ ಪ್ರಗತಿಗೆ ಕಲ್ಪಿಸಿದ ಸೇವೆಯನ್ನು ಶ್ಲಾಘಿಸಿದರು ಬಳಿಕ ಡಾ॥ನಾರಾಯಣ ರಾವ್ ಶ್ರೀನಿಗಾದ ಧರಣಿಣ್ಯ ಅಧಿಕಾರಿ ಭೀಮಜ ಹೆಗ್ಡೆ, ನರಸಿಂಹ ಭಟ್ಟ, ದೇವರಜೆ ಸೀತಾರಾಮಯ್ಯ, ನಾರಾಯಣ ಲೆಕ್ಕ ಮತ್ತು ಯ ವರಾಜ ಅಜ್ರಿ ಮೊದಲಾದವರು ಶ್ರೀ ಬಾಳಿಗರಿವರ ಸೇವೆ—ಸಾಧನೆಗಳನ್ನು ಪ್ರಶಂಸಿಸಿ ಮಾತನಾಡಿದರು.

ಶ್ರೀ ಬಾಳಿಗರವರು ತಮ್ಮ ಪ್ರತ್ಯುತ್ತರದಲ್ಲಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು ಅಧ್ಯಕ್ಷ ಶ್ರೀ ರತ್ನವರ್ಮ ಹೆಗ್ಗಡೆಯವರು ಶ್ರೀ ಬಾಳಿಗರವರ ಸೇವೆಯನ್ನು ಕೊಂಡಾಡಿದರೆ, ಕೊನೆಯಲ್ಲಿ ಶ್ರೀ ಭಿಡೆಯವರು ವಂದನಾರ್ಪಣೆ ಗೈದರು.

ಸಿಂಡಿಕೇಟ್ ಬ್ಯಾಂಕ್ ಲಿ.

ಇದರ ಇನ್ನೊಂದು ಶಾಖೆಯು ನವದೆಹಲಿಯ ಕನಾಟ್ ಸರ್ಕಸ್‌ನಲ್ಲಿ ತಾ ೧೯-10-66ರಂದು ಈ ಕೆಳಗಿನ ವಿಳಾಸದಲ್ಲಿ ತೆರೆಯಲ್ಪಟ್ಟಿದೆ. ೨ನೇ ಫ್ಲೋರ್, ಎ. ಕಂಗ್, ಎನ್. ಡಿ. ಎಂ. ಸಿ. ಕಂಡ್ ಸುರ್ ಬಜಾರ್, ಕನಾಟ್ ಸರ್ಕಸ್ ನವದೆಹಲಿ—1. ಈ ಶಾಖೆಯು ನವದೆಹಲಿಯಲ್ಲಿ ನೆಲ್ಲನೆಯದಾಗಿದ್ದು ವಿಶಾಲ ಗಟ್ಟಡದಲ್ಲಿದೆ ಮತ್ತು ಎಲ್ಲಾ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತಿದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O.S 635/1965.

ಬಾದಿ—	ವೆಂಕಟೇಶಪ್ಪ ಭಟ್ಟ
ಪ್ರತಿವಾದಿರು	ಕೃಷ್ಣಮ್ಮ ಕೂಡಾ—

ಸದ್ರಿ ದಾವೆಯಲ್ಲಿ

1. ಕೃಷ್ಣಮ್ಮ, ಸುಬ್ರಾಯ ಚಾತ್ರರ ಹೆಂಡತಿ, 2. ನಾಗೇಶ ಚಾತ್ರ, ಸುಬ್ರಾಯ ಚಾತ್ರರ ಮಗ, 3. ಕುಪ್ಪಯ್ಯ ಸತ್ತಾರ್ರ ವೀರಭದ್ರಯ ತ್ತಾರರ ಮಗ, 4. ಮಂಜುನಾಥಯ್ಯ, ಜೋಡ್ಕಲೆ ನಾರಾಯ್ಯಯ್ಯನ ಮಗ 5. ಜಾನಕಿ ಅಮ್ಮ, ಶೀತಾರಾಮಯ್ಯನ ಮಗಳು. 6 ಸಾಭದ್ರಮ್ಮ, ಶೀಪಗಿರಿ ಭಟ್ಟ ವಿಧವೆ.

1—2—4ರಿಂದ 6ನೇಯವರು ಕುಂದಾಪುರ ತಾಲ್ಲೂ ಬೀಜಾಡಿ ಗ್ರಾಮ. 3ನೇಯವರು ಸದ್ರಿ ತಾಲ್ಲೂ ಗೋಣಾಡಿ ಗ್ರಾಮ.

—ಇವರಿಗೆ

ಮೇಲ್ಕಂಡ ವಾದಿಯು ನಿಮ್ಮಿಂದ ಬರಬೇಕಾಗುಳಿದ ಸಾಲ ಪತ್ರದ ಪ್ರಕಾರ ಬಡ್ಡಿ, ಕೋರ್ಟು ಖರ್ಚು ವಗೈರೆ ಬಗ್ಗೆ ಮಾಡಿದ ಮೇಲಿನ ದಾವೆಯು ನಮ್ಮ ಹಾಜರಾತಿ ಬಗ್ಗೆ ಇದೇ ತಾರೀಖು 26-11-66ಕ್ಕೆ ಇಟ್ಟಿರುತ್ತದೆ. ಈ ಕಾರಣ ನಿಮ್ಮ ಅಕ್ಕೀಪತ್ರಗಳೇನಾದರೂ ಯಿದ್ದಲ್ಲಿ ಸದ್ರಿ ದಿವಸ ಈ ಕೋರ್ಟು, ಮುಂದೆ ಹಗಲು 11ಗಂಟೆಗೆ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಸಾಕಾಯೇರ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ತಿಳಿದಿರಲಿ

(ಕೋರ್ಟು ಹುಕುಂ ಸ್ರಕಾರ)

ಎನ್. ಎಸ್. ಪರಮೇಶ್ವರಯ್ಯ,
ಬಿ. ಎ, ಎಲ್. ಎಲ್. ಬಿ,
ಬಾದಿಯ ಪರ ಎಡ್ವಕೇಟ್

ಕುಂದಾಪುರ, ತಾ. 26—10—66.

ರೂ. 1ಕ್ಕೆ ರೂ. 1,10,000 ಗೆಲ್ಲಿರಿ.

ಈಗ ಪೂರೈಸಬೇಕಾದ	ಪ್ರತಿಯ ಬಹುಮಾನ	ಟಿಕೆಟು ಬೆಲೆ	ಕ್ಲೋಸಿಂಗ್	ಡ್ರಾಯಿಂಗ್
1) ಬಾರಾಬತಿ ಬ್ಯಾಫಲ್.	ರೂ. 1,10,000	ರೂ 1=00	11.2.67	19.3.67
2) ಕೆ ಸಿ ಟಾಂಟೀಸ್	ರೂ. 1,15,000	ರೂ. 1=00	18.11.66	31.12.66
3) ಡಿ. ಜಿ. ಬಾರ್‌ಟೀಸ್.	ರೂ. 40,000	ರೂ. 2=00	15.12.66	30.12.66
4) ರೆಡ್ ಕ್ರಾಸ್ ಸ್ವೀಪ್.	ಕಲೆಕ್ಷನ್‌ನಲ್ಲಿ 30%	ರೂ 1=00	15.12.66	31.12.66

ಎಲ್ಲಾ ಲಾಟರಿಗಳೂ ಸಂಬಂಧಪಟ್ಟ ರಾಜ್ಯ ಸರಕಾರಗಳಿಂದ ಮಾನ್ಯತೆ ಪಡೆದಿವೆ ಬಹುಮಾನಿತರಿಗೆ ನೇರವಾಗಿ ಅವರವರ ವಿಳಾಸಕ್ಕೆ ತಿಳಿಸುವ ವ್ಯವಸ್ಥೆಯಿದೆ ಇನ್ನಿಗೆ ಬಂಗಾ ಟಿಕೆಟುಗಳನ್ನು ಕೊಂಡುಕೊಳ್ಳಬಹುದು. ಅಥವಾ ಟಿಕೆಟ್ ಬೆಲೆಯೊಂದಿಗೆ 15 ಪೈಸೆ ಹೆಚ್ಚಾಗಿ ಸೇರಿಸಿ ಮನಿಆರ್ಡರ್ ಮೂಲಕ ಕೆಳಗಿನ ವಿಳಾಸಕ್ಕೆ ಹಣ ಕಳುಹಿಸಿ ಅಂಚೆ (Post) ಮೂಲಕ ತರಿಸಿಕೊಳ್ಳಬಹುದು ಏಜಂಟರಾಗಿ ಬುಯಿಂಸುವವರು, ಫಲರ ಮತ್ತು ಡ್ರಾ ಲಿಟ್ಟುಗಳನ್ನೆಪೇಕ್ಷಿಸುವವರು ಉತ್ತರಕ್ಕೆ ಆವಶ್ಯಕವಿರುವಷ್ಟು ಅಂಚೆ ಚೆಟ್ಟಿಗೆಯೊಂದಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ

ವಿ. ಶಿವರಾಮ ಜೊಳ್ಳ

ಅಧಿಕೃತ ಏಜಂಟೆರವರು ಮತ್ತು ಡ್ರಾ ಸಮಿತಿಯ ಸದಸ್ಯರು—
ರೂಂ ನಂ. ೨, ವೀನಸ್ ಹೋಟಲ್, ಸಾಟೀರ್ಸ್ ಛತ್ರ ರಸ್ತೆ, ಬೆಂಗಳೂರು—೨.

ಟಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ ಜೈಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು—೧

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವ ವರು ದಯವಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ

ಹೃದಯ ತರಂಗ—(ಕವನ ಸಂಕಲನ.)

ಕವಿ: ಶ್ರೀ ಎಂ. ರಾಧಾಕೃಷ್ಣ ರಾವ್.

ಪ್ರಕಾಶನ: ವಾಗ್ದೇವಿ ಪ್ರಕಾಶನ, ಬೀ ಜಾ ರೋಡ್, ಕಾಸರಗೋಡು.

ಪುಟಗಳು: 44. ಬೆಲೆ: 0= 50.

ಕನ್ನಡ ಪತ್ರಿಕೆಗಳ ಮೂಲಕ ಪರಿಚಿತ ರಾಗಿರುವ ಕವಿ ರಾಧಾಕೃಷ್ಣರಾಯರು ಉದ್ಯೋಗದಲ್ಲಿ ಅಧ್ಯಾಪಕರು. ಪ್ರತಿಕೂಲ ಸ್ಥಿತಿಗತಿಗಳನ್ನು ಎದುರಿಸಿ ಬದುಕಿ ನಿಂದಿಗೆ ಹೋರಾಡುವ ಅವರ ವಿಶಾಲ ಹೃದಯ ಸಾಗರದ ತರಂಗ ವಿಷಾದಾತ್ಮಕವೇ ಆಗಿರುವುದು ಸಹಜ ಸ್ವಾಭಾವಿಕ. 'ಹೃದಯ ತರಂಗದಲ್ಲಿ ನವ್ಯ ಕವಿತೆಗಳೂ ಇವೆ, ಶಾಶ್ವತ ಕವಿತೆಗಳೂ ಇವೆ. ವೀರ ಪ್ರಧಾನವಾದುದೂ ಇವೆ; ವಿರಹ ಪ್ರೇರಿತವಾದುದೂ ಇವೆ, ವಿಷಾದಾತ್ಮಕವಾಗಿ ಕರುಣೆಯ ಕೋಡಿ ಹರಿಸುವಂತಹವೂ ಇವೆ.

'ಬೆಂಕಿಯಲ್ಲಿ ನಿಂದವರು, ಕಡಲನ್ನೆ ಕುಡಿದವರು, ನಾಭಿ ಬೆಟ್ಟಿಪ ಬೆಂಬಲೆತ್ತಿ ದವರು; ಹಾವ ಹಾವಗೆಬೆ ಒಸಿ ನುಟ್ಟಿ ದವರು, ಎಂಬಲ್ಲಿ ನನ್ನು ವೀರಕಥೆಯುಂದ ವೀರ್ಯ ತುಂಬುತ್ತಾರೆ ಕವಿ. 'ದೇಹವಿರುವುದೆಯಿಂಗಿ, ಮೃತ್ಯವೆಂಬವ ದರ್ಜಿ– ಇಲ್ಲಿ ವ್ಯಕ್ತವಾಗುವುದು ಉನ್ನತ ನೇದಾಂತ ಮಾತ್ರವಲ್ಲ, 'ವೀರಕೊದಗದ ದೇಹ ವನ್ನೊಲ್ಲೆವು' ಎಂಬ ವೀರ ಪತಿಜ್ಞೆ.

ಕವಿಯು 'ವಿರಹ'ಕ್ಕೆ ಒಂದು ಉದಾಹರಣೆ ಕೊಡ ಬಹುದು. ತನ್ನ ಪತಿ ಸಮರಂತ್ರಿಗೆ ಬಿಟ್ಟುವೆನೆಂದು ಬರೆದರೂ ಬರವೆ ಅಲ್ಲಿಸ್ಯ ತೋರಿದ. 'ನಾನೇಕೆ ಬರದು ನನಗೆ' ಎಂಬಷ್ಟು ವೇದನೆಯಾಕೆಗೆ. ಹೂಮುಡಿದು ಹೊಸಕಿಲಲಿ ನಿಂತು ಅಂಬೆಯವನಿಗಾಗಿ ಕಾದರೆ, 'ಬಸಕಯಿದೆ ನಿನ್ನ ಕಂಗಿಗೆ, ಇಲ್ಲವ್ಯ ನಿವಂಗೆ ಮಾತ್ರ' ಎನ್ನುತ್ತಾನೆ. ಆತ ಬರಿ ಮಂಚ, ಕಾಯಕಂಚ, ಹಾಲು ವಿಷ, ಹೂವು ಮುಳ್ಳು, ತಾಯಿಯಿಂಗೆ ರಚಿಗೇಡಿ, ಬಾಳು ಹಾಳು, ಹೃದಯ ಹೋಳು...

ವಿರಹವಿಲ್ಲೇ ವಾಣಿಯಲ್ಲಿ, ಆಕೆ ಕೇಳುತ್ತಾಳೆ: "ಒಂಟಿ ಒಂಟಿಯ ತರದಿ ಬಾಳ ಸಹರವ ತುಳಿದು ಅಲ್ಲಿ ಹೂಳಲಿ ನನ್ನ ಮೂಳೆಗಳನ್ನು" "ನನ್ನ ಸಪ್ಪಾವುದೆಂದರ ಲೆಂದೋ ಏನೋ ಕಣ್ಣುಗಳು ಒಣಗಿವೆ. ಒಲವಿನುಂಗುರ ಶಚೀತೀರ್ಥನನ್ನರಿಸುತಿವೆ. ಬಳೆಗಳೋ ತೋಳಿಗೂ ಏರಿತ್ತಿವೆ" ಕೊನೆಗೆ ಸುರಿಕೋಗ ತ್ತಾಳೆ– "ನಿಮ್ಮ ಪೈರಗುದಿ ಮೂರ್ದವತೆಯೊಂದು ಬಡಿಕ ಕೇಳಿತೆ?

ವಿಷಾದವು ಸಾವಧಾನ್ಯವಾಗಿ ನನ್ನ ಪೂಪದಲ್ಲಿ ಪ್ರಕಟವಾಗಿವೆ. 'ಬಾರೊ ಬಂಗ' 'ಕ್ಷಮಾ ರೋಗಿ' 'ಆಯುಧ ಪೂಜೆ' ಇವು ಈ ಮೂವರಿಯವು. ಇವೆಲ್ಲವೂ ಹೃದಯಂಗಮವಾಗಿವೆ.

ಕವಿಗಳ ವಿಶಾಲ ವಿಷಯ ಜ್ಞಾನವನ್ನು ನಾವೀ ಕವನ ಸಂಕಲನದಲ್ಲಿ ತಿಳಿಯುಬಹುದು. ಇವಂ ವಿಹಾಸಿಕ ಜ್ಞಾನಕ್ಕೆ ಇಲ್ಲಿ ನಿದರ್ಶನ ನೂರಾರು ಇವೆ ಬಳಸುವ ಉಪಮೆಯಲ್ಲೂ ಆಧುನಿಕತೆಯು ಗೆ. "ಕಣ್ಣು ಕಂಡ ಕನಸಿಗೆಲ್ಲ ಗರ್ಭ ನ್ಯಾನವಾಗಿದೆ" ಮೊದಲಾದುವು ಅರ್ಥಪೂರ್ಣವಾಗಿವೆ. ಒಟ್ಟಿನಲ್ಲಿ ಶ್ರೀ ರಾಜರ ಇವತ್ತಿಳು ಭಂವ, ಅರ್ಥಗಳಿಂದ ಕೂಡಿವೆ; "ಕಣ್ಣೀರ ಕವಿ"ಯೆನಿಸಿದರೂ ಅದರಲ್ಲೇ ಸುಖಶಾಜುವ ಆಶಯವೂ ವ್ಯಕ್ತವಾಗಿದೆ: "ಎನ್ನ ಹಂಸನೆತ್ತರದಿ ಕೋಗಿಲೆಗೆ ಉಣಗೊಟ್ಟ ಉದಯದಲಿ ನೀಡುವೆನು ಸೀತಾರ್ಪಣ!"

ಜೀವಂತ ಜನ– (ನಾಟಕ)

ಬರೆದವರು: ಫ. ಶಿ. ಭಾಂಡಗೆ.

ಪ್ರಕಾಶನ: ವಿದ್ಯಾವಾಹಿನಿ ಸ್ಮಾರಕ ಟ್ರಸ್ಟ್ ಲಯ, ಗದಗ.

ಪುಟಗಳು: ೧೩೨. ಬೆಲೆ: ರೂ ೨-೫೦.

ನಾಧುನಿಕತೆಯಲ್ಲಿ ಅನಾದಿಕಾಲದ ಪ್ರಮೂ ಆಳನ ಹಿರಿಯರ ಪುನರ್ಜೋಲಿಸುವ ತಂತ್ರವನ್ನು ರಾಮಪುರದಲ್ಲಿ ಹೊತ್ತಿಸಿದ ನವಜಾಗೃತಿಯ ದೀಪದ ತೇಜೋವಂತ ಮನ್ವಿನ ಹಿಂದೆ ಹೆಣೆದ ನಾಟಕವಿದು. ವಸ್ತು ವಿನಲ್ಲಿ ನಾವೀನ್ಯತೆ ವಿದೆ; ಆದರ್ಶವೂ ಇದೆ. ಆದು ಬೆಳೆದು ಬಂದ ಕ್ರಮವೂ ಉತ್ತಮವೇ ಇದೆ. ಪೀಟಿಯಲ್ಲಿ ರಂಗಿನ ಚಿಟ್ಟೆಯಂತಿದ್ದ ಕ್ಷಮಾ ರಾವ್‌ರಕ್ಕೆ ಬಂದು ಅಲ್ಲಿ ಆದರ್ಶ ನಾರಿಯಾಗಿ ಪರಿವರ್ತನೆಹೊಂದಿದ ಅಸಾಧಾರಣತೆಯಿಂದಲೇ ಆಯಿಯು ಮಾಧುವಿನ ಕೈಹಿಡಿಯುವ ಅಹಾರತೆಯನ್ನು ಪಡೆದಳು, ವಿದ್ಯಾವಂತ ಮಹಿಳೆಯೇನು ಮಾಡ ಬಹುದು ಎಂಬುದನ್ನು ತೋರಿಸಿದ ಪ್ರಭಾವಿ ಕ್ಷಮೆಯ ಚರಿತ್ರೆ ಸಮಾಜದಲ್ಲಿ ಮಾರಿಯುವುದು ಮಾತ್ರ ಡಲಲವನ್ನೆ ಬೇಕು.

ಮಾಧು, ಸಂಜೀವಪ್ಪ, ಭೀಮನ ಗೌಡ, ನಂದಪ್ಪ, ಚಂದ್ರಮ್ಮ, ರಾಮಿ— ಮೊದಲಾದ ಪಾತ್ರಗಳು ಯಥಾದೋನ್ಯ ಪಾಗಿಯೇ ಬಂದಿವೆ.ಜೆನ್ನ —ರಾಮಿಯುರ ಪಾತ್ರ ನೈಜ ಭಾರತೀಯರ ಪ್ರತಿನಿಧಿ.

(ಪದಿಮೂನನೇ ಪುಟ ನೋಡಿರಿ)

ಓದಲೇ ಬೇಕಾದ ಉತ್ತಮ ಪುಸ್ತಕಗಳು

ಹೆಳವನ ಕಟ್ಟೆ	ಗಿರಿಯನ್ನು ವೈ. ಸು. ಶೇ.	2	00
ದೂರ ಗಗನ	ಟಿ. ಕೆ. ರಾಮರಾವ್	2	50
ಹಂಬಲ ಚಿಗುರಿತು	ಟಿ. ಕೆ. ಆರ್	2	00
ಜೀವನ ಚದುರಂಗ	ಮಾ. ಭೀ. ಶೇಷಗಿರಿ	2	50
ನೂರು ಜುಟ್ಟು ಮೂರು ಜಡೆ	ಭಾಗ೧	ನಿರಂಜನ	2 50
,,	ಭಾಗ೨	,,	2 25
ಉಭಯ ಲೋಕೇಶ್ವರ	ಶ್ರೀನಿವಾಸರಾವ್ ಕೊಂಟಿ	2	50
ವಿಷ ಗಾಳಿ	ಮಾ. ಭೀ. ಶೇಷಗಿರಿ	2	25
ಬೆಂಕಿಯ ಹೂವು	ನಾಡಿಗೇರ ಕೃಷ್ಣರಾಯ	2	50
ಪ್ರೇಮ ಸಮರ	ಶ್ರೀನಿವಾಸ ಉಡುಪ	2	50
ಬಾಳಿಗೊಂದು ನಮಸ್ಕಾರ	ಮಾ.ಭೀ. ಶೇಷಗಿರಿ	2	25
ಹಿಮದ ಹೂ	ಅನುಪಮಾ ನಿರಂಜನ	2	50
ಧರ್ಮಚಕ್ರ	ಕುವೂರ ವೆಂಕಣ್ಣ	1	00
ಗೋವಿಂದ ರಾಯನ ಗೋತ	ನಾ. ಗೋವಿಂದರಾವ್.	1	00
ಬಿಡುಗಡೆಯ ಬೆಲೆ	ಆಶ್ವತ್ಥನಾರಾಯಣ ರಾವ್	1	50
ಅವಳ ಋಣ	ಮುಲೀಧರ	1	50
ಸ್ವರಾಜ್ಯ ಶಾಸ್ತ್ರ	ಅನು: ನಾಲಿ ರಾಮಚಂದ್ರರಾಯ	0	75
ಏಕ್ಯಗಾನ	ಕಯ್ಯಾರ ಕಿಞ್ಞಣ್ಣ ರೈ.	1	50
ಖಗೋಳ ಪುರಾಣ	ವಾಸು	1	50
ಗಾಂಧೀಜಿಯವರ ಕಥೆ	ಕೃಷ್ಣಾಹೆಗ್ಡೆಸಿಂಗ್	1	00
ಸಿಡಿ	ವಸುದೇವ್ ಭೂಪಾಲಂ	1	25
ಶ್ರೀ ಪಾರ್ಶ್ವನಾಥಚಂಪು	ಜ. ಪಿ. ರಾಜರತ್ನಂ	1	50
ವಿನೋದ ಚಿತ್ರಗಳು	ಸಂಕಲನ	1	25
ಸಮಾಧಿ ಶಿಲಪ್ಪ	ಎಂ. ಗೋವಿಂದ ರೆಡ್ಡಿ.	1	00
ರಾಯರ ಕಥೆಗಳು.	ಎನ್. ಸೂರಪ್ಪ	1	00
ಲೈಲಾ ಪತ್ರಗಳು	ಅನು: ವಿರಲರಾಯ	1	25
ನೇವಾರ	ಎನ್. ಕೆ. ಕರೀಮ್‌ಖಾನ್	1	25
ತೇಜಕ	ಜೆ. ಪಿ. ರಾಜರತ್ನಂ.	1	50
ಕರ್ನಾಕಟ	ಸಿದ್ಧನಸಕಳ್ಳ ಕೃಷ್ಣ ಶರ್ಮ	2	50
ಮುಖಾತ್ಮರ ಮರಣ	ಜ. ಪಿ. ರಾಜರತ್ನಂ	1	25
ಸದ್ಗುಣ ಸಂಭ್ರಮ	ವೇ. ತಿ. ಗಳಗನಾಥ	0	50
ರಾಳಿವಾಹನ ಕೃತಿಗಳು.	ದೇವುಡು	1	25
ತುಳುವಾಡ್ಡನದ ಕತೆಗಳು.	ಅಮೃತ, ಸೂರ್ವೇಶ್ವರ	0	60
ಮುದ್ದಣ ಸಗ್ಗಾಣಿ	ಶ ರಾ. ಕೃ.	2	00
ಹೆಣ್ಣಿನ ಕಣ್ಣು	ರಾ ವೆಂ. ಶ್ರೀನಿವಾ.	1	94
ಆಕಾಶ ದೀಪ	ಎಸ್. ಆರ್. ಚಂದ್ರ	1	00
ಮಾನವ ತ	ತ. ರಾ. ಸು.	1	94
ಹೂ ಗೊಂಚಲು	ಗನಪರಾವ್	0	25
ಪತಿಪಾತಿಶ ಕಥಾಗಳ	ಪಂಜೆ ಮಂಗೇಶರಾವ್	0	62
ದೂನ್ ಕ್ವಿಕ್ಸೋಟ್	ಅನುವಾದ	1	12
ಹಾಸನ್ ಟೋಪಿ	ಹುಯಿಲಿ ಭೀಮರಾವ್	1	50
ಹೆಬ್ಬೆರಳು	ಗೋವಿಂದ ಪೈ	1	00
ಪೈಶಾಪಿ	,,	0	95
ಗೋವಿಂದ ಹರಿ ಗೋವಿಂದ	ದಾನೋದರ ಬಾಳಿಗ	1	25
ಆಳಿಲ ಸೇವೆ	,,	0	57
ನಮ್ಮ ಭೂಮಿ	,,	0	75
ಫಲ ಪುಷ್ಪ	ವರದರಾಜ ಬಾಳಿಗ	1	25
ರಾಜಸೂಯಾಧ್ವರ	ಬಿ. ಪದ್ಮನಾಭ ಸೋಮಯಾಜಿ	1	25
ನಿಷ್ಕಾಮ ಪ್ರೇಮ	ಉಲ್ಲಾಳ ಮಂಗೇಶರಾವ್	1	00
ವಿಶ್ವಕವಿ	ಎನ್. ಸುಬ್ರಾಯನ್	1	00
ಮಣಿಮಾಲೆ	ನಡುಮನೆ ಸುಬ್ಬಣ್ಣ ರೈ	1	00
ಕವಿಮುಗುರು	ಯೋಗಿನಿ	1	00
ಗಧಾ ಯುದ್ಧದ ಸಾರ	ಬಿ. ಪದ್ಮನಾಭ ಸೋಮಯಾಜಿ	1	00
ಒಗ್ಗರಣೆ	ಎಸ್. ಆರ್. ಚಂದ್ರು	0	50
ಆಶ್ಚರ್ಯ ಚೂಡಾಮಣಿ	ಎ. ಶಂಕರ, ಸೆಟ್ಟಿ	1	00
ಮತ್ಸ್ಯನ್ಯಾಯ	ಕಾಳಿಂವರ್	1	00
ವತ್ಸಲಾ—ವಿಜಯ	ಅ. ಗೌ. ಕೆ.	0	50
ಬಾಳಗೀತ	ಧ್ರುವಾನಂದ	0	50
ಅಹಿಂಸಕ	ಶ್ರೀನಂದ	0	19
ಶಿಶುಚರಿತ	ಕೋ. ರ. ಕಾರಂತ	0	37
ರಮಾಧವ	ಎ. ರಾಮರಾವ್	0	75
ಹಳ್ಳಿಯ ರಾಣಿ	ಸುಂದರಮ್ಮನೆಲ್ಲಿಕಾಯಿ	0	50
ಸಮಾಜ ಶಾಸ್ತ್ರಾಭ್ಯಾಸಗಳ ಬೋಧನೆ	ಎಸ್. ಕೃಷ್ಣಸ್ವ	4	50
ಜೇನ ಹನಿಗಳು	ಕ. ರಾ. ಕೃ	3	50
ಜಿಪ್ಸಿಗ ಜೆಲುವಮ್ಮ	,,	2	25
ಉತ್ತರ ಜಾನಪದ ಗೀತಗಳು	ಕ.ರಾ ಕೃ.	1	00
ತುಳು ಮೂಷೇಶ್ವರ	,,	1	00
ನಾಡ ಹಾಡುಗಳು	,,	0	75
ಲಿಯೋ ಟಾಲ್‌ಸ್ಟಾಯ್	ಅನು: ಆನಂದ	3	00
ಜನತೆಯ ಪಡುವೆ	ಅನು: ನಿರಂಜನ	2	50
ನನ್ನ ಬಾಲ್ಯ	,,	1	75
ನನ್ನ ವಿಶ್ವ ವಿದ್ಯಾನಿಲಯಗಳು	,,	2	00
ಕರೆಂಬು ನೀರನ್ನು ಕರೆಗೆ	ಜೆಲ್ಲಿ ಪಿ. ಲಂಕೇಶ್	2	50
ಕುಲ ಹೋಯಿತು	ರ್ಯಾಮೂ	2	75
ಬಸ್ ಕಂಡಕ್ಟರ್	ಕಾಮರಾಜ	2	50
ನಮ್ಮಂಧನರೇ ಹೆಚ್ಚು ಮಂದಿ	ಮಿಕ್ಕೂರು	2	00
ಬಿಳಿ ಡಾಯಿ ಅನ:	ಕೆ.ಎಸ್. ಕೃಷ್ಣಮೂರ್ತಿ	2	00
ಬಂಗಾರದ ಬಳ್ಳಿ	ನಾಡಿಗೇರ ಕೃಷ್ಣರಾಯ	2	00
ಬಾಳ ನಿಯಮ	ಅನು: ರಾಘವೇಂದ್ರ	1	50
ರೈಲು ಕಂಬಿಯ ಮೇಲೆ	ಕೆ. ವಿ. ಸತ್ಯನ್.	1	50
ಗೌರೀಶಂಕರ	ಅಣ್ಣಪ್ಪಿಡ್ಡಿ ನಾರಾಯಣ ಭಟ್ಟ	1	25
ಪೂಜೆ	,,	1	25
ಕೊಕೋರೋ	ಡಿ. ವಿ. ರಾಘವೇಂದ್ರು	1	00
ಜ್ವಾಲಾಮುಖಿ	,,	0	62
ಸಂಸ್ಥಾನಿಕರು	ಗೋವಿಂದ ಮಾರ್ತಿ ದೇಸಾಯಿ	1	50
ಒಡ್ಡಿದ ಉರುಳು	ಅ. ಗೌ. ಕಿನ್ನಿಗೋಳಿ	1	25
ನಿಜಸುತ	ಸೇವನವಿ.ರಾಜಮಲ್ಲ	1	50
ಭಾರತದ ಇತಿಹಾಸ ಪಾಠಗಳು	ತ. ಸು. ಶಾಮರಾಯ	0	75
ಸಾಯೋ ಎಮ್ಮೆ ಸೇರು ತುಪ್ಪ	ರಾಘಣ್ಣ	0	75
ದುದುವೆ ಮಾಡಿ ನೋಡು	,,	0	75
ತಾಳಕಟ್ಟೋಕ್ಟೆಯಂರು	ಎ. ಗುಂಡಣ್ಣ	0	75
ಕುವೂರಾ ಸುನೇತ್ರ	ಅಲಚೇರಕಂ	0	75
ಸ್ವಾಮಿ ವಿವೇಕಾನಂದ	ಉ. ರಾ. ಸುಬ್ಬರಾಯಾಚಾರ್	0	50
ಪುಟಾಣಿಗಳ ಪ್ರಪಂಚ	ಕ. ಎನ್. ತಂಪ್ರಿ	0	60
ದೇಶ ಭಕ್ತ	ಹೊಡ	0	50
ಓಟನ ರಾಜ	ನರೇಂದ್ರ ಬಾಬು	0	50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಡೆದು ಬಂದ ಭಾಗ್ಯ!

(ಎರಡನೇ ಸುಟದಿಂದ)

ಲ್ಲ. ಅಣ್ಣ ತಮ್ಮನಾದರೂ ಅಷ್ಟೆ! ತಂದೆ ತಾಯಿಯಾದರೂ ಜೀವಿಸಿದ್ದಿದ್ದರೆ ಹೋಗುತ್ತಿದ್ದರೋ ಏನೋ! ಅದರೆ ಅವರು ಆದಾಗಲೇ ಕಾಲವಾಗಿದ್ದರು.

ಸೀತನದಲ್ಲಿ ಓಲಾಡಿ ಜೀವಿಸಿದ್ದ ವೇದಾವತಮ್ಮನವರಿಗೆ ಬಡತನದ ಬಾಳ್ವೆ ಯಮ ಯಾತನೆಯನ್ನಿತ್ತಿತ್ತು. ನಟರಾಜ ನಿಗಾಗಿ ಎಷ್ಟವನ್ನೂ ಸಹಿಸಿಕೊಂಡರು.

ನಟರಾಜನ ವಿದ್ಯಾಭ್ಯಾಸಕ್ಕಾಗಿ ವೇದಾವತಮ್ಮ ಹತ್ತಿರದ ಪೇಟೆ ಸೇರಬೇಕಾಯಿತು. ಮೊದಲೇ ಹೊಟ್ಟೆಬಟ್ಟೆಗೆ ಸಾಕಾಗದಿದ್ದ ವರಮಾನ ಈಗ ಏನೇನೂ ಸಾಲದಾಯಿತು. ನಟರಾಜನ ಸ್ಕೂಲಿಂಗು ವಿದ್ಯಾಭ್ಯಾಸದ ವಿಚಾರ ಅದೊಂದು ಹೊರೆಯೇ ಆಯಿತ್ತಿತ್ತು. ಅವನ ಬೇಡಿಕೆಗಳನ್ನು ಪೂರೈಸಲು ಆಪ, ನೆರೆಕರೆಯ ಮನೆಗಳಿಗೆ ಕೆಲಸಗಳಿಗೆ ಹೋಗಲು ಪ್ರಾರಂಭಿಸಿದರು. ಮೊದಮೊದಲು ಅದು ಕಷ್ಟವಾಗುತ್ತಿದ್ದರೂ ಬರ ಬರುತ್ತ ಆ ಬಾಳಿಗೆ ಅವರು ಹೊಂದಿಕೊಂಡರು.

ತಾನು ಚಿಕ್ಕವನಿರುವಾಗ ನಟರಾಜನಿಗೆ ಇದೊಂದೂ ಅರ್ಥವಾಗುತ್ತಿರಲಿಲ್ಲ. ಆದರೆ ಬೆಳೆದಂತೆ ತನ್ನ ತಾಯಿ ತನಗಾಗಿ ಪಡುತ್ತಿರುವ ಬನ್ನವನ್ನು ಕಂಡು ಕೆಲವೊಮ್ಮೆ ಮಮ್ಮಲ ಮರುಗಿದನು. ತಾನು ಜೆನ್ನಾಗಿ ಕಲಿತು ಗಟ್ಟಿಗನಾಗಬೇಕು; ತನ್ನ ತಾಯಿಗೆ ಸುಖವನ್ನು ದೊರಕಿಸಿಕೊಡಬೇಕು' ಎಂದು ಆಗಾಗ ತನ್ನಲ್ಲೇ ಹೇಳಿಕೊಳ್ಳುತ್ತಿದ್ದನು. ಅದರಂತೆ ಚೆನ್ನಾಗಿ ಕಲಿತನು. ಪ್ರೌಢಶಾಲೆಗೆ ಮೊದಲಿಗನಾಗಿ ತೇರ್ಗಡೆಯೂದನು.

ತನ್ನ ಮಗನನ್ನು ಡಾಕ್ಟರನನ್ನಾಗಿ ಮಾಡಬೇಕು. ತಾನು ಮೊದಲಿನಂತೆ ಇನ್ನೊಬ್ಬರ ಊರಲ್ಲಿ ತಲೆಯೆತ್ತಿ ಬೆಳೆಯಬೇಕೆಂಬ ಕನಸನ್ನು ವೇದಾವತಮ್ಮ ಅದೆಂದೋ ಕಂಡಿದ್ದರು. ಜನಗಳ್ಳೇ ಕಷ್ಟವಾದರೂ ತನ್ನ ನಿರ್ಧಾರವನ್ನು ಕೈಬಿಡಲಿಲ್ಲ ವೇದಾವತಮ್ಮ.

ಈ ಎಲ್ಲಾ ವಿಚಾರಗಳೂ ನಟರಾಜನಿಗೆ ಆಗಾಗ ನೆನಪಾಗುತ್ತಿತ್ತು. ಆಗ ಅವನ ಮನಸ್ಸೂ ಹುರುಪಾಗುತ್ತಿತ್ತ. ತನ್ನ ಅಭ್ಯಾಸದ ಕಡೆಗೆ ಹೆಚ್ಚು ಗಮನ ಹರಿಸುತ್ತಿದ್ದನು.

ಂ ಂ ಂ ಂ

ವೇದಾವತಮ್ಮನವರಿಗೆ ಅಂದು ಆದ ಆನಂದಕ್ಕೆ ಪಾರವೇ ಇರಲಿಲ್ಲ. ತನ್ನ ಕನಸು ನನಸಾದ ಆ ದಿನ ಅವರ ಬಾಳಿನ ಮರೆಯಲಾರದ ಸುದಿನವಾಗಿತ್ತು.

"ಅಮ್ಮಾ ನಂಗೆ ಮಂಗಳೂರು ಸರಕಾರೀ ಆಸ್ಪತ್ರೆಗೆ ಡಾಕ್ಟರ್ ಆಗಿ ಸೇರುವ ಹುಕುಂ ಆಗಿದೆ' ಎಂದು ಆರ್ಡರನ್ನು ಕೈಯಲ್ಲಿ ಹಿಡಿದು ಒತ್ತುತ್ತ ಮೆಟ್ಟಲೇರುತ್ತ ನಟರಾಜ ಹೇಳಿದಾಗ, ವೇದಾವತಮ್ಮ ಹಿಗ್ಗಿನಿಂದ ಕುಣಿದಾಡಿದರು. ನೆಟ್ಟಗೆ ಹೋಗಿ ದೇವರಿಗೆ ತಪ್ಪದ ದೀಪ ಹಚ್ಚಿಟ್ಟು ಮಂಡಿಯೂರಿ, ನಟರಾಜನನ್ನೂ ಎಳೆದೊಯ್ದು ನಮಸ್ಕಾರ ಮಾಡಿಸಿದರು.

'ದೇವರು ನನ್ನ ಮೊರೆ ಕೇಳಿದನು. ನನ್ನ ಜೀವನದ ಒಂದು ಕೆಲಸ ಪೂರೈಸಿದಂತಾಯಿತು. ಇನ್ನು ನಿನಗೆ ಯೋಗ್ಯ ಕನ್ಯೆಯೊಬ್ಬಳನ್ನು ಆರಿಸಿ ಮದುವೆ ಮಾಡಿಸಿ ಕಣ್ತುಂಬಿಕೊಂಡರೆ ಅಲ್ಲಿಗೆ ನನ್ನ ಕರ್ತವ್ಯ ಮುಗಿಯಿತು.'

ವೇದಾವತಮ್ಮ ದೇವರ ಕೋಣೆಯಿಂದ ಬರುತ್ತ ಖಡಕ್ಕಾಗಿ ಹೇಳಿದರೆ, ಆ ಮಾತನ್ನು ಕೇಳಿ ನಟರಾಜನ ತಟ್ಟೆಯುಂಚಿನಲ್ಲಿ ಕಿರುನಗೆಯೊಂದು ಮಿಂಚಿಮರೆಯಾಯಿತು. ಕೆನ್ನೆ ಕೆಂಪೇರಿತು. ಮನದ ಮುಂದೆ ಅನಸೂಯಳ ರೂಪ ತೇಲಿಹೋಯಿತು. ಆಕೆ ಪುಂಟೆ ನಗೆಯೊಂದಿಗೆ ತನ್ನನ್ನು ಗೇಲಿ ಮಾಡಿದಂತೆನಿಸಿತು. ಮರು ಕ್ಷಣವೇ ತಾನು ಬೆಂಗಳೂರಿನಿಂದ ಹೊರಟು ನಿಂತಾಗ ಕಂದಿದ ಮುಖದಿಂದ "ನನ್ನನ್ನು ಬೇಗನೆ ಕರೆಸಿಕೊಳ್ಳುವಿಲ್ಲವೆ?" ಎಂದು ಆಕೆ ಹೇಳಿದ ಮಾತೂ ಅಲೆಯಲೆಯಾಗಿ ಕೇಳಿಸಿತು.

"ಏನು ಯೋಚಿಸುವೆ ರಾಜು, ನೀನು 'ಹೂಂ' ಎಂದು ಬಿಡು, ಆ ಮೇಲಿನ ಕೆಲಸವೆಲ್ಲ ನಾನು ಮಾಡುತ್ತೇನೆ. ಈಗ ನಿನಗೆ ಹೆಣ್ಣು ಕೊಡಲು ನಾವುಂದೆತಾಮುಂದೆ ಎಂದು ಬರುವವರಿದ್ದಾರೆ, ತಿಳಿಯಿತೆ"

ವೇದಾವತಮ್ಮ ತಮ್ಮ ಮಾತನ್ನು ಪುಷ್ಟಿಗೊಳಿಸುತ್ತ ಹೇಳಿದರು.

'ನಿನಗೆ ಆ ತಾಪತ್ರಯವೇ ಇಲ್ಲಾಮ್ಮ'

'ಅಂದರೆ?'

'ನನ್ನ ಹೆಂಡತಿಯನ್ನು ನಾನೇ ಆರಿಸಿಕೊಂಡಿರುತ್ತೇನೆ.'

'ಅಂ...!'

ವೇದಾವತಮ್ಮ ಅಚ್ಚರಿಯಿಂದ ಬಾಯಿ ಬಿಟ್ಟರು. ಅವರ ಕವಿಯನ್ನು ಅವರೇ ನಂಬದಾದರು. ತನ್ನ ಇದಿರು ನಿಂತಿರುವದನ್ನು ನಟರಾಜನೇ ಎಂದು ಒಮ್ಮೆ ಅವನನ್ನು ಅಪಾದ ಮಸ್ತಕವಾಗಿ ನೋಡಿದರು.

ನಟರಾಜ ತುಂಟಸಗೆ ಬೀರುತ್ತಾ ತಾಯೊಡನೆ 'ಏಕವ್ಮ ಹಾಗೆ ನೋಡುತ್ತೀ? ನಿನ್ನ ಸೊಸೆಯಾಗಿ ಬರುವವಳು ಹೇಗಿರುವಳು ಗೊತ್ತಾ? ಸಾಕ್ಷಾತ್ ಸರಸ್ವತಿ; ಅನ್ನಪೂರ್ಣೇಶ್ವರಿ' ಎಂದನು.

'ಹೋಗೋ ಸುಮ್ಮರ. ನನ್ನನ್ನು ಗೇಲಿ ಮಾಡುತ್ತೀಯ'

"ಇಲ್ಲಮ್ಮ ಇದು ಸತ್ಯ. ಈ ವಿಚಾರವನ್ನು ನಾನೇ ನಿನ್ನೊಡನೆ ಸರಿಯಾದ ಸಮಯದಲ್ಲಿ ಹೇಳ ಬೇಕೆಂದಿದ್ದೆ.'

'ಅಂದರೆ ಯಾರೋ ಆಕೆ?'

"ಆಕೆ ಬೆಂಗಳೂರಿನವಳಮ್ಮ, ನಾನು ಎಸ್ಸೆಂಟೇಷಾಗಿದ್ದ ಆಸ್ಪತ್ರೆಯಲ್ಲಿ ನರ್ಸಾಗಿದ್ದಾಳೆ. ಹೆಸರು ಅನಸೂಯ. ಆಕೆ ಎಂತಹ ಗುಣವಂತೆ ಗೊತ್ತೇನಮ್ಮ.'

"ಇದು ಸರಿಯಾಗಲಿಲ್ಲ ರಾಜು. ನೀನು ಸುಡುಕಿ ಕೆಟ್ಟೆ. ಆ ಸೇಟಿಯು ಹುಡುಗಿ ನಿನ್ನನ್ನು ಸರಿಯಾಗಿ ಬಾಳಿಸುತ್ತಾಳೆಯೆ.'

ವೇದಾವತಮ್ಮ ನಿರಾಶಂಕಾಗಿ ಎಳೆದೆಳೆದು ನುಡಿದರು.

'ಇನ್ನಮ್ಮ ನೀನು ಹಠ ತಿಳಿದುಕೊಂಡೆ. ಪೇಟೆಯು ಎಲ್ಲರೂ ಕೆಟ್ಟವರಲ್ಲ. ನಮ್ಮ ಅನಸೂಯನನ್ನು ನೋಡಿದರೆ ನೀನೇ ಹೇಳುವಿ ಮತ್ತೆ.'

"ಏನೋಪ್ಪ'

ವೇದಾವತಮ್ಮ ನಿಟ್ಟುಸಿರಿಟ್ಟು ಅಡಿಗೆ ಮನೆಗೆ ಕಾಲೆಳೆದರು.

ಂ ಂ ಂ ಂ

"ನೋಡಿ ನಿಮ್ಮ ತಾಯಿಗೆ ಸ್ವಲ್ಪ ಬುದ್ಧಿ ಹೇಳಿರಿ. ದಿನ ಬಳಗಾದರೆ ಅವರ ರಾಮಾಯಣ ಕೇಳಿ ಕೇಳಿ ನನ್ನ ತಲೆ ಚಿಟ್ಟು ಹಿಡಿದು ಹೋಯಿತು.

"ಏನೇ ಈಗ ಆಗಿರೋದು?'

'ಅವರನ್ನೇ ಕೇಳಿ ನೋಡಿ.'

'ಅವಳನ್ನೇ ಕೇಳುತ್ತಿದ್ದರೆ. ನೀನೇಕೆ ಮತ್ತೆ ಹೇಳಲು ಬಂದೆ?'

"ನನಗೆ ಸಹಿಸೋಕೆ ಆಗೋದಿಲ್ಲ ಅದಕ್ಕೆ.'

'ಅದುದಾದರೂ ಏನು? ಹೇಳಿ ಬಾರದೇ?'

"ನಾನು ಲಿಪ್‌ಸ್ಟಿಕ್ ಹಾಕ ಬಾರದಂತೆ, ಹವ್ಮಡಿ ಯೆತ್ತರದ ಶೂಸ್ ಹಾಕ ಬಾರದಂತ, ಗೆಳತಿಯರೊಡನೆ ಕ್ಲಬ್ಬಿಗೆ ಹೋಗಬಾರದಂತೆ, ದೇವರಿಗೆ ನಮಸ್ಕಾರ ಮಾಡುವುದಿಲ್ಲವಂತೆ, ದೇವಸ್ಥಾನಕ್ಕೆ ಹೋಗುವುದಿಲ್ಲವಂತೆ, ಒಂದೇ, ಎರಡೇ ಅವರ ಆಕ್ಷೇಪಣೆಗಳು ಇನ್ನೆಷ್ಟೋ ಇವೆ. ಇದನ್ನೆಲ್ಲ ಕೇಳಿ ಕೊಂಡಿರಲಿಕ್ಕಾಗುತ್ತೆದಯೇ?" ಅನಸೂಯಗಲ್ಲ ಉಬ್ಬಿಸುತ್ತ ಸಿಟ್ಟಿನಿಂದ ಕೇಳಿ ಆರಾಮ ಕುರ್ಚಿಯಲ್ಲಿ ಬಿದ್ದು ಕೊಂಡಳು.

'ಅವಳು ಹೇಳುವುದರಲ್ಲಿಯೂ ತಪ್ಪಿಲ್ಲಾನ್ನ.'

'ಅಂದರೆ ಒಡಗೂಲಜ್ಜಿಯು ಹಾಗೆ ಮನೆಯ ತೊತ್ತಾಗಿ ಬಿದ್ದಿರು ಅನ್ನುತ್ತೀರಾ"

"ಹಾಗಲ್ಲ'

'ಮತ್ತೆ ಹೇಗೆ? ನನಗೆಲ್ಲ ಗೊತ್ತು, ನೀವು, ತಾಯಿ ಮಕ್ಕಳು ಸೇರಿಕೊಂಡು ನನ್ನನ್ನು ಗೇಲಿ ಮಾಡುತ್ತಿರುವಿರಿ"

"ಅನಸೂಯ...!'

ನಟರಾಜ ತಡೆಯಲಾರದೆ ಅಬ್ಬರಿಸಿದನು.

"ಇಷ್ಟದ್ದು ಬೇಕಿದರೆ ಸಿಟ್ಟು ಬರುತ್ತದಲ್ಲವೆ?"

'ನನ್ನ ತಾಯಿಗೂ ಮೇಲೆ ವೃಥಾ ಆರೋಪಣೆ ಮಾಡುವುದನ್ನು ನಾನು ಕ್ಷಮಿಯಿಸಲಾರೆ. ಅವಳ ಯೋಗ್ಯತೆ...'

'ಓಹೋ! ಬಹಳ ಯೋಗ್ಯತೆ'

ಅವಳು ನನ್ನ ತಾಯಿ. ನನ್ನ ತಾಯಿ ನನ್ನನ್ನು ಈ ಸ್ಥಿತಿಗೆ ತಂದ ನನ್ನ ಪಾಲಿನ ದೇವತೆ."

"ನಿಮಗಾಗಿದ್ದ ಬಹುದು.'

"ಅವಳು ನಿನ್ನ ಅತ್ತೆ'

'ಅದಕ್ಕಾಗಿ ಕತ್ತೆಯಂತೆ ಹೇಳಿದ್ದನ್ನೆಲ್ಲ ಕೇಳಿಕೊಂಡು ಬಿದ್ದಿರ ಬೇಕೆ?'

"ಅವಳಿಗೆ ನೀನು ಹೊಂದಿಕೊಳ್ಳಬೇಕು.'

'ಅಂದರೆ ಅವರ ದಾಸಿಯಾಗಿ ಬಿದ್ದಿರಬೇಕೆ? ಈ ಮನೆಯಲ್ಲಿ ಅದರ ಹೊರತಾಗಿ ಬೇರೇನೂ ಅಧಿಕಾರ ನನಗಿಲ್ಲವೆ?'

"ಅಧಿಕಾರದ ಪ್ರಶ್ನೆ ಈಗ ಯಾಕೆ. ಯಾರ ಅಧಿಕಾರ ಯಾರ ಮೇಲೂ ಇರುವುದಿಲ್ಲ. ಅವರವರನ್ನು ಅವರವರು ತಿಳಿದು ಬಾಳಿದರಾಯಿತು.'

"ಈ ಮಾತು ನಿಮ್ಮ ತಾಯಿಗೆ ಹೇಳಿರಿ. ನಾನು ಈ ಮನೆಗೆ ಬೇಡಿಕೊಂಡು ಬಂದ ತೊತ್ತಲ್ಲ. ನಿಮ್ಮ ಕೈ ಹಿಡಿದು ಬಂದ ಪತ್ನಿ.'

'ಅದಕ್ಕಾಗಿ...?"

"ನನಗೂ ಈ ಮನೆಯಲ್ಲಿ ಅಧಿಕಾರವಿದೆ. ಅದನ್ನು ನೋಡಿ ಸಹಿಸಲು ಸಾಧ್ಯವಾಗದವರು ಬೇಕಾದರೆ ಹೊರಟು ಹೋಗಲಿ'

"ಅನಸೂಯ..... ಏನೆಂದೆ. ನನ್ನ ತಾಯಿಯನ್ನು ಮನೆ ಬಿಟ್ಟು ಹೋಗೆಂದೆಯಾ! ನನ್ನ ಬಾಳಿನ ಭಾಗ್ಯ ಶಿಲ್ಪಿಯಾದ ಅಮ್ಮನನ್ನು ಮನೆ ಬಿಟ್ಟು ಹೋಗುವಂತೆ ನನ್ನ ಪತ್ನಿಯಾದ ನೀನೇ ಹೇಳಿದೆಯ!'

ನಟರಾಜನು ಹುಚ್ಚನಂತೆ ಅರಚಿದನ. ಅನಸೂಯ ಏನೂ ಆಗದವಳಂತೆ ಮೊದಲಿನಂತೆಯೆ—

"ಹೌದು! ಒಂದೋ ನಾನು ಹೇಳಿದಂತೆ ಕೇಳಿ ಕೊಂಡು ಇರಬೇಕು. ಇಲ್ಲದಿದ್ದರೆ ಬೇಕಾದಲ್ಲಿಗೆ ಹೋಗಬಹುದು.'

"ಅನಸೂಯ, ನೀನು ಹೆಣ್ಣಲ್ಲ, ರಕ್ಕಸಿ"

"ಈ ಮಾತನ್ನು ನಿಮ್ಮ ತಾಯಿಗೆ ಹೇಳಿರಿ. ಮಗನ ಬಾಳಿನ್ನು ಹಾಳು ಮಾಡುವವರಿಗೆಲ್ಲ ಈ ಮಾತು ಚೆನ್ನಾಗಿ ಅನ್ವಯಿಸುತ್ತದೆ'

"ಚಾಂಡಾಲಿ"

ನಟರಾಜನು ಫಳೀರೆಂದು ಅನಸೂಯಳ ಕೆನ್ನೆಗೊಂದು ಬಿಗಿದನು. ಅನಸೂಯ ಕ್ಷಣಕಾಲ ತಲೆಯೆತ್ತಿ ಗಂಡನನ್ನೂ ಮೈಮನೋಡಿ 'ಹೊಡೆಯಿರಿ. ಬೇಕಾದಷ್ಟು ಹೊಡೆಯಿರಿ. ನಿಮ್ಮ ಕೈ ಹಿಡಿದ ಪತ್ನಿಯಲ್ಲವೆ ನಾನು ಹೊಡೆತ ತಿನ್ನಲೆಂದೇ ಇದ್ದವಳಲ್ಲವೆ"

ಅನಸೂಯ ಬಿಕ್ಕಿ ಬಿಕ್ಕಿ ಅತ್ತಳು. ಆಕೆಯ ಅಳು ನಟರಾಜನ ಕೋಪವನ್ನು ತ

(ಹದಿನೈದನೇ ಪುಟ ನೋಡಿರಿ)

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.....

ಧನ (½ H.P. to 30 H.P.) ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು.....

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ವಿಶ್ವಶಾಂತಿಯೆ ಕಾರಣ-ಪುರುಷ— ನೆಹರು

(ಒಂಭತ್ತನೇ ಪುಟದಿಂದ)

ರು ಮಹಾಂತಪ್ಪನವರು ಭಗ್ನ ಅಣ್ವಸ್ತ್ರ ಪ್ರಯೋಗ ಶ್ರುತಿಬದ್ಧ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದಕ್ಕೆ ಬೆಂಬಲ ವ್ಯಕ್ತಪಡಿಸಿದವರಲ್ಲಿ ನೆಹರೂರವರೇ ಮೊದಲಿಗರು.

ಹದಿನೆಂಟು ವರ್ಷಗಳ ಕಾಲ, ಭಾರತಕ್ಕೆ ಮತ್ತು ವಿಶ್ವದ ಜನತೆಗೆ ಮಾರ್ಗದರ್ಶನ ನೆವಾಡಿದ ಜವಾಹರ್‌ಲಾಲ್ ನೆಹರೂ ಮಹಾನುಭಾವರಂಗಿದ್ದರು. ಮಹಾತ್ಮಾ ಗಾಂಧೀಜಿ ಅವರು ಒಮ್ಮೆ ನೆಹರೂ ಅವರನ್ನು ಕುರಿತು ಹೀಗೆ ಹೇಳಿದ್ದಾರೆ.

"ನೆಹರೂ ಅವರು, ಹುಚ್ಚು ಧೈರ್ಯದ ಒಂಟು ಸ್ವಭಾವದ ವ್ಯಕ್ತಿಯೆಂದು ಕೆಲವರು ಹೇಳುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಈ ಗುಣ ಒಂದು ವಿಶೇಷ ಕೊಡುಗೆ. ನೆಹರೂರಲ್ಲಿಯೇ ಧೈರ್ಯ ಹುಚ್ಚು ಹಾಗೂ ದೃಢ ನಿರ್ಧಾರವಿಲ್ಲದ ರೆ ಅವರು ಒಬ್ಬ ಶ್ರೇಷ್ಠ ರಾಜಕಾರಣಿಯಾಗುತ್ತಾರೆ. ಇದು ನೂರಕ್ಕೆ ನೂರರಷ್ಟು ಸತ್ಯವಾಯಿತು.

ಕೃತಿ ಪರಿಚಯ

(ಹನ್ನೊಂದನೇ ಪುಟದಿಂದ)

'ಸರಕಾರ ಬೀಳಿಲ್ಲ, ನಮಗಾದ ದಾದಿಲ್ಲ! ಯೂನ್ಯಾರದರಕಾರ ನಮಗಿ ಸ್ಥಾಪನೆ | ಯೂನ್ಯಾರ ದರಕಾರನವ ಗಿಲ್ಲಾ ದೇವರೆ | ಹರಿತಾಗಿ ದುಡಿದೇ ಬಾಳ್ವೆವೋ" ಎಂದು ದುಡಿಮೆಯಲ್ಲಿ ನಿರತಳಾದ ಕ್ಷಮಾ ಆದರ್ಶ ಮಹಿಳೆ.

"ಜೀವಂತಜನ" ಆದರ್ಶ ಸಾಧನೆಯನ್ನೇ ಮುಖ್ಯವಾಗಿಟ್ಟು ಒರೆದ ನಾಟಕ- ಇದನ್ನ ಅಭಿನಯಿಸಲು ಬಹಳ ಕಷ್ಟ ಸಾಧ್ಯ—ಪಾತ್ರಗಳ ಮೂಡಣಗಳು ಕಲವೆಡೆ ಅತಿ ದೀರ್ಘವಾಗಿರುವುದು, ಸರಳಾಭಿನಯಕ್ಕೆ ಅಸಾಧ್ಯವಾದ ಸನ್ನಿವೇಶಗಳು ತುಂಬಿರುವುದು ಕೆಲವೆಡೆ ಅತಿ ಚಿಕ್ಕ ದೃಶ್ಯ ಸಂಯೋಜನೆಗಳು ಇದನ್ನು ಓದುವ ನಾಟಕವು ನಾಲಿಗೆ ಸೇರಿರುತ್ತವೆ. ಬಾಸಿದ ಭಾಷೆ ಯಥೋಚಿತವಿದೆ; ವಸ್ತು ಆದರ್ಶ ಹಾಗೂ ಮಾರ್ಗದರ್ಶಕವಿದೆ. ನಾಗರಿಕರೂ ಗ್ರಾಮೀಣರೂ ತಂತಮ್ಮ ತಪ್ಪು ತಿಳುವಳಿಕೆಯನ್ನು ಬಿಟ್ಟುಕೊಟ್ಟು ಜೀವಂತಜನವಾಗಿ ಬಾಳುವಂತೆ ಮಾಡಲು ಇದು ಸಹಾಯಕವಾಗಿದೆ. ಇಂದಿನ ಜೊಲಸು ರಾಜಕಾರಣದ ನಗ್ನದರ್ಶನವೂ ಅನುಷಂಗಿಕವಾಗಿ ಮೂಡಿ ಬಂದಿದೆ.

ಮಹಾ ಭಾರತದ ನೀತಿ ಕಥೆಗಳು:

ಬರೆದವರು: ಶ್ರೀ ಸಿರಿಬಾಗಿಲು ವೆಂಕಪ್ಪಯ್ಯ.

ಪ್ರಕಾಶಕರು: ಗೀತಾ ಪ್ರಕಾಶನ, ಶ್ರೀರಂಗಮ ಪೇಟೆ, ಕಾರ್ಕಳಗೋಡು.

ಪುಟಗಳು: ೨೪, ಬೆಲೆ: ರೂ. ೦—೫೫

ಮಹಾಭಾರತದಲ್ಲಿ ಬರುವ ನಾಳೀಜಂಗನೆಂಬ ಬಕರಾಜನ ಸರಹಿತಿ ಬುದ್ಧಿ, ನೀತ ಶಾಲ್ಮಲಿಮರದ ಅತಿಗರ್ವ—ಅದರಿಂದಾಗಿ ಅಪವಾನ, ತಮ್ಮಸುತೀಗಿಯಶಿಗಳಿಸಿದ ಎರಿಮಳ ದಂಪತಿಗಳ ಅತಿಥಿ ಸತ್ಕಾರ, ಅಪತ್ತಿನಲ್ಲಿ ಕಂಗೆಟ್ಟ ದೀರ್ಘಶ್ರೀಕನ ಅದೂರದರ್ಶಕತೆ, ಹಂಸದೊಡನೆ ಸ್ವರ್ಗಕ್ಕೆ ನೀತ ಕಾಗೆಯ ಸೊಕ್ಕು—

ಎಲ್ಲೆಲ್ಲಿ ಏನೇನು?

ಪೊಳಲಿ ಶೀನಪ್ಪ ಹೆಗ್ಡೆಯವರಿಗೆ ಶ್ರದ್ಧಾಂಜಲಿ

ತಾ. 3—9—66 ರಂದು ನಿಧನರಾದ ಶ್ರೀ ಪೊಳಲಿ ಅನುಂಜೆಗುತ್ತಿನ ಶೀನಪ್ಪ ಹೆಗ್ಡೆಯವರ ನಿಧನದ ಬಗ್ಗೆ ಸಾರ್ವಜನಿಕ ಸಂತಾಪ ಸೂಚಕ ಸಭೆಯೊಂದು ಗಣಪತಿ ಹೈಸ್ಕೂಲಿನ ಸಭಾ ಭವನದಲ್ಲಿ ತಾ. 15ರಂದು ಜೆಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು.

ಸಾರ್ವಜನಿಕ ಡಾ|| ಎಂ. ಎಸ್. ಎ. ಪೈ ಮೂರು ದಿವಂಗತರ ಸಂಕ್ಷಿಪ್ತ ಪರಿಚಯವನ್ನೂ ತುಳುನಾಡಿಗೆ ಅವರು ಸಲ್ಲಿಸಿದ ಸೇವೆಯನ್ನೂ ವಿವರಿಸಿದರು. ಬಳಿಕ ಡಾ|| ಟಿ. ಪಿ ಭಟ್ಟರು ದಿ|| ಹೆಗ್ಡೆಯವರ ಸಂಶೋಧನಾತ್ಮಕ ತುಳುವಾಡಿನ ಸೇವೆಯನ್ನು ಕೊಂಡಾಡಿದರು. ಶ್ರೀ ಬಾರೂರು ಜಗನ್ನಾಥ ರೈಯವರೂ ಶ್ರೀ ಸೂರಪ್ಪ ಹೆಗ್ಡೆಯವರೂ ದಿವಂಗತರ ಸಾಹಿತ್ಯ ಸೇವೆಯನ್ನು ಪ್ರಕಟಿಸಿ ಗುಣಕಥನ ಮಾಡಿದರು.

ಅಧ್ಯಕ್ಷರು ಮಾತನಾಡುತ್ತಾ ಶ್ರೀ ಹೆಗ್ಡೆಯವರು ಬರೆದಿಟ್ಟ ಪ್ರಾಚೀನ ತುಳುನಾಡಿನ ತೀನೇ ಭಾಗವನ್ನು ಮೊದಲೇ ಪ್ರಕಟಿಸುವರೆ ಸರಕಾರದ ಪ್ರೋತ್ಸಾಹ ಬೇಕೆಂದು ತಿಸಿ ತನ್ಮೂಲಕ ಪ್ರಯತ್ನವನ್ನು ಮಾಡುವವಾಗಿ ಭರವಸೆ ನೀಡಿ ಈ ಕಾರ್ಯಕ್ಕೆ ಪ್ರೋತ್ಸಾಹ ನೀಡುವಂತೆ ಜಿಲ್ಲೆಯ ಜನತೆಗೆ ಕರೆ ನೀಡಿದರು ಅಂತ್ಯದಲ್ಲಿ ಡಾ|| ಯಂ ಎಸ್ ಬ ಕರ್ಮರು ವಂದನಾರ್ಪಣೆಗೈದರು.

"ಶಿಕ್ಷಕರಿಗೆ ದೊರೆಯುವ ಗೌರವವೇಸವಜದಲಿಳೆತಿಗೌರವು"

ಕಡಿಯಾಳಿ, ಉಡುಪಿ ತಾ. 24:— "ಶಿಕ್ಷಕರಿಗೆ ಸಮಾಜದಲ್ಲಿ ದೊರೆಯುವ ಗೌರವ ವೇ ಸಮಾಜದ ಅಧಃಪತನ ಮತ್ತು ಅಧಿಕಾರಿಗಳ ಶಿಕ್ಷಕರ ಕಲ್ಯಾಣಕ್ಕಾಗಬೇಕಾದುದು ಅತೀ ಅವಶ್ಯ ಇಂದು ಶಿಕ್ಷಕ ವರ್ಗಕ್ಕೆ ದೊರೆಯುತ್ತಿರುವ ಗೌರವವು ದಿನೇದಿನೇ ಕಡಿಮೆಯಾಗುತ್ತಿದೆ. ಹಿಂದಿನ ಗುರುಶಿಷ್ಯರಂಗಳ ಪಾರಂಪರಿಕ ಅಳಿದುಹೋಗಿ ಗುರುಶಿಷ್ಯ ಸಂಬಂಧವು ಹಿಂದಿನಂತೆ ಇಂದು ಮಧುರವಾಗಿಲ್ಲ ಶಿಕ್ಷಕರು ನೆಮ್ಮದಿಯ ಬಾಳನ್ನು ಬದುಕಲಾರದಂತೆ ಮಾಡಿದೆ ಹೊರತು ಶಿಕ್ಷಣದಲ್ಲಿ ಸುಧಾರಣೆ ಆಗಿಲ್ಲ" ಎಂದು ಕಡಿಯಾಳಿ ಪಾ ಏ ಶಾಲಾ ಪಕ್ಷಿಷ್ಟ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಡೆದ 'ನಾಡ ಹಬ್ಬ' ಸಪ್ತಾಹದ ಉದ್ಘಾಟನೆ ಸ್ಥಾನದಿಂದ ಮಾತನಾಡುತ್ತಾ ಎಲ್ ವಿಸಿಯ ಅಸಿಸ್ಟೆಂಟ್ ಡಿವಿಜನಲ್ ಮೆನೇಜರಂದ ಶ್ರೀ ಜಿ. ವೆಂಕಟ ಸುಬ್ಬಯ್ಯನವರು ಹೇಳಿದರು.

ಸಪ್ತಾಹದ ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣ ಮಾಡಿದರು. ಆ ಬಳಿಕ ಮಾತ್ರಾಕಾಲಿಯಂದ ನಿವೃತ್ತರಾದ ಅಧ್ಯಾಪಕರುಗಳಾದ ಶ್ರೀ ಎನ್. ರಾಮಚಂದ್ರ ಭಟ್ಟ ಮತ್ತು ಶ್ರೀ ಕೆ. ಕೊರಗ ಹೂಸ್ಟರ್ ಇವರಿಗೆ ಸಂಘದ ವತಿಯಿಂದ ಗಂಧದ ಕರಂಡಕಗಳಲ್ಲಿ ಸನ್ಮಾನ ಪತ್ರವನ್ನು ಅಧ್ಯಕ್ಷರ ಹಸ್ತದಿಂದ ಅರ್ಪಿಸಲಾಯಿತು. ಸನ್ಮಾನಿತ ಅಧ್ಯಾಪಕರು ತಮ್ಮಲ್ಲಿ ತೋರಿದ ಪ್ರೀತಿ ಪೂರ್ವಗಳಿಗೆ ಕೃತಜ್ಞತೆ ಸೂಚಿಸಿದರು. ಹಳೆವಿದ್ಯಾರ್ಥಿಗಳಿಂದ "ಮೈಸೂರು ಮಲ್ಲಿಗೆ ಪುಲ್ಲಿತನ" ನಾಟಕವು ಯಶಸ್ವಿಯಾದ ಬಳಿಕ ಕಾರ್ಯದರ್ಶಿ ಶ್ರೀ ಎಸ್. ಸದಾಶಿವ ರಾಯರು ಧನ್ಯವಾದ ಅರ್ಪಿಸಿದರು.

ಇವು ನಮಗೆ ಒಂದೊಂದು ನೀತಿಯನ್ನು ತಿಳಿಸುತ್ತವೆ. ಶಿವೇಶ್ವರಗಳಿಂದ ನಮ್ಮನ್ನೆ ರಕ್ಷಿಸಿ ಕೊಳ್ಳಲು ನೆರವಾಗುವ ಈ ಕಥೆಗಳನ್ನು ಸಿರಿಬಾಗಿಲು ವೆಂಕಪ್ಪಯ್ಯನವರು ತಮ್ಮ ಸರಳ ಭಾಷೆಯಲ್ಲಿ ನಿರೂಪಿಸಿದ್ದಾರೆ; ಇದು ಎಂಟು— ಹತ್ತು ವರುಷದ ಮಕ್ಕಳ ನಾಚಿನಕ್ಕೆ ಉಪಕ್ತವೆನಿಸಿದೆ. ಸುಂದರವಾದ ಮುದ್ರಣವು ಪುಸ್ತಕವನ್ನು ಅಕರ್ಷಕಗೊಳಿಸಿದೆ.

—ಗೋರಾ

ತಂಗಿಯ ಬಣ್ಣ

ಗೊತ್ತೆ ವಂದ್ದಿನ ತಂಗಿ
ಬರುವವರು ಯಾರೆಂದು
ಹೆಣ್ಣನರಿಯಿಂದಲೀ ಮನೆಗೆ ಇಂದು! ?
'ಹೋಗೊ, ಸುಮ್ಮನೆ' —ಎಂದು
ರಾಗವನು ಎಳೆಯುದಿರು
ಬರುವರೀ ಜಡೆ ಹಿಡಿದು ಎಳೆಯುವವರೂ!

ಕೋಣೆಯಲಿ ಸಿದ್ಧತೆಯು
ನಡೆದಿಹುದು ತಿಳಿದುದೆಯೋ?
ಹಾಸಿಹರು ರತ್ನಗಂಬಳಿಯ ನಿಂದೂ!
ನಿನ್ನ ಕೊಳಲಿನ ಕೃಷ್ಣ
ಬಾಗಿಲಿನ ತೋರಣದಿ
ಜೋಲಿಯೂಡುತಲಿಹನು ಹಿಂದು.—
ಮುಂದೂ!

ಭಾವಿ ಭಾವನ ಮನೆಗೆ
ಕದಿಕಂಲು ಅಪ್ಪಯ್ಯ
ಗಾಡಿ ಜೊತೆಗೂಡಿ ರಸ್ತೆ ಪುಲಿರೆವರು!
ನಿನ್ನಮ್ಮ ಅತ್ತಿಗಯ
ರೊಂದಾಗಿ ಚೆಂಡದಲಿ
ತರ—ತರದ ತಿಂಡಿಗಳ ಮಾಡುತಿಹರು!
ಚಿಕ್ಕ ತಂಗಿಯರಿಂದು
ಜಾಯ ಲಂಗೆಗಳುಟ್ಟ
ನಲಿದಾಡುತಿಹರಿಲ್ಲ ಸಡಗರದಲೀ!
ನೀನೆಂದರೂ ಏನು
ಕಡಿಮೆಯಿಯಂವೆಯೆ ಕಳ್ಳಿ?
ಸಾಂದರ್ಯ ಸಾಕಾರವೀತೆರೆದಲೀ!!

"ಸುಮ್ಮನಿರೊ ಸಾಕೆನ್ನು"
ಎಂದು ನಾಚಿ ವೆಯೇಕೆ?
ಇಷ್ಟಲ್ಲ ಅಷ್ಟು ಬಿಡು ನಿನ್ನ ಕಣ್ಣಾ!
ಕೋಣೆಯಲಿ ನಿನ್ನವರು
ಒಂದಾಗಿ ಕುಳಿತಾಗ
ತಿಳಿವುದಮ್ಮಾ ನನಗೆ ನಿನ್ನ ಬಣ್ಣಾ!!

—"ತ್ರಿವಿಮೂರ್ತಿ"

ನಾಡ ಹಬ್ಬ

ದಿಂಗಂಪೇಟೆ ಕನ್ನಡ ಸಾಂಸ್ಕೃತಿಕ ಸಂಘವು ತಿಯಿಂದ ನಾಡ ಹಬ್ಬವು ದಿನಾಂಕ ೧೩—೧೦—೬೬ರಿಂದ ಮೂರು ದಿನ ಬಹು ವಿಜೃಂಭಣೆಯಿಂದ ನೆರವೇರಿತು. ಮೊದಲ ದಿನ ಮುಂಜಾನೆ ಶ್ರೀ ಮಿತ್ರ ಸ್ವಾಮಿಗಳಿಂದ ಧ್ವಜ ವಂದನೆಯಾಯಿತು. ಆ ಮೇಲೆ ನಾಡದೇವಿ ಸ್ಥಾಪನೆ, ಪೂಜಾ ಪ್ರಸಾದ ವಿನಿಯೋಗವಾಯಿತು. ಸಂಜೆ ಸಾರ್ವಜನಿಕ ಸಭೆ ಸೇರಿ ಶ್ರೀ ಕಾಸ್ಪೆ ಪಾಂಡುರಂಗರಾಯರು ಅಮೋಘ ಭಾಷಣವನ್ನಿತ್ತರು. ಮೊನ ಬಿಟ್ಟ ಗಂಡು' ಮತ್ತು "ಸನ್ಮಾನ" ಏಕಾಂಕಗಳು ಪ್ರೌಢ ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟವು.

ದಿನಾಂಕ ೧೪-೧೦—೬೬ರಂದು ಸಂಜೆ ಜರಗಿದ ಸಭೆಯಲ್ಲಿ ಶ್ರೀ ಸಿ. ಎಂ. ಗಲಗಲಿ ಅವರು 'ವಾಲ್ಮೀಕಿಯು ಚಿತ್ರಿಸಿದ ಪಾತ್ರಗಳು' ಎಂಬ ವಿಷಯದ ಮೇಲೆ ಭಾಷಣವಿತ್ತರು. ಶ್ರೀ ಅನಂತಪದ್ಮನಾಭರಾಯರು ಏಕ ಪಾತ್ರ ಭಿನಯವನ್ನು ಪ್ರದರ್ಶಿಸಿದರು. ಆ ಮೇಲೆ 'ವರದಕ್ಷಿಣೆ ಮತ್ತು ಸೊಸೆಯರ ಸಮ್ಮೇಲನ' ಅಣ್ಣಕ್ಕನು ನಿರ್ಬಂಧ ವಿದ್ಯಾರ್ಥಿಗಳು ಹಾಗೂ ಬಾಲಕಿಯರಿಂದ ಪ್ರದರ್ಶಿಸಲ್ಪಟ್ಟವು.

ದಿನಾಂಕ ೧೫-೧೦-೬೬ ರಂದು ಸಂಜೆ ಶ್ರೀ ರುದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಪಿ ಜಿ ಆರ್ ನಾರಾಯಣ ರವರು 'ಭಾರತೀಯ ಸಂಸ್ಕೃತಿ' ಎಂಬ ವಿಷಯದ ಮೇಲೆ ವಿಚಾರ ಪೂರ್ಣ ಭಾಷಣವನ್ನಿತ್ತರು. ಆ ಮೇಲೆ ಅತಿಥಿಗಳ ಅನುಮತಿ ಹಸ್ತದಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹಕ ಬಹುಮಾನಗಳನ್ನು ವಿತರಿಸಲಾಯಿತು. ಅಧ್ಯಕ್ಷರ ಭಾಷಣವಾದ ನಂತರ ಕಾರ್ಯದರ್ಶಿ ಶ್ರೀ ಎಂ. ಆರ್. ಬುದ್ಧಿವಂತ ಕೆಟ್ಟಿಯವರು ನಾಡ ಹಬ್ಬ ಯಶಸ್ವಿಗೊಳಿಸಲು ಯೋಸ್ಕಿಸಿದ ಎಲ್ಲರಿಗೂ ಕೃತಜ್ಞತಾರ್ಪಣೆಯನ್ನು ಸ್ಥಾಪಿಸಿದರು. ಆ ಮೇಲೆ ಗೋಮಯ ವ್ಯಾಘ್ರ' ನಾಡಿನ ಕರ್ ಏಕಾಂಕಗಳು ಬಾಲಿಕೆಯರಿಂದ ಅಭಿನಯಿಸಲ್ಪಟ್ಟವು.

ಸುಟ್ಟಕೊಂಡವರಿಗಾಗಿ ಚಿಕಿತ್ಸಾ ಕೇಂದ್ರ

ಮಣಿಪಾಲ, ಅ. ೧೪—ಇಲ್ಲಿಯ ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಮತ್ತು ಜನರಲ್ ಆಸ್ಪತ್ರೆಯಲ್ಲಿ ಆಸ್ಟ್ರೇಲಿಯದ ಸಹಾಯದಿಂದ ಸುಟ್ಟ ಗಾಯಗಳಿಂದ ಬಳಲುತ್ತಿರುವವರ ನಿವಾರಣೆಗೆ ಹಾಗೂ ಪುನರುದ್ಯೋಗದ ಬಗೆ ಸಂಶೋಧನೆ ನಡೆಸುವ ಕೇಂದ್ರವನ್ನು ಸ್ಥಾಪಿಸುವ ಕಾರ್ಯ ಸದ್ಯದಲ್ಲೇ ಆರಂಭಗೊಳ್ಳಲಿದೆ.

ದಕ್ಷಿಣ ಭಾರತದಲ್ಲೇ ಪ್ರಥಮವಾದ ಈ ಕೇಂದ್ರದ ಸ್ಥಾಪನೆಗೆ ನಾಲ್ಕು ವರ್ಷಗಳು ಹಾಗೂ ಹತ್ತು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ವೆಚ್ಚ ತಗಲುತ್ತದೆಂದು ಅಂದಾಜು ಮಾಡಲಾಗಿದ್ದು, ಆ ಪೈಕಿ ಐದು ಲಕ್ಷಕ್ಕಿಂತ ಹೆಚ್ಚು ರೂಪಾಯಿಗಳನ್ನು ಅಮೆರಿಕದ ಸರಕಾರ ಆನರ ವೈಕ್ತಿಪರ ಪುನರುದ್ಯೋಗ ಅಡಳಿತ ವಿಭಾಗದ ಮೂಲಕ ಈಗಾಗಲೇ ಒದಗಿಸಿದೆ.

ಆಸ್ಪತ್ರೆಯ ಕಾರ್ಯ-ದರ್ಶಿ ಹಾಗೂ ಈ ಯೋಜನೆಯ ನಿರ್ವಾಹಕರಾದ ಡಾ|| ಟಿ. ರಾಮದಾಸ ಪೈಯವರು ಈ ಸಂಬಂಧದಲ್ಲಿ ಈಗಾಗಲೇ ಅಮೆರಿಕದಲ್ಲಿ ನಡೆಯುತ್ತಿರುವ ಪುನರುದ್ಯೋಗ ಸಂಶೋಧನಾ ಕಾರ್ಯಗಳನ್ನು ಅಧ್ಯಯಿಸಿದ್ದಾರೆ. ಕಾಲೇಜಿನ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರೂ, ಪ್ರಾಧ್ಯಾಪಕರೂ ಆಗಿರುವ ಡಾ|| ಎಂ.ಪಿ ವೈಯವರು ಈ ಯೋಜನೆಯ ಪ್ರಧಾನಾಧಿಕಾರಿಯಾಗಿರುತ್ತಾರೆ.

ನಾಡ ಹಬ್ಬ

ಪಾದೂರು ಸಂಗೀತಕಲಾಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಾ. 15—10—66 ರಿಂದ 21—10—66ರ ತನಕ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು. ಮಕ್ಕಳ ಕಾರ್ಯಕ್ರಮವು ಸಂಗೀತ ಭಜನೆ ಪೂಜೆಗಳಿಂದ ಆರಂಭವಾಗಿದ್ದು ಮೊದಲನೇ ದಿನ ಶ್ರೀ ಕೆ. ವಾಸು ಶೆಟ್ಟಿಯವರು ನವರಂತ್ರಿಯ ಮಹತ್ವ ತೆಯ ಕುರಿತು ಭಾಷಣ ಮಾಡಿದರು. ಪ್ರತಿದಿನವೂ ಕಾರ್ಯ ಕ್ರಮಗಳಿದ್ದು ಮುಖ್ಯ ಸಮಾರಂಭದಲ್ಲಿ ಶ್ರೀ ವಾಸ್ತವ ಅಧ್ಯಾಯರು ಶಾರದಾ ಪೂಜೆಯನ್ನು ಕೆಲವರು ವ ಕಾರಣವನ್ನೂ, ಶ್ರೀ ಜಗನ್ನಾಥ ಶೆಟ್ಟಿಯವರು ಭಜನೆ ಮತ್ತು ಸತ್ಸಂಗ ಇವುಗಳ ಕುರಿತೂ ಮಾತನಾಡಿದರು.

ವಿಜಯದಶಮಿಯ ದಿನ ಸಾಯಂಕಾಲ ಶ್ರೀ ಎಮ್. ಎಸ್. ಶೆಟ್ಟಿಯವರ ನೇತೃತ್ವದಲ್ಲಿ ಸಂಗೀತಶಾಲೆಯ ಅಂಗವಾಗಿ ಪ್ರಥಮ ಭಜನಾ ಮಂಡಳಿಯನ್ನು ನಿಲುಬಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸ್ಥಾಪಿಸಿ ಅದರ ಕಾರ್ಯಕಾರೀ ಮಂಡಳಿಯನ್ನು ರಚಿಸಿದರು.

'ನಾಡಪ್ರೇಮಿ'

ಕನ್ನಡ ವಾರ ಪತ್ರಿಕೆ. ಬೆಲೆ-10 ನೈಸೆ

ವಾರ್ಷಿಕ ಚಂದಾ—ರೂ. ೬—೫೦.

ಕಾರ್ಕಳಗೋಡು, ಕೇರಳ.

ಕಾರ್ಕಳಗೋಡಿನ ವರ್ತಮಾನದಲ್ಲಿ ಕನ್ನಡಿಗರು ಕೇರಳದಲ್ಲಿದ್ದು ಪಡುತ್ತಿರುವ ಕಷ್ಟ ನಷ್ಟಗಳನ್ನು ಎಲ್ಲಾ ಕನ್ನಡಿಗರಿಗೆ ತಿಳಿಸಲು ಹಾಗೂ ಕಾರ್ಕಳಗೋಡು ಕರ್ನಾಟಕದೊಂದಿಗೆ ಸೇರುವ ಬಗೆಯ ಉದ್ದೇಶದಿಂದ ಎರಡೂವರೆ ವರ್ಷಗಳಿಂದ ಜಿಲ್ಲೆಯಲ್ಲಿ ನಡೆಸುತ್ತಿರುವ ಕೇರಳದ ಏಕೈಕ ಕನ್ನಡ ವಾರಪತ್ರಿಕೆ—'ನಾಡಪ್ರೇಮಿ'ಗೆ ನ್ನು ಬೆಂಬಿರಿ, ಚಂದಾದಾರರಾಗಿ, ಲೇಖಕರಾಗಿ, ಜಾಹೀರಾತುದಾರರಾಗಿ ಸಹಕರಿಸಿ.

ನಾಡಪ್ರೇಮಿಯು ತೀನೇ ಹುಟ್ಟು ಹಬ್ಬದ ಸಂಭವಾನಿ ಬಂದು ವಿಶೇಷಾಂಕವನ್ನು ಪ್ರಕಟಿಸಲೇಕೆಂದು ನಿರ್ಧರಿಸಿದ್ದೇವೆ. ಅದಕ್ಕೂ ಕ ಮೈತ್ರಿಗಳ ಸಹಕಾರವನ್ನು ಕೋರುತ್ತೇವೆ.

ಸಂಪಾದಕ.

"ನಾಡಪ್ರೇಮಿ"

ಕಾರ್ಕಳಗೋಡು.

(ಮೂರನೇ ಪುಟದಿಂದ)

ಗೋರಕ್ಷಾ ಸಮಿತಿಯು ತನ್ನ ಚಟುವಟಿಕೆಗಳನ್ನು ತ್ವರಿತಗೊಳಿಸುತ್ತಿದೆ. ಗೋವನ್ನು ಮಾತೆಯೆಂದು ಗೌರವಿಸುವ ಸಂಪ್ರದಾಯ ಭಾರತೀಯ ಹಿಂದು ಜನಾಂಗದ್ದು. ಇದು ನ್ಯಾಯವೂ ಹೌದು. ತನ್ನ ನೀಡುವ ಹಾಲಿನಿಂದ ಆತನ ಶರೀರದ ಪ್ರತಿಯೊಂದು ಅಂಗಾಂಗಗಳು ಬೆಳೆದು ನಿಂತಿವೆ. ಸ್ವಲ್ಪ ವೇಳೆಯಲ್ಲಿ ತಾಯಿಯು ಮೊಲೆ ಹಾಲನ್ನು ಕಡಿದು ಜೀವಿಸುತ್ತಾನೆ. ಬೆಳೆದ ಬಳಿಕ ದನದ ಹಾಲೇ ಉತ್ತಮ ಪೇಯವೆನಿಸಿದೆ. ಹಾಗಾಗಿ ಗೋಪೂಜೆಮಾಡುವ ಹಿಂದೂ ಜನಾಂಗ ಗೋರಕ್ಷಣೆಗಾಗಿ ಎಂದೋ ಸೊಂಟಕಟ್ಟಿ ಬೇಕಿತ್ತು. ಗೋಪತ್ತೆಯನ್ನು ಮಹಾಪಾತಕಗಳಲ್ಲಿ ಒಂದೆಂದು ಸಾರುತ್ತದೆ ನಮ್ಮ ಶಾಸ್ತ್ರ—ಭ್ರೂಣಹತ್ಯೆ, ಬ್ರಹ್ಮಹತ್ಯೆ, ಗೋಹತ್ಯೆ, ಆತ್ಮಹತ್ಯೆ—ಎಲ್ಲವೂ ಏಕಸಮ. ತನ್ನ ಹಸ್ತಸ್ಪರ್ಶದಿಂದ ಗೋವೊಂದ ಹತವಾಗಲು ಬಲರಾಮ ತೀರ್ಥಯಾತ್ರೆಯನ್ನೇ ಮಾಡ ಬೇಕಾಯಿತು; ಪರಿಣಾಮವಾಗಿದುರ್ಯೋಧನೆಯುದ್ದದಲ್ಲಿ ಸೋಲಬೇಕಾಯಿತು. ಇದು ಮಹಾಭಾರತದ ಉಲ್ಲೇಖ. ಹಿಂದುಗಳನ್ನು ದ್ವೇಷಿಸುತ್ತಿದ್ದ ವಿದೇಶೀಯ ಆಕ್ರಮಣಕಾರರು ಹಿಂದುಗಳ ದೇವ ದೇವತೆಯರನ್ನೂ ದ್ವೇಷಿಸಿದರು; ಹಿಂದುಗಳಿಗೆ ಪ್ರಿಯರಾದವರು ಅವರಿಗೆ ಅಪ್ರಿಯರಾದರು—ಗೋವಧೆ ಮೊದಲಾಯಿತು—ಮೂರ್ತ ಭಂಜನೆಯೊಡನೆ. ಇಂದು ಪರಿಸ್ಥಿತಿ ಬದಲಾಗಿದೆ. ಇಂದು ಭಾರತೀಯರು ನಾವಾಗಿದ್ದೇವೆ; ನಮ್ಮದು ಭಾರತೀಯ ಸಂಸ್ಕೃತಿ. ಜಾತ್ಯತೀತ ರಾಷ್ಟ್ರ ನಮ್ಮದು—ಹಿಂದು, ಮುಸಲ್ಮಾನ, ಕ್ರೈಸ್ತ, ಬೌದ್ಧ, ಜೈನ, ಪಾರ್ಸಿ ಯಾವ ಬುಡಕಟ್ಟಿನವರೇ ಇರಲಿ, ಎಲ್ಲರನ್ನೂ ಎಲ್ಲರೂ ಗೌರವಿಸಬೇಕು. ಅಹಿಂಸೆ ಎಲ್ಲ ಧರ್ಮಗಳ ಮೂಲ. ಈ ದೃಷ್ಟಿಯಿಂದ ಬಹು ಜನರು ಬಯಸುವ 'ಗೋಹತ್ಯೆ'ಗೆ ಪ್ರತಿಬಂಧ ಹೇರುವುದು ಅಪೇಕ್ಷಣೀಯ— ಅದರಂ ಇದು ಪ್ರಾತಿಬಂಧಗಂತಾಗದಂತೆ ಎಚ್ಚರಿಕೆ ಮಾತ್ರ ಅತ್ಯವಶ್ಯ. ಬೆಲೆಯಿಲ್ಲದ ಕಾನೂನು ಬೇಕಾದರೂ ಏಕೆ?

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 325/1966.

ವಾದಿ.— B. ನಾರಾಯಣ ಹೆಬ್ಬಾರ.

ಪ್ರತಿವಾದಿಗಳು— ಮುಡೂರು ಸಹಾ.

ಸಬ್ಪೀನಯಲ್ಲಿ.

1. ಮುಡೂರು, ಪುಲ್ಲಿ ಹೆಂಗ್ಸಿನ ಮಗ.
2. ಜಟ್ಟಿ ಹೆಂಗ್ಸು, ಅಟ್ಟಕ್ಕ ಹೆಂಗ್ಸಿನ ಮಗಳು.

ಕುಂದಾಪುರ ತಾಲ್ಲೂಕು ಬಿಜಾಡಿ ಗ್ರಾಮದ ಜವಳಾಡಿ ದೊಳು ನುನೆಯಲ್ಲಿರುವವರು

—ಇವರಿಗೆ

ಮೇಲ್ಕಂಡ ವಾದಿಯು ನಿಮ್ಮಿಂದ ತನಗೆ ಬರಬೇಕಳ ಚಾಲಗೆಣ ಗೇಣೆ ಪ ಬಡ್ತಿ ಸಹಾ ರೂ 644.06ನ ಬಡ್ತಿ ಕೋರ್ಟು ಹುರ್ಮಟ್ಟಿ ಗೈ ಸಾಲಾ ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಅಪ್ಪೀರ ಸಾರಿ ತಾ 26—11—1966ಕ್ಕೆ ಯಿಟ್ಟಿರುತ್ತದೆ. ಈ ಕುರಿತು ನಿಮ್ಮ ಅಟ್ಟೀಪತಿಯರು ಪಲ್ಲಿ ಸದ್ರಿ ದಿವಸ ಹಗಲು 11ಗಂಟೆಗೆ ಈ ಕೋರ್ಟಿನ ಮುಂದೆ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ದಾವಾ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು. ತಿಳಿದಿರಲಿ.

(ಕೋರ್ಟಿನ ಹುಕುಂ ಪ್ರಕಾರ)

ಎನ್. ಎಸ್. ಪರಮೇಶ್ವರಯ್ಯ.
ಬಿ. ಎ, ಎಲ್. ಎಲ್. ಬಿ
ಸಾಮಿಯ ಪರ ವಕ್ಕೀಲರು

ಕುಂದಾಪುರ, ತಾ. 28—10—1966.

ವಿವೇಚನೆ

ಸುಖಕ್ಕಿರುವ ಒಂದೇ ದಾರಿ – ಧರ್ಮ

ಪಶುವಾನವರನ್ನು ದೇವಮಾನವರನ್ನಾಗಿ ಪರಿವರ್ತನೆಗೊಳಿಸುವುದೇ ಧರ್ಮದ ಪರಮೋದ್ದೇಶ. ಧರ್ಮವೇ ಮಾನವ ತೆಗು ನಿಜಾಧಾರವಾಗಿರುವುದು. ಧರ್ಮ ವಿಲ್ಲದಲ್ಲಿ ಮಾನವತೆಯಿ ರಲಾರದು. ಆಧಾರವಿಲ್ಲದಲ್ಲಿ ಆಧೇಯವಿರುವುದಾದರೂ ಹೇಗೆ? ಅಂತೆಯೇ ನಿಜಮಾನವತೆಯನ್ನು ಪಡೆದವರೆಲ್ಲರೂ ಧರ್ಮವಂತರೇ ಆಗಿದ್ದಾರೆ. ಧರ್ಮದ ಉಪೇಕ್ಷೆ ಮಾಡುವುದೆಂದರೆ ಮಾನವತೆಯ ಉಪೇಕ್ಷೆ ಮಾಡಿದಂತೆಯೇ. ಸರಿ. ಮಾನವ ನ್ನು ವಿಕೃತಿಯಿಂದ ಸ್ವಾಭಾವಿಕತೆಯು ತ್ತ ಹೊರಳಿಸಿ, ಪ್ರಕೃತಿಯಿಂದ ಸಂಸ್ಕೃತಿಯಕ್ಕೆ ಎಳೆದೊಯ್ಯುವ ಪ್ರವೃತ್ತಿ—ವೃತ್ತಿಗಳೆಲ್ಲವೂ ನಿಜ ಧರ್ಮದಲ್ಲಿಯೇ ಅಂತರ್ಗತವಾಗುವವು. ಅದೇ ಖಂಡಿತ ಜೀವನವನ್ನು ಅಖಂಡಿತವನ್ನಾಗಿಯೂ ಶಿವವಿಮುಕ್ತ ಜೀವನವನ್ನಾಗಿ ಪರಿವರ್ತಿಸುವ ಸಂಯುಕ್ತವನ್ನಾಗಿಯೂ ಮಾಡಬಲ್ಲುದು. ಆದರೆ ಹಿಂದಿನ ಕಾಲದಂತೆ ಇಂದಿನ ಕಾಲದಲ್ಲಿ ಧರ್ಮದ ಬಗೆಗೆ ಅಷ್ಟು ಶ್ರದ್ಧೆ ವಿಶ್ವಾಸಗಳು ಜನರಲ್ಲಿ ಕಂಡು ಬರುವುದಿಲ್ಲ. ಇದಕ್ಕೆ ಮೂಲಕಾರಣವೆಂದರೆ ವಿಜ್ಞಾನದ ವ್ಯಾಪಲ್ಯ. ವಿಜ್ಞಾನದ ಮಾಧ್ಯಮದಿಂದ ದೇಶವಿದೇಶಗಳ ಸಂಬಂಧ ಹೆಚ್ಚಾಗಿ, ಧೌತಿಕೋನ್ನತಿಯೇ ನಿಜವಾದ ಉನ್ನತಿ ಎಂದು ತಿಳಿದುಕೊಂಡವರ ಸಂಖ್ಯಾಬಲವು ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ಲ್ಲಿ ವಿಕಾರವನ್ನುಂಟುಮಾಡಿದೆ. ಆದ್ದರಿಂದ ಜನಜೀವನಸ್ಥಿತಿಯು ದಿನ ದಿನಕ್ಕೂ ಬದಲಾಗುತ್ತಾ ನಡೆದಿರುವುದು. ಹಿಂದಿನವರು ಮಾನವತೆಯ ಬಗೆಗೆ ಮಾಡಿದ ಪರಿಭಾಷೆಯು ಇಂದು ಪೂರ್ಣ ಬದಲಾವಣೆಯನ್ನು ಪಡೆದಿದೆ. ಎಲ್ಲಾ ಕಡೆಗೆ ದಿನದಿನಕ್ಕೂ ಶ್ರೇಣಿಸ್ಪರ್ಧೆಯನ್ನು ನರ್ತನೆತೆಯು ಸ್ವಾಗತಿಸಿದೆ ನಡೆದಿದೆ. ಜೀವನಕ್ಕೆ ಅವಶ್ಯವಾದ ಪದಾರ್ಥಗಳ ಸಂಗ್ರಹಸಮಸ್ಯೆಗಳೇ ಎಲ್ಲರ ಎದುರಿಗೆ ನಿಂತುಕೊಂಡು, ಧಾರ್ಮಿಕ ಆಧ್ಯಾತ್ಮಿಕ ಜಿಜ್ಞಾಸೆಗೆ ಅವಕಾಶವಿಲ್ಲದಂತಾಗಿರುವುದು ಲ್ಯಯಾತ್ಮಕ ಅಭ್ಯುದಯವಂತೂ ದೂರದಲ್ಲಿಯೇ ಉಡಿದು ಹೋಗಿದೆ.

'ಧರ್ಮ ದೀಪವು ಪೂರ್ಣವಾಗಿ ನಂದಿಹೋಗಿದೆಯೆ!?' ಎಂಬ ಪ್ರಶ್ನೆ ಇಂದಿಂದಾಗಿ ನಮ್ಮ ವ ರಿಷ ತಲೆಯೆತ್ತಿ ನಿಂತುಕೊಳ್ಳುತ್ತದು. ಅದಕ್ಕುತ್ತರವಿಷ್ಟೇ. ಧರ್ಮ ಸನಾತನವಾದುದು; ಅಂತೆಯೇ ಅದೆಂದೂ ನಂದಲಾರದು, ನಂದ ಬಾರದು. ಈ ಬಗ್ಗೆ ವಿಶ್ವಾಸವನ್ನು ಕಳೆದು ಕೊಳ್ಳುವುದೆಂದರೆ ಆತ್ಮಗೌರವದಿಂದ ಚ್ಯುತಿ ಹೊಂದುವಂತೆ ಆತ್ಮವಿಶ್ವಾಸ ಉಳಿಯುವಂತಾಗುತ್ತಲೇ ನಿಜಜೀವನದ ಕತ್ತಲೆ ಸರಿಯುವುದು. ಆಗ ಜೀವನದಲ್ಲಿ ಹೊಸ ಸ್ಫೂರ್ತಿ ಮೂಡಿ ಬರುವುದು. ಅದೇ ನಿಜ ಧರ್ಮೋಚ್ಚರಣೆಗೆ ಪ್ರೇರಣೆಯನ್ನುಂಟು ಮಾಡುವುದ. ವಿಚಾರಿಸಿ ನೋಡಿದರೆ ಸಫಲತೆಯು ಆಧಾರ ಶಿಲೆಯು ಆತ್ಮ ವಿಶ್ವಾಸವೇ ಆಗಿದೆ. ಅದಿಲ್ಲದ ಬದುಕು ಬರಿ ನೀರಸ, ಮಾನವರ ಅಭ್ಯುದಯ ನಿಃಶ್ರೇಯಸ್ಸುಗಳೆರಡಕ್ಕೂ ಮೂಲಕಾರಣವಾದ ಧರ್ಮವನ್ನೇ ತಿರಸ್ಕರಿಸುವವರಿಗೆ ದುರ್ಗತಿಯುಳ್ಳದೆ ಮತ್ತಾವುದು ದೊರೆಯಬಲ್ಲುದು!

ಕೆಲವರು 'ಧರ್ಮ' ಶಬ್ದದ ಅರ್ಥವನ್ನು ಸಂಪ್ರದಾಯ ಅಥವಾ ಮತಮತಾಂತರ ಎಂದು ತಿಳಿದುಕೊಂಡು, ಧರ್ಮವೇ ರಾಷ್ಟ್ರೀಯಭ್ಯುದಯಕ್ಕೆ ವಿಘ್ನವಾಗಿರುವುದೆಂದು ಹೇಳುವರು. ಇದು ಕೇವಲ ಭ್ರಮೆ. ರಾಷ್ಟ್ರೀಯ ಜೀವನದ ವಿಕಾಸದ ಪ್ರಶ್ನೆ ಇದೊಂದು ದೊಡ್ಡ ವಿಘ್ನ ಯ ವರಾಷ್ಟ್ರವೂ ಧರ್ಮರಾಜ್ಯುವಾಗಿರುವುದೋ ಅಲ್ಲಿಂದಿಂದ ಸಕಲವಾಗಿರಲು ಸಾಧ್ಯವಿಲ್ಲ. ಧರ್ಮವೆಂಬುದು ಭಾರತೀಯ ಜೀವನಕ್ಕೆ ಅಮೃತ ಕಲಶ ರೂಪವಾಗಿರುವುದು. ಆದರ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳದೆ ವರ್ತಿಸುವುದು ಹಾನಿಕರ. ಜನಜೀವನವು ರಾಜ್ಯವನ್ನು ಅವಲಂಬಿಸಿರುವಂತೆ ರಾಜ್ಯವು ಧರ್ಮವನ್ನು ಅವಲಂಬಿಸಿರುವುದು. ರಾಜ್ಯ ಮತ್ತು ಧರ್ಮ ಇವೆರಡಗಳಲ್ಲಿ ಮೇಳಶಕ್ತಿಯಂತೆ ನೋಡಿಕೊಳ್ಳುವುದೇ ರಾಷ್ಟ್ರ ಮುಖಂಡರ ಪರಮಕರ್ತವ್ಯ. ಭಗವಾನ್ ಬುದ್ಧನು ಕೂಡ ಧರ್ಮ ಶಬ್ದದ ಅರ್ಥವನ್ನು ಸರಿಯಾಗಿ ಮಾಡಿಕೊಂಡು "ಧರ್ಮಂ ಶರಣಂ ಗಚ್ಛಾಮಿ" ಎಂಬುದಾಗಿ ಪ್ರಚಾರವೂಡಿದ್ದಾನೆ. ಧರ್ಮವು ವೈಯಕ್ತಿಕ ಜೀವನ ಸಾಮೂಜಿಕ ಜೀವನಗಳನ್ನು ಧರಣಮಾಡುವ ನಿಯಮಗಳೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ.

ಪ್ರತಿಧರ್ಮ ವೇದದಲ್ಲಿ ಮೂರ್ಖಭೂಮಿಯು ಕ್ಷಣ ಯ ಧರ್ಮದಿಂದಲೇ ಆಗುವುದು ಎಂಬೊಂದು ಸೂಕ್ತಿಯು "ಧರ್ಮಾಣಾಮ್ ತ" ಎಂದಿದೆ. ಧರ್ಮದ ಆಶ್ರಯದಲ್ಲಿ ಕಾನು—ಕ್ರೋಧಾದಿಗಳಾಗಲಿ ರಾಗದ್ವೇಷಗಳಾಗಲಿ ಇರುವುದಿಲ್ಲ. ಆತ್ಮಕಂಟಕವನ್ನು ಪಡೆಯುವುದಕ್ಕೂ ದೇಶದ ಪೂರ್ಣವಿಕಾಸ ಸಾಧಿಸಲಿಕ್ಕೂ ಧರ್ಮವೇ ಬನೆಯು ಅತ್ಯವಶ್ಯ. ಮಾನವು ಧರ್ಮವನ್ನು ಮರೆತು ಬಿಟ್ಟರೆ ಯಾವ ತಗ್ಗಿನಲ್ಲಿ ಯಾವಾಗ ಬಿದ್ದು ಹೋಗಬೇಕಾಗುತ್ತದೋ ಹೇಳಲಿಕ್ಕಾಗದು ಧರ್ಮಾವೆಲಂಬನೆಯಿಂದಲೇ ಬೌದ್ಧಿಕ ವಿಕಾಸ, ಮಾನಸಿಕ ವಿಕಾಸ ನತ್ತು ಸಾಮೂಜಿಕ ವಿಕಾಸಗಳು ಆಗಬಲ್ಲವು.

"ಸುಖಸ್ಯ ಮೂಲಂ ಧರ್ಮ" ಸುಖದ ಮೂಲವು ಧರ್ಮ ಎಂಬ ಪೂರ್ಣಕ್ಯನ ಉಕ್ತಿಯನ್ನು ಪ್ರತಿಯೊಬ್ಬ ರಾಷ್ಟ್ರಪ್ರಜ್ಞೆಯು ತಿಳಿದುಕೊಂಡು ಆಚರಣೆಯಲ್ಲಿ ತಂದರೆ ಎಲ್ಲ ರೀತಿಯಿಂದಲೂ ಕಲ್ಯಾಣ ಸಾಧಿಸುವುದು

—ಸಾವಧಾನಿ.

ಉದ್ಘಾಟನೆ

ಆದರ್ಶ ಸಾಹಿತ್ಯ ಪ್ರಕಾಶನವು ಉದ್ಘಾಟನಾ ಸಮಾರಂಭವು ವಿಜಯ ದಶಮಿಯಂದು ಸಾಯಂಕಾಲದ ವಿಜಯ ಮುಹೂರ್ತದಲ್ಲಿ ಇಂಜಿನಿಯರಿಂಗ್ ಕಾಲೇಜಿನ ಲೆಕ್ಚರರ್ ಎಂ ಆರ್. ಗಜೇಂದ್ರ ಗಡ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಕವಿವರ ಎ. ಗಾ. ಕಿನ್ನಗೋಳಿಯವರು ರಚಿಸಿದ ನೂತನ ಪರಿಚಿತ "ಸತ್ಯ ಪರೀಕ್ಷೆ" ಎಂಬ ಪೌರಾಣಿಕ ನಾಟಕ ಪುಸ್ತಕವನ್ನು ಉದ್ಘಾಟಿಸುತ್ತಾ ಪ್ರಕಾಶಕರು ಮೂರುಕಟ್ಟೆಯಲ್ಲಿರುವ ಎಡರು—ತೊಡರುಗಳನ್ನು ಎದುರಿಸಿ ಮುಂದುವರಿಯಬೇಕೆಂದು ಎಚ್ಚರಿಸಿದರು. ಸಾರಿಧ್ಯವಹಿಸಿದ ಸಂಪಾದಕ ವರ್ಗದವರು ಸನಾತನೋಪನ ಕಾನೂನುಗಳು ವಿಚಾರಪೂರಿತಸಾಹಿತ್ಯ ವಿಪುಲವಾಗಿ ಬೆಳೆಯಬೇಕೆಂದು ಅಶಿಸಿದರು. ಅಧ್ಯಕ್ಷರು ಪಂಪನ ನಾಡಲ್ಲಿ ಇಂತಹ ಪ್ರಕಾಶನವೂ ರಾಷ್ಟ್ರಕವಿಗಳ ನಡಿಯಲ್ಲೇ ನುಪ್ಪ ಸಾಹಿತ್ಯವು ಬೆಳೆದು ಬರಬೇಕೆಂದು ಕರೆಯಿತ್ತರು. ಆರಂಭದಲ್ಲಿ ಸ್ವಾಗತಿಸಿದ ಸಂಪಾದಕ ಮುಸಲಾಲರಾಜು ಕೊನೆಯಲ್ಲಿ ಧನ್ಯವಾದವಿತ್ತರು.

ಕಾಸರಗೋಡು ಕನ್ನಡ ವರ್ತಕರ ಮೇಲೆ ಪುಂಡಾಟಿಕೆ

ಕಾಸರಗೋಡು ಕನ್ನಡ ವರ್ತಕರ ಮೇಲೆ ಕೇರಳದ ಚಿರುವಳಿಗಾರರ ಹಿಂಸಾತ್ಮಕ ಕಾರ್ಯಗಳು ವಿಪರೀತವಾಗಿ, ಅಲ್ಲಿಯ ಸ್ವತಂತ್ರ ವ್ಯಾಪಾರಿಗಳು ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್, ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಗೃಹಮಂತ್ರಿ ಶ್ರೀ ವೈ. ಎಲ್. ನಂದಾ, ಕೇರಳದ ರಾಜ್ಯಪಾಲರ ಸಲಹೆಗಾರರಿಗೆ ತಕ್ಷಣ ರಕ್ಷಣೆ ಒದಗಿಸಲು ತಂತಿ ಕಳುಹಿಸಿ ಪ್ರಾರ್ಥಿಸಿದ್ದಾರೆಂದು ತಿಳಿದಿದೆ. ಅವರು ಕಳುಹಿಸಿದ ತಂತಿಯಲ್ಲಿ ವ್ಯೆಸೂರು ಕೇರಳ ಗಡಿವಿವಾದವನ್ನು ಪರಿಶೀಲಿಸಲು ಗಡಿ ಆಯೋಗ ನಿರ್ಮಿಸಿರುವುದನ್ನು ಸ್ವಾಗತಿಸಿ, ಕಾಸರಗೋಡನ್ನು ವೈಸೂರಿನೊಡನೆ ವಿಲೀನಗೊಳಿಸಲು ಒತ್ತಾಯ ಮಾಡಿದಾರೆಂದು ತಿಳಿದು ಬಂದಿದೆ. ಈ ಮನವಿಗೆ ಸಾವಿರಾರು ಕನ್ನಡಿಗರು ಸಹಿಹಾಕಿದ್ದಾರೆ ಇದಕ್ಕೆ ಕಾಸರಗೋಡಿನ ವಕೀಲ ಸಂಘದ ಬೆಂಬಲವೂ ಇದೆ. ಅಲ್ಲದೇ ಕೇರಳ ವಕೀಲ ಸಂಘದ ಗಡಿ ಆಯೋಗವನ್ನು ವಿರೋಧಿಸುವ ಹಾಗೂ ಕಾಸರಗೋಡು ಕೇರಳಕ್ಕೆ ಸೇರಬೇಕೆನ್ನುವ ನಿರ್ಣಯವನ್ನು ಅದು ಹಿಂದಿನದೆ.

ತಿದ್ದುಪಡಿ

ವಿಜಯಾ ಬ್ಯಾಂಕ್ ಲಿಮಿಟೆಡ್, ಕಾರ್ಕಳ

ಕಳೆದ ತಾ. 27—10—66ರ ಸಮಯದಲ್ಲಿ ಸಂಚಿಕೆಯು 11ನೇ ಪುಟದಲ್ಲಿ ಪ್ರಕಟಿಸಲಾದ ವಿಜಯ ಬ್ಯಾಂಕ್ ಲಿ.ಟಿಡ್, ಕಾರ್ಕಳ, ಇದರ ಏಲಂ ನೋಟೀಸಿನಲ್ಲಿ 1ನೇ ಮತ್ತು 6ನೇ ಸಾಲಗಾರರ ಹೆಸರು ಮತ್ತು ವಿಳಾಸದಲ್ಲಿ ಕೆಲವು ಮುದ್ರಣದೋಷಗಳು ಉಂಟಾಗಿರುವುದರಿಂದ ಅವರ ಸರಿಯಾದ ಹೆಸರು ಮತ್ತು ವಿಳಾಸವನ್ನು ಈ ಕೆಳಗಡೆ ಕೊಡಲಾಗಿದೆ

(ಸಂ.ನ)

69/65 ಶ್ರೀಮತಿ ಸೇಠಿ ಪೂಜಾರ್ತಿ, ರಂಗಸೂಜಾರ್ತಿಯ ವಗಳು, ಕಂಬಿ ಬೈಲು Post ಮಿಯ್ಯೂರು, ಕಾರ್ಕಳ ತಾಲೂಕು.

304/65 ಶ್ರೀಮತಿ ಸುಶೀಲ ಸೆಟ್ಟಿ, ಭೋಜ ಸೆಟ್ಟಿ ಪತ್ನಿ, ಜತ್ತಿ ಬೆಟ್ಟು, ಜಾರ್ಕಳ ಸುಂದ್ರಿ ಗ್ರಾಮ, ಪೋಸ್ಟ್ ಹೆರ್ಮುಂಡೆ.

ಬರುವ ವಾರ

ದೀಪಾವಳಿ ವಿಶೇಷಾಂಕ

ವಿಶೇಷ ಲೇಖನಗಳಿಂದೊಡಗೂಡಿ ಪ್ರಕಟವಾಗುವುದು

ಬೆಲೆ: 50 ಪೈಸೆ

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಪಡೆದು ಬಂದ ಭಾಗ್ಯ!

(ಹಿನ್ನೆರಡನೇ ಪುಟದಿಂದ)

ಹುಸಿತು. ನಾನೇನು ಗೈಡೆ ಎಂದು ಪರಿತಪಿಸಿದನವನು.

"ತಪ್ಪಾಯಿತು ಅನಸೂಯ, ಕೋಪದ ಕುದುರೆಯ ಮೇಲೆ ನನ್ನ ಬುದ್ಧಿ ಸವಾರಿ ಮಾಡಿ ಬಿಟ್ಟಿತು. ನೀವಿಬ್ಬರು ಹೀಗೆ ಮಾಡಿದರೆ ನಾನೇನು ಮಾಡಬೇಕು ಹೇಳು.'

ನಟರಾಜ ಹೆಂಡತಿಯನ್ನು ರಂಜಿಸಿದನು

'ಹಾಗೆಂದರೆ'

"ಹೊಂದಿ ಕೊಂಡು ಬಾಳಲು ಅಭ್ಯಾಸ ಮಾಡಬೇಕು."

"ಏನಪ್ಪ ನಟರಾಜು ಮಾಕುಕತೆ. ಅನಸೂಯ ಏನು ಮಾಡುತ್ತಾಳೆ? ಇಂದು ಶುಕ್ರವಾರ ಎಣ್ಣೆಹಾಕಿ ಸ್ನಾನ ಮಾಡಿದ್ದೀಯೋ ಇಲ್ಲವೋ?"

ದೇವಸ್ಥಾನಕ್ಕೆ ಹೋಗಿದ್ದ ವೇದಾವತಮ್ಮ ಮನೆ ಮೆಟ್ಟಲೇರುತ್ತ ಕೇಳಿದರು.

"ಏನಿಲ್ಲಮ್ಮ, ನಿನ್ನೆ ಜೇಟಿಯಲ್ಲಿ ನೋಡಿದ ಒಂದು ಸಂಗತಿಯನ್ನು ಹೇಳುತ್ತಿದ್ದೆ ಅಷ್ಟೆ."

ನಟರಾಜ ಮುಖದ ಮೇಲೆ ನಗು ತರುತ್ತ ಹೊರ ಬಂದನು. ಅನಸೂಯ ಮುಖ ಸೊಟ್ಟಗೆ ಮಾಡಿಕೊಂಡು ಒಳ ನಡೆದಳು.

o o o o

ವೇದಾವತಮ್ಮನವರ ಶಂಕ ನಿಜವಾಗುತ್ತಲೇ ಬಂದಿತು. ಮಗನ ಮನಸ್ಸಿನ ಅಭಿಪ್ರಾಯಕ್ಕೆ ಅಡ್ಡಿಯಾಗಿ ಅವನ ಸುಖಕ್ಕೆ ತಾನೇಕೆ ಅಡ್ಡಿಯಾಗಬೇಕೆಂದು ಅವನ ಮಾತಿನಂತೆಯೇ ಅನೇಕ ಯೋಚನೆಗಳನ್ನು ಸೊಸೆಯನ್ನಾಗಿ ಸ್ವೀಕರಿಸಲು ಒಪ್ಪಿಕೊಂಡರು. ಆದರೆ ಆದಂ ಪರಿಣಾಮ!

ಮನೆಯೊಳಗೆ ವಿಷಗಾಳಿ ಏಳುತ್ತಿರುವ ಕಲ್ಪನೆ ನಟರಾಜನ ಮದುನೆಯಾದ ಒಂದೆರಡು ತಿಂಗಳ ಗಳಲ್ಲಿಯೇ ವೇದಾವತಮ್ಮನವರಿಗೆ ಆಗಿದಿಂರಲ್ಲಿ. ಅದಕ್ಕೆ ಕಾರಣಗಳೂ ಅನಸೂಯಳಿಂಬುದನ್ನು ಅರಿತು ಕೊಂಡರು. ಇಂದಲ್ಲ ನಾಳೆಯಾದರೂ ಸರಿ ಹೋದೀತೆಂಬ ದೂರದ ಆಶೆಯನ್ನಿಟ್ಟು ಕೊಂಡು ಸುಮ್ಮನಾದರು.

ನಟರಾಜ ಮಂಗಳೂರಿನಲ್ಲಿ ಕೆಲಸಕ್ಕೆ ಸೇರಿದೂಡನೆಯೇ ನಗರದಲ್ಲಿಯೇ ಒಂದು ಮನೆ ಮಾಡಿಕೊಂಡನು ತಾಯಿಯನ್ನು ಅಲ್ಲಿಗೆ ಕರೆಸಿ ಕೊಂಡನು. ಅನಸೂಯಳೂ ಅವನ ಕೈಹಿಡಿದು ಆ ಮನೆ ಪ ಟ್ಟಲೇರಿದಳು.

ನಟರಾಜನ ಸ್ಥಿತಿ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿತ್ತು. ಬಾಡಿಗೆ ಮನೆಯಿಂ ಸ್ವಂತಿದ್ದಾಯಿತು. ಹೊಸ ಕಾರೂ ಬಂದಿತು. ಉತ್ತಮ ಡ್ರೈವ್ಹರನೆಂಬ ಹೆಸರನ್ನು ಗಳಿಸಿಕೊಂಡನು.

ಮಗನ ಬಾಳು ಒಂದು ನಿಲುಗಡೆಗೆ ಬಂದುದನ್ನು ಕಂಡು ವೇದಾವತಮ್ಮ ತೃಪ್ತಿಯ ನಿಟ್ಟುಸಿರು ಬಿಟ್ಟರು. ಕೂಸಾಗಾದರೂ ತನ್ನ ಬಯಕೆ ಈಡೇರಿತಲ್ಲಾ ಎಂದು ಸಮಾಧಾನಪಟ್ಟರು. ಆದರೆ...

ಸೊಸೆಯು ತನ್ನ ಕಲ್ಪನೆಯ ಎಂದರೆ ಸ್ವಯ ಮುತ್ತಿದ ಸುಳಿಗಾಳಿಯಾಯಿದಳು. ತನ್ನ ಬಯಕೆಯ ಮಂದಿರ ತಲೆಯೆತ್ತಿ ನಿಲ್ಲುವ ಸಿದ್ಧಂತೆಯೇ ಆದರ ತಳದ ಕಲ್ಲನ್ನು ಅನಸೂಯಳು ಕೇಳುತಿದ್ದಾಳೆಂಬ ಅರಿವಾಯಿತವರಿಗೆ.

ಅನಸೂಯಳು ತನ್ನನ್ನು ಕಾಣುವ ರೀತಿ ಸರಿಯಿಲ್ಲವೆಂಬುದನ್ನು ಅವರು ತಿಳಿದುಕೊಂಡರು. "ಚಿಕ್ಕವಳು, ಸರಿ ಹೋದೀತು' ಎಂದು ತಡೆದುಕೊಂಡರು. ಆಕೆಯ ಕುರಿತು ಒಂದೆರಡು ಬಾರಿ ಮಗನೊಡನೆಯೂ ಸೂಚ್ಯವಾಗಿ ಹೇಳಿದರು.

ಆದರೆ ದಿನದಿಂದ ದಿನಕ್ಕೆ ಮಗ ಬದಲಾಗುತ್ತಿದ್ದುದನ್ನು ಅವರು ಗಮನಿಸದಿರಲಿಲ್ಲ. ಇದೂ ಆಕೆಯ ಪ್ರಭಾವವೆಂದೇ ಅವರು ಭಾವಿಸಿದರು. ಮೊದಲು ತನ್ನ ಮಾತೆಂದರೆ ವೇದ ವಾಕ್ಯವೆಂದು ತಿಳಿದು ಕೊಂಡಿದ್ದ ನಟರಾಜ ಈಗ ಎದುರು ಮಾತನಾಡಲೂ ಹೇಸುತ್ತಿರಲಿಲ್ಲ. ಮೊನ್ನೆ ಮಾತಿಗೆ ಮಾತು ಬಂದು 'ನೀನೂ ಸ್ವಲ್ಪ ಹೊಂದಿಕೊಂಡು ಬಾಳಲು ಕಲಿಯಬೇಕಮ್ಮ' ಎಂದಂದಿದ್ದ.

ಅಂದು ವೇದಾವತಮ್ಮ ಹಾಕಿದ ಕಣ್ಣೀರಿಗೆ ಲೆಕ್ಕವಿರಲಿಲ್ಲ. ತನ್ನ ಮಗ ಈ ರೀತಿ ಹೇಳಬೇಕಾದರೆ ಅವನಲ್ಲಿ ಅದೆಂತಹ ಬದಲಾವಣೆ ಹೊಗಿರಬೇಕೆಂಬುದನ್ನು ಅವರು ಮನಗಂಡರು. ಹಾಗಾದಾರೆ ಇಗಿಗಾಗಲು ಕಾರಣ!

ಹೌದು! ಆಕೆಯೇ ಸುಳ್ಳನ್ನೇ ಆದರೂ ಹಲವು ಬಾರಿ ಹೇಳಿದಾಗ ಅದಕ್ಕೆ ಒಂದು ಸತ್ಯದ ರೂಪು ಬಂದು ಬಿಡುತ್ತದೆ. ಆ ಮೂಲಕವೇನ ತನ್ನ ಮಗನ ಮನಸ್ಸನ್ನು ಕೆಡಿಸಿದಳು. ಬಲಕಾಕೆ ಹೊಳೆಯುತ್ತಿದ್ದ ಅವನ ಮನ ನ್ನಡಿಗೆ ಮಸಿ ಲೇಪಿಸಿದಳು. ಅಂದರೆ ಇನ್ನು ಇದರ ಕೊನೆ?

ಅವರ ಆಲೆಯ ವೃಕ್ಷ ಚಿಗುರೊಡೆಯುತ್ತಿದ್ದಂತೆಯೇ ಕೇಟಗಳು ಮುತ್ತಿ ಕತ್ತರಿಸಲೂ ಪ್ರಾರಂಭಿಸಿದಂತೆ ತೋರಿತವರಿಗೆ. ತನ್ನ ಕನಸಿನ ಸೌಧವು ನಚ್ಚಿ ನೂರಾಗುತ್ತಿರುವಂತೆ ಭಾಸವಾಯಿತು.

ಈ ಕುರಿತು ಬಹಳಸ್ಸು ಚಿಂತಿಸಿದರು ವೇದಾವತಮ್ಮ. ಯಾವ ಕಸ್ಪಿಲ್ಲದೆಯೇ ತನ್ನ ಮೇಲೆ ರೇಗಿ ಬೀಳುತ್ತಿರುವ ಅನಸೂಯಳನ್ನು ಅವರು ಜೆನ್ನಾಗಿ ಅರ್ಥ ಮಾಡಿಕೊಂಡರು. ಮೆಚ್ಚಿ ಬಂದ ವಧುವು ಕೈಯಲ್ಲಿ ವಂಕನಂತೆ ಕುಣಿಯುವ ಮಗನ ಬಗ್ಗೆ ಕನಿಕರ ಪಟ್ಟರು.

"ಹೌದ! ತಾವಿಲ್ಲಿರುವುದು ಗರಿಯಲ್ಲ. ತಾನು ಇಲ್ಲಿಂದ ದೂರವಾದರೆ ಈ ಮನೆಯಲ್ಲಿ ನೆಮ್ಮದಿ ಮೂಡುವುದೋ ನೋಡೋಣ."

ಅವರ ಅಂತರಾತ್ಮ ನುಡಿಯಿತು.

"ಛೇ ಹುಚ್ಚಿ! ಜೀವನಕ್ಕೆ ಬೆಚ್ಚಿ ಓಡಿ ಹೋಗುವೆಯಾ?"

ವಿವೇಕವು ಎಚ್ಚರಿಸಿತು.

"ಇಲ್ಲ ಜೀವನಕ್ಕೆ ಬೆಚ್ಚಿ ಓಡಿ ಹೋಗುತ್ತಿಲ್ಲ. ನನ್ನ ಮಗನ ಜೀವನ ಹಸನಾಗಲು ಹೊರಡು ಹೋಗುತ್ತಿದ್ದೇನೆ.

"ಅದು ನಿನ್ನ ತಪ್ಪಿಣಿಕೆ. ನೀನು ಇವನೆ ಬಿಟ್ಟು ಹೋದರೆ ಅವನು ನೆಮ್ಮದಿ ಪಡೆಯುತ್ತಾನೆಂದು ಕೊಂಡೆಯಾ?"

"ಹೌದು, ಈಗ ನಾನೇ ಅವರಿಗೆ ಕಾಟೆಪ್ತಡಕಾಗಿರುತ್ತೇನೆ."

"ಅದು ನಿನ್ನ ಭ್ರಮೆ. ನಿನ್ನ ಮಗ ಹಾಗೆಂದಿಗೂ ಭಾವಿಸಲಾರ."

"ನನ್ನ ಮಗ ಈಗ ಮೊದಲಿನಂತಿಲ್ಲ. ಅವನು ತುಂಬಾ ಬದಲಾಯಿಸಿರುತ್ತಾನೆ."

"ಅದನ್ನ ಸರಿ ಪಡಿಸುವ ಹೊಣೆ ನಿನ್ನದು."

'ನಾನು ಪ್ರಯತ್ನಿಸಿ ಆದರಲ್ಲಿ ಸೋತಿರುತ್ತೇನೆ."

'ಅಂದರೆ ನಿನ್ನ ಮಗನನ್ನು ನಡು ನೀರಿನಲ್ಲಿ ಕೈ ಬಿಟ್ಟು ಹೋಗುತ್ತಿಯಾ?,

"ಹೌದು ಬೇರೆ ದಾರಿಯಿಲ್ಲ.'

"ಅಂದರೆ ನಿನ್ನ ಕನಸು?'

"ಕನಸು ಒಡೆದು ಚೂರು ಚೂರಾಯಿತು."

"ಅಷ್ಟು ಸುಲಭವಾಗಿ ಹಾಗೆಂದು ಕೈ ಚೆಲ್ಲಿ ಬಿಡುವೆಯಾ? ಆ ಕನಸಿನ ನೆನಪಿಗಾಗಿ ನೀನು ಪಟ್ಟ ಪಾಡನ್ನು ಮರೆತೆಯಾ'

'ಅದು ನನ್ನ ಕರ್ತವ್ಯವೆಂದು ತಿಳಿದು ಕೊಂಡಿದ್ದೇನೆ.'

"ನಿನ್ನ ಕರ್ತವ್ಯ ಮುಗಿದಿಲ್ಲ. ಇನ್ನೂ ಇನೆ. ಅದನ್ನು ಬಿಟ್ಟೀಕೆ ಓಡಿಹೋಗುತ್ತಿರುವೆ?'

'ಈಗ ನನ್ನ ಮಗ ನನ್ನ ಮೊತನ್ನು ಕೇಳುತ್ತಿಲ್ಲ.'

"ಹಾಗೆಂದ ನಿನ್ನ ಕರ್ತವ್ಯವನ್ನು ಜೆಲ್ಲಿ ಕೊಟ್ಟೆಯಾ?'

ವಿವೇಕದ ನುಡಿ ಆಕೆಯನ್ನು ಎಚ್ಚರಿಸಿತ್ತು. ದಿಕ್ಕು ತೋರದೆ "ಅಯ್ಯೋ" ಎಂದು ಮುಖದಲ್ಲಯೇ ಚೀರಿದರು.

"ನೀನು ಮಗನನ್ನು ಬಿಟ್ಟು ಹೋಗುತ್ತಿರುವುದಾದರೂ ಎಲ್ಲಿಗೆ?'

ವಿವೇಕ ಕೆಣಕಿ ಪುನಃ ಪ್ರಶ್ನಿಸಿತು.

'ಎಲ್ಲಿಗೆ....? ಎಲ್ಲಿಗೆ....? ಕಳ್ಳಿಗೆ....ನನ್ನ ಕಳ್ಳಿಗೆ'

"ಆಲ್ಲೇನು ವಂಡುವನೆ?'

"ನನ್ನ ಮೊದಲಿನ ಕೆಲಸಗಳನ್ನು ಇನ್ನೂ ದೊರಕಿಸಿಕೊಳ್ಳುತ್ತೇನೆ.

'ಮೊದಲಿನಂತೆಯೇ ಜೀವಿಸುತ್ತೇನೆ. ನಾವಿಗಾಗಿ ಹಂಬಲಿಸಿ ಬಾಳುತ್ತೇನೆ.'

"ಇದು ನಿನ್ನ ಮಗನಿಗೆ ಅಪಮಾನವಲ್ಲವೆ? ಡಾಕ್ಟರರ ತಾಯಿಯಾದ ನೀನು.'

'ಅವನು ಡಾಕ್ಟರನಾಗಲೂ ನಾನು ಇದೇ ಕೆಲಸವನ್ನು ಮಾಡಿರುತ್ತೇನೆ.'

"ಅದರೂ...."

ವೇದಾವತಮ್ಮನವರು ಮನಸ್ಸು ಗೆಂದಲಕ್ಕೆ ಸಿಲುಕಿತು. ತನ್ನನಿರ್ಧಾರವನ್ನು ಬದಲಾಯಿಸಿ ಬಿಡಲೇ ಎಂದು ಒಮ್ಮೆ ಭಾವಿಸಿದರು. ಮರುಗಳಿಗೆಯೆ ಮುನ್ನಾ ದಿನ ತನ್ನ ಮಗ ನೇರವಾಗಿ ತನ್ನೊಡನೆಯೇ ಹೇಳಿದ ಮಾತ. ನೆನಪಾಗಿ ಮನಸ್ಸು ಚರ್ ಚೆಂ' ಎಂದಿತು.

"ಅಮ್ಮಾ ಅವಳು ಚಿಕ್ಕವಳು. ನಿನಗಾದೂ ತಿಳಿಯ ಬೇಡವೆ. ದಿನನಿತ್ಯ ನೀವು ಹೀಗೆ ಜಗಳಾಡಿ ಕೊಂಡಿದ್ದರೆ ನಾನಾದರೂ ಹೇಗೆ ಕಡೆದುಕೆಲಸಕ್ಕೆ ಹೋಗುತ್ತೀನಿ? ನಿಮ್ಮಿಬ್ಬರನ್ನು ಜೊತೆಯಲ್ಲಿ ಒಂದೆಡೆ ಇಟ್ಟಿರುವುದೇ ಸಮಸ್ಯೆಯಾಗಿದೆ ನನಗೆ. ನಿತ್ಯ ನಿಮ್ಮ ರಾಮಾಯಣ ಕೇಳಿ ಕೇಳಿ ಸಾಕಾಯಿತ್ತ ಯಾವಾಗ ನಿಮಗೆ ಬುದ್ಧಿ ಬರುವುದೋ ದೇವರೇ ಬಲ್ಲ.'

ಈ ಮಾತುಗಳನ್ನು ನಿನ್ನೆ ನಟರಾಜ ತಾತ್ಸಾರವಾಗಿ ಹೇಳಿದ್ದ. ಆ ಒಂದೊಂದು ಮಾತೂ ವೇದಾವತಮ್ಮನವರ ಕರುಳನ್ನು ಹುಚ್ಚಿ ಚುಚ್ಚಿ ಘಾಸಿಗೊಳಿಸಿತ್ತ.

ಇಂಥ ಸನ್ನಿವೇಶಗಳು ಹಲವು ಬಾರಿ ಬಂದಿದ್ದವು. ಪ್ರತಿ ಸಲವೂ ಅವನು ಮನೆಯಲ್ಲಿ ನೆಮ್ಮದಿ ತರಲು ಸಾಧ್ಯವೇ ಎಂದು ಚಿಂತಿಸಿದ್ದರು. ಅವಕ್ಕಾಗಿ ಪ್ರಯತ್ನಿಸಿದ್ದರು. ಆದರೆ ಕೊನೆಗೆ ನಿರಾಸೆಯಿಂದ ಕೈ ಚೆಲ್ಲಿದ್ದರು. ತಾನು ಕಂಡು ಬಂದ ಭಾಗ್ಯವೇ ಇದೆಂದು ನಿಟ್ಟುಸಿರು ಬಿಟ್ಟಿದ್ದರು.

ಅವರೊಳ್ಳೆ ಮನದ ಯೋಚನೆಯನ್ನು ತಡೆದುಕೊಳ್ಳಲೆಂದು ಕಣ್ಣು ಮುಚ್ಚಿಕೊಂಡರು. ಮುಚ್ಚಿದ ಕಣ್ಣಿಂಚಿನಿಂದ ನೀರು ಚಿಮ್ಮಿತು. ತಾನು ಹಿಂದೆ ಕಂಡ ಸುಂದರ ಕನಸು ಇದ್ದು ಭೀಕರ ರೂಪತಾಳಿ ನಿಂತಂತೆ ಕೆಂಡಕವಿಗೆ ತನ್ನ ಕಲ್ಪನೆಯು ಸೌಧ ಉಸಿರುಬಿಡುತ್ತಿರುವಂತೆ ತೋರಿತು. "ಅಯ್ಯೋ" ಎಂದು ಕನಲಿದರು ವೇದಾವತಮ್ಮ.



READ & ADVERTISE IN
NAVAYUGA WEEKLY

NAVAYUGA 3—11—1966
Registered with the Registrar of News Papers for India under No. R. N. 3646/57

REGD. No. B. G. 156
LICENCE No. 31
Licenced to Post without Prepayment

ಆರೋಗ್ಯ ಲಾಭ

ಕಾಲರಾದ ವಿರುದ್ಧ ತೀವ್ರ ಹೋರಾಟ

ಗ್ರಾಮಸ್ಥನೊಬ್ಬನ ಮಧ್ಯಾಹ್ನದ ಭೋಜನವು ಬರಿಯ ದೀಪಿದಂಗಿತ್ತು. ಒಂದು ರೊಟ್ಟಿಯ ತುಣುಕು, ಉಳಿದು ತರಕಾರಿಗಳು ಸುತ್ತ ಗದ್ದೆಯಲ್ಲಿ ಕಲಿಯುತ್ತಿದ್ದ ತೊಲೆಯಿಂದ ಹಣಿದ ಒಂದು ಲೋಟ ನೀರು—ಇಷ್ಟೇ.

ಹನ್ನೆರಡು ಗಂಟೆಗಳೊಳಗೆ ಅತಿ ಸಾಯುವ ಸಾಧ್ಯತೆಯಿತ್ತು. ಮೃತ್ಯುಕಾರಕವಾದ ಕಾಲರಾ ಕಿವಿಗೆ ಸೀರಿತ್ತು. ಈ ಕ್ರಿಮಿ ಪ್ರಾಚೀನ ಕಾಲದಿಂದಲೂ ಗಂಗೆಯಲ್ಲಿ ನದಿಯ ದಂಡೆಗಳಲ್ಲಿ, ಪ್ರಪಂಚದ ಹಲವು ಭಾಗದಲ್ಲಿ ರೋಗದ ಹಾವಳಿಗೆ ಕಾರಣವಾಗಿದೆ.

ಪಶ್ಚಿಮ ಪ್ರಪಂಚವು ಈ ರೋಗಕ್ಕೆ ಅಪವಾದವೇನೂ ಅಲ್ಲ. ಬೆಚ್ಚಗಿನ ತೇವವಿರುವ ಹವೆ, ಕಾಲರಾ ಕ್ರಿಮಿಗೆ ಹೆಚ್ಚು ಪ್ರಿಯವಾಗಿದೆಯಾದರೂ, ಈಚೆಗೆ ಸಾಂಕ್ರಾಮಿಕವು ನ್ಯೂಗಿನಿಯಿಂದ ಪಶ್ಚಿಮಾಭಿಮುಖವಾಗಿ ಮುಂದೆ ಪ್ರಾಚ್ಯಕ್ಕೆ ವ್ಯಾಪಿಸಿಲು ಸುಮಾರು ಐದು ವರ್ಷಗಳು ತಗಲಿತು. ಮಧ್ಯ ಪ್ರಾಚ್ಯದಲ್ಲೂ, ಅಧಿಕಾರಿಗಳ ಮುಂಜಾಗ್ರತೆಯಿಂದಾಗಿ, ಈ ರೋಗವು ಹೆಚ್ಚೇಟಿಯಲ್ಲಿದೆ. ಈಚೆಗೆ ಮೇ ತಿಂಗಳ ಫ್ಲೆಟರಿಯು ತನ್ನ ಪೂರ್ವ ವ್ಯಾಪ್ತಿಯ ಹೊರಗೆ ಒಬ್ಬ ಪ್ರಯಾಣಿಕನಿಂದ ಈ ರೋಗವು ಬಹು ಬೇಗನೆ ಸ್ಪಂದಿಸಲ್ಲಿಲ್ಲ ವ್ಯಾಪಿಸುವ ಸಾಧ್ಯತೆಯಿದೆ. ಇದೂಂದು ಭೀಕರ ಸನ್ನಿವೇಶ.

ಗ್ರಾಮ ಸ್ವಚ್ಛತೆಗೆ ಕಾಲರಾ ಬಗಲಿದರೆ ಅದು ಆತನ ನೆರೆಯವನಿಗಷ್ಟೇ ಸೋಂಕಬಹುದು. ಆದರೆ ಈ ರೋಗವು ಪ್ರಪಂಚದ ಮಹಾ ನಗರಗಳಿಗೆ ಪಬ್ಬಿದರೆ ಅದು ಕೆಲವೇ ಗಂಟೆಗಳಲ್ಲಿ, ಏಷ್ಯಾನಿಕ್ ನಾಗರಿಕರನ್ನು ದಾಟಲು ಬೇಕಾಗುವ ಅವಧಿಯಲ್ಲಿ. ಇತರ ದೇಶಗಳಿಗೆ ವ್ಯಾಪಿಸುವ ಸಾಧ್ಯತೆಯಿದೆ.

ಇದುವರೆಗೆ ಮನುಷ್ಯನು ಬ್ಯಾಕ್ಟೀರಿಯಾ ಶಾಸ್ತ್ರವನ್ನು ಬಿಡಿಸಿದ್ದನು. ಇತ್ತೀಚೆಗೆ ಪಿಡುಗಿನ ನಂತರ, ಕಾಲರಾ ವ್ಯಾಧಿ ಒಂದಲ್ಲ ಒಂದು ರೂಪದಲ್ಲಿ ಪ್ರಪಂಚದಲ್ಲಿ ನೆಲೆಸಿದೆಯಾದರೂ, ಬಲು ಮಟ್ಟಿಗೆ ಅದು ಕೆಲವು ಸ್ಥಳಗಳಲ್ಲಿ ಹರಿಯಿಸಲಾರದೆ ಈಗಿನ ಸಾಂಕ್ರಾಮಿಕವನ್ನು ನ್ಯೂಗಿನಿಯಿಂದ ಪಶ್ಚಿಮಾಭಿಮುಖವಾಗಿ ಮುಂದೆ ಪ್ರಾಚ್ಯಕ್ಕೆ ವ್ಯಾಪಿಸಿಲು ಸುಮಾರು ಐದು ವರ್ಷಗಳು ತಗಲಿತು. ಮಧ್ಯ ಪ್ರಾಚ್ಯದಲ್ಲೂ, ಅಧಿಕಾರಿಗಳ ಮುಂಜಾಗ್ರತೆಯಿಂದಾಗಿ, ಈ ರೋಗವು ಹೆಚ್ಚೇಟಿಯಲ್ಲಿದೆ. ಈಚೆಗೆ ಮೇ ತಿಂಗಳ ಫ್ಲೆಟರಿಯು ತನ್ನ ಪೂರ್ವ ವ್ಯಾಪ್ತಿಯ ಹೊರಗೆ ಒಬ್ಬ ಪ್ರಯಾಣಿಕನಿಂದ ಈ ರೋಗವು ಬಹು ಬೇಗನೆ ಸ್ಪಂದಿಸಲ್ಲಿಲ್ಲ ವ್ಯಾಪಿಸುವ ಸಾಧ್ಯತೆಯಿದೆ. ಇದೂಂದು ಭೀಕರ ಸನ್ನಿವೇಶ.

ಇಷ್ಟೇ ಅಲ್ಲದೆ ಟರ್ಕಿ ಸರಕಾರವು ಜಾರಿಯಾದ ಅಟ್ಲಾಂಟಾದಲ್ಲಾಗಲಿ ಸಾಂಕ್ರಾಮಿಕ ರೋಗಗಳ ಅಧ್ಯಯನ ಕೇಂದ್ರದ ಇಬ್ಬರು ಅಮೆರಿಕನ್ ಡಾಕ್ಟರುಗಳ ಸೇವೆಯನ್ನು ಕೇಳಿತು. ಅವರಿಬ್ಬರು ಈ ವೈದ್ಯಕೀಯ ತಂಡಕ್ಕೆ ಕಳಿಸಿಕೊಟ್ಟ ಇತ್ತೀಚಿನ ದಿನಗಳಲ್ಲಿ, ಅಮೆರಿಕ ಇಂಥ ವೈದ್ಯ ತಂಡಗಳನ್ನು ಫಿಲಿಪ್ಪೈನ್ಸ್, ಜೋರ್ಡಾನ್ ಮತ್ತು ಇರಾನಿಗೆ ಕಳಿಸಿದೆ.

ಕಾಲರಾ ವಿರುದ್ಧ ಹೋರಾಟದಲ್ಲಿ, ಮೊದಲಿನ ವಿರುದ್ಧ ಹೋರಾಟದಂತೆ ಅನೇಕ ದಿನದ ಪ್ರಯತ್ನವಾಗಿರುತ್ತದೆ. ಇದಕ್ಕೆ ಪ್ರತಿಯೊಂದು ಸರಬರಾಜಿನಲ್ಲೂ ಅಲ್ಲದೆ ಪ್ರಪಂಚ ಆರೋಗ್ಯ ಸಂಘ ಮತ್ತು ಪಾಶ್ಚಿಮಾತ್ಯ ವೈದ್ಯ ವೃಂದಗಳೂ ಭಾಗವಹಿಸುತ್ತವೆ. ಕಾಲರಾ ವಿರುದ್ಧ ಹೋರಾಟದಲ್ಲಿ ಕೇಂದ್ರ ಸ್ಥಳವೆಂದು ಹೆಸರಿಸಲಾದ ಯಾವುದಾದರೂ ಸ್ಥಳವಿದ್ದರೆ ಅದು ಪೂರ್ವ ಪಾಕಿಸ್ತಾನದ ರಾಜಧಾನಿಯೂ ಆಗಿರುವ ಢಾಕಾದ ಸಮೀಪದಲ್ಲಿರುವ ಪಾಕಿಸ್ತಾನ ಸಂಶೋಧನಾ ಕೇಂದ್ರವಾಗಿದೆ. ಇಲ್ಲಿ ಕಾಲರಾ ಬಗ್ಗೆ ಅಧ್ಯಯನ ಮಾಡಲಾಗುತ್ತಿದೆ.

ಕಳೆದ ಐದು ವರ್ಷಗಳಿಂದ ಅಲ್ಲಿನ ಕಾರ್ಯಕರ್ತರು ಈ ರೋಗವನ್ನು ತಡೆಯಲ್ಲಿ ಹೊಸ ವಿಧಾನಗಳನ್ನು ಹುಡುಕುತ್ತಿದ್ದಾರೆ. ಇವರು ಕಂಡು ಬರಬಹುದಾದ ಸೂಕ್ಷ್ಮ ಜಾತಿ ಕ್ರಿಮಿಗಳ ಬಗೆಗೆ ಸದಾ ಜಾಗ್ರತರಾಗಿದ್ದಾರೆ. ಅಮೆರಿಕ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಗಳೂ ಗಣನೀಯ ಸಹಾಯ ಮಾಡಿವೆ. ಪ್ರಯೋಗಾಲಯಕ್ಕೆ ಬೇಕಾದ ಸೌಕರ್ಯಗಳನ್ನು ಇವು ಸ್ವಾನಿಸಿಕೊಂಡು ಒದಗಿಸಿವೆ. ಅಮೆರಿಕದ ಹನ್ನೆರಡು ಡಾಕ್ಟರುಗಳು ಪ್ರಯೋಗಾಲಯದ ಸಿಬ್ಬಂದಿಯಲ್ಲಿದ್ದಾರೆ.

ಇಂದು ಕಾಲರಾದ ಬಗೆಗೆ ತಿಳಿದಿರುವ ವಿಷಯಗಳಲ್ಲಿ ಹೆಚ್ಚಿನವುಗಳು ಸಾವಿರಾರು ವರ್ಷಗಳ ಪ್ರಯತ್ನಗಳಿಂದ ತಿಳಿದಿದ್ದವು ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಉದಾಹರಣೆಗೆ ೩೫೦೦ ವರ್ಷಗಳ ಹಿಂದಿನ ಭಾರತದ ತಿಳಿವಳಿಕೆಯಿಂದಲೂ ಕಾಲರಾ ಲಕ್ಷಣಗಳನ್ನು ಉಲ್ಲೇಖಿಸಲಾಗಿದೆ. ೨೦೦ ವರ್ಷಗಳ ಹಿಂದೆ ಗೋವಾದಲ್ಲಿ, ಪೋರ್ಚುಗೀಸ ಡಾಕ್ಟರೊಬ್ಬರು ಮೆಣಸಿನ ಬಳ್ಳಿಯಿಂದ ಔಷಧಿ ತಯಾರಿಸಿ, ಆಧುನಿಕ ವೈದ್ಯಕೀಯ ಶಾಸ್ತ್ರದ ಪರಿಭಾಷೆಯಲ್ಲಿ, ಕಾಲರಾ ರೋಗದ ವಿವರಣೆ ಕೊಟ್ಟಿದ್ದರು.

ಕಾಲರಾ ದಿನದ ೧೪ ಗಂಟೆಯ ದ್ರವಾಂಶಗಳು ಎಷ್ಟು ಬೇಗನೆ ನಷ್ಟವಾಗುವುವು. ಬೇಗನೆ ಇವನ್ನು ಭರ್ತಿ ಮಾಡಿಕೊಳ್ಳದಿದ್ದರೆ, ಕೆಲವು ಗಂಟೆಗಳೊಳಗೆ ಮರಣ ಸಂಭವಿಸಬಹುದು. ಇದು ಸುಲಭವಾಗಿ ಮಾಡಲಾಗುವ ಕೆಲಸವಾದರೂ ಕಾಲರಾ ಕ್ರಿಮಿ ಸಂಘಟಕ ಹೊಂದಿದ ಆಹಾರ ಹಾಗೂ ಪಾತ್ರೆಯಗಳು ಈ ರೋಗವನ್ನು ಉಂಟು ಮಾಡುತ್ತವೆ. ಶುದ್ಧೀಕೃತ ನೀರು ಸತ್ತು ಆಹಾರ ಸರಬರಾಜು, ಗದ್ದೆಗಳ ಮತ್ತ ತೊರೆಗಳ ವಿಲೇವಾರಿಕರಣವನ್ನು ತಡೆಯುಲು ಕಟ್ಟುನಿಟ್ಟಾದ ನಿಯಮಗಳ ಕರ ಕ್ರಮಗಳು ಮತ್ತ ಗಂಭೀರ ವಿರುವ ಸಮಯಗಳಲ್ಲಾದರೂ ಈ ದಾಳಿಯ ಹಾಕಿಕೆ—ಇವು ಈ ರೋಗವನ್ನು ಕಡಿಯಲು ಪ್ರಥಮ ಕ್ರಮಗಳು. ಅನೇಕ ದೇಶಗಳ ಅಭಿವೃದ್ಧಿ ಕಾರ್ಯ ಕ್ರಮಗಳಲ್ಲಿ ಶುದ್ಧ ನೀರಿನ ಸರಬರಾಜು ಒಂದು ದೊಡ್ಡ ಅಂಶವಾಗಿರುತ್ತದೆ; ಪ್ರಪಂಚದ ಅತ್ಯಂತ ಮುಂದುವರಿದ ರಾಷ್ಟ್ರಗಳನ್ನು ಬಿಟ್ಟರೆ, ಉಳಿದ ದೇಶಗಳ ಕೋಟಿಗಟ್ಟಲೆ ಜನರು ನೆಲ್ಲಿ ನೀರಿನ ಸೌಲಭ್ಯವನ್ನು ಸದ್ಯ ನೀರೀಕ್ಷಿಸಲು ಸಾಧ್ಯವಿಲ್ಲ.

ವಿಜ್ಞಾನಿಗಳಿದ್ದೇ ಇದ್ದರೂ, ಪ್ರಪಂಚದ ವಿಜ್ಞಾನಿಗಳು ಆತಂಕವಿಲ್ಲದವರಾಗಿದ್ದಾರೆ. ಇಂದಿನ ಡಾಕ್ಟರುಗಳು ಅರು ತಿಂಗಳ ವರೆಗೆ ರೋಗ ನಿರೋಧಕ ಶಕ್ತಿಯನ್ನೊದಗಿಸುತ್ತವೆ. ಮಗುವಿಗೆ ಆಜೀವ ಪರ್ಯಂತ ರೋಗ ನಿರೋಧಕ ಶಕ್ತಿ ನೀಡುವ ಔಷಧಿಯ ಸಂಶೋಧನೆಯೂ ಆಗಲಾ ಬಹುದು.

ಅಂಗಮ ಪರಿಹಾರವೇನಿದ್ದರೂ, ಪ್ರಯತ್ನಶಃ ಅದು ಪೂರ್ವ ಪಾಕಿಸ್ತಾನದಲ್ಲಿರುವ ಪ್ರಯೋಗಾಲಯದಲ್ಲಿ ಸಂಶೋಧಿತವಾಗಬಹುದು. ಈಗ ಈ ವಿಲೆಯಲ್ಲಿ ಪ್ರಪಂಚದ ನೀರೀಕ್ಷೆಗಳು ಬಲ. ಮಟ್ಟಿಗೆ ಇಲ್ಲಿ ಕೇಂದ್ರೀಕೃತವಾಗಿವೆ.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ ಶ್ರೀ ಟಿ.ಸರಸ್ವತಿಯವರಿಂದ ಸಂಯೋಜಿತವಾದ—
ಅಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾಗುವಂತೆ ಬೆಲೆ ಕೇವಲ ರೂ. ಉತ್ತಮ ಪ್ರತಿಗೆ ರೂ.ಎರಡೂವರೆ (೨.೫೦ ಪೈಸೆಗಳು)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಸರಿಸಬೇಕಾದ

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಾಯಕ
ಬೆಲೆ: ರೂ. 1-25 (೧.೨೫ ಪೈಸೆಗಳು)

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೆಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ
ಬೆಲೆ: ರೂ. ೧—೫೦

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ 2 0೧ನ್ನು ಮನಿಯಾರ್ಡರು ಮಾಡಿ ಪಡೆಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್.ಪಿತಾಳೆ, ಎಂ.ಡಿ.ಡಿ.ಎಸ್.

ಜನರಿಗೆ ಪಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಫ್. ಐ

ಉಡುಪಿಯಲ್ಲಿ ಪುಸ್ತಕಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

ನವಯುಗ

ದೀಪಾವಳಿ ಸಂಚಿಕೆ ೧೯೬೬

DEEPAVALI SPECIAL 1966

೫೦
ಪೈಸೆ

THAT ARE FRESH ....

THAT ARE DELICIOUS ....

THAT ARE NUTRITIOUS ....

THAT ARE TASTY ....

THAT ARE "ANCHOR" BRAND CANNED SEAFOODS.

A popular name in Seafoods both in India & Abroad.

"ANCHOR" BRAND

CANNED Mackerels,
Sardines &
Prawns/Shrimp

Packers:-

M/s. Coronet Canning Company,

RAJMANDIR,
MALPE.
(S. INDIA)

(Leading Contractors to 'DEFENCE' & MILITARY CANTEEN STORES)

Grams: "CORONET" MALPE.

Phones: 33 34 45 MALPE.

ದೀಪಾವಳಿ ಸಂಚಿಕೆ ೧೯೬೬

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೧೧	೧೦—೧೧—೧೯೬೬	No. 11

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅರ್ಧಿಯನಿಧಿತ (ಕವರ್ ಪೇಜ್),

ಕಲಂ ಸೆಂಟಿಮೀಟರಿಗೆ ರೂ. 2-00

ಸಾಮಾನ್ಯ (ಕಂ ವ್ಯಾರ್ಸ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿಯರಿಂದ ಕೂಡಿರಬೇಕು. ಕಾಲಕ್ಕೆ ತಕ್ಕಂತೆ ವಿಷಯ ಪ್ರತಿಪಾದನೆಯ ಶೈಲಿಯೂ ಒಳ್ಳೆಯ ಮಾರ್ಗದಲ್ಲಿ ಬದಲಾಯಿಸುವುದಕ್ಕೆ ಅಡ್ಡಿಯಿಲ್ಲ. ಆದರೆ ಇದನ್ನು ಭಾರತೀಯರು ಎಂದೋ ಗುರುತಿಸಿದ್ದರು. ಅದು ಎಂದಿನವನ ಶಕ್ತಿಗಂತ ವಿಗಿಲೆಂದೂ ತಿಳಿದಿದ್ದರು; ಆದರೆ ಆರಾಧನೆಗೂ ಮುಂದಾಗಿದ್ದರು. ಹೀಂತಲೇ ಮರ, ಗಿಡ, ಬಳ್ಳಿ, ನೀರು, ಗಿರಿ, ನೆಲ ಎಲ್ಲವೂ ಅವರಿಗೆ ದೇವಾಂಶದಿಂದ ಕೂಡಿದ. ಚಿರ ಶಾಂತಿಯೂ ನಿಕೃಷ್ಟತೆಯೂ ಅದ ಪ್ರಕೃತಿ ಮಾತೆಯ ಮಡಿಲಲ್ಲಿ ಬೆಳೆದ ಮಾನವ ಭಕ್ತಿಯು ಸೌಂದರ್ಯವನ್ನು ಕಂಡು ಉಂಡು, ಸಂತಸಗೊಂಡಿತು, ಅದು ಭಕ್ತಿಯ, ಹೃದಯವನ್ನಪ್ಪಿತು; ಇದನ್ನು ಶೃಂಗಾರವೆನ್ನುವರು. ಇಪ್ಪು ತಿಳಿಯುತ್ತಾರೆ.

ಕಳೆದ ನಾಲ್ಕು ವರ್ಷಗಳಿಂದಲೂ ದೀಪಾವಳಿ ನಮಗೆ ವಿಪದ ಗುಳಿಗೆಯನ್ನೇ ಉಡಿಸಿ ಹೊಂಟಂತಿದೆ. ಭಾರತ ಪ್ರಜಾಪ್ರಭುತ್ವ ವಿಶ್ವರಾಷ್ಟ್ರ ಸಂಕ್ಷೋಭೆಗೆ ಅಗ್ರಮಾನ್ಯವಾಗಿ ನಿಲ್ಲುವ ಸಾಹಸ ಮಾಡುತ್ತಲಿದೆ. ನಮ್ಮ ಉನ್ನತಿಯನ್ನು ಸಹಿಸಲಾಗದ ಕೆಲವು ವಿದೇಶೀಯರು ನಮ್ಮನ್ನು ಕೆಣಕಿದರು; ನಮ್ಮ ಮೇಲೆ ದಂಡೆತ್ತಿ ಬಂದರು; ಬಂದ ಪರೇನೋ ಮುಂಬಿದರು ನಿಜ. ಆದರೆ, ಅವರ ಕೇಟಲೆಗಳು ಇನ್ನೂ ನಿಂತಿಲ್ಲ. ಕೆಂಪು ಚೀನೀಯರು ಯಾವ ಸಂದರ್ಭದಲ್ಲಿ ಎಲ್ಲಿ ಆಕ್ರಮಣ ಮಾಡುವರೆಂದು ಹೇಳಬರುವುದಿಲ್ಲ. ಸಾಮ್ರಾಜ್ಯವಾದಿ ಕೆಂಪು ಚೀನಯ ಗಡಿಯಲ್ಲಿ ಬುಸುಗುಟ್ಟುತ್ತಿದೆ ಇದೆಯೊಂದು ಕಡೆ. ಇನ್ನೊಂದೆಡೆ ಪಾಕಿಸ್ತಾನವು ತಾಷ್ಕೆಂಟ್ ಘೋಷಣೆಗಳನ್ನು ಗಾಳಿಗೆ ತೂರಿ ತನ್ನ ಪ್ರಚ್ಛನ್ನ ಯುದ್ಧವನ್ನು ಸಾರಿರಲು ಹೊಂಚು ಹಾಕುತ್ತಿದೆ. ಇವರಿಬ್ಬರಿಗೂ ಕೆಲವೊಮ್ಮೆ ವಿದೇಶಗಳು ಒಂದಲ್ಲ ಒಂದು ರೀತಿಯಲ್ಲಿ — ಪ್ರತ್ಯಕ್ಷವಾಗಿ — ಪರೋಕ್ಷವಾಗಿ — ಉತ್ತೇಜನವನ್ನು ನೀಡುತ್ತಿವೆ. ದೇಶದಲ್ಲಿ ತಲೆದೋರಿದ ಹಣದುಬ್ಬರ, ಆಹಾರದ ಅಭಾವ—ಪ್ರಕೃತಿಯ ನಿಷ್ಕರುಣೆ—ಗೇ ದುರ್ಲಾಭವನ್ನು ಕೆಲವು ಸ್ವಾರ್ಥಿಗಳು ಪಡೆಯ ಬಯಸುತ್ತಿದ್ದಾರೆ. ಹೀಗೆ ದೇಶದ ಹೊರಗೆ ಹರಡಿದೆ ನಮಗೆ ಅಂಧಕಾರ. ಟೀಪ ಹಚ್ಚಲೆ ಸುಮ್ಮನುಳಿದವರು ಹಲವರು; ಹಚ್ಚಿದ್ದ ದೀಪ ನಂದಿಸುವವರ ಕೆಲಪರು—ಅಶ್ರಯತ್ನದಲ್ಲಿ ನಿರತರಾದವರು ಮತ್ತೆ ಕೆಲವರು —ಇಂತಹ ಭೀಕರ ಪರಿಸ್ಥಿತಿ ನಮ್ಮನ್ನು ಕಾಡುತ್ತಿದೆ.

ಇಂಗ ನಾವೇನು ಮಾಡುತಿದ್ದೇವೆ? ನಮ್ಮ ಸುತ್ತ ಕತ್ತಲು ಹರಡಿರುವಾಗ, ಈ ಅಂಧಕಾರದಲ್ಲಿ ಪ್ರತಿಪೆಜ್ಜೆಯಿಡ ಪುದೂ ದುಸ್ತರವಾಗಿರುವಾಗ ನಾವೇನುಗೆಯ್ಯುತ್ತಿದ್ದೇವೆ? ಕತ್ತಲೆಯಲ್ಲೀ ಹೆಜ್ಜೆಯಿಡುವ ದಾಷ್ಟ್ಯವನ್ನು ತೋರಿಸುವಷ್ಟು ನಾವು ಕಚ್ಚೆದೆಯವರಾಗಿದ್ದೇವೆಯೆ?— ಅಥವಾ ಕೃದಯ ದೀಪ ಹಚ್ಚಿ ಅವಂಬೆಳಕಿನಲ್ಲಿ ಮುಂದುವರಿಯುತ್ತಿದ್ದೇವೆಯೇ?

ವಿದೇಶೀಯ ಆಕ್ರಮಣದ ವೇಳೆಯಾಗಿ ನಿಂತ ನಾವು ಆಕ್ರಮಣ ಭೀತಿದಾಯಕವಾಗಿರೆಯೆಂದು ನಂಬಿ ನಮ್ಮ ಸಮಸ್ಯೆಯಲ್ಲಿಯೇ ಹೊಸೆದಾಡಲು, ತತ್ಪರಿಣಾಮವಾಗಿ ದ್ವೇಷ, ದೇಶದ ಮೂಲೆಯಿಂದ ಮೂಲೆಗೆ ನಡೆಯುತ್ತಿರುವ ಆಂದೋಲನ, ಸತ್ಯಾಗ್ರಹ, ಉಪವಾಸ, ಬಂದ್, ಸಂಪು, ಮುಷ್ಕರ—ಇವೆಲ್ಲ ಏನು? ಆಂದೋಲನ ರಂಗಕ್ಕೆ ದುಮುಕುವ ವಿದ್ಯಾರ್ಥಿಗಳು—ಅವರ ಬೆನ್ನುತಟ್ಟುವ ರಾಜಕೀಯ ಪುಢಾರಿಗಳು ದೇಶವನ್ನು ಎತ್ತ ಒಯ್ಯುತ್ತಿದ್ದಾರೆ? ತಮ್ಮ ಹೃದಯ ಹಣತೆಯ ದೀಪವನ್ನು ನಂದಿಸಿ ಕತ್ತಲೆಯಲ್ಲೇ ಕತ್ತಲೆಯಾಳ್ವಲೇ ದೇಶವನ್ನು ಒಯ್ಯುತ್ತಿಲ್ಲವೆ? 'ತಮಸೋಮಾ ಜ್ಯೋತಿರ್ಗಮಯ' ವೆಂಬ ಅಮೃತವಾಣಿಯನ್ನು ನಾವು ಮರೆತು ಮತ್ತೂ ಅಧಃಪತನದತ್ತ ಉರುಳುವುದು ಅನಿವಾರ್ಯವೇನು?

ಕೂಡಿ ಎಬ್ಬಿಸುವ, ಕೂಡಿ ಉಣ್ಣುವ, ಕೂಡಿ ದುಡಿಯುವ, ಕೂಡಿ ಯಶಗಳಿಸುವ ಏಕೈಕ ಸಹಜವಾದ ದೇಶ ಭಾರತ. ಇಂದು ಈ ಒಕ್ಕ ಐಕ್ಯತೆಯಲ್ಲಿ ಭಯವಿಷಾದ ಹೊಂದುತ್ತಿದೆ—ಇದೇ ರೀತಿಯಲ್ಲಿ ನಾವು ಮುನ್ನಡೆದರೆ, ಪ್ರಾಂತೀಯತೆ, ಭಾಷೀಯತೆ, ಜಾತೀಯತೆಗಳ ಗುಂಗಿನಲ್ಲಿ ಮೀಯುತ್ತಿರೆ ವೈವಿಧ್ಯತೆಗಳನ್ನು ಉಳಿದಾರವೆಂಕ.? ಇದರಿಂದ ಇಂದಿನ ದೀಪಾವಳಿಯಂದು ನಮ್ಮ ನಮ್ಮ ಹೃದಯ ಕಮಲದಲ್ಲಿ ದಿವ್ಯಜ್ಯೋತಿಯುರಿಸಬೇಕು; ಆದರ ಬೆಳಕಿನಲ್ಲಿ ನಾವು ಆತ್ಮದರ್ಶನ ಪಡೆಯಬೇಕು; ನಮ್ಮ ನಾವರಿತು ಕೊಳ್ಳೋಣ. ನಮ್ಮ ತಪ್ಪನ್ನರಿತು ಅವನ್ನು ದೂರೀಕರಿಸಿ ಸಂದಾರಿಯಲ್ಲಿ ನಡೆಯೋಣ.

ನಾವು—ನೀವು

"ನವಯುಗ"ವೂ ದೀಪಾವಳಿಯಹಬ್ಬದಲ್ಲಿ ಖಾಲುಗೊಂಡಿದೆ. ತನ್ನ ವಾಚಕರಿಗೆ ಕೆಬ್ಬದೂಟವನ್ನುಣಿಬುವ ಪ್ರಯತ್ನ ಮಾಡಿದೆ. ಊಟದ ಹಿಂಮೆಯಿರುವುದಾ ವ್ಯಂಜನಗಳಲ್ಲಿ,ರುಚಿ ಇಲ್ಲಿ, ಬಡಿಸುವಿಕೆಯಲ್ಲಿ. ನವುಯುವಕಾಶ ಸಾಕಷ್ಟಿಲ್ಲದೆ ಹೋದುದರಿಂದ ವ್ಯಂಜನ ಸಂಪಾದನೆ ಕೃಪ್ತಿಕರವಾಗಲಿಲ್ಲ; ಶ್ರೇಷ್ಠ ವಾಕ್ ಶಾಸ್ತ್ರಿಗಳನ್ನು ಕರೆಯುವುದು ಕಷ್ಟ ಸಾಧ್ಯವಾಯಿತು. ಆದುಗೆ ಮನೆಯೂಟ ಗಡಿಬಿಡಿಯಿಂದ ಕೂಡಿದುದರಿಂದ ಅದುಗೆಗೂ ಗಡಿಬಿಡಿ; ಬಡಿಸುವಿಕೆಗೂ ಗದಿಬಿಡಿಯೇ. ಹೀಗಾಗಿ 'ಸರ್ವಾಂಗಸುಂದರ'ವೆನಿಸಿರುವ ಊಟ ನೀಡುವದು ದುಸ್ತರವಾಯಿತು. ಆದರೂ ಈ ವಿಶೇಷಸಂಚಿಕೆಯನ್ನು ಪ್ರಮ್ಮ ಓದುಗರು ಸ್ವಾಗತಿಸುವರು ಎಂಬ ಆತ್ಮ ವಿಶ್ವಾಸ ನಮಗಿದೆ.

ನಮ್ಮ ಜಾಹೀರಾತುದಾರರು ನಮ್ಮ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಹಲವಾರು ಆಕಂಕಗಳ ನಡುವೆಯೂ ತಮ್ಮ ಸಂಸ್ಥೆಗಳ ಜಾಹಿರಾತುಗಳನ್ನು ನೀಡಿ ಈ ವಿಶೇಷ ಸಂಚಿಕೆಯ ತಯಾರಿಯಲ್ಲಿ ನೆರವಾಗಿದ್ದಾರೆ. ಇವರ ಸಹಾಯವನ್ನು ನಾವು ಸದಾ ಸ್ಮರಿಸುತ್ತೇವೆ. ಸಂಚಿಕೆಗಾಗಿ ಲೇಖನಗಳನ್ನು ಕಳಿಸಿಕೊಟ್ಟ ಲೇಖಕ ಬಂಧುಗಳನ್ನು ಮರೆಯುವುದೆಂತು? ಸಾಧ್ಯ? ಅವರನ್ನು ನಾವುಮನಸಾರೆ ನೆನೆಯುತ್ತೇವೆ.

ದೀಪಾವಳಿಯು ನಮ್ಮೆಲ್ಲ ಚಂದಾದಾರರಿಗೂ ಜಾಹಿರಾತ ದಾರರಿಗೂ ಹಿತೈಷಿಗಳಿಗೂ ದೇಶಕ್ಕೂ ಲೋಕಕ್ಕೂ ಶುಭವನ್ನುಂಟು ಮಾಡಲಿ; 'ಹೃದಯ ಹಣತೆಯ ಹಚ್ಚು ನಿನ್ನ ನೀ ನೋಡು, ತಮವ ನೀನೋಡಿಸು, ಅತ್ಮಕ್ಕೆ ಲೋಕಕ್ಕೆ ಹೊಸ ಬೆಳಕುಬೀರು, ನವ ಬದುಕ ತೋರು'—ಇದನ್ನು ಕಾರ್ಯರೂಪಕ್ಕೆ ತರುವ ಪ್ರೇರಣೆ ನಮಗಿರಲಿ.

ಸರ್ವರಿಗೂ ದೀಪಾವಳಿಯ ಶುಭಾಶಯಗಳು

ಮುನಿಪಪ್ರದಲ್ಲಿ:

ನ್ಯಾಯೋಕ್ತಿಸಲ್ಲಿ ಟೆರಿಜನ್ ಕಾರ್ಯಕ್ರಮದ ಪೂರ್ವಸಿದ್ಧತೆಯಲ್ಲಿ

ಪ್ರಧಾನಿ ಇಂದಿರಾ ಗಾಂಧಿ ಪಕ್ಕದಲ್ಲಿ ನಿಂತವರು ಕಾರ್ಯಕ್ರಮದ ಪಂಯೋಜಕ ಲೋರೆನ್ಸ್ ಸ್ವಿವಾಕರು.

ದೀಪಾವಳಿಯ - ಶುಭಕಾಮನೆ

ಅಸತ್ಯ ಅಳಿಯಲಿ — ಸತ್ಯ ಹೊಳೆಯಲಿ।
ಮರಣ ಳುಂದಲಿ — ಜೀವನ ಮೆರೆಯಲಿ!!
ಕತ್ತಲೆ ಕಳೆಗುಲಿ — ಬೆಳಕು ಪರಿಯಲಿ!!!
'ಸರ್ವೇ ಸಂತು ನಿರಾಮಯಾ:'

ಅಜ್ಞಾನದಿಂದ ಅನೈಸರ್ಗಿಕ ಜೀವನಕ್ಕೆ ಮಾರುಹೋಗಿ
ಅನಾರೋಗ್ಯದ ಅಂಧಕಾರದಲ್ಲಿ ಕೊಳಲಾಡುವ
ಭಾರತೀಯನಿಗೆ ಸುಜ್ಞಾನದ ಸುಪ್ರಕಾಶದಲ್ಲಿ,
ನಿಸರ್ಗದ ಮಡಿಲಲ್ಲಿ ಆರೋಗ್ಯ ಸುಧೆ
ಯನ್ನುಣ್ಣಿಸುವ "ಕಾಮಧೇನು"

'ಆಯುರ್ವೇದ'

ಪರಿಣಾಮಕಾರಿ ಆಯುರ್ವೇದ ಔಷಧಿಗಳ
ವಿಶ್ವಸನೀಯ ಸಂಸ್ಥೆ.

ದಿ. ನ್ಯೂ ಭುವನೇಂದ್ರ ಆಯುರ್ವೇದಿಕ್ ಫಾರ್ಮಸಿ

ಕಟಪಾಡಿ, ದ. ಕ.

VOLTAS AIR CONDITIONERS & WATER COOLERS

ALLWYN PRESTCOLD REFRIGERATORS

RACOLD WATER HEATERS & APPLIANCES

EMCO FANS — USHA FANS

SIEMSNS MOTORS & STARTERS

MODERN FURNITURE & INTERIOR DECORATION

Contact

GENERAL REFRIGERATION ENG. WORKS,

K.S. Rao Rd., Mangalore-1.

Phone: 4209.

ದಿ ಶಂಕರ್ ವಿಠಲ್ ಮೋಟಾರ್ ಕಂಪೆನಿ ಲಿಮಿಟೆಡ್

ಮಂಗಳೂರು

(ದಕ್ಷಿಣ ಕನ್ನಡ ಜಿಲ್ಲೆ)

ದೀಪಾವಳಿಯ ಶುಭದಿನದಂದು

ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ,
ಪ್ರಯಾಣಿಕರಿಗೂ ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷಪಡುತ್ತೇವೆ.

THE SHANKER VITTAL MOTOR COMPANY LIMITED

MANGALORE

ಶಾರದಾ ಗಿಫ್ಟ್-ಕಂ-ಪರ್ಚೇಸ್ ಸ್ಕೀಮ್

ಜಾವಾ ಮೋಟರ್ ಸೈಕಲ್‌ಗಳು

ಖೀರಾ ಕಪಾಟುಗಳು (3 ಸ್ಯಾಜುಗಳಲ್ಲಿ)

ಸುಲಭ ಕಂತುಗಳಲ್ಲಿ ಖರೀದಿಸಲು ಸುಸಂದರ್ಭ!
ಇಂದೇ ಸದಸ್ಯರಾಗಿ – – ಬಹುಮಾನ ಪಡೆಯಿರಿ!

ಶಾರದಾ ಟ್ರೇಡ್ಸ್ ಕೊರ್ಪೊರೇಶನ್ • ಶಾಸ್ತ್ರಿ & ಕೊ.,

ಹಂಪನಕಟ್ಟಾ .... ಮಂಗಳೂರು. ಫೋನ್ : 3788

ಕೆಳಗಿನವುಗಳನ್ನು ಪಡೆಯಲು ಸುವರ್ಣ ಸಂಧಿ

ಎ. ಜಾವಾ ಮೋಟರ್ ಸೈಕಲ್ ರೂ. 1000 43 ಮಾಸಿಕ ಕಂತುಗಳು
ಬಿ. ಖೀರಾ ಯುಟಿಲಿಟಿ ಕ್ಯಾಬಿನೆಟ್ ಮತ್ತು ಒಂದು ಕುಶನ್ ಹಾಗೂ ಕೈಯಿರುವ ಕುರ್ಚಿ 78"×36"×19"
ರೂ. 250 18 ಮಾಸಿಕ ಕಂತುಗಳು
ಸಿ. ಖೀರಾ ಜನಪ್ರಿಯ ಕ್ಯಾಬಿನೆಟ್ ಮತ್ತು ಒಂದು ಕುಶನ್ ಹಾಗೂ ಕೈಯಿರುವ ಕುರ್ಚಿ.65"×35"×19"
ರೂ 200 20 ಮಾಸಿಕ ಕಂತುಗಳು
ಡಿ. ಖೀರಾ ಮಿಡ್‌ಗೆಟ್ ಕ್ಯಾಬಿನೆಟ್ ಮತ್ತು ಒಂದು ಕುಶನ್ ಹಾಗೂ ಕೈಯಿರುವ ಕುರ್ಚಿ. 50"×30"×17"
ರೂ. 150 20 ಮಾಸಿಕ ಕಂತುಗಳು

Sharada Trades Corporation
[Shastry & Co.] Phone: 3788
Hampankatta, Mangalore-1

ಮನೆ--ಮನೆಗಳಲಿ ಬೆಳಗುತಿದೆ ದೀಪಾವಳಿ!
ಮನೆ-ಮನೆಗಳಲಿ 'ಖೀರಾ' ಶೋಭಿಸಲಿ !!

ಖೀರಾ - ಫರ್ನಿಚರುಗಳೆಂದರೆ ಶ್ರೇಷ್ಠತೆಗೆ ಹೆಸರಾದುದು.

ಮನೆ- ಮಠಗಳಿಗೆ-ಆಫೀಸು— ಆಸ್ಪತ್ರೆಗಳಿಗೆ ಬೇಕಾಗುವ ಯಾವತ್ತೂ ತರದ ಕವಾಟು, ಕುರ್ಚಿ, ಮೇಜುಗಳು, ಮಂಚ, ಫ್ಯಾನುಗಳು, ಕಿಟಿಕಿ ಬಾಗಿಲುಗಳು ಇತ್ಯಾದಿಗಳಿಗೆ ವಿಚಾರಿಸಿರಿ.

'ಸೋಫಾ-ಕಂ-ಬೆಡ್'- ಒಂದರಲ್ಲೇ ಇಬ್ಬಗೆಯ ಉಪಯೋಗ.

ಹಂಪನ ಕಟ್ಟೆಯಲ್ಲಿರುವ ನಮ್ಮ ವೈವಿಧ್ಯಪೂರ್ಣ ಶೋರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ. Shastry & Co.

ಮಂಗಳೂರು - 1 **MANGALORE-1**

Phone : **3788**

ಚಿಂತೆ ಕಾಣಣ್ಣ

ಚಿಂತಿಸಿದವರು
ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್

ದಾಸವರ್ಯ ಪುರಂದರರು ಭೂಮಿಯಲ್ಲಿನ ಸಕಲರಿಗೂ ಒಂದಲ್ಲ ಒಂದು ಚಿಂತೆಯಿದೆ. ಸರ್ವಾಂತರ್ಯಾಮಿ ಪರಮಾತ್ಮ ನೋರ್ವ ದೂತ್ರನಶ್ಚಿಂತ, ಅತನ ಶರಣು ಹೋಗುವುದರಿಂದಲೇ ನಾವು ನಿಶ್ಚಿಂತರಾಗಬಲ್ಲೆವೆಂಬುದನ್ನು ತನ್ನ ಕೆಲ ಗೀತೆಗಳಲ್ಲಿ ವಿವರಿಸಿದ್ದಾರೆ.

ಮಳೆ ಹೆಚ್ಚಾದರೆ ಚಿಂತೆ, ಕಡಿಮೆ ಮಳೆ ಬಂದರೆ ಚಿಂತೆ, ಚಳಿ ಹೆಚ್ಚಾದರೆ ಸಕೆಯೇ ಎದೀತೆಂಬ ಚಿಂತೆ, ಹಣ ಹೆಚ್ಚು ಇದ್ದರೆ ಕಳ್ಳಕಾಕರ ಚಿಂತೆ, ಹೆಚ್ಚು ತಿಂದರೆ ನಿದ್ರೆಯ ಚಿಂತೆ, ಒಟ್ಟನಲ್ಲಿ ಚಿಂತೆಯೇ ಚಿಂತೆ. ಈ ಚಿಂತೆಯು ಕುರಿತು ಪುರಂದರ ದಾಸರು ಸೊಗಸಾಗಿ ಹಾಡಿರುತ್ತಾರೆ.

ಯಾವಾಗಲೂ ಚಿಂತೆ ಜೀವಕ್ಕೆ ॥ಪ॥
ಈಜೀವ ಒಂದು ಪರಿಯೂಗೋತನಕ ॥ಆ॥
ಹೆಂಡತಿಯಿಲ್ಲದ ಚಿಂತೆ ಹೆಂಡತಿಯಿದ್ದರು ಚಿಂತೆ| ಚಂಡಿಕುರೂಪಿಯೂದರು ಚಿಂತೆಯು| ಕೊಂಡನಾಗಿ ಪೊತ್ತು ತಿರುಗುವ ಚಿಂತೆ ಭೂ| ಮಂಡಲದೊಳಗೆಲ್ಲಾ ಚಿಂಕಾಣ್ಣಣ್ಣ ॥೧॥ ಓಲೆಗಿಲ್ಲದ ಚಿಂತೆ ಓಲೆಗಾದರು ಚಿಂತೆ| ಮೇಲೆ ಸಂಬಳ ಬಾರದ ಚಿಂತೆಯು|| ಸಾಲಕೊಡೋ ಚಿಂತೆ ಸಾಲತೆಗೆಯೇ ಚಿಂತೆ| ಮೂರ್ಲೋಕದೊಳಗೆಲ್ಲ ಚಿಂತೆ ಕಾಣಣ್ಣ ॥೨॥ ಮನೆಯಿಲ್ಲದ ಚಿಂತೆ ಮನೆಯಾದರು ಚಿಂತೆ| ಮನೆವಾರ್ತೆ ನಡೆಯದ ಚಿಂತೆಯು|| ಮನಸಿಜನಯ್ಯ ಶ್ರೀ ಪುರಂದರ ವಿಠಲನ| ನೆನೆದರೆ ಚಿಂತೆ ನಿಶ್ಚಿಂತೆ ಕಾಣಣ್ಣ ॥೩॥

ನಿದ್ರೆ ಬಾರದವನಿಗೆ ರಾತ್ರಿ ಚಿಂತೆ

ಎಂತು ನೋಡಿದರು ಚಿಂತೆ| ಈ ಒಡಲು ನಿಶ್ಚಿಂತರಾಗಿಹ ಒಬ್ಬರನು ಕಾಣೆ ॥೪॥ ಬ್ರಹ್ಮನಿಗೆ ಶಿರಹೋಗಿ ಬಾಡಿಬಳಲುವ ಚಿಂತೆ| ಮುನ್ನ ಮೂರಡಿಗೆ ಕಪಿಯೂದ ಚಿಂತೆ|| ಮನ್ಮಥಗೆ ತನು ಸುಟ್ಟ ಬೂದಿಯೂಗಿಹ ಚಿಂತೆ|ಕಣ್ಣು ಮೂರುಳ್ಳವಗೆ ತಿರುದುಂಬ ಚಿಂತೆ ॥೧॥ ಕಾಮಧೇನುವಿಗೆ ಕರಿದೊಯ್ವರೆಂಬಾ ಚಿಂತೆ| ಕಾಮಿನಿಯರಿಗೆ ಒಡವೆಗಳ ಚಿಂತೆ|| ಸೀಮೆಯೂಳುವ ಧೊರೆಗೆ ಪರಧೊರೆಗಳ ಚಿಂತೆ| ಪಾಮರ ನಂಗೆ ಬರಹ ಬರದಿರುವ ಚಿಂತೆ ॥೨॥ ಧರ್ಮಾತ್ಮರಿಲ್ಲರಿಗೆ ದೀನ ಜನರಾ ಚಿಂತೆ| ಕರ್ಮಾತ್ಮರಿಲ್ಲರಿಗೆ ಕಡುವ ಚಿಂತೆ| ನರ್ಮ ಬೆಳೆಸುವರಿಗೆ ಪೈರಿ ಕೊಲ್ಲುವ ಚಿಂತೆ| ಮರ್ಮಣಿಗೆ ಸತತ ವ್ಯಹ್ಯನ್ನ ಚಿಂತೆ ॥೩॥ ಭಕ್ತರಿಗೆ ಗುರುವಿನೊಳು ಮುಕ್ತಿ ಬೇಡುವ ಚಿಂತೆ| ಮುಕ್ತರಿಗೆ ಪರವಾತ್ಮ ದೊರಿವ ಚಿಂತೆ|| ಯುಕ್ತವಂತರಿಗೆ ವಿವೇಕವಾಡುವ ಚಿಂತೆ ವಿ| ರಕ್ತರಾದವರಿಗೆ ಕಾಮ ಸುಡುವ ಚಿಂತೆ ॥ ೪ ॥ ಕ್ಷುದ್ರ ರಕ್ಕಸರಿಗೆ ಬ್ಲರನು ತಿನ್ನುವ ಚಿಂತೆ| ನಿದ್ರೆ ಬಾರದವನಿಗೆ ರಾತ್ರಿ ಚಿಂತೆ|| ಕದ್ದು ತರಲ್ಪೋದವಗೆ ಕೋಳಿ ಕೂಗುವ ಚಿಂತೆ| ಮುದ್ದು ಪುರಂದರ ವಿಠಲನೊಬ್ಬನಿಗೆ ನಿಶ್ಚಿಂತೆ ॥ ೫ ॥

ಬ್ರಹ್ಮ, ಮನ್ಮಥ, ಈಶ್ವರ, ವಾರುಣಿ, ಕಾಮಧೇನು, ಕಾಮಿನಿ, ಅರಸ, ಧರ್ಮಾತ್ಮ, ಬ್ರಾಹ್ಮಣ, ಭಕ್ತ, ಮುಕ್ತ, ವಿವೇಕಿ ಹೀಗೆ ಯಾರನ್ನೂ ಚಿಂತೆ ಬಿಟ್ಟಿಲ್ಲ. ಪುರಂದರ ವಿಠಲನೊಬ್ಬ ಮಾತ್ರ ನಿಶ್ಚಿಂತ ಎಂಬುದೇ ದಾಸರ ಅಭಿಮತ.

ಅನುಗಾಲವು ಚಿಂತೆ

ಅನುಗಾಲವು ಚಿಂತೆ ಈ ಜೀವಕ್ಕೆ
। ತನ್ನ ।

ಮನವು ಶ್ರೀ ರಂಗನೊಳ್ ಮೆಚ್ಚುವ ತನಕ ॥ ಪ ॥ ಸತಿಯಿದ್ದರು ಚಿಂತೆ ಸತಿಯಿಲ್ಲದ ಚಿಂತೆ | ಮತಿಹೀನ ಸತಿಯೂದರು ಚಿಂತೆಯು || ಪೃಥ್ವಿಯೊಳಗೆ ಸತಿ ಕಡು ಚೆಲ್ವೆಯೂದರೆ ಮತಿ ಮೇರೆಯಿಲ್ಲದ ಮೋಹದ ಚಿಂತೆ ॥ ೧ ॥ ಮಕ್ಕಳಿಲ್ಲದ ಚಿಂತೆ ಮಕ್ಕಳಾದರು ಚಿಂತೆ | ಒಕ್ಕಾಳು ಹೊನ್ನು ಕೂಡುವ ಚಿಂತೆಯು ॥ ಅಕ್ಕರೆಯಿಂದಲಿ ಶುರುಗಳ ಕಾಯ್ದುರು | ಕಕ್ಕುಲತೆಯು ಬಿಟ್ಟು ಹೋಗದ ಚಿಂತೆ ॥ ೨ ॥ ಬಡವನಾದರು ಚಿಂತೆ ಬಲ್ಲಿದನಾದರು ಚಿಂತೆ | ಹಿಡಿಹೊನ್ನು ಕೈಯೊಳಾದರು ಚಿಂತೆಯು || ಪೊಡವಿಯೊಳಗೆ ನೆ ಪುರಂದರ ವಿಠಲನ | ಬಿಡದೆ ಧ್ಯಾನಿಸಿದರೆ ಚಿಂತೆ ನಿಶ್ಚಿಂತೆ ॥ ೩ ॥

ಇನ್ನೂ ಅನೇಕ ವಿಧಗಳಲ್ಲಿ ದಾಸರು ಚಿಂತೆಯ ಬಗ್ಗೆ ಚಿಂತನೆಯನ್ನು ಮಾಡಿದ್ದಾರೆ. ಏಳೆ ಚಿಂತಿಸುತಿದ್ದಿ ಕೋಕಿ ಮನವೆ; ಅಂತಕನ ದೂತರಿಗೆ ಕಂಚಿತ್ತು ದಯವಿಲ್ಲ, ಚಿಂತೆಯನು ಬಿಟ್ಟು ಶ್ರೀ ಹರಿಯ ನೆನೆ ಮನವೆ—ಇತ್ಯಾದಿ ಹೇಳಿದ ದಾಸರ ಕೊನೆಯ ನಿರ್ಧಾರವೇ ಭಗವಂತನನ್ನು ನೆನೆದವರಿಗೆ ನಿಶ್ಚಿಂತೆಯೆಂಬುದೇ ಅನಿಸುತ್ತದೆ, ಇಷ್ಟಿಗೆ ಚಿಂತೆಯ ಚಿಂತನೆಯನ್ನು ನಿಲ್ಲಿಸೋಣ.

ಬಾಪು ಜನಿಸಿದ ಪುಣ್ಯದಿನ

ಗಗನದಂಗದಲ್ಲಿ ಎನಿತು ತಾರೆಗಳೋ!
ಶಶಿಯೋವನಾನಂ ಬಂತು ಅದಕೆ ಪೆರ್ಮೆ!
ಕಣ್ಣಿನವ ಕಡಿಸಿಯಲ್ಲಿನಿತು ಮೊಗ್ಗುಗಳೋ!
ಹುಸಿಸುಳ್ಳು! ಹೂ ಒಂದೆ ಅದರ ಪೆರ್ಮೆ

ಬಾಪು ಹುಟ್ಟಿದ ದಿನವೆ, ಅವಾರ,
ಆ ಫಳಿಗೆ
ಭುವಿಗೆ ಬಿದ್ದವರಿನಿತೊ ಏನು
ಗೊತ್ತು?
ಬಾಪು ಓರ್ವನೆ ದಿನಕೆ ಧನ್ಯತೆಯ
ತಾನಿತ್ತ!
ಆ ದಿನದ ಆ ಹಿರಿಮೆ ಯಾರ
ಸ್ವತ್ತು?!

—ಹೊ. ಶಾ. ವೆಂಕಟೇಶಮೂರ್ತಿ.

ದೀಪಾವಳಿಯ
ಈ ಶುಭಮುಹೂರ್ತದಲ್ಲಿ—

ಹಸನ್ಮುಖಿಗಳಾದ ಕುಸುಮಕೋಮಲೆಯರ
ಮನೆಗೆ ಪ್ರೀತಿ ಮನಕ್ಕೆ ಶಾಂತಿ
ಮುಖಕ್ಕೆ ಕಾಂತಿಯನ್ನು
ತರುವ
ನೇತ್ರಾಕರ್ಷಕವಾದ
ನಮ್ಮ
ಕೈಮಗ್ಗದ ಸೀರೆಗಳನ್ನು
ಒದಗಿಸಲು ಸಂತೋಷ ಪಡುತ್ತೇವೆ.

ದಿ ಉಡುಪಿ ವೀವರ್ಸ್ ಕೋ-ಆಪರೇಟಿವ್
P&S ಸೊಸ್ಯಾಟಿ Ltd.
ಸೊಸ್ಯಾಟಿ ರಸ್ತೆ, ಉಡುಪಿ, ದ. ಕ.
Phone No. 187
ವಿಶೇಷ ಸೂಚನೆ:- 40, 60, 80, 100 ನಂಬ್ರಗಳಲ್ಲಿ ಹಚ್ಚ ಹೊಸ ಮಾದರಿಯ ಸೀರೆಗಳು ಚಿಲ್ಲರೆಯಾಗಿಯೂ ರವಿಂ ಆಗಿಯೂ ದೊರೆಯುತ್ತವೆ.

With best compliments
from
BALLAL
MOTOR SERVICE
Moodabidri--Mangalore

Hearty Deepavali Greetings

From

KAMAT HOTEL

Restaurant & Boarding

SHESHADRIPURAM, BANGALORE-20

ಅತ್ಯಲ್ಪ ಕಾಲದಲ್ಲಿ ಸರ್ವರ ಪ್ರೀತ್ಯಾದರಗಳಿಗೆ ಪಾತ್ರವಾಗಿ ಎಲ್ಲರಿಂದಲೂ ಪ್ರಶಂಸಿಸಲ್ಪಡುತ್ತಿರುವ—
ಇದೀಗ ಎರಡನೇ ವರ್ಷದಲ್ಲಿ ಪಾದಾರ್ಪಣ ಮಾಡುತ್ತಿರುವ ಸುಸಂದರ್ಭದಲ್ಲಿ

ದೀಪಾವಳಿಯ ಪರ್ವಕಾಲದಲ್ಲಿ—

ನಮ್ಮ ಅಪಾರ ಗ್ರಾಹಕರಿಗೆಲ್ಲಾ ಶುಭಾಶಯ ಸಲ್ಲಿಸುತ್ತೇವೆ

ಕಾಮತ್ ಹೊಟೆಲ್

ಶೇಷಾದ್ರಿಪುರಂ, ಬೆಂಗಳೂರು-20

ರುಚಿಕರ ತಿಂಡಿ ತಿನಸುಗಳು! ಶುಚಿಕರ ಪೇಯ ಪಾನೀಯಗಳು! ತೃಪ್ತಿಕರ ಸೌಕರ್ಯ ಸೌಲಭ್ಯಗಳು!

ವಿನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆಯಲ್ಲಿ ಪ್ರಗತಿ ಪಥದಲ್ಲಿ ನಡೆಯುತ್ತಿರುವ—

ಉತ್ತಮ ಫಲಾಹಾರ ಮತ್ತು ಭೋಜನ ಮಂದಿರ.

Phone: **29012**

R. B. Kamath
Proprietor

With best compliments

from

M. KRISHNA

Proprietor

Sree Krishna Motor Service,

HASSAN (MYSORE STATE)

PHONE 247

ನಲ್ಲೆ ನೀನಿಲ್ಲದಾಗ....?

ಅಂದು ನೀನೆನ್ನ ಬಳಿಯಿಂದ ಹೊರಟಾಗ–
'ತೌರೂರಿಗೊಮ್ಮೆನಾ
ಹೋಗಿ ಬರುತೇನೆ....'
—ಎಂದು ನೀ ನೈಯೂರದಿಂದ ನುಡಿದಾಗ!
ನನಗೇನೊ ಆಗಿತ್ತು
ಮರುಕ ತುಂಬಿತ್ತು.
ಆ ನೈಲಾನು ಸೀರೆಯುಟ್ಟು,
ಹೆಣೆಗೆ ಕುಂಕುಮದ ಹಿರಿಬೊಟ್ಟು!
ಕೈಯಲ್ಲಿ ನಿನ್ನೊ ಒಂದು ಪ್ಯಾಕೆಟ್ಟು.
—ಎರಡು ಜಿಡ!
ಅದನು ಜೋಡಿಸಿದಂತೆ ಜೋತಾಡಿಸಿದ
ಮಲ್ಲಿಗೆಯ ದಂಡೆ
ನಾ ನಿನ್ನ ಕಂಡೆ!
"ಆಹ! ತೌರೂರ ಪಯಣದಲಿ ನನ್ನವಳು–
ಎನಿತೊಂದ ಸಡಗರವ ತೋರುತಿಹಳು"
—ಎಂದು ಮನದಲ್ಲಿ ನೆನೆದುಕೊಂಡೆ
ಹೊರಟೆಲ್ಲ ರಡಿಯಾಗಿ ನಿಂದವಳೆ ನನ್ನು
ಕರೆದು ಕಣ್ಸನ್ನೆಯಲಿ ಒಳಗೆ ನಡೆದೆ
ಬಾಗಿಲೆಡೆ ನಿಂತು
'ಬೇಗ ಬರುವಿರಿ' ಎಂದು
ಶಲೆಯನಲ್ಲಾಡಿಸುತ ಯೈಯೂರದಿಂದ
ನುಡಿದೆ.
ಏನೊ ಎಂತೋ ಮನದಿ ಧೈರ್ಯ ನೂಡುತ
ನಿನಗೆ
'ಹೋಗಿ ಬಾ' ಎಂದು ಅನುಮತಿಯನಿತ್ತೆ

ಆದರೆ.....?
ಒಂದು ಎರಡು ಮೂರು ನಾಲ್ಕು!
ನಾಲ್ಕೇ ದಿನದಲ್ಲಿ ಸಾಕು ಸಾಕು!
ನೀನಿಲ್ಲದಂದು ನನಗೆಂಥ ಜೋಕ..?
ಒಡಿಯಿತು ವಿರಹವೇದನೆಯ ಸೀಕ!
ಊಟವೇ ಬೇಡವೆನಿಸುವಷ್ಟು
ಆಯ್ತು— ಜೇಜಾರ ನಿಜಕು!
ಮೂರು ಸಲ ಹೊರಟೆ ಆತ್ಮೀಯ ವನಿಗೆ
"ಕಾರಣವಿಲ್ಲದೆ
ಹೋದರದು ಅಪಮಾನ—'
—ಎಂದು ಸುಮ್ಮನಾದೆ
ಓ ನಲ್ಲೆ! ಇದೊ ನಿನಗೆ ಸವಿಯೋಲೆ
ನೀ ತೌರಿಗೈದಿದ ನೇಳೆ
ನಿನಗೆಂದು ಬರೆಯುತಿಹ ನಲ್ಲೆಯೋಲೆ
ಬಾಲೆ! ಕುಶಲವೇ ಕಾವ್ಯಲೋಲೆ?
ಕವಿತೆಯಲೆ ಬರೆದಿಹೆನು ಈ ಸಸ್ಯ
ವೊಲ್!
ಅಂದು ನಿನ್ನೊಡನೆ' ಹೋಗಿ ಬಾ,
ಎಂದವನೆ
ಇಂದು ನಿನ್ನೊಡನೆ "ಬೇಗ ಬಾ"
ಎನ್ನುನೆನು
ನಿನ್ನನ್ನು ಕರಕೊಂಡು ಬರಲು
ನಾನೆಂದು ಬರಬೇಕ. ಹೇಳ.!
ನೀನಿಲ್ಲದಾ ಬರಡು ಬಾಳು
ಬರಿಯ ಗೋಳು.
—ವೆಂಕಟರಾಜ ಪುಣಿಂಚತ್ತಾಯ.

ನಾಡವರು

ನಾಡವರೇ ನಿಜ ನಾಡಿಗರು,
ನಾಡನು ಬೆಳಗಿಸಿ ನಾಯಕರು ॥ಪ॥

ಧಾರಕ ಮೂತೆಯ ಬಂದನ
ಬಿಡಿಸಲು
ಬಾಳನೇ ಮರೆತು ನಡೆದಿಹರು
ವೀರರು, ಧೀರರು, ಶೂರರು,
ಯೋಧರು
ಇವರೇ ನಮ್ಮಯ ನಾಡವರು
॥೧॥

ದಕ್ಷಿಣ ಕನ್ನಡ ತಾಯ್ನಾಡಾದರು
ದೇಶದಿ ಶುಂಬಾ ಮೆರೆದಿಹರು
ಒಕ್ಕಲುತನವೇ ಸುಖದಾದಾರಿ
ಎನ್ನುತಲಿರುವರು ಜನತೆಯೊಳು ॥೨॥

ನಾಡಿನ ಶುಂಬಾ ನಾಡೋರಿ
ದ್ದರು
ಎಲ್ಲರು ತಮ್ಮಯ ಬಂಧುಗಳು
ಎಂಬಾ ಪ್ರೇಮವ ಬಳಸುತ
ಲಿರುವರು
ಸರುವ ನಾಡಿನ ಜನತೆಯೊಳು
॥೩॥

ಶಿಕ್ಷಣವೆಂಬ ಸಾಗರದೊಳಗೂ
ಶಿಕ್ಷಕರಿವರೇ ತಂಬಿಹರು
ತಮ್ಮಯ ಮಕ್ಕಳ ಬುದ್ಧಿಯ ವೃದ್ಧಿಗೆ
ಶಿಕ್ಷಣ ರಂಗಕೆ ಕಳುಹಿಹರು ॥೪॥

ಮಂಗಳೂರ ಕಡೆಗೆ ಬಂಟ್ವ
ಎಂ
ಜನರೊಳು ಹೊಗಳಿಸಿ ಕೊಂ
ಹ
ಕಾರ್ಕಳ ಕಡೆಗೂ ನಾಡ
ರೇ
ಕೆಚ್ಚೆದೆಯಿಂದಲಿ ಮೆರೆದಿ
॥೫

ಶಿಟ್ಟರು ಇವರೇ ನಾಯಕಂವರೇ
ಹೆಗ್ಗಡೆ ಇವರೂ ನಮ್ಮವರೇ
ಗಾಂವಕಾರ ಎಂಬವ ಗ್ರಾಮವನಾಳಿ
ನಮ್ಮಯ ನಾಡನರ್ ನಾಯಕರು

—ಶ್ರೀ. ನಾರಾಯಣ. ಮು
ನಾಯಕ, ತಲಗೇರಿ.ಜಲವಳ್ಳಿ(ಉ ಕ)

ಜೀವನವೆಂಬುದು ಆಕಾರವಿಲ್ಲದ ಚಿ
ಯಂತೆ. ಆದಕ್ಕೆ ರೂಪಕೊಟ್ಟು ಸುಂದ
ವೋ, ವಿಕಾರವೋ ಮಾಡಿಕೊಳ್ಳುವುದು ನ
ವನವನಿಗೆ ಸೇರಿದೆ.

o o o o

ನಿಷ್ಕಾಮ ಸೇವಾ ಭಾವನೆಯು ಮ
ನವನಲ್ಲಿ ಬೆಳಗುವ ದೈವೀ ಸಂಪತ್ತು.

o o o o

ಕಿರ್ಲೋಸ್ಕರ್

ಸಣ್ಣ ಹಿಡುವಳಿದಾರರಿಗೆ ಅನುಕೂಲವಾದ
ಪಂಪ್ ಸೆಟ್ಟುಗಳು



Most economical pumpset for small farms and Wells.

3 HP
WATER COOLED
DIESEL ENGINE
PUMPING SETS

AUTHORISED DISTRIBUTORS

ಮಂಗಳೂರು M. S. E. B. ಮತ್ತು ಬ್ರೋಕ್ ಡೆವಲಪ್‌ಮೆಂಟ್
ಆಫೀಸುಗಳಲ್ಲಿ ಕಿರ್ಲೋಸ್ಕರ್ ಪಂಪು ಸೆಟ್ಟುಗಳು
ಸುಲಭ ಕಂತುಗಳಲ್ಲಿ ದೊರಕುತ್ತವೆ.

ಕರ್ನಾಟಕ ಸೇಲ್ಸ್ & ಕೊ.,

Phone No. 3967.

ಮೈದಾನ್ ವೆಸ್ಟ್ ರೋಡ್, ಮಂಗಳೂರು–೧.

MODERN
GARAGE
UDIPI

With
Service Station
attached

Undertakes OVERHAULING & MAINTENANCE OF BENZ VEHICLES

By
Technically Qualified
Benz Experts

Phone { 65 / 234

Residence. 186

ಶ್ರೀ ಮಡಿಯಾಲ ನಾರಾಯಣ ಭಟ್ಟ

ನ್ಯಾಯ ಮತ್ತು ಅಹಿಂಸೆ

ಅಹಿಂಸೆ ಉತ್ತಮ ಆದರ್ಶ. ಆದರೆ ಪರಿಪೂರ್ಣವಾಗಿ ಬೇರೆ ಬೇರೆ. ನ್ಯಾಯ ಪ್ರಜ್ಞಾಹಾರ್ಯ—ಸಮಾಜ ಸ್ವಾಸ್ಥ್ಯಕ್ಕಾಗಿ. ನ್ಯಾಯ ನಿಷ್ಕರುಣಿಯಿಂದ ಲೇ ಮಾನವನ ಕಲ್ಯಾಣ, ರಾಷ್ಟ್ರದ ಪುರೋಗಮನ.

ವೈಯಕ್ತಿಕವಾದ ಮತ್ತು ಸಾಮೂಹಿಕವಾದ ಅನ್ಯಾಯ, ವಂಚನೆಗಳು ನಮ್ಮೆಲ್ಲರ ತಲೆ ಕೆಡಿಸುತ್ತಿರುವ ಕಾಲವಿದು. ಜಗತ್ತಿನಲ್ಲಿ ಈಗ ನ್ಯಾಯ ಮತ್ತು ಅಹಿಂಸೆ ಎಂಬ ಉದಾತ್ತ ತತ್ವಗಳನ್ನು ಇಂದಿನ ಸಮಾಜದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದರ ವಿವೇಚನೆಯನ್ನು ಪ್ರತಿಯೊಬ್ಬನೂ ಮಾಡುವುದು ಅತ್ಯವಶ್ಯಕವಿದೆ. ಇಲ್ಲವಾದರೆ ನಮ್ಮ ರಾಷ್ಟ್ರಕ್ಕೆ ಕೇಡು ಗಂಡಾಂತರವಿದೆ.

ನಮ್ಮ ಜನ ಜೀವನದಲ್ಲಿ, ನಮ್ಮ ಸಂಸ್ಕೃತಿಗನುಸಾರವಾಗಿ ವ್ಯಕ್ತಿಗು ಮತ್ತು ಸಮೂಹದ ಪವಿತ್ರ ಹಕ್ಕುಗಳನ್ನೂ, ಬಾಧ್ಯತೆಗಳನ್ನೂ ರಕ್ಷಿಸಲೋಸುಗ ನಾವೇ ನಮಗೆ ಹಾಕಿಕೊಂಡ, ಪರಂಪರಾಗತವಾಗಿ ನಡೆದು ಬಂದ ಮೂಲಭೂತ ನಿಯಮಗಳ ಸಾರವನ್ನೇ ನಾವು ಸರ್ವ ಸಾಮಾನ್ಯವಾಗಿ ನ್ಯಾಯವೆಂದು ಹೇಳುವುದು.

ಈ ನ್ಯಾಯವೆಂಬುದು ನಮ್ಮ ರಾಷ್ಟ್ರವನ್ನು ಸ್ಥಾಪನೆಗೊಳಗುವಾಗ ನಾವು ರಚಿಸಿಕೊಂಡ ಘಟನೆಯ ರೂಪದಲ್ಲಿಯೂ ಇದೆ; ನವ್ಯ ಸರಕಾರದ ಮೂಲಕವಾಗಿ ಅಂಗೀಕೃತವಾಗಿ ಬರಹ ಮೂಲಕವಾಗಿ ನಿಯಮ ಶಾಸನಗಳ ರೂಪದಲ್ಲಿಯೂ ಇದೆ. ಅಲ್ಲದೆ ಬರಹ ಮೂಲಕವಾದ ಯಾವ ದಾಖಲೆಯೂ ಇಲ್ಲದೆ, ಜನತೆಯ ಮನಸ್ಸು, ಬುದ್ಧಿಗಳಲ್ಲಿ ಅಚ್ಚೊತ್ತಿ ನಿಂತು, ಸಾಮಾನ್ಯವಾಗಿ ಪ್ರತಿಯೊಬ್ಬನೂ ಒಪ್ಪಲೇ ಬೇಕಾದ ಸೂಕ್ಷ್ಮ ನಿಯಮದ ರೂಪದಲ್ಲಿಯೂ ಇದೆ.

ನ್ಯಾಯಕ್ಕೆ ಎರಡು ಬದಿಗಳಿವೆ. ಒಂದು ಪ್ರಕಾಶದಲ್ಲಿಯೂ ಬದಲಾಗದಂತಹದ್ದು — ಬದಲಾಗ ಬಾರದಂತಹದ್ದು. ಇನ್ನೊಂದು, ಸಂದರ್ಭವನ್ನು ಸಾರವಾಗಿ ಬದಲಾಗುವಂತಹದ್ದು—ಇಲ್ಲವೇ ಬದಲಾಗಬೇಕಾದದ್ದು.

ಉದಾಹರಣೆಗೆ ಹೇಳುವುದಿದ್ದರೆ ಒಬ್ಬ ವ್ಯಕ್ತಿಯ ಮನೆಗೆ ದೊಂಕಿಯಿಡಬಾರದು; ಒಬ್ಬಳು ಸ್ತ್ರೀಯ ಮಾನವನ್ನು ಕೆಡಿಸಬಾರದು ಎಂಬುವೇ ನೋಡಲಾದವು ಶಾಶ್ವತಾಭಿವೃದ್ಧಿತವಾದ ನ್ಯಾಯ ಸೂತ್ರಗಳು. ಅವುಗಳನ್ನು ತಡೆಯಲು ಶಾಸನವಿರಲಿ, ಇಲ್ಲದಿರಲಿ—ಅವು ನ್ಯಾಯದಂಶಗಳೇ. ಅವುಗಳು ಬದಲಾಗುವಂತಿಲ್ಲ— ಬದಲಾಗಬೇಕಾಗಿಯೂ ಇಲ್ಲ.

ಆದರೆ ಇಂದಿನ ಆಧುನಿಕ ಸಮಾಜದ ವಿಕಾಸಕ್ಕಾಗಿಯೆಂದು ತಯಾರಿಸಿದ ಶಾಸನಗಳು ಬಹಳ ಇವೆ. ಸಮಾಜ, ದೇಶ ಬದಲಾಗುತ್ತಲೇ ಇದೆ. ಅಂತಹ ಬದಲಾವಣೆಯಿಂದ ಉದ್ಭವಿಸುವ ಹೊಸ ಸಮಸ್ಯೆಗಳ ಪರಿಹಾರಕ್ಕಾಗಿ ಇಲ್ಲವೇ ಹಿಂದೆ ಯೇ ಇದ್ದ ಸಮಸ್ಯೆಗಳನ್ನು ಹೊಸರೀತಿಯಲ್ಲಿ ಅಥವಾ ಹೆಚ್ಚು ಸಮರ್ಥವಾಗಿ ಬಗೆಹರಿಸುವುದಕ್ಕಾಗಿ ಶಾಸನಗಳನ್ನು ಒದಗಿಸಬೇಕಾಗಬಹುದು, ಹೊಸ ಶಾಸನಗಳನ್ನು ತಯಾರಿಸಬೇಕಾಗಲೂ ಬಹುದು. ಆದರೆ ಪ್ರಜಾಪ್ರಭುತ್ವಕ್ಕೆ ಒಪ್ಪುವಂತೆ ವ್ಯಕ್ತಿಯ ಮತ್ತು ದೇಶದ ಸರ್ವತೋಮುಖ ಪ್ರಗತಿಯಾಗುವಂತೆ ರಚಿಸಬಹುದಲಾವನೆಯನ್ನು ಕಾರ್ಯಗತ ಗೊಡಬೇಕಾಗುವುದು. ಇಂಥವುಗಳು ಬದಲಾಗತಕ್ಕ ನ್ಯಾಯದಂಶಗಳು.

ಹಿಂದೂ ಧರ್ಮದ ಮೂಲ ಸಿದ್ಧಾಂತ ಕೈಸಾರ ಅಹಿಂಸೆ ಎಂದರೆ ತನ್ನ ಸ್ವಾರ್ಥಕ್ಕಾಗಿ ಹಿಂಸೆ ಮಾಡಬಾರದು. ಎಂಬರ್ಥ "ಅಹಿಂಸಾಖರನೋಧರ್ಮ" ಎಂಬ ಮಹಾ ಸೂಕ್ಯವನ್ನು ಜಗತ್ತಿಗೆ ನೀಡಿದ ಮಹರ್ಷಿಗಳ ಕಾಲದಲ್ಲೇ ಕ್ಷತ್ರಿಯರು ಧರ್ಮ ಬದ್ಧವಾಗಿ ಯುದ್ಧ ಮಾಡಿ ತ್ತಿದ್ದರು ಮಹರ್ಷಿಗಳೂ ಅದಕ್ಕೆ ಬೆಂಬಲ ನೀಡುತ್ತಿದ್ದರೇ ವಿನಃ ವಿರೋಧಿಸಲಿಲ್ಲ.

ಸ್ವರಕ್ಷಣೆಗಾಗಿ, ಧರ್ಮ, ರಾಷ್ಟ್ರ, ಸ್ತ್ರೀಯರ ಮತ್ತು ಗೋ ಬ್ರಾಹ್ಮಣರ, ಹಾಗೂ ದೀನದಲಿತರ ರಕ್ಷಣೆಗಾಗಿ ಇತರರನ್ನು ದಂಡಿಸಬಹುದುಎಂಬುದ್ಧಾಂತವನ್ನು ಪ್ರಚಲಿತವಿತ್ತು. ಶ್ರೀ ಕೃಷ್ಣನೂ ಕುರುಕ್ಷೇತ್ರದಲ್ಲಿ ಧರ್ಮದ ಸಿವಿಂಗೆಗಾಗಿ ಯುದ್ಧ ಮಾಡು ಎಂದನೇ ವಿನಃ ಯುದ್ಧವನ್ನು ಬಿಡು ಎನ್ನಲಿಲ್ಲ. ಹೀಗಿರುತ್ತಾ ಒಂದೆ ತನ್ನ ಸ್ವಾರ್ಥಕ್ಕಾಗಿ ಇತರರಿಗೆ ತೋರುವ ಕ್ರೌರ್ಯವೇ ಹಿಂಸೆಯಂದೂ, ಧರ್ಮದ ನಿಯಮಕ್ಕೊಳಗಾಗಿ ರಕ್ಷಿಸುವುದು ದಂಡನೆಯೆನ್ನ ನೀಡುವುದು ಅಹಿಂಸೆಯೆಂದೂ ತಿಳಿಯಲ್ಪಟ್ಟಿತ್ತು.

ಆದರೆ ಭಗವಾನ್ ಬುದ್ಧನ ಕಾಲದಿಂದ ಅಹಿಂಸೆ ಎಂಬ ಪದಕ್ಕೆ ಹೊಸ ಅರ್ಥ, ಹೊಸ ವ್ಯಾಪ್ತಿ ಬಂತು. ಯಾವುದೇ ಕಾರಣಕ್ಕಾಗಿಯಾದರೂ ದಂಡನೆಯನ್ನೂ, ದೈಹಿಕ ನೋವನ್ನೂ ಕೊಡಲೇ ಬಾರದು. ವಿರೋಧಿಯು ನಮಗೆ ನೀಡುವ ನೋವನ್ನು ಸಹಿಸಿಕೊಂಡು ಪ್ರೇಮದ ನೆಲೆಯಲ್ಲಿ ಆತನ ಹೃದಯ ಪರಿವರ್ತನೆಗೆ ಯತ್ನಿಸುವುದೇ ಅಹಿಂಸೆ. ಇದಕ್ಕೆ ವಿರುದ್ಧವಾದ್ದಲ್ಲವೂ ಹಿಂಸೆ ಎಂಬರ್ಥವು ವಿಂಡಿಕಾಯಿಲ್ಲ ಎಂತು.

ಈ ಹೊಸ ಅರ್ಥವು ಮಾನವನ ಕಲ್ಪನೆಯಲ್ಲಿ ಅತಿ ಭವ್ಯವಾದುದು, ಉದಾತ್ತವಾದುದು, ಸುಂದರವಾದುದು. ಅಷ್ಟೇಕ ದೈಹಿಕವಾದುದು ಕೂಡಾ. ಏಕೆಂದರೆ ಅಂತಹ ಅಹಿಂಸೆಯು ಜೀವಂತವೇ ಪ್ರೇಮ. ಪ್ರೇಮ ಜೀವವೆಂಬ ಯಾಯ ಹೇಳಲು ಸಾಧ್ಯವಿದೆ?

ಆದರೆ ವ್ಯವಹಾರದಲ್ಲಿ ಬಹು ಸಂಖ್ಯಾಕರು ಅಂತಹ ಉದಾತ್ತ ಧ್ಯೇಯಕ್ಕೆ ಬಂದು ಮುಟ್ಟಿರುವುದಿಲ್ಲ. ಅವರಿಗೆ ಅದು ಅವ್ಯವಹಾರ್ಯವಾಗಿಯೇ ತೋರುವುದು. ಆದ್ದರಿಂದಲೇ ಭಗವಾನ್ ಬುದ್ಧನ ಅನುಯಾಯಿಗಳೆಂದು ತಿಳಿಸಿಕೊಳ್ಳುವ ಬೌದ್ಧರು ಇಂದು ಎಲ್ಲಾ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಆಚರಿಸುತ್ತಿಲ್ಲ. ಬದ್ಧರೇ ಆದ ಚೀನೀಯರಂತೂ ಎಷ್ಟರ ಮಟ್ಟಿಗೆ ಅಹಿಂಸೆಯಿಂದ ನಾವು ನೋಡಿರುವೆವು.

ಮಹಾತ್ಮಾ ಏಸು ಕ್ರಿಸ್ತರು ಕೂಡಾ ಅಹಿಂಸೆ ಎಂಬ ಪದವನ್ನು ಉಪಯೋಗಿಸದಿದ್ದರೂ ಅವರ ತತ್ವ ಸೂತ್ರಗಳಿಲ್ಲಿ ಭಗವಾನ್ ಬುದ್ಧನು ಪ್ರತಿಪಾದಿಸಿದ ರೀತಿಯ ಅಹಿಂಸೆಯು ಸ್ಪಷ್ಟವಾಗಿ ಪ್ರತಿಫಲಿಸಿದೆ.

ಇತ್ತೀಚೆಗೆ ಗಾಂಧೀಜಿಯವರ ಕಾಲದಲ್ಲಿ ಈ ಶಬ್ದವು ಪುನರುಜ್ಜೀವನ ಪಡೆದು ಭಗವಾನ್ ಬುದ್ಧನ ನಂತರ ಅಹಿಂಸೆ ಎಂಬ ಶಬ್ದವನ್ನು ಮಹಾತ್ಮಾ ಗಾಂಧೀಜಿಯವರಷ್ಟು ಪ್ರಯೋಗಿಸಿದವರು ಪ್ರಾಯಶಃ ಯಾರೂ ಇಲ್ಲವೆಂದರೆ ಅತಿಶಯೋಕ್ತಿಯಲ್ಲ.

ಗಾಂಧೀಜಿಯವರ ಅಹಿಂಸೆ ಎಂಬ ಪದಕ್ಕೆ ಹಿಂದೂ ಬೌದ್ಧ ಧರ್ಮಗಳಿಗಿಂತ ಇತರ ಧರ್ಮಗಳಿಗೆ ಸೇರಿದ ಭಗವಾನ್ ಬುದ್ಧನು ನೀಡಿದ ಅರ್ಥವನ್ನೇ ತೆಗೆದುಕೊಂಡಿದ್ದರೂ, ಆದರೂ ಅವರು ಕೆಲವೊಂದು ರೀತಿಯ ದೈಹಿಕ ನೋವನ್ನು ಅಹಿಂಸೆಯಿಂದೇ ಕರೆಯುತಿದ್ದರು. ಉದಾಹರಣೆಗೆ ದಿವ್ಯ ತೀರ್ಥ ಸುಧಾರಾಯುದ್ಧದಲ್ಲಿ ಪೋಲೀಸರು ಮಾಡಿದ ಯುದ್ಧವನ್ನವರು ಅಹಿಂಸೆಯೆಂದು ಸಾರಿದರು. ಕಾಶ್ಮೀರದಲ್ಲಿ ಭಾರತಕ್ಕೆ ಕೈಗೊಂಡ ಸೈನಿಕ ಕಾರ್ಯಾಚರಣೆಯನ್ನೂ ಅಹಿಂಸೆಯೆಂದು ಕರೆದರು. ಸ್ತ್ರೀಯರ ಮಾನ ರಕ್ಷಣೆಗಾಗಿ ಕತ್ತಿ ಹಿಡಿಯುವುದೂ ಅಹಿಂಸೆಯೆಂದರು.

ಅಂದರೆ ಅವರು ಉಪಯೋಗಿಸುತ್ತಿದ್ದ ಅಹಿಂಸೆ ಎಂಬ ಪದವು ಭಗವಾನ್ ಬುದ್ಧನ ಅರ್ಥವ್ಯಾಪ್ತಿಯಿಂದ ಸ್ವಲ್ಪ ಬೇರೆಯೂ ಆಗಿ, ಹಿಂದೂ ಧರ್ಮದ ಮೂಲ ಸಿದ್ಧಾಂತದ ಬಳಿ ಸಾರುತ್ತಿತ್ತು.

ಇದು ಹೇಗೂ ಇರಲಿ— ಅಹಿಂಸೆ ಎಂಬ ಪದಕ್ಕೆ ಇಂದು ಜನತೆಯು ಯಾವ ಅರ್ಥವನ್ನು ಕೊಟ್ಟಿದೆ ಎಂಬುದು ಪ್ರಾಮುಖ್ಯ ವಿಚಾರ. ಮಾನವ ಸಂದರ್ಭದಲ್ಲಿ ಯಾವ ಎದುರಾಳಿಗೆ ದೈಹಿಕ ಯಾ ಮಾನಸಿಕ ನೋವನ್ನು ನೀಡದಿರುವುದೇ ಅಹಿಂಸೆ ಎಂಬುದಾಗಿ ಜನಸಾಮಾನ್ಯರು ಇಂದು ತಿಳಿಯುತ್ತಿರಲಿ ಚೈನೀಯರೂ ಕೂಡಾ ಹೀಗೆಯೇ ಭಾವಿಸುತ್ತಿರಲಿ

ಈ ರೀತಿಯ ಇವರ ಅರ್ಥದ ದೃಷ್ಟಿಯಿಂದ ನ್ಯಾಯ ಮತ್ತು ಅಹಿಂಸೆ ಎಂಬ ತತ್ವಗಳೊಳಗಿನ ಸಂಬಂಧವನ್ನು ನಾವು ವಿವೇಚಿಸುವುದು ಅಗತ್ಯವಿದೆ.

"ಇತರರಿಗೆ ಒಂದನ್ನು ಕೊಡಬೇಡ; ಹಿಂಸೆ ಮಾಡಬೇಡ, ದ್ರೋಹ ಬಗೆಯಬೇಡ. ಇತರರು ನಿನಗೆ ಏನಾದರೂ ಒಳ್ಳೆಯದನ್ನು ನೀಡಿದರೆ ದ್ರೋಹವನ್ನವಗಿದ. ಕ್ಷಾಪ್ರಭದ್ಧವಾಗಿ ನೀನೆ ದನ್ನ ಶಿಷ್ಟಿಸಬಹುದು" ಇದು ನ್ಯಾಯದ ಸೂತ್ರ. "ಇತರರಿಗೆ ತೊಂದರೆ ಕೊಡಬೇಡ, ಹಿಂಸೆ ಕೊಡಬೇಡ; ದ್ರೋಹ ಮಾಡಬೇಡ. ಸಕಲ ಜೀವಿಗಳನ್ನೂ ಪ್ರೇಮದಿಂದ ಕಾಣು ಇತರರು ನಿನಗೆ ಕಷ್ಟಕೊಟ್ಟರೆ ಅವನ್ನು ತಾಳಿಕೊಂಡು, ಪ್ರೇಮದಿಂದ ಆತನ ಹೃದಯ ಪರಿವರ್ತನೆಯೊಗುವಂತೆ ನೋಡು" ಇದು ಇಂದಿನ ಅರ್ಥವ್ಯಾಪ್ತಿಯ ಅಹಿಂಸೆಯ ಸೂತ್ರ. ಆದರೆ ಅಹಿಂಸೆ ಎಂಬ ಶಬ್ದದ ಮೂಲ ಅರ್ಥವು ನ್ಯಾಯದ ಸೂತ್ರಕ್ಕನುಸಾರವೇ ಇತ್ತು. ಇಂದು ಸೂತ್ರ ಅದಕ್ಕೆ ಈ ಅರ್ಥ ಬಂದಿದೆ. ಹೇಗೂ ಇರಲಿ.

ಅಹಿಂಸೆ ಎಂಬ ಪದಕ್ಕೆ ಈ ಅರ್ಥ ಬಂದುದು ಮತ್ತು ಆ ರೀತಿಯನ್ನು ಎಲ್ಲರೂ ಸ್ವೀಕರಿಸುವಂತಾದ್ದು ಒಂದು ಭವ್ಯವಾದ ಕಲ್ಪನೆಯಾಗಿದೆ ಉತ್ಕೃಷ್ಟವೂ ನಲವಾಯಕವೂ ಆಗಿದೆ. ಆದರೆ ಮಾನವ್ಯಪ್ರೇರಿತ ವಿಷಯವಾದರೆ ಅಹಿಂಸೆಯು ಪ್ರಾಯಶಃ ನ್ನು ಸಮರ್ಥವಾಗಿಲ್ಲ.

ಮಹಾತ್ಮಾ ಗಾಂಧೀಜಿಯವರ ಮೇಲಿನ ಅಭಿಮಾನದಿಂದ ಅಹಿಂಸಾ ತತ್ವವನ್ನು ಒಪ್ಪಿಕೊಂಡವರು, ರಕ್ಷಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳಲಿ, ಬಿಡಲಿ—ರಾಷ್ಟ್ರೀಯ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳುವ ಯತ್ನವನ್ನು ಮಾಡತ್ತಲಾಗಿಲ್ಲ.

ಆದ್ದರಿಂದಲೇ ಆ ತತ್ವಕ್ಕೆ ಬರುವ ಸಾಂಕೇತಿಕ ಜನ ಬೆಂಬಲಗಳಿಗಾಗಿ ನ್ಯಾಯವೆಂಬ ಸತ್ಯವನ್ನಾದರೂ ಎಲ್ಲಾ ಕಡ್ಡಾಯವಾಗಿ ಆಚರಿಸುವಂತೆ ಮಾಡಲು ಆಜ್ಞಾಪಿಸುವಂತೆ ನಾಡುವುದೂ ಅನಿವಾರ್ಯವಾಗಿದೆ.

ನಿಜವಾಗಿ ನ್ಯಾಯವೆಂಬುದೂ ವನ್ನು ನಾವು ಒಪ್ಪಿಕೊಂಡಲ್ಲಿಂದ ಕಾಡು ಜನಸ್ಥಿತಿಯಿಂದ ನಾಗು ಜನರ ಸ್ಥಿತಿಗೆ ಒಂದು ಬುದ್ಧಿ ಸಮಾಜವಾಗಿನ್ನು ಸಾಗುತ್ತಿರುವುದೆಂದು ಕಾಣಬಹುದು. ನ್ಯಾಯವನ್ನು ಕಳ್ಳ ಪಾಕಿದೊಡನೆಯೇ ಸಾಮಾಜಿಕ ಜೀವನದಲ್ಲಿ ಅನಿವಾರ್ಯವಾಗಿ ಅಸಮಾಧಾನವೆಂಬುದು ಮೂಲಭೂತವಾದದ್ದು. ಆದರೆ ಸಲ್ಪದಲೇ ಬೇಕಾದ ಕನಿಷ್ಠ ಪ್ರಮಾಣ. ಪ್ರಜಾಪ್ರಭುತ್ವದಲ್ಲಿ ಉಳಿಸಬೇಕಾದ ಬೆಳೆಸಬೇಕಾದ ಅಂಶ. ಇಂದು ಅಹಿಂಸೆಯ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಅನ್ಯಾಯವನ್ನು ಸಹಿಸಿಕೊಳ್ಳುವುದು ಕೂಡಾ ಹಿಂಸೆಯೇ ಆಗಿದೆ. ಅನ್ಯಾಯವನ್ನು ಸಹಿಸಿಕೊಳ್ಳುವುದು ಅನ್ಯಾಯವನ್ನು ಪೋಷಿಸಿದಂತ

ಮೂಲ:
ಶ್ರೀ ರಾಮಸಿಂಹ ರಾವಲ್:

ಅನು:
ಶ್ರೀ ಶಿಮುಂಜೆ ಪರಾರಿ, ಮುಂಬಯಿ.

ನೇತಾಜಿಯ ನೆನಹು

ಆಜಾದ್ ಹಿಂದ್ ಸೇನೆಯ ಪ್ರಥಮ ಅಂದೋಲನದಲ್ಲಿ ಭಾಗವಹಿಸಿ, ಭಾರತೀಯ ಯುವಕರ ಆರಾಧ್ಯ ನಾಯಕ ನೇತಾಜಿ ಸುಭಾಸ್ ಚಂದ್ರ ಭೋಸ್ ಅವರೊಂದಿಗೆ ದುಡಿಯುವ ಸುಸಂದರ್ಭ ಲಭಿಸಿದ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ರಾಮಸಿಂಹ ರಾವಲ್ ಒಬ್ಬರು. ಅಂದಿನ ಸಂದಿಗ್ಧ ಸಮಯದಲ್ಲಿ ನೇತಾಜಿಯವರ ಜೊತೆಗೆ ದುಡಿಯುವುದು ಒಂದು ಗೌರವವಾಗಿತ್ತು. ಅಂತೆಯೇ ಜೀವನದ ಒಂದು ಮಹಾನ್ ಅನುಭವವಾಗಿತ್ತು. ಅವರ ಕೆಲವು ನೆನಪುಗಳನ್ನು ಇಲ್ಲಿ ಮೂಡಿಕೊಳ್ಳಬಹುದು.

ಒಮ್ಮೆ ನೇತಾಜಿ ಅವರು ಬೆಂಕಾಕ್‌ನ ಕುಪ್ರಸಿದ್ಧ ಹೊಟೇಲು 'ಟ್ರೈಕೋಡೋರೋ'ದಲ್ಲಿ ಒಂದು ಪತ್ರಿಕಾ ಪರಿಷತ್ತು ಕರೆದು, ತಮ್ಮ ಮುಂದಿನ ಕಾರ್ಯಕ್ರಮಗಳ ವಿಶ್ಲೇಷಣೆ ಗೈದರು. ಈ ಸಮ್ಮೇಳನಕ್ಕೆ ಭಾರತ, ಥೈಲೆಂಡ್, ಜರ್ಮನಿ, ಜಪಾನ್ ಮತ್ತು ಪಿಲಿಫೈನ್ಸ್ ದೇಶಗಳ ಹಲವಾರು ಪತ್ರಿಕಾ ವರದಿಗಾರರು ಆಗಮಿಸಿದ್ದರು. ಎಲ್ಲರೂ ನೇತಾಜಿಯವರೊಡನೆ ಒಂದಲ್ಲ ಒಂದು ವಿಷಯದ ಬಗ್ಗೆ ವಿವರಣೆಯನ್ನು ಕೇಳುತ್ತಿದ್ದರು.

ಜರ್ಮನ್ ನ್ಯೂಸ್ ಏಜೆನ್ಸಿಯ ಜಗತ್ಪ್ರಸಿದ್ಧ ವರದಿಗಾರರಿಸಿದ ಶ್ರೀ ವಾಲ್ಟರ್ ಮೇನುರ್ ಅವರು ನೇತಾಜಿಯವರೊಂದಿಗೆ ಮಾತಾಡುತ್ತಾ — "ಯುವಕ ಎಕ್ಸಿಲೆನ್ಸಿ, ಅಂಗ್ಲರನ್ನು ಹೊಡೆದೋಡಿಸಿದ ಬಳಿಕ ಭಾರತವನ್ನು ತಾವು ಯಾವ ಶಾಸನ ಪ್ರಣಾಳಿಕೆಯಲ್ಲಿ ಆಳಬೇಕೆಂದು ನಿರ್ಧರಿಸಿರುವಿರಿ? ಎಂದು ಪ್ರಶ್ನಿಸಿದರು.

ಯಾವುದರಿಂದ ಭಾರತದ ಸ್ವಾತಂತ್ರ್ಯ ಸ್ಥಿರ ಹಾಗೂ ಸುರಕ್ಷಿತವಾಗಿರುವುದೋ ಯಾವುದರಿಂದ ಭಾರತೀಯ ಜನತೆಯ ಜೀವನ ಮಟ್ಟ ಮೇಲೇರುವುದೋ ಅಂತಹ ಪ್ರಣಾಳಿಕೆಯನ್ನು ನಾವು ಅನುಸರಿಸುತ್ತೇವೆ— ಎಂದು ಉತ್ತರವಿತ್ತರು ನೇತಾಜಿ.

ಅಂದರೆ, ನನ್ನ ಅಭಿಪ್ರಾಯದಲ್ಲಿ ಪ್ರಾಯಶಃ ತಾವು ಪ್ರಜಾಪ್ರಭುತ್ವವನ್ನೇ ಅವಲಂಬಿಸುತ್ತೀರಿ ಎಂದು ಕಾಣುತ್ತದೆ— ಎಂದು ತನ್ನ ಮೂಕತನ್ನು ಮುಂದುವರಿಸಿದರು ಶ್ರೀ ವಾಲ್ಟರ್ ಮೇಯರ್.

'ಇಲ್ಲ.'

'ಅಂದರೆ ತಾವು ಕಮ್ಯೂನಿಜಂ ಅಥವಾ ಸೋಶಿಯಲಿಜಂನ್ನು ಅವಲಂಬಿಸುವಿರಾ?'

"ಇಲ್ಲ"

ಈ ಉತ್ತರದಿಂದಂತೂ ವಾಲ್ಟರ್ ಜರುಗಡಿಬಿಡಿ ಯಾದರು. 'ಅಥವಾ ನಿಮಗೆ ಫ್ಯಾಸಿಜಂ ಅಥವಾ ನಾಝಿಸಂಗಳಲ್ಲಿ ಆಸಕ್ತಿಯದೆಯೇನೋ?"

"ಇಲ್ಲ" ನೇತಾಜಿಯ ಈ ಸರಳ ಉತ್ತರದಿಂದ ವಾಲ್ಟರ್ ಮತ್ತಷ್ಟು ಗಡಿಬಿಡಿ ಯಾದರು. ಅವರು ವಿಚಿತ್ರ ಕುತೂಹಲದಿಂದ ನೇತಾಜಿಯವರನ್ನು ದಿಟ್ಟಿಸುತ್ತಾ "ಹಾಗಾದರೆ..." ಎಂದು ತನ್ನ ಮೂಕತನ್ನು ಅಪೂರ್ಣವಾಗಿಯೇ ನಿಲ್ಲಿಸಿದರು.

ಈ ಬಾರಿ ಅವರು ತನ್ನ ಮೂಕತನ್ನು ಮುಂದುವರಿಸುವುದಕ್ಕೆ ಮುಂಚಿತವಾಗಿಯೇ ನೇತಾಜಿಯವರು— 'ನಾನು ಯಾವ ಶಾಸನ ಪ್ರಣಾಳಿಕೆಯನ್ನು ಜಾರಿಗೆ ತರುವೆನೋ ಅದರ ಹೆಸರೇನು ಎಂಬುದನ್ನು ಭಾರತೀಯ ಜನತೆಯೇ ನಿರ್ಧರಿಸಬೇಕು. ಅದರ ಈ ಪ್ರಣಾಳಿಕೆಗನುಸಾರವಾಗಿ ಭಾರತೀಯ ಜನರು ಸ್ವತಂತ್ರರಾಗಿರುತ್ತಾರೆ. ಹಾಗೂ ಅವರ ಅನ್ನ ಬಟ್ಟೆ ಮತ್ತು ವಸತಿಯ ಸಂಕಟಗಳೆಲ್ಲವೂ ನಿರ್ನಾಮವಾಗುತ್ತದೆ. ಅವರು ಸುಖದ ಅನುಭವವನ್ನು ಪಡೆಯುತ್ತಾರೆ. ಅಷ್ಟು ಮಾತ್ರ ನನಗೆ ಗೊತ್ತು. ಈ ಪ್ರಣಾಳಿಕೆಯನ್ನು ತಾವು ಯಾವುದೇ ಹೆಸರಿಂದ ಕರೆಯಬಹುದು. ಅಷ್ಟು ಮಾತ್ರವಲ್ಲ ತಾವು ಈ ಶಾಸನ ಪ್ರಣಾಳಿಕೆಯನ್ನು ಯಾವುದಾದರೂ ಒಂದು

(ಇಪ್ಪತ್ತೈದನೇ ಪುಟ ನೋಡಿರಿ)

ಒಮ್ಮೊಮ್ಮೆ ಅಕ್ಟೋಬರ್ ತಿಂಗಳ ಎಂಡನೇ ತಾರೀಕಿನಂದು ನೇತಾಜಿಯವರು ಥೈಲೆಂಡಿನ ರಾಜಧಾನಿಯಾದ ಬೆಂಕಾಕ್‌ನಲ್ಲಿದ್ದರು. ಆಜಾದ್ ಹಿಂದ್ ಸರಕಾರಿನ ಅಧಿಕಾರಿಗಳು ನೇತಾಜಿಯವರ ಸ್ವಾಗತ ಮಾಡಲು ಮಹಾತ್ಮಾ ಗಾಂಧೀಜಿಯವರ ಕಟ್ಟು ಹಬ್ಬದ ಆಚರಣೆಗಾಗಿ ನಗರದ ವಿಶಾಲ ಭವನವೊಂದರಲ್ಲಿ ಸಭೆ ಸೇರಿದ್ದರು. ಮಧ್ಯಾಹ್ನ ಹತ್ತು ಗಂಟೆಗೆ ಕಾರ್ಯಕ್ರಮವು ಆರಂಭವಾಯಿತು.

ನೇತಾಜಿಯವರು ಸೈನಿಕ ಸಮವಸ್ತ್ರದಲ್ಲಿ ಅಲ್ಲಿಗೆ ಆಗಮಿಸಿದರು; ಸಭೆಯು ಉತ್ಸಾಹ ಮತ್ತು ಗೌರವಾದರಗಳಿಂದ ಅವರನ್ನು ಸ್ವಾಗತಿಸಿತು.

ನೇತಾಜಿಯವರು ತನ್ನ ಭಾಷಣವನ್ನು ಆರಂಭಿಸಿದರು. ಭಾರತದ ಇತಿಹಾಸವನ್ನು ಅವರು ಸಂಕ್ಷೇಪವಾಗಿ, ತಿಳಿಸಿದರು, ಪ್ಲಾಸಿಯ ಕದನದ ಕಥೆ ಹೇಳಿದರು, ಸ್ವಾತಂತ್ರ್ಯದ ಸಶಸ್ತ್ರ ಕ್ರಾಂತಿವೀರರ ರೋಮಾಂಚಕ ಘಟನೆಗಳನ್ನು ವಿವರಿಸಿದರು, 1857ರ ಮಹಾಕ್ರಾಂತಿಯ ಸುದ್ದಿಯೂ ಆಯಿತು, ಗೆದರ್ ಪಾರ್ಟಿಯ ಕಥೆಯೂ ಆಯಿತು, ಈ ರೀತಿಯಲ್ಲಿ ಅರ್ಧ ಗಂಟೆಯ ಕಾಲ ಫೈನ ಗಂಭೀರ ವಾಣಿ ಮೊಳಗಿತು. ಶ್ರೋತೃಗಣ ಮಂತ್ರಮುಗ್ಧವಾದಂತಿತ್ತು. ಆದರೂ ಕೆಲವು ಮಂದಿಗೆ, ಯಾರ ಹುಟ್ಟು ಹೆಬ್ಬವನ್ನಿಂದು ಆಚರಿಸಲು ನಾವು ನಿರ್ಧರಿಸಿದ್ದೇವೆಯೋ ಆ ಮಹಾ ಪುರುಷನ ಉಲ್ಲೇಖ ಇನ್ನೂ ಏಕೆ ಆಗಿಲ್ಲ? ಎಂದು ವಿಚಿತ್ರ ಕುತೂಹಲ ಉಂಟಾಗಿತ್ತು.

ಒಮ್ಮಿಂದೊಮ್ಮೆಲೆ ಅವರ ಭಾಷಣದ ಮೋಡಿ ಬದಲಾಯಿತು. 1914ರ ಯುದ್ಧದ ಘಟನೆಯ ವಿವರಣೆಯಾಯಿತು. ಯುದ್ಧಾಗ್ನಿಯಲ್ಲಿ ಭಾರತವನ್ನು ಬಲಿಗೊಡಲು ಆಂಗ್ಲೇಯರಿತ್ತ ಬಗೆಬಗೆಯ ಪ್ರಲೋಭನೆಗಳ ಉಲ್ಲೇಖವಾಯಿತು. ತನ್ನ ಮೌನವನ್ನು ಮುಂದುವರಿಸುತ್ತಾ ಅವರು—"ಆದರೆ, ಆನಂತರ ಆಂಗ್ಲರು ಗೈದ ವಿಶ್ವಾಸಘಾತ, 'ಜಾಲಿಯನ್‌ವಾಲಾ ಬಾಗ್'ನಲ್ಲಿ ಪ್ರಕಟವಾಯಿತು. ಕರಾಳ ಕತ್ತಲೆಯಲ್ಲಿ ಭಾರತವು ಕಂಗಾಲಾಗಿದ್ದ ಸಮಯ ಅದು. ನಾವು ಏನು ಮಾಡಬೇಕು? ಎಂಬುದೇ ತಿಳಿಯದೆ ಭಾರತೀಯರು ದಿಬ್ಭ್ರಾಂತರಾಗಿದ್ದರು. ಈ ವಿಪತ್ತಿನ ಸಮಯದಲ್ಲಿ ಭಾರತೀಯ ರಾಜಕೀಯ ಧೀದಿಕೆಯ ಮೇಲೆ ಕಾಣಿಸಿಕೊಂಡ ಮಹಾ ಪುರುಷನೇ ಮಹಾತ್ಮಾ ಗಾಂಧೀ. ಸತ್ಯಾಗ್ರಹ ಎಂಬ ನವೀನ ಅಸ್ತ್ರದಿಂದ ಅವರು ಭಾರತೀಯರ ಸಂರಕ್ಷಣೆ ಗೈದರು, ಬ್ರಿಟಿಷ್ ಸರಕಾರದ ಅಡಿಗಲ್ಲನ್ನೇ ಅವರು ಹಿಡಿದಲುಗಿಸಿ ಬಿಟ್ಟರು." ಸ್ವ. ಜನತೆ ಸುದೀರ್ಘ ಕಾಲ ಜಪ್ಪಾಳೆ ಬಡಿದು ತನ್ನ ಆನಂದವನ್ನು ಪ್ರಕಟಿಸಿತು. ಆನಂತರ ನೇತಾಜಿ ತಮ್ಮ ಮೌನವನ್ನು ಮುಂದುವರಿಸಿದರು.— "ಒಂದೊಮ್ಮೆ ಗಾಂಧೀಜಿಯವರು ತಿರಿಗಿರುತ್ತಿದ್ದರೆ, ಇಂದು ಭಾರತದಲ್ಲಿ ಅಂಧಕಾರದ ರಾಜ್ಯವಿರುತಿತ್ತು. ದೇಶಕ್ಕಾಗಿ ಹೋರಾಡುವ ಹಾಗೂ ಬಲಿದಾನವಾಗುವ ಅಮೂಲ್ಯ ಪಾಠ ನಮಗೆ ಅವರಿಂದಲೇ ದೊರೆಯಿತು; ಇಂದು ಭಾರತ ತನ್ನ ಸ್ವಾತಂತ್ರ್ಯ ಮಂದಿರದ ಪಾವಟಿಗೆಗಳ ಮೇಲೆ ನಿಂತಿದ್ದರೆ ಅದಕ್ಕೆ ಗಾಂಧೀಜಿಯವರೇ ಕಾರಣ!

ಂ ಂ ಂ

ನಾನು ಆಜಾದ್ ಹಿಂದ್ ಸೇನೆಯ ಬೆಂಕಾಕ್ ರೇಡಿಯೋದ 'ಸ್ಪೇಶನ್ ಡೈರೆಕ್ಟರ್' ಆಗಿದ್ದ ಸಮಯದ ಒಂದುಘಟನೆ ಈಗಲೂ ನನ್ನ ಕಣ್ಣಮುಂದೆ ನಡೆದಂತಿದೆ. ಒಂದು ದಿನ ಮಧ್ಯಾಹ್ನ ಸುಮಾರು ಎರಡು ಗಂಟೆಯ ಹೊತ್ತಿಗೆ ನೇತಾಜಿಯವರ ಸೆಕ್ರೆಟರಿಯವರು ಟೆಲಿಫೋನಿನಲ್ಲಿ ನನಗೆ— "ಇವತ್ತು ನಿಮ್ಮ ರೇಡಿಯೋ ಮುಖಾಂತರ ಮಹಾ ಮಾನ್ಯ ನೇತಾಜಿಯವರ ಒಂದು ಸಂದೇಶ ಪ್ರಸಾರವಾಗಲಿದೆ." ಎಂದು ಸೂಚಿಸಿದರು.

'ಸ್ವಯಂ ನೇತಾಜಿಯವರೇ ಬ್ರಾಡ್‌ಕಾಸ್ಟ್ ಮಾಡುತ್ತಾರೆಯೇ?' ಎಂದು ನಾನು ವಿಚಾರಿಸಿದಾಗ 'ಇಲ್ಲ, ನೀವು ಆ ಸಂದೇಶವನ್ನು ಇಲ್ಲಿಂದ ತರಿಸಿ ಕೊಳ್ಳಬೇಕು.' ಎಂದು ಉತ್ತರ ಬಂತು.

ಪ್ರತಿ ದಿನ ರಾತ್ರಿ 8ರಿಂದ 10ರ ತನಕ ನಾವು ಭಾರತೀಯ ಜನತೆಗಾಗಿ ವಿಶೇಷ ಕಾರ್ಯಕ್ರಮವನ್ನು ಪ್ರಸಾರಿಸುತ್ತಿದ್ದೆವು ರಾತ್ರಿ ಎಂಟುಗಂಟೆಗೆ ಸರಿಯಾಗಿ ರಾಷ್ಟ್ರಗೀತೆಯೊಯಿತು. ಆನಂತರ ಇಂಗ್ಲಿಷಿನಲ್ಲಿ ಸುದ್ದಿ ಪ್ರಸಾರವಾಯಿತು. ಆ ಬಳಿಕ ನಾನು ನೇತಾಜಿಯವರ ವಿಶೇಷ ಸಂದೇಶವನ್ನು ಪ್ರಸಾರ ಗೈಯಲು ಸಿದ್ಧನಾಗುತ್ತಿದ್ದೆ ಅಷ್ಟರಲ್ಲಿ ನನ್ನ ಸಹಕಾರಿಯೊಬ್ಬನು ಅವಸರವಸರವಾಗಿ ಸ್ಟೇಶನಿನೊಳಗೆ ಬಂದು, ನೇತಾಜಿಯವರು ಬಂದು ಹೊರಗೆ ನಿಂತಿದ್ದಾರೆ. ತಮ್ಮ ಸಂದೇಶವನ್ನು ಅವರೇ ಬ್ರಾಡ್‌ಕಾಸ್ಟ್ ಮಾಡುವರಂತೆ ಎಂದು ಬರೆದು ತೋರಿಸಿದನು. ಪಕ್ಕದ ಕನ್ನಡಿಯ ಬಾಗಿಲಿಂದನಾನುಹೊರಗೆ ನೋಡಿದೆ, ನೇತಾಜಿನಿಂತಿದ್ದರು. ನಾನು ನನ್ನ ಘೋಷಣೆಯನ್ನು ಹಾಗೇ ಮುಂದುವರಿಸುತ್ತಾ—ಭಾರತದಲ್ಲಿರುವ ನಮ್ಮ ಸೋದರ ಸೋದರಿಯರಿಗಾಗಿ ಒಂದು ವಿಶೇಷ ಸೂಚನೆ ಆಜಾದ್ ಹಿಂದ್ ಸೇನೆಯು ಯಾವುದೋ ರೇಡಿಯೋ ಸ್ಟೇಶನಿನಿಂದ ಸ್ವಯಂ ನೇತಾಜಿ ಸುಭಾಸ್ ಚಂದ್ರ ಭೋಸ್ ಅವರು ಒಂದು ವಿಶೇಷ ಸಂದೇಶವನ್ನು ಪ್ರಸಾರ ಗೈಯ್ಯುತ್ತಿದ್ದಾರೆಂದು ಇದೀಗ ವರದಿ ಬಂದಿದೆ. ಇನ್ನು ಕೆಲವೇ ಕ್ಷಣಗಳಲ್ಲಿ ನಾವು ಇದೇ ಸಂದೇಶವನ್ನು ಸುನರ್ ಪ್ರಸಾರ ಮಾಡಲಿರುವೆವು. ನೇತಾಜಿಯ ಸ್ವರ ಕೇಳಲು ಸಿದ್ಧರಾಗಿರಿ.

ರೇಡಿಯೋ ಸ್ಟೇಶನಿನ ಹೊರಗಿದ್ದ ರಿಸೀವರಿನಲ್ಲಿ ನೇತಾಜಿಯವರು ನಾನು ಮಾತಾಡುತ್ತಿದ್ದುದನ್ನು ಕೇಳುತ್ತಾ ನಿಂತಿದ್ದರು. ನಾನು ಅವರನ್ನು ಗಮನಿಸುತ್ತಲೇ ಇದ್ದೆ. ಅವರು ಮುಗುಳ್ನಗುತ್ತಿದ್ದರು. ನಾನು ಸ್ಟೇಶನಿನಿಂದ ಹೊರಬರುತ್ತಲೇ ಅವರು ನನ್ನೊಂದಿಗೆ—"ನೀವು ಹಾಗೆ ಏಕೆ ಹೇಳಿದಿರಿ?" ಎಂದು ಪ್ರಶ್ನಿಸಿದರು. ಕೂಡಲೇ ನಾನು ಸೆಲ್ಯೂಟ್ ಮಾಡಿ (ವಂದಿಸಿ)—"ನೀವು ಎಲ್ಲರುವಿರಿ ಎಂಬುದು ಶತ್ರುಗಳಿಗೆ ತಿಳಿಯದಿರಲಿ ಎಂಬುದಕ್ಕಾಗಿಯೇ ನಾನು ಹಾಗೆ ಪ್ರಕಟಣೆ ಗೈದೆ." ಎಂದೆನು.

ಅವರು ಮಂದಹಾಸ ಬೀರಿ—"ಯೂ ಮೇನ್, ನನ್ನ ಶರೀರವನ್ನು ಪ್ರವೇಶಿಸಬೇಕಾದ ಬುಲೆಟ್ (ಗುಂಡು) ಇನ್ನೂ ತಯಾರಾಗಿಲ್ಲ." ಎಂದು ನುಡಿದು ನೆಟ್ಟಗೆ ಸ್ಟೇಶನ್ನು ಪ್ರವೇಶಿಸಿದರು.

ಂ ಂ ಂ ಂ

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ನಾ ಕಂಡಂತೆ 'ನಾವುಜಿರೆ'

— ಲೇಖಕರು
'ತ್ರಿನಯನ'

ಸ್ವಯಂ ನಿರ್ಮಿತ ವ್ಯಕ್ತಿಯೊಂದಿಗೆ ಉದಯೋನ್ಮುಖ ಲೇಖಕರಾಗಿ ಮುಂದು ಬರುತ್ತಿರುವ ಶ್ರೀ 'ನಾವುಜಿರೆ'ಯವರ ಪರಿಚಯವನ್ನು ಶ್ರೀ 'ತ್ರಿನಯನ'ರು ಮಾಡಿಕೊಟ್ಟಿದ್ದಾರೆ.

'ನವಯುಗ', 'ನವಭಾರತ' ಪತ್ರಿಕೆಗಳಲ್ಲಿ 'ನಾವುಜಿರೆ'ಯವರ ಲೇಖನಗಳನ್ನು ಕಂಡು ಮೆಚ್ಚಿದವರು ಬಹುಮಂದಿ ಇರುವರು. ಇತ್ತೀಚೆಗೆ 'ನವಭಾರತ'ದ ಮೂಲಕವೇ ಶ್ರೀಯುತರ ಲೇಖನಗಳು ವಿಶೇಷವಾಗಿ ಪ್ರಕಟವಾಗುತ್ತಿವೆ. 'ನಾವುಜಿರೆ'ಯವರ ಸಾಹಿತ್ಯವನ್ನು ಓದಿ ಮೆಚ್ಚಿದವರು, ಅವರ ಪರಿಚಯಕ್ಕಾಗಿ ಕುತೂಹಲಪಡುತ್ತಿರುವುದು ಸಹಜವೇ ಆಗಿದೆ. ಮೊನ್ನೆ ಮೊನ್ನೆ ನಾನು ಹರಿಹರ ದಾವಣಗೆರೆಗಳ ಕಡೆ ಹೋಗಿದ್ದಾಗ ಅಲ್ಲಿನ ನನ್ನ ಮಿತ್ರರು ಸಹ— "ಓ! ಮೊನವಾ! ನೀನೊಂದು ಪ್ರಾಣಿ!" ಎಂಬ ಲೇಖನ ಬರೆದ ಆ 'ನಾವುಜಿರೆ' ಎಂದರೆ ಪುರ್ತೀ ಏನರು? ಎಂದು ಕೇಳಿದರು. ಹೀಗೆ ಎಲ್ಲೆಡೆಗಳಲ್ಲೂ ಪರಿಚಿತರು ಕೇಳುವ ಪ್ರಶ್ನೆ ಇದು! ಅದಕ್ಕಾಗಿಯೇ ಈಗ 'ನಾವುಜಿರೆ'ಯವರ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟು ಅವರ ಸಾಹಿತ್ಯ ಪ್ರೇಮಿಗಳ ಕುತೂಹಲವನ್ನು ಕಳೆಯೋಣವೆಂದು ಈ ಲೇಖನಕ್ಕೆ ತೊಡಗಿದ್ದೇನೆ.

ದಿನಾಂಕ 4—8—1958ರಲ್ಲಿ ಕಡಿರುದ್ಯಾವರ ಗ್ರಾಮದ II ಬ್ಲೋಕ್‌ನಲ್ಲಿ ಒಂದು ಹೊಸ ಶಾಲೆ ತೆರೆಯಲ್ಪಟ್ಟಿತು. ಆ ಶಾಲೆಗೆ ಮೂಸ್ತರನಾಗಿ ಬಂದ ತರುಣ ನೊಬ್ಬನನ್ನು ನೋಡಿದ, ಆ ಗ್ರಾಮದ ಹಿರಿಯರು—"ಈ ಮೂಸ್ತರ ಇನ್ನೂ ಚಿಗುರು ಮೀಸೆಯ ಹುಡುಗ! ಈ ಹೊಸ ಶಾಲೆಯನ್ನು ಹೇಗೆ ಸುಧಾರಿಸಿಕೊಂಡು ಹೋಗುವನೋ? ಪಾಪ ಇಲ್ಲಿ ಈ ಮೂಸ್ತರರಿಗೆ ಹೆಚ್ಚಿನ ಸೌಕರ್ಯವೂ ಇಲ್ಲ!" ಎಂದು ಮಾತನಾಡಿಕೊಳ್ಳುತ್ತಿದ್ದರು. ಆದರೆ ಆ ಕರುಣ ಮೂಸ್ತರ್ "ಸಿದ್ಧವನ ಗುರುಕುಲ"ದಲ್ಲಿ ನಾಲ್ಕು ವರ್ಷಗಳ ತಾಲ ಸಂಸ್ಕೃತ ಕಲಿತು ಆ ಮೇಲೆ ಹೈಸ್ಕೂಲನ್ನು ಮುಗಿಸಿ ಟ್ರೈನಿಂಗ್ ಆದ ವ್ಯಕ್ತಿ! ಎಂದು ತಿಳಿದ ಮೇಲೆ ಗ್ರಾಮಸ್ಥರು ಕುಂಬ ಸಂತೋಷಗೊಂಡಿದ್ದರು. ಮುಂದೆ ಈ ತರುಣ ಮೂಸ್ತರರು—ಸುಮಾರು ಒಂದು ವರ್ಷದ ವರೆಗೆ ಆ ಶಾಲೆಯ ಅಭಿವೃದ್ಧಿಗಾಗಿ ದುಡಿಯುತ್ತಾ, ಗ್ರಾಮಸ್ಥರೆಲ್ಲರ ಮೆಚ್ಚುಗೆಗೆ ಪಾತ್ರರಾದರು. ಆ ಶಾಲೆಯು ಅಭಿವೃದ್ಧಿಗಾಗಿ ತನು ಮನ ಧನಗಳಿಂದ ದುಡಿದ, ಶ್ರೀ N.S. ಪ್ರಭು ಕಾನ ಪರ, ಮತ್ತು ಗ್ರಾಮಸ್ಥರು—ಈ ತರುಣವೂ ಸ್ತರರಿಗೆವರ್ಗವಾಗಿಬಿಎರುಹೊರಟುಹೋಗುವ ಆ ದಿನ—'ಇನ್ನು ಇಷ್ಟು ಶಾಂತ ರಾಗೂ, ಸರಳ ಸ್ವಭಾವದ ಮೂಸ್ತರರು ಬೇರೊಬ್ಬರು ನಮಗೆ ಸಿಕ್ಕುತ್ತಾರೋ ಇಲ್ಲವೋ!' ಎಂದು ಗದ್ಗದಿತರಾಗಿ ಹೋದರು. ಮೂಸ್ತರರ ಕಣ್ಣಂಚಿನಲ್ಲಿಯೂ ಸಹ ಕಣ್ಣೀರು ತಾಣಿಸಿತ್ತು! ಅಲ್ಲಿಂದ ಬೀಳ್ಕೊಂಡ ಅವರು, ಕಕ್ಕಂಜೆ, ಎಳನೀರು ಫಾಟ್—(ಮಲೆನಾಡಿನ ಅಂಡಮಾನ್) ನಂತಾದಲಾದ ಕಡೆಗಳಲ್ಲಿ ಮೂಸ್ತರರಾಗಿ ವಿದ್ಯಾರ್ಥಿಗಳ ಜೊಗೂ, ಗ್ರಾಮಸ್ಥರ ಪ್ರೀತಿಗೆ ಪಾತ್ರರಾದರು. ಹೀಗೆ ತಾವು ಪ್ರವೇಶಿಸಿದ ಶಾಲೆಯನ್ನೂ ಅಭಿವೃದ್ಧಿ ಪಡಿಸುತ್ತ ತಾವೂ ಹಿಂದೀ ಪರೀಕ್ಷೆಗಳನ್ನು ಪಾಸ್ ಮಾಡುತ್ತ ತಮ್ಮ ವಿದ್ಯಾಭಿವೃದ್ಧಿಯನ್ನೂ ಸಾಧಿಸಿಕೊಳ್ಳುತ್ತ ಮುನ್ನಡೆದು ಕೊನೆಗೆ 'ಹಿಂದೀರತ್ನ' ನವವಿಧ್ಯರಾಗಿ ತೋಷಿಸಿದರು.

'ಹಿಂದೀರತ್ನ' ಪದವಿಯನ್ನು ಪಡೆದ ಬಳಿಕ 'ನಾವುಜಿರೆ'ಯವರ ಭಾಗ್ಯದ ಬಾಗಿಲು ತೆರೆಯಿತು. ಅರ್ಥಾತ್ ಅಂದಿನಿಂದಲೇ ಅವರು 'ನಾವುಜಿರೆ' ಎಂಬ ಉಪನಾಮದಿಂದ ಸಾಹಿತ್ಯ ಲೋಕಕ್ಕೆ ಪರಿಚಿತರಾಗ ತೊಡಗಿದರು!

ಓರ್ವ ವ್ಯಕ್ತಿಯ ಪರಿಚಯ ಮಾಡಿ ಕೊಡುವಾಗ ಆ ವ್ಯಕ್ತಿಯ ಅಭಿವೃದ್ಧಿಗೆ ಕಾರಣರಾದ ಕೆಲವು ಮುಖ್ಯ ವ್ಯಕ್ತಿಗಳ ಉಲ್ಲೇಖವನ್ನಾದರೂ ಮಾಡಲೇಬೇಕು. ಒಂದು—ವಸ್ತುವಿನ ಮೇಲೆ ಬೆಳಕು ಬೀರಿದಾಗ ಅದರ ಸುಪ್ತ ಮುತ್ತಲಿನ ಹಲವು ವಸ್ತುಗಳ ಮೇಲೆ ಸ್ವಯಂ ಪ್ರಕಾಶ ಬೀಳುವುದು ಸಹಜವೆನಿಸುವಂತೆ ಶ್ರೀ 'ನಾವುಜಿರೆ'ಯವರ ಭಾಗ್ಯದ ಬಾಗಿಲಿನ ಮುಂದೆ ನಿಂತು ಅವರನ್ನು ಸ್ವಾಗತಿಸಿದ ಶ್ರೀ ಡಿ. ಕೆ. ವಿ. ಹೈಸ್ಕೂಲಿನ ಮುಖ್ಯೋಪಾಧ್ಯಾಯರಿಂದ (ಈಗ D. M. ಹೈಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯರಾಗಿರುವ) ಶ್ರೀ ಆರ್. ಎನ್. ಭಿಡೆಯವರ ಕುರಿತು ನಾಲ್ಕು ಮಾತು ಹೇಳದಿದ್ದರೆ ಈ ಲೇಖನ ಅಪೂರ್ಣವೆನಿಸಬಹುದು. (ನೊದಲಿನ ಶ್ರೀ ಡಿ. ಕೆ. ವಿ. ಹೈಸ್ಕೂಲು ಈಗ D. M. ಹೈಯರ್ ಸೆಕೆಂಡರಿ ಸ್ಕೂಲಾಗಿ ಅಭಿವೃದ್ಧಿ ಹೊಂದಿದುದಾಗಿದೆ)

ಭವಿಷ್ಯವಾದಿಯಂತೆ, ಪ್ರತಿಭೆಯನ್ನು ಗುರುತಿಸುವ ವಿಶೇಷ ಪ್ರತಿಭಾ ಸಂಪನ್ನರಾದ ಶ್ರೀ ಆರ್. ಎನ್. ಭಿಡೆಯವರು 'ನಾವುಜಿರೆ'ಯವರ ಬುದ್ಧಿಶಕ್ತಿ ಹಾಗೂ ಪ್ರತಿಭೆಯನ್ನು ತಟ್ಟನೆ ಗುರುತಿಸಿಕೊಂಡರು. ಕೆಲವು ವರ್ಷಗಳ ಹಿಂದೆ ಅದೇ ಶಾಲೆಯು ವಿದ್ಯಾರ್ಥಿಯಾಗಿದ್ದ 'ನಾವುಜಿರೆ' ಯವರು ಮತ್ತೆ ಈಗ ಅದೇ ಶಾಲೆಯಲ್ಲಿ ಹಿಂದೀಪಂಡಿತರಾಗಿ ನೇಮಕಗೊಂಡರು. ಅದು ಮೊದಲ್ಗೊಂಡು ಶ್ರೀ 'ನಾವುಜಿರೆ'ಯವರ ಪ್ರತಿಭೆ, ಶೈಕ್ಷಣಿಕ ಜಾಗರೂಕತೆ, ಭಾಷಣ ಕಲೆ, ಸಾಹಿತ್ಯ ಸ್ಫೂರ್ತಿ ಅಲ್ಲದೆ ಅಟೋಟಗಳಲ್ಲಿಯೂ ಸಹ ದಿನ ದಿಂದ ದಿನಕ್ಕೆಒಂದೆ ವಿಕಾಸಗೊಳ್ಳುತ್ತೆ ಹೋಗಿತು. ಹೀಗೆ ವಿವಿಧ ಚಟುವಟಿಕೆಗಳಲ್ಲಿ ವಿರಾಮವಿಲ್ಲದೆ ದುಡಿಯುತ್ತಿದ್ದ ಅವರು ಎಲ್ಲದರಲ್ಲಿಯೂ ಸಮತೋಕವಾಗಿ ಮುಂದುವರಿಯುತ್ತ, ತಮ್ಮ ಕರ್ತೃತ್ವಶಕ್ತಿಯನ್ನು ತೋರಿಸುತ್ತ ಒಂದು ಆದರ್ಶವನ್ನು ರೂಪಿಸಿದರು.

ಶ್ರೀಯುತರ ಈ ಬಗೆಯ ಅಭಿವೃದ್ಧಿಯಲ್ಲಿ ಶ್ರೀ ಡಿ. ಕೆ. ವಿ. ಹೈಸ್ಕೂಲಿನ ಮುಖ್ಯಸ್ಥರೂ ಶ್ರೀ ಆರ್. ಎನ್. ಭಿಡೆಯವರ ಆಶೀರ್ವಾದ ಬಲವೂ ಅಂಶತಃ ಸೇರಿಕೊಂಡಿದೆಯೆಂದರೆ ಇದು ಅತಿಶಯೋಕ್ತಿಯಲ್ಲ. ಏಕೆಂದರೆ ಈ ವಿದ್ಯಾಸಂಸ್ಥೆ ಹಾಗೂ ಇದರ ಪ್ರಧಾನಾಚಾರ್ಯ ಶ್ರೀ ಆರ್. ಎನ್. ಭಿಡೆಯವರ ಮಾರ್ಗದರ್ಶನದ ನೇತೃತ್ವದಲ್ಲಿ ಶ್ರೀ "ನಾವುಜಿರೆ"ಯವರಂತೆಯೇ ಅಭಿವೃದ್ಧಿ ಹೊಂದಿ ಸ್ವಯಂನಿರ್ಮಿತ (Self made man) ವ್ಯಕ್ತಿಗಳಾಗಿ ಮೂರ್ಪಟ್ಟು ಇಂದು ನಮ್ಮ ದೇಶದ ಒಳಗೂ ಹೊರಗೂ, ಸೇವೆಸಲ್ಲಿಸುತ್ತಿರುವ ಮಹಾ ಮೇಧಾವಿಗಳನೇಕರು ಈ ವಿದ್ಯಾ ಸಂಸ್ಥೆಗೆ ಭೂಷಣ ಪ್ರಾಯರಾಗಿದ್ದಾರೆ. ಹೂವ ವ್ಯಕ್ತಿಯೇ ಜಗಲಿ, ಈ ವಿದ್ಯಾ ಸಂಸ್ಥೆಯನ್ನು ಸೇರಿಕೊಂಡನೆಂದರೆ ಅತನ ಜೀವನದ ಅಭಿವೃದ್ಧಿಯ ಅಧ್ಯಾಯದ ಮೊದಲ ಪುಟ ತೆರೆದಂತೆಯೇ ಸರಿ! ಶ್ರೀಮಾನ್ ಭಿಡೆಯವರು ತಮ್ಮ ಈ ವಿದ್ಯಾ ಸಂಸ್ಥೆಗೆ ಅಧ್ಯಾಪಕರನ್ನು ಸೇರಿಸಿಕೊಳ್ಳುವಾಗ, ಆ ಅಧ್ಯಾಪಕರಲ್ಲಿ ಅಡಗಿಕೊಂಡಿರುವ ಪ್ರತಿಭಾಶಕ್ತಿಗಳನ್ನು ಓರ್ವ ಸಮರ್ಥನಂದ ಮನಃ ಶಾಸ್ತ್ರಿಯಂತೆಶೀಗೆ ಕಂಡು ಹಿಡಿಯುವರೋ ಎಂದು ಇಂದಿಗೂ ಹಲವರಿಗೆ ಆಶ್ಚರ್ಯವಾಗಿದೆ! ಮತ್ತು ಸೋಜಿಗವೆಂದರು, ಇತರರ ದೃಷ್ಟಿಯಲ್ಲಿ ಅಸಮರ್ಥರೆಂದು ಕಂಡ ವ್ಯಕ್ತಿಗಳೂ ಸಹ ಶ್ರೀಯುತರ ದೃಷ್ಟಿಯಲ್ಲಿ ಸಮರ್ಥ ವ್ಯಕ್ತಿಗಳೆನಿಸಿ ಕೊನೆಗೆ ಸಮರ್ಥರಾಗಿಯೇ ತೋಷಿಸುತ್ತಾರೆ. ಕಾರಣ, ಈ ವಿದ್ಯಾ ಸರಸ್ವತಿ ಒಲಿಯುತ್ತಾಳೆ! ಒಲಿದು ವರಪ್ರದಾನವನ್ನೇ ನೀಡುತ್ತಾಳೆ! ಉದಾಹರಣೆಗಾಗಿ ಬೇಕಾದರೆ, ನಾವಿಂದು ಅಂತಹ ಹಲವು ವ್ಯಕ್ತಿಗಳಲ್ಲಿ ಕಲವರನ್ನಾದರೂ ಸ್ಮರಿಸಿಕೊಳ್ಳಬಹುದು.

ಪ್ರಸ್ಕೃತ ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಹಿಂದೀ ಲೆಕ್ಚರರಾಗಿರುವ, ಶ್ರೀ ಕೆ. ರಾಮಚಂದ್ರ ಭಟ್, ಬೆಂಗಳೂರಿನ ಇಂಡಿಯನ್ ರಿಸರ್ಚ್ ಇನ್ಸ್ಟ್ಯೂಟ್‌ನಲ್ಲಿ ಉನ್ನತ ಸ್ಥಾನದಲ್ಲಿರುವ, ಶ್ರೀ ಶಿವರಾಮ ಹೊಳ್ಳರು, ಎಡನ್‌ನಲ್ಲಿ ದೊಡ್ಡ ಹುದ್ದೆಯಲ್ಲಿರುವ ಶ್ರೀ ನೋರಾಪ್ ಅವರು, ಭಿಘಿಕಾದ ಇಥಿಯೋಪಿಯಾದಲ್ಲಿ ಉನ್ನತ ಪದಾಧಿಕಾರಿಯಾಗಿರುವ ಶ್ರೀ ಪದಕಣ್ಣಾಯರು, L. I. C. of (India ದ) ಸದ್ಯ ಹೆಬ್ರಿಯಲ್ಲಿ ಫೀಲ್ಡ್ ಆಫೀಸರ್ ರಾಗಿರುವ ಶ್ರೀ ಸೋಮಯಾಜಿಯವರು, ಸಿಂಧ್ರಿಗೊಬ್ಬರದ ಕಾರ್ಖಾನೆಯಲ್ಲಿ ದೊಡ್ಡ ಹುದ್ದೆಯನ್ನು ಅಲಂಕರಿಸಿರುವ ಶ್ರೀ ಶ್ರೀನಿವಾಸ ಭಟ್ಟರು, ಮೊದಲಾದ ಹಲವು ಮಂದಿ ಮಹನೀಯರು ಶ್ರೀ 'ನಾವುಜಿರೆ', ಯವರಂತೆಯೇ ಈ ವಿದ್ಯಾ ಸಂಸ್ಥೆಯಲ್ಲಿ ಸೇವೆಸಲ್ಲಿಸಿದವರಾಗಿದ್ದು ಅವರ ಸೇವಾ ಕಾಲದಲ್ಲಿಯೇ M. A.Msc. ಮೊದಲಾದ ಉಚ್ಚ ಪರೀಕ್ಷೆಗಳಲ್ಲಿ ಶ್ರೇಣಿ ಪಡೆದು (ollege) ಉತ್ತೀರ್ಣರಾದವರಾಗಿದ್ದಾರೆ. ಕಲವರಂತೂ S.S.L.C. ಯಿಂದಲೇ ಆರಂಭಿಸಿ ಉಚ್ಚ ಪದವಿ ಪರೀಕ್ಷೆಗಳನ್ನು ಪಾಸ್ ಮಾಡಿದವರೂ ಈ ವ್ಯಕ್ತಿಗಳಲ್ಲಿ ಇದ್ದಾರೆ! ಈ ಅನೇಕ ಮಂದಿ ಪ್ರತಿಭಾವಂತರಂತೆಯೇ ಈ ವಿದ್ಯಾ ಸಂಸ್ಥೆಯಲ್ಲಿದ್ದು ಕೊಂಡೇ ಶ್ರೀ 'ನಾವುಜಿರೆ' ಯವರೂ ಕೂಡ ಒಂದೊಂದೇ ಹೆಜ್ಜೆ ಇಡುತ್ತ ಮೇಲೇರುತ್ತ, ಹೋಗುತ್ತಿರುವುದು, ಅವರ ಮಿತ್ರವೃಂದದವರೆಲ್ಲರಿಗೂ ಅತ್ಯಂತ ಆನಂದದಾಯಕವಾದ ವಿಚಾರವಾಗಿದೆ.

ಇಂತಹ ಈ ವಿದ್ಯಾ ಸಂಸ್ಥೆಗೆ ಸೇರಿದ ಶ್ರೀ 'ನಾವುಜಿರೆ' ಯವರು, ತಮ್ಮ ಹಿಂದೀ ಶಿಕ್ಷಕ ಟ್ರೈನಿಂಗಿನ ಆ ಅವಧಿಯಲ್ಲೇ ವಿದ್ವಾನ್—ಸಾಹಿತ್ಯರತ್ನ, ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಈ ಸಾಹಿತ್ಯ ರಚನೆಯೂ ಬಹಳ ಬಿರುಸಿನಿಂದ ಮುಂದೆ ಸಾಗ ತೊಡಗಿತ್ತೆಂಬುದು ಅವರ ಮೇಧಾ ಶಕ್ತಿಗೆ ಒಂದು ಉತ್ತಮ ನಿದರ್ಶನವಾಗಿದೆ.

ಟ್ರೈನಿಂಗ್ ಪಡೆದು ಮರಳಿ ಹಿಂದೀ ಪಂಡಿತರಾಗಿ ಸೇರಿದ ಬಳಿಕ ಶ್ರೀಯುತರು ಕೃಪೆಯಾಗಿ ಇಂಟರ್ ಮೀಡಿಯೆಟ್ ಸಾಗೂ ಬಿ. ಎ ಪರೀಕ್ಷೆಗಳನ್ನು ಪಾಸ್ ಮಾಡಿದರು. ಈ ಸಲ—ಇವರು ಫೈನಲ್ ಬಿ. ಎ. ಪರೀಕ್ಷೆಯಲ್ಲಿ ಶ್ರೇಣಿ ಪಡೆದು ಉತ್ತೀರ್ಣರಾಗಿರುವುದು ಅವರ ಮುಂದಿನ ಎಂ. ಎ. ಪರೀಕ್ಷೆಗೆ ಆಶಾದಾಯಕವಾಗಿದೆ. ಹೀಗೆ 'ವಿದ್ವಾನ್ ಸಾಹಿತ್ಯರತ್ನ' ಬಿ. ಎ ಡಿಗ್ರಿಗಳನ್ನು ಪಡೆದ 'ನಾವುಜಿರೆ'ಯವರು ತ್ರಿಭಾಷಾ ಪಂಡಿತರಾಗಿದ್ದರೂ, —ಸಹಜ ತಾವು ಎಲಿವೆಂಟರಿ ಶಾಲೆಯ ಅಧ್ಯಾಪಕರಾಗಿದ್ದಾಗಿನ ರೀತಿಯಂತೆಯೇ ಅತ್ಯಂತ ನಯವಿನಯ ಸೌಜನ್ಯಗಳಿಂದ ಕೋಭಸುತ್ತಿರುವುದು, ಇಂದಿನ ನವತರುಣ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿದೆ; ಆದರ್ಶವಾಗಿದೆ. 'ವಿದ್ವಾಂಸಂ ವಿನಯೊ ನ್ವಿತಂ ಪರಹಿತೋತ್ಕರ್ಷಂಗಳಂ ಸಾಧಿಪಂ' ಎಂಬಂತಿರುವ ಶ್ರೀಯುತರು ವಿದ್ಯಾರ್ಥಿಗಳಿಗೆ ಪ್ರೀತಿಯ ಅಚ್ಚುಮೆಚ್ಚಿನ ಅಧ್ಯಾಪಕರೂ ಆಗಿದ್ದಾರೆ. ಶ್ರೀಯುತರ ಸಾಹಿತ್ಯದ ಕುರಿತು ಒಂದು ಮಾತು ಇಲ್ಲಿ ಹೇಳುವುದಾದರೆ, 'ನವಯುಗ' ವಾರ ಪತ್ರಿಕೆಯಲ್ಲಿ ಪ್ರಕಟವಾದ ಇವರ 'ಮೂಡಿ ಬಂದ ಸೂರ್ಯ' ಎಂಬ ಕಥೆಯಿಂದ ಮೊದಲ್ಗೊಂಡ ಇವರ ಕಥೆಗಾರಿಕೆ ಈಗ ಪರಿಪಕ್ವವಾಗಿದೆ. ಶ್ರೀಯುತರು ಕಥಾ ಸ್ಪರ್ಧೆ ಗಳಲ್ಲಿ ಬಹುಮಾನಿತರಾಗಿದ್ದಾರೆ. ಲೇಖನ, ಕಥೆ, ಕವಿತೆ, ಗೀತ ನಾಟಕ, ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಮುಂಬುನುಗ್ಗುತ್ತಿದ್ದಾರೆ. ಶ್ರೀಯುತರ 'ಕಣ್ ಕನಸು' 'ತೆರೆದಾಗ' ಎಂಬ ಕಥಾ ಸಂಕಲನದಲ್ಲಿ ಪ್ರಕಟವಾದ 'ಕಡಮಲ್ಲಿಗೆ' ಎಂಬ ಕಥೆಯು ಉಚ್ಚವರ್ಗದ ಕಥೆಯೆಂದ ಪ್ರಶಂಸೆ ಪಡೆದಿದೆ. ಇಷ್ಟೆಲ್ಲ ಕಾರ್ಯಕಲಾಪಗಳ ನಡುವೆ ಶ್ರೀಯುತರು ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಪರೀಕ್ಷೆಗಳನ್ನೂ ನಡೆಸುತ್ತಿದ್ದಾರೆ. ಮೌಖಿಕ ಪರೀಕ್ಷಕರೂ ಆಗಿದ್ದಾರೆ.

ಇನ್ನು ಈ ಲೇಖನವನ್ನು ಉದ್ದಗೊಳಿಸದೆ ಶ್ರೀ "ನಾವುಜಿರೆ"ಯವರ ಪುಟ್ಟ ನಾಮವನ್ನು ವಾಚಕರಿಗೆ ಪರಿಚಯ ಮಾಡಿಕೊಟ್ಟು, ಈ ಲೇಖನವನ್ನು ಪೂರ್ಣಗೊಳಿಸುತ್ತೇನೆ.

ವಿಜ್ಞಾಂಸರೂ ಮಿತಭಾಷಿಗಳೂ ಆದ ಶ್ರೀ 'ನಾವುಜಿರೆ'ಯವರು ಶ್ರೀ ನಾಗರಾಜ ಹೊಸಣಿ, ಎಂಬ ಪುಟ್ಟನಾಮದಿಂದ ಪ್ರೋಭಿಸುತ್ತ ಶ್ರೀ D. M, ಹೈಯರ್ ಸೆಕೆಂಡರಿ ಸ್ಕೂಲ್ ಉಜಿರೆ, ಇಲ್ಲಿ ಹಿಂದೀ ಪಂಡಿತರಾಗಿದ್ದಾರೆ.

ಮೊನ್ನೆ ಮೊನ್ನೆ ನಡೆದ ಶ್ರೀಯುತರು
(ಇಪ್ಪತ್ತಿನಾಲ್ಕನೇ ಪುಟ ನೋಡಿರಿ)

ಇದೆಯೋ ಇಲ್ಲವೋ?

ಲೇಖಕರು
‡‡

ಬರೆದವರು
"ಶ್ರೀ ನವಗಿರಿನಂದ"

ದೇವರು ಎನ್ನುವುದೇನು? ಒಬ್ಬೊಬ್ಬರ ವ್ಯಾಖ್ಯೆ ಒಂದೊಂದು. ಅದು ಇಲ್ಲವೇ ಇಲ್ಲ ಎನ್ನುವ ನಾಸ್ತಿಕ ವಾದಕ್ಕೂ ನಮ್ಮಲ್ಲಿ ಸ್ಥಾನ. "ದೇವರ" ಕಲ್ಪನೆಯು ನಮಗೆ ಪ್ರಯೋಜನಕಾರಿಯೇ ಎಂಬುದನ್ನು ಎತ್ತು ಜನ ಯೋಚಿಸಿದ್ದಾರೆ.

ಶುಕ್ರವಾರ ಸಂಜೆ ನಾಲ್ಕುವರೆ ಗಂಟೆಯ ಹೊತ್ತಿಗೆ ಆರ್ಟ್ ಡಿಪಾರ್ಟ್‌ಮೆಂಟಿನ ಬಾಯ್ ಪಕ್ಕದ ಡಿಪಾರ್ಟ್‌ಮೆಂಟಿಗೆ ಬಂದು ಒಬ್ಬ ಗುಮಾಸ್ತನ ಹತ್ತಿರ ಮೆಲ್ಲನೆ 'ಸೂಡಿ' ಎಂದ.

ಕೂಡಲೇ ಆ ಗುಮಾಸ್ತ ಉಳಿದೆಲ್ಲರ ಮುಖವನ್ನೂ ನೋಡಿ ಕಣ್ಣನ್ನೆ ಮಾಡಿದ. ಎಲ್ಲರೂ ತಂತಮ್ಮ ಕೆಲಸಗಳನ್ನು ಹಾಗೆಹಾಗೇ ಬಿಟ್ಟು ಆರ್ಟ್ ಡಿಪಾರ್ಟ್‌ಮೆಂಟಿಗೆ ಹೋದರು.

ಮೆನೇಜರ್ ಮುಕುಂದರಾಯರೂ ಅವರ ಅಸಿಸ್ಟೆಂಟ್ ವಾಸ್ತೇವಯ್ಯನೂ ಹೊರಹು ಉಳಿದೆಲ್ಲರೂ ಆರ್ಟ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುವ ಪೂಜೆಗೆ ಹೋಗಿ ನಿಂತರು.

ಪ್ರತಿ ಶುಕ್ರವಾರವೂ ಪೂಜೆ ಮಾಡಬೇಕೆಂದು ಉದ್ಯೋಗಸ್ಥರಿಲ್ಲ ಕೇಳಿಕೊಂಡ ಮೇರೆಗೆ ಆಫೀಸು ಖರ್ಚಿನಲ್ಲಿ ನಡೆಯುವ ಸಾಧಾರಣ ಪೂಜೆಯದು. ತೆಂಗಿನ ಕಾಯಿ, ಅವಲಕ್ಕಿ, ಬೆಲ್ಲ, ನಾಲ್ಕು ಬಾಳೇಹಣ್ಣುಗಳನ್ನು ತಂದಿಸಿ ಗಣಪತಿ, ಲಕ್ಷ್ಮಿ, ಸರಸ್ವತಿ ಚಿತ್ರಗಳಿಗೆ ಮೂಲೆ ಹಾಕಿ ನೈವೇದ್ಯ ತೋರಿಸಿ ಪೂಜೆ ಮಾಡಿ ಎಲ್ಲರೂ ಇಷ್ಟಿಷ್ಟು ಪ್ರಸಾದಗಳನ್ನು ಹಂಚಿಕೊಳ್ಳುವರು. ಈ ಪೂಜೆಯೊಂದಿಗೆ ಸೇರಿಕೊಳ್ಳದವರೆಂದರೆ ಮೆನೇಜರ್ ಮುಕುಂದರಾಯರೂ ಅವರ ಅಸಿಸ್ಟೆಂಟ್ ವಾಸ್ತೇವಯ್ಯರೂ. ಆದರೆ ಅವರಿಗೂ ಪೂಜೆಯ ಪ್ರಸಾದ ಸೊಟ್ಟಣ ಬರುತ್ತಿದ್ದುವು. ಅದನ್ನು ತಿನ್ನುತ್ತ ಅದರ ರುಚಿಯನ್ನು ಹೊಗಳಿಕೊಳ್ಳುವರು.

"ಈ ಪ್ರಸಾದ ಸಿಂಪಿಲ್ ಆಗಿದ್ದರೂ ರುಚಿಯೊಗೇ ಇದೆ ಎನ್ನುವರು ಮುಕುಂದರಾಜರು.

"ಈ ಬಗೆಯ ಸುಲಭ ರೀತಿಯ ಪ್ರಸಾದದ ಕಂಡ ಪದ್ಧತಿಯನ್ನು ಕಂಡು ಹಿಡಿದವನು ಬುದ್ಧಿವಂತನಾದ ಮೂರ್ಖನೇ ಸರಿ' ಎನ್ನುವನು ವಾಸ್ತೇವಯ್ಯ.

ಕೂಡಲೇ ಮುಕುಂದರಾಯರ ವ್ಯಾಖ್ಯಾ ಬುದ್ಧಿಗೆ ಚಾಲನೆ ಸಿಕ್ಕಿದಂತಾಗಿ, 'ಹೌದು ಮತ್ತೆ. ಇದೇ ಎರಡು ಮುಷ್ಟಿ ಅವಲಕ್ಕಿ, ತೆಂಗಿನಕಾಯಿ ಅಂದರೇನು, ಮೇಲೆ ಬಾಳೇ ಹಣ್ಣು. ರುಚಿಯೂ ಆಯ್ತು, ಹೊಟ್ಟೆಯೂ ತುಂಬಿತು. ಬಲ ಶಾಲೀ ಜೀವಸತ್ವ ತುಂಬಿದ ಆಹಾರವಲ್ಲ ನೆಲೆ ಹಿಂದಿನ ಕಾಲದಲ್ಲಿ ಅವಲಕ್ಕಿ ಬೆಲ್ಲದ ಮೂಟೆ ಹೊತ್ತುಕೊಂಡೇ, ಆದರ ಬಲದಲ್ಲೇ ಕಾಶೀ ಯಾತ್ರೆ ಮಾಡಿ ಬರುತ್ತಿದ್ದರಲ್ಲ!"

'ದೇವರ ಹುಚ್ಚೊಂದು ಇಲ್ಲದಿರುತಿದ್ದರೆ ಹಿಂದಿನ ಋಷಿಮುನಿಗಳನ್ನೆಲ್ಲ ಮೆಚ್ಚಿ ಬೇಕಾದ್ದೇ."

"ಋಷಿಮುನಿಗಳು ದೇವರನ್ನು ಸೃಷ್ಟಿಸಿದರೆಂದು ಹೇಳುವಂತಿಲ್ಲ. ಆದೆಲ್ಲಾ ಆ ಮೇಲಿನ ತಲೆ ತಿರುಕರು ಮಾಡಿದ ಕೆಲಸ' ಹೀಗೆ ಇವರ ವ್ಯಾಖ್ಯಾನಗಳು ಪ್ರಾರಂಭವಾಗುತ್ತವೆ. ಇದರಲ್ಲಿ ಮುಕುಂದರಾಯರದೇ ಮೇಲುಗೈ. ವಾಸ್ತೇವಯ್ಯ ಶುದ್ಧ ನಾಸ್ತಿಕನಾದರೂ ಅವನದು ಹಂಕು ಬುರಕು ಓದು; ಅರ್ಧ ಮರ್ಧ ಪಾಂಡಿತ್ಯ; ಹೊಸ ಹೊಸ ವಿಜ್ಞಾನ ವಿಷಯಗಳನ್ನು ಅವಸರವಸರವಾಗಿ ಬಾಚಿ ತುಂಬಿಸಿಕೊಂಡ ತಲೆ ಅವನದು! ಅವನ ದೃಷ್ಟಿಯಲ್ಲಿ ಹಿಂದಿನವರೆಲ್ಲ ಶತ ಮೂರ್ಖರು. ಈಗಿನವರೇ ಬುದ್ಧಿವಂತರು. ಅದಷ್ಟು ಬೇಗದಲ್ಲಿ ದೇವತಾ ಭಾವನೆಯು ಸಮೂಧಿಯಾದರೇನೇ ಪ್ರಪಂಚವು ಏಳಿಗೆಯಾದೀತು ಎಂಬುದೇ ಅವನ ತೀರ್ಮಾನ.

ಇದಕ್ಕೆ ಮುಕುಂದರಾಯರ ಅಳವಾದ ಓದೂ, ಅಧ್ಯಾಸವೂ, ವಿಚಾರವೂ, ವಿದ್ವತ್ತೂ ಸಹಾಯಕವಾಗಿದ್ದುವು. ಅವರೇ ಒಹಳ ಮೇಧಾವಿಗಳೆನಿಸಿಕೊಂಡವರು. ಆ ಆಫೀಸಿನಲ್ಲೆ. ಜೀವ ವಾದಸಂಜೆ ತರ್ಕ ಸರಣಿಗಳಿಗೆ ಸುಲಭವಾಗಿ ಸಿಕ್ಕಿಕೊಂಡ ವ್ಯಾಜಿ ಅವರ ಅಸಿಸ್ಟೆಂಟ್ ವಾಸುದೇವಯ್ಯ ಒಬ್ಬನೇ. ಇತರರೆಲ್ಲ ಶುಮ್ಮನೆ ಕೇಳಿ ಬಾಯಿ ಮುಚ್ಚಿಕೊಂಡಿರುವವರೇ.

ಯಾರು ಮುಕುಂದರಾಯರನ್ನು ನೋಡಲು ಬಂದರೂ, ಸ್ವಲ್ಪ ಸಾವಕಾಶವಾಗಿ ಕುಳಿತು ಮಾತಿಗೆ ಪ್ರಾರಂಭಿಸಿದರೆಂದರೆ, ರಾಮಾಯಣ, ಭಾರತ, ವೇದ, ಪುರಾಣಗಳ ಮೂಲವನ್ನು ತೆಗೆದ, ಅವುಗಳ ವಿಷಯದಲ್ಲಿ ಜನರೆಲ್ಲ ಎಷ್ಟೊಂದು ಮೂಢರಾಗಿದ್ದಾರೆ? ಅಸಲು ರಾಮಾಯಣ ಹೇಗಿತ್ತು? ಅದು ಹೇಗೆ ಮರೆಯಾಯಿತು? ಮೊನ್ನೆ ಮೊನ್ನೆ ಮಾಡುತ್ತಾ ಹೇಗೆಹೇಗೆ ಅದನ್ನು ಬದಿದರು? ಎಷ್ಟೆಷ್ಟು ಮಂದಿ ತಮ್ಮ ದೇವತ್ವಕ್ಕೆ ಸರಿಹೋಗುವಂತೆ ರಾಮಾಯಣವನ್ನು ಮೊರ್ಪಡಿಸಿದ್ದಾರೆ? ಎಂಬುದನ್ನೆಲ್ಲ ಬಹಳ ಸ್ವಾರಸ್ಯವಾಗಿ ಹೇಳಲಾರಂಭಿಸುತ್ತಾರೆ. ಕೇಳುವವರು ಮುಗುವನ್ನಾಗಿ ತಲೆದೂಗುತ್ತಿರುತ್ತಾರೆ.

ಅನೇಕ ಗ್ರಂಥಗಳನ್ನು ಓದಿ ಮಥಿಸಿಕೊಂಡು ಸತ್ಯ ಸಂಗತಿಗಳನ್ನು ಎತ್ತಿತೋರಿಸುವಾಗ ಅವರನ್ನು ಪ್ರತಿಭಟಿಸಲು ಯಾರಿಗೂ ಶಕ್ತಿಯೆ ರಲಿಲ್ಲ 'ಅಹಹ, ಓಹೋ, ಹೌದೆ? ಸದ ಸದ"—ಎಂದಷ್ಟೇ ಹೇಳಿ ತಲೆಯಾಡಿಸಿ ಕೊಂಡೇ ಹೋಗುವರು ಎಲ್ಲರೂ, ದೇವರ ಅಸ್ತಿತ್ವ ಇಲ್ಲವೆಂಬುದೇ ಇವರ ಸಿದ್ಧಾಂತ,' ಸುಮ್ಮ ಸುಮ್ಮನೆ ಈ ದೇವರನ್ನು ಕಟ್ಟಿಕೊಂಡು ಕಷ್ಟ ಪಡುವ ಹೊರೆಭಾರ ಈ ಮನುಷ್ಯನ ಹೊರತು ಬೇರೆ ಯಾವ ಪ್ರಾಣಿಗೂ ಇಲ್ಲ. ಇರುವ ನಾನಾರೀತಿಯ ತಾಪತ್ರಯಗಳು ಸಾಲವೇ ಈ ಮನುಷ್ಯನಿಗೆ?" ಎಂದು ಸವಾಲು ಬಿಡುವರು ಮುಕುಂದರಾಯರು.

ಅವರ ಮಾತೆಲ್ಲ ಸತ್ಯವೇ ಆಗಿದ್ದರೂ, ಹಾಗೆಂದು ಎಲ್ಲರಿಗೂ ತೋರಿದರೂದೇವರ ನಂಬುಗೆಯನ್ನು ಬಿಟ್ಟು ವರ್ತಿಸಲು ಯಾರೂ ಸಿದ್ಧರಿರಲಿಲ್ಲ. ಅಂತೆಯೇ ಆಫೀಸಿನಲ್ಲಿ ಶುಕ್ರವಾರ ಪೂಜೆಮಾಡುವ ಪದ್ಧತಿ ಬಂದಿತ್ತು. ಎಲ್ಲರಿಗೂ ಪ್ರಸಾದ ಕೊಡುವಾಗ ಅವರಿಗೂ ಪ್ರಸಾದ ಕೊಟ್ಟರೆ, ಏನೋ ಒಂದು ತಮೂಷೆಯೊಗಿ ತಿನ್ನುತ್ತಾರೆ ಅಷ್ಟೇ.

o o o o

ಒಮ್ಮೆ ಆಫೀಸಿನವರೆಲ್ಲ ದಕ್ಷಿಣ ದೇಶದ ಟೂರ್ ಹೊರಟರು. ಮುಕುಂದರಾಯರೂ ವಾಸ್ತೇವಯ್ಯನೂ ಎದ್ದರು. ತಂಜಾವೂರ, ಕುಂಭಕೋಣಂ, ಮಧುರೆ, ಕನ್ಯಾಕುಮಾರಿ, ಪಳನಿ, ಚಿದಂಬರಂಮೊದಲಾದ ಎಲ್ಲಾ ಸ್ಥಳಗಳಿಗೂ ಯಾತ್ರಿಸಾಗಿತ್ತು. ಉಳಿದವರದೆಲ್ಲ ದೇವರ ದರ್ಶನವೇ ಮುಖ್ಯ ಗುರಿಯಾಗಿದ್ದರೆ ಮುಕುಂದರಾಯ್ಯ, ವಾಸ್ತೇವಯ್ಯನವರುಗಳ ಗುರಿಯೇ ಬೇರೆ. ಅವರದು ದೇವಾಲಯಗಳ ಭವ್ಯಾಕಾರಗಳನ್ನೂ, ಶಿಲ್ಪಗಳನ್ನೂ ನೋಡುವ ಗುರಿ. ಟೂರಿನಲ್ಲಿ ಪಾಂಡಿಚೇರಿಯನ್ನೂ ಕೂಡಾ ಸೇರಿಸಬೇಕೆಂದು ಅವರು ಹೇಳಿದ್ದಕ್ಕೆ ಹೆಚ್ಚಿನವರು ಒಪ್ಪಿಗೆ ದೊರಕಿರಲಿಲ್ಲ. 'ಇವರೊಟ್ಟಿಗೆ ಬಂದರೆ ಇಷ್ಟೇ. ಇವರ ಹಾಗೆ ನಾವೂ ಗಲ್ಲಗಲ್ಲ ಬಡಿಮಕೊಳ್ಳಬೇಕು. ಛೆ ಛೇ! ಹಾವಿಬ್ಬರೂ ಒಮ್ಮೆ ಪಾಂಡಿಚೇರಿ ಟ್ರಿಪ್ಪು ಹೊಡೆದು ರುಚಿ ನೋಡಿಯೇ ಬರಬೇಕು' ಎಂದು ವಾಸ್ತೇವಯ್ಯನನ್ನು ನೋಡಿ ಗೊಣಗಿಕೊಂಡರು ಮುಕುಂದರಾಯರು.

ದೇವಾಲಯುಗಳನ್ನೆಲ್ಲ ಎಲ್ಲರಿಗಿಂತ ಹೆಚ್ಚಾಗಿಯೇ ಮುಕುಂದರಾಯರು ಸರಿಶೀಲನ ಮಾಡಿದರು. ಹಿಂದಿನ ಕಾಲದ ರಾಜರು ಶತ್ರುಗಳಿಂದ ತಪ್ಪಿಸಿಕೊಳ್ಳಲಿಕ್ಕೂ ಅಡಗಿ ಕುಳಿತು ಯುದ್ಧ ಮಾಡಲಿಕ್ಕೂ ಅನುಕೂಲವಾಗುವ ಹಾಗೆ ದೇವಾಲಯುಗಳನ್ನು ಭದ್ರ ಕೋಟೆಯನ್ನಾಗಿ ಮಾಡಿ ಕಟ್ಟಿಸಿದ್ದಾರೆ ಎಂಬುದು ಅವರ ತೀರ್ಮಾನ.

ಈ ಯಾತ್ರೆಯಲ್ಲಿ ಮುಕುಂದರಾಯರಿಗೊಬ್ಬರು ಸರಿಯಾದ ಪ್ರತಿಸ್ಪರ್ಧಿ ಸಿಕ್ಕಿದರು, ಚಿದಂಬರದಲ್ಲಿ; ಗುರುದೀಕ್ಷಿತರು, ಶಾಂತ ಮೂರ್ತಿಗಳು; ದೊಡ್ಡ ವಿದ್ವಾಂಸರು; ಸಾಧುಗಳು.

ಅವರು ಯಾತ್ರೆಗೆ ಬಂದ ಎಲ್ಲರ ನಟರಾಜ ಪೂಜೆ ನೋಡಲು ಕರೆದಾಗ ಮುಕುಂದರಾಯರು, "ನೀವೆಲ್ಲ ಪೂಜೆ ನೋಡಿ, ನಾನು ಬರಲಾರೆ" ಎಂದ ಮಾತು ಆಡಿಕೆವಿಬಿದ್ದಿತು.

ಅವರು ಯಾರು ಏನೆಂಬುದನ್ನು ಇತರರಿಂದ ತಿಳಿದುಕೊಂಡಾಗ ದೀಕ್ಷಿತರು ಎಲ್ಲರಿಗೂ ಮೇಲಿನವರಾದ ಅವರನ್ನು ನಾನು ಅಗತ್ಯ ನೋಡಬೇಕು. ಪೇಪರ್ ಈಂದಿನ 'ಈ ಊರಲ್ಲಿರುವಿರೆಲ್ಲ? ಭೇಟಿ ನೂಡಿಸಿರಿ" ಎಂದರು.

ಮಧ್ಯಾಹ್ನದ ಮೇಲೆ ದೇವಾಲಯದ ಮಂಟಪದಲ್ಲಿ ದೀಕ್ಷಿತರು ಸ್ವಲ್ಪ ಮುಕುಂದರಾಯರ ದರ್ಶನಕ್ಕೆ ಬಂದರು. ಶಿಷ್ಟಾಚಾರದ ಮಾತುಕತೆಗಳಾದ ಮೇಲೆ, ದೀಕ್ಷಿತರು ಚಿದಂಬರ ಕ್ಷೇತ್ರ ಮಹಿಮೆಯನ್ನು ಕುರಿತು ಹೇಳಲಾರಂಭಿಸಿದರು. ಇಂತಹ ಸ್ಥಳಗಳಲ್ಲಿ ಈ ಬಗೆಯ ಕಟ್ಟುಕಥೆಗಳಿಲ್ಲ ಕಡಮೆಯಿಲ್ಲ. ಅಂತಹವನ್ನು ನಾನು ನಂಬಲಾರೆ. ಇಲ್ಲಿನ ನಿವಾಸಿಗಳಿಗೆ ಈ ಬಗೆಯ ಕಟ್ಟು ಕಥೆಗಳನ್ನು ಬಿಟ್ಟರೆ ಬೇರೆ ಜೀವನ ಮಾರ್ಗವಿಲ್ಲ. ಒಟ್ಟಿನಲ್ಲಿ ಮೂಢಭಾವ ಅಳಿದು ದೇವ ಮುಖಕ್ಕೆ ಬರಲಿಕ್ಕೆ ಇನ್ನೂ ಬಹಳಕಾಲ ಬೇಕು. ಅಷ್ಟರವರೆಗೆ ನಿಮ್ಮಂಥವರನ್ನೆಲ್ಲ ಪೂಜಿಸುವವರು-ನೋಡಿ, ನಮ್ಮೊಂದಿಗೆ ಬಂದ ಯಾತ್ರಿಕರೇ ಇಷ್ಟು ಮಂದಿಯೂ ಇದ್ದಾರೆಲ್ಲ" ಎಂದರು ಮುಕುಂದರಾಯರು. "ಹೌದು ದೀಕ್ಷಿತರೇ. ನಿಮ್ಮದೇನಿದೆ? ನಂಬುವವರಿರುವ ವರೆಗೂ ನೀವು ಇದರ ಮೇಲೆ ಕಾಲಾಡಲೇ ಬೇಕು." ಎಂದ ವಾಸ್ತೇವಯ್ಯ.

ಈ ಮಾತುಗಳಿಂದ ದೀಕ್ಷಿತರ ಮುಖ ಭಂಗವಾಗಿ, ಅವರ ಬಾಯಿ ಕಟ್ಟಿಹೋಗುವುದೆಂದು ಎಲ್ಲರೂ ತಿಳಿದುಕೊಂಡರು. ಇಲ್ಲ.

ದೀಕ್ಷಿತರು ಪ್ರಸನ್ನತೆಯಿಂದ "ಜನರಿಗಿ ಹೇಳಿದಿರಿ. ನನಗೆ ಈ ಬಗೆಯ ಸಂಶೋಧನೆಗಳಿಂದರೆ ಬಹಳ ಸಂತೋಷ. ನೀವು ಕಟ್ಟು ಕಥೆಗಳೆಂದರಲ್ಲಾ, ಎಷ್ಟೋ ಬಗೆಯ ಕಟ್ಟುಕಥೆಗಳನ್ನು ನಾವು ನಂಬಿಕೊಂಡು ಓದುತ್ತೇವೋ? ಕೇಳುತ್ತೇವೋ? ನಾಟಕಗಳನ್ನು ನೋಡುತ್ತೇವೋ? ಅಲ್ಲ ಕೃತಕ, ವೇಷ, ನಟನೆ, ಕಲ್ಪನೆ ಎಂದು ತಿಳಿದುಕೊಂಡೇ ನೋಡುವುದಿಲ್ಲವೆ? ರಸಾಸ್ವಾದನೆ ಮಾಡುವುದಿಲ್ಲವೆ? ಅಂತಹ ಕಥೆಗಳಲ್ಲಿ ಸ್ವಾರಸ್ಯವಿರುವುದರಿಂದ ತಾನೆ ಅದು ತಲತಲಾಂತರದಿಂದ ಜೀವಂತವಾಗಿದೆ?" ಎಂದು ಪ್ರಶ್ನಿಸಿದರು.

'ಇದೆಯಿಜಿ. ಅಪ್ಪನೆಟ್ಟ ಆಲದ ಮರ ವೆಂದು ಮಕ್ಕಳೆಲ್ಲ ನೇತು ಹಾಕಿಕೊಂಡ ಹಾಗೆ" ಎಂದ ವಾಸ್ತೇವಯ್ಯ.

"ಅದರಲ್ಲಿ ಸ್ವಾರಸ್ಯವಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಆ ಕಥೆಗಳಲ್ಲಿ ಸತ್ಯ ವೆಷ್ಟಿದೆ, ಶುಳ್ಳು ಎಷ್ಟಿದೆ ಎಂಬುದೊಂದು ಗೊಡವೆಯೂ ಇಲ್ಲದೆ, ಇಲ್ಲದ ದೇವರುಗಳನ್ನು ಉಂಟೆಂದು ನಂಬುತ್ತೆ, ಬಣ್ಣನೆ ಹಾಗೆ ಹೇಳಿದಾದಕ್ಕೆಲ್ಲ ತಲೆಯೂಡಿ ಶುವುದು ಬುದ್ಧಿವಂತ ಮಾನವರ ಲಕ್ಷಣವಾದೀತೆ? ಹೀಗೆ ಎಲ್ಲರನ್ನೂ ನಂಬಿಸಿ

(ಇಪ್ಪತ್ತ ಮೂರನೇ ಪುಟ ನೋಡಿರಿ)

ಪಂಡಿತ ನೆಹರೂ - ಕೃಷ್ಣ

ಜವಾಹರಲಾಲರ ಕಿರಿತಂಗಿ ಕೃಷ್ಣೆ ಅಣ್ಣನ ಬಗ್ಗೆ ಕೃಷ್ಣೆ ಪಡಿಸಿದ ಆಭಿಪ್ರಾಯಗಳು ಸಹಜವಾಗಿಯೇ ಇವೆ.

ಬರೆದವರು
ಶ್ರೀಮತಿ ರತ್ನಮ್ಮ ಸುಂದರರಾವ್, ಬೆಂಗಳೂರು.

ಜವಾಹರಲಾಲರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲವದು. ಆಗ ಒಂದು ದಿನ ಆನಂದ ಭವನದಿಂದ ಶುಭ ಸಮಾಚಾರವೊಂದು ಅವರಿಗೆ ಬಂದು ತಲುಪಿತು. "ಈ ಲೋಕಕ್ಕೆ ನಿನ್ನ ಹೊಸ ತಂಗಿಯೊಬ್ಬಳ ಆಗಮನವಾಗಿದೆ." ಎಂಬುದೇ ಆ ಶುಭ ವಾರ್ತೆ. ಹೊಸ ತಂಗಿಯನ್ನು ಕಾಣಲು ಜವಹರಲಾಲರ ಮನ ತವಕಿಸಿತು; ನೋಡಬೇಕೆಂದು ಕಣ್ಣು ಹಾತೊರೆಯಿತು. ಆದರೆ ವಿದ್ಯಾಭ್ಯಾಸ ಕಡಿವಾಣ ಹಾಕಿ ಅವರನ್ನು ಅಲ್ಲಿಯೇ ಉಳಿಸಿಕೊಂಡಿತು. ಪುಟ್ಟ ತಂಗಿಯ ಚಿತ್ರವನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು, ಆ ತಂಗಿಗೆ ಶುಭವಾಗಲೆಂದು ಅಲ್ಲಿಂದಲೇ ಹಾರೈಸಿದರು ಜವಹರಲಾಲರು.

ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಜವಹರಲಾಲ್ ಭಾರತಕ್ಕೆ ಮರಳಿ ಆನಂದ ಭವನವನ್ನು ಸೇರಿದಾಗ ಪುಟ್ಟ ತಂಗಿ ನಾಲ್ಕೈದು ವರ್ಷಗಳ ಬಾಲಕಿಯಾಗಿದ್ದಳು. ಆ ಹೊಸ ತಂಗಿಯನ್ನು ಕಾಣಲು ಕಾತುರರಾಗಿ ನಿಂತರು ಜವಹರಲಾಲ್. ತಾಯಿ ಪುಟ್ಟ ಮಗುವನ್ನು ಕರೆತಂದು— "ಈಕೆಯೇ ನಿನ್ನ ಪುಟ್ಟ ತಂಗಿ" ಎಂದು ತೋರಿಸಿದಾಗ ಜವಹಂಲಾಲ್ ಆ ಪುಟ್ಟ ಬಾಲೆಯನ್ನು ಕೈಗಳಿಂದ ರಭಸದಿಂದ ಮೇಲಕ್ಕೆತ್ತಿ ಅಪ್ಪೇ ರಭಸದಿಂದ ಕೆಳಕ್ಕಿಳಿಸಿ ಮುದ್ದಿಸಿದರು. ಆ ತಂಗಿಗಾದರೂ ಆ ಅಣ್ಣನನ್ನು ಮೊದಲ ಬಾರಿಗೆ ಕಾಣುವ ಕುತೂಹಲ. ಆ ಮುಗ್ಧ ಮನಸ್ಸಿನಲ್ಲಿ ಅಣ್ಣನೆಂದರೆ ಇದುವರೆಗೂ ಕಲ್ಪನೆಯಿದ್ದುದು — "ಅಣ್ಣನೆಂದರೆ ಎವನೂ ಚಿಕ್ಕವನೇ ಆಗಿರಬೇಕು. ಅವನು ಬಂದ ಮೇಲೆ ಯಾವಾಗಲೂ ಆಡುತ್ತಿರಲು ನನಗೆ ಜೊತೆ ಸಿಕ್ಕುವುದು"— ಎಂದು. ಆದರೆ ಆ ಬಾಲೆ ಕಂಡ ಅಣ್ಣ ಆ ರೀತಿ ಇರಲಿಲ್ಲ— "ರಾಜಕುಮಾರನಂತೆ ಕಂಗೊಳಿಸುತಿದ್ದ ಹದಿನೆಂಟು ವರ್ಷದ ಯುವಕ, ತಂದೆಯ ಪಡಿಯಚ್ಚು." ಅಂಥ ಅಣ್ಣನನ್ನು ಕಂಡಾಗ ಈ ರಾಜಕುಮಾರ ನನ್ನ ಅಣ್ಣನೆಂಬ ವಿಶ್ವಾಸ ಮೂಡಿತಾದರೂ ಸಲಿಗೆ ಮೂಡಲಿಲ್ಲ. ಬದಲಾಗಿ ಒಂದು ವಿಧವಾದ ಭಯವೇ ಆವರಿಸಿತು.

ಆನಂದ ಭವನದ ಮಕ್ಕಳಿಗೆ ಅರಮನೆಯ ರಾಜಕುಮಾರ--ರಾಜಕುಮಾರಿಯರಿಗೆ ನಡೆಯುವಂತೆ ಮನೆಯಲ್ಲಿಯೇ ಶಿಕ್ಷಣ. ಜವಹರಲಾಲರ ಹೊಸ ತಂಗಿ ಕೃಷ್ಣೆಗೂ ಮನೆಯಲ್ಲಿಯೇ ಶಿಕ್ಷಣ ನಡೆಯತೊಡಗಿತು.

ಒಂದಾದಿನ ಕೃಷ್ಣೆ ಗಣಿತವನ್ನು ಮಾಡುವುದರಲ್ಲಿ ನಿರತಳಾಗಿದ್ದಳು. ಗಣಿತವೆಂದರೆ ಕೃಷ್ಣೆಗೆ ಎಂದಿಗೂ ಬೇಸರವೇ. ಯಾವುದೋ ಕಠಿಣವಾದ ಲೆಕ್ಕವೊಂದು ಅಂದು ಕೃಷ್ಣೆಯನ್ನು ಕಾಡಿಸುತೊಡಗಿತ್ತು. ಆಕೆಯು ಕಷ್ಟಕಂಡು ಜವಹರಲಾಲ್ ಆ ಲೆಕ್ಕವನ್ನು ತಂಗಿಗೆ ಹೇಳಿಕೊಟ್ಟರು. ಆಂದಿನಿಂದ ಜವಹರಲಾಲರೇ ಕೃಷ್ಣೆಗೆ ಗಣಿತದ ಶಿಕ್ಷಕರಾದರು.

ಪ್ರತಿ ದಿನವೂ ಜವಹರಲಾಲರು ಹೊಸ ಲೆಕ್ಕಗಳನ್ನು ಹೇಳಿ ಕೊಡುತ್ತಿದ್ದರು. ಮಾರನೇ ದಿನ ಮಾಡಿತೋರಿಸಬೇಕೆಂದು ಹಲವು ಲೆಕ್ಕಗಳನ್ನೂ ಕೊಡುತ್ತಿದ್ದರು. ಒಂದುದಿನ ಕೃಷ್ಣೆ ಮಾಡಿ ತೋರಿಸಿದ್ದ ಲೆಕ್ಕವೆಲ್ಲವೂ ತಪ್ಪಾಗಿಬಿಟ್ಟಿತ್ತು. ಲೆಕ್ಕ ಮಾಡುವಾಗ ಮನಸಿಟ್ಟು ಶ್ರದ್ಧೆಯಿಂದ ಮಾಡಿಲ್ಲವೆಂಬ ಅಂಕ ಜವಹರಲಾಲರಿಗೆ ಹೊಳೆಯಲು ಹೆಚ್ಚು ಹೊತ್ತು ಬೇಕಾಗಲಿಲ್ಲ.

ಅದೂ ಹೋಗಲೆಂದರೆ ಕೇಳಿದ ಪ್ರಶ್ನೆಗಳೊಂದಕ್ಕೂ ಸಂಯಮದ ಉತ್ತರವಿಲ್ಲ. ಜವಹರಲಾಲರಿಗೆ ಸೋಜಿಗ ಬಂತು. ಬೆರುಸಾದ ಮೂತುಗಳನ್ನಾಡಿ ತಂಗಿಯನ್ನು ಗದರಿಸಿಬಿಟ್ಟರು. ಕೃಷ್ಣೆಗೆ ಅದುವೂ ನವಾಂತಾಯಿತು. ಒಂದು ಕ್ಷಣ ತಲೆತಗ್ಗಿಸಿ ಸುಮ್ಮನಾದಳು. ನುರುಕ್ಷಣ— "ಒಂದು ದಿನ ಲೆಕ್ಕ ತಪ್ಪು ಮಾಡಿ ಬಿಟ್ಟರೆ ಅದು ದೊಡ್ಡ ಅಪರಾಧವೇ?" ಎಂದು ಮೆಲ್ಲನೆ ಹೇಳುತ್ತ ತನ್ನ ಪುಸ್ತಕಗಳನ್ನು ಎತ್ತಿಕೊಂಡು ಹೊರಡಲು ಸಿದ್ಧಳಾದಳು. ಜಾಗೆ ಹೋಗುವಾಗ ಒಮ್ಮೆ ಅಣ್ಣನ ಮುಖ ನೋಡಲೆಂದು ಅವಳು ಪ್ರಯತ್ನ ಪಟ್ಟಾಗ ಅವಳ ಕಣ್ಣುಗಳಲ್ಲಿ ನೀರಿನ ಕೋಡಿಯೇ ಹರಿದಿತ್ತು.

ತಂಗಿಯ ಕಣ್ಣೀರನ್ನು ಕಂಡ ಕ್ಷಣವೇ ಜವಹರಲಾಲರ ಕೋಪ ಪೂರ್ಣವಾಗಿ ಇಳಿದು ಹೋಯಿತು. ಪಶ್ಚಾತ್ತಾಪ ಮಂಜಿನ ಬೆಟ್ಟಗಳ ಮೇಲೆ ಜಾರುತ್ತ ಆಟವಾಡುತ್ತಿರುವುದೇ ಅಲ್ಲಿಯ ಜನರಿಗೆ ಒಂದು ಮೋಜು. ಐದಾರಡಿ ಎತ್ತರದ ಎಕ್ಕಡದಂತಿರುವ ಮರದ ಹಲಗೆಗಳನ್ನು ಕಾಲುಗಳಿಗೆ ತಗುಲಿಸಿಕೊಂಡು ಹಾರುತ್ತ ಹಾರುತ್ತ ಜಾರುವ ಮಂಜಿನ ಮೇಲೆ ಸ್ಥಿರವಾಗಿ ಬೀಳದಂತೆ ನಿಲ್ಲುವುದೇ ಒಂದು ಆಟ. ಆ ಆಟವೇ 'ಸ್ಕಿಯಿಂಗ್' ಅಲ್ಲಿನ ಜನಗಳೆಲ್ಲಾ ಸ್ಕಿಯಿಂಗ್ ಕ್ರೀಡೆಯಲ್ಲಿ ಮಗ್ನರಾಗಿ ನಲಿಯುತ್ತಿದ್ದುದನ್ನು ಕಂಡ ಕೃಷ್ಣೆಗೆ ಆ ಆಟವನ್ನು ತಾನೂ ಕಲಿಯಬೇಕೆಂದು ಮನಸಾಯಿತು. ಅಣ್ಣ ಜವಹರಲಾಲರ ಬಳಿಗೆ ಹೋಗಿ ತನ್ನ ಆ ಬಯಲಾಪೆಯನ್ನು ವ್ಯಕ್ತಪಡಿಸಿದಳು.

"ಸ್ಕಿಯಿಂಗ್ ಆಟವನ್ನು" ಜವಹರಲಾಲರು ಕಲಿತ್ತಿದ್ದರು. ತಂಗಿಯ ಬಯಕೆಯನ್ನು ಕೇಳಿದಾಗಲೇ ಳಿಕೊಡುವೆನೆಂದು ಒಪ್ಪಿಕೊಂಡರು. ಆದರೆ ಆ ಆಟ್ಕ ಕೃಷ್ಣೆಗೆ ಬೇಗ ಬರಲಿಲ್ಲ. ಜಾರುವ ಮಂಜಿನ ಮೇಲೆ ಕಾಲಿಗೆ ಎತ್ತರದ ಪಟ್ಟಿಗಳನ್ನು ಕಟ್ಟಿಕೊಂಡು ಬೀಳದಂತೆ ನಿಲ್ಲುವುದು ಮೊದ ಮೊದಲು ಕೃಷ್ಣೆಗೆ ಬಹಳ ಕಷ್ಟವಾಗಿಯೇ ತೋರಿತು. ಎಳೆಯ ಮಕ್ಕಳು ನಡಿಗೆಯನ್ನು ಕಲಿಯುವಾಗ ಬೀಳುವಂತೆ ಕೃಷ್ಣೆ ಹತ್ತಾರು ಬಾರಿ ಬಿದ್ದಳು. ಅದನ್ನು ಕಂಡ ಜವಹರಲಾಲರು, 'ನೀನು ವನಸ್ಪಿಟ್ಟು ಕಲಿಯುತ್ತಿಲ್ಲ' ಎಂದೇ ಅಕ್ಷೇಪಿಸಿದರು. ಮರಳಿ ಯತ್ನ ಮಾಡಿದರೂ ಕೃಷ್ಣೆ ಪುನಃ ವಿಫಲಳೇ ಆದಳು.

ಅದನ್ನು ಕಂಡ ಜವಹರಲಾಲರಿಗಂತೂ ಸಿಟ್ಟು ಉಕ್ಕೇರಿ ಬಂತು. "ನೀನೇನು ಹುಡುಗಾಟ ಆಡುತ್ತಿರುವೆಯೇನು? ಅಥವಾ ಇದು ಆಟ—ಕಲಿಯುವುದು ಸುಲಭ—ಎಂದು ಕೊಂಡೆಯೋ? ಆಟವಾದರೂ ಮನಸ್ಸಿಟ್ಟೇ ಕಲಿಯಬೇಕು. ಹೀಗೆ ಕಲಿತರೆ ಇನ್ನು ನೂರು ವರ್ಷ ಕಲಿತರೂ ನಿನಗೆ ಬರುವುದಿಲ್ಲ," ಎಂದು ನಿಷ್ಕೂರವಾಗಿ ಹೇಳಿಬಿಟ್ಟರು.

ಮತ್ತೊಮ್ಮೆ ಅಣ್ಣನನ್ನು ಕೇಳಬಾರದೆಂಬ ಹಠದೇ ಕೃಷ್ಣೆಗೆ ಮೂಡಿತೋ ಅಥವಾ ಕೇಳಲು ಧೈರ್ಯವೇ ಆಗಲಿಲ್ಲವೋ —ನುಂಡಿ ಆಕೆ ಪುನಃ ಜವಹರಲಾಲರನ್ನು ಕೇಳಲಿಲ್ಲ. ಬೇರೆಯವರ ಸಹಾಯದಿಂದಲೇ ಆ ಆಟವನ್ನು ಕಲಿತ ಜವಹರಲಾಲರ ತಂಗಿ ಪ್ರವೀಣ ಸ್ಕಿಯಿಂಗ್ ಪಟುವೆನಿಸಿಕೊಂಡಳು.

ಕೃಷ್ಣೆ ನಂಬಿಯಿಯಲ್ಲಿದ್ದಾಗ ಆಕೆಗೆ ಜಿ. ಸಿ. ಹೆಜ್ಜೇಸಿಂಗ್ ಎಂಬಾತನ ಪರಿಚಯವಾಯಿತು. ಪರಿಚಯ ವಿಶ್ವಾಸದ ಮೂಲಕವಾಗಿ ಇದು ಸ್ನೇಹಾಮಾಗ್ಯಕ್ಕೆ ತಿರುಗಿತು. ವಿವಾಹವನ್ನಾಗಲು ಇಬ್ಬರೂ ನಿಶ್ಚಯಿಸಿಕೊಂಡರು. ಕೃಷ್ಣೆ ಅಣ್ಣನ ಒಪ್ಪಿಗೆಯನ್ನು ಪಡೆಯಲು ಅಲಹಾಬಾದಿಗೆ ಬಂದಳು. ಆದರೆ ನೇರವಾಗಿ ಅಣ್ಣನಿಗೇ ತಿಳಿಸಲು ಅಂಜಿಕೆ. ಮೊದಲು ಅಕ್ಕ ವಿಜಯಲಕ್ಷ್ಮಿಗೇ ಆಕೆ ತಿಳಿಸಿದುದು. ಅಣ್ಣನಿಗೆ ತಿಳಿಸಬೇಕೆಂದು ಆಕೆಯನ್ನೇ ಕೋರಿಕೊಂಡಳು. ವಿಜಯಲಕ್ಷ್ಮಿಯ ಮೂಲಕವೇ ೦ ವಿಚಾರ ಜವಹರಲಾಲರಿಗೆ ಗೊತ್ತಾದುದು.

ಆ ವಿಚಾರವಾಗಿ ಹೆಚ್ಚಿನ ವಿವರಗಳನ್ನು ಕೃಷ್ಣೆಯಿಂದಲೇ ತಿಳಿಯಲು ಜವ

(ಆಪ್ಪತ್ತೆರಡನೇ ಪುಟ ನೋಡಿರಿ)

With best compliments from
HOTEL
SHIVAPRASAD
COONDAPUR
Phone : 77



ಅತ್ಯಾಧುನಿಕ ಸಲಕರಣೆ—ನೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೊಟೆಲ್ ಶಿವಪ್ರಸಾದ
ಕುಂದಾಪುರ
ಫೋನ್. 77

ಮಾತೆ ಭಾರತಿಯ ಆಶೋತ್ತರವೇನು?

ಬರೆದವರು

ಶ್ರೀ ಶಿರ್ತಾಡಿ ವಿಲಿಯಂ ಹಿಂಟೋ, ಎಂ. ಎ. ಎಲ್. ಎಲ್. ಬಿ.

ಮಾತೆ ಶಾಂತಳಾಗಿ ಮಕ್ಕಳನ್ನು ಪೊರೆಯಬಲ್ಲಳು; ರುದ್ರಳಾಗಿ ತನ್ನಲೂ ಬಲ್ಲಳು. ಭಾರತಿ ರುದ್ರರೂಪ ತಾಳುವುದಕ್ಕೆ ಮೊದಲೇ ನಾವೆಲ್ಲ ಜಾಗೃತರಾಗೋಣ; ಆಕೆಯ ಆಶೋತ್ತರಗಳನ್ನು ನಾವಾಗಿಯೇ ಪೂರೈಸೋಣ.

ಲೇಖಕರು

●

ಭಾರತ ಮಾತೆಯು ಉದರದಲ್ಲಿ ಹುಟ್ಟಿ ಬೆಳೆದ ಹಸುಳೆಗಳು ನಾನಾಗಿದ್ದೇನೆ. ಭಾರತ ಮಾತೆ ನನ್ನುನ್ನು ಸಾಕಿಸಲಹುತ್ತಿದ್ದಾಳೆ. ಮಾತೃ ಭೂಮಿಯ ಸುಖವು ಸ್ವರ್ಗಕ್ಕಿಂತಲೂ ಶ್ರೇಷ್ಠವಾಗಿದೆ. ಭಾರತ ಮಾತೆ ನನ್ನ ಮೇಲಿಟ್ಟಿರುವ ವಾತ್ಸಲ್ಯ, ಕರುಣೆ, ದಯೆ, ಮತ್ತು ಮಾತೃ ಭೂಮಿಯಲ್ಲಿ ನನಗೆ ಸಿಕ್ಕುವ ಆನಂದ, ಸುಖ, ಉತ್ಸಾಹ ನನಗೆ ಸ್ವರ್ಗದಲ್ಲೂ ದೊರೆಯಲಿಕ್ಕಿಲ್ಲ. ಈ ತಾಯಿಯ ಕೃಪೆಯೂ ಆಶೀರ್ವಾದವೂ ದೊರೆತರೆ ನನಗೆ ಯಾವ ತರದ ಕಷ್ಟ, ದುಃಖಾದಿಗಳು ಬರಲಿಕ್ಕಿಲ್ಲ.

ಭಾರತ ಮಾತೆಯು ಎದುರಿನಲ್ಲಿ ಅವಳ ಮಕ್ಕಳಾದ ನಾವೆಲ್ಲರು ಸಮಾನರು—ಸಹೋದರ ಸಹೋದರಿಯರು. ಯಾವ ರೀತಿಯಲ್ಲಿ ಹೆತ್ತ ಅಬ್ಬೆಗೆ ತನ್ನ ಎಲ್ಲ ಮಕ್ಕಳು, ಕುಂಟ— ಕುರುಡ — ಐಶ್ವರ್ಯವಂತನೇ ಇರಲಿ—ಹೇಗೆ ಸಮಾನರೋ—ಹಾಗೆಯೇ ಭಾರತಿ ನಮ್ಮನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದಾಳೆ. ಅವಳ ಮುಕ್ಕಳಲ್ಲಿ ಕೆಲವರು ಐನ್ಶೈತಿಕ ವ್ಯವಹಾರಗಳಾದ ಕಾಳಸಂತೆ, ಲೈಸನ್ಸ್— ಕಂಟ್ರಾಕ್ಟ್— ಪೋಟಾ ನಾಣ್ಯ — ಇತ್ಯಾದಿಗಳಿಂದ ಹೇರಳ ದ್ರವ್ಯ ಸಂಪಾದನೆ ಮಾಡಿ ತನ್ನ ಇನ್ನಿತರ ಮಕ್ಕಳನ್ನು ಹಿಂಸಿಸುವುದನ್ನು ನೋಡುವಾಗ್ಗೆ ಅವಳ ಮನಸ್ಸು ನೋಯುತ್ತಿದೆ.

ಹೊಟ್ಟೆಗೆ ಅನ್ನವಿಲ್ಲದೆ 'ಅನ್ನ—ಅನ್ನ' ಎಂದು ಬೊಬ್ಬಿಡುತ್ತ—ಬೀದಿಯ ಬದಿಯಲ್ಲಿ ಬಿನಾಡಿದ ಎಂಜಲನ್ನಕ್ಕೆ ಬಾಯಿ ಕ್ಕುವ ತನ್ನ ಕೆಲವು ದರಿದ್ರ ಪುತ್ರರನ್ನು ನೋಡಿ ಅವಳು ಕೂಗುತ್ತಿದ್ದಾಳೆ. ನಿಳ್ಳಲಿಕ್ಕೆ ತಾವಿಲ್ಲದೆ ಮೂರ್ಗದ ಬದಿಗಳಲ್ಲಿಯೇ ಹೊರಳಾಡುವ ಮಕ್ಕಳ ಒಗ್ಗೆ ಆಕೆಗೆ ಸಹಾನುಭೂತಿ ಇದೆ.

ಇನ್ನೊಂದು ಕಡೆ ಅಗರ್ಭ ಶ್ರೀಮಂತರು ಹಣದ ಜೋಲು ಮಾಡುತ್ತ ಸುತ್ತಿ ಲೋಲುಪರಾಗಿ ತಮ್ಮ ವಿಲಾಸಮಯ ಜೀವ ಕಳೆಯುವುದನ್ನು ಭಾರತಿ ನೋಡುತ್ತಿದ್ದಾಳೆ. ತನ್ನ ಮಕ್ಕಳೊಳಗೆ ಇಂತಹ ಅಜಗಜಾಂತರ ಆರ್ಥಿಕ ವೈಷಮ್ಯವನ್ನು ಅವಳು ಸಹಿಸುವಂತಿಲ್ಲ. ತನ್ನ ಹೃತಿಯೊಂದು ಮಗುವಿಗೂ ಜೀವನಾವಶ್ಯಕವಾದ, ಅನ್ನ, ವಸ್ತ್ರ, ವಸತಿ—ಮುಂತಾದವುಗಳು ದೊರಕಲೇ ಬೇಕೆಂದು ಅವಳ ಅಶಯವಾಗಿದೆ. ತನ್ನ ಮುದ್ದು ಕಂದಮ್ಮಗಳ ಕ್ಷೇಮಲಾಭವನ್ನು ನಿರಂತರವೂ ನೋಡುತ್ತಿರುವವಳು ಅವಳು. ತನ್ನ ಮಕ್ಕಳ, ಹೊಟ್ಟೆಗೆ ಆಹಾರ ವಸ್ತ್ರ, ಮೈಗೆ ಬಟ್ಟೆಗಳಿಲ್ಲದೆ ತೊಳಲಾಡುತ್ತಿರುವುದನ್ನು ಅವಳು ಕಾಣಲಾರಳು. ಆದುದರಿಂದ ಸಾಧ್ಯತೆ ಇರುವ ತನ್ನ ಪುತ್ರರಿಗೆ ಭಾರತಿ ಹೇಳುತ್ತಿದ್ದಾಳೆ. 'ಪುತ್ರರೇ, ನನ್ನ ಇನ್ನಿತರ ಮಕ್ಕಳನ್ನು ಯಾಕೆ ಹಿಂಡುವಿರಿ? ಅಲ್ಲ ಸಲ್ಲದ ಕಷ್ಟ ಕಾರ್ಪಣ್ಯಗಳನ್ನು ಕೊಟ್ಟು ಯಾಕೆ ಬಳಲಿಸುತ್ತಿರುವಿರಿ; ದಯಮಾಡಿ ಅವರನ್ನು ಪ್ರೀತಿಯಿಂದ, ಸಮಾನತೆಯಿಂದ ನೋಡಿರಿ.''

ನನ್ಮಾತಾಮ್ಮೂಡು ಸೃಷ್ಟಿ ಸೌಂದರ್ಯದ ನೆಲೆಬೀಡು, ಸಂಪತ್ತಿನ ಹುಟ್ಟೂರು— ವೀರರಿಗೆ ತವರು ಮನೆ. ಯೋಗಿಗಳ ವಾಸಸ್ಥಾನ ಮತ್ತು ಕವಿಗಳ ಜನ್ಮ ಭೂಮಿ, ಅಂತಹ ತಾಯ್ನಾಡಿನಲ್ಲಿ—ಜಾತಿ, ಭಾಷೆಯ ಹೆಸರಿನಲ್ಲಿ ಒಡಕು ಹುಟ್ಟಿ ಭಾರತ ಛಿದ್ರ ಛಿದ್ರವಾಗುತ್ತಿರುವ ದೃಶ್ಯವನ್ನು ಭಾರತಿ ನೋಡಿ ಬೊಬ್ಬಿಡುತ್ತಿದ್ದಾಳೆ. ಭಾಷಾ ಗಲಭೆಯಲ್ಲಿ ಕಳೆದ ವರ್ಷ ಮದ್ರಾಸಿನಲ್ಲ ಕೆಲವು ಪುತ್ರರು ಸುಟ್ಟು ಗೊಂಡು ಆತ್ಮಹತ್ಯೆ ಮಾಡಿಕೊಂಡ ಕರಾಳ ಚಿತ್ರ—ಪಂಜಾಬು —ನಾಗಾಲ್ಯಾಂಡು— ಮಹಾರಾಷ್ಟ್ರದಲ್ಲಿ ಭಾಷೆಯ ಹೆಸರಿನಲ್ಲಿ ನಡೆದ ಅನ್ಯಾಯಗಳ ಪರಂಪರೆಯು ನಿರಾತಂಕವಾಗಿ ಮುಂದುವರಿದಿರುವ ಎಂಬುದಾಗಿ ಭಾರತಿ ನಮಗೆ ಹೇಳುತ್ತಿದ್ದಾಳೆ.

ಯೋಗ್ಯತೆಯ ತನ್ನ ಪುತ್ರರಿಗೆ—ಹಿಂದುಳಿದವ, ಮುಂದುವರಿದವ ಎಂಬ—ಭೇದದಲ್ಲಿ ಕೆಲವ ಸಿಕ್ಕದೆ ಅವರು ಬೀದಿ ಭಿಕ್ಷಾರಿಗಳಂದ ಅನೇಕ ದೃಶ್ಯಗಳು ಅವಳ ಕಣ್ಣೆದುರಿನಲ್ಲಿವೆ. ಇಂತೆಯೇ ಯೋಗ್ಯತೆ, ಸಾಮರ್ಥ್ಯ ವಿದ್ದೂ ಇಷ್ಟದೆಯೇ "ಇನ್ ಫ್ಲುಯೆನ್ಸ್" ನ ಬಲದಿಂದ ಕುಬೇರರಿಂದ ಕಪಟ—ಮುಕ್ಕಳನ್ನು ಅವಳು ಶಪಿಸುತ್ತಿದ್ದಾಳೆ.

ಭಾರತದ ಪ್ರಧಾನಿಯಾಗಿ ಬೇಕಾಗಿದ್ದ ತನ್ನ ಪ್ರೀತಿಯ ಪುತ್ರ 'ಲೈತ' ಒಪ್ಪೊತ್ತು ಊಟಕ್ಕೂ ಇಲ್ಲದೆ, ಬಡಕಲು ಕೋಲು ಶರೀರದವನಾಗಿ, ಉಳುತ್ತಲಿದ್ದ ನಾಲ್ಕು ಜೋಡಿ ಕೋಣಗಳು ಮಂಗಮಾಯವಾಗಿ. ಕೋರ್ಟ್‌ನ — ಡಿಕ್ರಿಗಳು, ಜಪ್ತಿ, ವಾರಂಟ್, ಪೊಲಿ, ಸಾಲದ ಭಯ ಇದರಿಂದಾಗಿ ಜರ್ಝರಿತವಾಗುತ್ತಿದ್ದಾನೆ. ಆತನಿಗೆ ಸಮಾಜದಲ್ಲಿ ಗೌರವ ಸಲ್ಲುತ್ತಿಲ್ಲ. ಆತನ ಸ್ಥಿತಿ ಭಯಾನಕವಾಗಿದೆ.

ಮಧ್ಯಮ ವರ್ಗದ ತನ್ನ ನೆಚ್ಚಿನ ಮಕ್ಕಳು ಚಿಕ್ಕ ವ್ಯಾಪಾರಿಗಳು, ಅಧ್ಯಾಪಕರು, ಇನ್ನಿತರ ಸಣ್ಣ ಉದ್ಯೋಗಿ ಕೂಲಿ—ಮಜೂರ ವರ್ಗದ ಜನ ಇನ್ನು ಯಾವ ತರದ ರಕ್ಷಣೆ ಇಲ್ಲದೆ ತೊಳಲಾಡುತ್ತಿರುವ ಚಿತ್ರ—ನಿತ್ಯೋಪಯೋಗಿ ವಸ್ತುಗಳ ಬೆಲೆ ನೂರರಷ್ಟು ಏರಿದೆ. ಕಟ್ಟಿಗೆ,ಹಾಲು, ತರಕಾರಿ, ವಸತಿ ಎಷ್ಟು ತೆತ್ತರೂ ದೊರೆಯುವಂತಿಲ್ಲ. ಸಂಘಟನೆ, ಪರಿಜ್ಞಾನಗಳಿಲ್ಲದ ವರ್ಗ ಮಧ್ಯಮ ವರ್ಗದ ಜನತೆ ಏನನ್ನು ಮಾಡಿದರೂ ಕೂಳನ್ನು ಪಡೆಯುವುದು ದುಸ್ತರವಾಗಿದೆ. ಮಧ್ಯಮ ವರ್ಗದ ಜನ ನಶಿಸಿ ಹೋಗುವ ಕಾಲ ಸನ್ನಿಹಿತವಾಗಿದೆ.

ದಿನಾಲು ಬಂಗಾರದ ಮೊಟ್ಟೆ ಇಡುತ್ತಿದ್ದ ಕೋಳಿಗೆ ಒಬ್ಬ ಅತ್ಯಾಶೆಯಿಂದ ಧನಿಕನಾಗಬೇಕೆಂಬ ಬಯಕೆಯಿಂದ ಜೂರಿ ಹಾಕಿದನಂತೆ— ಅಧಿಕಾರ ದರ್ಪದಿಂದ ಆಳುವ ಸರಕಾರ—ಅಲ್ಲ ಸಲ್ಲದ ತೆರಿಗೆಗಳ ಹೊರೆಯನ್ನು ಮಧ್ಯಮವರ್ಗದವರ ಮೇಲೇ ಹೇರಿ — ಮಧ್ಯಮ ವರ್ಗದವರನ್ನು ಜೂರಿಯಿಂದ ಇರಿಯುತ್ತಿರುವ ಚಿತ್ರ ಭಾರತಿಗೆ ಸಹಿಸಲಿಕ್ಕಾಗುವುದಿಲ್ಲ.

ತನ್ನ ಮಕ್ಕಳ ಮೇಲೆ ಹೀಗೆ ಅನೂನ ಸವಾಗಿ ಗದಾ ಪ್ರಹಾರವಾಗುತ್ತಿರುವುದನ್ನು ನೋಡಿ ಭಾರತಿ—'ಹೋ' ಎಂದು ಗೋಳಿಡುತ್ತಿದ್ದಾಳೆ. ಅವಳ ಕೂಗು ಅವಳ ಕೂಸುಗಳಿಂದ ನಮ್ಮ ಹೃದಯದಲ್ಲಿ ಪ್ರತಿಬಿಂಬಿಸುತ್ತದೆ. ಈ ಆರ್ತನಾದ ಕೇಳಿದ ಮೇಲಂತೂ ನಾವು ನಿದ್ರೆಯಿಂದ ಎಚ್ಚತ್ತೇಳಿ ಜಾಗೃತರಾಗಿ— ದುಷ್ಟ ಶಕ್ತಿಗಳ ಮೇಲೆ ಹೋರಾಡಬೇಕಾಗಿದೆ. ನಮ್ಮ ತಾಯಿಯ ಮಾತು ಕೇಳಿ ಕೂಡಾ ನಾವು ಕರ್ತವ್ಯ ಚ್ಯುತರಾಗಿ— ಕೆಡುವಂತೆ ವರ್ತಿಸಿದರೆ — ದೀನ—ದಲಿತ— ಕೋಟಿಗಟ್ಟಲೆ ಬಡಮಕ್ಕಳ ಉದ್ಧಾರಕ್ಕೋಸ್ಕರ— ಭಾರತಿಯೇ ರೌದ್ರಾವತಾರ ತಾಳಿ, ಎದ್ದೇಳಿ—ಸಮಾಜವನ್ನು ಕೊರೆಯುತ್ತಿರುವ ದುಷ್ಟ ಶಕ್ತಿಗಳ ದವನ ಮಾಡದೆ ಇರಲಾರಳು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26--4--1966.

ಎಲ್ಲಿಹನುಕ ಪೇಳಮ್ಮಾ!

ಎಲ್ಲಿಹನುಕ ಪೇಳಮ್ಮಾ!
ಆಡಗಿ ಕುಳಿತಿಹನೇಕೆ ಹೇಳಮ್ಮಾ
॥ ಪ ॥

ಎಲೆಯಲಿ ಹಸಿರನು | ನವಿಲಲಿ ಚಿತ್ರನು
ನೆಲದಲಿ ಬದುಕನು| ಜಲದಲಿ ರುಚಿಯನು
ಇಟ್ಟಿಹನಾವನು ಪೇಳಮ್ಮಾ
ಅವನಾ ಮುಖವನು ತೋರಮ್ಮಾ
॥ ೧ ॥

ತರಣಿಗೆ ತೇಜವ | ರಮಣಿಗೆ ರೂಪವ
ಧರಣಿಗೆ ಧಾಮವ | ಹರಿಣಿಗೆ ಚಪಲವ
ನಿತ್ತವ ನಾವನು ಪೇಳಮ್ಮಾ
ಅವನಾ ನೆಲೆಯನು ತೋರಮ್ಮಾ ॥ ೨ ॥

ದೀಪದಿ ದೀಪ್ತಿಯು | ಜಗದಲಿ ವ್ಯಾಪ್ತಿಯು
ಮನದಲಿ ಭಕ್ತಿಯು| ಬಗೆಯಲಿ ಯುಕ್ತಿಯ
ಹರಿಡಿದನಾವನು ಪೇಳಮ್ಮಾ
ಅವನಾ ರೂಪವ ತೋರವಮ್ಮಾ ॥ ೩ ॥

ಬಾನಿಗೆ ಬಣ್ಣವ | ಕಡಲಿಗೆ ಶೌರ್ಯವ
ವಡಲಿಗೆ ಹಸಿವೆಯು | ಪೊಡವಿಗೆ ಚಲನೆಯ
ನಿತ್ತವ ನಾವನು ಪೇಳಮ್ಮಾ
ಅವನಾ ಬಗೆಯನು ತೋರವಮ್ಮಾ ॥ ೪ ॥

ಗಾಳಿಗೆ ವೇಗವ| ಮೋಡದಿವಾರಿಯ
ಹುಸ್ಪದಿ ವಾಸನೆ| ತೋಯದಿ ವಡಬೆಯ
ನಿರಿಸಿದನಾವನು ಪೇಳಮ್ಮಾ
ಅವನಾ ಧಾಮವ ತೋರಮ್ಮಾ ॥ ೫ ॥

ಗುಡಿಯೊಳಗಿಹನೆ! ಮನದೊಳಗಿಹನೆ
ಮನದೊಳಗಹನೆ! ಜನದೊಳಗಿಹನೆ
ಕಾಣದೆ ಎಲ್ಲರೊಳಿರುವಿಹನೆ
ಕಾಣದೆ ಎಲ್ಲರೊಳಗಡಗಿಹನೆ ॥ ೬ ॥

ಕಾಣದೆ ಕುಳಿತಿಹನೇತಕೆ — ಹೀಗೆ?
ಕಾಣದ ಅವನನು ಭಜಿಪುದು ಹೇಗೆ?
ಕಾಣಲು ಅವನಿಗೆ ಅಂಜಿಕೆ—ಯೇನೆ?
ಕಂಡರೆ ಕೇಳುವೆನವನಿಗೆ ನಾನೆ ॥ ೭ ॥

—ದಿಗಂಬರ ಜೋಶಿ, ಬೆಳಗಾವಿ.

ಅಮೃತ ಬಿಂದು

ಸಮುದ್ರದ ನೀರು ಆವಿಯಾಗಿ ಮೇಲೇರಿದಾಗ ಮಾತ್ರ ಪವಿತ್ರಗೊಂಡು ಮಳೆಹನಿಯಾಗಿ ಪರಿವರ್ತಿತವಾಗುತ್ತದೆ. ಅದರಂತೆ ಮನುಷ್ಯನ ಭಾವನೆ ಉತ್ತುಂಗಗೊಂಡಾಗ ಮಾತ್ರ ಅತ ಪವಿತ್ರನಾಗುತ್ತಾನೆ.

ಂ ಂ ಂ

ಯುವಕರು ಆಲಿಸುವುದಾದರೆ ಅವರಿಗೆ ಒಂದೇ ಬುದ್ಧಿವಾದ ಹೇಳಬಲ್ಲೆ. "ಜೀವನವನ್ನು ಕದುಪಡೋಗ ಗೊಳಿಸು.

ಂ ಂ ಂ

ಯೋಗ್ಯತೆ, ದಕ್ಷತೆ ಮತ್ತು ಅದೃಷ್ಟ ಇವು ಮೂರು ಒಂದನ್ನೊಂದು ಅವಲಂಬಿಸಿವೆ ಯೆಂಬುದು ಅನೇಕ ತಲೆಗೆಡಿಸಿಗಳಿಗೆ ತಲೆದಿಲ್ಲಂ.

ಂ ಂ ಂ

ತಮ್ಮಲ್ಲಿ ಸ್ವಂತ ಬೆಳಕಿರುವವರು ಎಂದೂ ಇತರರ ಉಪಗ್ರಹಗಳಂತೆ ಅವರ ಸುತ್ತ ಸುತ್ತಲಾರರು.

[ಇದೊಂದು ಮಲೆಯಾಳ ಕತೆ. ಶ್ರೀ ಕೆ. ಎಮ್. ಜಾರ್ಜರು ಇಂಗ್ಲೀಷಿಗೆ ಅನುವಾದಿಸಿದುದನ್ನು, ಕನ್ನಡಿಗರು ಕುಸುಮಟ್ಟಗಾದರೂ ಸರ ಪ್ರಾಂತೀಯರ ಕಥಾ ಸಾಹಿತ್ಯದಲ್ಲಿನ ಪ್ರಗತಿಯನ್ನು ತಿಳಿಯ ಬೇಕೆಂಬ ಹಂಬಲದಿಂದ ಕನ್ನಡದಲ್ಲಿ ಕೊಡಲಾಗಿದೆ.]

ನಾನೀ ಕೃತಿಯನ್ನು ಬರೆಯುವುದು, ನಾನೊಂದು ಕತೆಯನ್ನು ಬರೆಯಬೇಕೆಂಬ ಉದ್ದಿಶ್ಯದಿಂದಲ್ಲ; ಅಬ್ದುಲ್ ಖಾದರ್ ನಾಹೇಬರ ಆಗ್ರಹದಿಂದ. ಈ ಕತೆಯಲ್ಲಿ ಒಳ್ಳೆಯ ನೀತಿ ಅಡಕವಾಗಿದೆಯೆಂದು ಅವರ ಅಭಿಪ್ರಾಯ. ಅವರು ನನಗೆ ಕೀಟಲೆ ಕೊಟ್ಟು ಇದನ್ನ ಬರೆಸಿರುತ್ತಾರೆ. ಈ ಕತೆ ಅವರ ಹೆಂಡತಿ ಜಮಿಲಾ ಬೀಬಿಯವರಿಗೆ ಸಂಬಂಧಿಸಿದ್ದು.

ಜಮಿಲಾ ಬೀಬಿ ಪದವೀಧರೆ. ಅಬ್ದುಲ್ ಖಾದರ್ ಸ್ಕೂಲ್ ಫೈನಲ್ ವರೆಗೆ ಓದಿರುತ್ತಾರೆ. ಬರೀ ಸ್ಕೂಲ್ ಫೈನಲ್ ವೂತ್ರ ಕಲಿತವನೊಬ್ಬ ಬಿ. ಎ. ಓದಿದ ಹೆಣ್ಣನ್ನು ಮದುವೆಯಾಗುವುದು ಪ್ರಚಲಿತ ರೂಢಿಯಲ್ಲಿದ್ದ ನಡೆವಳಿಕೆಗೆ ಸಮಂಜಸವೇ? ಆದರೆ ಅಬ್ದುಲ್ ಖಾದರನ ಅಂಬೋಣದಂತೆ ಆತ ಯುದ್ಧ ಕಾರ್ಯದಲ್ಲೂ ನಿಮಗ್ನನಾಗಿದ್ದ. ಹಳೆಯ ಕಾಲದಲ್ಲಿ ಗಂಡು ಹೆಣ್ಣಿನ್ನು ಅಪಹರಿಸುತಿದ್ದರು. ಹೆಂಗಳೆಯರನ್ನು ದಾರದಿಂದ ಕಟ್ಟಿ ಎಳೆದೊಯ್ಯುತಿದ್ದರು! ಅದಲ್ಲದೆ ಹೆಂಗಸರನ್ನು ಅಪಹರಿಸಿ ಕೊಂಡೊಯ್ಯುವ ತಂತ್ರದಲ್ಲೂ ಅನೇಕ ವಿಧಾನಗಳವೆ. ಆದರೆ ಅಬ್ದುಲ್ ಖಾದರ್ ಇವೊಂದನ್ನೂ ಅನುಸರಿಸಲಿಲ್ಲ. ಯಾಕೆಂದರೆ ಆತನೊಬ್ಬ ಸಭ್ಯ ನಾಗರಿಕನಾಗಿದ್ದ.

ಮೊದಲೇನೋ ಆತ ಪಟ್ಟಣದ ತುಂಟಕೋರನಾಗಿದ್ದ. ಕಾಲ್ಚೆಂಡಾಟದಲ್ಲಿ ಒಳ್ಳೆಯ ಕೆಲಸಾಡಿಯೆಂದೂ ಹೆಸರು ಗಳಿಸಿದ್ದ. ಈಗ ಬೀಡಿ ಕಟ್ಟುವ ಕಾರ್ಮಿಕರ ಸಂಘದ ಕಾರ್ಯದರ್ಶಿ. ಆತ ಜಮಿಲಾ ಬೀಬಿಯೊಂದಿಗೆ ನಾಲ್ಕನೆಯ ಕ್ಲಾಸಿನ ವರೆಗೆ ವ್ಯಾಸಂಗ ಮಾಡಿರುವನೆಂದು ಹೇಳುತ್ತಾನೆ. ಅಲ್ಲದೆ ಅಂದಿನಿಂದ ಅವಳನ್ನು ಮನಸಾರೆ ಪ್ರೀತಿಸುತಿದ್ದನೆಂದೂಹೇಳುವನು ಆದರೆ ಇದ ಪೂರಾ ಸುಳ್ಳೆಂದು ಜಮಿಲಾ ಬೀಬಿ ಅನ್ನುತ್ತಾಳೆ.

ಅದೇನೋ ಇರಲಿ. ಜಮಿಲಾ ಪದವೀಧರೆಯಾದಳು. ಅವಳಪ್ಪನ ಬೀಡೀ ಫ್ಯಾಕ್ಟರಿಯು ನಾಕಷ್ಟು ಹಣದಿಂದಾಗಿ ಅಧುನಿಕ ರಮಣಿಯಂತೆ ಮೆರೆಯುತಿದ್ದಳು. ಪ್ಯಾತನ್ನು ಮೂಡುತಿದ್ದಳು.

ಆ ಸಮಯ ಪಟ್ಟಣದ ಯುವಕರೆಲ್ಲ ಅಕೆಯ ಅಂಧಕರು. ಅವಳನ್ನೆ ಮೆಚ್ಚುವವರು, ಪ್ರಣಾಯ—ಪ್ರೇಮ ಗೀತಗಳನ್ನು ಬರೆಯಬಲ್ಲ ಅನೇಕ ನಿಪುಣ ಯುವಕರು ಆಕೆಯ ರೂಪ ಲಾವಣ್ಯಗಳ—ವೈಯಾರ ಶೃಂಗಾರಗಳ ಮೇಲೆ ಕವನಗಳನ್ನು ಬರೆದಿದ್ದರು. ಪ್ರಮುಖ—ಗಣನೀಯ ಯುವಕರೆಲ್ಲ ಜಮಿಲಾಳ ಹೈದಯಕ್ಕಾಗಿ ಬಾಯಿಬ್ಬಿಸಿ ನೀರು ಸುರಿಸಿ "ಕ್ಯೂ" ನಿಲ್ಲುತಿದ್ದರು ಆದರೆ ಅಬ್ದುಲ್ ಖಾದರ ಮಾತ್ರ ಆ ಕ್ಯೂನಲ್ಲಿ ಇರಲಿಲ್ಲ.

ಪ್ರೇಮ ಗೀತೆಯನ್ನೂ ಗೀಚಲಿಲ್ಲ. ಕವನವನ್ನೂ ಕಟ್ಟಲಿಲ್ಲ. ಅಂತಹ ಯತ್ನಗಳಲ್ಲೇ ಅವನಿಲ್ಲ. ಅದೆಲ್ಲ ಅವನಿಗೆ ಸಾಗದ ಸಾಹಸವೆನ್ನುವನು. ಆದರೆ ಆತ ನೊಂದು ಪ್ರೇಮ ಗೀತೆಯನ್ನು ಬರೆದಿರುವನೆಂದು ಜಮಿಲಾ ಬೀಬಿ ಹೇಳುತ್ತಾಳೆ. ಇದು ತೀರಾ ಸುಳ್ಳು ಎಂದು ಅಬ್ದುಲ್ ಖಾದರ್ ಹೇಳುತ್ತಾನೆ.

ಅಬ್ದುಲ್ ಖಾದರ್ ನಿಜಕ್ಕೂ ಮೂಡಿದ್ದೇನೆಂದರೆ ಹೀಗೆ: ಒಂದು ದಿನ ಆತ ಹುಡುಗಿಯನ್ನು ಗಲ್ಲಿಯೊಂದರ ನಡುವೆ ತಡೆದು ನಿಲ್ಲಿಸಿದ. "ನೀನು ಜಮಿಲಾ ಬೀಬಿಯಲ್ಲವೇ?" ಎಂದು ಕೇಳಿದ;

ಜಮಿಲಾ ಬೀಬಿಗೆ ಈ ಪ್ರಶ್ನೆ ರುಚಿಸಿಲಿಲ್ಲ. ಅಕೆಯನ್ನು ಅರಿಯದ ಯಾರೊಬ್ಬ ಯುವಕನಾದರೂ ಆ ಪಟ್ಟಣದಲ್ಲಿ ಇರುವನೇನು? ಆಕೆ ತುಂಬಿದ ತರುಣಿ. ಹೆಮ್ಮೆ ಅಹಂಕಾರಗಳಿಂದ "ಜಮಿಲಾ ನಾನಾದರೇನಾಯಿ ತಂತೆ!" ಎಂದು ಧಿಕ್ಕರಿಸಿ ಉತ್ತರಿಸಿದಳು.

ಅಬ್ದುಲ್ ಖಾದರ್ ವೆಲ್ಲನೆ ಮುಗುಳ್ನಕ್ಕು ಬಿಟ್ಟನು. ಬಹಳೇ ಆಕರ್ಷಣೀಯವಾದ ನಗುವದು. ಜಮಿಲೆ ಅದನ್ನು ಮೊದಲೇ ನೋಡಿದುದ. ಅದುವೆ ಮೆಚ್ಚಿದಳು. ಆದರೆ ಅವಳು ಇದನ್ನು ತಿಳಿಯಗೊಡುವುದರಲ್ಲಿ ಅರ್ಧವಿಡಯೇ' ಕೂಡದು. ಅಲ್ಪ ಸ್ವಲ್ಪವಾದರೂ ಅನುರಾಗವಿದೆಯೆಂದು ಬಹಿರಂಗಪಡಿಸಿ ತಾನೊಬ್ಬಳು ಯಾಚಕಿ ಕುವರಿಯೇನಾಗಬೇಕು! ಕೊನೆಗೆ "ನಿನಗೇನು ಬೇಕು' ಎಂದು ಖಾಡಾ ಖಂಡಿತವಾಗಿ ಕೇಳಿಯೇ ಬಿಟ್ಟಳು.

"ಅಂತಹುದೇನೂ ಬೇಕಾಗಿಲ್ಲ" ಖಾದರ್ ಉತ್ತರಿಸಿದ, "ಜಮಿಲಾ ಬೀಬಿಯ ಅಪ್ಪನ ಫ್ಯಾಕ್ಟರಿಯಲ್ಲಿ ನೌರಿಪ್ಪತ್ತು ಬೀಡಿ ಕಟ್ಟುವ ಕೆಲಸಗಾರರಿರುತ್ತಾರೆ. ನಾನು ಅವರ ಕಾರ್ಯದರ್ಶಿ. ನನ್ನ ಹೆಸರು ಅಬ್ದುಲ್ ಖಾದರ್".

"ಹಾಗೇನಾ! ತಿಳಿದು ತುಂಬಾ ಸಂತೋಷವಾಯಿತು. ಆದರೆ ನೀನೊಬ್ಬ ತಂಟೆಕೋರನೆಂಬುದನ್ನು ಕೇಳಿ ಬಲ್ಲೆನು."

"ಹೌದು, ಬೀಡಿ ಕಾರ್ಮಿಕರೆಲ್ಲ ಒಂದು ಸಂಘವನ್ನು ಹೂಡಲು ಯೋಚಿಸುತಿದ್ದಾರೆ ನಿಮ್ಮ ಧ್ಯಾಕ್ಟರಿಯು ಬಾಗಿಲುಗಳನ್ನು ವಚ್ಚುವಂತೆ ಮಾಡುತ್ತೇನೆ.'

ಜಮಿಲಾ ಹೇಳಿದಳು. "ಇದನ್ನೆಲ್ಲ ನನಗೇಕೆ ಹೇಳುವಿ. ಹೋಗ. ನನ್ನ ಅಪ್ಪನ ಹತ್ತಿರ ಹೇಳು."

"ನಿನ್ನೊಡನೆ ಹೇಳಲು ಒಂದು ಕಾರಣವಿದೆ ಜಮಿಲಾ."

"ಅದೇನು?"

"ನಾನು ಜಮಿಲಾ ಬೀಬಿಯನ್ನು ಪ್ರೀತಿಸುತ್ತೇನೆ."

ಜಮಿಲಾಳ ಹೃದಯದಲ್ಲಿ ತಣ್ಣೀರು ಚೆಲ್ಲಿದಂತಾಯಿತು. ಆದೂ ಅವಳಿಗೆ ತುಸು ಅವಮಾನವಾದೆ ನೂಡಬೇಕೆಂಬ ಹುಮ್ಮಸ್ಸು ಬಂತು. ಅವಳು ನಕ್ಕಳು. ತಾತ್ಸಾರ ತುಂಬಿದ ತಿಳಿಗೇಡಿ ನಗುವದು. "ನನಗೆ ಸಂತೋಷ" ಎಂದಳವಳು.

"ಬೇರೇನು ಸಮಾಚಾರ ಪಟ್ಟಣದಲ್ಲಿ?'

ಈ ಪ್ರಶ್ನೆಯೂರಾಂದರೊಬ್ಬ ಸಾಮಾನ್ಯ ಯುವಕನಿಗೆ ಈ ಯುವತಿ ಕೇಳಿದಲ್ಲಿ ಆತ ತಣ್ಣಗಾಗುತಿದ್ದ ಬಿರುಚಿ ಹೋಗಿ ಕಿದ್ದ. ಆದರೆ ಅಬ್ದುಲ್ ಖಾದರ್ ಧೈರ್ಯದಿಂದ ಲೇ, ಸ್ಪರ್ಧೆಗೆ ಸಿದ್ಧನಿರುವೆನೆಂಬಂತೆ ಹೇಳಿಯೇ ಬಿಟ್ಟ

'ಜಮಿಲಾ—ನೀನು ನನ್ನನ್ನು ಮದುವೆಯಾಗಿದ್ದರೆ....'

"ನಿನ್ನನ್ನು ಮದುವೆಯಾಗದಿದ್ದರೆ ಏನು ಮಾಡುವೆ"

ತಾನು ಆತ್ಮಹತ್ಯೆ ಮಾಡಿಕೊಳ್ಳುವ ನೆಂದು ಅಬ್ದುಲ್ ಖಾದರ್ ಹೇಳಲಿಲ್ಲ. ಅದರ ಬದಲು "ನಿನ್ನ ಮೂಳೆಗಳನ್ನೆಲ್ಲ ಪುಡಿ ಪುಡಿಮಾಡಿ ಬಿಟ್ಟೇನು." ಎಂದು ಬಿಟ್ಟ.

ಜಮಿಲಾ ಒಂದು ಮಾತನ್ನೂ ಆಡಲಿಲ್ಲ.

ಅಬ್ದುಲ್ ಖಾದರ್ ಮುಂದುವರಿಸಿದ, "ಜಮಿಲಾ—ನೀನು ನನ್ನ ಬಾಳನ್ನು ಕೆಡಿಸಬೇಡ. ನಿಜಕ್ಕೂ ನಾನು ನಿನ್ನನ್ನು ಪ್ರೀತಿಸುತ್ತೇನೆ ನಿನ್ನ ಬಟ್ಟೆಬರೆಗಳನ್ನೂ, ಪ್ರೇಮಿಸುತ್ತೇನೆ. ಅಂಗಾಂಗಗಳನ್ನು ಪ್ರೀತಿಸುತ್ತೇನೆ. ನೀನು ನಡೆದ ಮಣ್ಣನ್ನು ಪ್ರೇಮಿಸುತಿದ್ದೇನೆ"

ಮುಂದೇನು ಹೇಳಲಿದೆ? ಜಮಿಲಾ ಬೀಬಿ ಅಬ್ದುಲ್ ಖಾದರನನ್ನು ಮೆಚ್ಚಿದಳು. ಆದರೆ ಅದನ್ನು ಪ್ರಕಟಪಡಿಸಲು ಇಚ್ಛಿಸಲಿಲ್ಲ ಆಕೆ ಕೇಳಿದಳು— "ದುರಿ ಹೋಕ ಹೆಂಗಳೆಯರನ್ನೆಲ್ಲ ಕಡೆದು ನಿಲ್ಲಿಸಿ ಎಲ್ಲರೊಂದಿಗೆ ಇದೇ ರೀತಿ ಪ್ರೇಮ ಪ್ರಲಾಪ ಮಾಡುತ್ತಿರುವೆ! ಅಲ್ಲವೇ?"

'ಇಷ್ಟು, ಜಮಿಲಾ. ನಿನ್ನ ಹೊರತು ಬೇರೊಂದು ರಮಣಿಯನ್ನೂ ಇದುವರೆಗೆ ತಡೆಯಲಿಲ್ಲ. ಒಂದು ಮಾತನ್ನಾದರೂ ಆಡಲಿಲ್ಲ. ಬೇರೊಬ್ಬಳನ್ನು ಕಣ್ಣೆತ್ತಿ ಕೂಡಾ ನೋಡಲಿಲ್ಲ. ನೀನೇ ನನ್ನ ಕಣ್ಮಣಿ! ದೀಪವಾಹನಿ—ಮನಮೋಹನಿ."

'ಬೇರೇನು' ಎಂಬ ಬದುಸಿಸಿಂದಲೇ ಕೇಳಿದಳು.

"ನೀನು ನನಗೆ; ನಾನು ನಿನಗೆ" ಉತ್ತರ.

"ಛಯ್ಯೋ, ನನಗೆ ಒಹೆಳ ಅನಂದವಾಯಿತ!' ಎಂದವಳ ಆಕೆ ಮುಂದೆ ನಡೆದಳು.

ಈ ರೀತಿನಾಗಿ ತಮ್ಮ ಪ್ರಣಯ ಸಮರ ಪ್ರಾರಂಭವಾಯಿತು. ಜಾತಿಯ, ಸಮೂಹದ, ಸಭ್ಯ ಗೃಹಸ್ಥರೆನಿಸಿಕೊಂಡವರಿಂದ ತುಂಬಾ ಆಡಿಕೆಡೆಗಳು ಬಂದುವು. ಸಾಲದುದಕ್ಕೆ ಸಂಘಂ ನಡೆಯಿತು. ಅಂತೆಯೂ ಕೊನೆಗೆ ಅಬ್ದುಲ್ ಖಾದರ್ ಛಲವೊಳೆಯನ್ನು ಮಾದುವೆಗೂದ.ಈ ನವೂಮವರರು ವಿವಾಹಾನಂತರದ ಸಂತಸ, ಆಮೋದ ಪ್ರಮೋದದಲ್ಲಿರುವಾಗ 'ರಸಬಾಳೆಯ ಹಣ್ಣಿ'ನ ಪ್ರಸಂಗ ನಡೆಯಿತು.

ಸಮಯ: ಸರಿಯಾಗಿ ಐದೂವರೆ ಘಂಟೆ.

ಮಳೆಗಾಲ ಬಿಸಿಲೂ ಇತ್ತು. ಮಳೆಯೂ ಬೀಳುತಿತ್ತು. ಈ ಋತುವಿನಲ್ಲಿ ಎರಡೂ ಆಕಸ್ಮಾತ್ತಾಗಿ ಬರುತ್ತವೆ. ಹತ್ತಿರವಿದ್ದ ನದಿಯೊಂದು ಪ್ರವಾಹದಿಂದ ಉಬ್ಬುತಿತ್ತು. ಇದನ್ನು ನೋಡಲೆಂದು— ಮತ್ತು ಅಲ್ಲಿ ಈಜ್ಯಾಡಲಿನ ಮೂಡಲೆಂದು ಅಬ್ದುಲ್ ಖಾದರ್ ನಾಹೇಬರು ವೈಯಲ್ಲೊಂದು ಕಟ್ಟನ್ನು ಸಿಕ್ಕಿಸಿದೆ ಅಂಗವಸ್ತ್ರವೊಂದನ್ನು ಮೂಡ ಹಿಡಿದುಕೊಂಡು ಮನೆಯಿಂದ ಹೊರಗೆ ಬಿದ್ದರು. ಆಗ ಜಮಿಲಾ ಬೀಬಿ ಬಾಗಿಲ ಬಳಿಗೆ ಬಂದು ಕೂಗಿದಳು.

"ಏ"

ಅಬ್ದುಲ್ ಖಾದರ್ ಯೋಚಿಸಿದ. ನಾನೊಂದು ಅಂಗಿಯನ್ನಾದರೂ ತೊಟ್ಟುಕೊಳ್ಳಬೇಕಿತ್ತೆಂದು ಆತನು ಅನೇಕ್ಷಿಸಿರಬೇಕು. ಯಾಕೆಂದರೆ ಅವಿವಾಹಿತ ಯುವತಿಯಾಗಿ ಬಾಳ್ವೆಸುಡಲು ಪ್ರಾರಂಭಿಸಿದಂದಿನಿಂದ ಜಮಿಲಾ ಬೀಬಿ ಕೆಲವು ಶರತ್ತುಗಳನ್ನು ಹಾಕಿ ಕಟ್ಟುಜ್ಞೆಯನ್ನು ಹೊರಡಿಸಿದ್ದಳು.

ಅಬ್ದುಲ್ ಖಾದರ್ ಸುಶಿಕ್ಷಿತ ಮತ್ತು ಸಭ್ಯ ನಾಗರಿಕನಂಗ ಬೇಕು. ಒಳ್ಳೆಯ ಬಟ್ಟೆ ಬರೆಗಳನ್ನೇ ಉಡಬೇಕು; ತೊಡಬೇಕು. ಆತನ ನಡೆವಳಿಕೆಯಲ್ಲಿ ಓಂಣವಿರಬೇಕು. ಹಳೆಯ ಗೆಳೆಯರೊಂದಿಗೆಲ್ಲ ಹೊಡಲಿಸಂತೆ ಮಾತನಾಡಕೂಡದು. ಬೀಡಿ ಕಟ್ಟುವವರು, ಕವಿಗಳು ಪೋಟರಾ ಚಾಲಕರು ಮತ್ತು ರಿಕ್ಷಾ ಎಳೆಯುವವರೊಂದಿಗೆ ಸಲುಗೆಯಿಂದಿರಬಾರದು. ಮತ್ತು ನಮ್ಮ ಅಂತಸ್ತನ್ನು ಕೊಟ್ಟು ಸ್ನೇಹಿಸಕೂಡದು. ಮನೆವಾರ್ತೆಯ ಕೆಲಸಕ್ಕೆ ಒಬ್ಬಳು ಕೆಲಸದಾಕೆಯನ್ನು ಇಡಬೇಕು. ಅಬ್ದುಲ್ ಖಾದರ್ ಆಡುಗೆ ನೂತ ಬಾರದು. ಆರ್ಥಿಕ ಧನ ದೌಲತ್ತಿನ ಗೌರವ ಪೂರ್ಣ ಜೀವನವನ್ನು ನಡೆಸಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ಆತನಲ್ಲಿ "ಬದಲಾವಣೆ ಅಧವಾಸಾಧಾರಣೆ" ಯಾಗ ಬೇಕಂಬಾದ.

ಮಹಳೆಯೊಳಗೆಳು ಮದುವೆಯಾಗುವುದು ನಿಜಕ್ಕೂ ವಾಸ್ತವ್ಯನೋವಾಗನನ್ನು ಸಂಭಾರಿಸಬೇಕೆಂದ. ಗಂತನನ್ನು ನೇರವಾದ ದಾರಿಯಲ್ಲಿ ನಡೆಸಿಕೊಂಡುಹೋಗುವುದು— ಜತನ ದೈರ್ಯತ ಅಧ್ಯಾತ್ಮಿಕ ನಂಶ್ಕ ಮಾನಸಿಕ ಕಾರ್ಯಕಲಾಪಗಳಲ್ಲಿ ಹೋಗುವುದ ನಾರಿಯ ಧರ್ಮಕ್ಷೇತ್ರ—ಕಲಸ.

ಅದೇನೇ ಇದ್ದರೂ ಜಮಿಲಾ ಮಾತ್ರ ಹಾಗೆಂದೇ ತಿಳಿದುಕೊಂಡಿದ್ದಳು. ಹೆಂಗುಸಿನ ಈ ರಾದ್ಧಾಂತವನ್ನು ಕೇಳಿ ಅಬ್ದುಲ್ ಖಾದರ್ ಏನನ್ನೂ ಹೇಳಲಿಲ್ಲ. ಅವನೇನು ಹೇಳಿಯಾನು? ಮದುವೆಯೊಗಿ ಇನ್ನೂ ಅನೇಕ ದಿನಗಳಾಗಿರಲಿಲ್ಲ, ಅವನು ಹೇಳಿದ: "ಜಮಿಲಾ—ನಾನೊಂದು ಬರೇ ಸ್ನಾನ ಮಾಡಿ ಬರುತ್ತೇನೆ. ಅಂ

(ಇಪ್ಪತ್ತನೇ ಪುಟ ನೋಡಿರಿ)

ರಸಬಾಳೆಯ ಹಣ್ಣು

ಕತೆಗಾರ: ಶ್ರೀ ಮಹಮ್ಮದ ಬಶೀರ್.
ಕನ್ನಡಾನುವಾದ: ಶ್ರೀ ಕೆ. ಜಿ. ಹೆಗ್ಡೆ, ಮುಂಬಯಿ.

ಅಬ್ದುಲ್ ಖಾದರ್ ಜಮಿಲಾ ಬೀಬಿಯ ಆಕೆ ಈಡೇರಿಸಲು ತಂದ ರಸಬಾಳೆಯ ಹೆಣ್ಣು ಕಿತ್ತಳೆಯಂತೆ ಉರುಟುರುಟಾಗಿತ್ತು. ಅದನ್ನು ಅವರಿಬ್ಬರೂ ಹೇಗೆ ಪಾಲು ಮಾಡಿಕೊಂಡರು?

ಓಂದು ಊರಿನಲ್ಲಿ ಒಬ್ಬ ರೈತನಿದ್ದನು. ಅವನು ಬಹಳ ಬಡವನು. ತನ್ನ ಗದ್ದೆಗಳಲ್ಲಿ ಕಷ್ಟಪಟ್ಟು, ಮೈಬಗ್ಗಿಸಿ ದುಡಿಯುವದು ಅವನ ಅಭ್ಯಾಸ. ತನ್ನ ದುಡಿಮೆಯ ಪ್ರತಿಫಲದಿಂದ ಅವನು ತನ್ನ ಕುಟುಂಬವನ್ನು ನೋಡಿಕೊಳ್ಳುತ್ತಿದ್ದನು. ಎಂದಿನಂತೆ ಒಂದು ದಿನ ಮುಂಜಾನೆ ಅವನು ನೊಗ ನೇಗಿಲುಗಳನ್ನು ಹಿಡಿದುಕೊಂಡು, ಜೋರಿಗಳನ್ನು ಹೊಡೆದುಕೊಂಡು ಗದ್ದೆಗೆ ಹೊರಟನು. ಆಗ ಅವನ ಹೆಂಡತಿಯು ಬುತ್ತಿಯನ್ನು ತಂದು ಕೈಗೆ ಕೊಟ್ಟಳು. ಅದನ್ನು ತೆಗೆದುಕೊಂಡ ರೈತನು ಗದ್ದೆಗಳತ್ತ ಕಾಲು ಹಾಕಿದನು. ಅಲ್ಲಿ ಒಂದು ಮರದಡಿ ತನ್ನ ಬುತ್ತಿ ಹಾಗೂ ಬಟ್ಟೆ ಬರೆಗಳನ್ನಿಟ್ಟು, ಹೋರಿಗಳನ್ನು ನೊಗಕ್ಕೆ ಕಟ್ಟಿ, ಉಳಲಾರಂಭಿಸಿದನು.

ಸೂರ್ಯ ಆದಾಗಲೇ ಅಷ್ಟು ಮೇಲಕ್ಕೆ ಬಂದಿದ್ದನು. ರೈತನಿಗೆ ಹಸಿವಾಯಿತು. ಅವನು ಹೋರಿಗಳನ್ನು ನಿಲ್ಲಿಸಿ ಮರದಡಿಗೆ ಬಂದನು. ಹೊಟ್ಟೆ ಒಂದಿಷ್ಟು ತಂಪು ಮಾಡಿಕೊಳ್ಳಬೇಕೆಂದು ಬಟ್ಟೆಗಳನ್ನು ಬದಿಗೆ ಸರಿಸಿ ಬುತ್ತಿ ತೆರೆದು ನೋಡಿದಾಗ ಅವನಿಗೆ ಅತ್ಯಾಶ್ಚರ್ಯವಾಯಿತು. ಅಲ್ಲಿ ಅವನ ಬುತ್ತಿ ಬರಿದಾಗಿತ್ತು. ಅವನು ಅತ್ತಇತ್ತ ಹುಡುಕಾಡಿದನು; ಪತ್ತೆ ಸಿಗಲಿಲ್ಲ. ತೋಡಿನಲ್ಲಿ ಹರಿಯುತ್ತಿದ್ದ ತಣ್ಣೀರಿನಿಂದ ಒಂದಿಷ್ಟು ಸಿಹಿ ನೀರನ್ನು ಕುಡಿದು ಅವನು ಹೋರಿಗಳಿದ್ದಲ್ಲಿಗೆ ಬಂದನು. ಅವನ ತಲೆಯಲ್ಲಿ ಬುತ್ತಿಯ ವಿಷಯವೇ ಇತ್ತು. ತಂದಿದ್ದ ಅನ್ನ ಅದೆಂತು ಮಂಗಮಾಯವಾಯಿತು! "ಹೋಗಲಿ! ಒಂದು ಹೊತ್ತಿನ ಊಟ ತಪ್ಪಿದಲ್ಲಿ ಅದೇನು ಮಹಾ, ಭೂಮಿ ತಲೆಕೆಳಗಾಗಿ ಹೋಗುತ್ತದೆ" ಂದು ಅವನು ಹೋರಿಗಳ ಮೈತಿಕ್ಕಿ ಉಳಲಾರಂಭಿಸಿದನು. ಆದರೂ ಬುತ್ತಿಯ ಚಿಂತೆ ಬಿಟ್ಟಿರಲಿಲ್ಲ. "ಪಾಪ! ಯಾರಿಗೋ ಹಸಿವು ಆಗಿರಬಹುದು. ಅವರು ತೆಗೆದುಕೊಂಡು ಹೋಗಿರಬಹುದು. ಹೋಗಲಿ, ಅವರ ಹಸಿವು ನೀಗಿರುತ್ತದೋ, ಇಲ್ಲವೋ? ತಂಗಳನ್ನ ಅದೆಷ್ಟು ತಣ್ಣಗಾಗಿತ್ತೋ! ಅವರಿಗೆ ರುಚಿಯಾಯಿತೋ, ಇಲ್ಲವೋ?..." ಮಾನಸಿಕ ಮಹಾ ಸಾಗರದಲ್ಲಿ ವಿಚಾರ ಲಹರಿಗಳು ಎದ್ದೇಳುತ್ತಿದ್ದುವು.

ನಿಜವಾಗಿ ನಡೆದದ್ದೇನೆಂಬುದು ಬಡ ರೈತನಿಗೆ ಗೊತ್ತಿರಲಿಲ್ಲ. ಕಾರ್ಯಮಗ್ನನಾಗಿದ್ದ ಅವನಿಗೆ ಅದು ಗೊತ್ತಾಗುವದಾದರೂ ಹೇಗೆ? ಅವನು ಆನಂದದಿಂದ ಉಳುತ್ತಿದ್ದಾಗ ಬೇತಾಳನ ಸೇವಕನೊಬ್ಬನು ಮೇಲಿನಿಂದ ವಿಹರಿಸುತ್ತಿದ್ದನು, ಸಂತೋಷ ಸಾಗರದಲ್ಲಿ ಕ್ರೀಡೆಯಾಡುತ್ತಿದ್ದ ಕೃಷಿಕನನ್ನು ಕಂಡು ಬೇತಾಳನ ಸೇವಕನಿಗೆ ಹೊಟ್ಟೆಯುರಿ ಬಂತು. ಹೇಗಾದರೂ ಮಾಡಿ ಅವನ ಮನಸ್ಸೆಂಬ ದಾಲಿನಲ್ಲಿ ಹುಳಿ ಹಿಂಡಿ ಬಿಡಬೇಕೆಂದಾತ ಯೋಚಿಸಿಕೊಂಡನು; ಆಚೀಚೆ ನೋಡಿದನು. ಬುತ್ತಿ ಅವನ ಕಣ್ಣಿಗೆ ಬಿತ್ತು. ಕಲಿಸುತ್ತೇನೆ ಬುದ್ಧಿ. ಹಂಡತಿಯ ಮೇಲೆ ರೈತನು ಅನುಮಾನ ಪಟ್ಟು, ಸಂಸಾರ ಸುಖ ಭಂಗವಾಗಲೆಂದು ಅವನು ಅನ್ನವನ್ನು ನುಂಗಿ ಬಿಟ್ಟನು. ಆದರೆ ಅವನೆಣಿಸಿಕೊಂಡಂತೆ ನಡೆಯಲಿಲ್ಲ. ರೈತನು ತನ್ನ ಹೆಂಡತಿಗೆ ಬೈಯ್ಯುವದು, ಹಾಗಿರಲಿ, ಏನುಮಾನ ಕೂಡಾ ಪಡಲಿಲ್ಲ. ಸೇವಕನಿಗೆ ಬಹಳ ಆಶ್ಚರ್ಯವಾಯಿತು.

ಶ್ರೀ ಶಿವಶಂಕರ

ಪಾಶಾತ್ಯ ಮತ್ತು ಭಾರತೀಯ ಸ್ತ್ರೀ

ಚಿತ್ರ

ಪಾಶ್ಚಾತ್ಯ ಮಹಿಳೆ ತನ್ನ ಇನಿಯನೊಂದಿಗೆ ಬಂದಾಗ ಬೆರೆತು ಹೋಗುತ್ತಾಳೆ; ಭಾರತೀಯ ಸ್ತ್ರೀ ಇನಿಯನನ್ನು ದುಷ್ಕಾರ್ಯಗಳಿಂದ ದೂರವಿರಿಸಲು, ಸತ್ಕಾರ್ಯದಲ್ಲಿ ನಿರತರಾಗಿಸಲು ಮುಂದಾಗುತ್ತಾಳೆ. ಭಾರತೀಯ ಸ್ತ್ರೀ ಜೀವನ ಪಥದ ದಾರಿದೀಪ. ಪಾಶ್ಚಾತ್ಯ ಸ್ತ್ರೀ ಕತ್ತಲೆಯಲ್ಲಿ ಕತ್ತರಿ; ಬೆಳಕಿನಲ್ಲಿ ಬೆರಳು.

ಸೇವಕನು ಹಿಂತಿರುಗಿ ಬಂದು ಬೇತಾಳನ ಬಳಿ ಆ ಸಂಭವನನ್ನು ವಿವರಿಸಿದನು. ಅದನ್ನು ಕೇಳಿದ ಬೇತಾಳನಿಗೆ ಬಹಳ ಕೋಪ ಬಂತು. ಅವನ ಕಣ್ಣಾಗಲು ಕೆಂಪಾದುವು. ತುಟಿಗಳು ನಡುಗಿದುವು. 'ಏ ಮರುಳಾ! ಏನು ಮಾಡಿದೆ? ಬಡ ರೈತನಿಗೆ ಕೋಪ ಬರಿಸಲೂ ನಿನ್ನಿಂದಾಗಲಿಲ್ಲವೇ? ಜೋಕೆ! ಮೂರು ವರ್ಷ ಕಾಲಾವಕಾಶ ನಿನಗೆ ಕೊಟ್ಟಿದ್ದೇನೆ. ಈಗಲೇ ಇಲ್ಲಿಂದ ತೊಲಗು, ಮುಖ ತೋರಿಸಬೇಡ. ಈ ಮೂರು ವರ್ಷಗಳಲ್ಲಿ ರೈತನ ಸದ್ಗುಣಗಳ ಸರ್ವನಾಶಗೈಯ್ಯಲು ನಿನ್ನಿಂದ ಸಾಧ್ಯವಾಗದಿದ್ದಲ್ಲಿ ನಿನ್ನ ಸರ್ವನಾಶವು ಸರ್ವ ಸಹಜ. ಹೋಗಿಲ್ಲಿಂದೆಂದು ಬೇತಾಳನು ಆರ್ಭಟಿಸಿದನು.

ಹದಿಂದ ಸೇವಕನು ಅಲ್ಲಿಂದ ಒಡನೆ ಕಾಲ್ಕಿತ್ತನು. ಅವನೊಂದು ಶ್ರಮಿಕನ ವೇಷವನ್ನು ಹಾಕಿಕೊಂಡ. ನೇರ, ರೈತನ ಮನೆಗೆ ಬಂದನು. ರೈತನ ಬಳಿ, 'ಅಯ್ಯಾ, ಅಣ್ಣಾ, ಅಪ್ಪಾ!' ಎನ್ನುತ್ತ ತನ್ನ ಕಷ್ಟಗಳ ಕೋಟೆಯನ್ನು ತೆರೆದನು. ಕರುಣೆಯ ಗಣಿ ರೈತನಿಗೆ ಅವನ ಮೇಲೆ ಕನಿಕರ ಹುಟ್ಟಿತು. ಅವನನ್ನು ಕೆಲಸಕ್ಕೆ ನೇಮಿಸಿಕೊಂಡನು. ಸೇವಕನು ಚಾತುರ್ಯದಿಂದ ರೈತನ ಮೇಲೆ ಪ್ರಭಾವ ಬೀರಿದನು. ಕೃಷಿಯ ವಿಷಯದಲ್ಲಿ ರೈತನು ಸೇವಕನ ಮಾತಿಗೆ ಬೆಲೆ ಕೊಡಲಾರಂಭಿಸಿದನು. ಬೀಜ ಬಿತ್ತುವ ಸಮಯ ಬಂದಾಗ, ಜವುಗು ಭೂಮಿಯಲ್ಲಿ ಬೀಜ ಬಿತ್ತುವಂತೆ ರೈತನಿಗೆ ಸೇವಕನು ಸಲಹೆ ಕೊಟ್ಟನು. ರೈತನು ಅವನ ಮಾತಿಗೆ ವಿರೋಧವಾಗಿ ಹೋಗುತ್ತಿರಲಿಲ್ಲ. ಸಂಯೋಗವಶಾತ್ ಆ ವರ್ಷ ಮಳೆ ಬರಲೇ ಇಲ್ಲ. ಬಿಸಿಲಿನ ಝಳದಿಂದ ಇತರರ ಬೆಳೆ ಒಣಗಿ ಹೋಯಿತಾದರೂ, ಈ ರೈತನು ಜವುಗು ನೆಲದಲ್ಲಿ ಬೀಜ ಹಾಕಿದ್ದುದರಿಂದ ಇವನಿಗೇನೂ ನಷ್ಟ ಆಗಲಿಲ್ಲ. ಆದರೆ ಬದಲು ಒಳ್ಳೆಯ ಬೆಳೆ ಬಂತು. ರೈತನು ಶ್ರೀಮಂತನಾದನು, ಸೇವಕನ ಮೇಲೆ ಬಹಳ ಸಂತುಷ್ಟನಾದನು.

ಮರುವರ್ಷ ಬೀಜ ಬಿತ್ತುವ ಸಮಯ ಬಂದಾಗ, ದಿಣ್ಣೆಯ ಒಣಭೂಮಿಯಲ್ಲಿ ಬಿತ್ತಬೇಕೆಂದು ಸೇವಕನು ಸೂಚಿಸಿದನು. ರೈತನು ಒಪ್ಪಿಗೆ ಇತ್ತನು. ಅದೃಷ್ಟವಶಾತ್, ಆವರ್ಷ ಎಲ್ಲೆಲ್ಲಾದ ಮಳೆ ಸುರಿಯಿತು. ಇತರರ ಬೆಳೆ ಪ್ರವಾಹದಲ್ಲಿ ಹೋಯಿತು, ಕೊಳೆತು ನಾಶವಾಗಿ ಹೋಯಿತು. ಆದರೆ ಈ ರೈತನ ಬೆಳೆ ಹಚ್ಚಹಸುರಾಗಿ ನಗುತ್ತಿತ್ತು. ಕಳೆದ ವರ್ಷಕ್ಕಿಂತಲೂ ಈ ಸಲ ಅನಿರೀಕ್ಷಿತ ಬೆಳೆ ಬಂತು.

ತನ್ನ ಮಾತಿಗೆ ಪೂರ್ಣ ಮಾನ್ಯತೆ ದೊರಕುತ್ತಿರುವದನ್ನು ಕಂಡುಕೊಂಡ ಸೇವಕನು ತನ್ನ ಯುಕ್ತಿಗಾರಂಭಿಸಿದನು. ಭತ್ತದಿಂದ ಅದೆಂತೂ ಅಮಲು ಪದಾರ್ಥ(ಪೊಜೆಲ್) ತಯಾರಿಸಬಹುದೆಂಬುದನ್ನು ರೈತನಿಗವನು ಹೇಳಿಕೊಟ್ಟನು. ರೈತನು ಸುಲಭವಾಗಿ ಅವನ ಬಲೆಯಲ್ಲಿ ಬಿದ್ದುಬಿಟ್ಟನು. ರೈತನು ತಾನು ಮಾತ್ರ ಕುಡಿಯಲಾರಂಭಿಸಿದುದಲ್ಲದೆ ತನ್ನ ಮಿತ್ರರನ್ನು ಸುರಾಪಾನ ಕೂಟಕ್ಕೆ ಆಮಂತ್ರಿಸಲಾರಂಭಿಸಿದನು. ಸಂತೋಷಕೂಟದ ಮಿತಿ ಎಲ್ಲೆ ಮೀರಲಾರಂಭವಾಯಿತು. ತಮಗಿತ್ಥಬಂದಂತೆ ಅಲ್ಲಿಗೆ ಬಂದವರೆಲ್ಲರೂ ಅಮಲು ಪದಾರ್ಥ ಸೇವಿಸಿ ಬೈಯ್ದು ಕೊಳ್ಳಲು, ಹೊಡೆದಾಡಲೂ ಆರಂಭಿಸಿದರು.

ಸೇವಕನಿಗೆ ಸಂತೋಷವಾಯಿತು. ಅವನು ಬೇತಾಳನ ಬಳಿ ಬಂದು ತನ್ನ ಕೌಶಲದ ಕುರಿತು ವರ್ಣಿಸಿದನು. ಅದನ್ನು ಕಣ್ಣಾರೆ ಕಾಣಬೇಕೆಂಬ ಲವಲವಿಕೆ ಬೇತಾಳನಿಗಾಯಿತು. ಅವನು ಸೇವಕನ ಬಳಿ ತನ್ನಿಚ್ಛೆಯನ್ನು ವ್ಯಕ್ತಪಡಿಸಿದನು. ಬೇತಾಳನನ್ನು ಕರೆದುಕೊಂಡು ಸೇವಕನು ನೇರ ರೈತನ ಮನೆಗೆ ಬಂದನು.

ರೈತನ ಮನೆಯಲ್ಲಿ ಆಗ ಅಕ್ಷರಶಃ ವರೆಲ್ಲಾ ಬಂದು ಸೇರಿ, ಸುರಾಪಾನಕಾರಂಭಿಸಿದ್ದರು. ಅಷ್ಟರಲ್ಲಿ, ರೈತನ ಹೆಂಡತಿಯು ಒಂದು ಲೋಟ ಹೆಂಡವನ್ನು ತೆಗೆದುಕೊಂಡು ಹೋಗುತ್ತಿದ್ದವಳು ಒಬ್ಬನಿಗೆ ಡಿಕ್ಕಿ ಹೊಡೆದಳು—ಹೆಂಡ ಕೆಳಗೆ ಚೆಲ್ಲಿ ಹೋಯಿತು. ಅದನ್ನು ಕಂಡ ಕೃಷಿಕನಿಗೆ ಕೋಪ ಬಂತು. ಅವನು ಹೆಂಡತಿಗೆ ಹೊಡೆಯಲಿಕ್ಕೆ ಹೋದನಾದರೂ ಹಾಗೆ ಮಾಡದೆ, ಅಲ್ಲಿಂದ ಅವಳನ್ನು ಒಳಗಟ್ಟಿದನು. ಮತ್ತು ತಾನೇ ಎಲ್ಲರಿಗೂ ಹಂಚಲು ತೊಡಗಿದನು. ಹೀಗೆ ಒಂದು ಸುತ್ತು ಮುಗಿಯುವಷ್ಟರಲ್ಲಿ ನೆರೆದಿದ್ದವರೆಲ್ಲಾ ನೆರೆಯವರನ್ನು ಹೊಗಳಲು, ಪ್ರಶಂಸಿಸಲು ಪ್ರಾರಂಭಿಸಿದರು.

ರೈತನು ಎರಡನೇ ಸುತ್ತಿಗೆ ಆರಂಭಿಸಿದನು. ಅಷ್ಟರ ವರೆಗೆ ಪರಸ್ಪರ ಪ್ರಶಂಸಿಸಿಕೊಂಡಿದ್ದ ಸುರಾಪ್ರಿಯರು ಒಬ್ಬೊಬ್ಬರನ್ನೊಬ್ಬರು ಬಯ್ಯಲು ರಂಭಿಸಿದರಲ್ಲದೆ, ತಮ್ಮೊಳಗೆನೇ ಗಣಗುಟ್ಟಿಕೊಳ್ಳಲಾರಂಭಿಸಿದರು. ವಿಷಯೋಗ ಕಾರ್ಯ ಮುಂದುವರಿದಂತೆ ಅವರ ಜೇಷ್ಟೆಗಳೂ ಪ್ರಗತಿ ಹೊಂದಿ, ಹೊಡೆದಾಡಿಕೊಳ್ಳಲು ಅವರು ಮುಂದಾದರು.

ಮೂರನೇ ಸುತ್ತಿಗಾರಂಭವಾದಾಗ ಕೆಲವರು ಧಂಶಾಯಿಗಳಾಗಿ ಕೊಂಡು ಏನೇನೋ ಗುಣಗಾಡಿ ಕೊಳ್ಳಲಾರಂಭಿಸಿದರು. ಅವರು ಅಮಲಿನಲ್ಲಿ ಕಂಡವರ ಮೇಲೆ ಬೀಳಲಾರಂಭಿಸಿದರು. ಇನ್ನು ಅಲ್ಲಿಯವದು ಸರಿಯಲ್ಲವೆಂದು ನೆರೆದಿದ್ದವರು ತಮ್ಮ ತಮ್ಮ ಮನೆಗೆಹೋಗಲೆಂದು ಅಲ್ಲಿಂದ ಹೊರಬಂದರು. ಅವರ ಬೇಳ್ಕೊಡುಗೆಗಾಗಿ ಹೊರ ಬಂದ ರೈತನು ಅಲ್ಲಿ ಬೋರಲಾಗಿ ಬಿದ್ದು ಬಿಟ್ಟನು.

ಇದೆಲ್ಲವನ್ನು ಕಂಡ ಬೇತಾಳನ ಸಂತೋಷಕ್ಕೆ ಸೀಮೆಯೇ ಇಲ್ಲವಾಯಿತು. ಅವನಿಗೆ ತನ್ನ ಸೇವಕನ ಮೇಲೆ ಬಹಳ ಸಂತೋಷವಾಯಿತು. ಆ ಸಂತೋಷಭರದಲ್ಲಿ ತನ್ನ ಸೇವಕನ ಎಲ್ಲಾ ತಪ್ಪುಗಳನ್ನು ಅವನು ಅಂದು ಕ್ಷಮಿಸಿಬಿಟ್ಟನು ಮತ್ತು ತನ್ನ ಸೇವಕನ ಬಳಿ ಅವನ ಹೃದಯದ ರಹಸ್ಯವೇನೆಂದು ಕೇಳಿದನು:

'ಏನು ಮಾಡಾಯ, ಏನುಮಾಡಿದ್ದು ಹೇಳು. ಅವರ ಪಾನೀಯದಲ್ಲಿ ನರಿಗು ಕಕ್ಕುಗಿಕ್ಕಿನೇನಾದರೂ ಸೇರಿಸಿ ಬಿಟ್ಟಿದ್ದಿಯಾ? ಇಲ್ಲದಿದ್ದರೆ ಅವರು ನಿನಗೆಳ ಹಾಗೆ ಏಕೆ ಜೊಗಳಾಡಿ ಕೊಳ್ಳುತ್ತಿದ್ದರು? ಎರಡನೇಯ ಬಾರಿ ಅವರು ಕುಡಿದಾಗ ಅದರಲ್ಲಿ ತೋಲದ ರಕ್ತ ಸೇರಿಸಿಬಿಟ್ಟಿದ್ದಿಯಾ ಏನು? ಯಾಕೆಂದರೆ ಅವರಾಗ ತೋಳಗಳ ಹಾಗೆ ಜಗಳಾಡಿಕೊಳ್ಳುತ್ತಿದ್ದರಲ್ಲ! ಹಾಗೂಕೊನೆಯ ಬಾರಿ ಅದರಲ್ಲಿ ಹಂದಿಯ ನೆತ್ತರನ್ನು ಸೇರಿಸಿಬಿಟ್ಟಿದ್ದಿಯೇಂದು ಕಾಣುತ್ತದೆ! ಆದುದರಿಂದ ಅವರು ಹಂದಿಗಳಂತೆ ದೊಗಳಾಡಿ ಕೊಳ್ಳುತ್ತಿದ್ದರು."

ಅದಕ್ಕೆ ಸೇವಕನು ತನ್ನ ಕಾರ್ಯ ಕುಶಲತೆಯ ಕುರಿತು ಹೇಳಿದನು: "ಇಲ್ಲ ಸ್ವಾಮಿ, ಇಲ್ಲ. ಅವುಗಳ ಅವಶ್ಯಕತೆಯೇ

(ಪತ್ತೋಳತ್ತನೇ ಪುಟ ನೋಡಿರಿ)

ಶ್ರೀ ತಿಮುಂಜೆ ಪರಾರಿ ಮುಂಬಯಿ
ಅವರ
ನಾಲ್ಕು ಅಮೂಲ್ಯ ಅನುವಾದಿತ ಕೃತಿಗಳು
೧ ನವ ಪ್ರಭಾತ
೨ ನಿಯೋಗ
೩ ಯುತಾತ್ಮರು
೪ ಋಣತೆ
ಪ್ರತಿಗಳಿಗಾಗಿ ನಿಮ್ಮೂರ ಪುಸ್ತಕದಂಗಡಿ, ಅಥವಾ—
ವಿದ್ಯಾನಿಧಿ ಬುಕ್ ಡಿಪೋ, 30 ಮಾರುತೀ ಲೇನ್, ಮುಂಬೈ—1
ಇಲ್ಲಿ ವಿಚಾರಿಸಿರಿ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ
ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು
ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್,
ಕರವಸ್ತ್ರದ ಸೆಂಟ್
ಮುಂತಾದ

ಸುಗಂಧದ್ರವ್ಯಗಳೂ ಸಹಾ



ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶ್ರೀ ಕೃಷ್ಣ ಕರ್ಣಾಮೃತ

ಬರೆದವರು: ಶ್ರೀ ಸ. ನಾರಾಯಣ.

ಗೀತ ಗೋವಿಂದ ಅಖಿಲ ಭಾರತದಲ್ಲಿ ಪ್ರಚಾರದಲ್ಲಿದ್ದರೆ, ಅದೇ ಮಾದರಿಯ ಶ್ರೀಕೃಷ್ಣ ಕರ್ಣಾಮೃತ ಕರ್ನಾಟಕ—ಆಂಧ್ರ ರಾಜ್ಯಗಳಲ್ಲಿ ಪ್ರಚಾರದಲ್ಲಿದೆ. ಪುಟ್ಟದಾದ ಈ ಕಾವ್ಯದಲ್ಲಿ ಶೃಂಗಾರ ರಸದ ಕೋಡಿಯೇ ಹರಿದಿದೆ; ಕರ್ಣಾಮೃತವಾಗಿದೆ.

ಕವಿ ಲೀಲಾಶುಕನ ಜೀವನಕ್ಕೆ ಸಂಬಂಧಿಸಿದಂತೆ ಒಂದು ದಂತಕಥೆ ಪ್ರಚಾರದಲ್ಲಿದೆ. ಕಡು ಬಡವನಾಗಿದ್ದ, ಕಾವ್ಯದೇವಿಯು ಕೃಪೆಗೆ ಪಾತ್ರನಾಗಿದ್ದ ಲೀಲಾಶುಕ ಒಂದು ಬಾರಿ ಹೆಣ್ಣಿನ ವ್ಯಾಮೋಹಕ್ಕೆ ಒಳಗಾದ. ಚಿಂತಾಮಣಿ ಹೆಸರಿನ ವೇಶ್ಯೆ. ಅಸಾಧಾರಣ ರೂಪವತಿ. ಅವಳ ಚಿಂತಾಮಣೀಯ ಸೌಂದರ್ಯಕ್ಕೆ ಲೀಲಾಶುಕ ಮರುಳು ಹೋದ. ಅನುರಕ್ತನಾದ.

ಲೀಲಾಶುಕನ ನಿಸ್ಪೃಹ ಅಂತಃಕರಣ ಚಿಂತಾಮಣಿಯ ಅನುರಾಗವನ್ನು ಕಂಡ ಚಿಂತಾಮಣಿ ಲೀಲಾಶುಕನ ನಿನ್ನ ಅನುರಾಗವನ್ನು ನನಗಾಗಿ ವಿನಿಯೋಗಿಸಬೇಕಾದರೆ ಲೀಲಾಶುಕ ಮೊದಲಾಗಿಡದೆ ಆ ಬಗೆಯ ಭಕ್ತಿ ಪ್ರೇಮಗಳನ್ನು ಭಗವಂತನಲ್ಲಿ ಪ್ರದರ್ಶಿಸಿ, ಆರಾಧಿಸಿ, ಧನ್ಯನಾಗು" ಎಂದು ಉಪದೇಶಿಸಿದಳಂತೆ. ಲೀಲಾ ಶುಕ ಮೋಹ ಬಂಧನದಿಂದ ಬಿಡುಗಡೆ ಹೊಂದಿ ಭಗವಂತನ ಭಕ್ತನಾದ. ಚಿಂತಾಮಣಿ ವೇಶ್ಯೆ ಆದರೆ ಅವಳ ಸಂಸ್ಕಾರ, ಸ್ವಭಾವಗಳು? ಭಕ್ತ ಸೂರದಾಸ್ ಮತ್ತು ತುಲಸೀದಾಸ್ ಇವರ ಬಗೆಗೂ ಲೀಲಾಶುಕನ ಬಗೆಗೆ ಇರುವ ಕಥೆಯಂತೆಯೇ ದಂತ ಕಥೆಗಳಿವೆ. ಆದರೆ ಆ ಕಥೆಗಳಲ್ಲಿ ಸತ್ಯಾಂಶವೆಷ್ಟೋ?

ಚಿಂತಾಮಣಿರ್ಜಯತಿ ಸೋಮಗಿರಿ
ರ್ಗುರುರ್ಮಯೇ
ಶಿಕ್ಷಾ ಗುರುಶ್ಚ ಭಗವಾನ್ಶಿಖಿ ಪಿಂಛ
ಮೌಲಿಃ
ಯತ್ಪಾದ ಕಲ್ಪತರು ಸಲ್ಲವ ಶೇಖ
ರೇಷು
ಲೀಲಾ ಸ್ವಯಂವರ ರಸಂಲಭತೇ
ಜಯಶ್ರೀಃ ॥

ಇದು ಕೃಷ್ಣಕರ್ಣಾಮೃತ ಕಾವ್ಯದ ಮೊದಲ ಶ್ಲೋಕ. ಇದರಲ್ಲಿ ಲೀಲಾಶುಕ ಚಿಂತಾಮಣಿಯನ್ನು ತನಗೆ ದಿವ್ಯ ಮಾರ್ಗದರ್ಶನ ಮಾಡಿಸಿದ ಗುರುವೆಂದು ಭಾವಿಸಿ ಮೊದಲ ಶ್ಲೋಕದಲ್ಲಿ ಮೊದಲಿಗೆ ಅವಳ ಹೆಸರನ್ನೂ, ತದನಂತರ ತನ್ನ ಶಿಕ್ಷಾಗುರುವಾದ ಸೋಮಗಿರಿಯನ್ನು, ಅನಂತರ ಶಿಖಿ ಪಿಂಛ ಮೌಲಿಯಾದ ಶ್ರೀ ಕೃಷ್ಣನನ್ನು ಸ್ಮರಿಸಿದ. ಈ ಸಂಗತಿಯನ್ನು ತಿಳಿದ ಚಿಂತಾಮಣಿ "ನನ್ನಲ್ಲಿ ನೀನೇಕೆ ಅಷ್ಟು ಅಗಾಧ ಪ್ರೇಮ ತೋರುತ್ತೀಯೇ? ನಿನ್ನ ಪ್ರೇಮಕ್ಕೆ ಯೋಗ್ಯಳು ನಾನಾಗಲ್ಲ ಶ್ರೀಕೃಷ್ಣನೊಬ್ಬನೇ. ಅವನನ್ನು ಅನನ್ಯ ಭಕ್ತಿಯಿಂದ ಸೇವಿಸು" ಎಂದು ಸೂಚಿಸಿದಳಂತೆ. ಅವಳ ಸಂಸ್ಕಾರ ಪೂರ್ಣ ಸಲಹೆಯಿಂದ ಲೀಲಾಶುಕ ದೇವನ ದಾಸನಾದ.

ಮೊದಲ ಶ್ಲೋಕದ ಮೊದಲ ಚಿಂತಾಮಣಿ ಎಂಬ ಪದ ವೇಶ್ಯೆಯ ಹೆಸರಾಗಿರದೆ ಕವಿಯು ಗುರು ಸೋಮಗಿರಿಯಾಗಿರಬಹುದೆ? ಎಂಬ ಸಂಶಯವಿಸೆ. ಭಗವಾನ್ ಶ್ರೀ ಕೃಷ್ಣನ ವಾದಗಳು ಕಲ್ಪತರುವಿನ ಚಿಗುರುಗಳಾಗಿರುವಂತೆ ಶಿಕ್ಷಾ ಗುರು ಸೋಮಗಿರಿಗಳು ಚಿಂತಾಮಣಿ ಸದೃಶರಾಗಿರಬಾರದೇಕೆ? ಭಾರತೀಯರ (ವಿಶೇಷ) ದೃಷ್ಟಿಯಲ್ಲಿ ಗುರು ಶ್ರೀ ಮೂರ್ತಿ ಸ್ವರೂಪನಲ್ಲವೆ? (ಗುರು ಬ್ರಹ್ಮ, ಗುರು ವಿಷ್ಣು, ಗುರುರ್ದೇವೋ ಮಹೇಶ್ವರಃ) ಆದಕಾರಣ ಹಾಗೆ ಊಹಿಸಿದೆ ಅವಳಿಗೆ ವಿಶ್ವ ಮಾರ್ಗದರ್ಶನ ನೀಡಿ ಅವನನ್ನು ಉದ್ಧರಿಸಿದ ವೇಶ್ಯೆ ಚಿಂತಾಮಣಿಯನ್ನು ಕವಿ ಲೀಲಾಶುಕ ಧ್ಯಾನಿಸಿದರೂ ತಪ್ಪಿಲ್ಲ. ತನ್ನ ಪ್ರಿಯನ ಶ್ರೇಯಸ್ಸಿಗೆ ಗಮನ ಕೊಡ

(ಇಪ್ಪತ್ತೆಂಟನೇ ಪುಟ ನೋಡಿರಿ)

ಕ್ರೌಸ್ತೂರಿ ತಿಲಕಂ ಲಲಾಟ ಫಲಕೇ
ವಕ್ಷಃ ಶ್ರಿಯೇ ಕೌಸ್ತುಭಂ।
ನಾಸಾಗ್ರೇ ನವಮೌಕ್ತಿಕಂ ಕರತಲೇ
ವೇಣುಂ ಕರೇ ಕಙ್ಕಣಮ್॥
ಸರ್ವಾಂಗೇಹರಿ ಚನ್ದನಂ ಚ ಕಲಯನ್
ಕಣ್ಠೇ ಚ ಮುಕ್ತಾವಳಿಂ।
ಗೋಪಿಸ್ತ್ರೀ, ಪರಿವೇಷ್ಟಿತೋ ವಿಜಯತೇ
ಗೋಪಾಲ ಚೂಡಾಮಣಿಃ॥

ಇವು ಕೃಷ್ಣಕರ್ಣಾಮೃತಕಾವ್ಯದಶ್ಲೋಕದನಾಲುಗಳು. ಜಗನ್ಮಾಟಕ ಸೂತ್ರಧಾರಿ ಬಾಲಗೋಪಾಲ ಕೃಷ್ಣನ ರಮಣೀಯ ರೂಪವನ್ನು ಈ ನಾಲುಗಳು ಕೊಂಡಾಡುತ್ತವೆ. ಈ ಕಾವ್ಯದಲ್ಲಿ ಮು ನ್ನೂ ರ ಮೂವತ್ತೈದು ಶ್ಲೋಕಗಳಿವೆ.

ಜಯದೇವ ಕವಿಯ "ಗೀತಗೋವಿಂದ' ಕಾವ್ಯ ಸಂಸ್ಕೃತ ಸಾಹಿತ್ಯದಲ್ಲಿ ಮೆರೆದ ಜನಪ್ರಿಯ ಶೃಂಗಾರ ಕಾವ್ಯ. ಅದರ ಶೈಲಿ, ಶಕ್ತಿ, ಸೌಂದರ್ಯಗಳು ಪಂಡಿತ ಪಾಮರರೆಲ್ಲರನ್ನು ಆಕರ್ಷಿಸಿವೆ. ಗೀತ ಗೋವಿಂದ ಕಾವ್ಯದಂತೆಯೇ ಕೃಷ್ಣ ಕರ್ಣಾಮೃತ ಕಾವ್ಯವೂ ಸಂಸ್ಕೃತದಲ್ಲಿರುವ ಶೃಂಗಾರ ರಸ ಪ್ರಧಾನ ಸುಂದರ ಕಾವ್ಯ ಎಂದು ಹೇಳಬಹುದು. ಗೀತ ಗೋವಿಂದ ಕಾವ್ಯದ ವ್ಯಾಪ್ತಿ ವಿಸ್ತಾರವಾದುದು. ಆ ಸೀತು ವಿಮರ್ಶಲು ಆದರ ಕೀರ್ತಿ ವಿಸ್ತರಿಸಿದೆ ಎಂದು ಹೇಳಲಡ್ಡಿಯಿಲ್ಲ. ಆದರೆ ಕೃಷ್ಣ ಕರ್ಣಾಮೃತ ಕಾವ್ಯಕ್ಕೆ ಅಷ್ಟು ವಿಸ್ತಾರವಾದ ಕ್ಷೇತ್ರವಿಲ್ಲ. ಇದರ ಕ್ಷೇತ್ರ ಸೀಮಿತವಾದುದು. ಕೃಷ್ಣ ಕರ್ಣಾಮೃತ ಕಾವ್ಯ ಕೇವಲ ಕನ್ನಡನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಜನ ಬಳಕೆಯಲ್ಲಿದೆ. ಜನಪ್ರಿಯತೆಗಳಿಸಿದೆ. ಸಂಸ್ಕೃತ ಭಾಷೆಯಲ್ಲಿರುವ ಕೃಷ್ಣ ಕರ್ಣಾಮೃತ ಕಾವ್ಯ ತೆಲುಗು ಭಾಷೆಗೆ ಅನುವಾದಿತವಾಗಿದೆ. ಭಾರತದ ಉತ್ತರ ದಲ್ಲಿಯಾಗಲಿ ಅಥವಾ ದಕ್ಷಿಣದ ಕೇರಳ ದಲ್ಲಿಯಾಗಲಿ ಈ ಕಾವ್ಯದ ಒಳಕ ಇಣುಕಿರುವುದು ವಿಚಿತ್ರವಾಗಿ ಕಾಣಬಹುದು. ಸಹಜ. ಕೃಷ್ಣ ಕರ್ಣಾಮೃತ ಕಾವ್ಯವನ್ನು ರಚಿಸಿದಕವಿ ಆಂಧ್ರ ದೇಶದವನಿರಬಹುದೆಂಬ ಊಹೆಯೂ ಇದೆ. ಈ ಕಾವ್ಯ ಬಳಕೆ ಇರುವ ಪ್ರದೇಶ ಸೀಮಿತವಾದರೂ ಕಾವ್ಯದ ಸೌಂದರ್ಯಕ್ಕೆ, ಶೈಲಿಗೆ ಯಾವ ಅಡಚಣೆಯೂ ಉಂಟಾಗಿಲ್ಲ.

ಕೃಷ್ಣ ಕರ್ಣಾಮೃತ ಕಾವ್ಯವನ್ನು ಗ ಮನಿಸಿದಾಗ, ಈ ಕಾವ್ಯದ ಶ್ಲೋಕಗಳನ್ನು ಆಸಕ್ತಿಯಿಂದ ಓದಿದಾಗ ಅಥವಾ ಕೇಳಿದಾಗ ನಮಗೆ ಸಹಜವಾಗಿ ಜಯದೇವ ಕವಿಯ ಗೀತ ಗೋವಿಂದ ಕಾವ್ಯದ ಶ್ಲೋಕಗಳು ನೆನಪಿಗೆ ಬರುತ್ತವೆ. ಎರಡು ಕಾವ್ಯಗಳಿಗೂ ಸಾಮಾನ್ಯವಿದೆಯೇ ಎನಿಸುತ್ತದೆ. ಪದ ಸಂಯೋಜನೆಯಲ್ಲಿ, ಶೈಲಿಯಲ್ಲಿ, ನಿರೂಪಣೆಯ ಸೊಗಸಿನಲ್ಲಿ ನಮಗೆ ಹೆಚ್ಚು ಅಂತರವಿದೆ ಎಂಬ ಅಂಶ ಗಮನಕ್ಕೆ ಬರುವುದಿಲ್ಲ. ಗೀತ ಗೋವಿಂದ ಕಾವ್ಯದ ಶ್ಲೋಕಗಳನ್ನೂ ಓದಿದಾಗ ಉಂಟಾಗುವ ಮಧುರ ಭಾವವೇ ಕೃಷ್ಣ ಕರ್ಣಾಮೃತ ಕಾವ್ಯದ ಶ್ಲೋಕಗಳನ್ನು ಓದಿದಾಗಲೂ ಉಂಟಾಗುತ್ತದೆ. ಕವಿ ಸುಂದರವಾದ ಸರಳ ಶೈಲಿಯಲ್ಲಿ, ಜನಮನಕ್ಕೆ ಆನಂದ ಉಂಟಾಗುವಂತೆ, ಭಕ್ತಿ ಭಾವ ತಾನಾಗಿಯೇ ಉದ್ಭವಿಸುವಂತೆ ಕಾವ್ಯವನ್ನು ರಚಿಸಿದ್ದಾನೆ.

ಕೃಷ್ಣ ಕರ್ಣಾಮೃತ ಕಾವ್ಯವನ್ನು ರಚಿಸಿದ ಕವಿಯ ಬಗ್ಗೆ ನಮಗೆ ತಿಳಿದು ಬರುವ ಸಂಗತಿಗಳೂ ಬಹಳ ಸ್ವಲ್ಪ ಏನು ತಿಳಿದಿಲ್ಲ ಎಂದು ಹೇಳಿದರೂ ಒಪ್ಪುತ್ತವೆ ಏನೋ? ಕೃಷ್ಣ ಕರ್ಣಾಮೃತ ಕಾವ್ಯದಲ್ಲಿ ಸೂಚಿಸಿರುವ ಮೇರೆಗೆ ಕವಿಯ ಹೆಸರು ಲೀಲಾಶುಕ. ಕವಿಯ ಹೆಸರು ರಮ್ಯವಾಗಿದೆ. ಲೀಲಾ ಶುಕ ಎಂಬ ಹೆಸರು ಕವಿಯ ನಿಜವಾದ ಹೆಸರು ಇರಲಾರದು. ಅದು ಕವಿಯ ಕಾವ್ಯನಾಮವಾಗಿರ ಬಹುದು. ಕವಿ ತನ್ನ ನಿಜವಾದ ಹೆಸರನ್ನು ಬಹಿರಂಗ ಪಡಿಸಲು ಆಸಕ್ತನಿರದೆ ಕಾವ್ಯನಾಮದಿಂದಲೇ ಪ್ರಪಂಚಕ್ಕೆ ನಿಲ್ಲಬಹುದು—ಜನಪ್ರಿಯನಾಗಿರಬಹುದು ಎನಿಸುತ್ತದೆ. ಶುಕ ಮಹರ್ಷಿಗಳು ರಚಿಸಿದ ಸಂಸ್ಕೃತ ಭಾಗವತದಲ್ಲಿರುವ ಶ್ರೀ ಕೃಷ್ಣನ ಬಾಲ ಲೀಲಾ ಪ್ರಸಂಗ ವೈಭವವನ್ನು ಆಧಾರವಾಗಿಟ್ಟುಕೊಂಡು ಕವಿ ಸುಂದರ ಶ್ಲೋಕಗಳಲ್ಲಿ ವರ್ಣಿಸಿದ. ಈ ಕಾರಣದಿಂದ ಕವಿಗೆ ಲೀಲಾಶುಕ ಎಂದು ಹೆಸರು ಬಂದಿರಬಹುದೆ? ಕವಿ ನಿಜನಾಮವನ್ನು ಮರೆಮಾಚಿ ಕಾವ್ಯನಾಮವನ್ನಷ್ಟೇ ಏಕೆ ಬಳಸಿಕೊಂಡ ಎಂಬ ಶಂಕೆ ಉದ್ಭವಿಸುದು ಸಹಜ. ಆದರೆ ಕವಿಯ ಉದ್ದೇಶವನ್ನಿತ್ತೋ? ಗದಗಿನ ನಾರಣಪ್ಪ ಕಾವೂರಾವ್ಯಾಸಯೋಗೀಂದ್ರ ಎಂಬ ಹೆಸರಿನಿಂದ ಕಾವ್ಯರಚಿಸಿ ಕೀರ್ತಿ ಪಡೆದಂತೆ ಕವಿ ಲೀಲಾಶುಕನೂ ಪ್ರಯತ್ನಿಸಿರಬಹುದು. ಈ ಬಗ್ಗೆ ನಿರ್ದಿಷ್ಟ ಹೀರ್ಮಾನ ಹೇಳುವುದು ಸುಲಭವಲ್ಲ.

ಕೃಷ್ಣ ಕರ್ಣಾಮೃತ ಕಾವ್ಯದ ಶ್ಲೋಕಗಳು ಮಲ್ಲಿಗೆಯ ಹೂವಿನಷ್ಟು ಶುದ್ಧ, ಅಷ್ಟೇ ಮೃದು, ಯಾಗೆಯೇ ಕಂಪಿನಿಂದಲೂ ಕೂಡಿವೆ. ಮೃದು ಮಧುರವಾದ ಪದ ವಿನ್ಯಾಸ, ತಿಳಿಹಾಸ್ಯ, ಅರ್ಥ ಗಾಂಭೀರ್ಯ, ನಾದ ಮಾಧುರ್ಯ, ವರ್ಣನಾ ಸಾಮರ್ಥ್ಯ, ಸಹಜ ಸರಳ ಹೃದಯಂಗಮ ಶೈಲಿ ಎಷ್ಟೊ ಮನಮುಟ್ಟುವಂತಿವೆ. ಜನ ಮನವನ್ನು ಆಕರ್ಷಿಸುವಂತಿವೆ. ಗೀತ ಗೋವಿಂದ ಕಾವ್ಯದ ಅಷ್ಟಪದಿಗಳಂತೆಯೇ ಕೃಷ್ಣ ಕರ್ಣಾಮೃತದ ಶ್ಲೋಕಗಳನ್ನು ಹಾಡಿ ಶ್ರೋತೃಗಳನ್ನು ಮುಗ್ಧರನ್ನಾಗಿ ಮಾಡಬಹುದು. ಸುಂದರ ಕಾವ್ಯ ಧಾರೆಯ ನಾದ ಮಾಧುರ್ಯಕ್ಕೆ ಹೃದಯ ಅರಳದಿರುವುದೆ?

ಕವಿ ಲೀಲಾಶುಕ ತಾನು ಆರಾಧಿಸಿದ ಕಾವ್ಯ ದೇವಿಯನ್ನು "ಸಹಜ ಸುಂದರೀ" ಎಂದು ಕರೆದಿದ್ದಾನೆ. ಕಾವ್ಯ ದೇವಿ ಅವನ ಭಕ್ತಿ, ಶ್ರದ್ಧೆ, ಸೇವೆ, ಸಂಸ್ಕಾರಗಳಿಗೆ ಸಂತೋಷಿಸಿ ಒಲಿದು ಬಂದಿದ್ದಾಳೆ. ಕಾವ್ಯ ಸುಂದರವಾಗಿರುವಂತೆ ಅನುಗ್ರಹಿಸಿದ್ದಾಳೆ. ಕವಿಯ ಶ್ರದ್ಧೆ ಸಂಸ್ಕಾರಗಳ ಬಲದಿಂದ ಕಾವ್ಯ ಸುಂದರವಾಗಿದೆ. ರಮಣೀಯ ಅಕೃತಿ ಪಡೆದಿದೆ.

ಲೀಲಾ ಶುಕನ ಕೃಷ್ಣ ಕರ್ಣಾಮೃತ ಕಾವ್ಯದಲ್ಲಿ ಸಂಸ್ಕೃತ ಕಾವ್ಯಗಳಲ್ಲಿ ಕಾಣಬಾರದ, ಕೇವಲ ತೆಲುಗು, ತಮಿಳು ಕಾವ್ಯಗಳಲ್ಲಿ ಕಾಣಬರುವ ವ್ಯಾಸವೇ ಮೊದಲಾದ ಕೆಲವು ಸಾಮಾನ್ಯ ಲಕ್ಷಣಗಳೂ—ಅಂಶಗಳು ಗೋಚರಿಸುತ್ತವೆ.

ವೈವಾಹಯಂ ನಖಲು ತಸ್ಯ ವಿಚಾರಣೀಯಂ।
ಪಂಚಾಕ್ಷರೀ ಉಪಪರಾನಿತರಾಂ ತಥಾಪಿ॥
ಚೇತೋಮದೀಯ ಮತಸೀ ಕುಸುಮಾವ ಭಾಸಂ।
ಸ್ಯೇ ರಾನಸಂ ಸ್ಮರತಿ ಗೋಪವಧು ಕಿಶೋರವ॥

ಮೇಲಿನ ಶ್ಲೋಕದ ಆಧಾರದ ಮೇರೆಗೆ ಕವಿ ಲೀಲಾಶುಕ ಶೈವ ಬ್ರಾಹ್ಮಣ ನಿರಬಹುದೆಂದು ಹೇಳಬಹುದಾಗಿದೆ. ಕವಿ ಹಾಗೂ ಅವನ ಪೂರ್ವಿಕರು ಶೈವರು. ಲೀಲಾಶುಕನಿಗೆ ಶಿವನಲ್ಲಿ ಭಕ್ತಿ ಇಲ್ಲದಿಲ್ಲ ಆದರೆ ಅವನ ಹೃದಯ ಸದಾ ಗೋಪವಧೂ ಕಿಶೋರನಾದ ಶ್ರೀಕೃಷ್ಣನನ್ನೆ ಸ್ಮರಿಸುತ್ತಿತ್ತು. ಶಿವ, ಅವನ ಮನಸ್ಸಿನ ದೇವರು. ಆದರೆ ಶ್ರೀ ಕೃಷ್ಣ ಅವನ ಆರಾಧನಾ ಮೂರ್ತಿ, ಇಷ್ಟದೈವ. "ಈಶಾನ ದೇವ ಚರಣಾ ಭರಣೇನೆ" ಶ್ಲೋಕದಿಂದ ಲೀಲಾಶುಕನಿಗೆ ಶಿವನಲ್ಲಿಯೂ ಅಗಾಧ ಭಕ್ತಿ ಗೌರವಗಳು ಇದ್ದವು ಎಂಬುದು ವ್ಯಕ್ತವಾಗುತ್ತದೆ.

ಕವಿ ಲೀಲಾಶುಕನನ್ನು ಸಹಜ ಕವಿತಾ ಶಕ್ತಿ ಅನುಸರಿಸಿ ಬಂದಂತೆ ಬಡತನವೂ ಹುಟ್ಟುನೊಂದಿಗೇ ದೆನ್ನು ಹತ್ತಿ ಬಂದಿತ್ತೆಂದು ತೋರುತ್ತದೆ ಧನ ಸಂಪಾದನೆಗಾಗಿ ಶ್ರೀಮಂತರ ಮನೆಯ ಬಾಗಿಲಿಗೆ ಹೋಗಿ ಕವನವನ್ನು ರಚಿಸಿ ಹಾಡಿದ. ಧನ ಮದದಿಂದ ಮೈ ಮರೆತಿದ್ದ ಶ್ರೀಮಂತರಿಗೆ ಇವನ ಕವನವನ್ನು ಕೇಳುವಷ್ಟು ವೇಳೆ, ತಾಳ್ಮೆ ಎಲ್ಲಿದೆ? ಅವರ ಅಹಂಕಾರವನ್ನು ಕಂಡು ಬಹುವಾಗಿ ನೊಂದ ಲೀಲಾ ಶುಕ. ತನ್ನಿಂದ ಕಾವ್ಯ ದೇವಿಗೆ ಅಪಚಾರವಾಯಿತು ಎಂದು ಮೆಮ್ಮಲ ಮರುಗಿದ. ಪಶ್ಚಾತ್ತಾಪದ ಅಗ್ನಿಕುಂಡದಲ್ಲಿ ಬೆಂದು ಪರಿಶುದ್ಧನಾದ. "ಧನದ ಆಶೆಯಿಂದ ನಿನ್ನನ್ನೂ ಧನಿಕರ ಮುಂದೆ ನಾಟ್ಯವಾಡಿಸಿದೆ ತಾಯಿ, ಪಾಪಿ. ನನ್ನನ್ನು ಕ್ಷಮಿಸು. ಈ ಅಪರಾಧಕ್ಕಾಗಿ ಇನ್ನು ಮುಂದೆ ಗೋಪ ವೇಷಧಾರಿ ವಿಷ್ಣುವಿನ ಗುಣಗಾನ ಮಾಡುತ್ತೇನೆ" ಎಂದೂ ಪಶ್ಚಾತ್ತಾಪದಿಂದ ಕ್ಷಮೆ ಬೇಡಿದ. ಪ್ರತಿಜ್ಞೆ ಮಾಡಿದ. ಮುಂದೆ ಯಾರನ್ನೂ ಬೇಡಿಹ ಎಂದು ಬೇಡಲಿಲ್ಲ. ಶ್ರೀಮಂತರೆಯ ಹಣದ ಹೆಬ್ಬಲವನ್ನು ತೊರೆದು ಬಡತನದಿಂದಲೇ ಕೃಪ್ತನಾಗಿ, ಎರ್ವಸ್ವವೂ ಶ್ರೀ ಕೃಷ್ಣನೆಂದು ನಂಬಿ ಅವನ್ನ ಭಕ್ತಿಯಿಂದ ಧ್ಯಾನಿಸಿದ.

ಬಾಪೂಜಿ ಮತ್ತು ಜವಾಹರಲಾಲ

ಲೇಖಕರು
ಪ್ರೊ. ಎಚ್. ಸುಂದರ ರಾವ್, ಎಂ. ಎ.
(ನಿವೃತ್ತ ಪ್ರಿನ್ಸಿಪಲ್)

ಎಪ್ಪತ್ತನೆಯ ಶತಮಾನದ ಪ್ರಥಮಾರ್ಧವು ಜಗತ್ತಿಗೆ ಇಬ್ಬರು ಶ್ರೇಷ್ಠ ರತ್ನಗಳನ್ನು ಭಾರತ ನೀಡಿತು. ಬಾಪೂಜಿಯವರು ವಿಶ್ವಮಾನ್ಯರಾದರು. ಇವರಲ್ಲಿ ಗುರು—ಶಿಷ್ಯರು ನಿಜ. ಬಹಿರಂಗದಲ್ಲಿ ಪರಸ್ಪರ ವಿರೋಧಿ ಅಭಿಪ್ರಾಯವುಳ್ಳವರು ಇವರಾದರೂ ಅಂತರಿಕವಾಗಿ ಇವರಿಬ್ಬರೂ ಒಂದೇ ಅಚ್ಚಿನಿಂದ ಹೊರ್ಮೆ ಬಂದವರು.

ಗಾಂಧೀ ಯುಗವು 1948ರಲ್ಲಿ ಆಕಸ್ಮಾತ್ತಾಗಿ ಸಮಾಪ್ತಿಯಾಯಿತು. 1919ರಿಂದ ಆಂದಿನ ವರೆಗೆ ಬಾಪೂಜಿಯವರು ಭಾರತದ ರಾಷ್ಟ್ರೀಯ ನಾಯಕರಾಗಿ ಮಾತ್ರವಲ್ಲದೆ, ಸಮಸ್ತ ದೇಶದ ಸಂಸ್ಕೃತಿಯ, ನಾಗರಿಕತೆಯ, ಧಾರ್ಮಿಕ ಧ್ಯೇಯಗಳ ದಿವ್ಯ ಮೂರ್ತಿಗಳಾಗಿ ಸೇವೆ ಸಲ್ಲಿಸಿದರು. ಆವರ ಪ್ರತಿಭೆಯಿಂದಲೇ ಭಾರತ ಸ್ವಾತಂತ್ರ್ಯ ಸಮರವು ಬಹುಮಟ್ಟಿಗೆ ಶಾಂತ ರೀತಿಯಲ್ಲಿಯೇ ಮುಂದುವರಿಯಿತು. ಇಲ್ಲದಿದ್ದರೆ ವಿಪ್ಲವದ ಅಗಿನವಾತಾವರಣವನ್ನು ನೀವು ಲೆಕ್ಕಿಸಿದರೆ, ನಮ್ಮ ದೇಶದಲ್ಲಿ ಕೂಡ ರಕ್ತಪಾತ, ಹಿಂಸೆಗಳಿಂದ ಕೂಡಿದ ಪ್ರಚಂಡ ಹೋರಾಟವು ಜರುಗುವ ಸಂಭವವಿತ್ತೆಂದು ನಿಶ್ಚಯವೇಹವಾಗಿ ಹೇಳಬಹುದು. ಜಗತ್ತಿನಲ್ಲೆಲ್ಲಾ ಅಶಾಂತಿ, ಕ್ರೌರ್ಯ, ಅನ್ಯಾಯಗಳು ಹಬ್ಬಿದಂಥ ಸಮಯದಲ್ಲಿ ಅದು ಮಾನವತೆಯ ಸರ್ವನಾಶವನ್ನೆ ಸಾಧಿಸುವ ರಾಕ್ಷಸೀ ಶಕ್ತಿಗಳು ಪ್ರಪಂಚದಲ್ಲಿ ತಾಂಡವವಾಡುತ್ತಿದ್ದವು. ಹಿಟ್ಲರನ ಅಮಾನುಷ ದಾಬ್ಬಳಿಕೆಯ ಯುಗ, ವಿಷಲೋನಿಯು ಅಬಿಸೀನಿಯಾ ದೇಶವನ್ನು ನುಗ್ಗಿ, ತನ್ನ ರಾಕ್ಷಸೀ ಬಲವನ್ನು ಪ್ರದರ್ಶಿಸಿ ಸಹಸ್ರಾರು ವಂದಿಯ ಚಿತ್ರವಧೆಯನ್ನು ನಡೆಸಿದ ಸಂದಿಗ್ಧ ಕಾಲ ಅದು. ಅಂತರಾಷ್ಟ್ರೀಯ ರಂಗದಲ್ಲಿ ರಕ್ಕಸ, ಅನ್ಯಾಯ, ದರ್ಪ, ವ್ಯಾಪಕವಾಗಿ ತೋರಿ ಬರುತ್ತಿದ್ದ ಸಮಯ—ಬ್ರಿಟಿಷರ ದಬ್ಬಾಳಿಕೆಯು ಒಂದು ನವೀನ ತೀವ್ರತೆಯನ್ನು ಹೊಂದಿತ್ತು. ಎರಡನೇ ವಿಶ್ವಯುದ್ಧದ ಪರಿಣಾಮಗಳು ಅನಿವಾರ್ಯವಾಗಿ ಭಾರತದಲ್ಲಿ ಈ ದಬ್ಬಾಳಿಕೆಯು ಅಸಹನೀಯವಾಗಿತ್ತು. ಗಾಂಧೀಜಿಯವರು ಯುಗಪುರುಷರೆಂದು ಹೇಳುವುದಕ್ಕೆ ಅವರು ಭಾರತದಲ್ಲಿ ನಡೆಸಿದ ಅಹಿಂಸಾ ಚಳವಳಿಯೊಂದೇ ಸಿದರ್ಶನಸಾಕಲ್ಲ. ಭಾರತವನ್ನು ರಕ್ತಪಾತದಿಂದ ಪಾರುಮಾಡಿ, ನಮ್ಮ ಪುರಾತನ ಧಾರ್ಮಿಕ ವೈಶಿಷ್ಟ್ಯಗಳನ್ನು ನಮ್ಮ ನಿತ್ಯಜೀವನದಲ್ಲಿ, ಅದು ಕೂಡಿ ರಾಜಕೀಯ ಕ್ಷೇತ್ರದಲ್ಲಿ, ಕಾರ್ಯರೂಪಕ್ಕೆ ತಂದರು ಗಾಂಧೀಜಿಯವರು. ಅವರು ಸಾಧಿಸಿದ್ದು ಕೇವಲ ರಾಜಕೀಯ ಕ್ರಾಂತಿಯಲ್ಲಿ, ಜನಾಂಗದಲ್ಲಿ ಧರ್ಮ ಜಾಗ್ರತಿಯನ್ನು ಎಬ್ಬಿಸಿದ ಮಹಾಪುರಷರೆನ್ನಬಹುದು. ಇದೇ ಗಾಂಧೀಜಿಯವರ ಜೀವನದ ವೈಶಿಷ್ಟ್ಯ. ಅವರ ತತ್ವಗಳು ಅನೇಕ ವೇಳೆ ಕಾರ್ಯರೂಪಕ್ಕೆ ತರಲು ಅಸಾಧ್ಯವಾದವುಗಳು, ಅವು ಅತಿ ಉನ್ನತವಾದುವುಗಳಾದ್ದರಿಂದ ಸಾಮಾನ್ಯ ಮನುಷ್ಯರಿಗೆ ಅವುಗಳನ್ನು ಸಾಧಿಸುವುದು ಸುಲಭವಲ್ಲ—ಭಾರತ ಸ್ವಾತಂತ್ರ್ಯವು ಗಾಂಧೀಜಿಯವರ ಅಹಿಂಸಾ ಚಳವಳಿಯಿಂದ ದೊರಕಿದ್ದಲ್ಲ, ಅದು ಒಂದು ಐತಿಹಾಸಿಕ ಸಮರಂಗ—ಇತ್ಯಾದಿ ವಾದಗಳು ಈಗ ನಾವು ಕೇಳುತ್ತಿವೆ ಹೇಗೂ ಇರಲಿ, ಆದರೆ ಮಾನವ ಇತಿಹಾಸದಲ್ಲಿ ಅಹಿಂಸಾ ತತ್ವವನ್ನು ಕಾರ್ಯರೂಪಕ್ಕೆ ತರಲು ಅವಿಶ್ರಾಂತವಾಗಿ ಸಾಧಿಸಿದ ಶ್ರೇಷ್ಠ ಪುರುಷರಲ್ಲಿ ಗಾಂಧೀಜಿಯವರು ಒಬ್ಬರು.

ಗಾಂಧಿಜಿಯವರ ಜವಾಹರಲಾಲರನ್ನು ಭಾರತದ ನಾಯಕತ್ವಕ್ಕೆ ಒಪ್ಪಿಸಿದ ಸಂಗತಿ ನಮ್ಮೆಲ್ಲರಿಗೂ ತಿಳಿದಿದೆ. ಜವಾಹರಲಾಲರ ಈ ದೊಡ್ಡ ಸ್ಥಾನವು ಕೇವಲ ಬಾಪೂಜಿಯವರ "ನಾಮಕರಣಾದಿ ವೇಲೆ ಹೊಂದಿರಲಿಲ್ಲ. ಜವಾಹರಲಾಲರು ಸ್ವತಃ ಒಬ್ಬ ಕ್ರಾಂತಿಕಾರಿಯಾಗಿ ಗಾಂಧೀಜಿಯವರನ್ನು ಅನೇಕ ಗುರು ಸ್ಥಾನದಲ್ಲಿಟ್ಟಿದ್ದರೂ, ಅನೇಕಬ್ಬರೊಳಗೆ, ಬಾಹ್ಯದೃಷ್ಟಿಯಿಂದ ನೋಡಿದರೆ, ಹೆಚ್ಚು ಸಮನ್ವಯ ಕಂಡು ಬರುವುದಿಲ್ಲ. ಗಾಂಧೀಜಿಯವರು ಕ್ರಾಂತಿಪುರುಷರೂ ಹೌದು. ಆದರೆ ಅವರಿಗೆ ಬೇಕಾದುದು, ಆಂತರಿಕ ಕ್ರಾಂತಿ, ಧಾರ್ಮಿಕ ಪರಿವರ್ತನೆ ಅವರು ಸನಾತನ ಧರ್ಮದ ಶ್ರೇಷ್ಠ ಅನುಯಾಯಿಗಳು. ಆದರೆ ಮತಾಂಧತೆ ಅವರಲ್ಲಿ ಎಳ್ಳಷ್ಟೂ ಇರಲಿಲ್ಲ. ಎಲ್ಲ ಧರ್ಮಗಳೂ ಭಗವಂತನ ವಿವಿಧ ಆದೇಶಗಳೆಂದು ಅವರ ನಂಬಿಕೆ. ದೇವರಲ್ಲಿ ಗಾಂಧೀಜಿಯ ವರಿಗಿದ್ದ ಭಕ್ತಿ, ವಿಶ್ವಾಸಗಳು ಕೆಲವು ವೇಳೆ ನವ್ಮನ್ನು ಆಶ್ಚರ್ಯಪಡಿಸುತ್ತವೆ. ಯಾವ ಕಾರ್ಯವನ್ನು ಪ್ರಾರಂಭಿಸುವಾಗಲೂ, ಬಾಪೂಜಿಯವರು ತನ್ನ "ಅಂತರ್ವಾಣಿ"ಯ ಆದೇಶವನ್ನು ಪಡೆಯುತ್ತಿದ್ದರು. ಯಾಕೆಂದರೆ ಭಗವಂತನು ಸರ್ವವ್ಯಾಪಿ, ಸರ್ವಜ್ಞ, ಸರ್ವಶಕ್ತನು ಎಂದು ಅವರು ನಂಬಿದ್ದರು. ದೇವರೇ ಜೀವನದ, ವಿಶ್ವದ ಸೂತ್ರಧಾರಿ. ಆ ಮಹಾ ಶಕ್ತಿಯು ತರಂಧನೆಯೇ ಜೀವನದ ಮುಖ್ಯೋದ್ದೇಶ ಎಂದು ಹೇಳುತ್ತಿದ್ದರು. ಪ್ರಾಧಾನ್ಯ ಗಾಂಧೀಜಿಯವರ ಸತ್ಯ ಜೀವನದಲ್ಲಿ ಒಂದ ಮಹತ್ವಾದ ಸ್ಥಾನವನ್ನು ಪಡೆದಿತ್ತು. ಪ್ರಸಂಗದ ಶ್ರೇಷ್ಠ ಧರ್ಮ ಗ್ರಂಥಗಳ ಗಾಢವಾದ ಅಧ್ಯಯನವನ್ನು ಅವರು ಮಾಡಿದ್ದರು. ಧರ್ಮನಿಷ್ಠೆಯಿಂದಲೇ ಜೀವನದ ಪಾವಿತ್ರ್ಯವನ್ನು ಕಾಪಾಡಿಕೊಳ್ಳಬಹುದೆಂದು ಅವರು ನಂಬಿದ್ದರು. ಸತ್ಯ, ಪ್ರೇಮ, ಅಹಿಂಸೆ, ತ್ಯಾಗ—ಇವುಗಳು ಧರ್ಮದ ವಿವಿಧ ಸ್ವರೂಪಗಳು ಎಂದು ಹೇಳಿದ್ದಾರೆ. ಇಂತಹ ದೃಢ, ಅಚಲ ನಂಬಿಕೆ ಅಧುನಿಕ ಯುಗದಲ್ಲಿ ವಿರಳ

ಜವಾಹರಲಾಲರು ಮೊದಲಿನಿಂದಲೂ ಬಾಲ್ಯದಿಂದ, ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದವರಲ್ಲ. ಇವರು ಆಗರ್ಭ ಶ್ರೀಮಂತರು. ಅದರೂ ಶ್ರೀಮಂತಿಕೆಯ ದರ್ಪ ಅಣ್ಣಾಲೆಯಿಲ್ಲ. ಅಲಹಾಬಾದಿನ "ಆನಂದ ಭವನ"ದ ವಾತಾವರಣವು ಮಾನಸಿಕ ವಿಕಾಸಕ್ಕೆ, ಆಧುನಿಕ ವಿಚಾರಗಳಿಗೆ ತುಂಬಾ ಅಪ್ಯಾಯನೀಯವಾಗಿತ್ತು. ಆದು. ಸಂಸ್ಕೃತಿಯ ಒಂದು ಕೇಂದ್ರ. ಕೇವಲ ಪುರಾತನ ಸಂಸ್ಕೃತಿಯಲ್ಲಿ ವಿಶ್ವ, ಮಾನವ ಸಂಸ್ಕೃತಿಯ ಬೀಡಾಗಿತ್ತು. ನೆಹರೂರವರ ಮನೆತನ. ಪಾಶ್ಚಾತ್ಯ ಸಾಂಸ್ಕೃತಿ, ವಿಜ್ಞಾನಗಳಲ್ಲಿ ಜವಾಹರಲಾಲರಿಗೆ ಹಚ್ಚು ಆಭಿರುಚಿ. ಸ್ವಕ್ಷಕ್ಷ ಧಾರ್ಮಿಕ ಆಚರಣೆಗಳಲ್ಲಾಗಲಿ, ಕತ್ತಿ, ನಿಯಮಗಳಲ್ಲಾಗಲೀ ಅವರಿಗೆ ಬಹಳ ನಂಬಿಕೆ ಇರಲಿಲ್ಲ. ಆದರೆ ಯಾವುದು ಜೀವನದಲ್ಲಿ ಪವಿತ್ರವೋ, ಶ್ರೇಸ್ಕರವೋ, ಮಾನವನ ವಿಕಾಸಕ್ಕೆ ಸಹಕಾರಿಯೋ, ಅದಕ್ಕೆಲ್ಲ ಅವರಿಗೆ ಗಾಢವಾದ ವಿಶ್ವಾಸ ಗಿತ್ತು. "ನಾನು ದೇವರೆಂದು ಪೂಜಿಸುವುದು ಜೀವನವನ್ನು, ಭಗವಂತನ ಮಹಿಮೆ ವಿಶ್ವದ ಎಲ್ಲ ಕಡೆಗಳಲ್ಲಿಯೂ ಕಾಣುತ್ತೇನೆ ಜೀವನದಿಂದ ಪ್ರತ್ಯೇಕಿಸಲ್ಪಟ್ಟ, ಒಂದು ಯಾವುದೋ ಬಾಹ್ಯ ಶಕ್ತಿ ದೇವರೆಂದ ನಾನು ನಂಬುವುದಿಲ್ಲ" ಎಂದು ಜವಾಹರಲಾಲರು ಒಮ್ಮೆ ಹೇಳಿದ್ದಂಟು. ಬಡಕನವನ್ನು ನಿವಾರಿಸಲು ಮಾಡುವುದು, ಮಾನವ ಜೀವನವನ್ನು ಉನ್ನತ ನೈತಿಕ ಮಟ್ಟಕ್ಕೆ ಏರಿಸುವುದು, ಸಮೂಹದ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದು—ಇವು ಜವಾಹರಲಾಲರವರ ಮಹೋದ್ದೇಶಗಳು. ಕವಿವರ್ಯ ರವೀಂದ್ರರು ಹೇಳಿದಂತೆ ಭಗವತನು ಕತ್ತಲು ಕವಿದ ಗುಡಿಯಲ್ಲಿ ವಾಸಿಸುವವನಲ್ಲ. ಮಾನವ ಜೀವನದ ನಿರಂತರ ಹೋರಾಟದಲ್ಲಿ, ಕಷ್ಟ ಸಹಿಷ್ಣುತೆಗಳಲ್ಲಿ, ಅವನ ಪ್ರಶ್ನೆ ಆದರ್ಶಗಳಲ್ಲಿ ಅವನು ಮಾಡುವ ಮಹಾ ಕಾರ್ಯಗಳಲ್ಲಿ, ತ್ಯಾಗಗಳಲ್ಲಿ— ಭಗವಂತನು ಇದ್ದಾನೆ. ಭಾರತದ ದೀನಸ್ಥಿತಿಗೆ ಕಾರಣವೆಂದರೆ, ನಾವು ಕಟ್ಟಿಸಿದ ಯಾಂತ್ರಿಕ ಶಾಲೆಗಳು, ಉದ್ಯಮಗಳು ವಿದ್ಯಾಲಯಗಳು ಇತ್ಯಾದಿಯೆಂದ ಒಮ್ಮೆ ಜವಾಹರಲಾಲರು ಹೇಳಿದ್ದುಂಟು. ಈ ಅರ್ಥದಲ್ಲಿ ಬಾಪೂಜಿಯವರು ಮತ್ತು ಜವಾಹರಲಾಲರ ನಡುವೆ ಯಾವ ಭೇದ ಭಾವವನ್ನೂ ನಾವು ಕಾಣುವುದಿಲ್ಲ. ಇಬ್ಬರೂ ಮಾನವ ಪ್ರೇಮಿಗಳು, ಸತ್ಯವಾದಿಗಳು, ತ್ಯಾಗ ಮೂರ್ತಿಗಳು. ಜವಾಹರಲಾಲರು ಗಾಂಧೀಜಿಯವರಲ್ಲಿ ಮೆಚ್ಚಿದ್ದು ಅವರ ತ್ಯಾಗ, ಅಚಲ ಪ್ರಾಮಾಣಿಕತೆ, ಉಜ್ವಲ ದೇಶಪ್ರೇಮ. "ನಮಗೆ ಪ್ರಾರ್ಥನೆಯಲ್ಲಿ ನಂಬಿಕೆ ಇದಯೇ?" ಎಂದ ಒಬ್ಬ ಅಮೆರಿಕನ್ ಪತ್ರಿಕೋದ್ಯೋಮಿ ಜವಾಹರಲಾಲರನ್ನು ಪ್ರಶ್ನಿಸಿದನಂತೆ ಅದಕ್ಕೆ ಅವರು ಉತ್ತರ ಹೀಗೆ: "ನಾನು ಆಂಗ್ಲೇಯ ತತ್ವಜ್ಞಾನಿ ಕಾರ್ಲೈಲನ ಹಾಗೆ ಯಾವ ನಿಷ್ಠಾವಂತ ಕರ್ಮವೇ ಅತ್ಯುತ್ತಮ ಪ್ರಾರ್ಥನೆ. ಜವಾಹರಲಾಲರು ದೈವಭಕ್ತರಲ್ಲವೆಂಬ ಅಂಶವು ಎದ್ದು ಕಾಣುತ್ತಿಲ್ಲದೆ ಎಂದಲ್ಲ. ಜವಾಹರಲಾಲರ. ಯಾವುದೇ ದೇವಾಲಯಕ್ಕೆ ಹೋಗಿ ಪೂಜೆ, ಆರಾಧನೆಗಳನ್ನು ರಾಸ್ಕೃತ್ಯಕ್ಕೆಂದು ನೋಡಿದವರಲ್ಲ. ಆದರೆ ಜೀವನದಲ್ಲಿ, ವಿಶ್ವದಲ್ಲಿ ಒಂದು ಅಭಿವ್ಯಕ್ತನೀಯ, ಅಮೋಘ ಶಕ್ತಿ ಇದೆ. ಜೀವನದ ಅತಿ ಉನ್ನತ ಮೌಲ್ಯಗಳು ಆ ಶಕ್ತಿಯ ಸ್ವರೂಪಗಳು, ಸೌಂದರ್ಯ, ತ್ಯಾಗ, ಪ್ರೇಮ, ಸದ್ಗುಣಗಳು, ಇವೆಲ್ಲ ಈ ದಿವ್ಯ ಶಕ್ತಿಯ ಪ್ರೇಮಿಗಳಾಗಿ ಎಂದು ಅವರ ನಂಬಿಕೆ, ಅವರು ಯಾವ ಕೃತ್ರಿಮವಾಕ ಭಾವನೆಗಳನ್ನೂ ನಂಬಿಕೆಗಳನ್ನೂ ಅಲ್ಲಗಳೆಯುತ್ತಿಲ್ಲ. ಅಲಹಾಬಾದಿನಲ್ಲಿ ಜರಗುವ ಕುಂಭಮೇಳದ ವಿಷಯ ಅವರು ಹೀಗೆ ಹೇಳಿದ್ದುಂಟು "ಅಲಕ್ಷಾಂತರ ಸ್ತ್ರೀ ಪುರುಷರು ಭಗವಂತನೆಂಬ ನಂಬಿಕೆಯಿಂದ ಆರಾಧಿಸುವ ಸ್ಥಳವೇ ಜೀವನಸ್ಥಾನ. ಎಲ್ಲಿ ನಿಷ್ಕಲಂಕ ಭಕ್ತಿಯಿದೆಯೋ ಅಲ್ಲಿ ನಿಸ್ಸಂದೇಹವಾಗಿ ದೇವರ ಶಕ್ತಿಯು ಇದ್ದೇ ಇರುತ್ತದೆ."

ನೆಹರು ಸಂಧಿಸಿದ್ದೇನು? ಎಂಬ ಪ್ರಶ್ನೆಯು ಪದೇ ಪದೇ ಈ ಸಂದಿಗ್ಧ ಸಮಯದಲ್ಲಿ ನಮ್ಮೆದುರಿಗೆ ಬರುವುದುಂಟು ನೆಹರೂರವರು ಕಣ್ಮರೆಯಾಗಿ 2½ ವರುಷಗಳು ದುರು ಅವರು 17ವರ್ಷ ಭಾರತದ ನಾಯಕತ್ವವನ್ನು ವಹಿಸಿದ್ದರೆ. ಅವರ ಕೆಲವು ತತ್ವಗಳು, ವಿಚಾರಗಳು ನಾಡಿಗೆ ಶ್ರೇಷ್ಠ ಕಾವಾಗಿರಲಿಲ್ಲವೆಂಬ ಒಂದು ಸಾಮಾನ್ಯವಾದ ಇತ್ತೀಚೆಗೆ ಬೆಳೆಯುತ್ತಾ ಬಂದಿದೆ. ಹೌದು, ನೆಹರೂ ಕೂಡ ಮಾನವ ಸಹಜ ದೌರ್ಬಲ್ಯಗಳಿಗೆ ತುತ್ತಾಗಿದ್ದಿಲೇ ಬೇಕು ಅಂದು ಸಂಪೂರ್ಣ ಅದರ್ಶವಾದಿಗಳಿಗೆ ಕಲ್ಪಿಸಲಾಗಿರುವ ಲೌಕಿಕ ವ್ಯವಹಾರದ ಜನಭ್ರಮೆಗಳನ್ನು ಧಿಕ್ಕರಿಸಿತ್ತಿದ್ದರೇ ನೂ! ತಮ್ಮ ನಂಬಿದ ವ್ಯಕ್ತಿಗಳಲ್ಲಿ ಅವಾರ ನಂಬಿಕೆಯನ್ನು ಅವರು ಇಡುತ್ತಿದ್ದರು. ಆಡಳಿತ ಕ್ರಮದಲ್ಲಿ ಇಂತಹ ನಂಬಿಕೆಯ ಪರಿಣಾಮಗಳು ದೇಶಕ್ಕೆ ಅಷ್ಟು ಹಿತಕರವಾಗಲಿಲ್ಲ ಆದರೆ ಯೋಜನೆಗಳು ಬಹಮಟ್ಟಿಗೆ ಪ್ರಪಂಚಾಕಾರವಾಗಿ ಭಾರತದ ಆರ್ಥಿಕ ಪರಿಸ್ಥಿತಿಯನ್ನು ವಿಂಗಡಿಸಿವೆನ್ನಲೂ ಬಹುದು. ಒಂದು ವೇಳೆ, ಅವರ ಆಡಳಿತವು ಸಾರ್ವಕಾಲಿಕವಾಗಿರಲಿಲ್ಲವೆನ್ನೋಣ! ಅನೇಕ ಉನ್ನತ ಅಧಿಕಾರಿಗಳಲ್ಲಿ ಶ್ರದ್ಧೆ, ಸಾರ್ವಜನಿಕತೆಗಳು ತಿಳಿಬಾದ ಸಂದರ್ಭಗಳಲ್ಲಿ ಅವರು ಕಟುವಾದ ಕ್ರಮಗಳನ್ನು ಕೈಗೊಳ್ಳದಿದ್ದಿರ ಬಹುದು. ಸೋಶಿಯಲಿಸಮ್ (ಸಮಾಜವಾದ, ತನ್ನ ಧ್ಯೇಯವೆಂದು ನೆಹರೂರವರು ಹೇಳುತ್ತಿದ್ದರು. ಆರ್ಥಿಕ ಕ್ಷೇತ್ರದಲ್ಲಿ ಸಮಾಜ ತತ್ವದ ಪ್ರಧಾನವನ್ನು ಏರಿಸಲಕ್ಕೆ ಪ್ರಯತ್ನ ಪಟ್ಟರು. ಕೆಲವು ಸಂದರ್ಭಗಳಲ್ಲಿ ಈ ಶ್ರಮಿಕ ಯಜ್ಞಿಯೂಗಳೆ ಇರಬಹುದು. ಆದರ ನೆಹರೂರವರ ಸಹೃದಯತೆಕ್ಕೆ, ನಿಷ್ಪಲಂಕ ಮನಸ್ಸಿಗೆ, ಮಾನವ ಪ್ರೇಮ ಪ್ರಪಂಚದ ನಾಯಕರಲ್ಲಿ ನಿರಳವೆನ್ನಬೇಕು. ಅವರ ದೇಶಪ್ರೇಮವಂತೂ ಅದ್ವಿತೀಯವಾದದ್ದು. ಅದು ಕೇವಲ ಭಾವನೆಯಾಗಿರಲಿಲ್ಲ. ಭಾರತವು ಒಂದು ಭೌಗೋಲಿಕ "ವಸ್ತು"ವಲ್ಲ, ಕೋಟ್ಯಂತರ ಜನರು ವಾಸಿಸುವಂಥ ದೇಶ. ಪ್ರತಿ ನಾಗರಿಕನೂ ಭಾರತೀಯನು ಎಂಬ ಒಂದ ನಿಕಟ, ವೈಯಕ್ತಿಕ ದೇಶಪ್ರೇಮ ನೆಹರೂರವರಲ್ಲಿ ಅವರು ಅತೀದೊಡ್ಡ ಯೋಜನೆಗಳನ್ನು ನಿರ್ಮಿಸಿ ದೇಶದಲ್ಲಿನ ಸ್ಥಿತಿಯು ದುರ್ದಶೆಗೆ ಕಾರಣರಾದರು ಎಂಬ ವಾದದಲ್ಲಿ ಯಾವ ಸತ್ಯಾಂಶವೂ ಇಲ್ಲ. ಇದು ವಿಚಾರ ರಹಿತವೂ ಆಗಿದೆ. ಈ ಯೋಜನೆಗಳು ಭಾರತದ ಸ್ವರೂಪವನ್ನೇ ಬದಲಾಯಿಸಿವೆ. ಮೇಲಾಗಿ ಈ ಯೋಜನೆಗಳು ದೇಶದ ಆರ್ಥಿಕ ಪರಿಸ್ಥಿತಿಯನ್ನು ಉನ್ನತ ಸ್ಥಿತಿಗೆ

(ಇನ್ನಷ್ಟೆದ್ದಂಥತ್ತನೇ ಪುಟ ನೋಡಿರಿ)

ಮೊರೆ

ಕೊಳಕು ಹೊಂಡದ ಆಳ—ಪಾತಾಳಕೆಳೆದವರ
ಬೆಳಕು ಕೊಂಡದ ಕಡೆಗೆ ಕರೆದು ತಾರೊ.
ಕವಿದಿರುವ ಕತ್ತಲೆಯ ಗವಿಯಿಂದ ಹೊರಬಂದು
ರವಿಯ ಭವಿಷ್ಯನು ಕಾಂಬ ಬುವಿಯ ತೋರೊ.
ಸತ್ಯವಿಲ್ಲದ ಲೋಕ, ಶಕ್ತಿವಿಲ್ಲದ ಲೋಕ,
ಸುತ್ತಲೆಲ್ಲವು ಶೋಕ—ಅರ್ಥವಿಲ್ಲ.
ಧರ್ಮ ದೇವರ ಹೆಸರು, ಒಪ್ಪ ರಕ್ಷಕ ಹೆಸರು
ಕರ್ಮದಲಿ ಸುಳಿಯುವುದು ಸ್ವಾರ್ಥವೆಲ್ಲ.
ಸತ್ಯವನು ಜೀವನದಿ ಹುಡುಕ ಹೊರಟವನೊಬ್ಬ
ನಿತ್ಯ ಜೀವನದಿ ಬೇಸತ್ತಿಹನು.
ಸತ್ಯವನೆ ಬಾಳಿನಲಿ ಬದುಕಿದವನಿನ್ನೊಬ್ಬ
ವಿತ್ತವನು ಕಳಕೊಂಡು ಸತ್ತಿರುವನು.
ಅನ್ನವಿಲ್ಲದ ಕೊರಗ ಅನ್ನಲೆಂತೈ ನಾನ.?
ಅನ್ನಪೂರ್ಣೇಶ್ವರಿಯೆ ಕಾಯಬೇಕು.
ಚಿನ್ನ ಬೆಳೆಯುವ ನಾಡು—ಇನ್ನೇತಕೀ ಕೇಡು
ಬನ್ನ ಸಡುತಿಹ ಪಾಡು—ಸಾಕು ಸಾಕು.
ಅಧಿಕಾರ ಮತ್ಸರತೆಯ ಅಧಮರಂಗುಷ್ಮದಲಿ
ಅದುಮಿರುವರೀ ಭೂಮಿ ನಡುಗುತಿಹುದು.
ಅಧಿಕ ಅಹಂಕಾರ ಬೆಳೆಸಿರಿ ಎನುವ ಭೂಪರಿಗೆ
ಅಧಿಕಾರ ಹಸಿವು ಎಂದಡಗಬಹುದು?
ರಾಜಕೀಯದ ರಕ್ಕಸ ಬೀಜಾಸುರನ್ನ ವಂಶ
ಈ ಜಗದಿ ಮನೆ ಮನೆಗೆ ಹಬ್ಬಿರುವುದ.;
ಆಡಳಿತೆಯೆಶ್ವರದಿ ಕುಳಿತವರ್ಯ ಬುದ್ಧಿಯನು
ಕಾಡೊಳಗೆ ಮಬ್ಬಿನಲಿ ದಬ್ಬಿರುವುದು.
ಕುಳಕಿಂತ ಕಡೆಯಾಗಿ ನರುಳುತಿಹ ನರಜೀವ
ಬಾಳು ಬಾಳಾಗಿಹುದು—ಬಾಳಲಾರ

ಸತ್ಯ

ಬಾಳ ಬಟ್ಟೆಯ ಮೆಟ್ಟಿ ನೆಡೆದೆನೆನ್ನುವುದಕ್ಕೆ
ಗುರುತಿಟ್ಟು ನೆಡೆ ನಿನ್ನ ಆಡಿಯ ಚಿತ್ರವನೆದಕೆ!
ಮಳೆ ಬಂದು ನೆಡೆವಾಗ ಕೆರೆಯ ತುಂಬಿಹುದಂತೆ
ಕಂಪಿಟ್ಟು ಮನ್ನೆಡೆವ ಪ್ರಾಣವಾಯುವಿನಂತೆ!
ರವಿಯಳಿವ ಮುನ್ನ ಚಂದ್ರಮನ ನಭಕೆಡುವಪೊಲು
ಗುರುತಿಟ್ಟು ನೆಡೆ ನೀನು ಹುಟ್ಟು ಸಾರ್ಥಕತೆನಲು!
ನಿಶೆಸಾವ ಮೊದಲು ಹೊಂಬಿಸಿಲ ಬುವಿಗಿಡುವಂತ
ಮೋಡ ಮಡಿಯುವ ಮುನ್ನ ಸುರಿಮಳೆಯ ಗರೆವಂತೆ!
ಗುರುತಿಟ್ಟು ನೆಡೆ ಮನುಜ ಉಳಿಸಿ ನಿನ್ನಯ ಹೆಸರು
ಪೋಷ ಸುಗ್ಗಿಯ ರೀತಿ ಮೂಡಿ ಕಣಜವ ಬಸುರು!
ಋತು ವಸಂತನು ಬಂದು, ನಿಂದು ಹೋಗುವ ಮುನ್ನ
ಬುವಿಗೆ ಹಸಿರುಡಿಸಿ, ಹೂ ಮುಡಿಸಿ ಹೋಗುವನಣ್ಣಾ!
ಆ ಬಾಳು ಸಾರ್ಥಕವು! ಆಂಧನನೆ ಕೃತಕೃತ್ಯ!
ಅದೆ ಕಾಣ್ಮೆ ದೇವನಿಗೆ! ಚಿರ ಸನಾತನ ಸತ್ಯ!!

—"ತ್ರಿಮೂರ್ತಿ"

ಕೂಳಿಲ್ಲದರೆ ಹೂಟ್ಟೆ ಕೂಗಿ ಕರೆಯುತ್ತಿಹುದು
ಗೋಳ ಪರಿಹರಿಸೆಂದ—ತಾಳಲಾರ.
ವೇದಗಳ ಕದ್ದವನ ಮೇದಿನಿಯನೈದ್ದವನ
ಸಾಧುಗಳನೊದ್ದವನ ಕೊಲ್ಲಲೆಂದು
ಈಧರೆಯೆಳವತುಸಿ ಮೂದೇವ ನೆನಿಸಿರುವ
ಫೀದಯೆಯು ತೋರದಿರೆ ಬದುಕೆವಿಂಗು.
ಹತ್ತು ಅವತಾರಗಳ ಶಕ್ತಿಯೀ ನಾಡನ್ನು
ಎತ್ತಾಪದಕೊಂದಾಗಿ ಎದ್ದು ಬರಲಿ.
ಸತ್ಯ ಧರ್ಮದ ದಿವ್ಯ ಸತ್ಪುಕಾಶವ ಬೀರಿ
ಸತ್ಪಥದೊಳೀನಾಡ ನಡೆಯುತಿರಲಿ.

—ಡಾ। ರಮಾನಂದ ಬನಾರಿ, M. B., B. S.

Diamond House: 3242
Photo House: 3131 ಸ್ಥಾಪನೆ: 1947 Tel: GOLDKING
Residence 3272

ತಾಜಾ
ಬ್ಲೂ ಯಾಗರ್
ವಜ್ರಗಳಿಗೆ,

14 ct. ಚಿನ್ನಾ
ಭರಣಗಳಿಗೆ,

ವಿವಿಧ
ಉಡುಗೊರೆ
ವಸ್ತುಗಳಿಗೆ—

Prop. S. L. SHET

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್

ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳಿಗೆ
ಅಶೋಕ ಸ್ಟೈನ್‌ಲೆಸ್ ಸ್ಟೀಲ್ ಸೆಂಟರ್

ಮತ್ತು ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ
ಐಡಿಯಲ್ ಫೋಟೋ ಹೌಸ್

ಕಾರ್ನಾರ್ಡ್ ಸದಾಶಿವರಾವ್ ರೋಡ್, ಹಂಪನಕಟ್ಟಾ,
ಮಂಗಳೂರು–1.

"BICCO"

Food Products for every home.

BICCO

Mfrs:-

Bharath Industrial & Canning Co. Ltd.

KAUP, S. Kanara.

Gram: BICCO. Phone: 29.

Sales Depot: **Bhavanth St., Mangalore**

Phone: 3266.

ಪಾಶಾತ್ಯ ಮತ್ತು ಭಾರತೀಯ ಸ್ತ್ರೀ

ಚಿತ್ರ

(ಹದಿನಾಲ್ಕನೇ ಸುಟದಿಂದ)

ಇಲ್ಲಿ. ಅನ್ನರಸ ಹೆಚ್ಚಿದಲ್ಲಿ ಕಾಮರಸ ತಾನೇ ತಾನಾಗಿ ಪ್ರವಹಿಸುತ್ತದೆಂಬ ಮೂಕನ್ನು ಲಿಪ್ಸ್ಟಿಕ್‌ದಲ್ಲಿಟ್ಟುಕೊಂಡು ಕಾರ್ಯಪ್ರವೃತ್ತನಾದೆ ಮನುಷ್ಯರಲ್ಲೂ ಪ್ರಾಣಿಗಳ ರಕ್ತ ಇದ್ದೇ ಇದೆ. ವೈತರಣಿ ಅಷ್ಟೆ. ಅವನಿಗೆ ಆವಶ್ಯಕತೆಗಿಂತ ಅಧಿಕಾಧಿಕ ಬೆಳೆ ಬಂತು. ಸಂತೋಷ ಸಾಗರದಲ್ಲಿ ಮುದೋನ್ಮತ್ತ ಗಜದಂತೆ ಕ್ರೀಡೆಯೂಡಲಾರ ಇಚ್ಛಿಸಿದನು. ಅವನಿಗೆ ಸರಾಂಗನೆಯ ಸುಖಿದ ಪರಿಚಯ ಮಾಡಿಕೊಟ್ಟೆ ಮುಗಿಯಿತು ಕೆಲಸ. ಅದನ್ನು ಕುಡಿದವರಲ್ಲಿ ಆ ಮೃಗಗಳ ರಕ್ತದ ಸುಪ್ತ ಗುಣ ಜಾಗೃತವಾದಂತೆ, ಅದಕ್ಕನುಸಾರವಾಗಿ ಅವರು ವರ್ತಿಸಿದರು. ಅಷ್ಟೆ ಅದೇ ರಹಸ್ಯ."

ಇದು ಟಾಲಸ್ಟಾಯ್ ವಿರಚಿತ ಕಥೆ. ಇಲ್ಲಿ, ಪಾಶ್ಚಿಮಾತ್ಯ ಸ್ತ್ರೀಗಿರುವ ಸ್ವಾತಂತ್ರ್ಯ ಹಾಗೂ ಸಮಾನತೆಯ ಅನುಭವ ವಾಚಕನಿಗಾಗುತ್ತದೆ. ಅಕೆ ಅದಿನಿತೂ ಅಂಜದೆ—ಅಳುಕದೆ ಪುರುಷರೊಂದಿಗೆ ಹೇಗೆ ಬೆರೆಯುತ್ತಾಳೆಂಬುದನ್ನಿಲ್ಲಿ ಕಾಣಬಹುದು. ಆಕೆ ತನ್ನ ಗಂಡನೊಂದಿಗೆ ಭುಜಕ್ಕೆ ಭುಜ ಕೊಟ್ಟು ನಿಲ್ಲುತ್ತಾಳೆ—ಅದರದು ಭೋಗವಿಲಾಸದಲ್ಲಿ.

ಭಾರತೀಯ ನಾರಿಯೂದರೋ?—'ನವಯುಗ' ವಾಚಕರಿಗೆ ಶ್ರೀ ವೆಂಕಟರಮಣಿಯವರ 'ರೈತ ಮುರುಗ'ನ ಜ್ಞಾಪಕ ಬಂದೀತು. ಟಾಲ್‌ಸ್ಟಾಯ್‌ಯವರನ್ನು ಕಥೆ—ಶ್ರೀ ವೆಂಕಟರಮಣಿಯವರನ್ನು ಕಾದಂಬರಿ ಅಷ್ಟೆ.

ಕಲಕಲರವದಿಂದ ಹಾಡುತ್ತ, ಕುಣಿಯುತ್ತ ಮುಂದಕ್ಕೋಡುತ್ತಿರುವ ಕಾರುಣ್ಯನಿಧಿ ಕಾವೇರಿಯ ದಡದಲ್ಲಿ ಅಲವಂತಿಯೆಂಬ ಹಳ್ಳಿ, ಕರಗುತ್ತ ಬಂದಿರುವ ಶ್ರೀಮಂತ ಮನೆತನ ಒಂದು ಅಲ್ಲಿತ್ತು. ಅದರಲ್ಲಿ ರಾಮಚಂದ್ರನೆಂಬವನು ಆಂಗ್ಲ ವಿದ್ಯಾಭ್ಯಾಸಕ್ಕಾಗಿ ಮದರಾಸಿಗೆ ಬಂದು ಉಳಿದಿದ್ದ. ಮನೆ—ಆಸ್ತಿ ಇತ್ಯಾದಿಗಳನ್ನು ಮೂರಿ ಬಿಟ್ಟು, ಮದುವೆ ಮಾಡಿಕೊಂಡು ಶಿಬಿರ—ಗುರೂತ್ವನಾಗಿ ಹೊಸ ರೀತಿಯ ಜೀವನವನ್ನು ಆರಂಭಿಸುತ್ತಾನೆ.

ಆ ಮನೆತನದವರ ಬಳಿ ತಲೆಮಾರಿನಿಂದ ಒಂದು ಕುಟುಂಬವು ಕೆಲಸ ಚಾಕರಿ ಮಾಡಿಕೊಂಡಿತ್ತು. ರಾಮಚಂದ್ರನು ಇದ್ದ—ಬಿದ್ದ ಆಸ್ತಿಯನ್ನು ವಾಂ ಹೆಳ್ಳಿಗೆ ನಮಸ್ಕಾರ ಹಾಕುವಾಗ ಬಹುಚೆಂದದ ತೆಂಗಿನ ತೋಟವನ್ನು ಕೆಲಗದ್ದೆಗಳನ್ನು ಆಗ ಅವನಲ್ಲಿ ಚಾಕರಿದ್ದ ಮುರುಗನಿಗೆ ಗೇಣಿ ಕೊಡುತ್ತಾನೆ. ಚಾಕರಿಗೆ ಇದ್ದ ಆಥವಾ ಕೂಲಿಗಳಾಗಿದ್ದ ಮುರುಗ ಕ್ರಮಶಃ ಒಕ್ಕಲುತನದಿಂದ ಧನಿಯೇ ಆಗುತ್ತಾನೆ. ಅವನ ಪ್ರಗತಿ ಗೋಪುರದ ಪಂಚಾಂಗವಾಗಿ ನಿಂತವಳು ಅವನ ಪತ್ನಿ ಪೊನ್ನಿ. ಹೀಗಿರುವಾಗ ಒಂದು ದಿನ ಅವರಲ್ಲಿ ನಡೆದ ಸಂಭಾಷಣೆ:— "ಪೊನ್ನಿ, ಈ ವರ್ಷದ ವೈರು ಪ್ರಶಂಸನೀಯವಿದೆ; ಕಳೆದ ಬಾರಿಗಿಂತಲೂ ಜಾಸ್ತಿಯಾಗಿದೆ. ಸ್ವಂತದಾರನೇ ರೈತನಾಗಿದ್ದುಕೊಂಡು, ಸರಿಯಾಗಿ ಕಷ್ಟ ಪಟ್ಟು ದುಡಿದರೆ, ಭೂಮಿತಾಯಿ ಹೇಗೆ ಫಲಕೊಡುತ್ತಾಳೆ, ನೋಡು! ಈ ಹೊಸ ಕಾಣಿಕೆ, ನಸ್ಯ ಚಿಕ್ಕ ಹೆಡುಗಿಯು, ಒಳ್ಳೆಯ ಅದೃಷ್ಟವನ್ನು ಪಡೆದುಕೊಂಡು ಬಂದಿದ್ದಾಳೆಂದನು ಮುರುಗ.

"ನಾನು ಹೋದಮೇಲೆ ನನ್ನ ಬದಲಿಗೆ ಅವಳು ಇರುತ್ತಾಳೆ ನಮಗೆ ಸ್ವಂತ ಒಂದು ದನ ಇರುತ್ತಿದ್ದಲ್ಲಿ ಮನೆತುಂಬಿದಂತಾಗುತ್ತಿತ್ತು. ಅದು ನಮಗೆ ನಾನಾ ವಿಧದಲ್ಲಿ ಸಹಾಯ ಮಾಡುತ್ತದೆ. ನನ್ನು ವಳ್ಳಿಗೆದು ಹಾಲನ್ನೂ ಗದ್ದೆಗೆ ಗೊಬ್ಬರವನ್ನೂ ಕೊಡುತ್ತದೆ. ಅದು ಬಳೆಯುತ್ತಿರುವ ಅಭಿವೃದ್ಧಿಯು ಚಿಹ್ನೆ ಒಂದರಿಂದ ಹಲವಾರು, ಹೀಗೆ ಅದು ಹೆಚ್ಚುತ್ತ ಹೋಗುತ್ತದೆಂದು ಪೊನ್ನಿ ಹೇಳಿ, ಭಾರತೀಯ ಮಾತೆಯರಿಗೆ ಗೋಮಾತೆಯ ಮೇಲಿರುವ ಪ್ರೀತಿಯನ್ನು ವ್ಯಕ್ತಪಡಿಸಿದಳು.

'ಪೊನ್ನಿಗಳು ಮಾಡುವಂತೆ' ತನ್ನ ಚಮತ್ಕಾರದ ಮಾತಿಗೆ ಮುರುಗನು, ಪೊನ್ನಿಯತ್ತ ಹಾಗೇ ಮಕ್ಕಳಶ್ಶನೋಡುತ್ತ, ನಗಾಡಿದನು. ಕಣ್ಣುಗಳ ಮುಂದೆ ಅಂಗೈಯನ್ನು ನೆರಳಾಗುವಂತೆ ಹಿಡಿದು ಹೊರಗೆ ನೋಡಿ ಹೇಳಿದನು— 'ಅಲ್ಲಿ, ತೊಪ್ಪೈ ಬರುತ್ತಿದ್ದಾನೆ. ಜಿಂಕೆ ಮರಿ ಹುಲ್ಲುಗಾವಲನ್ನು ದಾಟುವಂತೆ, ಅವನು ಅನಾಯಾಸವಾಗಿ ಮತ್ತು ಆಕರ್ಷಕವಾಗಿ ಗದ್ದೆಗಳನ್ನು ದಾಟುತ್ತ ಬರುತ್ತಿದ್ದಾನೆ." ಟಾಲ್‌ಸ್ಟಾಯ್‌ಯವರ ಚಿತ್ರಾಳ ಆಥವಾ ವೆಂಕಟರಮಣಿಯವರ ತೊಪ್ಪೈಯು ಮುರುಗನ ಕಣ್ಣಿಗೆ ಜಿಂಕೆ ವರಿಯಂತೆ ಕಂಡು ಬಂದರೂ ಭಾರತೀಯ ಹೆಣ್ಣಿನ ಕಣ್ಣಿಗೆ—

"ಅಥವಾ ಕಶ್ಯಲಾದೊಡನೆ, ಬಡಕೋಳಿ ಮುಂಗಳನ್ನು ಕಾಲಿನಲ್ಲಿ ಹಿಡಿದು ಎಳೆದೊಯ್ಯುವ ನರಿಯ ಹಾಗೆ' ಕಂಡು ಬಂದನು.

'ಅವನು ಚಲೋ ಉತ್ಸಾಹಿ ಕಾಣೂ ಚಾಲೂಕಿನ ಹುಡುಗನಿದ್ದಾನೆ"ಂದು ಮುರುಗನು ಹೊಗಳಿಕೆಯ ಮಾತುಗಳನ್ನಾಡಿದನು.

'ಅವನನ್ನು ನೋಡಿದರೆ ನನಗೆ ಹಿಡಿಸುವದಿಲ್ಲ.' ಸಂಕ್ಷಿಪ್ತವಾಗಿ ಪೊನ್ನಿಯು ಅವನ ಮಾತನ್ನು ಒಪ್ಪದೆ, ಹೇಳಿದಳು. ಭಾರತೀಯ ಅಂಗನೆಗೆ ಆವಾಯದ ಅರಿವು ಮುಂಚೆಯೇ ಆಗುತ್ತದೆ. ಆಕೆಗೆ ಯಾವ ಹುತ್ತದಲ್ಲಿ ಯಾವ ಹಾವಿದೆಂಬುದು ಗೊತ್ತು. ಆದರೆ ಆಕೆ ತನ್ನ ಮನದಿಂಗಿತವನ್ನು ವ್ಯಕ್ತಪಡಿಸಬಲ್ಲಳೇ ವಿನಃ ಗಂಡ ಹಾಕಿದ ಗಡಿಯನ್ನು ದಾಟಿ ಹೋಗಲಾರಳು. ದಾಟಿ ಹೋದಲ್ಲಿ ಏನಾದೀತೆಂಬುದು ಆಕೆಗೆ ಗೊತ್ತು. ಹಾಗಾಗಿ, ಅವಳಿಗೆ ಒಂದಿಷ್ಟೂ ಇಷ್ಟವಿಲ್ಲದಿದ್ದರೂ ಮುರುಗನ ಪೂರ್ವಿಕನೆದಿಂದಾಗಿ, ತೊಪ್ಪೈ ಅವರಲ್ಲಿ ಜೀಡು ಬಿಡುತ್ತಾನೆ, ಹೀಗೆ ಟಾಲ್‌ಸ್ಟಾಯ್‌ಯವರ ಭೇಕಾಳ, ಅಥವಾ ವೆಂಕಟರಮಣಿಯವರ ತೊಪ್ಪೈ ರೈತನ ಮನೆಯೊಳಗೆ ಚಮತ್ಕಾರಿಕವಾಗಿ ಕಾಲಿಡುತ್ತಾನೆ.

ಅನಂತರ ತೊಪ್ಪೈತನ್ನ ಕೆಲಸಕ್ಕಾರಂಭಿಸುತ್ತಾನೆ.

ತನ್ನ ತರುಣ ಧನಿ ಜೀವದ್ದ ಬುದ್ಧಿಮಾತುಗಳನ್ನೂ, ಪೊನ್ನಿಯ ಸೂಕ್ಷ್ಮವಿಚ್ಛಿರಿಕೆಗಳನ್ನು—ಅಂತಹ ವಿಷಯಗಳಲ್ಲಿ ಆಳಿ ಉತ್ತಮ ಬಾಳ ವಾಲುಗಾರ್ತಿ—ಅನುಸರಿಸಿಕೊಂಡು ಹಣವನ್ನಳಿಸಿಕೊಂಡಿದ್ದನು. ನಿಜವಾಗಿ ನೊನ್ನಿ ಮತ್ತ ಮುರುಗ ಆ ತೆಂಗಿನ ತೋಪನ್ನು ಒಂದು ಚಿಕ್ಕ ಭೂಸ್ವರ್ಗವನ್ನಾಗಿ ಮಾಡಿದ್ದರು. ಒಂದು ದಿನ ತಮ್ಮ ಸೊತ್ತಿನ ಕುರಿತು ಅವಳ್ಳಿ ಸಂಭಾಷಣೆ ನಡೆಯುತ್ತದೆ.—

'ನಿಮಗೆ ಗಂಡಸರಿಗೆ, ಹೇಗೆ ಉಳಿಸಬೇಕು ಎಂಬುದೆ ಕಲ್ಪನೆಯೇ ಇರುವದಿಲ್ಲ. ಸಿಕ್ಕಿದ್ದನ್ನು ಸುಖ-ಸಂತೋಷ, ಬೋಗ—ವಿಲಾಸಕ್ಕಾಗಿ, ಕುಡಿತಕ್ಕಾಗಿ ಹಾಳು ಮಾಡಿ ಬಿಡುತ್ತೀರಿ. ಈ ಜೆಂದದ ಗ್ರಾಮದಲ್ಲಿ ಕಳ್ಳಂಗಡಿ ಇಲ್ಲದಿರುವದಕ್ಕೆ ನಾವು ದೇವರಿಗೆ ಆಭಾರಿಗಳಾಗಿರಬೇಕು. ಅದು ಇರುತ್ತಿದ್ದಲ್ಲಿ ಅರ್ಧ ಕೆಡುಕು ಎಲ್ಲೆಲ್ಲೂ ಹಬ್ಬಿಗುತ್ತಿತ್ತಲ್ಲದೆ ನಮ್ಮ ಸ್ಥಿತಿ ಅಧೋಗತಿಯಾಗುತ್ತಿತ್ತು' —ಪೊನ್ನಿ.

"ಇಲ್ಲಾ, ಪೊನ್ನಿ, ಇಲ್ಲ. ನೀನು ಸಮಸ್ಯೆಯನ್ನೇನೋ ಅಂಪಾಜು ಮಾಡಿಕೊಂಡಿರುವೆ; ಆದರೆ ಅದರ ಕೊನೆಯನ್ನು ಮಾತ್ರ. ನೀನೀಗ ಹೇಳಿರುವ ವಿಷಯ—ಕುಡಿತ—ಸಣ್ಣ ವಿಷಯವಿದೆ. ಬಡ ಸಂಗಾತಿಗಳಿಗೆ, ಬಹಳ ಕೆಲಸ ಮಾಡಿ ಕಡಿಮೆ ಕೂಲಿ ಪಡೆದುಕೊಳ್ಳುತ್ತಿರುವವರಿಗೆ ಜೀವನದಲ್ಲಿ ಅದೊಂದು ಸಂತೋಷದ ಸಮಯವೇ ಸರಿ."—ಮುರುಗ.

ಹೀಗೆ ಸಂಭಾಷಣೆ ಸಾಗುತ್ತಿದ್ದಾಗ ಅಳ್ಳಿಯ ತಲಯಾರಿ ಬಂದು ರಾಮಚಂದ್ರನು ಬಂದಿರುವ ವಿಷಯ ತಿಳಿಸುತ್ತಾನೆ. ರಾಮಚಂದ್ರನ. ಹಳ್ಳಿಗೂ ತನಗೂ ಇದ್ದ ಸಂಬಂಧದ ಕೊನೆಯ ತಂತನ್ನು ಕಡಿದುಕೊಂಡು ಕಡಪಕ್ಕೆ ಹೋಗುತ್ತಾನೆ. ಮುರುಗನೇ ತೋಟದ ಧನಿಯಾಗುತ್ತಾನೆ. ಅವನು ಈ ದೊಸ ಪರಿಸ್ಥಿತಿಗೆ ಬಂದೊಡನೆ, ಅವನಿಗೆ ವಂದನೆಗಳನ್ನರ್ಪಿಸಿದವರಲ್ಲಿ ತೊಪ್ಪೈ ಮೊದಲಿನವನಾಗಿದ್ದನು. ಅವನ ನಿಷ್ಠೆಯನ್ನು ಕಂಡು ಕೃತಜ್ಞತಾಭಾವದಿಂದ ಹಾಗೂ ತನ್ನ ನವೀನ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವದಕ್ಕಾಗಿ ತೊಪ್ಪೈಯನ್ನು ತನ್ನ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಲು ಮುರುಗನು ಏರ್ಪಡಿಸಿಕೊಂಡನು. ಅವನನ್ನು ಕೇವಲ ಸೇವಕನನ್ನಾಗಿ ತೆಗೆದುಕೊಳ್ಳದೆ ಸ್ನೇಹಿತ ಹಾಗೂ ಬಲಗೈ ಬಂಟನನ್ನಾಗಿ ಸ್ವೀಕರಿಸಿದನು.

ಅದರಿಂದ ಪೊನ್ನಿಗೆ ಸಮ್ಮಥಾನವಾಗಿಲ್ಲಿ, ಅವಳು ಅನೇಕ ಬಾರಿ ಹೇಳಿ ನೋಡಿದಳು. ಅದು ಪ್ರಯೋಜನವಿಲ್ಲವೆಂಬುದನ್ನಾಕೆ ಕಂಡುಕೊಂಡಳು. ಆದರೂ ಪ್ರಯತ್ನ ಪಥದಿಂದ ಆಕೆ ದೂರಸರಿಯಲಿಲ್ಲ. "ನಿನ್ಯುತ್ತತ್ವಗಳಿಗೆ ನೀವೇ ತಿಲಾಂಜಲಿ ಗೊಡುತ್ತಿದ್ದೀರಲ್ಲಾಂಸ್ರೀ! ಹೊಲದೊಡೆಯನೇ ನಿಜವಾದ ರೈತನಾಗಿರಬೇಕೆಂದು ಅಂದು ನೀವು ಹೇಳುತ್ತಿದ್ದಿರಿ. ಈಗ್ ಆದರಲ್ಲಾ ತೊಪ್ಪೈಯು ಅವಿಭಾಕ. ಎಚ್ಚರಿಗೆಟ್ಟವ ಹಾಗೂ ಅಪಕೀರ್ತಿ ಗಳಿಸಿರುವ ತರುಣ ಅವನಿಂದಾಗಿ ನಾವು ಈ ಗ್ರಾಮಕ್ಕೆ ವೈರಿಗಳಾಗಬೇಕಾದೀತು. ತನ್ನ ಸಂಪದನೆಯನ್ನು ಹೆಂಡ ಕುಡಿಯುವದಕ್ಕೇನೇ.. ...."

ಪೊನ್ನಿಯ ವಾಕ್‌ಪ್ರವಾಹವನ್ನು ತಡೆಗಟ್ಟಿ, "ಪೊನ್ನಿ, ನೀನು ಹೆಂಗಸಿನಂತೆಯೇ ಮಾತನಾಡುತ್ತಿರುವೆ. ನಿಜವಾಗಿ ಈ ವಿಶಾಲ ಗದ್ದೆಯಲ್ಲಿ ಇಬ್ಬರಿಗೆ ಕೆಲಸವಿದೆ. ಹಾಗೆ ದುಡಿದಲ್ಲಿ ನಾಲ್ಕು ವಾಲು ಹೆಚ್ಚು ಬೆಳೆ ಪಡೆಯ ಬಹುದು. ಒಬ್ಬನೇ ಅವಿಶ್ರಾಂತನಾಗಿ ಹಾಗೆ ದುಡಿದು ಇನ್ನೊಬ್ಬನನ್ನು ಬಿಟ್ಟು ಬಿಡುವುದು ಸ್ವಾರ್ಥ. ಅದು ದೇವರಿಗೆ ಅಸಂತೋಷವನ್ನುಂಟು ಮಾಡೀತು ಆವನು ಬಡಜೀವಿ. ಆವನಿಗೆ ಗಟ್ಟಿಮುಟ್ಟಾದ ದೇಹವಿದೆ. ನನ್ನ ಮೇಲೆ ಅವನಿಗೆ ನಿಷ್ಠೆ ಹಾಗೂ ಶ್ರದ್ಧೆ ಇದೆ ಅವನನ್ನು ಹಳ್ಳಿಯವರು ಚೇಟಿಯೂಡುತ್ತಿದ್ದಾನೆ. ಅವನನ್ನು ಕಾಪಾಡುವದು ನಮ್ಮ ಕರ್ತವ್ಯವಿದೆ. ಅವನು ಬಡವನಿದ್ದಾನೆ. ಅವನಿಗೆ ಯಾರೂ ದಿಕ್ಕಿಲ್ಲ. ಅವನು ನನ್ನ ತಮ್ಮ ನಾಗಿರುತ್ತಿದ್ದಲ್ಲಿ ಅವನನ್ನು ನೀನು ದೂರಕ್ಕೆ ಕಳುಹಿಸುತ್ತಿದ್ದಿಯಾ? ... ...ಪೊನ್ನಿ, ಮೆಳ್ಳಗೆ ಹಾಗೂ ಅಡುಗೆಯ ಕೆಲಸದತ್ತ ಗಮನಕೊಡು. ಇಂತಹ ವಿಷಯಗಳಲ್ಲಿ ತಲೆ ಹಾಕ ಬೇಡ"ಂದು ಹೇಳಿ ಬಾಯಿ ಮುಚ್ಚಿಸಿ ಬಿಟ್ಟನು.

ತೊಪ್ಪೈಯು ಆ ಕುಟುಂಬದ ಕ್ರಮಬದ್ಧ ಸದಸ್ಯ ಹಾಗೂ ಉತ್ಸಾಹದಾಯಕ ಶಕ್ತಿಯಾದನು. ಅವನ ಪ್ರಭಾವ ಮುರುಗನ ಮೇಲೆ ಬಿತ್ತು. ಮುರುಗನಿಗೆ ಯಥೇಷ್ಟ ಸಂಪಾದನೆ ಆಗುತ್ತಿತ್ತು. ಹೆಚ್ಚಿರುವ ಹಣವನ್ನೇನು ಮಾಡುವದೆಂಬುದು ಅವನಿಗೆ ಸಮಸ್ಯೆಯಾಗುತ್ತ ಬಂತು ಅವನಲ್ಲಿ ಕ್ರಮಶಃ ಬದಲಾವಣೆ ಕಂಡು ಬರಲಾರಂಭಿಸಿತು. ಕೇವಲ ಸೊಂಟ ವಸ್ತ್ರದಲ್ಲದ್ದವನು ನಾಲ್ಕು ಮೊಳದ ಬಟ್ಟೆಯುಡಲಾರಂಭಿಸಿದನು, ಅಲ್ಲಿಂದ, ಎರಡು ಪದರಿನ ಮೃದು ಧೋತ್ರಿಯನ್ನುಡಲು ಮೊದಲಾದನು. ಹಾಗೆ ಮೈಗೆ ಅಂಗಿಯೂ ಬಂತು, ತಲೆಗೆ ಮುಂಡಾಸು ಬಂತು. ಮನೆಯಲ್ಲಿ ತಂಗಳನ್ನದ ಬದಲು ಕಾಫಿ ಕಾಲಿಟ್ಟೆತು. ಹುಲ್ಲಿನ ಮನೆ ಹಂಚು ಕಂಡಿತು. ಅಷ್ಟಲ್ಲಾ ಅದ ಮೇಲೆ ಅವುಗಳನ್ನು ಪ್ರದರ್ಶಿಸಲು ಆ ಹಳ್ಳಿ ಸಾಲದಾಯಿತು. ಕಾದ ಕಬ್ಬಿಣಕ್ಕೆ ಪೆಟ್ಟು ಹೊಡೆಯುವಂತಾಗುವ ಲಾಭ ತೊಪ್ಪೈಗೆ ಗೊತ್ತು.

ಮುರುಗನ ಕಕ್ಕನ ಮಗನು ಕುಂಭಕೋಣವಿನಲ್ಲಿ ಸಾರಾಯಿ ಹಾಗೂ ಹೆಂಡದಂಗಡಿಯ ಗುತ್ತಿಗೆದಾರನು. ಅವನಲ್ಲಿಗೆ ಹೋಗುವಂತೆ ಮುಂಗನನ್ನು ತೊಪ್ಪೈ ಪ್ರೇರೇಪಿಸಿದನು. ಎಂಬುಗನ ಶ್ರೀಮಂತಿಕೆಯ ವಿಷಮ ಅವನ ಕಕ್ಕನ ಮಗನಿಗೆ ಗೊತ್ತಿತ್ತು. ಇದುದರಿಂದ ತನ್ನಲ್ಲಿಗೆ ಬಹು ಅಪರೂಪವಾಗಿ ಬಂದ ಕಕ್ಕನಿಗೆ ಅವನು ಭಾರೀಪ್ರೋತ್ಸಾಹನನ್ನೇರ್ಪಡಿಸಿದನು. ಮುರುಗನು ಹೆಂಡದ ರುಚಿ ನೋಡಿದನು. ಅವನ ಹಳ್ಳಿಯಲ್ಲಿ ಹೆಂಡದಂಗಡಿ ಇರದಿದ್ದ ಕಾರಣ ಅವನು ಆಗಾಗ ಕುಂಭಕೋಣವಿಗೆ ಹೋಗಲಾರಂಭಿಸಿದನು. ಆ ದಕ್ಕಾಗಿ ತಗಲುವ ದುಂದುವೆಚ್ಚ ಹಾಗೂ ಪೊನ್ನಿಯು ಅವನನ್ನೆದುರಿಸಿ ಆಡಿದ ಮಾತುಗಳು ಎಲ್ಲದೆ ಅವಳ ಕಣ್ಣೀರ ಪ್ರವಾಹ ಅವನನ್ನು ತಡೆದು ನಿಲ್ಲಿಸಲು ಅಶಕ್ತವಾದುವು.

ಒಂದು ದಿನ ಸರಾ ಇಲಾಖೆಯ ಮುಖ್ಯಾಧಿಕಾರಿ ಇಲ್ಲುವಾಯ್ ತೋಪಿಗೆಬಂದನು. ಇತ್ತ ಆ ಹಳ್ಳಿಯಲ್ಲಿ ಮುರುಗನ ನೆರವು ಹೆಂಡದಂಗಡಿಯನ್ನು ತೆರೆಯಲು ಅಪ್ಪಣೆಕೇಳುವಂತೆ, ಅವನನ್ನು ತೊಪ್ಪೈ ಭಾರೀ ಪ್ರಯತ್ನಪಟ್ಟು ಒಲಿಸಿಕೊಂ

(ಇಪ್ಪತ್ತೇಳನೇ ಪುಟ ನೋಡಿರಿ)

ಪಂಡಿತ ನೆಹರೂ-ಕೃಷ್ಣ

(ಹಿನ್ನೊಂದನೇ ಪುಟದಿಂದ)

ಹರಲಾಲರು ಬಯಸಿದರು. ತಂಗಿಯನ್ನು ತಮ್ಮ ಬಳಿಗೆ ಕರೆಸಿಕೊಂಡು, "ತಂಗೀ ಮುಂದುವೆಯೊಗಬೇಕೆಂದಿರುವೆಯಂತೆ, ಹೌದೇನು?" ಎಂದು ಕೇಳಿದರು. ಕೃಷ್ಣೆ ನಾಚಿಕೆಯಿಂದ ಹೌದೆಂದು ತಲೆಯಾಡಿಸಿದಳು.

ಜವಹರಲಾಲ್ ಹುಸಿ ಕೇಳಿದರು—"ನೀನು ಆರಿಸಿರುವ ಯುವಕನ ವಿಚಾರ ವಿವರವಾಗಿ ಹೇಳುವೆಯೂ?"

ಕೃಷ್ಣೆ ಆಗಲೆಂದಳು.

"ಆತ ಯಾವ ಉದ್ಯೋಗದಲ್ಲಿರುವನು?" ಜವಹರಲಾಲರ ಮೊದಲ ಪ್ರಶ್ನೆ.

"ಅವರು ಬ್ಯಾರಿಸ್ಟರ್ ಆಗಿದ್ದಾರೆ. ಇತ್ತೀಚೆಗಷ್ಟೇ ಉದ್ಯೋಗವನ್ನು ಆರಂಭಿಸಿದ್ದಾರೆ." ಅಣ್ಣನ ಪ್ರಶ್ನೆಗೆ ಕೃಷ್ಣೆಯ ಉತ್ತರ.

"ಅವನ ತಂದೆ ತಾಯಿಗಳು ಯಾರು?"

ಕೃಷ್ಣೆಯ ನಿರುತ್ತರ.

"ಆತನಿಗೆ ಅಣ್ಣಶಮ್ಮಂದಿರು ಅಕ್ಕ ತಂಗಿಯರು ಎಷ್ಟು ಮಂದಿ ಇದ್ದಾರೆ?"

ಉತ್ತರವಿಲ್ಲ.

"ಆಕ್ಸ್‌ಫರ್ಡ್‌ನಲ್ಲಿ ಆತನಿದ್ದುದು ಯಾವ ಕಾಲೇಜಿನಲ್ಲಿ?"

ಉತ್ತರವಿಲ್ಲ.

"ಆತನು ಓದಲು ಆರಿಸಿಕೊಂಡ ವಿಷಯಗಳು ಯಾವುವು?"

ಉತ್ತರವಿಲ್ಲ.

"ಆತನ ಹೆಸರು ಜಿ.ಪಿ.ಎಂದು ಆರಂಭವಾಗಿದೆಯಲ್ಲ, ಹಾಗೆಂದರೇನು?"

"ನನಗೆ ನೆನಪಿಲ್ಲ." ಕೃಷ್ಣೆ ಕೊಟ್ಟ ಉತ್ತರ.

ಇಷ್ಟು ಹೊತ್ತಿಗೆ ಜವಹರಲಾಲರಂತೂ ಸಿಟ್ಟಿನ ಅವರಾವತಾರವೇ ಆಗಿಬಿಟ್ಟಿದ್ದರು. "ಯಾವ ವಿವರಗಳನ್ನೂ ತಿಳಿಯದೆ ಮದುವೆಯೊಗಲು ನೀನು ಹೇಗೆ ನಿಶ್ಚಯ ಮಾಡಿಬಿಟ್ಟೆ?" ಎಂದು ಹೇಳುತ್ತ ಆ ಜಾಗವನ್ನು ಬಿಟ್ಟು ಹೊರಟೇ ಬಿಟ್ಟರು.

ಸಿಟ್ಟಿನಿಂದ ಹೊರಟು ಬಂದರಷ್ಟೆ ಮುಂದೆ ಸುಮ್ಮನಿದ್ದು ಬಿಡಲು ಮನಸ್ಸು ಬಿಟ್ಟೀತೇ? ತಂದೆ ಮೋತಿಲಾಲರು ಕಾಲವಾದ ಮೇಲೆ ತಂಗಿಯ ಪೋಷಣೆ, ಜವಾಬ್ದಾರಿ ಅಣ್ಣನಿಗೆ ಸೇರಿದುವೆಂಬುದನ್ನು ಅವರು ಅರಿಯರೇ? ತಂಗಿ ಮದುವೆಯೊಗ ಬೇಕೆಂದು ಬಯಸಿದಾಗ, ಅಣ್ಣನಾದ ತಾನು ಕರ್ತವ್ಯಪಾಲನೆಯನ್ನು ಮಾಡಬೇಕು—ಎಂಬುದನ್ನ ಜವಹರಲಾಲರು ಅರಿತುಕೊಂಡರು. ಬೇರೊಬ್ಬರಿಂದ ಜಿ. ಪಿ. ಹತೀಸಿಂಗ್‌ರವರ ವಿಚಾರವಾಗಿ ವಿವರಗಳನ್ನು ಸಂಗ್ರಹಿಸಿ ಕೊಂಡರು. ಅವರಿಗೆ ದೊರೆತ ವಿವರಗಳಿವು—"ಜಿ. ಪಿ. ಹತೀಸಿಂಗ್ ಗುಜರಾತಿ ಶಾಟುಂಬವೊಂದರಲ್ಲಿ ಜನಿಸಿದಾತ · ಗೌರವಸ್ಥಮನೆತನವೇ ಹಾದು. ಬಿಟ್ಟರೆ ಆತ ಗಾಂಧೀಜಿ ? ಪಕ್ಷಕರೂ ಆಗಿದ್ದ."

ಗಾಂಧೀಜಿಯವರಿಗೆ ಪರಿಚಿತನೆಂದಾಗಿ, ಅವರೂ "ಈ ಸುದ್ದುವೆ ನಡೆಯುವುದರಲ್ಲಿ ಯಾವ ಅಭ್ಯಂತರವೂ ಇಲ್ಲ" ಎಂದಾಗ ಮುಂದೆ ಜವಹರಲಾಲರ ಮನ ಮಾತೇ ಇರಲಿಲ್ಲ.

ಜವಹರಲಾಲ್ ತನ್ನ್ಯ ಸಪ್ರತಿಯನ್ನು ಸೂಚಿಸಲು ಕೃಷ್ಣೆಯನ್ನು ಕರೆದಾಗ ಆಕೆ ಜಿ. ಪಿ. ಹೇತೀಸಿಂಗರ ಬಗ್ಗೆ ಅಣ್ಣನು ಕೇಳಿದ್ದ ವಿವರಗಳೆಲ್ಲವನ್ನೂ ತಿಳಿಸಿ ಬರೆದಿದ್ದ ಕಾಗದವೊಂದನ್ನ ಜವಹರಲಾಲರಿಗೆ ಕೊಟ್ಟಳು. ಆ ಕಾಗದವೋ ಹುದ್ದೆಗೆ ಸೇರಲು ಬಯಸಿದ ಅಭ್ಯರ್ಥಿ ಬರೆದುಕೊಟ್ಟ ಅರ್ಜಿಯಂತಿತ್ತು. ಜವಹರಲಾಲ್ ಕೇಳಿದ ಪ್ರಶ್ನೆಗಳಿಗೆ ಉತ್ತರಗಳಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ವಿವರಗಳೂ ಆದರಲ್ಲಿತ್ತು. ಆ ಕಾಗದವನ್ನೂ ತಂಗಿಯನ್ನೂ ಒಮ್ಮೆ ನೋಡಿ ಜವಹರಲಾಲ್ ನುಗುಳ್ನಗುತ್ತ ಕೃಷ್ಣೆಯ ವಿವಾಹಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿ, ಅಕಗೆ ಶುಭವನ್ನು ಹಾರೈಸಿದರು.

ಂ ಂ ಂ

ಕೃಷ್ಣೆಯ ಸಂಸಾರ ಮುಂಬಯಿಯಲ್ಲಿ ಆರಂಭವಾಯಿತು. ಜವಹರಲಾಲರು ಮುಂಬಯಿಗೆ ಬಂದಾಗಲೆಲ್ಲ ತಂಗಿಯ ಮನೆಯಲ್ಲೆ ಉಳಿಯುತ್ತಿದ್ದರು. ನೆಹರೂ ಮನೆತನಕ್ಕಂತಿದ್ದ ದೇಶದ ರಾಜಕೀಯ ಕೃಷ್ಣೆಯ ಸಂಬಂಧದಿಂದಾಗಿ ಹತೀಸಿಂಗರಿಗೂ ಆಂಟಿಕೊಳ್ಳಲು ಹೆಚ್ಚು ವೇಳೆ ಬೇಕಾಗಲಿಲ್ಲ.

೧೯೨೨ನೆಯ ಇಸವಿ. ಗಾಂಧೀಜಿ ಮತ್ತು ಇತರ ನಾಯಕರು 'ಕ್ವಿಟ್ ಇಂಡಿಯ' ಚಳುವಳಿಯನ್ನು ಘೋಷಿಸಿದ್ದ ಸಂದರ್ಭ. ಮುಂಬಯಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಭೆ ಸೇರಬೇಕೆಂದು ಮೊದಲೇ ಗೊತ್ತಾಗಿದ್ದುದರಿಂದ ಜವಹರಲಾಲ್ ನೆಹರು ಮುನ್ನಾದಿನವೇ ಮುಂದಲಿಗೆ ಹೊರಟು ತಂಗಿಯ ಮನೆಯಲ್ಲಿ ಉಳಿದಿದ್ದರು.

ಮುಂಜಾವಿನ ಐದು ಘಂಟೆಯ ಸಮಯ. ಆರುನೋದಯದ ನಸುಗೆಂಪು ಆದೇ ತಾನೇ ಮೂಡಲಲ್ಲಿ ಮೂಡ ತೊಡಗಿತ್ತು. ಕೃಷ್ಣೆಯ ಮನೆಯಲ್ಲಿ ಎಲ್ಲರಿಗೂ ಬೆಳಗಿನ ರುಚಿಯ ಮಸುಕು ನಿದ್ರೆ. ಇದ್ದ ಕೈದ್ದಂತೆ ದಡದಡನೆ ಬಾಗಿಲು ತಟ್ಟಿದ ಸದ್ದಾಯಿತು.

ಕೃಷ್ಣೆಗೆ ಒಂದು ಕ್ಷಣ ಗಾಬರಿಯೆನಿಸಿದರೂ. ಮರುಕ್ಷಣದಲ್ಲಯೇ ಧೈರ್ಯತಂದುಕೊಂಡು, "ಈ ಆವೇಳೆಯಲ್ಲಿ ಬರುವವರು ಇನ್ಯಾರು? ದಸ್ತಗಿರಿ ಮಾಡಲು ಬಂದಿರುವ ಪೋಲೀಸರೇ ಇರಬೇಕು.' ಎಂದು ಊಹಿಸಿದಳು.

ಎದ್ದು ಬಾಗಿಲು ತೆಗೆದು ನೋಡಿದಾಗ ಆಕೆಯ ಊಹೆ ಸುಳ್ಳಾಗಿರಲಿಲ್ಲ. ಬಂದಿದ್ದವರು ಪೋಲೀಸ್ ಅಧಿಕಾರಿಗಳೇ. ಎರಡು ಮೂರು ದಿನಗಳಿಂದ ರಾಜಕೀಯದ ಗಡಿಬಿಡಿಯಲ್ಲೇ ಮುಳುಗಿ ಫಿದ್ರೆ ಕೆಟ್ಟಿದ್ದ ಜವಹರಲಾಲರಿಗೆ ಅದೇ ತಾನೇ ಗಾಢ ನಿದ್ರೆ ಆವರಿಸಿತ್ತು. ಕೃಷ್ಣೆ ವಿಧಿಯಿಲ್ಲದೆ ಜವಹರಲಾಲರನ್ನು ಎಚ್ಚರಿಸಬೇಕಾಯಿತು. ಜವಹರಲಾಲ್ ಕಣ್ಣು ಬಿಟ್ಟು ನೋಡಿ ಪರಿಸ್ಥಿತಿಯನ್ನರಿತರು. ಸೆರೆಮನೆಗೆ ಹೊರಡಲು ಅಣಿಯಾದರು.

ಜವಹರಲಾಲರೊಂದಿಗೆ ಹತೀಸಿಂಗರ ದಸ್ತಗಿರಿಯೂ ಆಯಿತು. ಇಬ್ಬರೂ ಒಟ್ಟಿಗೆ ಪೋಲೀಸ್ ವ್ಯಾನ್‌ನಲ್ಲಿ ಕುಳಿತು ಹೊರಟರು.

ತಂಗಿಯ ಮನೆಯಿಂದ ಹೊರಟು ಸೇರಿದ ಆ ಸೆರೆಮನೆಯೇ ಜವಹರಲಾಲರ ದೀರ್ಘಕಾಲದ ಮತ್ತು ಕಡೆಯ ಜೈಲುವಾಸವಾಯಿತು. ಆ ವಾಸದ ಅವಧಿ ಮೂವತ್ತೈದು ತಿಂಗಳುಗಳು, ಮೂರು ವರ್ಷ ಎಳಿಗೆ ಒಂದು ತಿಂಗಳು ಮೊಕ್ಕ ದಿನಗಳು. ಮುಂಬೆ ೧೯೪೫ ರ ಜುಲೈ ತಿಂಗಳಲ್ಲಿ ಅವರ ಬಿಡುಗಡೆಯಾಯಿತು.

ಜವಾಹರಲಾಲರಿಗೆ ಸೆರೆಮನೆಯ ವಾಸ ಲಭಿಸುವಂತೆ ಮಾಡಿದ ಅಂದಿನ ಬ್ರಿಟಿಷ್ ಸರಕಾರಕ್ಕೆ ಒಂದು ವಿಧವಾದ ಪೃಷ್ಟಿಯೇ ಲಭಿಸಿರಬಹುದು, ಆದರೆ ಆದರಿಂದ ಜನತೆಗೆ ಮಹೋಪಕಾರವೇ ಆಯಿತು—ಎನ್ನುವ ಮಾತು ಸುಳ್ಳಲ್ಲ. ಈ ಮೂರೂ ವರ್ಷಗಳ ಅವಧಿಯಲ್ಲಿಯೇ ಜವಹರಲಾಲರ ಆಮೋಘವಾದ, ಅಮರವಾದ ಕೃತಿ ಭಾರತದ ಪುನರ್ದರ್ಶನ (Discovery of India) ರಚನೆಗೊಂಡಿತು.

ಸರಕಾರದ ದೃಷ್ಟಿಯಲ್ಲಿ ಶಿಕ್ಷೆ, ಇನ್ನೊಂದು ವಿಧದಲ್ಲಿ ಅದು ಮಹತ್ಪುಣ್ಯವಾದುದು.

ಹೃದಯ ತುಂಬಿ ಬರುತಿರೆ

ವರುಷ ಎರಡು ತುಂಬಲಿಲ್ಲ
ನೋಡಿರಣ್ಣ.... ನೋಡಿರಿ!
ನಾನು ಕೂಗಿದಂಗಲೆಲ್ಲ
ನಗುತ ಬರುವ ನೋಡಿರಿ!
ತಾಯಿ ಕೂಗ ಕೇಳದೇ,
ನನ್ನ ಮಾತ ಮೀರದೆ;

ಮುಖವನ್ನೊಮ್ಮೆ ನೋಡುತ,
ಅಂಬೆಗಾಲನಿಕ್ಕುತ!
ಸುಮ್ಮನಿರಲು ಕೂಗುತ,
'ಅಕ್ಕ ಬಂದು ರಮಿಸುತ'
ತುಂಟ ಹುಡುಗ ರಾಜನು
ಆವಳ ಬಳಿ ಕೇಳನು.

ಆವನ ಮನದ ಕೃತ್ತಿಗೆ
ಎನ್ನ ಬಾಳ ವೃತ್ತಿಗೆ,
ಹೊಂದಿಕೊಂಡು ನಡೆಯಲು;
ಮಡದಿ ಬಂದು ಬೈಯಲು.
ರಾಜನಳುವ ನಿಲ್ಲಲು!
ನಾನು ಮುಂದೆ ಸಾಗಲು!

ನಿಕ್ಕ ನಮ್ಮ ಹಾಡಿದು,
ಪ್ರೇಮ ತುಂಬಿ ನಲಿವುದು.
ನಾನು ರಾಜ; ಅವಳೇ ರಾಣಿ
ಸಾಗುತಿಹುದು—ಜೋಣಿ.
ದುಃಖ ಹೆಗುರಿನೆನುತಿರೆ
ಹೃದಯ ತುಂಬಿ ಬರುತಿರೆ

—'ನಾರಾಯಣ 'ಏತಜ್ಞ.

ಸೋವೂರಿತನ ಬಹು ನಿಧಾನವಾಗಿ ನಡೆಯುವದರಿಂದ ಬಡತನ ಬೇಗನ್ನು ಹಿಡಿದುಕೊಳ್ಳುವದೆ.

ಂ ಂ ಂ

ತಿಳಿಗೇಡಿಯೂಗಿರುವುದಕ್ಕಿಂತ ಹುಚ್ಚಿದಿರುವುದೇ ಲೇಸು. ಏಕೆಂದರೆ ತಿಳಿಗೇಡಿತನವೇ ದುಃಖ ದುರ್ದೈವಗಳ ಮೂಲ.

ಂ ಂ ಂ

ಹೂವಿಗೆ ಸುವಾಸನೆ ಹೇಗೋ ಹಾಗೆ ಮನುಷ್ಯನಿಗೆ ಸಭ್ಯತೆ ಮತ್ತು ಸಂಸ್ಕೃತಿ.

ಂ ಂ ಂ

ಒಳ್ಳೆಯವನೆಂಬುವುದಕ್ಕೆ ಕೆಡುಕೆಂಬುದು ಒಂದೇ ಶತ್ರು. ಆದರೆ ಕೆಡುಕು ತನಗೆ ತಾನೇ ಶತ್ರು ಮಾತ್ರವಲ್ಲ; ಒಳ್ಳೆಯದಕ್ಕೆ ಶತ್ರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಅಂಚೆಯ ಪ್ರತ್ಯೇಕ: ರೂ.ಎರಡೂವರೆ(ಟಿ.ಖ. ಪುಸ್ತಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಆರ್ಡರ್‌ರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಇದೆಯೋ ಇಲ್ಲವೋ?

(ಪತ್ರಿಕೆ ಪುಟದಿಂದ)

ತಲೆಬಾಗಗೊಳಿಸುವುದೇ ಕಟ್ಟುಕಥೆಗಳ ಗುರಿ. ಸ್ಥಳ ಮಹಾತ್ಮೆಗಳ ಉದ್ದೇಶ. ಹಂಪೆಯಲ್ಲಿ ಒಂದು ಕಡೆ ರಾವಣನು ಸೀತೆಯನ್ನು ಎತ್ತಿಕೊಂಡು ಹೋಗುವಾಗ ಅವಳ ಸೀರೆ ನೆಲಜಾಡಿಸಿದ ಗುರುತು ಇದು ಅಂತ ಒಂದು ಬಂಡೆಕಲ್ಲಿನ ಲ್ಲಿರುವ ಬಿಳೀ ಗೆರೆಗಳ ಗುರುತನ್ನು ತೋರಿಸುತ್ತಾರಲ್ಲ. ಶುದ್ಧ ಹಂಬಗ್ ರಾಮನೇ ಕಲ್ಪನಿಕ ಸೃಷ್ಟಿ

ಎಂದು ಮುಗುಂದರಾಯರು ಹೇಳಲು ದೀಕ್ಷಿತರು ಆಶ್ಚರ್ಯದಿಂದ, "ಅದು ಹೇಗೊ?" ಎಂದರು.

ದೀಕ್ಷಿತರ ಕುತೂಹಲ ಕೆರಳಿದ್ದು ನೋಡಿ ಮುಕುಂದರಾಯರಿಗೆ ಹುಮ್ಮಸ್ಸು ಬಂತು. ಮುಂದುವರಿಸುತ್ತಾ ಅವರು ತಮ್ಮ ವಿಮರ್ಶನೆಯ ವಾಗ್ಝರಿಯನ್ನು ಹರಿಬಿಡಲಾರಂಭಿಸಿದರು. ರಾಮಾಯಣ, ಭಾರತ, ಪ್ರಾಚೀನ ಋಷಿ ಮುನಿಗಳು ಎಲ್ಲವನ್ನೂ ಕುರಿತು ತಮ್ಮ ದಿವ್ಯಜ್ಞಾನವನ್ನು ಪ್ರದರ್ಶನ ಮಾಡಿದರು. ಅವರು ಹೇಳಿದುದರ ಮುಖ್ಯ ಸಾರಾಂಶ ಹೀಗಿತ್ತು.!

ರಾಮಾಯಣ—ಇದು ಅತ್ಯಂತಪ್ರಾಚೀನ ಕಾಲದಲ್ಲಿ ಪ್ರಚಾರದಲ್ಲಿದ್ದ ಒಂದು ಜಾನಪದ ಕಥೆ ಅದು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ವಿಧವಾಗಿತ್ತು. ಸೀತೆ ರಾಮನಿಗೆ ಏನಾಗಬೇಕೆಂಬುದೂ ಸ್ಪಷ್ಟವಾಗಿಲ್ಲ. ರಾಮನ ತಂಗಿ ಸೀತೆಯೆಂತಲೂ ಕೆಲವು ಕಥೆಗಳಿವೆ. ಅವಳಿಗೊಬ್ಬ ತಂದೆ ಇಲ್ಲದುದರಿಂದ ದಶರಥ 'ಜನಕ' ಎಂಬ ಅರ್ಥವನ್ನೇ ಅವಳ ತಂದೆಯನ್ನಾಗಿ ಮಾಡಲ್ಪಟ್ಟಿತು. ಒಬ್ಬನ ಮೇಲೆ ಇಂದೊಂದು ರಮಣೀಯವಾದ ಕಥೆ. ವಾಲ್ಮೀಕಿಯಂತಹ ಮಹಾಕವಿ ಈ ಕಥೆಯನ್ನು ಓದಿದುಕೊಂಡು, ಆಗ ಹರಡಿಕೊಂಡು ಬರುವ ಬೌದ್ಧ, ಜಾರ್ವಾಕ ಮತಗಳನ್ನು ಖಂಡನೆಗೊಳಪಡುವ ಧೋರಣೆಯಲ್ಲಿ ರಾಮಾಯಣ ಮಹಾಕಾವ್ಯವನ್ನು ಬರೆದ. ಜನರು ಅದರ ರುಚಿಗೆ ಮಾರುಹೋದ ಮೇಲೆಯೇ ಅದಕ್ಕೆ 'ಮಹಾ' ಪದವು ಅಂಟಿಕೊಂಡಿತು. ನಮಗರಿವಿಗೆಲ್ಲ ವೆ ಚ್ಚಿಗೆಯಾಗ ಬೇಕೆಂದು, ಊಹಾತೀತಗಳಾದ ಅದ್ಭುತ ರಾಕ್ಷಸ ಪಾತ್ರಗಳನ್ನೂ ಗಡ್ಡಮರಗಳನ್ನೆಲ್ಲ ಎತ್ತೆತ್ತಿ ಎತ್ತೆತ್ತಿ ಬಿಸುಟ ಯುದ್ಧ ಮಾಡುವ ಕೋತಿಸೈನ್ಯಗಳ ಪಡೆಗಳನ್ನೂ ವರ್ಣಿಸಿ ವರ್ಣಿಸಿ ತೋರಿಸಿದ್ದಾನೆ ವಾಲ್ಮೀಕಿ.

ಒಲ್ಲದ್ದಿ ಶಿಥಿಲವಾಗಿದ್ದ ಒಂದುಕಥೆಯನ್ನು ಒಟ್ಟುಗೂಡಿಸಿ ಜನಮನ ರಂಜಕವಾಗಿ ರಾಮಾಯಣವನ್ನು ಬರೆದ ವಾಲ್ಮೀಕಿ, ರಾಮ ಲಕ್ಷ್ಮಣರೇ ಮೊದಲಾದವರನ್ನು ಆದರ್ಶ ಮಾನವನಾಯಕರನ್ನಾಗಿ ರೂಪಿಸಿದ್ದಾನೆ ಯೇ ಹೊರತು, ದೇವರೇ ಅವನೆಂದು ಹೇಳಿರಲಾರ. ಅವನು ನಾರಾಯಣ ದೇವರ ಅವತಾರವೆಂದೂ, ಕೊನೆಗೆ ವೈಕುಂಠಕ್ಕೆ ಹೋದನೆಂಬುದೂ, ಇನ್ನೂ ಅನೇಕ ದೇವಸರ ವರ್ಣನೆಗಳೆಲ್ಲ ರಾಮಾಯಣದ ಮೊದಲು ಕೊನೆಗಳಲ್ಲ ಪ್ರಕ್ಷಿಪ್ತಗಳಾಗಿ ಹತ್ತಿಕೊಂಡ ಕಲ್ಪನೆ ಕಥೆಗಳು, ಅನಂತರದವರು ಸೇರಿಸಿದ್ದು. ರಾಮಸನ್ನು ದೇವರೆಂದು ತೋರಿಸಲು ಹಾಗೆಲ್ಲ ಕೂಡಿಸಿದರು.

ವಾಲ್ಮೀಕಿ ರಾಮಾಯಣದ ರಾಮನಂತೂ ದೇವರಾಗಿಲ್ಲ. ದೇವರಾದರೆ ಪರಶುರಾಮನಾಗಿರ ಬೇಡವೇ? ಹುಸಿ ಹುಸಿ ಮಾನವಗಳೇ ಅರಣ್ಯ ವಾಸದಲ್ಲಿ ಅವನ ಆಹಾರ. ಇನ್ನು ಸೀತೆ, ರಾವಣನು ಅವಳನ್ನೆತ್ತಿ ತನ್ನ ತೊಡೆಯಲ್ಲಿಟ್ಟುಕೊಂಡು ಹೋದನು. ಅವಳ ಪಾವಿತ್ರ್ಯವನ್ನು ಸಂದೇಹಿಸುವಂತೆಯೇ ಇದೆ ಅವಳ ಕಥೆ. ಅಬಲೆ ಸ್ತ್ರೀಯಳಿಡೆ ಹೇಗಿರ ಬೇಕೋ ಹಾಗೇ ಇದೆ. ಮಂಡೆ ಲವಕುಶರನ್ನು ರಾಮನಿಗೆ ಒಪ್ಪಿಸುವಾಗ ವಾಲ್ಮೀಕಿ, "ಇವರು ನಿನ್ನ ಮಕ್ಕಳೇ, ಸಂದೇಹಿಸಬೇಡ" ಎಂದು ಹೇಳುತ್ತಾನೆ. ಪಾಪ, ಮಕ್ಕಳ ವಿಷಯದಲ್ಲಿಯೂ ರಾಮನು ಸಂದೇಹ ಪಡ ಬೇಕಾದರೆ? ಸೀತೆಯು ದೆಂತಹ ದಾರುಣ ಕಥೆ!

ಹೀಗೆಲ್ಲ ಸಹಜ ಸನ್ನಿವೇಶಗಳಿಂದ, ಸಹಜ ಸಾಮಾಜಿಕದುಃಖಾಂತ ಕಾದಂಬರಿಯಂತಿದ್ದ ರಾಮಾಯಣದ ಸೀತೆರಾಮಂದಿರಲ್ಲಿ ಪಾವಿತ್ರ್ಯವನ್ನೂ, ಏಮೂಲಕ ದೇವತ್ವವನ್ನೂ ನೆಲೆಗೊಳಿಸಲಿಕ್ಕಾಗಿಯೇ ಅನೇಕ ಉಪ ಕಥೆಗಳು ಹುಟ್ಟಿಕೊಂಡುವು. ರಾವಣನ: ಸ್ತ್ರೀಯ ಒಪ್ಪಿಗೆಯಿಲ್ಲದೆ ಅವಳನ್ನು ಮುಟ್ಟಿದರೆ ಭಸ್ಮವಾಗಿ ಹೋಗುವನೆಂದೂ, ಆದ್ದರಿಂದ ರಾವಣನು ಮಣ್ಣಿನೊಂದಿಗೇ ಸೀತೆಯನ್ನೆತ್ತಿ ಕೊಂಡು ಹೋದನೆಂದೂ, ರಾಮೂದಿಗಳು ಕೇವಲ ಕಂದ ಮೂಲಗಳನ್ನೇ ತಿನ್ನುತ್ತಾ ವನವಾಸ ಮಾಡಿದರೆಂದೂ, ಒಬ್ಬೊಬ್ಬರೂ ಒಂದೊಂದು ಸುಧಾರಣೆಗಳನ್ನು ಮಾಡಿಕೊಂಡು, ಎಷ್ಟೆಷ್ಟೋ ದೊಡ್ಡ ರಾಮಾಯಣಗಳನ್ನು ಬರೆದರು. ಒಂದೊಂದು ಘಟನೆಗೂ ಪಾತಾಳ ಬೇರುಗಳಂತಹ ಉಪಕಥೆಗಳೂ ಹುಟ್ಟಿಕೊಂಡುವು. ಹೀಗೆ ಸೀತಾರಾಮರೆಂಬ ಜಾನಪದ ಕಥಾ-ನಾಯಕರು ದೇವರಾಗಿ ಬಿಟ್ಟರ್ದಾರೆ.

ಭಾರತ: ಇದು ಎಷ್ಟೋ ಎಣೆಯಿಲ್ಲದ ಉಪಯೋಗಕರವಾದ ಬೃಹದ್ಗ್ರಂಥ. ಹಿಂದಿನ ಕಾಲದವರ ರೀತಿ ನೀತಿ ನಡೆವಳಿಕೆಗಳನ್ನು ತೋರಿಸುವ ಇತಿಹಾಸ. ಇದರಲ್ಲಿ ಕೃಷ್ಣನನ್ನು ದೇವರೆಂದು ಅವನ ಬಾಯಿಯಿಂದಲೇ ಹೇಳಿಸಲಾಗಿದೆ. ಅದರಲ್ಲಿಯೂ ಎಷ್ಟೋ ಪ್ರಕ್ಷಿಪ್ತಗಳು ಸೇರಿಕೊಂಡಿದ್ದರೂ ಹಿಂದಿನ ಕಾಲದ ರೀತಿನೀತಿಗಳನ್ನು ಅರಿಯಬಹುದೆಂಬ ದೃಷ್ಟಿಯಲ್ಲಿ ಅದು ಮುಕುಂದರಾಯರಿಂದ ವಿಶೇಷ ವಿಮರ್ಶೆಗೆ ಈಡಾಗಿಲ್ಲ.

ಪುರಾಣಗಳು, ಋಷಿ ಮುನಿಗಳು: ಈ ಋಷಿ ಮುನಿಗಳನ್ನು ಕುರಿತು ಆಲೋಚನೆ ಮಾಡಿದಾಗ ಅದಿಮಾನವನು ಹೇಗೆ ನಾಗರಿಕನಾಗುತ್ತಾ ಬಂದನೆಂಬುದು ಗೊತ್ತಾಗುತ್ತದೆ. ಶಕ್ತಿಯುಳ್ಳ ಜೀತಗಳೆಲ್ಲವೂ ದೇವರು; ಮಳೆ, ಗಾಳಿ, ಸಿಡಿಲು, ಮಿಂಚು, ನಾಗ, ಅನೆ ಇತ್ಯಾದಿ. ತಿನ್ನುವ ಕಾರ್ಯಗಳಿಗೇ ಯಜ್ಞ ಯಾಗಗಳೆಂದು ಹೇಳುತಿದ್ದರು. ವಿಶೇಷವಾಗಿ ಅತಿಥಿಗಳು, ಇಷ್ಟಮಿತ್ರರು ಬಂದು ಸೇರಿದಾಗ ಭಾರಿ ಭಾರಿ ಗೋಹತ್ಯಗಳೊಂದಿಗೆ ಯಜ್ಞ ಸಮಾರಂಭ ನಡೆಯುತ್ತಿತ್ತು. ಮಾಂಸಾಹಾರವು ಸರ್ವೇ ಸಾಧಾರಣ ವಿಷಯ. ಈಗಿನ ಪವಿತ್ರ ಬ್ರಾಹ್ಮಣರ ದೃಷ್ಟಿಯಲ್ಲಿ ಆವರೆಲ್ಲರೂ ಅಪವಿತ್ರರೇ ಸರಿ. ತಾವು ಪವಿತ್ರರೆಂದು ಜಂಬಕೊಚ್ಚಿಕೊಳ್ಳುವ ಬ್ರಾಹ್ಮಣಾದ್ಯರ ಆದಿ ಗುರುಗಳೆಲ್ಲ ಪ್ರಸಿದ್ಧ ಗೋಮಾಂಸ ಭಕ್ಷಕರೆಂದರೆ ಈಗಿನವರು ಒಪ್ಪಲಾರರು. ನಂಬಲಾರರು. ಗೊತ್ತಿದ್ದೂ ಅದಕ್ಕೊಂದು ಗೊಡ್ಡು ಸಮಾಧಾನ ಸೃಷ್ಟಿಸಿಕೊಂಡು ತಮ್ಮನ್ನು ತಾವೇ ಮೋಸಪಡಿಸಿಕೊಳ್ಳುತ್ತಾರೆ. ಶ್ರಾದ್ಧ ಕರ್ಮಕ್ಕೆ ಮೇಷ ಮಾಂಸವು ಅತೀ ಅಗತ್ಯವಾಗಿತ್ತು. ಛೇ ಛೇ, ಅದು ಮೇಷವಲ್ಲ, ಮೋಷ ಅಂದರೆ ಉದ್ದು ಅಂದುಕೊಂಡು ಈಗಿನವರು ಶ್ರಾದ್ಧಕ್ಕೆ ಉದ್ದಿನ ವಡೆ ಮಾಡುತ್ತಾರೆ. ಹೀಗೆಲ್ಲಾ ಹಿಂದಿನ ವಿಷಯದ ಸತ್ಯವನ್ನು ನೋಡ ಹೋದರೆ, ಈಗಿನ ಪವಿತ್ರ ಬ್ರಾಹ್ಮಣರು ನಾಲಗೆ ಕಿತ್ತುಕೊಂಡು ಆತ್ಮಹತ್ಯವನ್ನೇ ಮಾಡಿಕೊಳ್ಳಬೇಕು.

ದೇವಾಲಯಗಳು: ಮಾನವನು ಯೂ ಹುದನ್ನು ಹೆಚ್ಚಿನ ಶಕ್ತಿ ಎಂದು ಕೊಂಡನೋ ಅದನ್ನೆಲ್ಲ ದೇವರೆಂದು ಪೂಜಿಸುತ್ತಾ ಬಂದಿದ್ದಾರೆ—'ಶಿವ' ಅಂದರೆ ಸುಖ ಸಂತೋಷನೆಂದು ಅರ್ಥ. ಲೈಂಗಿಕ ಆನಂದಕ್ಕಿಂತ ಹೆಚ್ಚಿನ ಆನಂದ ಪ್ರಾಣಿಗಳಿಗೆ ಇಲ್ಲ; ಮನುಷ್ಯನಿಗೂ ಇಲ್ಲ. ಅಂತಹ ಆನಂದಕ್ಕೆ ಸಾಧನವಾಗಿರುವ ಲಿಂಗವನ್ನೆ ಶಿವನೆಂದೂ ದೇವರೆಂದೂ ಪೂಜಿಸಲಾಯಿತು. ಸತ್ತವರೆಲ್ಲ ಹಿಡಿಮಣ್ಣೋ ಬೂದಿಯೋ ಆಗಿ ದೈವದೊಂದಿಗೆ ಸೇರಿ ಹೋಗುವರೆಂತಲೇ ಶ್ಮಶಾನವು ಶಿವ ನಿವಾಸ ಸ್ಥಾನವೆನಿಸಿತು. ಅಂತೂ ಪ್ರಾಚೀನ ಕಾಲದಲ್ಲಿರುವ ದೇವಾಲಯಗಳೆಲ್ಲಾ ಶಿವಾಲಯಗಳೇ. ಅನಂತರ ಬೇರೆ ಬೇರೆ ಮತಗಳು, ಕೃಷ್ಣ, ರಾಮ, ವಿಷ್ಣು ಮುಂತಾದ ಅನೇಕ ದೇವತೆಗಳ ರೂಪ ಕಲ್ಪನೆಗಳು ಹೆಚ್ಚುತ್ತ ಬಂದ ಹಾಗೆ ಇತರ ದೇವಾಲಯಗಳೂ ಕಲೆದೋರಿದುವು. ಈಗ ಕೂಡ ಪ್ರತಿ ಊರುಗಳಲ್ಲಿಯೂ ಎಷ್ಟೋ ಇತರ ದೇವಾಲಯಗಳಿದ್ದರೂ, ಹಳೆಯ ಕಾಲದ ಶಿವಾಲಯ ಒಂದೆರಡಾದರೂ ಇದ್ದೇ ಇರುತ್ತವೆ.

ತಲೆದೂಗುತ್ತಾ ಇದನ್ನೆಲ್ಲಾ ಕೇಳಿದ ದೀಕ್ಷಿತರು: "ನಿಮ್ಮ ಮಾತುಗಳೆಲ್ಲವೂ ನಿಜವೇ. ವಿಕೆಂದರೆ ಹೆಚ್ಚು ಹೆಚ್ಚು ವಿಷಯ ತಿಳಿದ ತಿಳಿದ ಹಾಗೆ ಜ್ಞಾನವು ಹೆಚ್ಚುತ್ತಾ ಹೋಗುತ್ತದೆ. ಜ್ಞಾನವು ಹೆಚ್ಚಿದ ಹಾಗೆ ನಾವು ಕಲ್ಪಿಸಿಕೊಂಡಿರತಕ್ಕಂಥ ದೇವರುಗಳು ಕೂಡ ಇಲ್ಲ—ಇಲ್ಲವೆಂತಲೇ ಆಗುತ್ತದೆ. ಅಂತೆಯೇ ಜ್ಞಾನಿಗಳಿಗೆ ಸುಖ-ದುಃಖ, ರುಚಿ-ಅರುಚಿ, ರಾಗ—ದ್ವೇಷ, ಮಡಿ—ಮೈಲಿಗೆ, ದೇವರು—ದಿಂಡಿಂಡಿಯವುದೂ ಇಲ್ಲ; ಬೇಕಾಗಿಲ್ಲ. ಅಂಥವನು ಒಕ್ಷಕ್ಕೊಬ್ಬನೋ ಏನೋ. ಹಾಗೆ ಯೂರಿಂದಲೂ ಕಾಣಲಾರದ, ಕಾಣಲಿಕ್ಕಾಗದ ಪರವಸ್ತುವಾದುದಂದಲೇ 'ಅದು' ಅಣುವಿನಲ್ಲಿ ಅಣುವಾಗಿಯೂ ಅನಂತದಲ್ಲಿ ಅನಂತವಾಗಿಯೂ ಇರುವ ಒಂದು ಶಕ್ತಿ. ಆ ಮಹತೋ ಮಹಾನ್ ವಿಶ್ವರೂಪವನ್ನೇ ನಮ್ಮ ಕಲ್ಪನೆಯ ಅಳವಿಗೆ ತರಲು, ನಮ್ಮ ಈ ದೇಹಗಳಿಗೆ ಒಂದೊಂದು ಹೆಸರು ಕೊಡುವ ಹಾಗೆ, ಅದಕ್ಕೆ ದೇವರು ಎಂಬ ಹೆಸರನ್ನು ಕೊಡಲಾಯಿತು. ಅದನ್ನು ಇನ್ನೂ ಪಾಮರರ ಮನಸ್ಸಿಗೆ ತರಲು ಜನಪ್ರಿಯವಾದ ರಾಮಾಯಣ ಭಾರತಗಳ ಕಥಾ ನಾಯಕರನ್ನು ಉತ್ತನು ಗೊಳಿಸಿ, ಅನೇಕ ವಿಧದಲ್ಲಿ ಬರೆದು ರಾಮ ಕೃಷ್ಣರನ್ನು ಅವತಾರ ಪುರುಷರನ್ನಾಗಿ ರೂಪಿಸಿದರು. ಅದರಿಂದ ತಪ್ಪೇನು? ಅದರಲ್ಲಿ ಮೂಢತೆತನವೇನು ಬಂತು? ಯಾರನ್ನು ಮೂಢತ್ವವೆನ್ನ ಬೇಕು? ದೇವರ ಕಲ್ಪನೆಗಳನ್ನು ಮೂಡಿಸಿದವರನ್ನು ಮೂಢರೆನ್ನ ಬೇಕೆ? ಹಾಗಿದ್ದರೆ ದೇವರ ಕಲ್ಪನೆ ಮೂನವರ ಅಭ್ಯುದಯಕ್ಕೆ ಹೇಗೆ ಸಹಾಯಕವಾಗುತ್ತದೆಂಬುದನ್ನು ಆಲೋಚಿಸಿನೋಡಿಕೊಳ್ಳಿ.

ಮಾನವರು ಶಿಲಾಯುಗದಿಂದ ಬುದ್ಧಿ ವಿಕಸನ ಹೊಂದುತ್ತಾ ಬಂದ ಹಾಗೆ, ಅವರು ತಮ್ಮ ಶಕ್ತಿಗೆ ಮೀರಿದ ಮಹಾ ಶಕ್ತಿಗಳನ್ನು ನೋಡಿ ಹೆದರಿ ಅವುಗಳನ್ನು ಪೂಜಿಸುತ್ತಾ ಬರುವುದನ್ನು ನೋಡಿದರೆ ಬುದ್ಧಿವಂತರಿಗೆ ಏನು ತೋರುತ್ತದೆ? ಭೀತಿಯಿಂದ ಮಾನವನನ್ನು ಜಾಗಸ ಬಹು ದೆನಿಸುತ್ತದೆ. ಸಮಾಜದಲ್ಲಿ ಧರ್ಮ ಭೀತಿ, ನ್ಯಾಯ ಭೀತಿಗಳು ಅಗತ್ಯತಾನೆ? ಅದಿಲ್ಲದಿದ್ದರೆ ಬಲವಂತರದೇ ಬದುಕಾಗಿ ಹೋಗುವುದಿಲ್ಲವೆ? ಈ ಸೂಕ್ಷ್ಮವನ್ನು ಕಂಡು ಹಿಡಿದೇ ಬುದ್ಧಿವಂತರು, ಅನೇಕ ಪುರಾಣ ಕಥೆಗಳನ್ನೂ ವೇದಕಥೆಗಳನ್ನೂ ಬರೆದರು. ರಾಮಕೃಷ್ಣಾದಿಗಳನ್ನು ಅವತಾರವೆಂದು ಸಾಧಿಸಲು ಬೇಕಾದುದನ್ನೆಲ್ಲ ಕೂಡಿ ನಂಬಿಸಿದರು. ದೇವರ ಭಯದಿಂದ ಮೂನವರು ಧರ್ಮ ನ್ಯಾಯಗಳಲ್ಲಿ ನಿರತರಾಗಲಿ ಎಂದು ಅದಷ್ಟುಸ್ಪಯತ್ನಿಸಿದರು. "ದೇವರ ಭಯವೇ ಜ್ಞಾನದ ಆರಂಭ". ಒಂದು ಮನೆಯಲ್ಲಿಮಕ್ಕಳು ಸರಿಯಾಗಿ ನಡೆಯಬೇಕಾದರೆ ತಂದೆಯ ಭಯ ಬೇಕು. ಶಾಲೆಯಲ್ಲಿ ಗುರುವಿನ ಭಯಬೇಕು. ಜ್ಞಾನಿಗಳಾದವು ತಮಗಿಂತ ಕಡಮೆ ಜ್ಞಾನಿಗಳಾದವರ ಸಾಕಾರ್ಯಕ್ಕಾಗಿ, ಸಮಾಧಾನಕ್ಕಾಗಿ, ಮನಃಶಾಂತಿಗಾಗಿ ದೇವತಾ ಭಾವನೆಗಳನ್ನು ಸುಲಭ ಕಲ್ಪನೆಗೆ ಒಳಪಡುವಂತೆ, ಸುರಸ ಕಥೆಗಳ ಮೂಲಕ ಕಲ್ಪಿಸಿ ರೂಪಿಸಿಕೊಟ್ಟರು ಇದೆಲ್ಲವೂ ಈಗಿನ ವಿಜ್ಞಾನಿಗಳು ಕೂಡ ಒಪ್ಪುವಂತೆ ಮನಸ್ಸಿನಿರುವ ಶಕ್ತಿಯ ಆಧಾರದಮೇಲೆ ನಿಂತುವುಗಳು. ಮನಸ್ಸಿನ ನಂಬುಗೆಯೇ ಎಲ್ಲದಕ್ಕೂ ಮೂಲ. ರೋಗ ಬಂದಾಗ ಔಷಧಬೇಕೆಂಬ ಅಷ್ಟ ನಂಬುಗೆಯುಂಟಾಗುವುದರಿಂದಲೇ ವೈದ್ಯರ ಅಗತ್ಯ ಬಂತು. ವೈದ್ಯರ ಮೇಲೆ ರೋಗಿಗೆ ನಂಬುಗೆ ಇದ್ದರೇನೇ ಅವರ ವೈದ್ಯದಿಂದ ಪ್ರಯೋಜನ. ತನಗೆ ಬಂದುದು ರೋಗವೇ ಇಲ್ಲ, ವೈಯಕ್ತಿಕ ಹೊಕ್ಕ ಬೇಡದ ವಸ್ತುವನ್ನು ಹೊರ ಹಾಕಲಿಕ್ಕೇ ಬಂದ ಆರೋಗ್ಯ ಚಿಹ್ನೆಯಿದು ಎಂದು ನಂಬಿದವನಿಗೆ ವೈದ್ಯನೂ ಬೇಡ, ಮದ್ದೂ ಬೇಡ. ಮನಸ್ಸಿನ ಲ್ಲಾಗುವ ನಂಬುಗೆಯ ಬಲದಿಂದ ಎಷ್ಟೋ ಅಮಾನುಷ ಕಾರ್ಯಗಳೂ ನಡೆಯುತ್ತವೆ. ದೈವೀ ಶಕ್ತಿಯೆಂಬುದೆಲ್ಲವೂ ಮನಸ್ಸಿನ ನಂಬುಗೆಯ ಶಕ್ತಿ. ಹತ್ತು ಜನರು ಹೂವುದನ್ನು ದೇವರೆಂದು ನಂಬುವರೋ ಅದರಲ್ಲಿ ಅಯೂ ದೈವಶಕ್ತಿ ಆವಾಹನೆಯಾಗಿಯೇ ತೀರುತ್ತದೆ. ಒಂದು ಕಲ್ಲನ್ನು ದೇವರೆಂದು ಎಲ್ಲರೂ ನಂಬಿಬಿಟ್ಟರೆ ಅದು ಜನರ ಮನಸ್ಸಿನಲ್ಲಿರುವ ದೇವತಾಕಲ್ಪನೆಯೇ ಹೊರತು, ಆ ಕಲ್ಲಿನಲ್ಲಿಲ್ಲ. ಹೀಗೆಯೇ ರಾಮ ಕೃಷ್ಣಾದಿಗಳು.

ಈಗ ಜನತೆಯಲ್ಲಿ ಬೇರೂರಿ ಹೋಗಿ

ರುವ ರಾಮಕೃಷ್ಣ ಮೊದಲಾದ ದೇವತಾ ಭಾವನೆಗಳಲ್ಲದೆ ಹೋದರೆ ಏನಾದೀತು ಮಹಾ? ಎಂದು ನೀವು ಕೇಳಬಹುದು. ರಾಮಕೃಷ್ಣರು ದೇವರಲ್ಲವೆಂಬ ಅಪನಂಬಿಕೆ ಹರಡಿ ಹೋದರೆ ಏನಾದೀತೆಂಬುದಷ್ಟೂ ಸ್ವಲ್ಪ ಆಲೋಚನೆ ಮಾಡಿ. ರಾಮ ಭಕ್ತೆ ಅಳಿದೀತು. ತ್ಯಾಗರಾಜ, ಪುರಂದರ, ಕನಕದಾಸರ ಸಂಗೀತಗಳಲ್ಲದೆ ಹೋದೀತು. ಸಂಗೀತವಿಲ್ಲ, ಸಾಹಿತ್ಯವಿಲ್ಲ. ಕಲೆಯಿಲ್ಲ, ಶಿಲ್ಪವಿಲ್ಲ. ಅನೇಕ ಬಗೆಯ, ಮನಸ್ಸಿಗೆ ಹಿತವೆನಿಸುವಂತಹ, ಸುರಸಗಳ ಸುಖಾನುಭೂತಿಗೆ ತಕ್ಕ ಸಾಧನಗಳೇ ಇಲ್ಲದೆ ಮನುಷ್ಯರು ಮತ್ತೆ ಶಿಲಾಯುಗಕ್ಕೇ ಹಿಂದಿರುಗಿದ ಹಾಗೆ ಆಗುತ್ತೆ. ಹಬ್ಬ ಹರಿದಿನಗಳ ಪೂಜೆ ಪುನಸ್ಕಾರಗಳೇನೂ ಬೇಡದಿದ್ದರೂ, ಆಯಾ ಹಬ್ಬಗಳ ಭಕ್ಷ್ಯ ಭೋಜ್ಯಗಳು ಬೇಡೆನಿಸುವುದಿಲ್ಲ ವಷ್ಟೆ? ದೀಪಾವಳಿ, ನವರಾತ್ರಿಗಳ ಪೂಜಾ ವಿಧಾನಗಳಾವುವೂ ಬೇಡೆನ್ನುತ್ತ, ದೋನಸ್ಸು, ಬಹುಮಾನಗಳು ಮಾತ್ರ ಬೇಕೆಂದರೆ ಹೇಗೆ? ಮರ್ಯಾದೆಯೆ? ಎಷ್ಟೋ ಹಬ್ಬ ಹರಿದಿನಗಳು ಸಾಮಾಜಿಕ ಸ್ವಾಸ್ಥ್ಯವನ್ನು ಬಲಗೊಳಿಸುವಂತೆಯೆಂಬುದನ್ನೂ ನಾವಿಲ್ಲಿ ನೆನೆಯಬೇಕು. ಕೃಷಿ, ವಾಣಿಜ್ಯ ವೃತ್ತಿಗಳಿಗೂ ಹಬ್ಬಗಳಿಗೂ ಸಂಬಂಧವಿರುವುದರಿಂದಲೇ ಕೆಲಸ ಕಾರ್ಯಗಳಲ್ಲಿ ಶುದ್ಧಿಯೂ, ಪವಿತ್ರ ಭಾವನೆಯೂ ಉಂಟಾಗುವಂತಾಯಿತು. ಹೀಗೆ ನಮ್ಮ ಇಂದ್ರಿಯಗಳಿಗೆಲ್ಲ ಸುಖಾನುಭೂತಿಯ ಕಾಂಕ್ಷೆಗಳೆವೆಯೋ ಹಾಗೆಯೇ ದೈವಭಕ್ತಿ ದೇವತಾ ಭಾವನೆಗೂ ಜ್ಞಾನೇಂದ್ರಿಯವಾದ ಮನಸ್ಸಿಗೆ ಶಾಂತಿಯ ಆಕಾಂಕ್ಷೆಗೆ ಬೇಕು. ಇದಾವುದೂ ಇಲ್ಲದೆ ಜ್ಞಾನವಾದವೆನ್ನುತ್ತ ನಾಸ್ತಿಕತೆಯಿಂದಿರುವವರು ಶುದ್ಧ ಒಣ ಮನುಷ್ಯರು. ಸಿಕ್ಕಿದ ಹಾಗೆ ತಿಂದು ಹೊಟ್ಟೆ ತಿರುಗುವವರು ಅನಾಗರಿಕತ್ವಕ್ಕೆ ಸವಿಯೂಟವಿ

ಯಾವತ್ತೂ ನಾಚಿನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮೂಲೆ	1—80
ಹೂ ಗೊಂಚಲು	1—75
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀನಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಪೇಟೆ	1—50
ಭಾರತದ ವೀರಾಂಗನೆಯರು	1—50
ಪೇರಂಕೊಟ್ಟ ಬೆಂಡೋಲೆ	1—80
ಶಿಲ್ಪ	1—50
ಪ್ರತಿಜ್ಞಾ ಪೂರ್ತಿ	1—00
ಘಂಟೆಪೂರಾ	2—00
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕೊಳ್ಳುವವರು — ಎಂದು ತೋರುವುದಿಲ್ಲವೆ?

ನೀವು ಹೇಳುವ ಹಾಗೆ ಇಲ್ಲದಿರುವ ದೇವರು ಉಂಟೆಂದು ಕುಣಿದಾಡುವವರಿಲ್ಲ ಮೂರ್ಖರು ಎನ್ನುವುದಾದರೆ, ನಮ್ಮ ಮಕ್ಕಳು ಬೊಂಬೆಗಳೊಂದಿಗೆ ಆಡುವದನ್ನು ಸ್ವಲ್ಪ ಆಲೋಚನೆ ಮಾಡಿರಿ. ಮಕ್ಕಳಿಗೆ ನಾನೇ ಬೊಂಬೆಗಳನ್ನು ಕೊಟ್ಟು ಆಟಕ್ಕೆ ಪ್ರೋತ್ಸಾಹ ಕೊಡುವುದಿಲ್ಲವೆ? ಮಕ್ಕಳ ಆಟವನ್ನು ನೋಡಿ ನಾವೆಲ್ಲ ಸಂತೋಷ ಪಡುವುದಿಲ್ಲವೆ? ಅವುಗಳನ್ನು ಮೂರ್ಖರೆಂದೂ ಹುಚ್ಚರೆಂದೂ ಲೇವಡಿ ಮಾಡುತ್ತೇವೆಯೆ? ಹಾಗೆಯೇ ಜ್ಞಾನಿಗಳ ದೃಷ್ಟಿಯಲ್ಲಿ ಕಡಮೆ ಜ್ಞಾನವುಳ್ಳವರೆಲ್ಲ ಮಕ್ಕಳಿಗೆ ಸಮಾನ—ಜ್ಞಾನವು ಹೆಚ್ಚಾದಾಗ ಹೋದ ಹಾಗೆ ದೇವರ ಅರೂಪತ್ವ ಅನಂತತ್ವ ನಿರಾಕಾರತ್ವದ ಅರಿವಾಗುತ್ತಾ ಹೋಗುತ್ತದೆ. 'ನಾನು' ಎಂಬುದು 'ನನ್ನ' ಈ ದೇಹದೊಳಗಿನ ಅನಂತ ಪರತತ್ವವೆಂಬುದನ್ನು ಸಾಧನಾಪೂರ್ವಕವಾಗಿ ಸಾಧಿಸಿ ಕೊಂಡವನೇ ಮಹಾ ಜ್ಞಾನಿ. ಅಂಥವನು ತನಗಿಂತ ಕೆಳಮಟ್ಟದವರ ನಂಬುಗೆಗಳನ್ನು ಬಲಪಡಿಸುವನೇ ಹೊರತು ಭಗ್ನಗೊಳಿಸುವಂತಹ ಕೆಲಸ ಮಾಡಲಾರ.

ನೀವು ಹೇಳುವ ಹಾಗೆಯೇ ರಾಮ ಕೃಷ್ಣಾದಿಗಳು ಕೇವಲ ಕಥಾನಾಯಕರಷ್ಟೇ ಆಗಿರಲಿ. ಋಷಿಮುನಿಗಳು ನೂರಾರು ಭಕ್ಷ್ಯಕರಾಗಿದ್ದರೂ ಇನ್ನುಕೊಳ್ಳಲಿ. ಒಬ್ಬಳು ಸುಂದರಿಯನ್ನು ನೋಡಿ, ಅವಳ ಸೌಂದರ್ಯವನ್ನು ಮೆಚ್ಚಿಕೊಳ್ಳುವುದು ತಾನೇ ಕರ್ತವ್ಯ? ಅದನ್ನು ನಿಟ್ಟು ಆ ಸೌಂದರ್ಯದ ಸತ್ಯ ಹೀಗೆ ಹೀಗೆ ಇದೆ ಎಂದು ಪರಿಶೀಲಿಸಲು ಹೊಂಟು, ರಕ್ತ ಮಾಂಸ ಎಲುವು ಗೂಡುಗಳ ವರೆಗೂ ಹೋಗುತ್ತಾರೇನು? ಪ್ರಾಚೀನ ಕಾಲದಲ್ಲಿ ಮಾಂಸಾಹಾರವು ಸರ್ವೇಸಾಧಾರಣವಾಗಿದ್ದರೂ, ಆ ಮೇಲೆ ಜೈನ ಬೌದ್ಧ ಮತಗಳು ಅಹಿಂಸೆಯನ್ನು ಬೋಧಿಸಿದಾಗ ಈ ಬೋಧೆ ಹಿತವೆನಿಸಿ ಸಾತ್ವಿಕಾಹಾರವು ಬಳಕೆಗೆ ಬಂತು. ಮಾಂಸ ಮೊದಲಾದ ಬೀಭತ್ಸ ಆಹಾರಗಳು ಒಂದು ಬಗೆಯ ಮನುಷ್ಯ ವರ್ಗಕ್ಕೆ ವರ್ಜ್ಯವೆನಿಸಿತು. ಅಂಥವರು ಬ್ರಾಹ್ಮಣರೆನಿಸಿದರೆನ್ನಿ.

ತಂದೆ ಕೆಟ್ಟ ಕೆಲಸಗಳನ್ನು ಮಾಡಿಕೊಂಡಿದ್ದವನಾದರೂ ಮಗನೂ ಹಾಗೆ ಮಾಡಬೇಕೆಂಬುದನ್ನು ಯಾವ ತಂದೆಯೂ ಒಪ್ಪಲಾರ ಹಾಗೆಯೇ ಪ್ರಾಚೀನ ಋಷಿಗಳು ಮಾಂಸವನ್ನು ತಿಂದವರಾದರೂ ತಮ್ಮ ಗೋತ್ರದವರು ಸರಿಶುದ್ಧರಾದರೆ ಅವರಿಗೆ ಸಂತೋಷ ತಾನೆ? ಹಾಗೆಂದು ಅವರನ್ನು ಹಳಿಯುವುದೂ, ಅಗೌರವಪಡಿಸುವುದೂ ಯಾವ ನಾಗರಿಕರಿಗೂ ಹಿಡಿಸುವ ಸಂಗತಿಯಲ್ಲ. ಹಾಗೆಯೇ ರಾಮಾಯಣ ಭಾರತಾದಿಗಳನ್ನೂ, ಜನರ ಸತ್ಪ್ರವರ್ತನೆಗೆ ಅನುಕೂಲವಾಗುವ ಹಾಗೆ ಸುಧಾರಣೆ ಮಾಡಲಾದರೆ ತಪ್ಪೇನಿದೆ?

ಅಂತೆಯೇ ನೀವು ಹೇಳುವುದೆಲ್ಲ ಸತ್ಯ ಸಂಗತಿಯೇ ಆಗಿದ್ದರೂ ಅದೆಲ್ಲ ಹೊತ್ತಾ ಕಳೆಯಲು ಹಂಟೆ ತರ್ಕಗಳಿಗಂಲಿ. ಎರಡೂ ಸುಳ್ಳಾಗಿರುವಾಗ, ಇದು ಸುಳ್ಳು, ಅದೇ ಸತ್ಯವೆಂದು ಪ್ರಚಾರ ಪಡಿಸುವುದರಲ್ಲಿ ಅರ್ಥವಿಲ್ಲ. ಇದಕ್ಕೇ ದೇವ ಮೂಲ ಋಷೀ ಮೂಲಾದಿಗಳನ್ನು ನೋಡಲು ಹೋಗಬಾರದೆನ್ನುವುದು. ಹಾಗೆಲ್ಲ ನೋಡ ಹೋದರೆ ಅದು ತನ್ನನ್ನು ತಾನೇ ಹತ್ಯ ಮಾಡಿಕೊಂಡಂತೆ."

ದೀಕ್ಷಿತರ ಈ ಅಭಿಪ್ರಾಯಕ್ಕೆ ತಲೆದೂಗಿದ ಮುಕುಂದರಾಯರು, "ಆದರೆ ದೈವ ದೇವರು ದೇವಸ್ಥಾನಗಳಲ್ಲೆಲ್ಲ ದೇವರ ಹೆಸರುಹೇಳಿಕೊಂಡು ಬಹಳ ಬಹಳ ದರಾಚಾರಗಳು ನಡೆಯುತ್ತವೆ. ಅದಕ್ಕೇ ನನಗೆ ದೈವ ದೇವರುಗಳೆಂದರೆ ಇಷ್ಟು ದ್ವೇಷ." ಎಂದು ವಿಷಯ ಬದಲಾಯಿಸಲು ನೋಡಿದರು.

"ಅದು ಇರಬಹುದು. ಬಹಳ ಕಡೆ ಹಾಗೆ ನಡೆಯುವುದು ಉಂಟು, ಅಂಧಾದ್ದನ್ನು ಖಂಡಿಸಲೇ ಬೇಕು. ನ್ಯಾಯ ನೀತಿಗಳನ್ನು ನೆಲೆಗೊಳಿಸಲು ಇಂಥಹ ಸ್ಥಳಗಳಲ್ಲಿ ಸೇರಿರುವ ದುಷ್ಟ ಹೆಗ್ಗಣಗಳನ್ನು ತೊಲಗಿಸಲೇ ಬೇಕಲ್ಲದೆ, ದೇವರನ್ನೆ ಅಲ್ಲಗಳೆಯುತ್ತ ಜನ ಸಾಮಾನ್ಯರನ್ನು ನೋಯಿಸುವುದುತರವಲ್ಲವೆಂಬುದೇ ನನ್ನ ಅಭಿಪ್ರಾಯ' ಎಂದರು ದೀಕ್ಷಿತರು.

"ಆದರೆ ಒಂದು ಮಾತ್ರ ನಿಜ. ನಿಮ್ಮ ನಾಗರಿಕತೆಯನ್ನೂ, ವಿಜ್ಞಾನವನ್ನೂ ನೋಡಿದರೆ, ಇನ್ನು ನೂರು ವರ್ಷಗಳ ಮೇಲಾದರೂ ದೇವರ ಅಸ್ತಿತ್ವ ನೂಯವಾಗುತ್ತದೆ. ಎಲ್ಲರೂ ಸತ್ಯವನ್ನು ಅರಿತುಕೊಳ್ಳುವಂತಹ ಜ್ಞಾನಿಗಳಾಗಿ ಬಿಟ್ಟರೆ ದೇವರಿಲ್ಲವೆಂಬುದೇ ಬಟ್ಟಬಯಲಾಗುತ್ತದಲ್ಲ!" ಎಂದು ಮುಕುಂದರಾಯರು ಹೇಳುತ್ತಲೇ ವಾಸ್ತವವನ್ನು "ನಿಜ ನಿಜ" ಎಂದು ನಕ್ಕರು.

ಹಾಗೆ ಜನರೆಲ್ಲರೂ ಜ್ಞಾನ ವಿಜ್ಞಾನ ಸ್ನೇರಿ ಅಜ್ಞಾನಿಗಳೇ ಇಲ್ಲದಂತಾದರೆ ದೇವರ ಅಗತ್ಯವೇ ಇಲ್ಲ, ಸುಖದುಃಖಗಳಲ್ಲ. ಮೋಸ ಮಾಯೆಗಳಿಲ್ಲ. ನಾಸ್ತಿಕತ್ವವೇ ಗೆದ್ದುಗೆಯೇರಿಬಿಟ್ಟರೆ ಎಲ್ಲರೂ ದ್ವಂದ್ವಾತೀತರು, ಪ್ರಪಂಚವೇ ಇಲ್ಲ. ಹಾಗಾಗಬೇಕೆಂದು ಯಾವ ಜ್ಞಾನಿಯೂ ಬಯಸಲಾರ. ಅದು ಪ್ರಕೃತಿಗೇ ವಿರೋಧ!" ಎಂದು ಹೇಳಿದರು ದೀಕ್ಷಿತರು.

ಎಲ್ಲರ ನಗುವಿನೊಂದಿಗೆ ದೀಕ್ಷಿತರೂ ನಕ್ಕರು. ಹೀಗೆ ಮುಕುಂದರಾಯರೊಂದಿಗೆ ಸರಾಯಿಗಾ ಎದೆಕೊಟ್ಟು ಮಾತಾಡಬಲ್ಲ ವಿದ್ವಾಂಸರೊಬ್ಬರು ಇದ್ದರಲ್ಲಾ ಎಂದು ಕೊಂಡು ಎಲ್ಲರಿಗೂ ಒಂದು ಬಗೆಯ ತೃಪ್ತಿ.

೦ ೦ ೦

ಅನಂತರ ಕೆಲವು ವಾರಗಳ ಮೇಲೆ ಮುಕುಂದರಾಯರು ನೂತನ ಗೃಹ ಪ್ರವೇಶ ಮಾಡಿದರು. ಆಗ ಗಣಹೋಮ, ಗೃಹಶಾಂತಿ ಮುಂತಾದ ಕರ್ಮಗಳೆನ್ನನ್ನೂ ಮಾಡಲಾರೆನೆಂದು ಈ ಹಿಂದೆ ಹೇಳುತ್ತಿದ್ದವರು, ಶಾಸ್ತ್ರೋಕ್ತವಾಗಿಯೇ ಗಣಹೋಮಗೃಹಶಾಂತಿಗಳನ್ನೆಲ್ಲ ಮಾಡಿಸಿದ್ದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಅಗ್ನಿ ಸಾಕ್ಷಿ, ಹೋಮ, ಧೂಮ್ರವ. ತಾದುವುಗಳನ್ನು ಲೇವಡಿ ಮಾಡುತ್ತಿದ್ದವರು ಮುಂದೆ ಅವರ ಮಗಳಿಗೆ ಮದುವೆಯಾದಾಗ, ಎಲ್ಲೋ ರಿಜಿಸ್ಟ್ರಾರ್ ಗಿಜಿಸ್ಟ್ರಿ ಮದುವೆ ಮಾಡುವರೇನೋ ಎಂದುಕೊಂಡರೆ—ಇಲ್ಲ; ಶಾಸ್ತ್ರೋಕ್ತವಾಗಿಯೇ ಮಗಳ ಮದುವೆಯನ್ನು ನೆರವೇರಿಸಿದರು.

ನಮಗೆಲ್ಲರಿಗೂ ಆಮಂತ್ರಣವಿತ್ತು.

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

..... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀ ಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುವರೆಗೆ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಹೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಲ್ಲಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ....."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಣನ ಸೆಳೆವ ತ್ರಿವರ್ಣ ಮುಖಪತ್ರ

ಬಳಿ ರಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ —

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ನಾ ಕಂಡಂತೆ 'ನಾವುಜಿರೆ'

(ಒಂಭತ್ತನೇ ಪುಟದಿಂದ)

ಬಿ. ಎ. ವಾಸ್ ಮಾಡಿದ ಸಂತೋಷ ಕೂಟದಲ್ಲಿ, ಹಲವು ಪ್ರಮುಖರು ಶ್ರೀ ನಾಗರಾಜರನ್ನು (Self made man) ಎಂದು ಪ್ರಶಂಸಿದುದು ಸಕಾಲವೇ ಆಗಿದೆ.

ನನ್ನ ಮಿತ್ರರಾಗಿರುವ ಶ್ರೀ ನಾಗರಾಜ ಪೂವಣಿಯವರು ಸದ್ಯ M.A. ಪರೀಕ್ಷೆಯ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಶ್ರೀಯುತರು ತಮ್ಮ ಮುಂದಿರುವ M. A ಪರೀಕ್ಷೆಯಲ್ಲಿಯೂ ಸಹ ಶ್ರೇಣಿ ಪಡೆದು (class) ಉತ್ತೀರ್ಣರಾಗಿ ತಮ್ಮ ಹಿಂದಿನವರಂತೆಯೇ ಕಾಲೇಜಿನಲ್ಲಿ ಲೆಕ್ಚರರಾಗಿ ಬಡ್ತಿ ಹೊಂದಲಿ! ಸರಮೂರ್ತಿಗಳು ತಮ್ಮನ್ನು ಅನುಗ್ರಹಿಸಲಿ! ಎಂದು ಹಾರೈಸುತ್ತ, ಮುಖ್ಯೋಪಾಧ್ಯಾಯರನ್ನೂ "ಪ್ರಾಥಜಿರೆ"ಯವರನ್ನೂ ಮತ್ತು ನಮ್ಮ ವಿಶ್ವವೈದಿದ ಇತರ ಅಧ್ಯಾಪಕರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ನೇತಾಜಿಯ ನೆನಪು

(ಎಂಟನೇ ಪುಟದಿಂದ)

ಹೋರಿನಲ್ಲಿ ಕರೆಯಲೇ ಬೇಕು. ಅನ್ನುವ ದಾದರೆ; ನೀವದನ್ನು 'ಬೋಸೋನ್ಕೈಸ್" ಎಂದು ಕರೆಯು ಬಹುದು." ಎಂದು ನಗುತ್ತಾ ನುಡಿದರು.

ಶ್ರೀ ವಾಲ್ಟರ್ ನಿರುತ್ತರರಾದರು. ಅದರೂ ಅವರೊಬ್ಬನು ಠಕ ಪತ್ರಕರ್ತರೆಂಬುದನ್ನು ಉಪೇಕ್ಷಿಸುವಂತಿಲ್ಲ. ಇಂತಹ ವ್ಯಕ್ತಿಗಳು ನಿರುತ್ತರರಾಗುವುದು ತೀರಾ ಅಪರೂಪ ಕೂಡಲೇ ವಾಲ್ಟರ್ ಅವರು ಇನ್ನೊಂದು ಪ್ರಶ್ನೆಯನ್ನೆತ್ತಿದರು. 'ಸ್ವತಂತ್ರ ಭಾರತದಲ್ಲಿ ತಾವು ಹಿಂದೂ ಮುಸ್ಲಿಂ ವಿವಾದವನ್ನು ಹೇಗೆ ಬಗೆ ಹರಿಸುವಿರಿ?' ಎಂದು.

'ಇದಂತೂ ತೀರಾ ಸುಲಭವಾಗುವುದು. ಹಿಂದೂ ಮುಸ್ಲಿಂ ವಿವಾದದ ವಾದವೇನುವುದನ್ನೇ ನಾನು ಕಾನೂನಿನನುಸಾರವಾಗಿ ಪರಿಹರಿಸುತ್ತೇನೆ. ವಿವಾದ ನಿಲ್ಲುವಾಗ ಸಮಸ್ಯೆಗೆ ಸ್ಥಾನವೇ ಇಲ್ಲವಲ್ಲವೇ?' ಎಂದು ಉತ್ತರ ಬಂತು.

ಈಗಂತೂ ಶ್ರೀ ವಾಲ್ಟರ್ ಮೇಯರ್ ಸಂಪೂರ್ಣ ನಿರುತ್ತರರಾದರು.

ಂ ಂ ಂ ಂ

1944ರ ಜುಲೈ ತಿಂಗಳ ಒಂದು ಭಟನೆ ನೇತಾಜಿ ಬರ್ಮಾದ ರಾಜಧಾನಿ ರಂಗೂನಿನಲ್ಲಿದ್ದರು. ಯುದ್ಧ ಭಯಂಕರವಾಗಿ ನಡೆಯುತ್ತಿತ್ತು. ವಿಮಾನ ಮೂಲಕ ಶತ್ರುಗಳಿಂದ ಬಾಂಬುಗಳಿಂದಾಗಿ ಹಲವಾರು ಮಂದಿ ಜಪಾನೀ ಸೈನಿಕ ಗಾಯಾಳುಗಳು ಆಸ್ಪತ್ರೆಯನ್ನು ಸೇರುತ್ತಿದ್ದರು. ಜಪಾನೀಯರೊಡನೆ ನಮ್ಮ ಸ್ನೇಹವಿದ್ದುದರಿಂದ ಒಂದು ಜಪಾನೀ ಸೈನಿಕಾಸ್ಪತ್ರೆಯನ್ನು ನಿರೀಕ್ಷಣೆಗೈಯುವ ನಿರ್ಧಾರವನ್ನು ನೇತಾಜಿಯವರು ಕೈಗೊಂಡರು. ಒಂದು ದಿನ ಜಪಾನೀ ಸೈನ್ಯದ ಉಚ್ಚ ಕಾರ್ಯಾಲಯಕ್ಕೆ ಆಜಾದ್ ಹಿಂದ್ ಸರಕಾರದ ರಾಷ್ಟ್ರಪತಿ ನೇತಾಜಿ ಸುಭಾಸ್‌ಚಂದ್ರ ಬೋಸ್ ಅವರು ಇಂತಹದೊಂದು ಆಸ್ಪತ್ರೆಯನ್ನು ನಿರೀಕ್ಷಣೆಗೈಯಲು ನಿರ್ಧರಿಸಿದ್ದಾರೆ ಎಂದು ಮುನ್ಸೂಚನೆ ಕಳುಹಿಸಲಾಯಿತು.

ಈ ಸೂಚನೆ ಕೈ ಸೇರಿದಾಗ ಜಪಾನೀ ಜನರಲ್ ಒಂದುಕ್ಷಣ ದಂಗಾಗಿಬಿಟ್ಟ. ಏಕೆಂದರೆ ಒಂದು ಮಿತ್ರರಾಷ್ಟ್ರದ ರಾಷ್ಟ್ರಪತಿಯನ್ನು ಸ್ವಾಗತಿಸುವುದೆಂದರೆ ಅದೇನೂ ಅಂತಹ ಲಘು ವಿಷಯವಲ್ಲವಲ್ಲವೇ? ಅವನು ಕೂಡಲೇ ಆಸ್ಪತ್ರೆಯನ್ನು ಒರಣಗೊಳಿಸಿ ನೇತಾಜಿಯವರ ಸ್ವಾಗತಕ್ಕೆ ಮತ್ತು ಸಂಮಾನಕ್ಕಾಗಿ ಕರಿಯಾದ ವಿವರ್ಪಾಡು ಮಾಡಿದನು.

ನಿಶ್ಚಿತ ದಿನದಂದು ನೇತಾಜಿ ಆಸ್ಪತ್ರೆಗೆ ಹೋದರು. ಇದೆ ಆಸ್ಪತ್ರೆ ಕನ್ನಡಿಯಂತೆ ಮಿರುಗುತಿತ್ತು. ಆಸ್ಪತ್ರೆಯು ಮುಖ್ಯಾಧಿಕಾರಿಯಾದ ಒಬ್ಬ ಜಪಾನೀ ಕರ್ನಲ್ ನೇತಾಜಿಯವರನ್ನು ಸ್ವಾಗತಿಸಿ ಆಸ್ಪತ್ರೆಯನ್ನು ತೋರಿಸಲಾರಂಭಿಸಿದನು. ಅಲ್ಲಿ ಬಹಳಷ್ಟು ಮಂದಿ ಗಾಯಾಳುಗಳನ್ನು ಕಂಡು ನೇತಾಜಿಯವರು ತನ್ನ ದೆ ಭಾಷೆಯನ್ನು ಕರೆದು "ಏನಪ್ಪಾ, ಬಹಳ ನೋವು ಇದೆಯೊ?" ಎಂದು ಜಪಾನಿಯಲ್ಲಿ ಹೇಗೆ ಹೇಳುವುದು ಎಂದು ವಿಚಾರಿಸಿದರು.

'ಈ ತಾವಿ ಮೂಸೂಕಾ?" ಎಂದು ಅವನು ತಿಳಿಸಿದ.

ಸರಿ ಮತ್ತೆ, ನೇತಾಜಿ ಎಲ್ಲಾ ಗಾಯಾಳುಗಳೊಂದಿಗೆ ವಿಚಾರಿಸುತ್ತಾ ಹೊರಟರು 'ಈ ತಾವಿ ಮೂಸೂಕಾ?" ಎಂದು.

ಬಹಳ ಮಂದಿ ಗಾಯಾಳುಗಳ ಕೈಕಾಲುಕಿ ನೇತಾಜಿಯವರು "ಊವ ಊಂಟಲ್ಲಿ ನಿನಗೆ ಗಾಯವಾಯಿತು? ಬಹಳ ಪೆಟ್ಟಾಗಿದೆಯೇ? ಈಗ ಹೇಗಿದ್ದಿ?" ಎಂದೆಲ್ಲಾ ಸುಖ ದುಃಖ ವಿಚಾರಿಸುತ್ತಿದ್ದರು. ಕೆಲವು ಮಂದಿ ಗಾಯಾಳುಗಳ ಹಾಸಿಗೆಯ ಪಕ್ಕದಲ್ಲೇ ಕುಳಿತು ಅಂತರಲ್ಲಿ ಧೈರ್ಯ ಉತ್ಸಾಹ ತುಂಬುವಂತಹ ಮಾತು ಹೇಳುತ್ತಿದ್ದರು.

ಈ ಗಾಯಾಳುಗಳಲ್ಲಿ ಒಬ್ಬ ಜಪಾನೀ ಮೇಜರ್ ಇದ್ದನು. ಅವನ ಎಡಗೈ ಯುದ್ಧದಲ್ಲಿ ತುಂಡಾಗಿ ಹೋಗಿತ್ತು. ರಕ್ತ ಸ್ರಾವದಿಂದಾಗಿ ಅವನು ತೀರಾ ನಿಶ್ಯಕ್ತನಾಗಿದ್ದನು. ಅದರೂ ಅವನು ತನ್ನ ಹಾಸಿಗೆಯಿಂದ ಎದ್ದು ನಿಂತು ನೇತಾಜಿಯವರಿಗೆ ವಂದಿಸಿದನು. ಅನಂತರ "ಮಯಾ ಮೊನ್ಯ ನನಗಿದು ಅತೀವ ಅಭಿಮಾನವೆನಿಸುತ್ತಿದೆ ನಿಮ್ಮ ವೀರ ಸೈನಿಕರ ಜೊತೆಯಲ್ಲಿ ಹೋರಾಡುತ್ತಾ ಹೋರಾಡುತ್ತಾ ನನ್ನ ಒಂದು ಕೈ ತುಂಡಾಯಿತು. ಈಗ ಇನ್ನೊಂದು ಕೈ ನಿಷ್ಕ್ರೋಡನೆ ಕಸ್ತಲಾಭವ ಗೈಯುತ್ತಿದೆ." ಎಂದನು.

ಅವನ ಮಾತನ್ನು ಕೇಳಿ ನೇತಾಜಿಯವರ ಕಣ್ಣುಗಳು ತುಂಬಿ ಕೊಂಡುವು. ಅದನ್ನು ಕಂಡ ಇತರ ಜಪಾನೀ ಸೈನಿಕರೂ ಗದ್ಗದಿತರಾಗಿ ಕಣ್ಣೊರಸಿಕೊಂಡರು.

ಂ ಂ ಂ ಂ

1945ರ ಮಾರ್ಚ್ ತಿಂಗಳ ವಿಷಯ ಇದು. ಜಪಾನೀಸೈನ್ಯ ಎಲ್ಲೆಡೆಗಳಲ್ಲಿಯೂ ಸೋಲನ್ನು ಅನುಭವಿಸುತ್ತಿತ್ತು. ಪೂರ್ವ ಏಶಿಯಾದಲ್ಲಿ ವಾಸಿಸುತ್ತಿದ್ದ ಭಾರತೀಯರಂತೂ ತೀರಾ ಉದ್ವಿಗ್ನರಾಗಿದ್ದರು. ಆದುದರಿಂದ ಭಾರತೀಯರ ಸಾಹಸವನ್ನು ಜಾಗೃತವಾಗಿಡಲಿಕ್ಕಾಗಿ ದುಡಿಯುವ ಕಾರ್ಯ ಆಜಾದ್ ಹಿಂದ್ ಸರಕಾರದ್ದಾಗಿತ್ತು. ಕೂಡಲೇ ನೇತಾಜಿಯವರು ಆಜಾದ್ ಹಿಂದ್ ಸರಕಾರದ ಪ್ರಚಾರ ವಿಭಾಗಕ್ಕೆ — 'ಜಪಾನೀಯರ ಸೋಲು ಗೆಲುವುಗಳೊಂದಿಗೆ ಆಜಾದ್ ಸರಕಾರದಲ್ಲಿ ಸಂಬಂಧವಿಲ್ಲ. ಭಾರತೀಯ ಸ್ವಾಧೀನತಾಸಂಗ್ರಾಮ ನಿರಂತರವಾಗಿ ಮುಂದುವರಿಯುವುದು ಎಂಬುದನ್ನು ಎಲ್ಲಪತ್ರಿಕೆಗಳೂ ಪ್ರಚಾರಗೈಯಬೇಕು' ಎಂದು ಆದೇಶವಿತ್ತರು.

ಆಗ ನಾನು ಬೆಂಕಾಕಿನಿಂದ ಪ್ರಕಟವಾಗುತ್ತಿದ್ದ ಸೈನಿಕ "ಆಜಾದ -ಹಿಂದ್" ಪತ್ರಿಕೆಯ ಸಂಪಾದಕನಾಗಿದ್ದೆ.

ಜಪಾನೀಯರಿಗೆ ಈ ವಿಷಯ ಒಗ್ಗಲಿಲ್ಲ. ಪರಿಣಾಮತಃ 1945ರ ಆರಂಭದ ಒಂದು ದಿನ ಜಪಾನೀ ಪ್ರಚಾರ ಶಾಖೆ "ಹ—ಕಾರಿ—ಕಿ—ಸಾನ್"ದ ಒಬ್ಬ ಅಧಿಕಾರಿ ಮತ್ತು ಜಪಾನಿನಲ್ಲಿ ನನ್ನ ಗಳಿಯರಾಗಿದ್ದ ಒಬ್ಬ ಮೇಜರ್ "ಆಜಾದ್ ಹಿಂದ್" ದೈನಿಕದ ಕಾರ್ಯಾಲಯಕ್ಕೆ ಬಂದು, ಮುಂದೆ ಆಜಾದ್ ಹಿಂದ್ ಪ್ರಕಟವಾಗುವುದಕ್ಕೆ ಮುಂಚೆ ನಮಗದನ್ನು ತೋರಿಸಬೇಕು ಎಂದು ಸೂಚನೆಯಿತ್ತರು. ನಾನು ಅವರ ಸೂಚನೆಯನ್ನು ಒಪ್ಪಲಿಲ್ಲ. ಪೂರ್ತಿವಲ್ಲ, ಆಜಾದ್ ಹಿಂದ್ ಸರಕಾರದ ಮೇಲೆ ಜಪಾನೀ ಸರಕಾರ ಯಾವುದೇ ಬಗೆಯ ನಿಯಂತ್ರಣ ಹೇರುವುದು ಸಾಧ್ಯವಿಲ್ಲ ಎಂದು ಅವರಿಗೆ ವಿವರಿಸಿ ಹೇಳುವ ಪ್ರಯತ್ನ ಗೈದೆ. ನಾವು ನಮ್ಮದೇ ಆದ ಸ್ವತಂತ್ರ ಸರಕಾರ ಎಂಬ ಪ್ರಚಾರ ಶಾಖೆಯ ಆದೇಶಕ್ಕನುಸಾರವಾಗಿದುಡಿಯಬೇಕಾಗಿರುವುದರಿಂದ ಆಜಾದ್ ಹಿಂದ್ ದೈನಿಕದ ಸಂಪಾದಕೀಯವನ್ನು ಮುಂಚಿತವಾಗಿ ಯಾರಿಗೂ ತೋರಿಸಲಾಗುವುದಿಲ್ಲ ಎಂದು ವಿವರಿಸಿ ಹೇಳಿದೆ. ಆದರೂ ಜಪಾನೀ ಮೇಜರ್ ನನ್ನ ಮಾತನ್ನು ಒಪ್ಪಿ ಹೋಗಲಿಲ್ಲ. ಆದುದರಿಂದ, ಸಂಪಾದಕೀಯವನ್ನು ಜಪಾನೀ ಸರಕಾರಕ್ಕೆ ತೋರಿಸಿ ಅವರ ಒಪ್ಪಿಗೆ ಪಡೆದು ಅನಂತರ ಪ್ರಕಟಿಸುವಷ್ಟಕ್ಕಿಂತ ಪತ್ರಿಕೆಯನ್ನೇ ನಿಲ್ಲಿಸಿ ಬಿಡುವುದು ಒಳ್ಳೆಯದು ಎಂದು ನಿಶ್ಚಯಿಸಿ ನಾನು ಹಾಗೇ ಮಾಡಿದೆ. ಕೂಡಲೇ ನೇತಾಜಿಯವರಿಗೂ ಟೆಲಿಗ್ರಾಮು ಮೂಲಕ ಈ ವಿಷಯ ತಿಳಿಸಿಬಿಟ್ಟೆ.

ಮರುದಿನ ಯಾವುದೋ ಅವಶ್ಯಕ ಕಾರ್ಯಕ್ಕಾಗಿ ನೇತಾಜಿಯವರು ಬೆಂಕಾಕಿಗೆ ಬಂದಿದ್ದರು. ನಾನು ಕೂಡಲೇ ಅವರನ್ನು ಕಾಣಲು ಹೋದೆ. ಹಿಂದಿದ ದಿನ ನಮ್ಮ ಕಾರ್ಯಾಲಯಕ್ಕೆ ಬಂದಿದ್ದ ಮೇಜರ್ ಕೂಡ ಅಲ್ಲಿದ್ದರು. ನೇತಾಜಿಯವರು ಎಲ್ಲರಿಗಿಂತ ಮುಂಚೆ ನನ್ನನ್ನು ತಮ್ಮ ಕೋಣೆಗೆ ಕರೆಸಿ ಕೊಂಡರು. ಅನಂತರ ನಿನ್ನೆ ಸೂಚನೆಯಿಕ್ಕಿದೆ. ನೀನಿಟ್ಟಿಹೆಜ್ಜೆ ಮತ್ತು ನಿನ್ನ ತೀಕ್ಷ್ಣ ನಿರ್ಧಾರದಿಂದ ನನಗೆ ತುಂಬ ಆನಂದವಾಗಿದೆ ನಾವು ಹೀಗೆಯೇ ನಡೆದು ತೋರಿಸಬೇಕಾಗಿದೆ ನಿನ್ನ ಬಗ್ಗೆ ನನಗೆ ಅಭಿಮಾನವಿದೆ." ಎಂದು ನುಡಿದರು.

ಅನಂತರ ತವರು ಜಪಾನೀ ಮೇಜರನನ್ನು ಒಳಗೆ ಕರೆದು—"ಥ್ಯಾಂಕ್ಯೂ ಸ್ವಾತಂತ್ರ್ಯ ಸಂಗ್ರಾಮ 1941ರಲ್ಲಿ ಅರಂಭವಾದುದಲ್ಲ ಎಂಬುದನ್ನು ನೀವು ಅರಿತುಕೊಳ್ಳಬೇಕು. ಒಂದೂಸ್ಮೈ ನಾವು ಭಾರತೀಯರು ಜಪಾನೀ ನೀತಿಯನ್ನು ಆವಲಂಬಿಸಿದ್ದುದಾದರೆ, ಭಾರತೀಯರ ಮೇಲೆ ಅದು ಬಹಳ ಕೆಟ್ಟ ಪರಿಣಾಮವನ್ನು ಬೀರಬಲ್ಲುದು. ಒಂದೊಮ್ಮೆ ಜಪಾನೀಯರು ಈ ಯುದ್ಧದಲ್ಲಿ ಸೋತು ಯೋದರೆ ನಮಗೆ ತೀರಾ ದುಃಖವೇ ತು. ಆದರೆ ಈ ಆಪತ್ತಿನಿಂದಾಗಿ ಭಾರತೀಯರ ಸಾಹಸ ಸ್ಫೈರ್ಯಗಳನ್ನು ಕೆಡೆ ಹಿಡಿಯಲು ನಾವು ಸಿದ್ಧರಿಲ್ಲ ಎಂಬುದನ್ನು ನೀವು ತಿಳಿದುಕೊಳ್ಳಬೇಕು? ಎಂದು ಬಿಟ್ಟರು.

ಶ್ರೀ ಕೆ. ಕೆ. ಕೆಟ್ಟಿ ಎಂ.ಎಲ್. ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವೃಥಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ಸಚಿವಾರತ ಬುಕ್ ಶಿಪೊ, ಉಡುಪಿ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಸಿ ಐ. ಯನರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ

ವೈಷ್ಣವ ತಿರುಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲನಾದ ಮನಸ್ಸನ್ನು ಪರಿಭಕ್ತವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಪ್ರೇರಿಪುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಿಯಾಯಿತಿಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ನ್ಯಾಯ ಮತ್ತು ಅಹಿಂಸೆ

(ಏಳನೇ ಪುಟದಿಂದ)

ಪೂರ್ಣ ಇಲ್ಲದ ಎಲ್ಲವನ್ನೂ ತಿರಸ್ಕರಿಸಿದ್ದು, ಕೇವಲ ಸನ್ಯಾಸಿಗೂಡಾತನು ಖಂಡಿತವಾಗಿ ಯೂ ಅಹಿಂಸೆಯನ್ನು ಪೂರ್ಣವಾಗಿ ಆಚರಿಸಲು ಶಕ್ತರಾಗಿರುವರು ಎಂದು ಗಾಂಧೀಜಿಯವರು ಹೇಳಿದ್ದಾರೆ. ಆತನು ಅದರಿಂದ ತನಗೆ ಅಥವಾ ಆಧ್ಯಾತ್ಮಿಕ ಲಾಭವನ್ನೂ ಪಡೆಯಬಹುದು.

ನಮ್ಮ ಜನರಿಂದು ಅತ್ಯಸಹಾರ್ಯವಾದ ಆದರ್ಶವನ್ನು ಬೋಧಿಸಿದರೆ, ಅವರಿದನ್ನು ಸ್ವೀಕರಿಸುವುದಿಲ್ಲ. ನಮ್ಮನ್ನೇನೋ ಗೌರವಿಸಬಹುದು, ಆದರೆ ಆ ತತ್ವವನ್ನು ಗಾಳಿಗೆ ತೂರುತ್ತಾರೆ. ಅವರು ಬಾಯಲ್ಲಿ ಆ ತತ್ವವನ್ನು ಹೊಂದುವೇಳೆ ಒಪ್ಪಿಕೊಳ್ಳಲೂ ಬಹುದು. ಆದರೆ ಅದು ವ್ಯವಹಾರದಲ್ಲಿಳಿಯುವುದಿಲ್ಲ. ಆದರಿಂದ ಅವರು ಕಷ್ಟಗಳಾಗುವರೇಹೊರತು. ಫಲವೇ ಇಲ್ಲ.

ಅಹಿಂಸೆಯೇ ಬೋಧಿಸಲ್ಪಡುವ ಸಮಾಜದಲ್ಲಿ ಅಹಿಂಸೆಯು ಕಾರ್ಯಾಚರಣೆಗೆ ಬಾರದಿದ್ದರೆ, ನೈತಿಕವಾದ ನಿರ್ಮಿತ ಪ್ರದೇಶವೆಂಟಾಗಿ, ಜನರು ತೀರಾ ಕೆಳಮಟ್ಟಕ್ಕಿಳಿಯುವರು. ಏಕೆಂದರೆ ಅವರಿಗೆ ಮೂಲ ತಳಹದಿಯನ್ನು ಬೋಧಿಸುವವರಿಲ್ಲ. ಅನ್ಯವಾದ ಕಾರ್ಯ ಆದರ್ಶ ತತ್ವಗಳ ಪೂತುಗಳನ್ನೇ ಕೇಳಿ ಕಿವಿ ಬಡ್ಡಾದವರು, ವ್ಯವಹಾರ್ಯವಾದ ತತ್ವವನ್ನಪ್ಪಿದರೂ ಆಚರಿಸೋಣ ಎಂದು ಭಾವಿಸುವುದಿಲ್ಲ. ಎಲ್ಲವನ್ನೂ ತೆಗೆದೊಸೆದು, ಸ್ವೇಚ್ಛಾಚಾರ ಪರರಾಗುತ್ತಾರೆ.

ಗಾಂಧೀಜಿಯವರನೇತೃತ್ವದಲ್ಲಿ ಸತ್ಯ, ಅಹಿಂಸೆಗಳಿಂದ ಪಡೆದ ಸ್ವಾತಂತ್ರ್ಯ ಸಡೆದನಾವಿಂದು ಕೇವಲ ಅಹಿಂಸೆ ಗಳನ್ನು ಮಾತ್ರವಲ್ಲ, ಪ್ರಾಮಾಣಿಕತೆ ಮತ್ತು ನ್ಯಾಯವೆಂಬ ಮೂಲಭೂತ ನಿಯಮಗಳನ್ನೂ ಗಾಳಿಗೆ ತೂರಿ ಕಾಡು ಜನರ ಸ್ಥಿತಿಗೆ ಬಂದಿಳಿಯುವ ಹವಣಿಕೆಯಲ್ಲಿದ್ದೇವೆ. ನ್ಯಾಯದ ತಳಹದಿಯಲ್ಲಿಯಿದ್ದಿಂದಲೇ ಸ್ವಾತಂತ್ರ್ಯ ಪಡೆದ ಸಂಯುಕ್ತ ಅಮೇರಿಕಾ ದೇಶವು,ನ್ಯಾಯ ಮತ್ತು ಪ್ರಾಮಾಣಿಕತೆಗಳನ್ನು ಸವ ಜದಲ್ಲಿ ಸ್ಥಾಪಿಸಿ,ಇಂದು ಇಂತಹ ಉಜ್ಜ್ವಲಯದ ಸ್ಥಿತಿಗೆ ಬಂದು ನಿಂತಿದೆ.

ಏಂಕೆದರೆ ಅಲ್ಲಿಯ ಜಂದಿನ ಮುಖಂಡರು, ಮೂಲಭೂತವಾದ, ಕನಿಷ್ಠ ನಿಯಮಗಳಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾನತೆ, ನ್ಯಾಯ, ಪ್ರಾಮಾಣಿಕತೆ ಮೊದಲಾದ ತತ್ವಗಳನ್ನೇ ಪ್ರತಿಪಾದಿಸಿದರು. ಅದರ ಅವಶ್ಯಕತೆಯನ್ನು ಜನಮನಗಂಡು ಸ್ವೀಕರಿಸಿದರು. ಆ ತಳಹದಿಯಲ್ಲೇ ಅವರು ಕಷ್ಟಪಟ್ಟು ದುಡಿದು ಜಗತ್ತಿನಲ್ಲೇ ಇಂದು ಅತಿ ಬಲಿಷ್ಠರಾಗಿದ್ದಾರೆ. ಅವರು ಸಾಮಾಜಿಕ ಮತ್ತು ನೈತಿಕ ವ್ಯವಹಾರಗಳಲ್ಲಿ ಬಹಳ ಕೆಡುಕಾದ್ದು ತುಂಬಾ ಇರಬಹುದು—ಆದರೆ ಈ ಮೂಲಭೂತ ನಿಯಮವನ್ನವರು ನಮಗಿಂತ ಎಷ್ಟೋ ಚೆನ್ನಾಗಿ ಪಾಲಿಸುತ್ತಿದ್ದಾರೆ. ಗಗನಕ್ಕೇ ಏಣಿಯಿಟ್ಟ ನಾವಿಂದು ಪಾತಾಳದಲ್ಲಿದ್ದೇವೆ.

ಆದ್ದರಿಂದ ಅಹಿಂಸೆಯನ್ನು ನಾವು ಪುರಸ್ಕರಿಸೋಣ, ಶ್ರೀಜಸೋಣ. ಆ ತತ್ವವನ್ನಾಚರಿಸುವಾತನನ್ನು ಮಹಾಪ್ರಭುವೆಂದು ಗೌರವಿಸೋಣ. ಆದರೆ ನಮ್ಮ ಜೀವನದಲ್ಲಿ ಕಡಿಮೆಯೆಂದರೂ ನ್ಯಾಯವನ್ನು ಪರಿಪಾಲಿಸೋಣ. ವಿರಳ ಆದರ್ಶವಾಗಿ ಅಹಿಂಸೆಯಿರಲಿ. ಆದರೆ ಅಹಿಂಸೆ ಎಂದು ಸಾರಿ,ಅನ್ಯಾಯವನ್ನು ಆಚರಿಸುವ ದುರ್ನೀತಿ ಮಾತ್ರ ನಮಗೆ ಒಬಾರದು (ರಕ್ತಿಯಿದ್ದವರು ಅಹಿಂಸೆಯನ್ನೇಪಾಲಿಸಲಿ! ಆದಕ್ಕೂ ನಾವು ಅರ್ಪಿದ ನೀಡೋಣ)

ನ್ಯಾಯವನ್ನಾಚರಿಸುವುದರ ಮಹತ್ವವನ್ನು ಜಿಕ್ಕಪ್ರಾಯದಲ್ಲೇ ಮಕ್ಕಳಿಗೆ ಬೋಧಿಸುವುದು ಅವಶ್ಯವಿದೆ. ನೀತಿಯು ಇತರ ವಿಷಯಗಳೊಂದಿಗೆ ನ್ಯಾಯವೆಂಬ ತತ್ವವು ಶಾಲಾ ಕಾಲೇಜುಗಳಲ್ಲಿ ಕಲಿಸಲ್ಪಡಬೇಕು. ಅದುವೇ ಸಮಾಜದ ಅತಿ ಭದ್ರವಾದ ಆಧಾರವೆಂಬುದನ್ನು ಎಲ್ಲರಿಗೆ ಮನಗಾಣಿಸಬೇಕು.

ಹಿರಿಯರೂ, ಅಧಿಕಾರಿಗಳೂ, ರಾಜಕಾರಣಿಗಳೂ,ರಾಷ್ಟ್ರೀಯ ಮುಖಂಡರೂ ಈ ಮೂಲಭೂತ ತತ್ವವನ್ನು ಆಚರಣೆಗೆ ತರಲೇ ಬೇಕು. ಯಾವ ಅಧಿಕಾರದ ಆಸೆಯೂಗಲೀ ಧನದ ಮೋಹವಾಗಲೀ ಇದಕ್ಕೆ ಅಡ್ಡಿಯಾಗಬಾರದು.

ಮೇಲ್ಕಟ್ಟದಲ್ಲೇ ಇದನ್ನು ಸಕ್ರಿಯವಾಗಿ ಪರಿಣಮಿಸಿದಾಗ ಭಯ ಮತ್ತು ವ್ಯಕ್ತ ವ್ಯಾಜದ ಲವಲೇಶವಿಲ್ಲದ ಕಾರ್ಯಗತಗೊಳಿಸಬೇಕು. ಕೆಳಮಟ್ಟದಲ್ಲೂ ಅದು ಸರಿಯಾಗಿ ಆಚರಿಸಲ್ಪಡಲು ಸರಕಾರವೂ, ದೇಶದ ಮುಖಂಡರೂ, ಸಮಾಜ ಸೇವಕರೂ, ಸಮಾಜದ ಮುಖಂಡರೂ, ಉಪಾಧ್ಯಾಯರೂ, ಸಿಕ್ಷಕರುಗಳೂ ಟೊಂಕ ಬಿಗಿದು ಯತ್ನಿಸಬೇಕು. ನ್ಯಾಯದ ನಿಯಮವು ಘಟನೆಯು ಪವಿತ್ರ ಹುಸ್ತಕದಲ್ಲಿ ಮಾತ್ರ ನೀ ಇದ್ದು ಪ್ರತಿ ವಿಷಯವನ ಮಸ್ತಕದಲ್ಲೂ, ಕಾರ್ಯದಲ್ಲೂ ಇಲ್ಲವಾದರೆ ಪ್ರಜಾಸ್ವಭುತ್ವದ ದಿನಗಳನ್ನು ನಾವು ಎಣಿಸುತ್ತಿದ್ದೇವೆ ಎಂದರ್ಥ. ಏಕೆಂದರ ನ್ಯಾಯದಿಂದ ಬಿಗಿಯಲ್ಪಡದ ಸಮಾಜದಲ್ಲಿ ಅರಾಜಕತೆಯು ಕರಾಳ ನರ್ತನವನ್ನು ಪ್ರಾರಂಭಿಸುವುದು. ಆಗ ಮುಂದಿನ ಗತಿ ಒಂದೋ ಬಲಪಕ್ಷೀಯ ಸರ್ವಾಧಿಕಾರ, ಇಲ್ಲವೇ ಎಡಪಕ್ಷೀಯ ಸರ್ವಾಧಿಕಾರ.

ಭಾರತೀಯರಲ್ಲಿ ಬುದ್ಧಿ ಸಾಮರ್ಥ್ಯವಿದೆ. ತ್ಯಾಗದ ಮಹೋನ್ನತ ಧನವಿದೆ. ಶೀಲಸಂಪ್ರದಾಯವಿದೆ ಪ್ರಜಾಪ್ರಭುತ್ವದ ಪರಂಪರೆಯಿದೆ. ಖಂಡಿತವಾಗಿಯೂ ನ್ಯಾಯವನ್ನು ನಮ್ಮೆಲ್ಲರ ರಕ್ತಗತವಾಗಿ, ಅದು ನಮ್ಮ ಸುಭದ್ರ ತಳಹದಿಯೂಗವಂತೆ ನಾವು ಮಾಡಬಲ್ಲುದು.

ಸದಾ ಜಗಳ ಮಾಡುವ ಪ್ರವೃತ್ತಿಯವರಿಗೆ ನ್ಯಾಯವೆಂಬ ಮಾತನ್ನು ಕೇಳಿ, ಜಗಳ ಮಾಡಲು ಅನುವು ದೊರಕಿತು ಎಂದು ಕಾಣಲೂ ಬಹುದು. ಆದರೂ ಜಗಳ ಗಂಟಿಕನೆಯ ಎಂದೂ ನ್ಯಾಯವಲ್ಲ. ಮತ್ಸರವು ಎಂದೂ ನ್ಯಾಯವಲ್ಲ.

ಪ್ರತಿಯೊಬ್ಬ ವ್ಯಕ್ತಿಯೂ ಪವಿತ್ರನಾದವನೇ. ಪ್ರತಿಯೊಬ್ಬನಿಗೂ ಸಮಾನ ಅವಕಾಶಗಳ ನೆಲೆಯಲ್ಲಿ ಪ್ರಗತಿಯೊಂದವ ಹಕ್ಕಿದೆ. ಪ್ರತಿಯೊಬ್ಬನೂ ಸ್ವತಂತ್ರನು ಎಂಬುದಾಗಿ ನ್ಯಾಯವು ತುದಿಗಾಲಲ್ಲಿ ನಿಂತು ಸಾರುತ್ತಿದೆ "ನೀನೂ ಬಾಳು; ಅನ್ಯರನ್ನೂ ಬಾಳಲು ಬಿಡು" ಎಂಬುದೇ ನ್ಯಾಯದ ನಿಲುಮೆ.

ನ್ಯಾಯ ವೆಂಬ ಮಾತನ್ನು ನಾವು ಸ್ವೀಕರಿಸುವಾಗಲೇ ವಿಶಾಲ ತಳಹದಿಯ ಪ್ರೇಮದ ಹುನ್ನಲೆಯನ್ನಿಟ್ಟುಕೊಳ್ಳುವುದು ಅತ್ಯುತ್ತಮ ಫಲವನ್ನು ನೀಡುವುದು. ಸಮಾಜದ ಸರ್ವಾಂಗೀಣ ಉನ್ನತಿಗೂ ಇದು ಸಹಾಯಕವಾಗುವುದು. ಇಲ್ಲವಾದರೆ ಸುದಾರಕಾಲವೂ ಇತರರ ತಪ್ಪನ್ನೇ ಎಣಿಸುತ್ತಾ, ಸ್ವಸಮರ್ಥನೆ ಮಾಡುತ್ತಾ ಕುಳಿತಿರುವ ಪರಿಸ್ಥಿತಿ ಬರಬಹುದು. ಅದು ಹೋಗಬೇಕು. ತನ್ನ ತಪ್ಪು ಕಾಣಬೇಕು. ತನ್ನ ತಪ್ಪನ್ನು ನೀಗಿಸಿ, ತನ್ನನ್ನು ತಾನು ವಿಕಾಸಪಡಿಸಿಕೊಳ್ಳುವ ಯತ್ನವನ್ನೂ ಮಾಡಬೇಕು. ತನ್ನ ಹಕ್ಕು ಬಾಧ್ಯತೆಗಳಿಗೆ ಬಾಧಕವಾಗಬಲ್ಲದು, ದೇಶ ಹಾಗೂ ಸಮಾಜಕ್ಕೆ ಧಕ್ಕೆ ಬರುವಲ್ಲಿ ನೂತ್ರವೇ ನಾವು ಇತರರ ತಪ್ಪನ್ನು ನೋಡಬೇಕಾಗುವುದು.

ಇಂದು ನ್ಯಾಯವೆಂಬ, ಸರ್ವರೂ ಒಪ್ಪಲೇ ಬೇಕಾದ ನಿಯಮವು ವ್ಯಕ್ತಿಯ ಮತ್ತು ಸಮೂಹದ ರಕ್ತಗತವಾಗಿ ಬಿಟ್ಟರೆ, ನಮ್ಮ ರಾಷ್ಟ್ರವು ನೂರ್ಮಡಿ ಶಕ್ತಿಯಿಂದ ಪ್ರಗತಿಯೆಡೆಗೆ, ಸಮೃದ್ಧಿಯೆಡೆಗೆ, ಸುಖಶಾಂತಿಯೆಡೆಗೆ ಮುಂದೆ ಸಾಗುವುದು.

ಏಕೆಂದರೆ ಅನ್ಯಾಯದ ವಾತಾವರಣದಲ್ಲಿ ಸರಕಾರವು ಮಾಡುವ ಯಾವುದೇ ಜನಹಿತ ಯೋಜನೆಗಳೂ ಸಾಮಾನ್ಯ ಜನರ ಸುಖದಲ್ಲಿ ಪರ್ಯಾವಸಾನಗೊಳ್ಳುವುದಿಲ್ಲ ಯಾವುದೋ ಕೆಲವು ವ್ಯಕ್ತಿಗಳ ಬೇಂಕ್ ಶಿಲ್ಕು ನೂತ್ರವೇ ವೃದ್ಧಿಗೊಳ್ಳುವುದು. ಹೊರತು ಫಲವೇನಿಲ್ಲ. ಮರುಭೂಮಿಯಲ್ಲಿ ಹೊಸೆದ ನೀರು ಮರಳೊಳಗೆ ಇಂಗಿ ಮರೆಯಾಗುವಂತೆ ನ್ಯಾಯವಿಲ್ಲದ ಸಮಾಜದಲ್ಲಿ ಯಾವ ಯೋಜನೆಯೂ ಫಲಕಾರಿಯಾಗ ವುದಿಲ್ಲ. ಒಬ್ಬರನೊಬ್ಬರು ನುಂಗಿ ಬಿಡುವ ಹವಣಿಕೆಯಲ್ಲೇ ಇರುತ್ತಾರೆ—ಯಾರಿಗೂ ಭದ್ರತೆಯಿಲ್ಲ.

ಇಂದು ನಮಗೆ ಶಕ್ತಿಯಿರಬಹುದು—ನ್ಯಾಯದ ಹಿಡಿತದಿಂದ ನಾವು ತಪ್ಪಿಸಿಕೊಳ್ಳಬಹುದು. ನಮ್ಮ ವೈಯ್ಯಕ್ತಿಕ ಲಾಭವನ್ನು ಹಾಗೂ ಮಹತ್ವಾಕಾಂಕ್ಷೆಯನ್ನು ನಾವು ಪ್ರಭಾವದಿಂದ ದುಡ್ಡಿನಿಂದ ಅಥವಾ ಇತರ ರೀತಿಯ ಭ್ರಷ್ಟಾಚಾರಗಳಿಂದ ಸಾಧಿಸಬಹುದೆನ್ನಿ. ಆದರೆ, ಕೋಟ್ಯನುಕೋಟಿ ಬಡ ಬಾಂಧವರ ಪಾಡೇನು? ಅವರು ಬಡತನದ ದಳ್ಳುರಿಯಲ್ಲಿ ಬೇಯುವಾಗಲೂ ನಮ್ಮ ಅತಿ ಸುಖಾಕಾಂಕ್ಷೆಯ ಹಬ್ಬ ನಮಗೆ ಬೇಕೇ?

ನ್ಯಾಯದ ನೆಲೆಯನ್ನು ನಾವು ಶಕ್ತಿಯಿಟ್ಟರೆ,ನಮ್ಮ ಮಕ್ಕಳುಮರಿಗಳಿಗೇನೇ ಮುಂಡೆ ಭದ್ರತೆಯ ಬೆಯೇ? ಅವರ ಗತಿ ನಾಳೆ ಏನಾಗ ಬಹುದು? ಅವರಿಂಗಿತ ಬಲಿಷ್ಠರು ಮುಂದೆ ಬಂದು,ಅನ್ಯಾಯವಾಗಿ ಅವರನ್ನು ಹಿಂಸಿಸಿದಾಗ ಅವರ ಗತಿ ಏನಾಗ ಬಹುದು? ಅಥವಾ ನಾಳೆ ನಮಗಿಂತ ಬಲಿಷ್ಠರು ನಮ್ಮನ್ನೇ ದ್ರೋಹದ ಗುಂಡಿಯಲ್ಲೆಸೆದರೆ ನಮ್ಮ ಪಾಡೇನು?

ನಾವು ನ್ಯಾಯವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುವುದು. ನಾವು ನ್ಯಾಯವನ್ನು ಕೈ ಬಿಟ್ಟರೆ, ಅದು ನಮ್ಮನ್ನು ಕೈ ಬಿಡುವುದು. ಆದುದರಿಂದ ನಾವು ನ್ಯಾಯವನ್ನು ರಕ್ಷಿಸಲು ಪಣ ತೊಡ ಬೇಡವೇ?

ಇತರರು ಈ ಕಾರ್ಯಕ್ಕೆ ಮುಂದಾಗಲಿ ಎಂದು ನಾತ್ರ ಕಾಯದಿರೋಣ! ನಾವು ಈ ಕನಿಷ್ಠ ತತ್ವವನ್ನು ಕಾರ್ಯಗತಗೊಳಿಸೋಣ. ಇತರ ಯಜಕರನ್ನೂ ಈ ಕಾರ್ಯದಲ್ಲಿ ಸಂಘಟಿಸಿ, ಎಲ್ಲರೂ ಶಿಸ್ತು ಬದ್ಧರಾಗಿ ಈ ನಿಯಮವನ್ನನುಸರಿಸುವಂತೆ ಮಾಡೋಣ.

ಇದು ಕೇವಲ ಸರಕಾರ ಸಾಧಿಸಕ್ಕ ಕಾರ್ಯವಲ್ಲ ಸವರ್ಜದ ಪ್ರತಿ ವ್ಯಕ್ತಿಯೂ ಸಾಧಿಸಕ್ಕ ಗುರಿ ಹಾಗಿದ್ದರೆ ಮಾತ್ರವೇ ನ್ಯಾಯವು ಜನ ಜೀವನದ ಜಾಸು ಹೊಕ್ಕಾದೀತು—ಎಲ್ಲರಿಗೂ ಭದ್ರತೆಯನ್ನೊದಗಿಸೀತು. ಜೈ ಭಾರತಮಾತೆ

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ನವರಾತ್ರಿ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ

ರಿಜಿಸ್ಟರ್ಡ್ ಪಬ್ಲಿಷರ್ಸ್

ಪಾಲುಕೋಟೆ, ಉಡುಪಿ

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ರಸಬಾಳೆಯ ಹಣ್ಣು

(ಇಪ್ಪತ್ತೊಂದನೇ ಪುಟದಿಂದ)

ಚಾಲಕ, ಕವಿಗಳ, ರಾಜಕಾರಣಿಗಳು ಬೀಡಿ ಕಟ್ಟುವವರು, ದೀನದಲಿತ ಕಾರ್ಮಿಕರು ಮತ್ತು ಎಲ್ಲರನ್ನೂ ನಾನು ಏಕ ರೀತಿಯಿಂದ ನೋಡ ಬಹುದೆ? ಅವರೊಡನೆ ಮೂತನಾಡ ಬಹುದೇ? ಹೌದಾದರೆ ಹಾದೆನ್ನು.....ಈ ಕತ್ತಿ ನೋಡು."

"ಹೌದು. ಹೌದು. ಆಗಬಹುದು"

'ಫೀನೇನು ತಿನ್ನತ್ತಿರುವೆ!'

'ರಸ ಬಾಳೆಯ ಹಣ್ಣು"

ಕತ್ತಿ ಮತ್ತು ಕೋಲು ಬೆತ್ತವನ್ನು ಬಿಸುಟಿ, ಅಬ್ದುಲ್ ಖಾದರ್ ಜಮಿಲೆಯನ್ನು ಅಪ್ಪಿ ಹಿಡಿದ.

"ನನ್ನ ಮನದನ್ನೆ" ಎನ್ನುತ್ತ ಆಕೆಯ ಅನೇಕ ಬಾರಿ ಚುಂಬಿಸಿದ. ಆಕೆಯ ತೊಡೆ ಮತ್ತು ಕಂಡೆಯ ವೇಲಿನ ಬೆತ್ತದ ಬಾಸುಂಡೆಗಳನ್ನು ಕಂಡು ಅವನ ಹೃದಯ ಕರಗಿತು. ಕಪಿಕರದಿಂದ ಮರುಗಿತು. ಕಠಿಣ ಹೃದಯ—ಕಲ್ಲು ಹೃದಯ ಮೆತ್ತನಾಯಿತು.

'ಪ್ರಿಯತಮೆ. ನಿನಗೆ ನೋವಾಯಿತೇನು?

"ಇಲ್ಲ" ಎಂದಳು ಜಮಿಲೆ, ನಿಟ್ಟುಸಿರು ಬಿಡುತ್ತ.

ಆದರೂ ಅವನಿಗೆ ಬಹಳ ಬೇಸರವಾಯಿತು. ಏನಿದ್ದರೂ, ಏನೆಂದರೂ, ಆತನೂ ಒಬ್ಬ ಮನುಷ್ಯ ತಾನೆ?

ಹೀಗೆ ಆ ರಾತ್ರೆ ಕಳೆಯಿತು. ಬೆಳಗಾಯಿತು. ದಿನಗಳು ಸಂದು ವರ್ಷಗಳು ಕಳೆದವು. ನೆಲ ಅನೇಕ ಬಾರಿ ನೆರೆಯಿಂದ ತುಂಬಿತು. ಜಮಿಲಾ ಬೀಬಿ ಒಂಭತ್ತು ಬಾರಿ ಮಕ್ಕಳನ್ನು ಹಡೆದಳು. ಜಗತ್ತಿನಲ್ಲಿ ಅನೇಕ ಬದಲಾವಣೆಗಳಾದುವು. ಸಾಮ್ರಾಜ್ಯಗಳು ಉರುಳಿದುವು. ಎರಡು ಮಹಾ ಯುದ್ಧಗಳಾಗಿ ಮುಗಿದುವು. ಹೊಸ ಹೊಸ ರೀತಿ ನೀತಿಗಳು ಬೆಳೆಕೆಗೆ ಬಂದವು. ಮಾನವತೆ ಮುಂದುವರಿಯಿತು. ಅಬ್ದುಲ್ ಖಾದರ್ ಸಾಹೇಬ ಮತ್ತು ಜಮಿಲಾ ಬೀಬಿಯರು ವೃದ್ಧರಾದರು. ಎಲ್ಲಾ ಹಲ್ಲುಗಳು ಉದುರಿದುವು. ಕೂದಲು ಬೆಳ್ಳಗಾಯಿತು. ಆವರ ಬೆನ್ನುಗಳು ಬಾಗಿದುವು. ಒಬ್ಬ ವೃದ್ಧ; ಇನ್ನೊಬ್ಬಳು ಮುದುಕಿ. ಅಜ್ಜ ಮತ್ತು ಅಜ್ಜಿ. ಆದರೂ ಅವರು ಕೆಲವು ಹಳೆಯ ಸಂಗತಿಗಳನ್ನು ಮರೆತಿಲ್ಲ.

ಅಬ್ದುಲ್ ಖಾದರ್ ಕೇಳುತ್ತಾರೆ.

"ಮಾಹಾರಾಜ್ಞಿ—ಮನೋರಾಣಿ! ಅನೇಕ ವರ್ಷಗಳ ಹಿಂದೆ ನೀನು ರಸಬಾಳೆಯ ಹಣ್ಣು ಬೇಕೆಂದಾಗ, ಆ ಮಹಾರಾತ್ರೆಯಲ್ಲಿ ನದಿಯನ್ನು ಈಜಿ ದಾಟುತ್ತ ನಾನೇನು ತಂದೆ?"

ಆಕೆ ನಗುತ್ತ ಅನ್ನುವಳು "ರಸಬಾಳೆಯ ಹಣ್ಣು"

"ಅದು ಹೇಗಿತ್ತು" ಕೇಳುವನಾತ

"ಕತ್ತಿಯಂತೆ ಉರುಟುರುಟು'

'ಹಾ! ಹಾ!! ಹಾ!!!"

ನಗುತ್ತ 'ಏನೇನು ತಂದೆ'

ಅವಳನ್ನುವಳು "ರಸಬಾಳೆಯ ಹಣ್ಣು.'

ಪಾಶ್ಚಾತ್ಯ ಮತ್ತು ಭಾರತೀಯ ಸ್ತ್ರೀ

(ಹತ್ತೊಂಭತ್ತನೇ ಪುಟದಿಂದ)

ಡನು ಮತ್ತು ಮುರಾ ಇಲಾಖೆಯು ಅಧಿಕಾರಿಯನ್ನು ಕಾಣಲು ಸ್ವಯಃ ಅವನೇ ಹೋದನು. ಜವನು ಹೋದೊಡನೆ, ಅವರ ಮಾತುಗಳನ್ನು ಕೇಳಿದ್ದ ಪೊನ್ನಿಯು ಓಡಿ ಬಂದು, "ಇಂದು ಅದ್ಯಾಕೋ ನಮಗೆ ಬಹಳ ಕೆಟ್ಟ ದಿನವಿದೆ. ತೊಪ್ಪೆಯ ಅಪಶಕುನದ ನಕ್ಷತ್ರ ವಿದ್ದಾನೆ. ಧೂಮಕೇತು ಇದ್ದಾನೆ! ನ್ನಾಮಿ ಅವನೀಗೇನೂ ಇಲ್ಲಿಗೂಟ ಹೊಡೆದಿಟ್ಟರುವದಿಲ್ಲ ಅವನ ನುಣ್ಣನೆಯ ಮಾತುಗಳಿಗೆ ಮರುಳಾಗಬೇಡಿ ನಿನಗೆ ಮಕ್ಕಳಿವೆ.... ಕಳ್ಳಂಗಡಿಗಾಗಿ ಕೆಲಸ ಮಾಡಬೇಡಿ...ನಿಮ್ಮ ಕಾಲಿಗೆ ಬೀಳುತ್ತೇನೆ. ದಮ್ಮಯ್ಯ, ಬೆಂಕಿಯ ಮೇಲಿಂದ ಕೈ ಹಿಂದಕ್ಕೆಳೆದು ಕೊಳ್ಳಿರೆಂದು ಅಂಗಲಾಚಿ ಬೇಡಿಕೊಂಡಳು.

ಅದು ಮುರುಗನ ಹೃದಯವನ್ನು ಕರಗಿಸಲಿಲ್ಲ. ತಾನು ಹೋದ ಕೆಲಸವನ್ನು ತೊಪ್ಪೆಯ ಮುಗಿಸಿಕೊಂಡು ಬಂದನು. ಕಳ್ಳಿಯಲ್ಲಿ ಕಳ್ಳಂಗಡಿ ತೆರೆಯಲ್ಪಟ್ಟತುಮುರುಗನ ಜೀವನ ಚಕ್ರದ ದಿಸೆ ಬದಲಾಯಿತು. ಹೆಂಡದಂಗಡಿಯಿಂದಾಗಿ ಊರಿನಲ್ಲಿ ಗಲಾಟೆ—ದೊಂಬಿ ನಡೆದು ಮರುಗ ತೊಪ್ಪೆಯ ಕೈದಿಗಳಾದರು. ಅವರನ್ನು ಕಾರಾಗೃಹಕ್ಕೆ ಕಳುಹಿಸಿದರು. ತನ್ನ ತೆಂಗಿನ ತೋಟ ಹಾಗೂ ಇತರ ಸೊತ್ತುಗಳನ್ನು ಅವನು ನ್ಯಾಯವಾದಿಗಳಿಗಾಗಿ, ನಗರ ರಕ್ಷಕರಿಗೆ ಹಾಗೂ ಸ್ನೇಹಿತರಿಗೆ ಮತ್ತು ಬಂಧುಬಳಗವರಿಗಾಗಿ ಕಳೆದು ಕೊಂಡನು. ಅನಂತರ ಅವನ ಜೀವನ ವೈಖರಿ ಬದಲಾಗುತ್ತದೆ...

ಟಾಲ್‌ಸ್ಟಾಯ್‌ಯವರ ರೈತ ಹಾಗೂ ವೆಂಕಟೇರಮಣಿಯವರ ರೈತ ತಮ್ಮ ನಿಕೃಷ್ಟ ಸ್ಥಿತಿಯಿಂದ ಉತ್ಕೃಷ್ಟ ಸ್ಥಿತಿಗೆ ಬಂದು ನಂತರ ಪುನಃ ಪಾತಾಳಕ್ಕೆ ಹೋಗಿ ಬೀಳುತ್ತಾರೆ. ಆದರೆ ಅವರ ಅಂಗನೆಯರು ಹಾಗೆ ಇರುವವಿಲ್ಲ. ಟಾಲ್‌ಸ್ಟಾಯ್‌ಯವರ ರೈತನ ಹೆಂಡತಿ ತನ್ನ ಗಂಡನನ್ನೊಂದಿಗೆ ಕಲೆತು, ಕುಡಿದು, ಬೀಳುತ್ತಾಳೆ. ಏನಃ. ಅದಕ್ಕಿದಾರಾಗಿ ಅದೇನೂ ಆಡುವದಿಲ್ಲ. ಅದು ಪಾಶ್ಚಾತ್ಯ ಲಲನೆಯ ಲಕ್ಷಣ ಆದರೆ ಭಾರತೀಯ ಸ್ತ್ರೀ ಹಾಗಲ್ಲ. ಆಕೆ ಸಂಸ್ಕೃತಿಯ ಸ್ವರೂಪಿಣಿ. ಅವಳು ಗಂಡನನ್ನು ಬಿಟ್ಟು ಓಡಿಹೋಗುವುದಿಲ್ಲವಾದರೂ, ತನ್ನ ಆತ್ಮ. ಕಣ್ಣೀರಿನಿಂದ ಗಂಡನ ಹೃದಯ ಪರಿವರ್ತನೆಗೆ ಪ್ರಯತ್ನಿಸುತ್ತಾಳೆ. ಹೀಗೆ ಅವಳು ಜೀವನ ಪಥದಲ್ಲಿ ದೀಪದಂತಿದ್ದಾಳೆ.

ಭಾರತವಾದರೋ ಜಗತ್ತಿಗೆ ಈ ಸಾಂಸ್ಕೃತಿಕ ದೀಪವನ್ನು ತೋರಿಬರುತ್ತದೆ.

ಸಂಪತ್ತಿನ ಮೃಷ್ಟಾ ಹಾಸಿಗೆಯಲ್ಲಿ ಅನೇಕ ರಾಜ್ಯಗಳೇ ನಾಶಗೊಂಡಿವೆ. ಮತ್ತೆ ಮನುಷ್ಯನ ಕತೆ ಕೇಳಬೇಕೆ?

ಂ ಂ ಂ ಂ

ನಿರ್ಬಲರು ಅದೃಷ್ಟವನ್ನು ನಂಬುತ್ತಾರೆ, ಬಲಾಢ್ಯರು ಕಾರ್ಯ ಮತ್ತು ಕಾರಣಗಳಲ್ಲಿ ವಿಶ್ವಾಸವಿಡುತ್ತಾರೆ.

ಂ ಂ ಂ ಂ

ನಾವು ದೀಪಾವಳಿಯ ಶುಭಾಶಯಗಳನ್ನು ಎಲ್ಲರಿಗೂ ಬಯಸುತ್ತೇವೆ.

• • •

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಸ್ಥಾಪನೆ :- 1931
ಫೋನ್ ನಂಬ್ರ :- 4640

ರಿಜಿಸ್ಟರ್ಡ್ ಆಫೀಸು :- "ವಿಜಯಾ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು - 3.

ಸೇವಿಂಗ್ಸ್ ಖಾತೆಗೆ 4½% ಯಂತೆ ಬಡ್ಡಿ, ಖಾಯೊಂ ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ, ಅವರ್ತಕ ಠೇವಣಾತಿಗಳ ಮೇಲೆ 6½% ಯಂತೆ ಬಡ್ಡಿ ಮತ್ತು ಎಲ್ಲರಿಗೂ ಅನುಕೂಲವಾಗುವಂತಹ ರೀತಿಯ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ ನಿಧಿ" ಇತ್ಯಾದಿ.

ಸಂತೋಷದಿಂದ ವ್ಯವಹರಿಸಿ "ವಿಜಯಾ ಬ್ಯಾಂಕಿ" ನಲ್ಲಿ ಉಳಿತಾಯ ಮಾಡಿ ಹೆಚ್ಚಿನ ಬಡ್ಡಿ ಗಳಿಸಿರಿ.

ಮೈಸೂರು, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರಗಳಲ್ಲಿ
63 ಶಾಖೆಗಳು.

ಸದ್ಯದಲ್ಲಿಯೇ ಮದ್ರಾಸು, ಕಾರ್ನಾಡು, ಬಿ. ಸಿ. ರೋಡ್, ಬೆಳ್ಳಾರೆ ಇತ್ಯಾದಿ ಸ್ಥಳಗಳಲ್ಲಿ ನಮ್ಮ ಹೊಸ ಶಾಖೆಗಳನ್ನು ತೆರೆಯಲಿದ್ದೇವೆ.

ಶ್ರೀ ಕೃಷ್ಣ ಕರ್ಣಾಮೃತ

(ಹದಿನಾರನೇ ಪುಟದಿಂದ)

ಪೆ ಅವನ ಶ್ರೀಯಸ್ಸಿಗೆ ಕಾರಣಳಾದ. ನೇ ಶೈಯಂತಿ ಹುಟ್ಟಿದರೂ, ಸಂಸ್ಕೃತಿಯ ಉನ್ನತ ಹಂತದಲ್ಲಿದ್ದ ಚಿಂತಾಮಣಿಯ ನ್ನು ಲೀಲಾ ಶುಕ ಸ್ಮರಿಸುವುದು. ಪೂಜ್ಯ ಭಾವನೆಯಿಂದ ಗೌರವಿಸುವುದು, ಅನುಚಿತವಾಗಲಾರದು. ಚಿಂತಾಮಣಿಯು ಉಭಯ ದೇಶದಿಂದ ಲೀಲಾಶುಕನಿಗೆ ಚಿಚ್ಛಕ್ತಿಯೋ ದಯವಾಯಿತು. ಶ್ರೀಕೃಷ್ಣ ಭಕ್ತಿಪೂರಿತ ಅಂತಃಸ್ಫೂರ್ತಿ ಉಂಟಾಗಿ ಶ್ರೀಕೃಷ್ಣ ಕರ್ಣಾಮೃತದ ಮುನ್ನೂರ ಮೂವತ್ತು ಶ್ಲೋಕಗಳು ರಚನೆಗೊಂಡವಂತೆ.

ಲೀಲಾ ಶುಕ ಭಗವಾನ್‌ಶ್ರೀಕೃಷ್ಣನಬಾಲ ಲೀಲೆಗಳನ್ನು, ಮುಗ್ಧ ಮನೋಹರ ರೂಪವನ್ನು ಹೃದಯಂಗಮವಾಗಿ ವರ್ಣಿಸುತ್ತಾನೆ.ಬಾಲಗೋಪಾಲ ಕೃಷ್ಣನ ಮೂರ್ತಿ ಎದುರಿನಲ್ಲಿಯೇ ನಿಂತಿರುವಂತೆ ಭಾವನಾಗುತ್ತದೆ ಶ್ಲೋಕವನ್ನು ಪಠಿಸಿದಾಗ ಅವನದು ರಸಪೂರ್ಣ, ಸ್ವಾರಸ್ಯಪೂರ್ಣ ಸುಂದರ ಶೈಲಿ. ಲೀಲಾಶುಕನದು ಅಲ್ಪ ಭಕ್ತಿಯಲ್ಲಿ, ಚಂಚಲ ಹೃದಯವಲ್ಲ, ಶೈದ್ಧಾಪೂರ್ಣ ಅಚಲ ಭಕ್ತಿ, ಅನ್ಯಥಾಶರಣಂ ನಾಸ್ತೆತ್ವೆವ ಶರಣಂ ಮಮ' ಎನ್ನುವ ಆತ್ಮಾರ್ಪಣ ಭಾವದ ನಿಶ್ಚಲ ಭಕ್ತಿ. ಭಗವಂತನ ಸಾಕ್ಷಾತ್ಕಾರಕ್ಕೆ, ದರ್ಶನಕ್ಕೆ ಭಕ್ತಿ, ಜ್ಞಾನ, ಕರ್ಮ ಮಾರ್ಗಗಳಿಗಿಂತಲೂ ಮಿಗಿಲಾದ ಸೂಕ್ತ ಮಾರ್ಗ ತೋರಿಸುತ್ತಾನೆ ಕವಿ. 'ಗೋವಾಂಗನೆಯರ ಹೃದಯ, ಮುನಿಗಳ ಮನಸ್ಸು, ಬೃಂದಾವನದ ಮರ—ಇವು ಮೂರರ ಸಮಾಧಿಯಲ್ಲಿ ಗೋಕುಲ ಬಾಲ ಶ್ರೀಕೃಷ್ಣನನ್ನ ಕಾಣಬಹುದು' ಎಂದು ಹೇಳುತ್ತಾನೆ.

ಲೀಲಾ ಶುಕ ವರ್ಣಿಸುವ ಜಗನ್ನಾಟಕ ಸೂತ್ರಧಾರಿ ಮುರಲೀಧರ ಬಾಲಕೃಷ್ಣ ಭುವನೈಕ ಭೂಷಣ, ಶೃಂಗಾರ ಸಾರ ಸರ್ವಸ್ವ, ಕಮನೀಯ ಕಿಶೋರ ಮುಗ್ಧ ಮೂರ್ತಿ, ಜಗದೇಕ ಬಂಧು, ನಯನಾಭಿರಾಮ, ಅಂಗೀಕೃತ ನರಾಕಾರ, ಭುವನಾಶ್ರಯ ಮಧನಾಭಿರಾಯಃ ಲೋಕಪಾಲ, ಚಾತುರ್ಯನೀಮ, ಸೌಭಾಗ್ಯ ಸೀಮ." ಬಾಲಕೃಷ್ಣ ಹಾಗೆಯೇ ಇರಲೂ ಬಹುದಲ್ಲವೆ?

ಕಂಸನ ಆಹ್ವಾನದ ಮೇರೆಗೆ ಮಥುರಾ ನಗರವನ್ನು ಪ್ರವೇಶಿಸಿದ ಕಿಶೋರ ಶ್ರೀ ಕೃಷ್ಣನನ್ನು ಕಂಡು ಒಬ್ಬಳು ಅವನ ಕಮನೀಯ ರೂಪಲಾವಣ್ಯಗಳನ್ನು ವರ್ಣಿಸಿ ಕೊನೆಗೆ ತನಗೆ ಎಲ್ಲೆಲ್ಲಿಯೂ ಕೃಷ್ಣನ ರೂಪವೇ ಕಾಣುತ್ತಿದೆ ಎಂದು ಜೊತೆಯ ಗೆಳತಿಗೆ ತಿಳಿಸಿದಳಂತೆ— ನವವಿಕಸಿತ ಜೋರನಾದ ಬಾಲಕೃಷ್ಣನ ತುಂಟತನ ಕಳ್ಳತನವನ್ನು ಕಂಡಿತು ಗೋಪಿಯರು ದೂರು ಹೇಳಿದರಂತೆ. ಯಶೋದೆ ಕಡೆಯುವ ಹಗ್ಗದಿಂದ ಕೃಷ್ಣನನ್ನು ಬಿಗಿದು ಬಂಧಿಸಿದಳಂತೆ. ಈ ಕಾರಣದಿಂದ ಅವನ ಹಿರಣ್ಯ ಗರ್ಭದಲ್ಲಿದ್ದ ಮೂರು ಲೋಕದವರಿಗೂ ಹಿಂಸೆಯಾಗಿ ಆಕ್ರೋಶದಿಂದ ಬೊಬ್ಬಿಟ್ಟರಂತೆ—ಬಾಲಕೃಷ್ಣನ ಜೇಷ್ಟೆಗಳನ್ನೂ ತಡೆಯಲಾರದೆ ಗೋಪಿಯರು ಯಶೋದೆಗೆ ದೂರು ಹೇಳುತ್ತಿದ್ದರೂ ಅವರ ಮನಸ್ಸು ಮುಗ್ಧ ಮೋಹನ ಮೂರ್ತಿ ಬಾಲಕೃಷ್ಣನಲ್ಲಿ ಲೀನವಾಗಿರುತ್ತಿತ್ತು. ರಾಧೆ ಸಮಸ್ತ ಗೋಪ-ಗೋಪಿಯರ ಪ್ರತೀಕ-ಸಂಕೇತ. ಶ್ರೀ ಕೃಷ್ಣನ ಬಗ್ಗೆ ಅವಳದು ಅಳಿಸಲಾಗದ ನಿಶ್ಚಲ ಪ್ರೇಮ, ಭುವನೈಕ ಮೋಹನ ಕೇಶವನಿಗೆ ಮನಸ್ಸು ಅರ್ಪಿಸಿದ್ದ ರಾಧೆ ತಾನು ಮೂಡುತ್ತಿದ್ದ ಕೆಲಸದ ಪರವೆಯೇ ಇಲ್ಲದೆ ನೊಸಗನ್ನೆಲ್ಲ ಹಾಳದೆ ಇದ್ದ ಬರಿಯ ಪಾತ್ರೆಯನ್ನೇ ಕಡಗೋಲಿನಿಂದ ಕಡೆಯುತ್ತಿದ್ದಳಂತೆ—ವೇದ ವೇದಾಂತಗಳನ್ನು ವ್ಯಾಸಂಗ ಮಾಡಿ ಶ್ರೀಕೃಷ್ಣನನ್ನು ಕಾಣಲು ಸಾಧ್ಯ ಎಂದು ಹೇಳುವಂತಿಲ್ಲ. ಅದರೆ ಗೋಪಿಯರ ಮನೆಯಲ್ಲಿ ಹುಡುಕಿದಾಗ ಅವನು ಅಲ್ಲಿ ನಿಮಗೆ ಗೋಚರಿಸುತ್ತಾನೆ. ಅವನನ್ನು ಅವರು ಬಂಧಿಸಿರುತ್ತಾರೆ—ಹಾಲು ಕುಡಿಯದೆ ಹಟ ಮಾಡಿದ ಕೃಷ್ಣನಿಗೆ ಯಶೋದೆ ಅಣ್ಣಾ ಬಲರಾಮ ಯಮುನಾ ತೀರದಿಂದ ಆಟ ಮುಗಿಸಿ ಹಿಂತಿರುಗುವವರೆಗಾಗಿ ನೀನು ಹಾಲು ಕುಡಿದರೆ ನಿನ್ನ ತಲೆಯು ಕೂದಲು ಉದ್ದವಾಗಿ ಬೆಳೆಯುತ್ತದೆ ಎಂದಳಂತೆ— ಕೃಷ್ಣ ಅರ್ಧ ಲೋಟ ಹಾಲು ಕುಡಿದು, ತನ್ನ ತಲೆಯು ಕೂದಲು ಎಷ್ಟು ಬೆಳೆದಿದೆಯೆಂದು ಸವರಿಕೊಂಡು ನಕ್ಕನಂತೆ. ಒಂದು ರಾತ್ರಿಯ ಶೋಜೆ ಬಾಲಕೃಷ್ಣನಿಗೆ ಬೇಗನೆ ನಿದ್ದೆ ಬರಲೆಂದು ರಾಮಾಯಣದ ಕಥೆ ಹೇಳುತ್ತಿದ್ದಳು. ಅವನು ಎಲ್ಲ ಮಕ್ಕಳಂತೆಯೇ ಹುಂಗುಟ್ಟುತ್ತಿದ್ದ 'ತಂದೆಯ ಮಾತಿನಂತೆ ರಾಮನು ಸೀತೆಯೊಂದಿಗೆ ಕಾಡಿಗೆ ಹೋಗಿದ್ದಾಗ ಪಂಚವಟಿಯಲ್ಲಿ ರಾವಣನೆಂಬುವನು ಅವಳನ್ನು ಅಪಹರಿಸಿಕೊಂಡು ಹೋದ' ಎಂದು ಯಶೋದೆ ಹೇಳಿದಾಗ, ಬಾಲಕೃಷ್ಣ ಕೇಳಿ— ಕನಲಿ "ಲಕ್ಷ್ಮಣನನ್ನ ಧನುಸ್ಸೆಲ್ಲಿ,ಧನುಸ್ಸೆಲ್ಲಿ, ಧನುಸ್ಸೆಲ್ಲಿ?ಎಂದು ವ್ಯಗ್ರನಾಗಿ ನುಡಿದನಂತೆ-ಒಂದು ಬಾರಿ ಕೃಷ್ಣ ಆಟವಾಡುವಾಗ ಮಣ್ಣು ತಿಂದ ಎಂದು ಬಲರಾಮ ತಾಯಿಗೆ ದೂರು ಹೇಳಿದ. ತಾಯಿ ಮಗನನ್ನು ನಿಜವೆ ಎಂದು ಪ್ರಶ್ನಿಸಿದಳು. ಸುಳ್ಳು ಕಣಮ್ಮ ಎಂದು ವಾದಿಸಿದ ಕೃಷ್ಣ. ತಾಯಿ ಸುಮ್ಮನಿರುವಳೆ? ಮತ್ತೆ ಪ್ರಶ್ನಿಸಿ ಬಲರಾಮ ಹೇಳಿದ ಎಂದಳು. ಶ್ರೀ ಕೃಷ್ಣ "ಅದು ಸುಳ್ಳಮ್ಮ, ನನ್ನ ಬಾಯೊಳಗೆ ನೋಡು' ಎಂದು ಬಾಯಿ ತೆರೆದ. ಯಶೋದೆ ಬಾಯಿಯನ್ನು ದಿಟ್ಟಿಸಿದಳು. ಅಖಿಲಾಂಡ ಕೋಟಿ ಬ್ರಹ್ಮಾಂಡವನ್ನೇ ಮುದ್ದು ಮಗನ ಬಾಯಲ್ಲಿ ಕಂಡು ಆತಾಯಿ ಆದೆಶ್ಚರ್ಯ ಆನಂದ ಪಟ್ಟರ ಬಹುದ! ಆ ಪುಣ್ಯ ಇನ್ನು ಯಾವ ತಾಯಿಗಿದೆ? ಹೀಗೆ ಕಿಶೋರ ಕೃಷ್ಣನ ಹತ್ತಾರು ಲೀಲಾ ವಿಲಾಸಗಳನ್ನು ಕವಿ ಲೀಲಾಶುಕ ಹೃದಯಂಗಮವಾಗಿ ತನ್ನ ಶ್ಲೋಕಗಳಲ್ಲಿ ವರ್ಣಿಸುತ್ತಾನೆ. ಸಹಜ ಸುಂದರ ಸನ್ನಿವೇಶಗಳನ್ನು ಚಿತ್ರಿಸುವುದರಲ್ಲಿ ಲೀಲಾ ಶುಕ ಸಿದ್ಧ ಹಸ್ತ.

ಲೀಲಾ ಶುಕನ ಶ್ರೀ ಕೃಷ್ಣಕರ್ಣಾಮೃತದ ಒಂದೊಂದು ಶ್ಲೋಕವೂ ಭಕ್ತಿರಸದಿಂದ ತುಂಬಿ ಹರಿಯುವ ಭಾವಗೀತೆ. ಹಲವು ಶ್ಲೋಕಗಳಲ್ಲಿ ಶ್ರೀಕೃಷ್ಣನ ಬಾಲಲೀಲೆಗಳು, ಹಲವು ಶ್ಲೋಕಗಳಲ್ಲಿ ಸಾಂಕೇತಿಕವಾಗಿ ಅಧ್ಯಾತ್ಮಿಕ ತತ್ವಗಳು ವರ್ಣಿತವಾಗಿವೆ.

ದೀಪಾವಳಿಯ ಶುಭ ಸಂದರ್ಭದಲ್ಲಿ

ನಮ್ಮ ಸಕಲ ಹಿತೈಷಿಗಳಿಗೂ ಶುಭಾಶಯಗಳು!

ಉದ್ಯಾನನಗರಿಯ ಮಹಾನಗರವಾದ ಬೆಂಗಳೂರನ್ನು ಸಂದರ್ಶಿಸುವಾಗ

ಎಲ್ಲಾ ತರದ ಅನುಕೂಲತೆಗಳಿರುವ ಉತ್ಕೃಷ್ಟ ದರ್ಜೆಯ ವಸತಿ, ಭೋಜನ ಹಾಗೂ ಉಪಾಹಾರ ಮಂದಿರವಾದ

ಹೊಟೆಲ್ ಸತ್ಕಾರ್

ಕಾರ್ಪರೇಶನ್ ಆಫೀಸಿನ ಬಳಿ, 9, ಮಿಶನ್ ರೋಡು

ಬೆಂಗಳೂರು - 2

ಇಲ್ಲಿಯೇ ಉಳಿದು ಕೊಳ್ಳಿರಿ.

ಕಾರ್ ಪಾರ್ಕಿಂಗ್ ವ್ಯವಸ್ಥೆ, ಬಾತ್ ರೂಂ ಲಗ್ಗೇಜಿರಿಸಿದ ರೂಮುಗಳು, ಮತ್ತು ಫೆಮಿಲಿ ರೂಮುಗಳ ಸೌಕರ್ಯ.

ಶಾಂತ ವಾತಾವರಣ! ನಿಮ್ಮ ಸ್ವಾಗತ-ಸತ್ಕಾರಗಳಿಗೆ ಅನುಭವಶಾಲಿ ಮೇಲ್ವಿಚಾರಣೆ!

ಪಾರ್ಟ್‌ನರ್ಸ್:

ಟಿ. ಎಸ್. ಶೆಟ್ಟಿ, ಬಿ. ವಿ. ಶೆಟ್ಟಿ

When you are in Bangalore

Visit

HOTEL SATKAR

Boarding & Lodging

Near Corporation Office, 9, Mission Road,

BANGALORE-2

ಬಾಪೂಜಿ ಮತ್ತು ಜವಾಹರಲಾಲ

(ಪದನೀಳನೇ ಪುಟದಿಂದ)

ವ ಶಕ್ತಿಯುಳ್ಳವುಗಳಾಗಿವೆ. ಮೊಟ್ಟ
ದಲು ಕೆಲವು ಬಿಕ್ಕಟ್ಟುಗಳು, ಅಡಚಣೆ
ಅನಿವಾರ್ಯ. ಅವುಗಳನ್ನು ನಾವು
ಧೈರ್ಯದಿಂದ ಎದುರಿಸಬೇಕು. ಇನ್ನೊಂ
ಮಾತು. ಭಾರತದ ವಿಭಜನೆಗೆ ಮೂ
ಕಾರಣ ಧರ್ಮಾಂಧತೆಯೆಂದು ಎಲ್ಲರಿ
ತಿಳಿದ ವಿಷಯ. ಭಾರತವು ಅನೇಕ
ರ್ಮ, ಮತ, ಜನಾಂಗಗಳ ಬೀಡು. ಆ
ದರಿಂದ ಈ ಸ್ವಾತಂತ್ರ್ಯ ಯುಗದಲ್ಲಿ
ವು ವಿಶಾಲವಾದ ದೃಷ್ಟಿಯನ್ನು ಬೆಳೆಸಿ
ಳ್ಳಬೇಕು. ನಮ್ಮ ಪುರಾತನ ಸಂಸ್ಕೃತಿ
ಯು ವೈಶಾಲ್ಯವನ್ನು ನಾವು ಪುನಃ ನ
ಜೀವನದಲ್ಲಿ ಸ್ಥಾಪಿಸಿ, ಯಾವ ಬೇಧ
ನೆನೆಗಿಗೂ, ಮತಾಂಧತೆಗೂ ಅಸ್ಪದ
ಡದೆ ನವ ಸೃಷ್ಟಿಯೆ ಜೀವನವ
ಸಾಗಿಸಬೇಕು. "ಸೆಕ್ಯುಲರ್" ಎಂಬ
ವನ್ನು ನಾವು ಉಪಯೋಗಿಸುತ್ತೇವೆ.
ನ್ಮ ರಾಷ್ಟ್ರವು ಯಾವ ಧರ್ಮ, ಮತ
ನ್ನೂ "ರಾಷ್ಟ್ರ ಧರ್ಮ"ವೆಂದು ಮಾಡ
ಲ್ಲ. ಎಲ್ಲಾ ಧರ್ಮಗಳ ಅನುಯಾಯಿಗ
ನಮ್ಮ ದೇಶದಲ್ಲಿ ಅವರವರ ಮತವ
ನಿರ್ಭಯವಾಗಿ, ನಿರಾತಂಕವಾಗಿ ಆ
ಸುವ ಸ್ವಾತಂತ್ರ್ಯವಿದೆ. ಈ ಧ್ಯೇಯ
ನೆಹರೂರವರು ಭಾರತಕ್ಕೆ ಕೊಟ್ಟ ಉ
ಲ ಕಾಣಿಕೆ.

ಕೊನೆಯದಾಗಿ ನೆಹರೂರವರ ವಿದೇಶ
ನೀತಿ. ಭಾರತವು ಯಾವ ರಾಜ್ಯಗಳ
ಗುಂಪುಗಳಿಗೂ ಸೇರದೆ, ತನ್ನದೇ ಆದ
ಕ್ರಮವನ್ನು ಇದು ವರೆಗೆ ಆಚರಿಸುತ್ತಾ
ಬಂದಿದೆ. ಇದರಲ್ಲಿ ನಮಗೆ ಕೆಲವು ವೇಳೆ
ಸ್ವಲ್ಪ ಹಾನಿಯೂಗಿರಬಹುದು. ಆದರೆ ಭಾ
ರತದ ನೀತಿಯು, ನಮ್ಮ ಜನಾಂಗದ ಶ್ರೇ
ಷ್ಠೆಯನ್ನು ಪರದೇಶಗಳಲ್ಲಿ ಹೆಚ್ಚಿಸಿದೆ
ಯೆಂದರೆ ಅತಿಶಯೋಕ್ತಿಯೂಗಲಾರದು.
ಎಲ್ಲ ರಾಜ್ಯಗಳೊಡನೆಯೂ ಮೈತ್ರಿಯಿಂ
ದ ಇರಬೇಕು, ಯುದ್ಧದಿಂದ ಯಾವ ಸ
ಮಸ್ಯೆಯೂ ಬಗೆಹರಿಯಲಾರದ, ಆಧುನಿ
ಕಯುಗದಲ್ಲಿ ವಿಶ್ವಶಾಂತಿಯಿಂದಲೇ
ಮಾನವ ಕುಲಕ್ಕೆ ಪ್ರಗತಿ ಸಾಧ್ಯಯೆಂಬ
ತತ್ವಗಳ ಮೇಲೆ ನಮ್ಮ ವಿದೇಶೀ ನೀತಿ ಕ
ಟ್ಟಲ್ಪಟ್ಟಿದೆ. ಇದನ್ನು ನಿರ್ಮಿಸಿದವರು ಜ
ವಾಹರಲಾಲರು. ಅವರೇ ಈ ವಿಶ್ವ ಧರ್ಮ
ಧ್ವಜದ ಧ್ಯೇಯಕ್ಕೆ ಅನವರತ ಸ್ಫೂರ್ತಿ
ಇತ್ತವರು. ನೆಹರೂರವರ ನಾಯಕತ್ವವು
ಭಾರತಕ್ಕೆ ಒಂದು ಶೋಭೆಯನ್ನು ಕೊ
ಟ್ಟಿತ್ತು. ಅವರು ಕೇವಲ ರಾಜಕಾರಣಿ
ಯಾಗಿರಲಿಲ್ಲ. ಅತ್ಯುತ್ಕೃಷ್ಟ ಮಾನವತಾವಾದಿಗಳಲ್ಲಿ
ಒಬ್ಬರಾಗಿದ್ದರು. ಅವರು ಸಾಹಿತಿಗಳು, ವಿದ್ವಾಂಸರಾಗಿದ್ದರು.
ಅವರು ಕವಿಗಳು, ಶ್ರೇಷ್ಠ ವ್ಯಕ್ತಿತ್ವವನ್ನು ಪಡೆದ ಮಹಾ ಪುರುಷರು.
'ಪ್ರಪಂಚದ ನಾಯಕರ ಗಣಿಯಲ್ಲಿ ಎ
ದ್ದು ಕಾಣುವ ವ್ಯಕ್ತಿ ಯೆಂದರೆ ಜವಾಹ
ರಲಾಲರು' ಎಂದು ಅಮೆರಿಕದ ಅಧ್ಯಕ್ಷ
ಕೆನ್ನೆಡಿಯರು ಹೇಳಿದ್ದುಂಟು "ಯಾವ
ಕ್ಷುದ್ರ ಭಾವನೆಗಳೂ ನೆಹರೂ ಹೃದಯ

ದಿವ್ಯ ಜ್ಯೋತಿ

ಧನ್ಯ ಧಾರಿಣಿ ದಿವ್ಯ ಜ್ಯೋತಿಯು
ವಿಶ್ವವೂತೆಯ ಬೆಳಗಿದೆ
ಬೆಳಗಿ ನಿಧದಲಿ ನಿತ್ಯವಾಗಿಹ
ಸತ್ಯಲೋಕವ ಸಾರಿದೆ | ೧ |

ವ್ಯಾಸಭಾರತ ದಾಸಕನಕರು
ಕನ್ನಡಾಂಬೆಯತಿಲಕವೈ
ಬಾಸವ ಮೋಹನಕರಮುಚಂದರು
ವಿಶ್ವವೂತೆಯ ಮುಕುಟವೈ | ೨ |

ದಾಸ್ಯರೂಪಕ ಅಂಕುಶರದೆಗೆ
ದಾಸ್ಯವೂಡಿದ ತಂಬ್ರದ
ರಂಗಭೂಮಿಯನಿಂದು ಮಧ್ಯದಿ
ಕರೆದ ಮಂತ್ರ ಸ್ವತಂತ್ರದ | ೩ |

ವಿಶ್ವನುಬಂದಿಹ ನಾಗವೇಸದಿ
ವರತಾತನಾಗಿಹ ತನ್ಮಯ
ನಿಮಿಷದಲಿ ವಿಶ್ವರ್ಭ ಕಚ್ಚಲು
ಕೊಚ್ಚಿ ಹೊರಟನು ಕಾತನು | ೪ |

ಮುಗ್ಧ ಮನುಜನು ದಗ್ಧವಾಗಿಹ
ನಡೆದ ಆಳದಿ ನುಸುಳಿದೆ
ನುಸುಳಿ ನೊಸಲಲಿ ಭಾರತಾಂಬೆಯ
ದಿವ್ಯ ತಾರೆಯು ತೊಲಗಿದೆ | ೫ |

ಪರಮ ವೇದದಿ ದೇವವೇಳಿದ
"ಸಂಭವಾಮಿಯುಗೆಯುಗೆ"
ಪರ.ಪದಲಿ ನಾವಿಂದುಕಾದಿಹೆ
ಮತ್ತೆ ತಾತನ ಆಕ್ಕಗೆ | ೬ |

-- ಬಿ. ಯಂ. ಜಹಗೀರ್‌ದಾರ್,
ಗದಗ.

ಅಮರ ವಾಕ್ಯಗಳು

ಐಶ್ವರ್ಯವು ಚಂಚಲವಾದುದು, ಪ್ರಾಣಗಳೂ ಚಂಚಲವಾದವು. ದೇಹವೂ ಚಂಚಲ. ಯೌವನವೂ—ಶೃಂಗಾರವೂ ಚಂಚಲ. ಕೀರ್ತಿಯೂ ಧರ್ಮವೂ ನಿಶ್ಚಲ.

ಂ ಂ ಂ

ಜೇನುಹುಳುವು ಹುಸ್ವವನ್ನು ಕೂಡಿಕ್ಕುತ್ತವೆ. ಅದನ್ನು ಆಟ್ಟೆ ಇತರರು ಆ ಜೇನನ್ನು ಕುಡಿದು ಆಸ್ವಾದಿಸುತ್ತಾರೆ. ಅದರಂತೆ ಅಜ್ಞಾನಿಗಳ ದ ಧನಿಕರು ದ್ರವ್ಯವನ್ನು ಕೂಡಿಡುವರು. ಅದನ್ನು ಮಕ್ಕಳೋ ಅನುಭವಿಸುವರು.

ಂ ಂ ಂ

ಗೆದ್ದಲು ಹುತ್ತವನ್ನು ಕಟ್ಟುತ್ತದೆ. ಅದರಲ್ಲಿ ಸರ್ಪವು ಬಂದು ಸೇರುತ್ತದೆ.

ಸಂಗ್ರಹ:- ರಾ. ಶೃ. ಹೆಬ್ಬಾರ್.

With best compliments

From

S. Chandrashekar

Proprietor,

S. C. S. MOTOR SERVICE

MANGALORE

With best compliments

from

K. Venkatramana Bhat

Proprietor

ROYAL MAHAL

(Boarding & Lodging)

UDIPI

Phone : 169

ಆಯುರ್ವೇದ ಪ್ರತಿಷ್ಠಾನ

ಬೆಂಗಳೂರು-11.

ಬೆಂಗಳೂರು ಆಯುರ್ವೇದಿಕ್ ಕಾಲೇಜನ್ನು ನಡೆಸುತ್ತಿರುವ
ಪ್ರತಿಷ್ಠಾನಕ್ಕೆ ಬಿಚ್ಚುಗೈಯಿಂದ ದಾನನೂಡಿರಿ.

ಕಾಲೇಜಿಗೆ

ಶಸ್ತ್ರಚಿಕಿತ್ಸಾಗಾರ, ರಸಶಾಲೆ, ಪ್ರಸೂತಿಗೃಹ,
ರುಗ್ಣಾಲಯ ಮತ್ತು ಅಧ್ಯಾಪನ ಮಂದಿರ
ಇವೇ ಮುಂತಾದವುಗಳನ್ನು ಒಳಗೊಂಡ
ಪ್ರಶಸ್ತವಾದ ಕಟ್ಟಡವಾಗಬೇಕಾಗಿದೆ.

ಸಾರ್ವಜನಿ ದಾನಿಗಳ ಆಧಾರವನ್ನೇ ಪ್ರತಿಷ್ಠಾನವು ನಂಬಿರುತ್ತದೆ.

—: ಅದಕ್ಕಾಗಿ :—

ಬೆಂಗಳೂರು ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲರಾದ
ಡಾ॥ ಎಂ. ಗೋಪಾಲಕೃಷ್ಣರಾಯರನ್ನು
ನಿಮ್ಮಲ್ಲಿಗೆ ಬರಮಾಡಿಕೊಂಡು ನಿಧಿ ಸಂಗ್ರಹಿಸಿ ನೀಡಿರಿ.

ಶ್ರೀ ಧನ್ವಂತರಿಯು ದಾನಿಗಳನ್ನು ಅನುಗ್ರಹಿಸಲಿ.

ಭಾರತದ ಸ್ಮರಣೆ

ಭಾರತವೂ ತಲೆಯೆತ್ತಿ ಮೆರೆದ ದಿನವಿತ್ತು
ಲೋಕ ಛತ್ರಾಧಿಪನ ಸ್ಥಾನವಡಕೆತ್ತು
ಬರ್ಮಾ, ಥೈಲೆಂಡು, ಕಾಬೂಲು ಕರಾಚಿ
ಸಿಂಹಳ, ನೇಪಾಳ, ಟಿಬೇಟ್ ವರೆಗೆ ಜಾಚಿ
ಭಾರತದ ಛತ್ರಛಡಿ ಮೆರೆದ ದಿನವಿತ್ತು
ಭಾರತದ ಸಂಸ್ಕೃತಿಯು ತವರೆದೆನಿಸಿತ್ತು.
ಸಂಪತ್ಸಮೃದ್ಧಿ ಸಾಗರ ವಿದಾಗಿತ್ತು
ಜೇನು ಹಾಲುಗಳ ಹೊಳೆಯೆಲ್ಲೆ ಹರಿದಿತ್ತು

ಜ್ಞಾನ—ವಿಜ್ಞಾನಗಳ ಮೂಲವೆನಿಸಿತ್ತು
ನಲಂದಾ ತಕ್ಷ – ಶಿಲವದಿನ್ನೆಲ್ಲ ಇತ್ತು ?
ಧರ್ಮ—ಕರ್ಮಗಳಲ್ಲಿ ಅಗ್ರವಾಗಿತ್ತು
ಗೀತೆ—ವೇದಗಳ ಜ್ಞಾನವಿಲ್ಲಿ ಉದ್ಭವಿಸಿತ್ತು
ವ್ಯಾಸ ಬುದ್ಧರಿಗೆ ಜನ್ಮವ ನೀಡಿ ಭಾರತವು
ಧರ್ಮಧ್ವಜವನು ಎತ್ತಿ ಹಾರಿಸುತಿತ್ತು
ವೀರ ಪುರುಷರಿಗೆ ಪತಿವೃತೆಯರಿಗೆ ಬೀಡೆನಿಸಿ
ನ್ಯಾಯ ನೀತಿಯ ರಾಜರಾಳ್ವಿಕೆಯು ಇತ್ತು

ಂ ಂ ಂ ಂ

ಇಂದು—

ಕೈ ಬಿಟ್ಟುವೊಂದೊಂದೆ ಭೂ ಭಾಗವೆಲ್ಲಾ
ಭಾರತದ ಪಾಡಿಂದು ಆಗಿಹುದು ನೋಡಾ
ಆರೆ ಬಟ್ಟೆ, ಆರೆ ಹೊಟ್ಟೆ, ಉಟ್ಟವರೆ ಎಲ್ಲ .
ದುಃಖದಾರಿದ್ರ್ಯವೇ ಅಡಸಿರುವುದೆಲ್ಲ.
ಧರ್ಮ ದ್ರೋಹಿಗಳೆ ಈ ನಾಡು ತುಂಬೆಲ್ಲ
ಹುಸಿ ಲಂಚಕೋರರೇ ಭಾರತದೊಳೆಲ್ಲ

ಂ ಂ ಂ ಂ

ಆದರೆ—

"ಯಾಕೆ ಈ ದಾರುಣಾವಸ್ಥೆಯಿಂದು?
ಪ್ರಶ್ನಿಸಿರಿ ತಮ್ಮನೆ ತಾವು ಇಂದು.
ಆತ್ಮವಿಶ್ವಾಸವೆಂಬುದಿಮ್ಮಲ್ಲಿಲ್ಲ
ಸಂಘಾನುಸರಣೆಯೆ ಕಾರಣವಿದಕೆಲ್ಲ
ಮರೆತಿಹೆವು ನಾವಿಂದು ನಮ್ಮ ಗೌರವವ
ಕಳೆಗುಂದಿಹುದು ಘನ ಸಂಸ್ಕೃತಿಯ ಪ್ರಭಾವ
ಮೈಮುರಿದು ದುಡಿಯುವರು ಇಲ್ಲ, ಯೋರಿಲ್ಲ
ಕುಳಿತಲ್ಲೆ ಉಣುವ ಮೈಗಳ್ಳರಿಲ್ಲ
ಕರ್ತವ್ಯವನು ಆಹ್ವಾನಿಸುವವನೊಬ್ಬನಿಲ್ಲ

ಸುಲಿದು, ಸುಲಭದಲಿ ಹೊಟ್ಟೆ ಹೊರೆಯುವುದೆಬಲ್ಲ
ನೂತ್ಯ ಭೂಮಿಯೆಂಬಂದು ಮಮತೆಯೆನುಗಿಲ್ಲ
ವೀರ ಪರಂಪರೆಯೊಳೆಮಗೆ ವಿಶ್ವಾಸವಿಲ್ಲ
ಆಂತರ್ಯ ಅಕ್ಯಮಿಸಿತು ಪಾಕ್— ಚೀನಾ ಮೆಲ್ಲ
ಕಬಳಿಸಲು ಭಾರತದ ನೆಲವನೆಲ್ಲ
ಕೊನೆಗಾದರೂ ನಮಗೆ ಬಂದಿತು ಬುದ್ಧಿ
ಮೂಡಿಕೊಂಡೆವು ನಾವು ಆತ್ಮಶುದ್ಧಿ
ಸ್ಮರಿಸಿಕೊಂಡೆವು ನಾವು ವೀರರನ್ನ
ಝಾನ್ಸಿ ಲಕ್ಷ್ಮಿಯನ್ನ , ಶ್ರತಾಪಶಿವರ್ನ
ಕಂಡು ಕೊಂಡಿಹೆವೀಗ ಈ ಸತ್ಯವನ್ನ,
"ಶಕ್ತಿಯುತವಾದವಗೆ ಬಾಳುಹಸನು"

ವೀರ ಭಾರತದ ನವಯುವಕರಿಲ್ಲಿರಿದ್ದೇಳಿ
ಕುಂಭಕರ್ಣನ ನಿದ್ದೆ ಸಾಕೀಗಲೇಳಿ
ಕಣ್ ಬಿಟ್ಟುನೋಡಿ ಭಾರತಿಯು ಪಾಡನ್ನು
ವಿೂರಿಹುದು ಸಮಯ, ತಡವೇಕೆ ಇನ್ನು ?
ಮುಂದಕಡಿಯಿಡಿ ನೀವು ಹಿಂದಿನ ದಸ್ಯರಿಮುಕ್ತ
ಲೋಕಕ್ಕೆ ತಿಳಿಸಿಬಿಡಿ ಭಾರತದ ವೀರತ್ವ
ಆಂಯಲವರೆಲ್ಲ ಈ ಮಾತೆಯೆಂಥವಳೆಂದು
ಸ್ವಾತಂತ್ರ್ಯಕ್ಕಂತೆನು ನಾವ್ ಬೆಲೆತೆರುವೆವೆಂದು
ತಲೆಯೆತ್ತಿ ಮೆರೆಯಲೈ ಭಾರತವನಿನ್ನೊಮ್ಮೆ

ಚೈತನ್ಯ

ಚೈತನ್ಯ ಮೂಡಲಿ ಹೃದಯ ಬಾಂಧವದಲಿ
ನವ ತಾರುಣ್ಯ ಹೊರ ಚಿಮ್ಮಲಿ ಹೋರಾಟದಲಿ
ಜಯಾಪಜಯದ ಭಯ ನಿೂರಿ ಬರಲಿ
ಏಕಂತು ಚಿಂತೆ ನಿನಗೆ ಹೋರಾಟದ ಪಾಠ ಕಲಿ

ಕಮವೇ ಧರ್ಮ ನೀನೆರಿ ಆದರ ಮರ್ಮ
ಧರ್ಮ ರಹಿತ ಕರ್ಮ ಬಾಳ್ವೆಯೆಂದು ಕೂರ್ಮ
ತಾರುಣ್ಯದ ದಿನಟಗೆಗೆ ಚೈತನ್ಯ ತೈಲವ ಎರೆದು
ಬೆಳಗಿಸಾ
ತಾಮಸ ಕಣಗಳ ತೊಳೆ ಬೇಗನೀ ಮನ ಬಲು
ಸೂಕ್ಷ್ಮ

ದೂರ ದಿಗಂತದಲಿ ಬೆಳಗುತಿದೆ ದಿವ್ಯ ಪ್ರಕಾಶ
ನೀನಶ್ಯ ಸರಿ ಒಂದೊಂದೇ ಹೆಜ್ಜೆ ಇತ್ತು ನಿನಗಲ್ಲಿ
ಅವಕಾ
ಧರ್ಮ ದಾರಿಯೆಂಬುದು ಕರ್ಮ ದಿವಟಗೆ ಹಿಡಿದು ನತೆ
ನಿನಗೆ ಬ
ಆಲಸ್ಯವ ತೊರೆ ಜಡತ್ವವ ಹೊರೆ ಕರ್ಮವೇ ಕೈಲಾ

—ಡಿ. ಎಸ್. ನಾಯ್ಕ್, ಕಿ

ದುಡಿಯರದಕೆಂದು ನೀವ್ ಭುಜಕೆಭ ಜ
ಕೊಟ್ಟ
'ನವಭಾರತ'ದ ಮಧುರ ಗುರಿಯ ಸ್ಮರಿ
ಮುಂದಾಗಿ ನೀವೆಲ್ಲ 'ನವಹರ ಷ' ಧ್ವನಿ
ಹೇಳಿರೆಲ್ಲರು ನೀವು ಮನದಣಿಯೆ ಇಂದು
"ವೀರ ಭಾರತಕೆ ಜಯ ಕಟ್ಟೆಟ್ಟಪೆಂದು"

—ಶ್ರೀ ಬಿ. ನರಸಿಂಗ ರಾವ್,

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ರಿಜಸ್ಟರ್ಡ ಆಫೀಸು: ಉಡುಪಿ.

ಆಡಳಿತ ಆಫೀಸು: ಮಂಗಳೂರು.

ಹಣದ ವ್ಯವಹಾರ ನಡೆಸುವುದು ಹಣ ಸಂಪಾದನೆಗಿಂತಲೂ ಕಷ್ಟ!
ಇದೊಂದು ಸುಲಭದಲ್ಲಿ ಕೈಗೆ ಎಟಕದ ಶ್ರೇಷ್ಠ ಕಲೆ!

ಕೊರ್ಪೊರೇಶನ್ ಬ್ಯಾಂಕು

ಇಂದಿಗೆ 60 ವರುಷಗಳಿಗೂ ಮೇಲ್ಪಟ್ಟು ಸಾವಿರಾರು ಮುಂದಿಯ ಹಣವನ್ನು ಜವಾಬ್ದಾರಿಯುತವಾಗಿ, ಸುರಕ್ಷಿತವಾಗಿ, ಚಾಣಾಕ್ಷತೆಯಿಂದ ನಡೆಸುತ್ತಿದೆ. ನೀವು ನಿಮ್ಮ ಹಣವನ್ನು ಈ ಬ್ಯಾಂಕಿನ ದಕ್ಷ, ಪ್ರಾಮಾಣಿಕ ಹಾಗೂ ವಿವೇಚನಯುತ್ತ ಆಡಳಿತಕ್ಕೆ ನಿಶ್ಚಿಂತರಾಗಿ ನಿರ್ಭೀತಿಯಿಂದ ವಹಿಸಿಕೊಟ್ಟು, ಕಷ್ಟಪಟ್ಟು ಮಡಿದ ನಿಮ್ಮ ಹಣಕ್ಕೆ ಅತಿ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು

ನಿಮ್ಮ ಹಣದ ವ್ಯವಹಾರವನ್ನು ನಡೆಸಲು ಈ ಬ್ಯಾಂಕನ್ನು ಇಂದೇ ಕೇಳಿಕೊಳ್ಳಿರಿ!

ಕೆ. ರಾಮದಾಸ್ ನಾಯಕ್,
ಜನರಲ್ ಮೆನೇಜರ್.

ದೇಶದಲ್ಲೆಲ್ಲಾ ಪ್ರಖ್ಯಾತಿಗೊಂಡ

"ಜೀಕೊ"

ಮೋಟಾರುಗಳು ಮತ್ತು ಪಂಪು ಸೆಟ್ಟುಗಳು ಇದೀಗ ನಿಮ್ಮ ಜಿಲ್ಲೆಯಲ್ಲೇ ಧಾರಾಳವಾಗಿ ದೊರೆಯುತ್ತವೆ....

ಜೀಕೊ
ಇಲೆಕ್ಟ್ರಿಕ್
ಮೋಟಾರುಗಳ
ಮೋನೋ
ಬ್ಲಾಕುಗಳು
ಮತ್ತು
ಪಂಪುಗಳು



GEECO
Electric
Motors.
Monoblocks
and
Pumps.

TOTALLY ENCLOSED MOTOR

ದ. ಕನ್ನಡ, ಉ. ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ತಿನಮೊಗ್ಗ ಜಿಲ್ಲೆಗಳಿಗೆ ಏಕೈಕ ವಿತರಕರು-

ವಿಕ್ಟರ್ ಟ್ರೇಡಿಂಗ್ ಕೋರ್ಪರೇಶನ್

ಫಳನಿರ್ ರೋಡು, ಮಂಗಳೂರು—1

ಹುಮ್ಮನಸ್ಸಿನಿಂದ ಕೆಲಸಮಾಡುವ ಏಜಂಟರುಗಳು ಬೇಕಾಗಿದ್ದಾರೆ



THE MYSORE GOVERNMENT SOAP FACTORY, BANGALORE 12

ಗೀತಾ
ಅಗರಬತ್ತಿಗಳು

ಮನಮೋಹಕ ಸುಗಂಧದಿಂದಲೂ, ಮಿತವಾದ ಬೆಲೆಯಿಂದಲೂ
ಮನೆ ಮನೆಗಳಲ್ಲೂ ಸ್ವಾಗತ ಪಡೆಯುತ್ತಿರುವ ಜನಪ್ರೀತ ಅಗರಬತ್ತಿ



ರಮೇಶ್ ಪರ್‌ಫ್ಯೂಮರಿ ವರ್ಕ್ಸ್ (ಲಿಮಿಟೆಡ್)
ಕದ್ರಿ, ಮಂಗಳೂರು-2. ಫೋನ್ 875.

ಫೋನ್: 3875 ಗ್ರಾಮ್ಸ್: ಬ್ಲೂ ಸ್ಟಾರ್.

ರಮೇಶ ಪರ್ಫ್ಯೂಮರಿ ವರ್ಕ್ಸ್ (ರಿ.)
ಕದ್ರಿ, ಮಂಗಳೂರು-2.

Ramesh Perfumery Works (Regd.)
Manufacturers, Importers & Exporters,
Kadri, Mangalore-2
(Mysore State)

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ಬರ್ಡ್‌ನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.....

ಧನ (½ H.P. to 30 H.P.) ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು.....

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ರೈತ ಭಾಂದವರ ಜೀವನ ಸಂಗಾತಿ.....

ಇಮಾನಿ ಕ್ರೂಡ್ ಆಯಿಲ್ ಇಂಜಿನ್ (5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು .....

ಎಸ್.ಇ.ಐ. ಇಲೆಕ್ಟ್ರಿಕ್ ಮೋಟಾರು (½ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಪೀಟರ್ ಸ್ಟಾರ್ಟರುಗಳು.....

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ಲಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು

Tel: 'SUVASINCO' Phone: 4780

With best compliments from

The Partners

SUVASINI

BEEDI WORKS

Kadri Road — Mangalore-3

ನಮ್ಮ ಆಪಾರ ಗ್ರಾಹಕ — ಪ್ರೋತ್ಸಾಹಕರಿಗೆ

ದೀಪಾವಳಿಯ ಶುಭಾಶಯಗಳು!

ಸುವಾಸಿನಿ
ಬೀಡಿ ವರ್ಕ್ಸ್

ಕದ್ರಿ ರಸ್ತೆ — ಮಂಗಳೂರು-3

ಮನೆ ಮಡದಿಯರಿಗೆ ಮನ ಮೆಚ್ಚುವ ಸುದ್ದಿ

ಹೋಟೇಲು ಮಾಲಿಕರಿಗೆ ಅಚ್ಚ ಹೊಸ ಸುದ್ದಿ

ಕೃಷಿಕರಿಗೆಲ್ಲ "ವಿಜಯದ" ಸುದ್ದಿ

ಇವೆಲ್ಲ "ಸಂಜಯ ಇಂಡಸ್ಟ್ರೀಸ್"ನ ಸಿರಿ

ಮನೆಗಳಿಗೆ ಹೋಟೇಲುಗಳಿಗೆ ಅತ್ಯವಶ್ಯವಾದ ಅಲೆಕ್ಷಣದಲ್ಲಿ ಕಡಿಮೆ ವೆಚ್ಚದಲ್ಲಿ ಕಡೆಯುವ ಯಾಂತ್ರಿಕ ಕಲ್ಲುಗಳನ್ನೂ ಅಲ್ಲದೆ, ಕೃಷಿಕರಿಗೆ ಇಲೆಕ್ಟ್ರಿಕ್ ಪಂಪುಸೆಟ್ಟುಗಳನ್ನೂ ಆಯಿಲ್ ಇಂಜಿನುಗಳನ್ನೂ ಸುಲಭ ಕಂತುಗಳಲ್ಲಿ ಒದಗಿಸುವ ಏರ್ಪಾಡು ಮಾಡಿದ್ದೇವೆ.

ವಿಶೇಷ ಮಾಹಿತಿಗೆ ಕೂಡಲೇ ಸಂಪರ್ಕಿಸಿ

ಸಂಜಯ ಇಂಡಸ್ಟ್ರೀಸ್

ಬಲ್ಮಠ ರಸ್ತೆ, ಮಂಗಳೂರು-1

IDOLS . . . .
STATUES . . . .
PLAQUES . . . .

METALLISED IDOLS

PEARLISED IDOLS

WHEN YOU BUY IDOLS—
—BUY NEW ART'S IDOLS

NEW ART MANUFACTURE METALLISED & PEARLISED IDOLS
OF GODS & GODESSES FOR ALL RELIGIOUS MINDED PEOPLE

BEWARE OF IMITATORS

Manufacturers & Suppliers:-

NEW ART INDUSTRIES

Ram Baug, S. V. Road, MALAD BOMBAY-64.

Telephone · 691538

REGD. No. B. G. 178
LICENCE No. 31
Licensed to Post without Prepayment



ದಾರಿಯುದ್ದಕ್ಕೂ ದೀಪಸಾಲು

ಸಹಸ್ರ ದೀಪಗಳು ದಾರಿಯುದ್ದಕ್ಕೂ ಬೆಳಗಿನೆ. ಮಿಣುಕು ದೀಪ, ಹಣತೆ ದೀಪ, ಗೂಡು ದೀಪ, ಕಾಲು ದೀಪ— ನಾನಾ ತೆರನ ದೀಪರಾಜಿಗಳು ಆವರಿಸಿದ ಕತ್ತಲನ್ನು ಹಿಂತಳ್ಳಿ ಬೆಳಕಿನ ಪ್ರಭೆಯನ್ನು ದಾರಿಯುದ್ದಕ್ಕೆ ಪಸರಿಸುತ್ತಿವೆ.

ಪ್ರಗತಿಯ ದಾರಿಯ ಮೊದಲ ಹಂತಗಳಲ್ಲಿ ಮುಳ್ಳುಕಲ್ಲುಗಳು, ಏರುಪೇರುಗಳು ಎದುರಾಗುತ್ತವೆ. ಸಿಂಡಿಕೇಟ್ ಬ್ಯಾಂಕು ಕಳೆದ 41 ವರ್ಷಗಳಲ್ಲಿ ನಡೆದು ಬಂದ ದಾರಿ ಆ ತೆರನಾದುದು. ಆರಂಭದ ವರ್ಷಗಳಲ್ಲಿ ಬ್ಯಾಂಕು ತನ್ನ ಹಾದಿಗುಂಟ ಇದಿರಾದ ತೊಡಮೆಗಳನ್ನು, ಮುಳ್ಳಿನ ಬೇಲಿಗಳನ್ನು, ಕತ್ತಲು ತುಂಬಿದ ದುರ್ಗಮ ಪ್ರದೇಶಗಳನ್ನು ಸರಿದು ಇಂದು ಸುಗಮವಾದ, ಸುರಕ್ಷಿತವಾದ, ಬೆಳಕು ತುಂಬಿದ ಆವರಣವನ್ನು ಸೇರಿದೆ.

ಬ್ಯಾಂಕು ದೀರ್ಘಾವಧಿಯಲ್ಲಿ ಗಳಿಸಿದ ಪಕ್ವ ಅನುಭವದಿಂದ, ತನ್ನ ಪ್ರಗತಿಪರ ಧೋರಣೆಯಿಂದ, ಬೆಳೆಯುತ್ತಿರುವ ವ್ಯವಹಾರದಿಂದ, ಪ್ರಾಮಾಣಿಕ ಸೇವೆಯಿಂದ ಇಂದು ದೇಶದ ಮೊಟ್ಟಮೊದಲ ಹನ್ನೆರಡು ಬ್ಯಾಂಕುಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದೆ. 8000 ರೂಪ್ಯಾ ಬಂಡವಲದಿಂದ ತೊಡಗಿದ ಈ ಸಂಸ್ಥೆ ಇಂದು 1 ಕೋಟಿ ರೂಪ್ಯಾ ಬಂಡವಲದಿಂದಲೂ, 80ಕೋಟಿ ರೂಪ್ಯಾ ಸಾಧನ ಸಂಪತ್ತಿನಿಂದಲೂ ಕೂಡಿ ಅನುಭವದ ತಿಳಿವಿನ ಬೆಳಕಿನಲ್ಲಿ ಮುನ್ನಡೆಯುತ್ತಿದೆ. ಇಂದು ದಾರಿಯ ಇಕ್ಕೆಲಗಳಲ್ಲಿ ದೀಪಗಳು ಉರಿಯುತ್ತಿವೆ- ಹಾದಿಯ ಚಲನೆ ಸುಗಮವೆನಿಸಿದೆ. ಪ್ರಗತಿಯ ತುದಿಯ ಸೋಪಾನವನ್ನು ಮುಟ್ಟಿ ವ್ಯಕ್ತಿಯ ಸಂತೃಪ್ತ ಬದುಕಿನ ಮೂಲಾಧಾರವೆನಿಸಿದ ಆರ್ಥಿಕ ನೆಲೆಯನ್ನು ಸುಭದ್ರವೂ ಸುರಕ್ಷಿತವೂ ಮಾಡಲು ಹವಣಿಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: **ಮಣಿಪಾಲ, ಮೈಸೂರು ರಾಜ್ಯ.**

Edited, Printed & Published by K. H. Shetty at the Navayuga Press, Udipi, S. India.

నవయుగ

17—11—1966



౧౦
పైసలు

'ನಾರದ ಸಂಸಾರ'

ಲೇಖಕರು: ಶ್ರೀ ಪಿ. ಜಿ. ಹೆರಮೇಶ್ವರಪ್ಪ, ಚಿತ್ರದುರ್ಗ.

—: ಪಾತ್ರವರ್ಗ :—

ರಾಮಣ್ಣ—ಗುಮಾಸ್ತ—ವಯಸ್ಸು 45
ಸೀತಮ್ಮ—ರಾಮಣ್ಣನ ಪತ್ನಿ ,, 35
ರಾಧ—ರಾಮಣ್ಣನ ಮಗಳು ,, 16
ವಾಸು—ರಾಮಣ್ಣನ ಮಗ ,, 2೫
ರವಿ—ರಾಮಣ್ಣನ ಮಗ ,, 12
ಡಾಕ್ಟರ್—
ಮೇರಿ ಕಮಲಮ್ಮ—ಸ್ಕೂಲ್ ಮೇಡಂ.

(ರಾಮಣ್ಣನ ಮನೆ. ಸೀತಮ್ಮ ಹಂದಾಣಕೇಟನ್ನು ಹೊಲಿಯುತ್ತಿರುತ್ತಾಳೆ. ರಾಧ ತಾಯಿಯ ಪಕ್ಕದಲ್ಲಿ ಕುಳಿತುಕೊಂಡು ಅಕ್ಕಿ ಆರಿಸುತ್ತಿರುವಳು. ತೆರೆ ಸರಿದ ನಂತರ ರವಿ ಪುಸ್ತಕಗಳ ಚೀಲ ಹಿಡಿದು ಪ್ರವೇಶ. ಮನೆಗೆ ಬರುತ್ತಿದ್ದಂತೆಯೇ ಕೈಯಲ್ಲಿದ್ದ ಪುಸ್ತಕದ ಚೀಲವನ್ನು ಮೂಲೆಗೆಸೆದು ಮುರುಕು ಕುರ್ಚಿಯಲ್ಲಿ ಕುಳಿತುಕೊಳ್ಳುವನು.)

ಸೀತಮ್ಮ—ಆ ರೀತಿ ಪುಸ್ತಕಗಳನ್ನು ಮೂಲೆಗೆಸೆದರೆ ಏತಕ್ಕೆ ಬರುತ್ತೆ? ಸ್ಕೂಲ್ ಇಲ್ಲವೆನೋ?

ರವಿ— (ಸಿಟ್ಟಿನಿಂದ) ಇಲ್ಲವೆ ಎಲ್ಲಿ ಹೋಗುತ್ತೆ? ಭವ್ಯವಾಗಿರಲಿ ಅಂತಾ ಸರ್ಕಾರದವರು ಕಲ್ಲು ಕಟ್ಟಡ ಕಟ್ಟಿದ್ದಾರೆ.

ರಾಧ—ಹೇ ತಲೆ ಹರಟೆ. ಏನೋ ಮಾತನಾಡುವುದು?

ರವಿ—ಏನು ಮಾಡಲಿ ಅಕ್ಕಾ. ನನಗೂ ಸ್ಕೂಲ್ ಫೀಸ್ ಅಂತೆ

ರಾಧ—School Fees!

ಸೀತಮ್ಮ—ಬಡವರ ಮಕ್ಕಳಿಗೆ ಫ್ರೀ ಯಾಗಿ ಹೇಳಿ ಕೊಡಲ್ಲವೇ?

ರವಿ - ಏನು ಹೇಳಿಕೊಡ ತ್ತಾರಮ್ಮ.. Teacher ಕಣ್ಣಿಗೆನಾನುಬಡನಲ್ಲವ್ಮ ಲಕ್ಷಾಧೀಶ್ವರನಮಗ. ನಮ್ಮಸ್ಸ ಸ್ಥಿ ಏಂಥಾರು ರೂಪಾಯಿಗಳಿಸುತ್ತಾನೆ. ಹೊಲದಿಂದ ಬೇಕಾದಷ್ಟು ಕಾಳುಬರುತ್ತೆ ಅಂತಾ...

ಸೀತಮ್ಮ— ಯಾರೋ ನಿನಗೆ ಹೇಳಿದ್ರು?

ರವಿ—ಅಮ್ಮಾ, ನಾನು ಸಾಹುಕಾರನ ಮಗ ಅಂತಾ ತಿಳಿದು ಕೊಂಡು ಪುಸ್ತಕದಲ್ಲಿ ದಾಖಲೆ ಮಾಡಿದ್ದಾರೆ.

ರಾಧ-ನಿಮ್ಮTeacherಗೆ ಬುದ್ಧಿ ಇಲ್ಲ ಅಂತ ಕಾಣುತ್ತೆ. ನಾವುಪಡುತ್ತಿರುವ ಕಷ್ಟ ಅವರಿಗೇನು ಗೊತ್ತು? ದಿನಕ್ಕೆ ಎರಡೊತ್ತು ಗಂಜಿ ಸಿಕ್ಕರೆ ಸಾಕಾಗಿದೆ.

ರವಿ—ಅಮ್ಮಾ ಒಪ್ಪನಿಗೂ ಮೇಷ್ಟ್ರಿಗೂ ಆಗಲ್ಲವಂತೆ.

ಸೀತಮ್ಮ—ಯಾಕೊ?

ರವಿ—ಏನು ಹೇಳಲಿ? ಅಪ್ಪಂಗೆ ಬುದ್ಧಿ ಇಲ್ಲಾ ಅಂತಾ ನನ್ನೆದುರಿಗೆ ಅನೇಕ ಸಾರಿ ಬೈದಿದ್ದಾರೆ. ಸ್ಕೂಲ್ fees ಕೊಡುವುದಕ್ಕೆ ಯೋಗ್ಯತೆ ಇಲ್ಲದವನು ಈತ್ತ ಮಕ್ಕಳನ್ನೇಕೆ ಮಾಡಿಕೊಳ್ಳ ಬೇಕು? ಹತ್ತು ಮಕ್ಕಳಲ್ಲಿ ಒಬ್ಬನಿಗಾದರೂ ಸರಿಯಾಗಿ ಓದಿಸಿದನೇ? ಏಕಣ್ಣನಿಗೆ 10th Standardಗೆ ಪರೀಕ್ಷೆ fee ಕಟ್ಟಲಾರದೆ ಹುಡುಗನ ಜೀವನವೇ ಹಾಳು ಮಾಡಿದ. ಎಂಡು ಮೂರು ಮಕ್ಕಳಾಗಿದ್ರೇ ಸಾಲದೆ? ನಾರದ ಸಂಸಾರ ಏಕೆ ಮಾಡಿಕೊಳ್ಳಬೇಕು? ಕುಟುಂಬ ಯೋಜನೆಗೆ ಸೇರಿದ್ರೆ ಆಗುತ್ತಿರಲಿಲ್ಲವೇ?

ಸೀತಮ್ಮ—(ಕಿವಿ ಮುಚ್ಚಿಕೊಳ್ಳುತ್ತಾ) ರಾಮ ರಾಮ! ನಾಕು ಏಳ್ಲಿ ಸೋರವಿ.ನನಗೂ ಕೇಳಿ ಕೇಳಿ ಸಾಕಾಗಿದೆ.

ರವಿ—ಅಮ್ಮಾ, ನಮ್ಮ ಮನೆಯಲ್ಲಿ ವಿದ್ಯಾವಂತರಾಗಲೇ ಬೇಕು. ನಾನಂತೂ ಖಂಡಿತ ಡಾಕ್ಟರ್ ಆಗಲೇ ಬೇಕು. ಆ Teacher ಆಡುವ ನೂತುಗಳಿಗೆ ನಾನು ತಿರುಗಿಸಿ ಹೇಳಲೇ ಬೇಕು.

ರಾಧ – ಕೇಳಿದೆಯೇನಮ್ಮ ಮಕ್ಕಳು ಪಡುತ್ತಿರುವ ಕಷ್ಟವನ್ನಾ. ರವಿ 6th Standard ಓದ ಬೇಕಾದರೆ ಈ ಕಣಿ ಬರಸ. ಡಾಕ್ಟರ್ ಆಗಬೇಕು ಅಂತಾ ಕುಣಿಯುತ್ತಾನೆ. ಕೊನೆಗೆ ಕಂಪೌಂಡರ್ ಕೂಡ ಮಾಡುವುದಕ್ಕೆ ಆಗುತ್ತೋ ಇಲ್ಲವೋ?

ಸೀತಮ್ಮ— ಏನು ಮಾಡಲಿ ರಾಧ? ನನ್ನ ಕಷ್ಟ ನಿನಗೆ ಗೊತ್ತಿಲ್ಲವೇ? ಬಡವರಿಗೆ ಇಷ್ಟೊಂದು ಮಕ್ಕಳ ಫಲ ಯಾತಕ್ಕೆ ಕೊಡುತ್ತಾನೋ ದೇವರಿಗೇ ಬುದ್ಧಿ ಇಲ್ಲಾ. ಕಂಡಕಂಡ ದೇವರಿಗೂ ಕೈ ಮುಗಿದರೂ ಕೆಲವರಿಗೆ ಒಂದು ಮಗುವಿನ ತಾಯಿ ಯಾಗಲು ಕರುಣಿಸುವುದಿಲ್ಲ.

ರಾಧ – ಅಪ್ಪನಿಗೂ ನಿನಗೂ ಸಹ ಡಾಕ್ಟರ್ ಎಷ್ಟು ಸಾರಿ ಹೇಳಿದರಮ್ಮ. ಇಬ್ಬರೂ ಕುಟುಂಬ ಯೋಜನೆಗೆ ಸೇರಿ ಅಂತಾ. ಆದರೆ ಡಾಕ್ಟರ್ ಮಾತನ್ನು ಕಸಕ್ಕಿಂತ ಕಡೆಯೂಡಿ ತನುಮನಗಳ ಆಸೆಯನ್ನು ತೀರಿಸಿ ಕೊಂಡಿರೇ ವಿನಹ ಮಕ್ಕಳ ಸ್ಥಿತಿ ಏನೂಂತಾಯೋಚಿಸಿದ್ದಿರಾ?

ರವಿ – ಅಮ್ಮಾ, ಭಿಕ್ಷೆಮಾಡಿ ಜೀವಿಸೋಣವೆಂದ್ರೇ ಯಾರು ಒಂದು ಹುತ್ತು ಅನ್ನ ಕೂಡ ಹಾಕಲ್ಲ. ಇದು ಕಲಿಕಾಲವಮ್ಮ ಕಲಿಕಾಲ.

ಸೀತಮ್ಮ— ನನಗಂತೂ ತಲೆ ಕೆಟ್ಟು ಹೋಗಿದೆ. ಯಾವುದಾದರೂ ಹಾಳು ಬಾವಿಗೆ ಬಿಳೋಣವೇ ಅನ್ನಿಸುತ್ತೆ. ಮಕ್ಕಳ ಮುಖ ನೋಡಿದ ಲಕ್ಷಣ ಕಾಣೋಲೇ ಕಷ್ಟ ರಿಸಿದಂತಾಗುತ್ತೆ. ರಾಧ, ಏನೂ ಮಾಡುವುದು? ಎಲ್ಲಾ ನಮ್ಮ ಕರ್ಮ. ಬೇ ರಾಧ, ಉಮಾಗೆ ಬೆಸಿಧವೇ ಕೊಡಲಿಲ್ಲ. ಅವರು ಡಾಕ್ಟರ್ ಬೇರೆ ಕರೆದುಕೊಂಡು ಬರಲು ಹೋಗಿದ್ದಾರೆ.

ರಾಧ— ನಾನು ಕೊಡುತ್ತೇನಮ್ಮ.

ಸೀತಮ್ಮ— ಹೀಗೆ ಒಬ್ಬೊಬ್ಬರಿಗೂ ಕಾಯಿಲೆ ಬಂದು ಯಾಕೆ ಎಲ್ಲರೂ ನಾಳು ಬಾರನು ಆನ್ನಿಸುತ್ತೆ.

ರಾಧ— (ದುಃಖದಿಂದ) ಅಮ್ಮಾ!.... ಎಂತಹ ನೂತನಾಡುತ್ತೀಯಾ? ಹೆತ್ತ ತಾಯಿ ಹೇಳಿವ ಮಾತೆ?

ಸೀತಮ್ಮ— ಮಕ್ಕಳ ಆಸೆ ನೇರವೇರಿಸಲು ನನ್ನ ಕೈಲಿಂದಾ ಸಾಧ್ಯವಿಲ್ಲ. ದಿನ ದಿನಕ್ಕೂ ಸಾಲ ಏರುತ್ತೇ ವಿನಃ ಕಡಮೆಯಾಗಲ್ಲ. ತವರು ಮನೆಯಿಂದಲಾದರೂ ಸಹಾಯ ಪಡೆಯೋಣವೆಂದ್ರೇ ಆ ವರದೂ ದೋಸೆ ತೂತೇ. ನಾನು ಎರಡು ಮೂರು ಮನೆ ಮುಸರೆ ತಿಕ್ಕಿದರೂ ಉಡತನವೆಂಬ ಮುಸರೆ ತೊಳೆಯಲಾರದೆ ಹೋಗಿದ್ದೇನೆ ರಾಧ.

ರವಿ— ನಾನು ನಾಳೆಯಿಂದ ಕಾರ್ ಮೆಂಟಿಗೆ ಹೋಗುತ್ತೇನಮ್ಮ.

ರಾಧ: —ಫೀಸ್ ಕೊಡುವುದಕ್ಕೆ ಪಜೀತಿಯಾಗುತ್ತಿರುವಾಗ ಕಾರುಮೆಂಟಿಗೆ ಹೋಗುತ್ತಾನಂತೆ. ತಿಂಡಿಗೆ 6—7ರೂ ಖಾಯಿ ನಿನಗೆಎಲ್ಲಿಂದ ತರುವುದು? ಇವತ್ತಿನ ಸ್ಕೂಲ್ ಹಾಳಾಯ್ತು.ಸೊಸೈಟಿಗಾದ್ರೂ ಹೋಗಿ ಬಾ.

ರವಿ:—ಕ್ಯೂ ನಿಂತು ಕೊಳ್ಳುವುದಕ್ಕೆ ನನ್ನ ಕೈಲಿ ಆಗಲ್ಲ. ಹುಡುಗರಿಗೆ ಕೊಡಲಲ್ಲಾ ಅಂತಾ ಮನೆಗೆ ಕಳಿಸುತ್ತಾರೆ. ಅಮ್ಮಾ....

ಸೀತಮ್ಮ: —ಅವನಿದೇನ ಮಾತು.ರಾಧ, ಉಮೆಗೆ ಔಷಧಿ ಕೊಡು.

ರಾಧ: —ಸರಿಯಮ್ಮ. (ಅಕ್ಕಿ ತಟ್ಟೆಯೊಂದಿಗೆ ನಿರ್ಗಮನ)

ರವಿ—ಅಮ್ಮಾ, ಮೇರಿ ಮೇಡಂ ಹೇಳಿದ್ದರಮ್ಮ. ನಾಳೆಯಿಂದಲೇ ಕಾರ್‌ಮೆಂಟಿಗೆ ಬಾ ಅಂತಾ.

ಸೀತಮ್ಮ— ಇಲ್ಲದ ತಲೆ ಹರಟೆಮಾಡ ಬೇಡಕಣೋ. ಸೊಸೈಟಿಗೆ ಹೋಗಲ್ಲ ಅಂತಿಯೂ ಕುಳಿತುಕೊಂಡು ಓದಿಕೊಳ್ಳುವುದಕ್ಕಾಗಲ್ಲವೇ?

ರವಿ— ನಾನು ಅವರ ಮನೆಯಲ್ಲಿರುವುದಾದರೇ ಡಾಕ್ಟರ್ ಪರೀಕ್ಷೆ ಓದಿಕೊತ್ತಾರಮ್ಮ.

ಸೀತಮ್ಮ— ನೀನು ಜಾತಿಬಿಟ್ಟು ಕ್ರೈಸ್ತಿಯನ್ ಆಗುತ್ತಿಯೇ? ಅವರ ಮನೆಗೆ ಯಾಕೆ ಹೋಗುತ್ತಿಯೇ?

ರವಿ— ತುಂಬಾ ಒಳ್ಳೆಯವರಮ್ಮ. ನನ್ನ ಕಂಡ್ರೆ ತುಂಬಾ ಪ್ರೀತಿ. ನಾನು ಹೋದಾಗಲೆಲ್ಲಾ....

ಸೀತಮ್ಮ— ಮೇರಿ ಮನೆಯಲ್ಲಿ ತಿನ್ನುತ್ತಿಯಾ?

ರವಿ— ಕಾಫಿ ಮಾತ್ರ ಕುಡಿದಿದ್ದೇನಮ್ಮ ಅಷ್ಟೇ.

ಸೀತಮ್ಮ— ನಿಮ್ಮಪ್ಪ ಬರಲೀ.ಇವತ್ತೀಜೆಗೆ ನಿನ್ನಿದೂ ತಲೆಲಿಜಾಸ್ತಿಆಯ್ತು.

ರವಿ— ನೀನು ಏನೇ ಹೇಳಿದರೂ ಕೇಳಲ್ಲ. ನಾನು ನಾಳೆ ಕಾರ್ ಮೆಂಟಿಗೆಹೋಗುತ್ತೇನೆ. (ನಿರ್ಗಮನ)

ಸೀತಮ್ಮ— (ಸ್ವಗತ) ಯಾರಿಗೆ ಏ ಮಾಧಾನ ಮಾಡೋಣ? ಯಾರಿಗೆ ಬಿಡಲಿ ಒಬ್ಬರ ಮುಖ ನೋಡಿದ್ರೆ ಒಂದು ತರಾ ಆಗುತ್ತೆ. ಇನ್ನು ರಾಧೆಯ ಮದುವೆ (ದುಃಖದಿಂದ) ಹೇ ದೇವರೇ, ಇನ್ನೂ ಎಷ್ಟಕಾಲ ಅಂತಾ ಕಷ್ಟಾ ಕೊಡುತ್ತೀಯೋ ನಿನ್ನ ಸಾನಿಧ್ಯದಲ್ಲಾದರೂ ಸೇರಿಸಿಕೋ. (ಕಣ್ಣೀರನ್ನು ಒರೆಸಿಕೊಳ್ಳುತ್ತಿರುವಳು. ಅನಂತರ ರಂಧೆ ಪ್ರವೇಶ)

ರಾಧ—ಯಾಕಮ್ಮಾ ಕುಮ್ಮನೆ ಅಳುತ್ತೀಯಾ? ಅತ್ತರೆ ಈಗ ಸರಿಹೋಗುತ್ತದೆಯೇ? ಅರಿತು ಮಾಡಿದ ಪಾಪ ಮರೆತರೂ ಹೋಗುವುದಿಲ್ಲವಮ್ಮಾ.

ಸೀತಮ್ಮ—ನಿಜಮಗಳೇ.ನಿನಗೆಮದುವೆಯ ನಯಸ್ಸಾದರೂ ಸುಮ್ಮನೆ ಕುಳಿತ್ತಿದ್ದೇನೆ. ನೀನೊಬ್ಬಳು ಗಂಡಾಗಿದ್ದರೆ ಸದ್ದ ಕಷ್ಟ ಇರುತ್ತಿರಲಿಲ್ಲ.

ರಾಧ.—ಈ ಗೇಕನ್ಮೂ ಆಯೋಜನೆ, ನನ್ನ ಹಣೆಯಲ್ಲಿ ಮದ್ವೆ ಅಂತಾ ಬರೆದಿದ್ದರೆ ಬಿಡಿಸಿತ ಆಗುಯೇ ಆಗುತ್ತೆ. ನನಗೋಸ್ಕರವಾಗಿ ಕೊರಗಿ ಸಾಯಬೇಡಮ್ಮ. ಇರೋವಷ್ಟು ದಿನ ನಗತ್ತಾ ಕಾಲಕಳೆಯೋಣ.

ಸೀತಮ್ಮ—ಉಮಾಗೆ ಜ್ವರ ಇಲ್ಲತಾನೇ?

ರಾಧ—ಸ್ವಲ್ಪ ಇದೆಯಮ್ಮ. ಹೊಟ್ಟೆ ಹಸಿತಾ ಇದೆ ಅಂತಾಳೆ. ಕಾಫಿನೂದೋಣವೆಂದ್ರೇ ಹಾಲು ಸಕ್ಕರೆ ಇಲ್ಲ. ಕೈಗುಳ್ಳೆ ಕಾಸಿದ್ರೇ ಮೊಸಂಬಿ ಹಣ್ಣಾದರೂ ತರಿಸಬಹುದಿತ್ತು.

ಸೀತಮ್ಮ ಅಯ್ಯೋದೇವರೇ!ನಾವೇನೂ ಹೇಗಾದರೂ ಹಸಿವಿನಿರದ ಬಳಲಿದರೂ ಚಿಂತೆಯಿಲ್ಲ. ಮಕ್ಕಳು....ಕಾಯಿಲೆಯಿಂದ ನರಳುವ ಯಾತನೆ ನಿನಗೆ ಅರ್ಥವಾಗದೆ? ಮೂಕಪ್ರಾಣಿಗೆ ಕಾಯಿಲೆ ಬಂದುವುದೂ ಮಕ್ಕಳಿಗೆ ಬರುವುದೂ ಒಂದೆ

ರಾಧೆ—ಅಪ್ಪ ಡಾಕ್ಟರ್ ಕರೆತರುತ್ತೆನೆ ಅಂತಾ ಹೋದವನು ಇನ್ನೂ ಬರಲಿಲ್ಲ.

ಸೀತಮ್ಮ ಹೇಗೆ ಬರುತ್ತಾರಮ್ಮ.ಕಣ್ಣಾರೆ ಲ್ಲದೆ ಯಾವ ಡಾಕ್ಟರ್ ತಾನೆ ಮನೆಗೆಬರಲು ಒಪ್ಪುತ್ತಾನೆ? ಅವನೊಬ್ಬ ಕರುಣಾಮಯಿ. ಜೀವನ ಕೆಲಸವೆಲ್ಲಾ ಪೂರೈಸಿಕೊಂಡು ಬರುವುದಕ್ಕೆ ಲೇಟಾಗಬಹದು. ಡಾಕ್ಟರ್ ಪರಶಿವಮೂರ್ತಿ ಪರಿಚಯವಾಗಿದ್ದಕ್ಕೆ ನನ್ನ ಶಂಕರನೇ ನೋಡಿ....ಮಗುರುಗಿ...ಮನೆಗೆ ಬಂದು ನೋಡಿ ಔಷಧಿ ಕೊಡುತ್ತಾನೆ. ಇಷ್ಟಿಯವರೆಗೂ ಹಣವೇ ಕೊಟ್ಟಿಲ್ಲ. ಯಾವುದಾದರೂ T.A. ಹಣಾಂದರೆ ಕೊಡಬೇಕಂತ ಇದ್ದಾರೆ. ಪರಶಿವಮೂರ್ತಿ ಅಂತಾ ಡಾಕ್ಟರ್ ಪರಶಿವನೇ ಚೆನ್ನಾಗಿ ಕಾಪಾಡಲಿ.

ರಾಧೆ— (ಬಾಗಿಲ ಕಡೆ ನೋಡಿ) (ಹರ್ಷದಿಂದ) ಅಪ್ಪ ಬಂದ್ರು ನೋಡಿ)

ಅತ್ಯಾಧುನಿಕ ಸಲಕರಣೆ — ಸೌತರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ:77 ಹುಂದಾಪುರ, ದ. ಕ.

ನಲ್ಮತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ನೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಸಿನ ಪ್ರಮೋದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಸಮಯ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಶ್ರೀ ವಿದೇಶಗಳ ವಿದ್ಯಾರ್ಥಿಗಳು ಅಧ್ಯಯನ ಕಂಡಗಳಲ್ಲಿ ಕೂಡಾ ಅಮೆರಿಕವನ್ನು ಸಂದರ್ಶಿಸುತ್ತಾರೆ. ಇಂತಹ ತಂಡವೊಂದನ್ನು ಅಧ್ಯಕ್ಷ ಜಾನ್ಸನ್ನರು ಶ್ವೇತ್ಪೂರ್ವಕ ಸ್ವಾಗತಿಸುವ ಸನ್ನಿವೇಶ.

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೧೨	೧೭—೧೧—೧೯೬೬	No. 12

ನಂದದ ನಂದಾ

ದೀನಾವಳಿಯ ಉಡುಗೊರೆಯಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಯವರು ಭಾರತೀಯರಿಗೆ ಹೊಸ ಮಂತ್ರಿಗಳ ಬ್ಬರನ್ನು ಕೊಟ್ಟಿದ್ದಾರೆ; ಇಲ್ಲವಾ ಹಳೆಯ ಮಂತ್ರಿಗಳನ್ನೇ, ಹೊಸ ಶಾಖೆಗಳನ್ನು ಕೊಟ್ಟು,ಹೊಸ ಮಂತ್ರಿಗಳಾಗಿ ನೇಮಿಸಿಕೊಂಡಿದ್ದಾರೆ ಕಳೆದ ಹದಿನೈದು ವರ್ಷಗಳಿಂದ ಯೋಜನಾ ಶಾಖೆಯಿಂದ ತೊಡಗಿ ಗೃಹಶಾಖೆಯವರೆಗಿನ ಒನೇಕ ಮಂತ್ರಶಾಖೆಗಳಲ್ಲಿ ದುಡಿದ ಹಿರಿಯ ಮುತ್ಸದ್ದಿ ಗುಲ್ಜಾರೀಲಾಲ ನಂದಾರ ರಾಜೀನಾಮೆಯಿಂದಾಗಿಯೇ ಈ ಉಡುಗೊರೆ ದೊರೆಯಲು ಕಾರಣವಾಯಿತು. ಪ್ರಧಾನಿಯೊಡಾಗ ಮೊದಲಿಗೆ ತಾನೇ ಇಟ್ಟುಕೊಂಡಿದ್ದ ವಿದೇಶ ಮಂತ್ರಿ ಶಾಖೆಯನ್ನು ಮದ್ಯೆ ಸ್ವರ್ಣ ಸಿಂಗರಿಗೆ ನೀಡಿ ಈಗ ಮತ್ತೆ ತಾನೇ ಏಕಹಿಕೊಂಡಿದ್ದಾರೆ, ಇಂದಿರಾ ಗಾಂಧಿಯವರು. ಸಿಂಗರಿಗೆ ಸಂರಕ್ಷಣೆ ಮತ್ತು ಜವನರಿಗೆ ಗೃಹ ಶಾಖೆಯನ್ನು ಹಂಚಿದ್ದಾರೆ — ಅಂತರೆ, ಜವಾಬ್ದರಿಯತ ಶಾಖೆಗಳಲ್ಲಿ ಅಲ್ಪ ಬದಲಾವಣೆ ಮಾಡಿದ್ದಾರೆ. ಶಚೀಂದ್ರ ಚೌಧರಿ ಮತ್ತು ಮನೂಭಾಯಿ ಶಹರ ಉಜ್ಜಾಟನೆಯೂ ನಡೆಯಲಿಲ್ಲವೆಂಬ ಕಿಂವದಂತಿಗಳನ್ನೂ ದೃಢಪಟ್ಟಲ್ಲ.

ಮಂತ್ರಿಮಂಡಲದ ಸಂರಚನೆ ಸಾಮಾನ್ಯರೀತಿಯಲ್ಲೇ ಆಗುತಿದ್ದರೆ,ಅದರಲ್ಲಿ ಹೆಚ್ಚು ಗಮನ ಯಾರೂ ನೀಡುತ್ತಿರಲಿಲ್ಲ, ನಂದಾ ಪಂಡಿತ ನೆಹರೂರವರ ಪ್ರಥಮ ಮಂತ್ರಿಮಂಡಳದಲ್ಲಿ ಯೋಜನಾ ಮಂತ್ರಿಯಾಗಿದ್ದರೆಂಬುದಕ್ಕೆ ಅವರ ಕೊನೆಗಾಲದಲ್ಲಿ ಯೇ ಗೃಹ ಶಾಖೆ ಬಿಲ್ಲಿ ಮಂತ್ರಿಯನ್ನಾಗಿ ನಿಯಮಿಸಿದ್ದು ಸಾಬೀತಾಗಿದೆ. ಆದ್ದರಿಂದ ಗಾಂಧಿ ಸಂಪುಟದಲ್ಲಿ ನಂದಾ ಭವಿಷ್ಯ ಹಿರಿಯ ಹಾಗೂ ಮುಖ್ಯವಾದ್ದಿತ ಎಂದು ಹೇಳಿದವರು ಇವರು. ಕಾಂಗ್ರೆಸ್ ಪಕ್ಷೀಯ ಕಾರ್ಯಕರ್ತರಲ್ಲಿ ಹೆಸರು ಮಾಡಿರುವ ಹಲವು ಮಂತ್ರಿಗಳು, ಆ ಸಭೆಯಲ್ಲಿ ಪ್ರಧಾನಿಗಳ ಮೌನ ವೈಖರಿ ಇವುಗಳಿಂದಾಗಿ ನಂದಾ ಪ್ರಜಾಸತ್ತೆಗೆ ಉಚಿತವಾದ ನಿರ್ಣಯವನ್ನೇ ಕೈಗೊಂಡರು. ತಾವುವಹಿಸಿದ ಯಾವುದೇ ಕಾರ್ಯವನ್ನು ಸಾಧಿಸುವಲ್ಲಿ ಇವರು ತೋರಿಸಿದ ಆಸಕ್ತಿ ಮತ್ತು ಗಳಿಸಿದ ಯಶಸ್ಸು ಸ್ತುತಿ ಮಂತ್ರಿಗೂ ಆದರ್ಶಪ್ರಾಯವಾಗಿದೆ. ಪ್ರಧಾನ ಮಂತ್ರಿಗಳ ವಿಶ್ವಾಸವಿರಿಸಿಕೊಂಡಿರುವಷ್ಟು ದಿನ ಮಾತ್ರ ಕೇಂದ್ರದಲ್ಲಿ ಮಂತ್ರಿಯಾಗಿರಬಲ್ಲ. ನಂದಾರ ಮೇಲಣ ಇಂದಿರಾ ವಿಶ್ವಾಸ ನಷ್ಟವಾಯಿತು. ನಂದಾರ ಮೇಲೆ ಸೆದ ಟೀಕಾಸ್ತ್ರಗಳಿಂದ ಅವರನ್ನು ರಕ್ಷಿಸಲು ಇಂದಿರಾ ನಿಳಲಿಲ್ಲ— ನೀವು ನನ್ನ ವಿಶ್ವಾಸವನ್ನು ಕಳದುಕೊಂಡಿದ್ದೀರಿ—ಎಂದರು ಅಷ್ಟೆ. ಈ ರೀತಿಯ ಪರಿಸ್ಥಿತಿಯನ್ನು ಪ್ರಾಯಃ ಯಾವ ಮಂತ್ರಿಯೂ ಈ ಮೊದಲು ಎದುರಿಸಿಲ್ಲ. ಹಿಂದೆ ಶ್ರೀ ಮೆನನ್ರ ಮೇಲೆ ದೇಶಕ್ಕೆ ದೇಶವೇ ಮುನಿದು ಬಿದ್ದ ವೇಳೆಯಲ್ಲೂ ಪ್ರಧಾನಿ ನೆಹರುರವರು ಅವರ ರಕ್ಷಣೆಗೆ ಮುಂದಾಗಿದ್ದರು. ಆದನ್ನು ನೆನೆಯುವಾಗ ನಂದಾ ಮಾಡಬಾರದ ಅಪರಾಧ ಮಾಡಿದ್ದಾರೆಂಬ ಸಂದೇಹವೇಳುವುದು ಸಹಜ; ಆಥವಾ ನಂದಾರ ಪ್ರಾಮಾಣಿಕತೆ ವ್ಯಕ್ತಿತ್ವದ ಪರಿಚಯ ಇಂದಿರಾ ಗಾಂಧಿಗಿಲ್ಲ; ಆವರ ಪ್ರಾಮಾಣಿಕತೆ ಹಲವರಿಗೆ ಅಡ್ಡಿಕಂದಿದೆಯೆಂದೂಹೇಳಬಹುದು.

ಭೂತಪೂರ್ವ ಗೃಹಮಂತ್ರಿಯವರು ಒಂದು ಹೇಳಿಕೆ ನೀಡಿ ಪ್ರಧಾನಿಗಳವರು ಸಹಕಾರ ತನಗೆ ದೊರೆಯಲಿಲ್ಲ ಎಂದು ಮುಂತಾಗಿ ಹೇಳಿದ್ದಾರೆ—ಇದನ್ನು ಗಾಂಧಿಯವರು ಅಲ್ಲಗಳೆದಿದ್ದಾರೆ. ಆದೇನೇ ಇದ್ದರೂ ನಂದಾರ ನೀತಿ—ರೀತಿಗಳಿಗೆ ಕೇಂದ್ರದಲ್ಲಿ ಪುರಸ್ಕಾರ ದೊರೆಯುತ್ತಿರಲಿಲ್ಲ—ಕಾರ್ಯದರ್ಶಿಯಲ್ಲಿನ ಬದಲಾವಣೆಯು ಪ್ರಶ್ನೆಯೂ ನಂದಾ ಬಯಸಿದಂತೆ ಬಗೆ ಹರಿಯಲಿಲ್ಲ—ಹಾಗಿರುವಾಗ ನಂದಾ ಹೊರ ಬರಲು ಇಷ್ಟು ತಡವಾಯಿತೆಂದರೇಕೆ? ಕಾಮರಾಜರ ಒತ್ತಾಸೆಯಿಂದಾಗಿಯೇ? ಆದರೆ, ಈ ಬಾರಿ ಕಾವ ರಾಜರೂ ಮೌನ! ಇದರ ಮೇಲೆ ನಂದಾರ ಮೇಲೆ ಹಕ್ಕದ ಶಿಸ್ತುಕೆಡಿಸಿದ ಆರೋಪ ಹೊರಿಸುವ ಸಿದ್ಧತೆಯೂ ನಡೆಯು ತೊಡಗಿದೆ.

ಗುಲ್ಜಾರೀ ಲಾಲನಂದಾರಂಗೆ ದೊರೆತಮುಳಿನ ಹಾಸಿಗೆ ಪ್ರಜಾಸತ್ತೆಯಲ್ಲಿ ಯಾರಿಗೂ ದೊರೆಯಬಾರದು. ನಂದಾ ಮುಂದೇನು ಮಾಡುವರು? ಮುಂದಿನ ಸಾರ್ವತ್ರಿಕ ಚುನಾವಣೆಗಳ ಸಂಬಂಧದ ಹೊಣೆಗಾರಿಕೆಯನ್ನು ಹೊರುವಂತೆ ಕಾಮರಾಜರು ಕೇಳಿಕೊಂಡಿದ್ದಾರೆಂದೂ ನಂದಾ ಇದಕ್ಕೆ ಸಮ್ಮತಿಸಿರುವರೆಂದೂ ವದಂತಿ. ಕಾಂಗ್ರೆಸ್ಸಿನ ಒಬ್ಬ ಪ್ರಧಾನ ಕಾರ್ಯದರ್ಶಿಯಾಗುವರೆಂದೂ ಸುದ್ದಿ. ಗಟ್ಟಿವಾದಾನ ನಿರ್ಣಯಕ ವಿನೋಬಾಜಿಯನ್ನು ಭೇಟ್ಟಿಮಾಡ ಬಯಸುವ ನಂದಾ ತನ್ನ ಮುಂದಿನ ಜೀವನವನ್ನು ಯಾವ ರೀತಿ ಕಳೆಯುವರು ಎಂಬುದು ಇನ್ನೂ ಸ್ಪಷ್ಟವಿಲ್ಲ. ಆದರೆ, ಸರಕಾರದಿಂದ ಹೊರಗಿದ್ದರೂ ನಂದಾರಿಂದ ದೇಶ ತುಂಬ ಸೇವೆಯನ್ನು ಬಯಸುತ್ತಿದೆ. ಅವರೂ ಇಲ್ಲವೆನ್ನಲಾರರು.

ಬದುಕುವುದು ಬೇಗೆ?

ಐದನೆಯ ಉಕ್ಕಿನ ಕಾರ್ಖಾನೆ ಆಂಧ್ರ ಪ್ರದೇಶದಲ್ಲಿ ನಿರ್ಮಾಣಗೊಳ್ಳಬೇಕೆಂಬ ಬೇಡಿಕೆ ಮುಂದಿಟ್ಟು ತೆಲಗಿದ ಆಂದೋಲನ ವಂತೆ ಚಿಗುರುವ ಲಕ್ಷಣಗಳೇ ಹೆಚ್ಚು. ಕೇಂದ್ರ ಸರಕಾರವು ಅಲ್ಲಿಯೇ ಇದನ್ನು ತೆರೆಯುವ ಲವಲವಿಕೆಯನ್ನು ವ್ಯಕ್ತಪಡಿಸಿದ್ದರೂ ಸಂಪನ್ಮೂಲಗಳ ಕೊರತೆಯ ಸಮಸ್ಯೆಯನ್ನು ಮುಂದೆ ಮಾಡಿ ಇದರ ಸ್ಥಾಪನೆಯು ಕಷ್ಟ ಸಾಧ್ಯವೆಂಬುದನ್ನೂ ಬಹಿರಂಗಗೊಳಿಸಿದೆ— ಇದು ಕರ್ನಾಟಕ ಮತ್ತು ತಮಿಳು ನಾಡುಗಳನ್ನ ತೃಪ್ತಿಪಡಿಸುವುದಕ್ಕೂ ಇರಬಾರದೇಕೆ? ಏಕೆಂದರೆ, ಇವೂ ಉಕ್ಕಿನ ಕಾರಖಾನೆಗೆ ತಮ್ಮ ತಮ್ಮ ರಾಜ್ಯ ಉತ್ತಮ ಸ್ಥಾನ ಒದಗಿಸಬಲ್ಲುದೆಂದು ಕೂಗುತ್ತಿವೆ. ಇಂದು ನಾವು ಯೋಚಿಸಬೇಕಾದ ಸಂಗತಿಯೊಂದು: ಬೇಡುವುದು ಸುಲಭ; ನೀಡುವುದು? ಜನತೆ ಆಂದೋಲನದಂತಹ ಉಗ್ರ ಕ್ರಮ ಕೈ ಕೊಂಡರೆ, ಸರಕಾರವಾದರೂ ಉಗ್ರ ದಂಡ ನೀತಿಯಿಂದಲೇ ಕಾಯದೆ— ಸುವ್ಯವಸ್ಥೆಯನ್ನು ಸಂರಕ್ಷಿಸಬೇಕು. ಇಲ್ಲವಾದರೆ, ದಿನದಿನವೂ ಬೆಳೆಯುತ್ತಿರುವ ಈ ಸೋಂಕು ಜಾಡ್ಯದಿಂದ ಜನ ಸಾಮಾನ್ಯರು ಜೀವಿಸುವುದೂ ದುಸ್ತರವಾಗುತ್ತದೆ. ಆಂದೋಲನಕ್ಕೆ ಅವಕಾಶವೇ ಇಲ್ಲದಂತಾದಾಗ ನವ್ಮ ದೇಶದ ಆಂದೋಲಿತ ಪರಿಸ್ಥಿತಿ ಮುಕ್ತಾಯ ವಾಲು ಕೊನೆಗೊಳ್ಳುವುದು.

ಕೃತಜ್ಞತೆಗಳು

ಇತ್ತೀಚೆಗೆ ನವಯುಗದ ಪ್ರಚಾರಾರ್ಥ ಸಂಚಾರ ಕೈಗೊಂಡಾಗ ನಂಡ್ಲೆಯಲ್ಲಿ ಸಹಕರಿಸಿದ ಶ್ರೀ ವಿ. ಕೆ. ಶೀನಪ್ಪಶೆಟ್ಟಿ ಡಾಕ್ಯು, ಸಂಜೀವ ಶೆಟ್ಟಿ ಇವರಿಗೂ ಬೆಂಗಳೂರಲ್ಲಿ ನೆರವಾದ ಹೋಟೆಲ್ ಸತ್ಕಾರದ ಶ್ರೀ ಟಿ. ಎಸ್. ಶೆಟ್ಟಿ, ಎಡ್ವರ್ಡ್‌ಕೇಟ್ ಶ್ರೀ ಕೆ. ಜೆ. ಶೆಟ್ಟಿ ಇವರಿಗೂ ಮೈಸೂರಲ್ಲಿ ಉಪಕರಿಸಿದ ಡಾ। ಸತೀರಚಂದ್ರ ಶೆಟ್ಟರಿಗೂ ನವ್ಮ ಕೃತಜ್ಞತೆಗಳು.

ಕೆ. ಹೊನ್ನಯ್ಯ ಶೆಟ್ಟಿ
ಸಂಪಾದಕ

ವಚನ ಸುಧೆ

ಅವೃತ್ತಿಭಯಮುಂತ್ಯಾನಾಂ
ಮಧ್ಯಾನಾಂ ನರಕಾತ್ ಭಯಂ
ಉತ್ತಮಾನಾಂ ತು ಮೃತ್ಯ್ವಾನಾ
ಮವಮಾನಾತ್ ಪರಂ ಭಯಂ ||

ನಿವೃತ್ತಿಯಿಂದ ಅಧಮರಿಗೆ, ಮಧ್ಯರಿಗೆ ನರಕದಿಂದ ಭಯ, ಉತ್ತಮರಿಗೆ ಮೃತ್ಯುವಿನಿಂದ ಭಯ, ಆದರೆ, ಉತ್ತಮರು ಅಪಮಾನದಿಂದ ಹೆಚ್ಚು ಹೆದರುತ್ತಾರೆ.

ನರಸಣ್ಣನ ನರಸ



'ಗೋವಧೆಯನ್ನು ನಿಲ್ಲಿಸಲು ಸಂವಿಧಾನ ತಿದ್ದುಪಡಿ ಮಾಡಿದೆ ಸಂಸತ್ತಿಗೆ ಅಧಿಕಾರವಿಲ್ಲವಂತೆ....'

ಬೇಕೆಂದಿದ್ದರೆ ಯಾಕೆ ತಿದ್ದುಪಡಿ ಮಾಡಬಾರದು?"

ಗೇಹ ರಾಜ್ಯದಲ್ಲಿ
ಸತ್ಯವಂತರಿಗಿದು ಕಾಲವಲ್ಲ

೧

'ಹೌದ್ರೀ, ಇದು ಎಂಥದೊಂದ್ರೀ....?'

'ಎಂಥದು?'

"ನೋಡಿ..'

'ಓಹೋ ಅದೇನೆ? ಅಲ್ಲ, ನೀನು ಆ ದಕ್ಕೆಲ್ಲಾ ಯಾಕೆ ಅಷ್ಟು ಮಹತ್ವ ಕೊಡುತ್ತೀಂತ?'

"ಜಾಗಲ್ಲರ್ರಿ, ನಂದಾ ಒಬ್ಬರಾದ್ರೂ ನಿರ್ವಂಚನೆಯಿಂದ ಕೆಲ್ಸ ಮಾಡ್ತಿದ್ರೂ ಅಂತ ಒಳ್ಳೆಯವ್ರು ಹೇಳ್ತಿದ್ರು. ಈಗ ಆ ದದ್ದನ್ನು ನೋಡುವಾಗ ದಾಸ್ರು ಕಾಡಿದ್ದು ನಿಜ ಅನ್ಸುತ್ತೆ...?

'ಸತ್ಯವಂತರಿಗಿದು ಕಾಲವಲ್ಲ! ಅಸತ್ಯವಂತರಿಗೆ ಸುಭಿಕ್ಷೆಯ ಕಾಲ...."

'ಮತ್ತೆ ಆನ್ನೋದಾದ್ರೂ ಏನು?'

'ನೀನು ಆನೋದ್ರಲ್ಲಿ ತುಸು ಸತ್ಯವಿದೇನ್ನ. ವಯಿಖ್ಯ ಆಗಿರೋದು ಏನೂಂದ್ರೆ ಗುಲ್ಜರೀಲಾಲ ನಂದಾ ಹಲವರಿಗೆ ಆಡ್ಡವಾಗಿದ್ದಾರೆ, ಅದ್ರಮೇಲೆ ಅನ್ಯ ಗೃಹ ಖಾತೆಯನ್ನೇ ತನ್ನ ಕೈಲಿ ಇಟ್ಟುಕೊಂಡಿದ್ದಾರೆ..."

'ಅದು ನಿಜಾನ್ನಿ. ಭ್ರಷ್ಟಾಚಾರದ ವಿರುದ್ಧ ಅಂದೋಲನವನ್ನೇ ಎಬ್ಬಿಸಿದ ಧೀರ ಇಪ್ಪಲ್ಲವೆ? ಅಂದರಿಂದಾಗಿಯೇ ಪಾಪದ ಕೆಲಸರಾದ್ರೂ ಸಿಕ್ಕಿ ಬಿದ್ರಲ್ಲಾ...."

"ಅಂದುಘೋಷಿಸಿದ್ದೆರು ನೋಡು ಎರಡು ವರ್ಷಗಳೊಳಗೆ ಭ್ರಷ್ಟಾಚಾರವನ್ನು ಹರಣಾಮಕಾರಿಯಾಗಿ ನಿರ್ಮೂಲಿಗದಿದ್ದರೆ, ರಾಜಿನಾಮೆ ಕೀಡುತ್ತೇನೆಂತ'

"ಅದೂ ಹೌದು. ಒವರ ಆ ಪ್ರತಿಜ್ಞೆಯ ಫಲವಾಗಿಯೇ ವಿಚಕ್ಷಿಕ ಆಯೋಗ ನೇಮಕವಾಯ್ತಲ್ಲಾ...."

"ಆದ್ರೆ ನೋಡು, ಗೋಡೆ ಲಂಚ ತಿನ್ನುವುದನ್ನು ನಿಲ್ಲಿಸಬಹುದು; ಅದರ ಕಲ್ಲು ಕಲ್ಲೂ ತಿನ್ನುವುದನ್ನು ಅಷ್ಟು ಸುಲಭದಲ್ಲಿ ನಿಲ್ಲಿಸೋಕಾಗುತ್ಯೆ?"

"ಅದು ಸರಿನ್ನಿ. ಅದ್ರ ಮೇಲೆ ಒಂದೊಂದೇ ದೊಡ್ಡ ದೊಡ್ಡ ದುರಂತಗಳು ದೇಶವನ್ನು ಎದುರಿಸತೊಡಗಿದುವು. ಸಾಸ, ಅವರಾದ್ರೂ ಅದರತ್ತ ಗಮನ ಹರಿಸದೆ ಸಾಧ್ಯವಿಲ್ಲ ನೋಡಿ..."

"ಅದೆಂಥದೋ! ನೆಹರೂ ಕೊನೆಗಾಲದಲ್ಲಿ ಕೆಂಪು ಚೀನೀಯರು ಆಕ್ರಮಣ ಮಾಡಿ ಅವಾಯ ತಂದೊಡ್ಡಿದರು...'

"ಹೌದು..'

"ಶಾಸ್ತ್ರೀ ಕಾಲದಲ್ಲಿ ಪಾಕಿಸ್ತಾನ ಆಕ್ರಮಣ ಮಾಡಿತು..."

'ಸರಿ...'

'ಈಗ ಗಾಂಧೀ ಕಾಲದಲ್ಲಿ...."

'ಯಾಕೆ ತಡೆಯುತ್ತೀರಿ? ಅಂದು ಬಿಡಿ...'

'ಮತ್ತೇನೂ ಇಲ್ಲ. ಎಷ್ಟಾದ್ರೂ...."

'ಅಯ್ಯೋ, ನನಗೆ ಬೇಸರವಾಗುತ್ತೇಂತ ಹೇಳೋ ನಾಲಗೆಗೆ ಕಡಿವಾಣ ಹಾಕೋದು ನೀವು ಆಲ್ವೆ?'

"ಯಾಕೆ?"

'ಗಾಂಧಿ ಸಂವುಟದಲ್ಲಿ ನಂದಾರಿಗೆಸ್ಟಾನ ನೀಡಬಾರದೂಂತ ಒಂದು ಬಂಗಡೆ ಭಾರೀ ಪ್ರಯತ್ನ ನಡೆಸಿಕ್ತಂತೆ..."

'ಹೌದೆ?'

'ಅದ್ರೆ, ಕಾಮರಾಜರ ಮಧ್ಯಸ್ಥಿಕೆಯಿಂದ ಅವ್ರ ಪ್ರಯತ್ನ ಸಫಲವಾಗಲಿಲ್ಲವಂತೆ...."

'ಮುರಾರ್ಜಿಯವರು ತಾನು ಸಂಪುಟದಲ್ಲಿ ಸೇರಬೇಕಾದ್ರೆ, ಗೃಹಖಾತೆ ಕೊಡಬೇಕೆಂದು ಹೇಳುತಿದ್ದರಂತೆ...."

'ಹೌದು, ನಂದಾ ಗೃಹ ಖಾತೆಯನ್ನು ಬಿಡಲು ಒಪ್ಪಲಿಲ್ಲ."

"ಅಂದ್ರೆ ಮುರಾರ್ಜಿ ಭಾಯಿಯನ್ನು ಹೊರಗಿಡುವುದಕ್ಕಾಗಿ ನಂದಾರನ್ನು ಉಳಿಸಿಕೊಂಡರೂಂತಾಯ್ತು, ಕಾಮರಾಜರು..."

"ಹಾಗೇ ಅನ್ನಬೇಕು..."

"ಆದ್ರೆ ಇಂದು ಇನ್ನು ಮುರಾರ್ಜಿ ಬಂದಾರೆ?'

'ಅದೂ ನಂಬೋಕೆ ಕಷ್ಟ...."

"ಯಾಕೆ?"

"ನೋಡು, ನಂದಾ ಹೇಳಿದ್ದಾರೆ, ತನ್ನ ಯೋಜನೆಗಳಿಗೆ. ಪ್ರಧಾನಿಯವರು ಬೆಂಬಲ ಕೊಡಲಿಲ್ಲ ಮೂಕ್ಯವಲ್ಲ, ತನ್ನ ಮೇಲೆ ವಿಶ್ವಾಸವೇ ಇಲ್ಲ ಅಂದಿದ್ದಾರೆ ಅಂತೆ...."

"ಹ್ಞೂಂ...."

'ದೇಶದಲ್ಲಿ ನಡೆಯುತ್ತಿರುವ ಹಿಂಸಾ ವೃತ್ತಿಯನ್ನು ಹಡೆಗಟ್ಟಲು ನಂದಾ ದೃಢ ನಿರ್ಧಾರ ಮಾಡಿದ್ದರೆ, ಅದನ್ನು ಹಡೆಗಟ್ಟಲು ನೈತಿಕ ಬೆಂಬಲ ಅವರಿಗೆ ದೊರೆಯಲಿಲ್ಲ.'

'ಅದೂ ಹೌದು ಅನ್ನುತ್ತೆ. ಇಲ್ಲವಾದರೆ, ಅಂದು ನಂದಾರ ನೆರವಿಗೆ ಬಂದ ಕಾಮರಾಜರು ಇಂದೇಕೆ ಸುಮ್ಮನುಳಿದಿದ್ದಾರೆ."

'ಖಾಪ, ತನ್ನ ಮನೆಯನ್ನೇ ಸುಟ್ಟು ತೆಗೆದ ಆಂದೋಲನವಾದಿ ಸಾಧು ಸಮಾಜ ದೊಡನೆ ಸಂಪರ್ಕವಿರುವ ನಂದಾರ ಸಹಾಯಕ್ಕೆ ಅವರಾರೂ ಯಾಕೆ ಬರಬೇಕು?'

"ಅಥವಾ ಅವ್ರು ಇದನ್ನೂ ತಮಾಶೆಯೆಂದು ಸುಮ್ಮನೆ ನೋಡುತ್ತ ಕುಳಿತಿರಬಹುದೇ?'

'ವಿಚಾರ ಸ್ವಾತಂತ್ರ್ಯವಿರುವ ದೇಶದಲ್ಲಿ ಪ್ರತಿಫಟನೆಗೂ ತಮ್ಮದೇ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವೂ ಇದೆ.

'ಅದು ಸರಿಯೇ. ಮುಂದೇನು?'

'ಗೃಹಖಾತೆಯನ್ನು ಸದ್ಯ ಶ್ರೀಮತಿ ಗಾಂಧಿಗುರೇ ವಹಿಸಿಕೊಂಡಿದ್ದಾರೆ.

'ಮನೆ ನಡೆಸುವವರೇ ದೇಶವನ್ನೂ ನಡೆಸುಯೂರು...."

"ಅದ್ರೆ, ಶೀಘ್ರವಾಗಿ ಬೇರೆ ವ್ಯವಸ್ಥೆ ಮಾಡುತ್ತಾರಂತಲ್ಲಾ...'

"ಮಾಡುತ್ತಾರೆ....ಏನಾದರೂ ಇನ್ನು ಐದು ತಿಂಗಳ ಮತು ತಾನೆ?"

'ಯಾಕೆ?"

'ಆ ಮೇಲೆ, ಹೊಸ ಸರಕಾರ ರಚನೆಯಾಗುತ್ತೆ....'

"ಹ್ಞೂಂ...ಅದೂ ಸರಿಯೇ. ಗಾಂಧಿ ಮಾಡುವ ಕ್ರಾಂತಿಕಾರಕ ಬದಲಾವಣೆ ಆಗ ನಡೆದರೂ ಬಹುದು...'

'ಹಾಗನ್ನ ಬೇಡ—ಅನುಭವಿ, ಹಿರಿಯ, ನಿಸ್ವಾರ್ಥಿ ನಂದಾರನ್ನು ಮನೆಗೆ ಕಳಿಸಿದ್ದು ಕ್ರಾಂತಿಕಾರಕ ಅಲ್ಲವೇನು?"

"ಅದು ಸರಿ.... ದುಃಖವೆಂದರೆ, ಅವರ ಮಕ್ಷದ್ದಿತನವನ್ನು ಅರಿತು ಕೊಂಡವರು ಸುಮ್ಮನೆ ಕೈ ಕಟ್ಟಿ ಕುಳಿತಿದ್ದಾರೆ...'

"ಅದೂ ಒಂದು.... ರಾಷ್ಟ್ರಪತಿಗಳು ಅವರ ರಾಜಿನಾಮೆಯನ್ನು ವಿಷಾದಪೂರ್ವಕ ಸ್ವೀಕರಿಸಿ ತಮ್ಮ ಅನುಕಂಪವನ್ನು

(ಪದಿನಾಲ್ಕನೇ ಪುಟ ನೋಡಿರಿ)

19—11—1966
ಶನಿವಾರ ಸಂಜೆ 5-30ಕ್ಕೆ
ಮಂಗಳೂರಿನ
ಜೊಂಗರಕೇರಿಯಲ್ಲಿರುವ
ಕೆನರಾ ಹೈಸ್ಕೂಲ್
ಆವರಣದಲ್ಲಿ
ಕೆನರಾ ಬ್ಯಾಂಕಿನ
ವಜ್ರ ಮಹೋತ್ಸವ
ಸಮಾರಂಭ

ಮೈಸೂರು ವಿಧಾನ ಸಭೆಯ ಅಧ್ಯಕ್ಷರಾದ
ಮಾನ್ಯ ಶ್ರೀ ಬಿ. ವೈಕುಂಠ ಬಾಳಿಗಾರವರು
ಈ ಸಮಾರಂಭದ ಅಧ್ಯಕ್ಷತೆ ವಹಿಸಲು
ಒಪ್ಪಿರುತ್ತಾರೆ.

ಮೈಸೂರಿನ ಅರ್ಥ ಸಚಿವರಾದ
ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು
ಈ ಸಮಾರಂಭದ
ಮುಖ್ಯ ಅತಿಥಿಯಾಗಿರಲು
ಸಮ್ಮತಿಸಿದ್ದಾರೆ.

60 ವರ್ಷಗಳ ಅವಿರತ ಸೇವೆ
1ನೇ ಜುಲೈ 1906ರಿಂದ — 1ನೇ ಜುಲೈ 1966

ಅಖಿಲ ಭಾರತ ವಜ್ರ ಮಹೋತ್ಸವ ಸಮಾರಂಭಗಳು
ಜುಲೈ— ಡಿಸೆಂಬರ್ 1966

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು— ಲೈಟ್‌ಹೌಸ್ ಹಿಲ್, ಮಂಗಳೂರು–1.
ಆಡಳಿತ ಕಚೇರಿ— 112, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು–2.

ಎಲ್ಲರೂ ಹೀಗಾಗ ಬಾರದೇಕೆ?

ಅವರು ಗಳಿ ತಾನು ದುಡಿಯುತ್ತಾರೆ

ಕೊಯಮತ್ತೂರು—ಉದಕಮಂಡಲಕ್ಕೆ ಹೋಗುವ ರಸ್ತೆಯಲ್ಲಿ ಸುಮಾರು ೮೦ ಮೈಲಿಗಳ ದೂರ ಹೋದರೆ ಸಾಮಾನ್ಯವಾದ ಕಟ್ಟಡವೊಂದು ಕಣ್ಣಿಗೆ ಬೀಳುತ್ತದೆ. ಹೊರ ನೋಟಕ್ಕೆ ಹೆಚ್ಚಿನ ಆಕರ್ಷಣೆಯನ್ನು ಒದಗಿಸದ ಈ ಕಟ್ಟಡದಲ್ಲಿ ರೂಪ ಸಹಕಾರಿ ಬ್ಯಾಂಕು ಮಹತ್ತರವಾದ ಸಾಧನೆಯಿಂದ ಅರ್ಥಪೂರ್ಣವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಇಷ್ಟಾದರೂ ಒಳಗೆ ಭವ್ಯವಾದ ಹೇರೋಪಕರಣಗಳಿಲ್ಲ. ಲಕ್ಷದ ಅಗತ್ಯಕ್ಕೆ ತಕ್ಕಷ್ಟು, ಅವಶ್ಯಕತೆಗನುಗುಣವಾಗಿ ಕಂಡ ಕೂಡಿದ ಈ ಕಛೇರಿಗೆ ಬಂದು ಹೋಗುವವರ ಸಂಖ್ಯೆ ಮಾತ್ರ ಭಾರಿಯೂ ದುದು. ಇಲ್ಲಿಗೆ ಬರುವವರೆಲ್ಲರೂ ರೈತರು. ಇವರು ಅನೇಕ ಮೈಲಿಗಳಿಂದ ದೂರದಿಂದ ಎತ್ತಿನ ಬಂಡಿಗಳಲ್ಲಿ, ಬೈಸಿಕಲ್‌ಗಳಲ್ಲಿ, ಟಾಂಗಾಗಳಲ್ಲಿ, ಬಸ್‌ಗಳಲ್ಲಿ ಅಥವಾ ಕಾಲ್ನಡಿಗೆಯಲ್ಲಿ ಇಲ್ಲಿಗೆ ಬರುತ್ತಾರೆ.

ಈ ಬ್ಯಾಂಕು ನಗದು ಹಣ ವ್ಯವಹಾರಗಳ ನ್ಯಾಯವನ್ನು ನಡೆಯುತ್ತದೆ. ಇದ್ದೇ ಅಲ್ಲದೆ ವ್ಯವಸಾಯಗಾರರ ಎಲ್ಲ ಅವಶ್ಯಕತೆಗಳನ್ನು—ಗೊಬ್ಬರ, ಬೀಜ ಪೈರು, ಕ್ರಿಮಿನಾಶಕಗಳು, ಕೃಷಿ ಉಪಕರಣಗಳು ಮತ್ತು ವ್ಯವಸಾಯಕ್ಕೆ ಸಂಬಂಧಿಸಿದ ತಾಂತ್ರಿಕ ಜ್ಞಾನವನ್ನು—ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ರೈತರೇ ಈ ಬ್ಯಾಂಕಿನ ಮೂಲಿಕರು ಮತ್ತು ವ್ಯವಸ್ಥಾಪಕರು; ಇದೊಂದು ಸಹಕಾರೀ ತತ್ವದ ಬ್ಯಾಂಕು.

ಇದರ ಹೆಸರು ಕುಡಿಯಲೂರು ಸಹಕಾರೀ ಗ್ರಾಮಾಂತರ ಬ್ಯಾಂಕು. ಅವಿಶ್ರಾಂತ ಕಾರ್ಯಕರ್ತರಾಗಿರುವ ಟಿ. ಎಸ್. ಪಳನಿ ಸ್ವಾಮಿ ಗೌಂಡರ್ ಇದರ ಜೀವಾಳ. ಈ ಬ್ಯಾಂಕು ಸ್ಥಾಪಿತವಾದ ನಂತರ ಈಗ ೧೮ ವರ್ಷಗಳಲ್ಲಿ ಇವರು ಇದರ ಪುರೋಭಿವೃದ್ಧಿಗಾಗಿ ಬಹಳ ಯಶಸ್ವಿಯಾಗಿ ಪರಿಶ್ರಮಪಟ್ಟಿದ್ದಾರೆ. ೩೨೦ ಸದಸ್ಯರು ಗಳಿತ್ತು ೨೬,೦೦೦ ರೂಪಾಯಿಗಳ ಬಂಡವಾಳದೊಡನೆ ಪ್ರಾರಂಭವಾದ ಈ ಬ್ಯಾಂಕಿಗೆ ೪,೬೦೦ ಸದಸ್ಯರಿದ್ದಾರೆ. ೩ ಲಕ್ಷ ರೂಪಾಯಿಗಳಷ್ಟು ಬಂಡವಾಳವಿದೆ. ಇದರ ಜಾಲ್ತಿ ನಿಧಿಗಳ ಪ್ರಮಾಣ ೩೦ ಲಕ್ಷ ರೂಪಾಯಿಗಳಷ್ಟಿದೆ.

ಸ್ವಭಾವತಃ ಸಹಕಾರೀ ಮನೋಭಾವದವರಾಗಿದ್ದ ಗೌಂಡರ್ ಅವರು ಮದರಾಸು ವಿಶ್ವವಿದ್ಯಾನಿಲಯದ ಎಂ. ಎ. ಡಿಗ್ರಿಯ ಪರೀಕ್ಷೆಯಲ್ಲಿ ಸಹಕಾರ ಮತ್ತು ಅರ್ಥಶಾಸ್ತ್ರದಲ್ಲಿ, ವಿಶ್ವವಿದ್ಯಾನಿಲಯದಲ್ಲೇ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದರು. ರಾಜ್ಯ ಕಂದಾಯ ಇಲಾಖೆಯಲ್ಲಿ ಕೆಲವು ಸಮಯ ಕೆಲಸ ಮಾಡಿದ ನಂತರ ಅವರು ವ್ಯವಸಾಯ ಹಾಗೂ ಸಹಕಾರವನ್ನು ತಮ್ಮ ಜೀವನ ವೃತ್ತಿಯಾಗಿ ಆಯ್ಕೆಮಾಡಿಕೊಂಡರು. ಈ ಎರಡು ಕ್ಷೇತ್ರಗಳಲ್ಲೂ ಅವರಿಗೆ ಅಸಾಧಾರಣ ಮುಂದಾಳು ಎಂಬುದರಲ್ಲಿ ಸಂದೇಹವಿಲ್ಲ.

ಸಹಕಾರೀ ಬ್ಯಾಂಕಿನ ಸಮೀಪ ಇನ್ನೆರಡಂಕ್ಕಿಂತ ಹೆಚ್ಚಿನ ಎಕರೆಗಳ ಹೊಲವಿದ್ದೇ ನೆಮ್ಮ ಗ್ರಾಮದಲ್ಲಿ ಟ್ರ್ಯಾಕ್ಟರನ್ನು ಉಪಯೋಗಿಸಿದವರಲ್ಲಿ ಇವರು ಮೊದಲಿಗರು. ಈ ಹೊಲದಲ್ಲಿ ಧಾನ್ಯಗಳು, ಕಬ್ಬು, ಹತ್ತಿ, ಬಾಳೆ, ಮತ್ತು ಹೂವಿನ ಗಿಡಗಳನ್ನು ಬೆಳೆಯಲಾಗುತ್ತಿದೆ. ಕ್ಷೀರೋತ್ಪಾದನಾ ವಿಭಾಗದಲ್ಲಿ ಸಾಕುವ ಕೇಂದ್ರವೂ ಇಲ್ಲಿದೆ. ಇಲ್ಲಿಂದ ಅನೇಕ ಮೈಲಿಗಳ ವರೆಗಿನ ವ್ಯಾಪ್ತಿಯಲ್ಲಿರುವ ಎಲ್ಲ ರೈತರಿಗೆ ಇದೊಂದ ಆದರ್ಶ ಕ್ಷೇತ್ರ. ಗರ್ಭಿಣಿಯಲ್ಲಿ ಎಳರೆಯೊಂದಕ್ಕೆ ಸುಮಾರು ಪೌಂಡುಗಳಷ್ಟು ಜೋಳ ಬೆಳೆದು ಗೌಂಡರ್ ಅವರು ರಾಜ್ಯ ಸರಕಾರದ ಪ್ರಶಂಸಾಪತ್ರವನ್ನು ಪಡೆದರು. ಅವರು ಎಕರೆಯೊಂದಕ್ಕೆ ೬೦ ಟನ್ ಗಳಷ್ಟು ಕಬ್ಬು ಬೆಳೆಯುತ್ತಾರೆ. ಎಕರೆಯೊಂದಕ್ಕೆ ಅವರು ಬೆಳೆಯುವ ನಾಲ್ಕೂವರೆ ಟನ್‌ಗಳಷ್ಟು ಮುಸುಕಿನ ಜೋಳವು ಅಮೆರಿಕದ ಉತ್ಪಾದನಾ ಸಾಮರ್ಥ್ಯಕ್ಕೆ ಸಮ.

ಪ್ರಗತಿಶೀಲ ಮನೋಭಾವದ ರೈತರಾಗಿರುವ ಗೌಂಡರ್ ರ್ಗಿಳರಿಕೊನೆಯಲ್ಲಿ ಜಮೆಬಿಲದಲ್ಲಿ ಮೂರುವರೆ ತಿಂಗಳ ಕಾಲ ಪ್ರವಾಸ ಮಾಡಿ, ತಮ್ಮ ಕಾರ್ಯಗಳಿಗೆ ಇನ್ನಷ್ಟು ಸ್ಫೂರ್ತಿ ಹಾಗೂ ತಿಳಿವಳಿಕೆಯನ್ನು ಪಡೆದರು. ಈ ಪ್ರವಾಸದಲ್ಲಿ ವಿಯೆನ್ನಾದಿಂದ ಅನೇಕ ವ್ಯವಸಾಯ ಪ್ರದೇಶಗಳಿಗೆ, ಸಹಕಾರೀ ಉದ್ಯಮಗಳಿಗೆ ಮತ್ತು ದೊಡ್ಡ ಕ್ಷೀರೋತ್ಪಾದನಾ ಕೇಂದ್ರಗಳಿಗೆ ಭೇಟಿ ಕೊಟ್ಟರು. ಈ ಭೇಟಿಗಳಲ್ಲಿ ದೊರೆತ ಹೊಸ ತಿಳಿವಳಿಕೆಯನ್ನು ಅವರು ತಮ್ಮ ಕಾರ್ಯಕ್ರಮಗಳಲ್ಲಿ ವ್ಯಾವಹಾರಿಕ ಉಪಯೋಗಕ್ಕೆ ತಿಳವಡಿಸುತ್ತಿದ್ದಾರೆ.

ಮದರಾಸು ಸರಕಾರದ ಪರವಾಗಿ ಬ್ಯಾಂಕು ಕೈಗೊಂಡಿರುವ ಹತ್ತಿ ಸಂಧಾರಣೆಯ ಯೋಜನೆ ಇದಕ್ಕೊಂದು ನಿದರ್ಶನ. ಗೌಂಡರ್ ಅವರು ಅಮೆರಿಕಾ ಪ್ರವಾಸದಲ್ಲಿ ಕ್ಯಾಲಿಫೋರ್ನಿಯ, ಅರಿಜೋನ, ಮತ್ತು ಟೆಕ್ಸಾಸಿನ ಹತ್ತಿಯ ತೋಟಗಳನ್ನು ಸಂದರ್ಶಿಸಿದ್ದರು. ಕೊಯಮತ್ತೂರಿನ ಮಾರ್ಕೆಟ್ಟಿಗಿಂತ ಹತ್ತಿಯ ಬೆಳೆಯನ್ನು ಉತ್ತಮಗೊಳಿಸಲು ವೈಜ್ಞಾನಿಕ ವಿಧಾನಗಳು ಅವಶ್ಯ ಎಂಬುದನ್ನು ಈ ಸಂದರ್ಶನಗಳು ಅವರಿಗೆ ಖಚಿತಪಡಿಸಿದವು.

ಈ ವರ್ಷ ಪ್ರಾರಂಭಿಸಲಾಗಿರುವ ಹತ್ತಿಯ ಪಂಚವಾರ್ಷಿಕ ಯೋಜನೆಯು ಮೇರೆಗೆ ಪ್ರತಿ ವರ್ಷ ಉದ್ದ ಎಳೆಯ ಹತ್ತಿಯ ಏಸ್ತೀರ್ಣವನ್ನು ೫೦೦೦ ಎಕರೆಗಳಷ್ಟು ಹೆಚ್ಚಿಸಲಾಗುವುದು. ಇದರ ವರ್ಷಗಳೊಳಗೆ ಹತ್ತಿಯಲ್ಲಿ ಸ್ವಯಂಪೂರ್ಣತೆ ಸಾಧಿಸಿ, ಕನ್ಯಾಲಕ ೩೦ ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ಉಳಿಸುವುದೇ ಈ ಕಾರ್ಯಕ್ರಮದ ಗುರಿ. ಬ್ಯಾಂಕು ಈ ವರ್ಷ ಎರಡು ಸಾವಿರ ಎಕರೆಗಳಷ್ಟು ಬೆಳೆ ಹೆಚ್ಚಿಸುವ ಗುರಿಯನ್ನು ಸಾಧಿಸಿದೆ. ಎಕರೆಯೊಂದಕ್ಕೆ ೫೫೦ ರೂಪಾಯಿ ಗಳಂತೆ ಮಧ್ಯಾವಧಿ ಬೆಳೆ ಸಾಲ; ಸಂಧಾರಿತ ಹತ್ತಿ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕಗಳು ಮತ್ತು ಅರ್ಹತೆಯುಳ್ಳ ಸಿಬ್ಬಂದಿಯವರಿಂದ ಪಕ್ಕಟೆಯಾಗಿ ತಾಂತ್ರಿಕ ಉಸ್ತುವಾರಿ—ಈ ರೀತಿ ರೈತರಿಗೆ ಹಲವು ರೀತಿಯ ಸಹಾಯಗಳನ್ನು ನೀಡಿ ಇದು ಎಕರೆಗಳನ್ನು ಹೆಚ್ಚಿಸುವ ಈ ಗುರಿಯನ್ನು ಸಾಧಿಸಿದೆ. ಬೆಳೆ ಕೊಯ್ಲಿಗೆ ಸಿದ್ಧವಾದಾಗ ಬ್ಯಾಂಕು ಇಗನ್ನು ಕಟ್ಟಾವು ಮಾಡಿ ತನ ಹತ್ತಿ ಬೀಜ ಬೇರ್ಪಡಿಸಿದ ವಿಭಾಗಕ್ಕೆ (ಇದನ್ನೀಗ ನಿರ್ಮಿಸಲಾಗುತ್ತಿದೆ) ಸಾಗುವುದು. ಆನಂತರ, ಬೇರ್ಪಡಿಸಿದ ಹತ್ತಿಯನ್ನು ಕ್ರಮಸಡಿಸಿದ ಮೂರಂಶಟ್ಟಿಗಳಲ್ಲಿ ಮೂರಾಲಾಗುವುದು. ಇದರಿಂದಾಗಿ ಮಧ್ಯವರ್ತಿಗಳ ಅವಶ್ಯಕತೆಗಳನ್ನು ನಿವಾರಿಸಿದಂತಾಗುವುದು. ದೊರಕುವ ಆದಾಯವನ್ನು ಬ್ಯಾಂಕು ಪಾಲಾಗಿ ರೈತನಲ್ಲಿ ಹಂಚಲಾಗುವುದು. ಹತ್ತಿಯ ಬೀಜವನ್ನು ಬಿತ್ತನೆಗೆ ಉಪಯೋಗಿಸಲಾಗುವುದು.

ಕುಡಿಯಲೂರು ಬ್ಯಾಂಕು, ಮದರಾಸು ರಾಜ್ಯದಲ್ಲಿ ವ್ಯವಹಾರದ ಬೆಳೆಯೊಂದರ ಬಗೆಗೆ ಇಂಥ ವ್ಯಾಪಕ ಕಾರ್ಯಕ್ರಮವನ್ನು ಕೈಗೊಂಡಿರುವ ಏಕೈಕ ಸಂಸ್ಥೆ. ಹತ್ತಿಯ ಕಾರ್ಯಕ್ರಮ ಯಶಸ್ವಿಯಾಗಿ ಕಾರ್ಯಗತವಾಗಿಲಾರಂಭಿಸಿದ ನಂತರ ಮಿಶ್ರ ಕಳಿಯ ಮುಸುಕಿನ ಜೋಳ ಮತ್ತು ಸೋಗರ್ಂ ಜೋಳಗಳ ಬಗೆಗೆ ಇದೇ ರೀತಿಯ ಕಾರ್ಯಕ್ರಮವನ್ನು ಪ್ರಾರಂಭಿಸುವ ಯೋಚನೆ ಇದೆ ಎಂದು ಗೌಂಡರ್ ಹೇಳಿದ್ದಾರೆ.

ವೈಜ್ಞಾನಿಕ ಕೃಷಿಯು ತಿಳಿವಳಿಕೆ ಸುಲಭವಾಗಿ ದೊರೆಯುವಂತೆ ಮಾಡುವುದು ಮತ್ತು ಸುಲಭವಾಗಿ ಸಾಲ ದೊರೆಯುವಂತೆ ಮಾಡುವುದು—ಇವೆರಡು ಭಾರತದ ರೈತನಿಗೆ ಎರಡು ಪ್ರಧಾನ ಅವಶ್ಯಕತೆಗಳು. ಈ ಎರಡು ವಿಭಾಗಗಳಲ್ಲೂ ಈ ಬ್ಯಾಂಕು ತನ್ನ ಸೇವೆಗಳನ್ನು ಉತ್ತಮಗೊಳಿಸಲು ಸಿದ್ಧತೆ ಮಾಡುತ್ತಿದೆ. ಗೌಂಡರ್ ಅವರು ಒಹಾಯೋದಲ್ಲಿದ್ದಾಗ ಅಲ್ಲಿನ ಫಾರಂಬ್ಯೂರೋ ಸಂಸ್ಥೆಯು ಸೈಟ್ ಕ್ಲಬ್‌ಗಳ ಕಾರ್ಯವಿಧಾನವನ್ನು ಪರಿಶೀಲಿಸಿದ್ದರು. ಈ ಕ್ಲಬ್‌ಗಳ ಮೂಲಕವೇ ಅವರು ಬ್ಯಾಂಕು ಸೇವೆ ಸಲ್ಲಿಸುತ್ತಿರುವ ಒಂಭತ್ತು ಪಲಯಗಳಲ್ಲಿ ಪ್ರತಿಯೊಂದರಲ್ಲೂ ಎರಡು ವಾರಗಳಿಗೊಮ್ಮೆ ರೈತರು ಸಭೆ ಸೇರುವಂತೆ ವ್ಯವಸ್ಥೆ ಮಾಡಿದ್ದಾರೆ ಈ ಸಭೆಗಳಲ್ಲಿ ವ್ಯಕ್ತ ಪಡಿಸಲಾಗುವ ಕೃಷಿ ಸಮಸ್ಯೆಗಳ ಬಗೆಗೆ ಬ್ಯಾಂಕಿನ ಸಿಬ್ಬಂದಿಯಲ್ಲಿರುವ ಕೃಷಿ ತಜ್ಞರುಗಳನ್ನು ಕೂಡುತ್ತಾರೆ. ರೈತರಿಗೆ ಎಂಥ ನೀಡಿಕೆಯ ವ್ಯವಸ್ಥೆಯನ್ನು ಕ್ರಮಿತಗೊಳಿಸಲೂ ಏರ್ಪಾಡು ಮಾಡುತ್ತಿದ್ದಾರೆ.

ಅಮೆರಿಕದ್ದು ಸಹಕಾರಿ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಉದ್ಯಮಗಳೊಡನೆ ಯಶಸ್ವಿಯಾಗಿ ಪೈಪೋಟಿ ನಡೆಸುತ್ತಿರುವುದನ್ನು ನೋಡಿರುವ ಗೌಂಡರ್ ಅವರಿಗೆ, ಭಾರತದಲ್ಲೂ ಸಹಕಾರೀ ಸಂಸ್ಥೆಗಳನ್ನು ಯೋಗ್ಯ ರೀತಿಯಲ್ಲಿ ಅಭಿವೃದ್ಧಿಗೊಳಿಸಿದರೆ ದೇಶೋದ್ಧಾರವಾಗುವುದು ಎಂಬ ದೃಢ ವಿಶ್ವಾಸವಿದೆ. ಈ ಸಹಕಾರೀ ಸಂಸ್ಥೆಗಳಿಗೆ ಸ್ಥಳೀಯ ಮುಖಂಡತ್ವ, ಬುದ್ಧಿ ಕೌಶಲ್ಯಗಳು, ಮತ್ತು ಸಾಮಾನ್ಯ ಜ್ಞಾನಗಳನ್ನು ಸಮರ್ಪಕವಾಗಿ ಉತ್ಪತ್ತಿ ಹಿತ ಸಾಧನೆಗೆ ಉಪಯೋಗಿಸಬಲ್ಲವು ಎಂದು ಹೇಳುತ್ತಾರೆ ಅವರು ಸೃಷ್ಟಿಸಿರುವ ಕೆಲವು ಸಹಕಾರೀ ಸಂಸ್ಥೆಗಳ ಶ್ರೇಷ್ಠ ಸಾಧನೆಗಳನ್ನು ಗಮನಿಸಿದರೆ, ಅವರ ಈ ಹೇಳಿಕೆಯಲ್ಲಿ ಉತ್ಪ್ರೇಕ್ಷೆಯಿಲ್ಲ ಎಂಬ ತಿಳಿದುಬರುತ್ತದೆ.

ಗೌಂಡರ್ ಅವರ ಕಾರ್ಯಾಚರಣೆಯ ವ್ಯಾಪ್ತಿ ಕುಡಿಯಲೂರು ಬ್ಯಾಂಕಿನಷ್ಟೇ ಪರಿಮಿತ

(ಹತ್ತನೇ ಪುಟ ನೋಡಿರಿ)



ಗಡಿಯಾರದ ಮುಳ್ಳಿಗಿಂತ ವೇಗವಾಗಿ ಚಲಿಸುವ ವಸ್ತು ಇನ್ನೊಂದಿದೆಯೇ? ಗಾಳಿ, ಸಿಡಿಲು, ಮಿಂಚು, ವಿಮಾನ, ರಾಕೆಟ್? ಯಾವುದೂ ಅಲ್ಲ! ಸಮಯಕ್ಕಿಂತ ಹೆಚ್ಚಿನ ವೇಗದಲ್ಲಿ ಇನ್ನೊಂದು ವಸ್ತು ಚಲಿಸೀತೇ? ಸಮಯದ ಸೂಚಕವೇ ಗಡಿಯಾರದ ಮುಳ್ಳು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಯಾವ ಅರ್ಥಿಕ ಸಮಸ್ಯೆಗೂ ಕ್ಷಿಪ್ರ ಪರಿಹಾರ ದೊರಯುವುದು. ನಮ್ಮ ಬ್ಯಾಂಕಿಂಗ್ ಸೇವೆಯು ಗಡಿಯಾರದ ಮುಳ್ಳಿನಷ್ಟೇ ಗತಿಶೀಲವೂ, ನಿಯಮಿತವೂ ಆಗಿದೆ. ಶೀಘ್ರ ಸೇವೆಯೊಂದಿಗೆ ದಕ್ಷತೆಯೂ ಸೇರಿರುವುದರಿಂದ ಸಿಂಡಿಕೇಟ್ ಬ್ಯಾಂಕು ನೀವು ಆರಿಸಬೇಕಾದ ಆದರ್ಶ ಸಂಸ್ಥೆಯಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ರಾಜ್ಯ.

ರಾಜ್ಯದ ಉದ್ದೇಶವೇನು ?

ಬರೆದವರು

ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಸೃಷ್ಟಿಯ ಆರಂಭದಿಂದಲೇ ಆರಂಭವಾದ ರಾಜ್ಯಾಧಿಕಾರದ ಬಗ್ಗೆ ಬೇರೆ ಬೇರೆ ವ್ಯಾಖ್ಯೆಗಳು ಹುಟ್ಟಿಕೊಂಡಿವೆ. ಭಾರತೀಯರೂ ಪಾಶ್ಚಾತ್ಯರೂ ತಮ್ಮ ತಮ್ಮ ದೃಷ್ಟಿಕೋನಗಳನ್ನು ರಾಜ್ಯಾಧಿಕಾರದ ಉದ್ದೇಶಗಳಿಗೆ ಕೊಟ್ಟಿದ್ದಾರೆ.

ಮಾನವನು ಸಂಘಜೀವಿ. ಸಂಘವೇ ವಿಶಾಲಗೊಂಡು ರಾಜ್ಯವಾಯಿತು. ಬಹು ಕಾಲದಿಂದ ಅಸ್ತಿತ್ವದಲ್ಲಿದ್ದ ರಾಜ್ಯ ತನ್ನದೇ ಆದ ಉದ್ದೇಶಗಳನ್ನು ಪಡೆದಿದೆ. ರಾಜ್ಯದ ಗುರಿ ಅಥವಾ ಉದ್ದೇಶ ವಿಚಾರಗಳಲ್ಲಿ ರಾಜ್ಯಶಾಸ್ತ್ರಜ್ಞರಲ್ಲಿ ಒಮ್ಮತ ಇಲ್ಲದಿದ್ದರೂ ಅದರ ಗುರಿ ಅಥವಾ ಉದ್ದೇಶಗಳನ್ನು ಐತಿಹಾಸಿಕವಾಗಿ ಗಮನಿಸಿದಲ್ಲಿ ಅವು ತಿಳಿಯುವುದು.

ಭಾರತೀಯ ವಿಚಾರ:—

ಭಾರತೀಯರು ರಾಜ್ಯದ ಮುಖ್ಯ ಉದ್ದೇಶಗಳನ್ನು ಮೂರು ರೀತಿಯಲ್ಲಿ ಹೇಳಿದ್ದಾರೆ. ಪ್ರಜೆಗಳ ರಕ್ಷಣೆಯೇ ರಾಜ್ಯದ ಮುಖ್ಯ ಉದ್ದೇಶವೆಂದು ಪ್ರಾಚೀನ ಭಾರತೀಯರು ಅಭಿಪ್ರಾಯಪಟ್ಟರು. ಇದನ್ನು ಮನುಸ್ಮೃತಿಯಲ್ಲಿ ಸ್ಪಷ್ಟವಾಗಿ ಹೇಳಿದೆ. ಪ್ರಜಾಸತಿ ದೇವನು ಜಗತ್ತನ್ನು ಸೃಷ್ಟಿಸಿದಾಗ ಜಗತ್ತಿನಲ್ಲಿ ಅರಾಜಕತೆ ಹುಟ್ಟಿಕ್ಕು. ಇದರಿಂದ ಜೀವನ ನಡೆಸುವುದು ತುಂಬಾ ಕಷ್ಟವಾಯಿತು. ಆ ಸಮಯದಲ್ಲಿ ಜನರಿಗೆ ರಕ್ಷಣೆ ಮತ್ತು ಅಭಯ ನೀಡುವುದಕ್ಕಾಗಿ ಪ್ರಜಾಪತಿ ರಾಜನನ್ನು ನಿರ್ಮಿಸಿದನು. ರಾಜನು ಪ್ರಜೆಗಳನ್ನು ರಕ್ಷಿಸದಿದ್ದರೆ, ದುಷ್ಟರನ್ನು ಶಿಕ್ಷಿಸದಿದ್ದರೆ ಸಮಾಜದಲ್ಲಿ ಮಾತ್ಸ್ಯನ್ಯಾಯ ತಲೆದೋರುವುದು—ಬಲಿಷ್ಟರು ದುರ್ಬಲರ ಮೇಲೆ ದಬ್ಬಾಳಿಕೆ ನಡೆಸುವರು.

ಕಾಗೆಗಳು ಯಜ್ಞಕ್ಕೆ ಅರ್ಪಿಸಿದ ಆಹುತಿಯನ್ನು ತಿನ್ನುವವು. ಕೇಳು ಮಟ್ಟಿದ ಜನರು ಮೇಲ್ಮಟ್ಟದ ಜನರ ಸ್ಥಾನವನ್ನು ಕಸಿದುಕೊಳ್ಳುವರು. ಇದರಿಂದ ರಾಜ್ಯ ಉದಯಿಸುವ ಪೂರ್ವದಲ್ಲಿ ಸಮಾಜವಿತ್ತೆಂದು ಸ್ಪಷ್ಟ. ಸಮಾಜದಲ್ಲಿರುವ ದುರ್ಬಲ ವ್ಯಕ್ತಿಗಳು, ಬಲಿಷ್ಟ ವ್ಯಕ್ತಿಗಳ ಬೆದರಿಕೆಯನ್ನು ಎದುರಿಸಬೇಕಿತ್ತು. ಇಂತಹ ಸಮಾಜದಲ್ಲಿ ನ್ಯಾಯಕ್ಕಿಂತ ಬಲವೇ ಮೇಲು ಸ್ಥಾನವನ್ನು ಪಡೆಯಿತು. ಇದನ್ನು ಹೋಗಲಾಡಿಸಲು ಮತ್ತು ದುರ್ಬಲ ವ್ಯಕ್ತಿಗಳನ್ನು ರಕ್ಷಿಸಲು ರಾಜನ ಅವಶ್ಯಕತೆ ಇತ್ತು. ರಾಜ ಪ್ರಜೆಗಳನ್ನು ರಕ್ಷಿಸಿ ದುಷ್ಟ ವ್ಯಕ್ತಿಗಳನ್ನು ಶಿಕ್ಷಿಸಲು ದಂಡನೀತಿಯನ್ನು ಅನುಸರಿಸಬೇಕಿತ್ತು. ರಾಜ್ಯದ ಅಸ್ತಿತ್ವ ದಂಡದ ಮೇಲೆ ದಂಡನೀತಿ ಇಲ್ಲದಿದ್ದರೆ ರಾಜ್ಯವಿಲ್ಲವೆಂದು ಮನುವು ಅಭಿಪ್ರಾಯ ಪಟ್ಟಿದ್ದಾನೆ. ಈ ವಿಚಾರವನ್ನು ಕೌಟಿಲ್ಯನು ಸಮರ್ಥಿಸಿದ್ದಾನೆ. ರಾಜ್ಯದಲ್ಲಿ ನ್ಯಾಯಾಧೀಶನಿದ್ದರೆ ಬಲಿಷ್ಟ ದುಷ್ಟ ವ್ಯಕ್ತಿಗಳು ಯೋಗ್ಯ ನಿರ್ಬಲ ವ್ಯಕ್ತಿಗಳನ್ನು ಹಿಂಸಿಸಿ ಪೀಡಿಸುತ್ತಾರೆ. ಆದರೆ ನ್ಯಾಯದ ಆಶ್ರಯದಲ್ಲಿ ಯೋಗ್ಯ ನಿರ್ಬಲ ವ್ಯಕ್ತಿಗಳ ದುಷ್ಟ ವ್ಯಕ್ತಿಗಳನ್ನು ಪ್ರತಿಬಟಿಸುತ್ತಾರೆ.

—ಧರ್ಮ ಪರಿಪಾಲನೆಯೇ ರಾಜ್ಯದ ಮುಖ್ಯ ಉದ್ದೇಶವೆಂದು ಪ್ರಾಚೀನ ಭಾರತೀಯರು ತಿಳಿದಿದ್ದರು. ಸಮಾಜದ ಕಟ್ಟುನಿಟ್ಟುಗಳನ್ನು ರಕ್ಷಿಸುವುದು ಧರ್ಮದಲ್ಲಿ ಅಡಕವಾಗಿದೆ. ಈ ವಿಚಾರವಾಗಿ ಕೌಟಿಲ್ಯನು "ರಾಜನ ಮುಖ್ಯ ಕೆಲಸವೆಂದರೆ ಪ್ರಜೆಗಳಿಗೆ ನ್ಯಾಯವನ್ನು ಒದಗಿಸುವುದು ಮತ್ತು ಅವರನ್ನು ಸಂರಕ್ಷಿಸುವುದು, ದೇಶದ ಆಂತರಿಕ ಕಟ್ಟುನಿಟ್ಟುಗಳನ್ನು ನೀತಿನಿಯಮಗಳನ್ನು ರಕ್ಷಿಸುವುದು. ಈ ಕರ್ತವ್ಯ ಮಾಡಲು ರಾಜನು ಅನರ್ಹನಾದರೆ ಅವನು ರಾಜ್ಯವನ್ನು ಕಳೆದುಕೊಳ್ಳುವನು" ಎಂದು ಹೇಳಿದ್ದಾನೆ.

—ರಾಜ್ಯದ ಉದ್ದೇಶ ಜನತಾಭಿವೃದ್ಧಿಯೆಂದು ಪ್ರಾಚೀನ ಭಾರತೀಯರು ಮನಗಂಡಿದ್ದರು. ರಾಜನು ಇನ್ನೊಬ್ಬ ರಾಜನ ಮೇಲೆ ಯುದ್ಧ ಮಾಡುವಾಗ ಈ ಯುದ್ಧ ಪ್ರಜೆಗಳ ಅಭಿವೃದ್ಧಿಗೆ ಸಹಾಯಕವಾಗುವುದೋ ಎಂದು ವಿಚಾರಿಸಬೇಕೆಂದು ಮನುವು ತಿಳಿಸಿದ್ದಾನೆ. ಚಾಣಕ್ಯನು ಸಹ ಪ್ರಜೆಗಳ ಸುಖ ತೃಪ್ತಿ ರಾಜನ ಸುಖ ತೃಪ್ತಿಗಳೆಂದು ಹೇಳಿದ್ದಾನೆ. ಪ್ರಜೆಗಳ ಕಲ್ಯಾಣನೇ ರಾಜನ ಕಲ್ಯಾಣ. ಪ್ರಜೆಗಳ ಹಿತವೇ ರಾಜನ ಹಿತ, ಇನ್ನೊಂದು ಕಡೆ ಕೌಟಿಲ್ಯನು ಬಲವೇ ಶಕ್ತಿ ಸುಖವೇ ಸಿದ್ಧಿ. ರಾಜ್ಯದ ಶಕ್ತಿ ಪ್ರಜೆಗಳ ಸುಖಕ್ಕೆ ಸಹಕಾರಿಯಾಗಬೇಕು ಎಂದು ಹೇಳಿದ್ದಾನೆ.

ಗ್ರೀಕರ ಅಭಿಪ್ರಾಯ

ಪಾಶ್ಚಾತ್ಯ ರಾಜನೀತಿ ಪಂಡಿತರಲ್ಲಿ ರಾಜ್ಯದ ಉದ್ದೇಶ ಮೊದಲು ವಿವರಿಸಿದವರು ಗ್ರೀಕರು. ರಾಜ್ಯದ ಉದ್ದೇಶ ಸ್ವಾವಲಂಬನಕ್ಕೆ ಸಹಾಯ ಮಾಡುವುದೆಂದರು ಅವರು. ಅಂದರೆ ರಾಜ್ಯವು ಮಾನವನ ಸರ್ವಾಂಗೀಣ ಪ್ರಗತಿಗೆ ಸರ್ವ ರೀತಿಯಲ್ಲಿ ಸಹಾಯಕವಾಗಬೇಕು. ಗ್ರೀಕರ ಶ್ರೇಷ್ಠ ನೀತಿ ಪಂಡಿತ ಪ್ಲೇಟೋ ರಾಜ್ಯವು ಒಂದು ವಿಶ್ವವಾಗಿದೆ ಅಂದ. ಅದರಲ್ಲಿ ವ್ಯಕ್ತಿಯು ತನ್ನನ್ನು ತಾನು ಅರಿತು ತನ್ನ ಕರ್ತವ್ಯ ಮಾಡಬೇಕು. ರಾಜರು ಮತ್ತು ಸೈನಿಕರು ರಾಜ್ಯದ ಪ್ರಗತಿಗೆ ಹೆಚ್ಚಿನ ಗಮನ ಕೊಡಬೇಕು. ರಾಜ್ಯದ ಹಿತ ಜನರೆಲ್ಲರ ಕರ್ತವ್ಯದ ಮೇಲಿದೆ. ಇದು ಪ್ರತಿಯೊಬ್ಬರಿಗೂ ತಿಳಿದಿರಬೇಕು.

ಮಾನವನು ಸಮಾಜ ಜೀವಿ. ಸಮಾಜವು ವಿಶಾಲಗೊಂಡು ರಾಜ್ಯವಾಯಿತೆಂದು ಗ್ರೀಕ್ ವಿದ್ವಾಂಸ ಅರಿಸ್ಟಾಟಲ್ ಹೇಳಿದ. ಮನುಷ್ಯನ ಪ್ರಗತಿಯು ರಾಜ್ಯದ ಮುಖಾಂತರವಾಗಿ ಮಾನವನ ಬದುಕಿಗೆ ಸಹಾಯಕವಾಗಬೇಕು. ರಾಜ್ಯ ಸಜ್ಜೀವನಕ್ಕೆ ದಾರಿಯೊಗಬೇಕು. ಸಾಮ್ರಾಜ್ಯಶಾಹಿ ನೀತಿ ಮತ್ತು ವಿಶ್ವರ್ಯಗ್ರಾಸಿ ಉದ್ದೇಶ ರಾಜ್ಯದ ಗುರಿ ಅಲ್ಲವೆಂದು ಅರಿಸ್ಟಾಟಲ್ ವಿವರಿಸಿದ್ದಾನೆ. ಸರ್ವರಿಗೂ ಸಜ್ಜೀವನ ನಡೆಸಲು ರಾಜ್ಯ ಸಹಾಯಕವಾಗಿ ಆದು ನೈತಿಕ ಶಕ್ತಿಯುಳ್ಳ ನಿರ್ಮಾಣ ಮಾಡಬೇಕು. ಅರಿಸ್ಟಾಟಲನ ರಾಜ್ಯದ ಉದ್ದೇಶ ಒಟ್ಟಿನಲ್ಲಿ ನೀತಿ ಪೂರ್ಣವಾಗಿದೆ.

ಮಧ್ಯಕಾಲೀನರು

ಗ್ರೀಕರ ನಂತರ ರೋಮನರು ರಾಜ್ಯ ಕಟ್ಟಿದರು. ಆಳಿದರು. ಕೊನೆಗೆ ರೋಮ್ ಸಾಮ್ರಾಜ್ಯ ಅಂತ್ಯವಾಯಿತು. ಆಗ ಯುರೋಪಿನಲ್ಲಿ ಅಂಧಕಾರ ಉಂಟಾಯಿತು. ಅನಾಗರಿಕ ಜನಾಂಗದವರು ರೋಮನರ ಐಶ್ವರ್ಯ ಕೊಳ್ಳೆ ಹೊಡೆದು ಯುರೋಪಿನಲ್ಲಿ ಅರಾಜಕತೆಯನ್ನುಂಟುಮಾಡಿದರು. ಈ ಪರಿಸ್ಥಿತಿಯಲ್ಲಿ ಜನರಿಗೆ ಯೋಗ್ಯ ಮಾರ್ಗದರ್ಶನದ ಆವಶ್ಯಕತೆ ಇತ್ತು. ಅದನ್ನು ಆ ಕಾಲದಲ್ಲಿ ಕ್ರೈಸ್ತ ಧರ್ಮಗಳ ಪ್ರಭಾವ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮುಂತಾದುವುಗಳ ಮೇಲಾಯಿತು. ಇದರಿಂದ ಪ್ರಭಾವಗೊಳಗಾದ ಈ ಎಲ್ಲಾ ಶಾಸ್ತ್ರಗಳು ತಮ್ಮ ನೈಜತೆಯನ್ನು ಕಳೆದುಕೊಂಡವು. ಇದರಿಂದಾಗಿ ರಾಜ್ಯದ ಉದ್ದೇಶವು ಕ್ರೈಸ್ತ ಧರ್ಮ ಸಂರಕ್ಷಣೆ ಮಾತ್ರ ಆಯಿತು. ಈ ಧರ್ಮವೇ ರಾಜ್ಯದಲ್ಲಿ ಶಾಂತಿ ಐಕ್ಯ ಸ್ಥಾಪಿಸಿ ಜನರಿಗೆ ಸುಮಾರ್ಗ ದರ್ಶನ ಮಾಡಬೇಕು ಎಂಬುದು ಇವರ ಅಭಿಪ್ರಾಯವಾಗಿತ್ತು.

ಆಧುನಿಕ ಕಾಲ ಪೂರ್ವಾರ್ಧ

ಆಧುನಿಕ ಕಾಲ ಪ್ರಾರಂಭವಾದುದು 1453ರಿಂದ. ಈ ಕಾಲದಲ್ಲಿ ಯುದ್ಧಪ್ರಿಯ ತುರ್ಕರು ಪೂರ್ವರೋಮ್ ಸಾಮ್ರಾಜ್ಯವನ್ನು ಹಾಳು ಕೆಡವಿದರು. ಅನೇಕ ರಾಜಧಾನಿ ಕಾನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಂಡರು. ಇದರಿಂದ ಯುರೋಪಿನಲ್ಲಿ ನವಯುಗ ಪ್ರಾರಂಭವಾಯಿತು; ಅನೇಕ ಗ್ರೀಕ್ ವಿದ್ವಾಂಸರು ತಮ್ಮ ಗ್ರಂಥಗಳೊಂದಿಗೆ ಯುರೋಪಿನಲ್ಲಿ ಬಂದು ನೆಲಸಿದರು. ಅವರಿಗೆ ಪೋಪರ ಆಶ್ರಯ ಸಿಕ್ಕಿತು. ಈ ಕಾಲದಲ್ಲಿ ಜನತೆ ಗ್ರೀಕ ಸಾಹಿತ್ಯ, ತತ್ವಶಾಸ್ತ್ರ, ರಾಜ್ಯಶಾಸ್ತ್ರಗಳನ್ನು ಅಭ್ಯಸಿಸಿತ್ತು. ಇದರಿಂದ ಗ್ರೀಕ ರಾಜ್ಯಶಾಸ್ತ್ರದ ಮೂಲಮಂತ್ರಗಳಾದ ಸ್ವಾತಂತ್ರ್ಯ, ಸಮಾನತ್ವ, ಮತ್ತು ಪ್ರಜಾಪ್ರಭುತ್ವ ಯುರೋಪಿನಲ್ಲಿ ಪ್ರಸಿದ್ಧಿಗೆ ಬರಲಾರಂಭಿಸಿದುವು. ರಾಜ್ಯದ ಉದ್ದೇಶವು ಆದರ್ಶವಾಗಿರಬೇಕೆಂದು "ಉಟೋಪಿಯ"ದಲ್ಲಿ ಥೋಮಸ್ ಮೂರ್ ಹೇಳುತ್ತಾನೆ.

(ಇನ್ನೊಂದನೇ ಪುಟ ನೋಡಿರಿ)

ಶ್ರೀ ಕೆ. ಶೆಟ್ಟಿ, ಎಂ.ಎಲ್. ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವೈಭವಾರಿಣಿ ಯಾರು?	1=00
ಹೆಂಡ್ತಿ ಗಂಡನಾದದೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಶುಶೀಲವ	0=50
ಚಿತ್ರಾಂಗದೆ	0=50

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ
O. P. No. 22 of 1966.

Mrs. ಎನ್ರೆ ವಾಸ ಕೊಡಾ— ಅರ್ಜಿದಾರರು.

ಕ್ಷಿತ್ತು

ಫಾಬಿಯೂನ್ ಫೆರ್ನಾಂಡಿಸ್ ಕೊಡಾ ಎದ್ರಿರು.

ಎದ್ರಿರೀಗೆ ಯೂ ಮೂಲಕ ಕೋರ್ಟು ಹುಂಕುಂ ಪ್ರಕಾರ ತಿಳಿಯಪಡಿಸುವದೇನೆಂದ್ರೆ—

ಅರ್ಜಿದಾರರಿಗೆ ಪ ಎದ್ರಿಯರ ತಾಯಿ ಯೀಗ ಮೃತಳಾಸಿಲಿಯಾ ಫೆರ್ನಾಂಡಿಸರು ತಾ. 26—1—66ನೇಲ್ಲಾ ಮೃತಪಟ್ಟಿದ್ದು ಅವರಿಗೆ ಕೆನರಾ ಬ್ಯಾಂಕಿನ ಫಿಕ್ಸೆಡ್ ಡೆಪೊಸಿಟ್ ರಶೀದಿಗಳನ್ನು ಕೊಡಲ್ಪಟ್ಟ ಸಿಂಡಿಕೇಟ್ ಬ್ಯಾಂಕಿನ C. D. ಎಕೌಂಟ್ ಪ್ರಕಾರವೂ ಬರತಕ್ಕ ಷ್ಯುಯಿನ ಪೈಕಿ ಅರ್ಜಿದಾರರಿಗೆ ಬರತಕ್ಕ 6/8ನೇ ಅಂಶದ ರೂಪಾ 15099—98ಕ್ಕೆ ಎಲ್ಲಾ ಅರ್ಜಿದಾರರ ಕಡೆಯಿಂದ ನಿಮೇಷರ್ಜಿದಾರನೆಯೆಂದಿಗೆ ಸಕ್ಷೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾವಲು ಮಾಡಿದ ಮೇಲಿನ ಅರ್ಜಿಯು ನಿಮ್ಮ ನೋಟೀಸಿನ ಬಗ್ಗೆ ತಾರೀಕು 10—11—1966ಕ್ಕೆ ಇಟ್ಟಿದ್ದ. ಪಕ್ಷಿಪ ಹೇಳತಕ್ಕವರು ಸದ್ರಿ ತಾ 10—11—66ನೇ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ಅರ್ಜಿಯಲ್ಲಿ ಹೇಳ್ಕಂಡ ಕೋರ್ಟಿನಲ್ಲಿ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು.

(Sd) Gratian, C. Rego
Vakil for Petitioner,
ಉಡ್ಪಿ, ತಾರೀಕು. 18—10—1966.

ಸುಸ್ಥಾಪಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಕೇಪಣಾಕಗಳ ಮೇಲೆ 8% ವರೆಗಿನ ಬಡ್ಡಿ
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕಾಸರಗೋಡು ಪ್ರಶ್ನೆ
ತ್ರಿಳಿಯಬೇಕಾದ ಕೆಲವು ಸತ್ಯಾಂಶಗಳು

ಲೇಖಕರು

ಶ್ರೀ ಎಂ. ಉಮೇಶ ರಾವ್,
ಎಡ್ವಕೇಟ್,

(ತಾ. 3ರ ಸಂಚಿಕೆಯಿಂದ
ಮುಂದುವರಿದುದು)

1956 ಜನವರಿ 1ರಲ್ಲಿ ಇಡಿಯ ಕಾಸರಗೋಡು ತಾಲೂಕನ್ನು ಕೇರಳ ದೊಂದಿಗೆ ವಿಲೀನಗೊಳಿಸಬೇಕೆಂದು ಕೇಂದ್ರ ಮಂತ್ರಿ ಮಂಡಲವು ತೀರ್ಮಾನಿಸಿದ್ದಾಗ್ಯೂ, ಲೋಕ ಸಭೆಯು ಮತ್ತು ರಾಜ್ಯ ಸಭೆಯ ವಿವಿಧ ರಾಜಕೀಯ ಪಕ್ಷಗಳ ಕೆಲವು ಸದಸ್ಯರು ಈ ತೀರ್ಮಾನವು ನ್ಯಾಯುವಲ್ಲವೆಂದೂ, ಬದಲಾವಣೆಯಾಗುವುದು ಅಗತ್ಯವೆಂದೂ ಮನಗಂಡಿದ್ದರು. ಆದರೆ, ಆ ವೇಳೆ, ಮುಂಬಯಿ ಪ್ರಾಂತ್ಯವನ್ನು ವಿಭಜಿಸಬೇಕೋ ಎಂಬ ಮಹತ್ ಪ್ರಶ್ನೆಯು ದೇಶದ ಮುಂದಿದ್ದು, ಆ ಯೋಗದ ಶಿಫಾರಸನ್ನು ತಿದ್ದುಪಡಿಗೊಳಿಸುವುದು ಸರಿಯಲ್ಲವೆಂಬುದೇ ಸಂಕಾರದ ಧೋರಣೆಯಾಗಿದ್ದುದರಿಂದ, ಯಾವ ತರದ ಬದಲಾವಣೆಯೂ ಸಾಧ್ಯವಾಗಿಲ್ಲ.

1957ರ ಕೇರಳ ನ್ಯಾಯ ವಿಧಾಯಕ ಸಭೆಯು ಚುನಾವಣೆಯು ಕಾಸರಗೋಡು ತಾಲೂಕಿನ ಜನತೆಯು ಅಭಿವ್ಯಾಯವನ್ನು ವ್ಯಕ್ತೀಕರಿಸುವರಿ ಇನ್ನೊಂದು ಸಂದರ್ಭವನ್ನು ಒದಗಿಸಿತು. ಮಂಜೇಶ್ವರ ಮತದಾರ ಕ್ಷೇತ್ರದಲ್ಲಿ ಸ್ಪರ್ಧೆಯೇ ಇರಲಿಲ್ಲ ಕಾಂಗ್ರೆಸ್ ಪಕ್ಷದವರು ತಮ್ಮ ಕಡೆಯ ಹುರಿಯಾಳನ್ನು ನೇಮಿಸಿದೆ ಇದ್ದುದರಿಂದ ನಾನು ಕರ್ಣಾಟಕ ಸಮಿತಿಯ ಪ್ರತಿನಿಧಿಯಾಗಿ ಅವಿರೋಧವಾಗಿ ಆಯ್ಕೆಗೊಂಡೆನು. ಕಾಸರಗೋಡು ಮತದಾರ ಕ್ಷೇತ್ರದಲ್ಲಿ, ಹೊಸದುರ್ಗ ತಾಲೂಕಿನ ನೀಲೇಶ್ವರ ಗ್ರಾಮವಾಸಿಯೂದ ಶ್ರೀ ಕುಂಞಾಕೃಷ್ಣ ನಾಯರರು ಕಾಂಗ್ರೆಸ್ ಪಕ್ಷದ ಪರವಾಗಿ ಹುರಿಯೊಳಾಗಿದ್ದರು. ಕರ್ಣಾಟಕ ಸಮಿತಿಯ ಹುರಿಯೊಳಾಗಿ ಕೆಪ್ಪನ್ ಸಿ. ಎ ಶೆಟ್ಟರು ನಾಮಪತ್ರವನ್ನು ಸಲ್ಲಿಸಿದರು. ಶ್ರೀ ವೇಲೋತ್ತ ನಾರಾಯಣ ನಂಬಿಯಾರರು ಪ್ರಜಾಸೋಶಿಯಲಿಸ್ಟ್ ಪಕ್ಷದ ಹುರಿಯೊಳಾಗಿದ್ದು, ಮುಸ್ಲಿಂ ಲೀಗಿನ ಬೆಂಬಲವನ್ನು ಪಡೆದಿದ್ದರು. ಕೆಪ್ಪನ್ ಶೆಟ್ಟರ ನಾಮಪತ್ರವು ಯಾವುದೋ ಒಂದು ಕಾರಣದಿಂದ ಅಸಿಂಧುವೆಂದು ತಳ್ಳಿಹಾಕಲ್ಪಟ್ಟಿತು. ಕಾಂಗ್ರೆಸ್ ಪಕ್ಷವು ಗೆಲ್ಲುವ ಕಂಚಿತ್ತಾದರೂ ಸಾಧ್ಯತೆಯಿರಲಿಲ್ಲ. ಅಂದು ಮುಲಬಾಗಿ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಪಿ. ಕೆ. ಗೋವಿಂದ ನಾಯರರು, "ಕುಂಬಳೆ ಮತ್ತು ಮಂಜೇಶ್ವರ ಫೀಲ್ಡ್"ಗಳನ್ನು ಮೈಸೂರು ಪ್ರಾಂತ್ಯದೊಂದಿಗೆ ವಿಲೀನ ಗೊಳಿಸುವುದನ್ನೂ ಕಾಸರಗೋಡು ಫೀಲ್ಡ್‌ದ ಪ್ರಶ್ನೆಯನ್ನು ಮಧ್ಯಸ್ಥಿಕೆಗೆ ಒಪ್ಪಿಸುವುದನ್ನೂ, ಮಲಬಾರ್ ಪ್ರದೇಶ ಕಾಂಗ್ರೆಸ್ ಕಮಿಟಿಯು ಸ್ವೀಕರಿಸುವುದೆಂದು ಬರಹ ಮೂಲಕ ಅಶ್ವಾಸನೆಯನ್ನು ಕರ್ಣಾಟಕ ಸಮಿತಿಗೆ ನೀಡಿದರು. ಕರ್ಣಾಟಕ ಸಮಿತಿಯು ಕಾಂಗ್ರೆಸ್ ಉಮೇದುವಾರರಿಗೆ ಬೆಂಬಲವನ್ನು ತ್ತಿತು. ಲೀಗಿನ ಬೆಂಬಲವಿದ್ದ ಪ್ರಜಾಸೋಶಿಯಲಿಸ್ಟ್ ಪಾರ್ಟಿಯ ಉಮೇದುವಾರರನ್ನೂ ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರನ್ನೂ ಸೋಲಿಸಿ, ಕಾಂಗ್ರೆಸ್ ಉಮೇದುವಾರರು ಜಯಶೀಲರಾದರು. ಸಮಿತಿಯ ಸಹಕಾರವಿದ್ದುದರಿಂದ ನಾನೂ ಅವರು ಜಯವನ್ನು ಗಳಿಸಿದೆಂಬುದು ಎಲ್ಲಾ ಪಕ್ಷಗಳು ಸಮ್ಮತಿಸಿದ ವಿಷಯ. ಚುನಾವಣಾ ನಂತರ, ಮಲಬಾರ್ ಪ್ರದೇಶ ಕಾಂಗ್ರೆಸ್ ಕಮಿಟಿಯನ್ನು ರದ್ದುಗೊಳಿಸಿ, ಕೇರಳ ಪ್ರದೇಶ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಲಾಗಿ, ಶ್ರೀ ದಾಮೋದರ ಮೆನೋನರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಈ ಕಾರಣದಿಂದಾಗಿ ಗೋವಿಂದ ನಾಯರರು ತನ್ನ ವಾಗ್ದಾನಪೂರೈಕೆಗೆ ಮಲಬಾರು ಪ್ರದೇಶ ಕಾಂಗ್ರೆಸ್ ಕಮಿಟಿಯು ಒಪ್ಪಿಗೆಯನ್ನು ಪಡೆಯಲು ಸಂ

(ಪತ್ತನೇ ಪುಟ ನೋಡಿರಿ)

ಕಳೆದ 60 ವರ್ಷಗಳಿಂದ — ಈ ಟೋಕನ್ ನಂಬಿಗೆಯ ಕುರುಹು —

— ಇಂದು 6,00,000ಕ್ಕಿಂತಲೂ ಹೆಚ್ಚು ಜನರಿಗೆ!

ವಿಶ್ವಾಸಪಾತ್ರವಾದ ಈ 'ಟೋಕನ್' ನಿಮ್ಮ ಹಣವನ್ನು ಸುರಕ್ಷಿತಗೊಳಿಸಿ—ಹಣವನ್ನು ಯಾರೂ ಮಂಜೆಸದಂತೆ, ಹಣದ ರಕ್ಷಣೆಯನ್ನು ಮಾಡುತ್ತದೆ. ಹಣವನ್ನು ವಿಶ್ವಾಸಪಾತ್ರವೆಂದು ತಿಳಿಯಲು ಕಾರಣ—ಈ 'ಟೋಕನ್' ಕೆನರಾ ಬ್ಯಾಂಕಿನಿಂದ ನಿಮ್ಮ ಕೈಗೆ ಬಂದಿರುವುದು. ಕೆನರಾ ಬ್ಯಾಂಕ್ ತನ್ನ ಗ್ರಾಹಕರ ಹಿತವನ್ನು ಒಂದು ವಿಶಿಷ್ಟ ರೀತಿಯಲ್ಲಿ ರಕ್ಷಿಸುತ್ತದೆ. 60 ವರ್ಷಗಳ ದೀರ್ಘ ಕಾಲ ಕೆನರಾ ಬ್ಯಾಂಕ್ ಜನತೆಯ ವಿಶ್ವಾಸವನ್ನು ಗಳಿಸಿದೆ. ಭಾರತವಲ್ಲಿ ಬೃಹತ್ ಬ್ಯಾಂಕಿಂಗ್ ಸಂಸ್ಥೆಗಳ ಸರಜೋಡಿಯಾಗಿ ನಿಂತು, ಕೆನರಾ ಬ್ಯಾಂಕ್ — ಬ್ಯಾಂಕುಗಳ ಗಣನೆಯಲ್ಲಿ 7ನೆಯ ಸ್ಥಾನವನ್ನು ಪಡೆದು — ದಕ್ಷಿಣ ಭಾರತದಲ್ಲಿ ಪ್ರಮುಖ ಬ್ಯಾಂಕೆಂದು ಹೆಸರುಗಳಿಸಿ ಅತ್ಯಂತ ಸುಧಾರಿತ ಬ್ಯಾಂಕೆಂದು ಜನಮೆಚ್ಚುಗೆಯನ್ನು ಪಡೆದಿದೆ. ಈ ವಿಶ್ವಾಸಪಾತ್ರವಾದ ಟೋಕನ್ ಸಾಮಾನ್ಯ ಸಂಸ್ಥೆಯ 'ಟೋಕನ್'ನಂತಿರದೆ — ಮಹತ್ವ ಪೂರ್ಣವಾಗಿದೆ. ಕೆನರಾ ಬ್ಯಾಂಕಿನೊಂದಿಗೆ ವ್ಯವಹರಿಸಿ — ಕೆನರಾ ಬ್ಯಾಂಕಿನ ಸೇವೆಯ ಪ್ರತಿಫಲವನ್ನು ಪಡೆಯಿರಿ.

60 ವರ್ಷಗಳ ಅವಿರತ ಸೇವೆ—1ನೇ ಜುಲೈ 1906—1ನೇ ಜುಲೈ 1966.
ಅಖಿಲ ಭಾರತ ವಜ್ರ ಮಹೋತ್ಸವ—ಜುಲೈ—ದಶಂಬರ್, 1966.

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಲಾಲ್‌ಬಾಗ್ ಹಿಲ್, ಮಂಗಳೂರು.
ಆಡಳಿತ ಆಫೀಸ್: 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

CANARA BANK LTD.

SISTA'S CR-12A

ಚಾರುಚಯನ

ಶಾಂತಿಪಥದಲ್ಲಿ ಕಾಳಿಯವತಾರವೆ?

ದೇಶದಲ್ಲಿನ ಪರಿಸ್ಥಿತಿಯು ಎಂದಿಗಿಂತಲೂ ವಿಷಮಗೊಂಡಿದೆಯೆಂಬುದಕ್ಕೆ ನಡೆಯುತ್ತಿರುವ ವಿದ್ಯಮಾನಗಳೇ ಸಾಕ್ಷಿ. ಮೂಲೆ ಮೂಲೆಯಲ್ಲೂ ಒಂದಲ್ಲ ಒಂದು ನೆವನವನ್ನು ಮುಂದೆ ಮಾಡಿ ಒಂದಲ್ಲ ಒಂದು ಬಗೆಯ ಆಂದೋಲನ—ಗಲಭೆ—ಗುಲ್ಲು—ಆರಂಭವಾಗಿ ಶಾಂತಿ ಮತ್ತು ಸುವ್ಯವಸ್ಥೆಗಳಿಗೆ ಪೂರಕವಾಗಿ ಪರಿಣಮಿಸಿದೆ. ಸರಕಾರವಾದರೂ ಆಗಾಗ್ಗೆ ವಾರ್ಯವಾಗಿ ಗೋಳಿಬಾರು ನಡೆಸಬೇಕಾಗಿ ಬಂದ ಪ್ರಸಂಗಗಳೂ ಕೆಲವಿವೆ. 'ಸಾರ್ವತ್ರಿಕ ಚುನಾವಣೆಗಳಿಗೆ ಮೊದಲು' ಎಂಬ ಸರ್ವಸಾಮಾನ್ಯಕಾರಣವೊಂದೇ ಇದಕ್ಕೆ ಹೇತುವೆಂದು ಹೇಳಬರುವುದಿಲ್ಲ ಎಕೆಂದರೆ, ಭಾರತವು ಇದಕ್ಕೆ ಸೊದಲೂ ಮೂರು ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿದೆ. ಆದರೆ, ಆ ಸಮಯದಲ್ಲಿ ಇಂತಹ ಪೊಂಬಿಯೇಳುವ ಪರಿಸ್ಥಿತಿಗಳ ಗಂಧವೂ ಇರಲಿಲ್ಲ.

ಅಂದಿನಿಂದ ಇಂದಿನ ಪರಿಸ್ಥಿತಿ ಜೆಳೆದಿದೆ. ದೇಶದಲ್ಲಿನ ಕೆಲವೇ ಪಂಡಿತಗಾರರು ಇತರರ ಮೇಲೆ ಪ್ರಭಾವ ಬೀರುವಂತಹ ದುರ್ದೈವೀ ಪ್ರಸಂಗವಿಂದಿದೆ. ಜನತೆಯಲ್ಲಾದರೂ ಏಕರಾಷ್ಟ್ರೀಯತೆಯ ಪಾರೆ ಮರೆತು ಪ್ರಾಂತೀಯತೆ-ಭಾಷೀಯತೆಗಳ ದುಷ್ಪ ಧಾವದಿಂದ ಎಲ್ಲರಾಜ್ಯಗಳೂ ತತ್ತರಿಸುತ್ತಿವೆ. ಪಂಜಾಬದ ವಿಭಜನೆ, ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದ, ಆಂಧ್ರದಲ್ಲಿನ ಆಂಧ್ರೋದಲನ ಮೊದಲಾದುವು ಇದಕ್ಕೆ ಪುಟವಿಡುವ ಪ್ರಸಂಗಗಳು.

ವಿದ್ಯಾರ್ಥಿಗಳ ಅಶಿಸ್ತು, ಹೊಣೆಗೇಡಿತನವಿಂದು ಹೂವುದೇ ವಿದ್ಯಾಲಯದ ಸಮಸ್ಯೆಯಾಗಿ ಉಳಿದಿಲ್ಲ; ರಾಷ್ಟ್ರೀಯ ಸಮಸ್ಯೆಯ ರೂಪಧರಿಸಿದೆ. ಕೆಲವು ತಿಂಗಳುಗಳಿಂದ ನಡೆಯುತ್ತಿರುವ "ಕರಸ್ಪತೀ ಸಂಹಾರ"ವನ್ನು ವೀಕ್ಷಿಸುವಾಗ ನಮ್ಮಲ್ಲೂ ಇಂತಹ ದುರ್ಗತಿಪ್ರಾಪ್ತವಾಯಿತೇ ಎನಿಸುತ್ತಿದೆ. ಇದರ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳ ಕೈವಾಡವಿದೆಯೆಂಬ ದೂರು ಸತ್ಯವೆಂದು ನಂಬುವುದಾದರೆ, ಇದಕ್ಕಿಂತ ಅಗ್ನಿಪರೀಕ್ಷೆ ಬೇರೆನಿಲ್ಲವೆನ್ನಬೇಕು. ಮುಂದಿನ ಭವ್ಯ ಜನಾಂಗವಾಗಿರುವ ಇಂದಿನ ವಿದ್ಯಾರ್ಥಿಗಳೇ ಆಂದೋಲನ—ಕಾಯದೆ ಭಂಗಗಳಲ್ಲಿ ತೊಡಗುವುದು—ತಲೆ ಕೆಳಗು ವ್ಯಾಪಾರವಾಗ್ರವಲ್ಲ ಇದನ್ನೊತಕ್ಷಣ ಕತ್ತಿಕ್ಕದೆ ಹೋದರೆ, ನವ್ಯದೇಶವೇ ದಿವಾಳಿ ಹೋದಂತೆ ಎಂದು ಹೇಳಬೇಕು.

ವಿರೋಧಿ ಪಕ್ಷಗಳು ಸರಕಾರಿ ಪಕ್ಷವನ್ನು ಚುನಾವಣೆಗಳಲ್ಲಿ ಎದುರಿಸುವುದರಲ್ಲಿ ಜಾತಿ ಚಕ್ಯತೆಯನ್ನು ಶೋಷಿಸುವುದನ್ನು ಬಿಟ್ಟು ಹುಂಡಿಯಲ್ಲಿ ಇಂದು ದರ ವಾಡ ಕಂಡು ತಾವು ಒಳಗೊಳಗೆ ಆನಂದ ಗೊಳ್ಳುತ್ತಿವೆ. ಆದರೆ ಇಂದು ತಾವು ನಿರ್ಮಿಸಿದ ಈ 'ಅಶಿಸ್ತು, ಮುಂದೆ ತಮ್ಮನ್ನೇ ನಂಗಿ ಬಿಡುವು ದಂಬ ಸತ್ಯ ಸಂಗತಿಯನ್ನು ಅವು ಅರಿತು ಕೊಳ್ಳದೆ ಹೋದುದು ನವ್ಯೆಲ್ಲರ ದುರ್ದೈವ. ವಿದ್ಯಾರ್ಥಿಗಳು ರಾಜಕೀಯದಲ್ಲಿ ಪ್ರವೇಶಿಸಬೇಕೇ ಬೇಡವೇ, ಅದು ಬೇರೆ ವಿಚಾರ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರವರಿಸಬೇಕೆಂಬುದೂ ನಿಜವೇ. ಆದರೆ, ಪರಿಹಾರ ರಾಜಕೀಯವಾಗಿರದೆ ಶಾಶ್ವತವಾಗಿರಬೇಕೆಂಬುದನ್ನು ಯಾಕೆ ಗಮನಿಸಲಾಗುವುದಿಲ್ಲ?

ವಿದ್ಯಾರ್ಥಿಗಳ ಅಶಿಸ್ತು ಗಂಭೀರ ಸ್ವರೂಪದ್ದು. ಇಂಡೋನೇಶ್ಯದ ದುರಂತವನ್ನು ಸರಕಾರ—ಸರಕಾರೇತರ ಪಕ್ಷಗಳು ಅವಶ್ಯ ಗಮನಿಸಬೇಕು ಅಲ್ಲಿ ಅಧ್ಯಕ್ಷ ಸುಕರ್ಣರ ಅಧಿಕಾರ ಮದ ಇಳಿದುದು ನೂತ್ಯವಲ್ಲ, ಮಾಜಿ ವಿದೇಶ ಮಂತ್ರಿ ಸುಂಬಾದ್ರಿಯೋ ಅವರಿಗೆ ಮೃತ್ಯು ದಂಡನೆಯು ದೊರೆವಂತಾಯಿತು ಕಲ್ಯಾಣರಾಷ್ಟ್ರವನ್ನು ಕಟ್ಟಲು ಹೊರಟವು ಮಾತಾಳಕ್ಕೆ ಜಾರುವ ದಾರಿಯಲ್ಲಿ ಮುಂದುವರಿಸುಬೇಕೆ? ಅಥವಾ ವಿರುವ ದಾರಿ ಹಿಡಿಯು ದೇಕೇ ಎಂದು ಆತ್ಮ ಶೋಧನೆಯನ್ನು ನಾವೇ ಮಾಡಿಕೊಳ್ಳಬೇಕು—ಇಲ್ಲವಾದಲ್ಲಿ ನಾವು, ನವ್ಯೆತನವೆಲ್ಲವೂ ಧೂಳೀಪಟವಾದಂತೆ.

ಮಾಜಿ ರಕ್ಷಣಾ ಮಂತ್ರಿ ವಿ. ಕೆ. ಕೃಷ್ಣಮೆನನ್ನರನ್ನು ಒಬ್ಬ ರಾಷ್ಟ್ರೀಯ ವ್ಯಕ್ತಿಯನ್ನಾಗಿಸಿದರು ದಿವಂಗತ ಪ್ರಥಾನಿ ಪಂಡಿತಜವಹರು. ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಕಾಶ್ಮೀರದ ಬಗ್ಗೆ ವಾದ ಮಾಡಿ ಪ್ರಶಸ್ತಿಗಳಸಿದ ಮೆನನ್ನರು ಪಾತೆರಹಿತ ಮಂತ್ರಿಯೂದರು, ಸಂರಕ್ಷಣಾ ಸಚಿವರಾದರು. ಮುಂಬಯಿಯಿಂದ ಕಳೆದೆರಡು ಬಾರಿ ಮೆನನ್ನರು ಲೋಕ ಸಭೆಗೆ ಸ್ಪರ್ಧಿಸಿದಾಗ ಪಂಡಿತ ನೆಹರು ಆಗಾಗ್ಗೆ ಸಂಸತ್ತಿನ ಹೊರಗೆ ಇದ್ದು ಕೊಂಡು ದೇಶಕ್ಕೆ ನೇವೆ ಸಲ್ಲಿಸಬಹುದಿತ್ತು. ಇನ್ನೇ ಮತ್ತಾವುದಾದರೂ ಮತದಾರ ಕ್ಷೇತ್ರವನ್ನು ಆರಿಸಬಹುದಿತ್ತು. ಅವರಿಂ

ಅದುರಿಂದ ಭಾರತದ ವಿದೇಶ ನೀತಿಯ ಬಗ್ಗೆ ಆಗಾಗ್ಗೆ ನಡೆ ಪ್ರತಿ ಎಂದು ಮೆನನ್ ಗೆದ್ದಾಗ, ನಿಜವಾಗಿಯೂ ಮೆನನ್ ಗೆದ್ದದ್ದೇ, ಪಂಡಿತಜೀ ಗೆದ್ದದ್ದೇ ಎಂದು ಆಗ ಯೋಚಿಸಿದವರೂ, ಯೂರೋಪಿಯರೂ ಮೂರನೆಯವರಿಗೂ ಅದೇ ಕ್ಷೇತ್ರಬಯಸಿ ಮೆನನ್ ಆರ್ಜಿ ಗುಜಂಾಯಿ ಸಿದರೆ, ಅದಕ್ಕೆ ಬೆಲ ಬರಲಿಲ್ಲ. ಪ್ರಾದೇಶಿಕ ಕಾಂಗ್ರೆಸ್ಸಿಗರಿಗೆ ಅವಕಾಶ ನೀಡಲು ಪ್ರಶ್ನೆ ನಿರಾಕರಿಸಿದೆ—ಒಬ್ಬ ರಾಷ್ಟ್ರೀಯ ವ್ಯಕ್ತಿಯ ಬಗ್ಗೆ ಇಂತಹ ಘಟನೆ ಜರಿಯ ಮೆನ್ನಲೇ ಬೇಕು.

ಐದು ವರ್ಷಗಳ ಅವಧಿಯಲ್ಲಿ ಕೆಲವೊಂದು ಸ್ಥಿತ್ಯಂತರಗಳು ದೇಶದಲ್ಲಿ ಘಟಿಸಿದವೆ ಚೀನೀಯರುರ ಆಕ್ರಮಣದ ನೇಪಥ್ಯದಲ್ಲಿ ಮೆನನ್ನರು ನಿವಾರ್ಯವಾಗಿ ರಾಜಿನಾಮೆ ಕೊಡಬೇಕಾದ ಪ್ರಸಂಗ ಬಂತು. ತನ್ನಲ್ಲಿ ಮೆನನ್ನರಿಗೂ ದೇಹವೆಂದು—ಜೀವವೂ ಇದು ಎಂದು ನಡೆದುಕೊಳ್ಳಕಿದ್ದ ಪಂಡಿತಜಿ ದೇಶದ ಕರೆಗೆ ಓಗೊಟ್ಟು ಮೆನನ್ನರ ಕೈಬಿಡಬೇಕಾಯಿತು. ಇಷ್ಟರಿಂದಲೇ ಮೆನನ್ನರ ಚರಿತ್ರೆಕ್ಕೆ ಶುಂದ ಂಟಾಗಲಿಲ್ಲ ಕೆವರನ್ನು ನಾಯಕರನ್ನಾಗಿ ನೂಡಿದವರಿಗೆ ಅಮಂರಂದರು ಇಂದು ಮೆನನ್ ಕಾಂಗ್ರೆಸ್‌ನ ಒರ್ವ ಹಿಳಿಗ ಹಲಿ ಎಂದರೆ ಹೇಗೆ?

ಮೆನನ್ನರು ತನಗೆ ಲೋಕ ಸಭೆಯ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶ ಸಿಲ್ಲವೆಂದು ಸಚನೆ ಬಂದಾಗ ಆ ಮಾತಿಗೆ ರಕ್ಷೇತ್ರವನ್ನೇ ಕೈಬಿಡಬಹುದಿತ್ತು. ಅಥವಾ ಹತ್ತು ವರ್ಷಗಳ ಕಾಲ ಎಂ ಪಿ ಆಗಿದ್ದರಿಂದಲೇ ತೃಪ್ತರಾಗಿ ಸಂಸತ್ತಿನ ಹೊರಗೆ ಇದ್ದು ಕೊಂಡು ದೇಶಕ್ಕೆ ನೇವೆ ಸಲ್ಲಿಸಬಹುದಿತ್ತು. ಇ

ಮಕ್ಕಳ ಕ್ರೀಡಾಂಗಣವಾಗಿ ಪರಿವರ್ತನೆಯಾಗುವುದಕ್ಕೆ ಮೊದಲು 'ದಿ ಬ್ರೂಕ್‌ಲಿನ್'ನ ದೃಶ್ಯವೊಂದು.

ಹಾಗೆ ಮಾಡಲಿಲ್ಲವೋ, ಅವರಿಗೇಕೆ ಮಂಬಾಯಿಯಲ್ಲಿ ಅವಕಾಶ ದೊರೆ ದೆ ಹೋಯಿತೋ—ಇದರೆಲ್ಲಗೆಯೂ ಒಂದು ಬಗೆಯ "ರಾಜಕೀಯ" ವಿಗೆ ಎಂದರೂ ಅತಿಶಯವಾಗದು. ಆದರೆ ಈ ಚಿಲ್ಲರೆ ರಾಜಕೀಯದಿಂದ ದೇಶದ ಹಿತಕ್ಕೆ ಧಕ್ಕೆಯೊಗದಿರಲಿ ಎಂದು ಹಾರೈಸುವುದು ಅಗತ್ಯವಾಗಿದೆ.

ಂ ಂ ಂ ಂ

ನಮ್ಮ ರಾಜ್ಯದ ನೂರು ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಒಂದು ನಿರ್ಧಾರಕ್ಕೆ ಬಂದು ಕನ್ನಡದ ಕೀರ್ತಿ ಪತಾಕೆಯನ್ನು ಎರಿಕ ಹತ್ತಿದ್ದಾರೆ ವಿಶ್ವವಿದ್ಯಾಲಯಗಳಲ್ಲಿಕನ್ನಡವನ್ನು ಪರ್ಯಾಯವಾಮ ಧ್ಯಮವಾಗಿ ಬಳಸುವಿಳವರ ನಿರ್ಧಾರದಿಂದ ಭುವನೇಶ್ವರಿ ಲಿಪ್ಪ ತೃಪ್ತಳಾಗಿದ್ದಾಳೆ. ಇಂಗ್ಲಿಷ್ ಭಾಷಾ ಜ್ಞಾನವು ಇಲಿಯುತ್ತಿರುವುದರಿಂದ ಲ ಭಾಷೆಯಲ್ಲಿ ವಿಷಯ ಗ್ರಹಿಸುವ ಶಕ್ತಿ ವಿದ್ಯಾರ್ಥಿಗಳಲ್ಲಿ ಹಿಂಸುವಾಗುತ್ತಿದೆ (ಪಾರ ಹೇಳುವ ಶಕ್ತಿ ಅಧ್ಯಾಪಕರಲ್ಲಿ ಕಡಿಮೆಯಾಗುತ್ತಿದೆ—ಈ ಸಂಗತಿ ಬೇರೆ). ಅದುದರಿಂದ ಶಿಕ್ಷಣದ ಉದ್ದೇಶ ಸಾರ್ಥಕವಾಗುವುದಿಲ್ಲ. ಮಾತೃ ಭಾಷಾ ಮಾಧ್ಯಮದಿಂದ ವಿಷಯ ಗ್ರಹಣ ಸುಲಭ ಸಾಧ್ಯ—ಜ್ಞಾನಾಭಿವೃದ್ಧಿಯೂ ಶಕ್ಯ ಇದನ್ನು ಹಿಂದೆಯೇ ನಾವು ಸ್ಪಷ್ಟಪಡಿಸಿದ್ದೆವು. ಇಂತಹ ವಿಚಾರ ಉಪಕುಲಪತಿಗಳಿಗೆ ಈಗಲಾದರೂ ಬಂದುದು ಸಂತೋಷ ತಮ್ಮಲ್ಲಿ ನಿರ್ಧಾರವನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ಕಾರ್ಯಗತ ಮಾಡಲುಅವರು ಮುಂದಾಗಲಿ

ಮೈಸೂರು, ವಿಶ್ವವಿದ್ಯಾನಿಲಯ ಆರಂಭಿಸಿದ್ದ ಈ ಯೋಜನೆ ಇಂದು ಇಡಿಯ ರಾಜ್ಯಕ್ಕೆ ಹಂಡಿದಂತಾಯಿತು. ಕನ್ನಡದಲ್ಲಿ ಸಂಬಂಧ ಪಟ್ಟ ಪರ್ಯಪುಸ್ತಕ ತಯಾರಿಯಾಗ ಬೇಕು ಇಂದು. ಪ್ರಚಾರೋಪಕ್ರಮಗಳನ್ನು ಕನ್ನಡದಲ್ಲೆಯೇ ಮಾಡಬಲ್ಲ ಶಿಕ್ಷಕರು ಪರ್ಯಪುಸ್ತಕ ತಯಾರಿಸಲಾರರೆ?—ಅಂತೂ ಈ ದಿಸೆಯಲ್ಲಿ ಕಾರ್ಯಮುಂದುವರಿಯಬೇಕು.

ಆದರೆ, ಒಂದು ಮಾತು ಸದ್ಯ ಪರೀಕ್ಷೆಯ ಮಾಧ್ಯಮ ಮಾತ್ರವಾಚಿರುವನ್ನು ಮಾಧ್ಯಮವನ್ನು ವಿದ್ಯಾರ್ಥಿಗಳು ಹೇಗೆ ಸ್ವೀಕರಿಸುವರು? ಹೈಸ್ಕೂಲು ವರೆಗಿನ ಮಾಧ್ಯಮ ಕನ್ನಡವಿರುವುದಾದರೂ ಕೆಲವು ಹೆತ್ತವರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮವೇ ಬೇಕು ಎನ್ನುತ್ತಾರೆ. ಹಾಗಾಗಿಯೇ ಇತ್ತೀಚೆಗೆ ಕೆಲವು ವರ್ಷಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹೆಚ್ಚಿದವೆ. ಈ ದುರ್ದೈವ ತಪ್ಪಬೇಕು. ಪ್ರತಿ ಕಾಲೇಜಿನಲ್ಲೂ ಕನ್ನಡ ಮಾಧ್ಯಮದ ವಿಭಾಗವಿರುವಂತಾಗಬೇಕು. ಕನ್ನಡ ಮೊಂದೇ ಮಾಧ್ಯಮವನಿಸುವ ಕಾಲ ಬೇಗನೇ ಬರಬೇಕು. ಎಲ್ಲ ಪೀಠಗಳಲ್ಲೂ ಮಾತೃಭಾಷೆಯೇ ಮಾಧ್ಯಮವಿರುವಾಗ ನಾವೇಕೆ ಇಂಗ್ಲಿಷ್ ಮಾಧ್ಯಮ ಕ್ಕೇನೇ ಅಂಟಿಕೊಂಡಿರಬೇಕು? ಎಂದ ಮಾತ್ರಕ್ಕೆ ಇಂಗ್ಲಿಷ್ ಅಧ್ಯಯನ ಕೂಡದೆಂದಲ್ಲ; ಅದು ಎಂದಿನಂತೆ ನಡೆಯಲಿ, ಇತರ ವಿಷಯಗಳ ಅಧ್ಯಯನ ಮಾತೃಭಾಷೆಯಲ್ಲಾಗಲಿ.

ಅಭಿಪ್ರಾಯ

ಹೀಗೇಕೆ ಆಗುತ್ತಿದೆ?

ಬರೆದವರು : ಶ್ರೀ ಶಿವಶಂಕರ

ಪುಣ್ಯಭೂಮಿ ಭಾರತದ ದೇಶದಾದ್ಯಂತ ಮೊನ್ನನಲ್ಲ ಪ್ರಪಂಚದ ನಾನಾ ಭಾಗಗಳಲ್ಲಿ ಬಹು ವಿಜೃಂಭಣೆಯಿಂದ ವಿಘ್ನೇ ಪರಿಹಾರಕ ವಿನಾಯಕನ ಉತ್ಸವ ಜರಗುವಾಗ ಮಹಾರಾಷ್ಟ್ರದ ಕಲವೆಡೆಗಳಲ್ಲಿ ಪ್ರತೀವರ್ಷದಂತೆ ಈ ವರ್ಷ ಕೂಡಾ ಮತೀಯ ಗೂಂಡಾಗಳು ಪುಂಡಾಟಿಕೆ ನಡೆಸಿರುವ ಪದ್ಧತಿ ಪ್ರಕಟವಾಗಿರುತ್ತದೆ.

ವಿದ್ಯಾಧಿದೇವತೆ ಸರಸ್ವತಿ ಮಾತೆಯ ವಿಸರ್ಜನೆ ಪುಸ್ತಕಗಳಲ್ಲಿರುವುದರಿಂದ ಆ ಪುಸ್ತಕಗಳನ್ನು ಧ್ವಂಸಗೊಳಿಸಿ ಬಿಡಬೇಕೆಂದು ನೂತನ ಮಲ್ಲಿಸುದ್ಧ ಭಾರತದ ರಾಜ್ಯಸಭೆಯೊಳಗೂ ನಡೆದಿರುತ್ತದೆ.

ಧರ್ಮಭೂಮಿ ಭಾರತದ ಗೌರವ ಬಿಂದು ಗೋಮಾತೆಯ ಕ್ರೂರ ಪಾತಕವನ್ನು ತಡೆಯಬೇಕೆಂದು ಭಾರತ ಸರಕಾರದೊಡನೆ ಜನತೆ ಮೊರೆ ಹೋಗ ಬೇಕಾಗಿರುತ್ತದೆ; ದೌರ್ಜನ್ಯಕ್ಕಿಗಳ ಗೂಂಡಾಗಿರಿಯನ್ನು ಸಹಿಸಿಕೊಳ್ಳಬೇಕಾಗಿರುತ್ತದೆ.

ನವರಾತ್ರಿಯ ಪರ್ವಕಾಲದಲ್ಲಿ ದೇಶದ ನಾನಾ ಭಾಗಗಳಲ್ಲಿ ಹಲವಾರು ರೀತಿಯ ಅವಘಡಗಳು ಸಂಭವಿಸಿರುವ ಸಮಾಚಾರ ಪ್ರಕಟವಾಗಿರುತ್ತದೆ ಆ ಕುರಿತು ಮೊನ್ನೀನ ಜಿಲ್ಲಾ ನ್ಯಾಯಾಧಿಕಾರಿಯವರು, "ಮುಂಜಾಗರೂತೆ ವಹಿಸುತ್ತಿದ್ದಲ್ಲಿ ಆ ವಘಡಗಳನ್ನು ತಪ್ಪಿಸಬಹುದಾಗಿತ್ತೆ"ಂದು ತನ್ನ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪಂಡಿತ ಸಹಷ್ಣತೆಗೆ ಪ್ರಸಿದ್ಧವಾಗಿರುವ ಪವಿತ್ರ ಭಾರತದ ಹಲವಾಡೆಗಳಲ್ಲಿ ದೇವಸ್ಥಾನಗಳು ಧ್ವಂಸವಾಗಿ, ಮಂದಿರಗಳು ಮಾಯವಾಗಿ ಇಗರ್ಜಿಗಳೂ ಮಸೀದಿ—ದುರ್ಗಾಗಳು ಆ ಸ್ಥಳಗಳಲ್ಲಿ ಎದ್ದೇಳುತ್ತಿರುವ ಸಮಾಚಾರ ರಾಷ್ಟ್ರಾದ್ಯಂತವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ.

ಇಂತಹ ಘಟನೆಗಳಿಗೆ ಇಂದು ಇತಿಮಿತಿ ಇರುವದಿಲ್ಲ. ಪ್ರಪಂಚದ ಒಂದು ದೇಶ ಭಾರತವನ್ನು ಪುಣ್ಯಭೂಮಿ—ದೇವಭೂಮಿ—ವಿದ್ಯಾಮಂದಿರ—ಧರ್ಮಭೂಮಿ—ಕರ್ಮಭೂಮಿ ವರ್ಣಿಸಿದಷ್ಟು ಕವಿಗೆ ತೃಪ್ತಿ ಎಂಬುದೇ ಇಲ್ಲ. ಅಂತಹ ಪುಸಂಸ್ಕೃತ ನಾಡಿನಲ್ಲಿ ಇಂತಹ ಘಟನೆಗಳು ನಡೆಯುತ್ತಿರಲು ಕಾರಣವೇನು? ವಿನಾಯಕ ಪೂಜೆ, ಸರಸ್ವತಿಪೂಜೆ ವಿಜಯದಶಮಿ, ಗೋಪೂಜೆ. ಇವುಗಳೆಲ್ಲಾ ನಡೆಯುತ್ತಿರುವಾಗ ಇಂತಹ ವಿಷಯಗಳೇನು?

ಸ್ವಾತಂತ್ರ್ಯ ಸಂಗ್ರಾಮದ ಸಮಯ ಸಮಸ್ತ ಭಾರತೀಯರನ್ನು ಒಂದುಗೂಡಿಸಿ ಹುರಿದುಂಬಿಸುವ ಮಹಾನ್ ಕಾರ್ಯಕ್ಕಾಗಿ ಲೋಕಮಾನ್ಯ ಬಾಲಗಂಗಾಧರ ತಿಲಕರು ವಿಘ್ನೇಶ್ವರನಿಗೆ ನಮಸ್ಕಾರವೆಂದರು. ಭಾರತೀಯರ ಒಗ್ಗಟ್ಟಿಗಾಗಿ ಇಂದು ಈ ಹಬ್ಬವನ್ನಾಚರಿಸುವದರಲ್ಲಿ ದೋಷವೇನಿದೆ? ಇಂದು ಭಾರತೀಯರ ಐಕ್ಯತೆಯು ಅವಶ್ಯಕತೆ ಇಲ್ಲವೇನ? ಇದ್ದಲ್ಲಿ ಮತೀಯ

(ಪದಿಮೂರನೇ ಪುಟ ನೋಡಿರಿ)



ವಿಕ್ಸ್ ವೆಪೋರಬ್ ಕೂಡಲೆ ಆರಾಮವನ್ನುಂಟುಮಾಡುತ್ತದೆ...ನಿಮ್ಮ ಮಗು
ನಿರಾತಂಕವಾಗಿ ಉಸಿರಾಡಿಸುವುದು...ಅದು ಇಡೀ ರಾತ್ರಿ ಗಾಢವಾಗಿ ಮಲಗುವದು

ನಿಮ್ಮ ಮಗು ತನ್ನ ಸುಖ-ನೆಳರ್ಯಗಳಿಗೆ ನಿಮ್ಮನ್ನು ಅವಲಂಬಿಸಿದೆ ಅದುದರಿಂದಲೇ ನಿಮ್ಮ ಮಗುವಿಗೆ ನೆಗಡಿಯ ಬಾಧೆಯ ಮೊದಲ ಲಕ್ಷಣಗಳಾದ ಕೆಣ್ಣು-ಮೂಗುಗಳಿಂದ ನೀರು ಸುರಿಯುವಿಕೆ, ಗಂಟಲು ಕಟ್ಟುವಿದು, ಉಸಿರಾಟದಲ್ಲಿ ತೊಂದರೆ ಮುಂಚಾದವು ಕಂಡುಬಂದರೆ, ವಿಕ್ಸ್ ವೆಪೋರಬ್‌ನ್ನು ತಿಕ್ಕಿರಿ

ನಿಮ್ಮ ಮಗುವಿಗೆ ನೆಗಡಿಗೆ ವಿಕ್ಸ್ ವಪೋರಬ್ ಉತ್ಪ್ರತಿಮ ಉಪಾಯವಾಗಿದೆ ಏಕೆಂದರೆ ಒದು ನೆಗಡಿಯ ಪ್ರಖರತೆಯಿಂದ ಪೀಡಿತವಾದ ಭಾಗಗಳಲ್ಲಿ ಅದರೆ ಮುಖ ಗಂಟಲು ಮತ್ತು ಎದೆಗಳಲ್ಲಿ—ಪರಿಣಾಮಕಾರಿಯಾಗಿ ಬೆಚ್ಚಸುತ್ತದೆಮತ್ತಿದರೆ ಮಗುವಿನ ಪ್ರಾಣಾಪಾಯಕರವಾಗಬಹುದಾದ ಉಸಿರಾಟದ ತೊಂದರೆಯನ್ನು ಒಳಿ ಆದರೆಪ್ಪಾರಂಭವಾಗಿದೆ

ನಿಮ್ಮ ಮಗು ನಿಗೆ ನೆಗಡಿ ಆದಾಗ ನೀವು ಮಾಡಬೇಕಾದದ್ದು ಇಷ್ಟೇ ಮಾತ್ರ ವಿಕ್ಸ್ ವೆಪೋರಬ್‌ನ್ನು ತಿಕ್ಕಿ ನಿಮ್ಮ ಮಗುವನ್ನು ಆರಾಮವಾಗಿ ಹಾಸಿಗೆಯಲಿ ಹಾಕಿಸಿ ಮಲಗಿಸಿ ನಿಮ್ಮ ಮಗು ಇಡೀ ರಾತ್ರಿ ಗಾಢವಾಗಿ ಏಳದೇ ಹಾಗೆ ವಿಕ್ಸ್ ವೆಪೋರಬ್ ತನ್ನ ಪ್ರಯೋಜನವನ್ನು ಮಾಡುತ್ತದೆ ಬೆಳಿಗ್ಗೆ ನಮಗೆ ಸಿಹಿಯಾದ ಎಂದು ನಿಶ್ಚಿಂತರಾಗಿ ನಿದ್ದು ಆಕ್ಕಯಿಂದ ಮುಖ ಮಾಡಿ ಉತ್ಸಾಹದಾಯಕವಾಗಿ, ನಗುನಗುತ್ತ ಬರುವದು

ವಿಕ್ಸ್ ವೆಪೋರಬ್ 3 ಸೈಜ್‌ಗಳಲ್ಲಿ

ತಿಳಿಯಬೇಕಾದ ಕೆಲವು ಸತ್ಯಾಂಶಗಳು

(ಏಳನೇ ಪುಟದಿಂದ)

ದರ್ಥವಿಲ್ಲದೇ ಹೋಯಿತಾದರೂ, ಆಂದು ಕೇಂದ್ರ ಗೃಹಮಂತ್ರಿಯಾಗಿದ್ದ ಪಂಡಿತ್ ಪಂತರು ಆಗಲನ್ನು ಪ್ರಶ್ನಿಸಿದಾಗ ತಾನು ನೀಡಿದ ಒಪ್ಪಾಸನೆಯು ಸರಿಹೊಂದುದೂ ನ್ಯಾಯವಾದುದೂ, ಎಂದು ಶ್ರೀಯುತರು ಉತ್ತರಿಸಿದರೆಂಬುದು ಪ್ರಶಂಸನೀಯವಾಗಿದೆ.

1957ರ ಮೇ 6ರಲ್ಲು ಕೇರಳ ಗವರ್ನರರು ನ್ಯಾಯವಿಧಾಯಕ ಸಭೆಯಲ್ಲಿ ಮಾಡಿದ ಭಾಷಣ (Address) ವನ್ನು ಉತ್ತರಿಸುತ್ತಾ ನಾನು ಈ ಕೆಳಗಿನ ಮಾತುಗಳನ್ನು ನುಡಿದೆನು. "ಕಾಸರಗೋಡು ಮತದಾರ ಕ್ಷೇತ್ರದ ಸದಸ್ಯರನ್ನಾ ನನ್ನನ್ನೂ ಸಾಧ್ಯವಾದಷ್ಟು ಬೇಗನೆ ಮೈಸೂರು ನ್ಯಾಯ ವಿಧಾಯಕ ಸಭೆಗೆ ಕಳುಹಿಸಬೇಕೆಂದು, ಈ ಸಭೆಯ ಮುಂದೆ ನಾವು ಅರಿಕೆ ಮಾಡಿಕೊಳ್ಳಬೇಕೆಂಬುದೇ ನಮ್ಮನ್ನು ಆರಿಸಿ ಕಳುಹಿಸಿದ ಜನತೆಯು ನಿರ್ದೇಶವಾಗಿದೆ. ಎರಡು ಲಕ್ಷ ಕನ್ನಡಿಗರು. ಈ ರೀತಿಯ ನ್ಯಾಯವನ್ನು ನೀವು ಪಾಲಿಸುವಿರೆಂದು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದಾರೆ. ಈ ಕೇಳಿಕೆಗೆ ನಿನ್ನ ಸಮ್ಮತಿಯನ್ನಿತ್ತು ಆ ಜನತೆಯ ನಿರಂತರ ಕೃತಜ್ಞತೆಯನ್ನು ಗಳಿಸಬೇಕಾಗಿ ನಾನು ವಿನಂತಿಸುತ್ತೇನೆ' ಶ್ರೀ ಕುಂಞಿಕೃಷ್ಣನಾಯರಂತಾಗಲೀ, ನನ್ನ ಬಳಿಯಲ್ಲೇ ಕುಳಿತಿದ್ದ ಹೊಸದುರ್ಗ ಮತದಾರ ಕ್ಷೇತ್ರದ ಪಿ. ಯಸ್. ಪಿ. ಸದಸ್ಯ ಶ್ರೀ ಕೆ. ಚಂದ್ರ ಶೇಖರನ್ ಆಗಲೀ ಆ ವೇಳೆಯಾವ ಮರುಪೂತನ್ನೂ, ಎತ್ತಲಿಲ್ಲವೆಂಬುದು ಗಮನಿಸಬಕ್ಕುದಾಗಿದೆ.

ದಕ್ಷಿಣವಲಯ ಸಮಿತಿ (South zone council)ಯ ಪ್ರಥಮ ಸಭೆಯು ಮದ್ರಾಸಿನಲ್ಲಿ ಕೂಡಿದಾಗ, ಕಾಸರಗೋಡು ಪ್ರಶ್ನೆಯು ಆಲೋಚಿಸಲ್ಪಡಬಹುದಾಗಿ ಆಶಿಸಲಾಗಿತ್ತು. ಈ ವಿಷಯವು ಸಭೆಯ ಕಾರ್ಯಕ್ರಮದಲ್ಲಿ ಇರಲಿಲ್ಲವಾದರೂ ಪಂಡಿತ್ ಪಂತರು ಮೈಸೂರು ಮತ್ತು ಕೇರಳದ ಮುಖ್ಯಮಂತ್ರಿಗಳೊಡನೆ ಈ ಪ್ರಶ್ನೆಯನ್ನು ರಾಜಿಯಿಂದ ತೀರ್ಮಾನಿಸಬೇಕೆಂದು ಪ್ರಸ್ತಾಪಿಸಿದ್ದರು. ಆಂದು ಅವರಿಬ್ಬರೂ ಇದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದರು. ಇದೆಲ್ಲಾ ನನ್ನ ಸಮಕ್ಷಮದಲ್ಲೇ ಮದ್ರಾಸು ಸರಕಾರಿ ಭವನದಲ್ಲಿ ನಡೆದುದಾಗಿದೆ. ವಲಯ ಸಮಿತಿಯ ಎರಡನೇ ಸಭೆಯು ಹೈದರಾಬಾದಿನಲ್ಲಿ ನೇರಿದಾಗ, ಮೈಸೂರು ಮತ್ತು ಕೇರಳ ಮುಖ್ಯಮಂತ್ರಿಗಳು ಗಡಿವಿವಾದದ ಕುರಿತು ಆದಷ್ಟು ಬೇಗನೇ ತೀರ್ಮಾನಕ್ಕೆ ಬರಬೇಕಾಗಿ ತಾನು ಅವರಿಬ್ಬರನ್ನೂ ಒತ್ತಾಯಿಸಿರುತ್ತೇನಾಗಿ ಪಂಡಿತ್ ಪಂತರು ನನಗೆ ಭರವಸೆ ನೀಡಿದ್ದರು. ಆದನ್ನು ಕೇಳಿದ ಆಂಧ್ರ ಶಾಸನ ಸಭೆಯ ಸ್ಪೀಕರಾಗಿದ್ದ ಕಾಳೇಶ್ವರರಾಯರು ನನ್ನನ್ನು ಅಭಿನಂದಿಸಿದ್ದರು. ಅಲ್ಲದೆ ಶ್ರೀ ನಂಬೂದಿರಿಪಾಡರೂ ಶ್ರೀ ನಿಜಲಿಂಗಪ್ಪನವರೂ 'ತಾವು ಈ ಪ್ರಶ್ನೆಯನ್ನು ಬೇಗನೆ ರಾಜಿಯಿಂದ ಬಗೆಹರಿಸುವೆವು' ಎಂಬ ಒಪ್ಪಿಕೊಂಡು ಒಬ್ಬರನ್ನೊಬ್ಬರು ಆಲಂಗಿಸಿದ್ದು ನಾನು ಪ್ರತ್ಯಕ್ಷ ಕಂಡ ವಿಷಯ. ಉದಾರಮಂಡಲದಲ್ಲಿ ಕೂಡಿದ ಮೂರನೇ ಸಭೆಯು ಮೇಳೆ ಅಖಿಲ ಭಾರತ ಕಾಂಗ್ರೆಸಿನ ಮಾಜಿ ಕಾರ್ಯದರ್ಶಿ ಶ್ರೀ ಮೂಧವನ್ ನಾಯರರೂ ಕೇರಳ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ದಾಮೋದರ ಮೆನೋನರೂ ಆಲ್ಲಿ ಹಾಜರಿದ್ದರು. ಅವರನ್ನು ಉದ್ದೇಶಪೂರ್ವಕವಾಗಿ ಪಂಡಿತ್ ಪಂತರು ಬರಮಾಡಿಸಿದ್ದಿರಬೇಕೆಂದು ನನಗೆ ಅನಿಸಿತ. ಮೈಸೂರು ಪ್ರಾಂತ್ಯದ ಹದಿನಾಲ್ಕು ಮಂದಿ ಲೋಕಸಭಾ ಸದಸ್ಯರು, ಕಾಸರಗೋಡು ಪ್ರಶ್ನೆಯನ್ನು ಆಂದಿನ ಸಭೆಯಲ್ಲಿ ತೀರ್ಮಾನಿಸ ಬೇಕೆಂದು ಗೃಹ ಮಂತ್ರಿ ಪಂಡಿತ್ ಪಂತರನ್ನು ಕೇಳಿ ಕೊಂಡಿದ್ದರು. ಸಾಧ್ಯವಾದಷ್ಟು ತ್ವರೆಯಿಂದ ಕೇರಳದ ಬೇರೆ ಬೇರೆ ರಾಜಕೀಯ ಪಕ್ಷಗಳ ಮುಖಂಡರ ಸಭೆಯನ್ನು ಕರೆದು, ಈ ಪ್ರಶ್ನೆಯು ಬಗೆಹರಿಯುವಂತೆ ತಾನು ಪ್ರಯತ್ನಿಸುವೆನೆಂಬುದಾಗಿ ಶ್ರೀ ನಂಬೂದಿರಿಪಾಡರು ಪಂತರಿಗೆ ಆಶ್ವಾಸನೆಯಿತ್ತಿದ್ದರೆ. ಶ್ರೀ ದಾಮೋದರ ಮೆನೋನರು ಶ್ರೀ ಮೂಧವನ್ ನಾಯರರೂ, ಇದನ್ನು ಸಮ್ಮತಿಸಿದ್ದರು. ಇಂದು ಮಾತ್ರ ಶ್ರೀ ನಂಬೂದಿರಿಪಾಡರೂ, ಶ್ರೀ ದಾಮೋದರ ಮೆನೋನರೂ, ಶ್ರೀ ಕೆ. ಚಂದ್ರಶೇಖರನರೂ, ಮೈಸೂರು ಮತ್ತು ಕೇರಳ ಪತ್ರಿಂತ್ಯಗಳ ನಡುವೆ ಗಡಿಪ್ರಶ್ನೆಯೇ ಇಲ್ಲ ವೆಂಬ ರೀತಿಯಲ್ಲಿ ಹೇಳಿಕೆಗಳನ್ನೀಯುವುದು ಯಾವ ನ್ಯಾಯ?

(ಮುಂದುವರಿಯುವುದು)

ಅವರು ಗಳಿಸಿದ ತಾಸು ದುಡಿಯುತ್ತಾರೆ

(ಐದನೇ ಪುಟದಿಂದ)

ವಾಗಿಲ್ಲ.ಇವರು ಕೊಯಮುತ್ತೂರು ಸಹಕಾರಿ ಕ್ಷೀರ ಸರಬರಾಜು ಯೂನಿಯನ್ನಿನಲ್ಲಿ ಕಾರ್ಯನಿರತರಾಗಿದ್ದಾರೆ. ಕಳೆದ ೨೦ ವರ್ಷಗಳಿಂದ ಇದರ ಡೈರೆಕ್ಟರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೩೭ರಲ್ಲಿ ಚಿಕ್ಕದಾಗಿ ಪ್ರಾರಂಭವಾದ ಈ ಯೂನಿಯನ್ ಪ್ರತಿದಿನ ನಾಗರಿಕರಿಗೆ ೧೯,೦೦೦ ಲೀಟರ್‌ಗಳಷ್ಟು ಹಾಲನ್ನು ಒದಗಿಸುತ್ತಿದೆ. ಉತ್ತಮ ಪ್ರಾಣಿಗಳನ್ನು ಖರೀದಿ ಮಾಡಲು ಗ್ರಾಮದ ಉತ್ಪಾದಕ ಸದಸ್ಯರಿಗೆ ಯೂನಿಯನ್ ಸಾಲಗಳನ್ನು ಕೊಡುತ್ತಿದೆ. ಸರಿಉತ್ಪಾದಕ ಪ್ರಾಣಿಗಳನ್ನು ನೋಡಿಕೊಳ್ಳಲು ಒಂದು ಕೇಂದ್ರವನ್ನು ನಡೆಸುತ್ತಿದೆ ಮತ್ತು ಕ್ಷೀರೋತ್ಪಾದಕ ಪ್ರಾಣಿಗಳಗಾಗಿ ಒಂದು ಮರಣ ವಿಮಾ ಯೋಜನೆಯನ್ನು ವ್ಯವಸ್ಥೆಗೊಳಿಸಿದೆ. ಈ ಯೂನಿಯನ್ ಬಡಾವಣೆಗೆ ಯೋಜನೆಯನ್ನು ಸಿದ್ಧಗೊಳಿಸಿದೆ. ಈ ಯೋಜನೆಗಳ ಮೇರೆಗೆ ಆದ ಒಂದು ಮೇವು ವಿಶ್ಲೇಷಣದ ಯಂತ್ರವನ್ನು, ಇನ್ನೊಂದು ವಾಶ್ಚರೈಸೇಷನ್ ಯಂತ್ರವನ್ನು ಮತ್ತು ಶಿಶು ಆಹಾರದ ಮತ್ತು ಹಾಲಿನ ಪುಡಿಯ ಯಂತ್ರವೊಂದನ್ನು ಪಡೆಯುಲಿದೆ.

ಗೌಂಡರ್ ಅವರು, ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ರಾಮಕೃಷ್ಣ ವಿದ್ಯಾಲಯ ಟ್ರಸ್ಟ್‌ನಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ, ಉಪಕರಣಗಳ ತಯಾರಿಕೆಯ, ರಾಜ್ಯದ ಗೊಬ್ಬರ ಮತ್ತು ಕಾಂಪೋಸ್ಟು ಸಮಿತಿಗಳ ಮತ್ತು ಪಶುವಾಲನ ಸಂಸ್ಥೆಯ ಸಲಹೆಗಾರ ಸಮಿತಿಯ ಜೇರ್ಮನ್‌ರಾಗಿರುತ್ತಾರೆ ಕೃಷಿ ಕಾಲೇಜು ಮತ್ತು ಸಂಶೋಧನ ಸಂಸ್ಥೆಗಳಿಗೆ ಜಾಗೂ ಜಿಲ್ಲಾ ಮೃವದಾಯ ತಾಲೆಗಳಲ್ಲಿ ಸಂದರ್ಶಕರ ಉಪನ್ಯಾಸಕರಾಗಿರುತ್ತಾರೆ. ಕೃಷಿ ಕಾಲೇಜು ಮತ್ತು ಸಂಶೋಧನ ಸಂಸ್ಥೆಗಳಿಗೆ ಜಾಗೂ ಜಿಲ್ಲಾ ಮೃವದಾಯ ತಾಲೆಗಳಲ್ಲಿ ಸಂದರ್ಶಕರ ಉಪನ್ಯಾಸಕರಾಗಿರುತ್ತಾರೆ. ಕೃಷಿ ಕಾಲೇಜು ಮತ್ತು ಸಂಶೋಧನ ಸಂಸ್ಥೆಗಳಿಗೆ ಜಾಗೂ ಜಿಲ್ಲಾ ಮೃವದಾಯ ತಾಲೆಗಳಲ್ಲಿ ಸಂದರ್ಶಕರ ಉಪನ್ಯಾಸಕರಾಗಿರುತ್ತಾರೆ.

ಗೌಂಡರ್ ಅವರು ತಮ್ಮ ಹೊಲದ, ಸರಕಾರೀ ಸಂಸ್ಥೆಗಳ ಹಾಗೂ ಸಮಿತಿಗಳ ಕಾರ್ಯ ನಿರ್ವಹಣೆಗೆ ದಿನದಲ್ಲಿ ೧೫ ಗಂಟೆಗಳನ್ನು ವಿನಿಯೋಗಿಸುತ್ತಾರೆ. ೪೫ ವರ್ಷ ವಯಸ್ಸಿನ ಗೌಂಡರ್ ಅವರಿಗೆ ಮೂವರು ಚಿಕ್ಕ ಮಕ್ಕಳಿದ್ದಾರೆ.

ವಿದ್ಯಾರ್ಥಿಗಳು ಶಿಕ್ಷಣಬದ್ಧ ಜೀವನ ನಡೆಸಬೇಕು

ಉಡುಪಿ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹಾಯರ್ ಸೆಕೆಂಡರಿ ಶಾಲಾ ಕ್ರೀಡಾಂಗಣದಲ್ಲಿ ಜರಿಗಿದ ಮೈಸೂರು ಭಾಷಿಕ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಶ್ರೀ ಪೂನಾ ಧರ್ಮಸ್ಥಳ ರತ್ನವರ್ಮ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಕಡೆಟುಗಳಿಂದ ವಂದನಾರ್ಪಣೆಯ ಬಳಿಕ ಶಿಬಿರಾಧಿಕಾರಿಗಳೊಡನೆ ಮುಖ್ಯ ಅತಿಥಿಗಳು ಶಿಬಿರಾರ್ಥಿಗಳನ್ನು ಪರಿಶೀಲಿಸಿದರು. ನಂತರ ಬ್ಯಾಂಡಿನಲ್ಲಿ ಪಥಸಂಚಲನ ನಡೆಯಿತು. ಶಿಬಿರದ ಮುಖ್ಯಾಧಿಕಾರಿಗಳಾದ ಮೇಜರ್ ಕೆ. ಎಂ. ಮುತ್ತಪ್ಪನವರು ಈ ಹತ್ತುದಿವಸಗಳ ಶಿಬಿರದ ವರದಿಯನ್ನು ಓದಿ, ಎನ್. ಸಿ. ಸಿ.ಯ ಉದ್ದೇಶಗಳನ್ನು ವಿವರಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಎನ್. ಸಿ. ಸಿ. ಶಿಕ್ಷಣದಿಂದ ವಿದ್ಯಾರ್ಥಿಗಳು ಲಾಭ ಪಡೆಯ ಬೇಕು ಹಾಗೂ ವಿದ್ಯಾರ್ಥಿಗಳು ಶಿಸ್ತುಬದ್ಧ ಜೀವನ ನಡೆಸ ಬೇಕೆಂದು ಕರೆ ನೀಡಿದರು.

ಶ್ರೀಮತಿ ರತ್ನವರ್ಮ ಹೆಗ್ಗಡೆಯವರು ಬಹುಮಾನವಿತರಣೆ ಗೈದ ಬಳಿಕ, ಕ್ಯಾಪ್ಟನ್ ವಿ. ಎಸ್. ಮೆನನ್‌ರವರು ಧನ್ಯವಾದ ಸಮರ್ಪಿಸಿದರು.

ಸ್ಥಾಪಕರು ಸ್ಥಾನಾಪನ್ನರು.

ದೇವಾಲಯಕ್ಕೆ ಬರುವ ಭಕ್ತಾದಿಗಳನ್ನು ಸ್ವಾಗತಿಸುವುದು, ಉಪಚರಿಸುವುದು ಮೊದಲಾದುವುಗಳನ್ನು ಮಾಡುವುದು ಸ್ಥಾನೀಕ ಬ್ರಾಹ್ಮಣರು ದೇವಾಲಯಗಳ ಯಾಜಮಾನರಾಗಿದ್ದರೆಂಬುದನ್ನು ಸೂಚಿಸುತ್ತದೆಯೇ ಹೊರತು ಸ್ಥಾನೀಕ ಶಬ್ದವು ವೃತ್ತಿವಾಚಕ ಆಥವಾ ಜಾತಿವಾಚಕವಲ್ಲವೆಂಬುದನ್ನು ಸಮರ್ಥಿಸುತ್ತದೆ" ಎಂದು ತಾ ೩೦ರಂದು ಶ್ರೀ ಬೆಳ್ಳೆ ಭುಜಂಗರಾಯರು ಪ್ರೋ ಪಿ. ಗುರುರಾಜ ಭಟ್ಟರ ಕೃತಿಯಾನಿಧಿ ಇತಿಹಾಸದಲ್ಲಿ ಸ್ಥಾನೀಕರು' ಪುಸ್ತಕದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ತಿಳಿಸಿದರು. "ಸ್ಥಾನೀಕ" ವೆಂಬ ಶಬ್ದವು ಸ್ಥಾನಾಪನ್ನತೆಯನ್ನೇ ಸೂಚಿಸುತ್ತದೆಯೆಂದು ಮೂಡಿ ನಗರ ಸಭಾಪತಿ ಶ್ರೀ ಟಿ. ರಂಗನಾಥ ಶೆಣೈಯವರು ತುಳುನಾಡಿನ ಇತಿಹಾಸ ಸಂಶೋಧನೆಯಲ್ಲಿ ಮಗ್ನರಾದ ಪ್ರೋ. ಭಟ್ಟರನ್ನು ಅಭಿನಂದಿಸುತ್ತ ನುಡಿದರು. ಜಾತ್ಯತೀತ ರಾಷ್ಟ್ರದಲ್ಲಿ ಜಾತಿಯು ಮಹತ್ವ ಕಡಿಮೆಯಾಗುತ್ತಿದೆಯೊದಗೂ ನಮ್ಮ ಸಂಸ್ಕೃತಿಯಲ್ಲಿ ಮೂಲಸ್ವರೂಪವನ್ನು ಅರಿತುಕೊಳ್ಳುವುದು ನ್ಯಾಯೋಚಿತವೆಂದು ಗ್ರಂಥೋದ್ಘಾಟನೆ ಮಾಡಿದ ಪ್ರಕಾಶ ಸ್ವಾಸ್ಥ್ಯಹಿಕರ ಸಂಪಾದಕ ಶ್ರೀ ಎ. ಜೆ. ಆಲ್ವಿಯವರು ಅಭಿಪ್ರಾಯಪಟ್ಟರು.

ಸ್ಥಳೀಯ ಸ್ಥಾನೀಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಸಂಘದ ದ್ವಿತೀಯ ಪ್ರಕಾಶನವು ಉದ್ಘಾಟನೆಯೊಡನೆ ಸಿಪ್ಪುರ ಸಂಶೋಧಕ ಪ್ರೋ. ಪಿ. ಗುರು ರಾಜ ಭಟ್ಟರನ್ನು ಅವರ ನ್ಯಾಯ ಸಿಪ್ಪುರಿ ಸಂಶೋಧನೆಯು ಸಾಹಿತ್ಯಕ್ಕಾಗಿ ರೂ. 1001ರ ನಿಧಿಯನ್ನಿತ್ತು ಗೌರವಿಸಲಾಯಿತು. ಸಭೆಯ ಪರವಾಗಿ ಕವಿ ಎಸ್. ವೆಂಕಟ್ರಾಜರು ಸೂತನಾಡಿದರು. ಆರಂಭದಲ್ಲಿ ಶ್ರೀ ಎ ಕೃಷ್ಣರಾಯರು ಸ್ವಾಗತಿಸಿ ಸಾರಸ್ವತ ಪೋಷಕರು, ಶ್ರೀ ಗೋಪೀಚಂದರಾಯರು ಧನ್ಯವಾದವರ್ಪಿಸಿದರು.

ಆಂದು ಸಾಯಂಕಾಲ ಬ್ರಾಹ್ಮಣರ ಕೂಟುಕಲೆಯಲ್ಲಿ ಶ್ರೀ ಚಿಂದಿಕಾರ್ಯ ಮತ್ತು ತಂಡದವರ ಪೂಜೆಯು ಯಶಸ್ವಿಯಾಗಿ ನೆರವೇರಿತ್ತು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸನ್ನೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿವೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಧಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ರಾಜ್ಯದ ಉದ್ದೇಶವೇನು?

(ಅರನೇ ಪುಟದಿಂದ)

ರಾಜ್ಯದ ಉದ್ದೇಶಗಳ ವಿಚಾರದಲ್ಲಿ ಲಾಸ್ಕಿ, ಲೋಕ್ ಮತ್ತು ರುಸ್ಸೋ ವರ ಅಭಿಪ್ರಾಯ ಗಮನಾರ್ಹ. ಪ್ರಜೆಗಳ ಅಸ್ತಿಪಾಸ್ತಿ ಬದುಕು ಮತ್ತು ಸಮೂಹದ ಕಟ್ಟುನಿಟ್ಟುಗಳನ್ನು ರಕ್ಷಿಸುವುದು ರಾಜ್ಯದ ಉದ್ದೇಶವೆಂದು ಹೋಬ್ಸ್ ಹೇಳುತ್ತಾನೆ. ಲೋಕ್‌ನು ಪ್ರಜಲಿತ ಸಾಮಾಜಿಕ ಕಟ್ಟುನಿಟ್ಟುಗಳನ್ನು ಕಾಯದೆ ಜಾರಿಗೊಳಿಸುವುದು ಒಬ್ಬ ಸರ್ವಶ್ರೇಷ್ಠ ನ್ಯಾಯಾಧೀಶ ರಕ್ಷಿಸಬೇಕೆಂದು ಹೇಳುತ್ತಾನೆ. ಜೀವನ ಸ್ವಾತಂತ್ರ್ಯ ಮತ್ತು ಆಸ್ತಿಪಾಸ್ತಿಗಳ ರಕ್ಷಣೆ ರಾಜ್ಯದ ಉದ್ದೇಶವೆಂದು ಅವನ ಅಭಿಪ್ರಾಯ. ರುಸ್ಸೋವಿಗೆ ಪ್ರಜೋತ್ಪತ್ತಿ ದೇವದತ್ತವಲ್ಲ. ಸರ್ವ ಪ್ರಜೆಗಳ ಸಾಮಾನ್ಯ ಏಕವ್ಯಕ್ತಿತ್ವವೇ ರಾಜ್ಯದ ಜನನಕ್ಕೆ ಕಾರಣವಾಗಿ ಅದರಿಂದ ಸಮಾಜದಲ್ಲಿರುವ ವ್ಯಕ್ತಿಗಳನ್ನು ಪ್ರಭುತ್ವವಾದಪ್ಪು ಮಟ್ಟಿಗೆ ಅನ್ಯಾಯದಿಂದ ರಕ್ಷಿಸಿ ಹಿತಕರವಾದ ನ್ಯಾಯುತಿಯನ್ನು ಸ್ಥಾಪಿಸುವುದು; ಪ್ರಜೆಗಳಿಗೋಸ್ಕರ ಕೆಲವು ಸಾರ್ವಜನಿಕ ಸಂಸ್ಥೆಗಳನ್ನು ಮತ್ತು ಸಾರ್ವಜನಿಕ ಕೆಲಸ ನಡೆಸುವುದು.

ಆಧುನಿಕ ಕಾಲದ ಉತ್ತರಾರ್ಧ

ರಾಜ್ಯಕ್ಕೋಸ್ಕರ ಪ್ರಜೆಯೇ ಪ್ರಜೆಗೋಸ್ಕರ ರಾಜ್ಯವೇ ಎಂಬ ದುಜಟಿಲ ಸಮಸ್ಯೆ. ರಾಜ್ಯದ ಉದ್ದೇಶವನ್ನು ಸಫಲಗೊಳಿಸುವ ಸಾಧನಪದ್ಧತಿಯಿಂದಾಕೆಲವರೋ, ರಾಜ್ಯ ಪ್ರಜೆಗಳ ವಿಚಿಗೆಯನ್ನು ಸಫಲಗೊಳಿಸುವ ಸಾಧನ ಎಂದು ಇನ್ನು ಕೆಲವರು. ಮೂರನೇ ವಾದವನ್ನು ಇವರನಿ ತತ್ವಜ್ಞಾನಿಗಳಾದ ಬೆಂಥಮ್ ಮತ್ತು ಜೆಗೆಲರು ಸಮರ್ಥಿಸಿದ್ದಾರೆ. ಮಾನವನು ಸ್ವಾಭಾವಿಕವಾಗಿ ಸ್ವತಂತ್ರಜೀವಿ ಎಂದೂ, ಅವನು ಸ್ವಾತಂತ್ರ್ಯಕ್ಕಾಗಿ ಭವಿಸುವುದು ಅವನ ಬುದ್ಧಿಶಕ್ತಿಯ ಮೇಲೆ ಅವಲಂಬಿಸಿದೆ ಎಂದು ಇವರು ಅಭಿಪ್ರಾಯ ಪಡುತ್ತಾರೆ. ವ್ಯಕ್ತಿಯ ಬುದ್ಧಿಶಕ್ತಿಯು ವಿಶಿಷ್ಟವಾದುದಾಗಿದೆ. ಆ ಶಕ್ತಿಯೆ ಚಂಚಲವಾಗಿದೆ. ವ್ಯತಿರಿಕ್ತ ಆಗಾಗ ವ್ಯಕ್ತಿಗತ ಬುದ್ಧಿಶಕ್ತಿ ರಾಜ್ಯದಲ್ಲಿ ವಿಶ್ವವ್ಯಾಪಕತ್ವವನ್ನು ಹೊಂದಿರುತ್ತದೆ. ಅದರಿಂದ ಪ್ರಜೆಗಿಂತ ರಾಜ್ಯದೊಡ್ಡದೆಂದೂ; ರಾಜ್ಯವೇ ಪ್ರತ್ಯಕ್ಷ ದೇವತೆಯೆಂದೂ; ರಾಜ್ಯಾಧಿಕಾರಕ್ಕೆ ಎಲ್ಲೆ ಇಲ್ಲವೆಂದೂ, ರಾಜ್ಯದ ಕಟ್ಟುನಿಟ್ಟುಗಳಿಗೆ, ನೀತಿನಿಯಮಗಳಿಗೆ ವಿಧೇಯನಾಗಿರುವುದು ಪ್ರತಿಯೊಬ್ಬ ಪ್ರಜೆಯ ಬದ್ಧ ಕರ್ತವ್ಯವೆಂದೂ ಕೆಂಟ್ ಮತ್ತು ಹೆಗೆಲರು ಪ್ರತಿಪಾದಿಸಿದರು. ಇವರ ಈ ಸಿದ್ಧಾಂತ ಇಂಗ್ಲೆಂಡಿನಲ್ಲಿಯೂ ಪ್ರಸಿದ್ಧಿಯನ್ನು ಪಡೆಯಿತು. ಆ ದೇಶದ ಕ್ರೈಸ್ತಜ್ಞಾನಿಗಳಾದ ಗ್ರೀನ್ ಮತ್ತು ಬ್ರಾಡ್ಲೆ ಮೊದಲಾದವರು ಈ ಸಿದ್ಧಾಂತ ತಮ್ಮ ದೇಶಕ್ಕೆ ಹೊಂದುವಂತೆ ಬದಲಿಸಿದ ಪ್ರಜೆಗಳನ್ನು ಬಲಾತ್ಕಾರದಿಂದ ನ್ಯಾಯ ಮಾರ್ಗಕ್ಕೆ ಎಳೆಯುವುದು ರಾಜ್ಯದ ಕರ್ತವ್ಯವಲ್ಲ. ಪ್ರಜೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಹಕ್ಕು ಬಾಧ್ಯತೆ ಕೊಡುವುದು ರಾಜ್ಯದ ಕರ್ತವ್ಯ. ಪ್ರಜೆಗಳ ಪ್ರಗತಿಗೆ ನಿರ್ಬಂಧವಾಗುವ ಪ್ರತಿಬಂಧಕಗಳನ್ನು ನಿವಾರಣೆ ಮಾಡುವುದು ಸರಕಾರದ ಕರ್ತವ್ಯ.

— ಈ ಸಿದ್ಧಾಂತಗಳಲ್ಲಿ ಕೆಲವು ದೋಷಗಳಿವೆ. ಇದು ವಿಶೇಷ ಆದರ್ಶವಯವಾದ್ದು ಪ್ರಾಸ್ತವಿಕತೆಯಿಂದ ತುಂಬಾ ದೂರವಿದೆ. ಈ ಸಿದ್ಧಾಂತವು ವ್ಯವಹಾರದಲ್ಲಿ ತೊಂದರೆ ವ್ಯಕ್ತಿಯ ಪ್ರಗತಿಗೆ ಅಲ್ಲದೆ ರಾಜ್ಯದ ಉದ್ದೇಶವನ್ನು ನಿರ್ಣಯಿಸುವ ಸರ್ವಾಧಿಕಾರವನ್ನು ಕೆಲವೇ ವ್ಯಕ್ತಿಗಳ ಕೈವಶ ಮಾಡಿಕೊಂಡಂತಾಗುವುದು. ಈ ಸಿದ್ಧಾಂತ ವ್ಯಕ್ತಿ ಸ್ವಾತಂತ್ರ್ಯದ ವಿಚಾರ ಏನೂ ಹೇಳಲಿಲ್ಲ. ಇದು ರಾಜ್ಯದ ಲಕ್ಷಣ ಪ್ರಯೋಜನಗಳ ಕುರಿತು ಹೇಳಲಿಲ್ಲ. ಪ್ರಜೆಗಳು ತಮ್ಮ ಕರ್ತವ್ಯಗಳನ್ನು ಹೇಗೆ ಮಾಡಬೇಕೆಂದು ವಿವರಿಸಲಿಲ್ಲ. ಆದ ದರಿಂದ ಈ ಸಿದ್ಧಾಂತ ಪ್ರಚಲಿತವಾಗಲಿಲ್ಲ.

ಬೆಂತೆಮ್ ಮತ್ತು ಮಿಲ್ ಮೊದಲಾದವರು ಪ್ರಜಾ ಹಿತಕಾರಿ ಶಕ್ತಿ ಬಳಕೆಗೆ ತಂದರು. ಬಹುಜನರ ಬಹುಹಿತ ಸಾಧನೆಯೇ ರಾಜ್ಯದ ಗುರಿ ಎಂದು ಇವರ ಅಭಿಪ್ರಾಯ. ವ್ಯಕ್ತಿಹಿತ ಸಮಾಜ ಹಿತಕ್ಕೆ ಒಳಗೊಂಡಿದೆ. ಸಮಾಜ ಹಿತ ಮತ್ತು ವ್ಯಕ್ತಿಹಿತ ಒಂದಕ್ಕೊಂದು ಪೂರಕ ಮತ್ತು ಪ್ರೇರಕಗಳಾಗಿವೆ. ವ್ಯಕ್ತಿಹಿತದೊಂದಿಗೆ ಸಾಮಾಜಿಕ ಹಿತವನ್ನು ಸಾಧಿಸಿ ಹೆಚ್ಚಿನ ಜನರಿಗೆ ಸಂತೋಷ ತರುವುದಕ್ಕೆ ರಾಜ್ಯ ಇರುವುದು. ಸಾರ್ವಜನಿಕ ಕ್ಷೇಮ ಸಾಧಿಸಲು ಮಾನವನಿಗೆ ರಾಜ್ಯದ ಆವಶ್ಯಕತೆ ಇದೆ. ವ್ಯಕ್ತಿ ಸ್ವಾತಂತ್ರ್ಯದಲ್ಲಿ ಹೆಚ್ಚುಕಡಿಮೆಯಾಗುವುದು, ಸಾರ್ವಜನಿಕ ಹಿತದ ಸಲುವಾಗಿ ರಾಜ್ಯ ಶಾಸನ ಇರುವುದು ದೇಶದ ಹಿತಕ್ಕಾಗಿ. ಈ ಶಾಸನವೇ ಸಮಾಜದ ಆಧಾರವೆಂದು ಹೇಳಬೇಕು. ವ್ಯಕ್ತಿಸ್ವಾತಂತ್ರ್ಯವನ್ನು ವಿರುದ್ಧವಾದುದು ಸಾಮಾನ್ಯ. ಆ ದೋಷಗಳನ್ನು ವಿದ್ಯಾಭ್ಯಾಸ ಮತ್ತು ಸಮಾಜ ಸುಧಾರಣೆಗಳಿಂದ ಹೋಗಲಾಡಿಸಲು ಸಾಧ್ಯ. ಯೋಗ್ಯ ವಿದ್ಯಾಭ್ಯಾಸದಿಂದ ವ್ಯಕ್ತಿಯು ಬೆಳವಣಿಗೆಯನ್ನು ವ್ಯಕ್ತಿಯಿಂದ ಸಮಾಜಕ್ಕೆ ಆಗುವ ಪ್ರಯೋಜನವನ್ನು ಹೆಚ್ಚಿಸಲು ಬಗೆತ್ತದೆ. ಸರ್ವಪ್ರಯತ್ನದಿಂದ ವ್ಯಕ್ತಿಯ ಶ್ರೇಷ್ಠತೆ ಮತ್ತು ಗೌರವಗಳನ್ನು ರಕ್ಷಿಸುವುದು ರಾಜ್ಯದ ಕರ್ತವ್ಯ.

— ಈ ಸಿದ್ಧಾಂತ ಮಾನವನಿಗೆ ಪ್ರಯೋಜನಕಾರಿಯಾಗಿದೆ. ವ್ಯಕ್ತಿಯನ್ನು ರಾಜ್ಯದ ದಬ್ಬಾಳಿಕೆ ಇಲ್ಲವೆ ಅನ್ಯಾಯದಿಂದ ರಕ್ಷಿಸಿ ಅವನಿಗೆ ತನ್ನತನದ ಅರಿವು ಮೂಡಿಸಕೂಟ್ಟಿದೆ. ಈ ಸಿದ್ಧಾಂತವು ಹತ್ತೊಂಬತ್ತನೇ ಶತಮಾನದ ಇಂಗ್ಲೆಂಡಿನಲ್ಲಿ ಗೂನವೀಯ ಮತ್ತು ಸಾಮಾಜಿಕ ಸುಧಾರಣೆ ಮಾಡಿತು.

ಈ ಸಿದ್ಧಾಂತದಲ್ಲಿ ಇಷ್ಟೆಲ್ಲ ಗುಣಗಳಿದ್ದರೂ, ಅದು ವ್ಯಾವಹಾರಿಕಉನಂದದಿಂದ ಕೂಡಿದೆ. ಇನ್ನಿತರ ವಿಷಯಗಳಿಂದ ಸಿಗುವ ಆನಂದವನ್ನು ಕಡೆಗಣಿಸಿ ಮಾನವೀಯ ಸಂತೋಷವೇ ಬದುಕಿನ ಉದ್ದೇಶವೆಂದು ಸೆಬ್ಯಾನ್ ಅಭಿಪ್ರಾಯ ಪಡುತ್ತಾನೆ. ಬಹು ಜನರ ಬಹುಹಿತವನ್ನು ತರ್ಕಬದ್ಧವಾಗಿ ಮಾಪನ ಮಾಡಲು ಸಾಧ್ಯವಿಲ್ಲ.

ಇಪ್ಪತ್ತನೇ ಶತಮಾನ

ರಾಜ್ಯವು ಸುಸಂಘಟಿತ ಸಂಸ್ಥೆ ಎಂದು ಲಾಸ್ಕಿಯು ಅಭಿಪ್ರಾಯ. ರಾಜ್ಯದ ಮುಖ್ಯ ಉದ್ದೇಶ ಸಮಾಜದ ಒಳಿತನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಧಿಸುವುದು. ಈ ಗುರಿಯನ್ನು ಸಾಧಿಸಲು ರಾಜ್ಯವು ಪ್ರಜೆಗಳಿಗೆ ಹಕ್ಕನ್ನು ಕೊಡಬೇಕು. ತನ್ನ ಪ್ರಗತಿಯನ್ನು ಸಾಧಿಸಲು ಮಾನವನಿಗೆ ಈ ಹಕ್ಕು ಆತ್ಯಗತ್ಯ. ಈ ಹಕ್ಕಿನ ರಕ್ಷಣೆ ಮಾಡಿ ಮಾನವನ ಕಲ್ಯಾಣ ಸಾಧಿಸುವುದು ರಾಜ್ಯದ ಕರ್ತವ್ಯ. ಈ ಹಕ್ಕು ಕಾಲಕ್ಕೆ ತಕ್ಕಂತೆ ಬದಲಾಗಿ ನಿರ್ಧಾರವಾಗಬೇಕು. ಆದರೆ ಈ ರೀತಿಯಾಗಿ ವ್ಯಕ್ತಿಗೆ ಸಿಕ್ಕಿದ ಹಕ್ಕು ಇನ್ನೊಬ್ಬನಿಗೆ ಬಾಧಕವಾಗಬಾರದು.

ವ್ಯಕ್ತಿಯ ಒಳಿತು ಮತ್ತು ಅಭಿವೃದ್ಧಿಯನ್ನು ಸಾಧಿಸುವುದು; ವ್ಯಕ್ತಿಯ ಸಾಮಾಜಿಕ ಜವಾಬ್ದಾರಿಯ ಸಾಮಾಜಿಕ ಹಿತವನ್ನು ಸಾಧಿಸುವುದು ಮತ್ತು ಜಗತ್ತಿನ ಸಂಸ್ಕೃತಿ ಬೆಳವಣಿಗೆ ಮಾಡುವುದು ಮುಖ್ಯ ಸರ್ವತೋಮುಖ ಅಭಿವೃದ್ಧಿಗೆ ನೆರವು ನೀಡುವುದು ರಾಜ್ಯದ ಉದ್ದೇಶವೆಂದು ಪ್ರೊಫೆಸರ್ ಗಾರ್ನರ್ ಅಭಿಪ್ರಾಯ ಪಡುತ್ತಾರೆ.



ಕನ್ನಡಿಗನ ಸಂದೇಶ-

ಓ! ಕನ್ನಡ ಕಂದಗಳೇ
ನಲ್ನೆಡೆಯೊನಂದಗಳೇ
ನನ್ನಕ್ಕರೆ ಮಕರಂದದ
ಅಪರಿಯುರವಿಂದಗಳೇ!
ಓ! ಕನ್ನಡ ॥

ಜನ್ಮಕೊಟ್ಟ ತಾಯಂಬಿಟ್ಟು
ಬೇರೆಸ್ತ್ರೀಲಿ ಮನಸಿಟ್ಟು
ಮರೆಯಬೇಡಿರಣ್ಣ ನನ್ನ
ಚುಚ್ಚಬೇಡಿ ತಾಯ ಕಣ್ಣ!
ಓ! ಕನ್ನಡ ॥

ನಿಮ್ಮ ನಲಿವೆ ನನ್ನ ನಲಿವು
ನಿಮ್ಮ ಗೆಲುವೆ ನನ್ನ ಗೆಲುವು
ಹತ್ತು ಜನರ ಹಾಗೆ ನೀವು
ಬಾಳಿದ್ದರೆನಗೆ ನೋವು'
ಓ! ಕನ್ನಡ ॥

ನಾಡಕಬ್ಬದಂದು ನನ್ನ
ನೋಡಿಬಿಟ್ಟು ಬಳಿಕ ಕಣ್ಣ
ಮುಚ್ಚಿ ಕುಳಿತರೇನು ಚೆನ್ನ?
ನಿಮ್ಮ ಒಲವೆ ನನ್ನ ಒನ್ನ!
ಓ! ಕನ್ನಡ ॥

ನಿಮ್ಮತನವ ನೀವು ನೆಮ್ಮಿ
ನೀನದಾರಿಗೇನು ಕಮ್ಮಿ?
ಬೆಳಗಲಿ ಭುವಿ—ಭಾನ ಚಿಮ್ಮಿ
ಎದೆಗಳಲಭಿಮಾನ ಹೊಮ್ಮಿ
ಓ! ಕನ್ನಡ ॥

—'ತ್ರಿವೇಣಿ'

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
O. S. 100/66

ಕೋಟ್ಯಸ್ವ ಪೂಜಾರಿ — ವಾದಿ
ಮತ್ತು
ಅಣ್ಣು ಪೂಜಾರಿ ಸಹಾ — ಪ್ರತಿವಾದಿಗಳು

ಶನೇ ಪ್ರತಿವಾದಿಯಿಂದ ಹೆಗ್ಗಡೆ, ಪಟ್ಟಾಯದಾರ ಪೆಂಗ್ಸಿನ ನಮಗಳು, ಬೆಳ್ತಂಗಡಿ ತಾಲ್ಲೂಕು ಗುಂಡೂರು ಗ್ರಾಮವಲ್ಲಿರುವ, ಕೋರ್ಟು ಪೈಕಿ ಪ್ರಕಾರ ತಿಳಿಯಪಡಿಸುವುದೇನೆಂದರೆ.

ವಾದಿಯು ನೀವು ಪಗ್ಗೆರೆಯಿರ ಸೀಲೆ ಗೇಣಿ ಒಗ್ಗೆ ಮಾಡಿದ ಮೇರಿಸ ದಾವೆಯು ತಾ. ೨೩—11—1966 ಕ್ಕೆ ಯಿಟ್ಟ್ರುವುದರಿಂದ ಅದ್ಕೆ ನಾಂಟ್ಯೇನಾದರೂ ಆಕ್ಷೇಪಣೆಗಳು ಇದ್ದಲ್ಲಿ ಸದರಿ ದಿವಸ ಮಜ್ಜಾರು ಕೋರ್ಟ್‌ಮುಂದೆ ಪ್ರತಿವಾದಿಸ್ವಯಂ ಯಾ ವಕೀಲರ ಮುಖಾಂತರ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷೀಯ ವಿಚಾರಣೆ ಮಾಡಿ ತೀರ್ಮಾನ ಮಾಡಲಾಗುವುದು ಎಂತ ಈ ಮೂಲಕ ನಿಮಗೆ ತಿಳಿಸಿಕೊಡಲಾಗಿದೆ.

(Sd) N. J. Kadamba
Advocate For Plaintiff

ಬೆಳ್ತಂಗಡಿ 4—11—1966.

READ & ADVERTISE IN
NAVAYUGA WEEKLY

ಕನ್ನಡದ ಕರೆ

ಕಾಸರಗೋಡನ್ನು ಪಡೆಯಲು ಒಂದಾಗೋಣ

ನೀಡಿದವರು

ಶ್ರೀ ರಾಜಗೋಪಾಲ, ಪಿ. ಕೆ.

ಕಾಸರಗೋಡಿನ ಕನ್ನಡ ಜನತೆಯ 'ಯೋಗ'ದ ಫಲವಾಗಿ ಇಂದು 'ಕಾಸರಗೋಡು ಪ್ರಶ್ನೆ' ಎಂಬ ಇತ್ಯರ್ಥಸ್ಥ 'ಆಯೋಗ' ನೇಮಕವಾಗಿದೆ. ಇದು ಕಾಸರಗೋಡಿನ ಕನ್ನಡಿಗರ ಹತ್ತು ವರ್ಷಗಳ ಮಾತ ತಪಸ್ಸಿನ ಫಲ. 'ನ್ಯಾಯಕ್ಕೆ ಸೋಲಿಲ್ಲ' ಎಂಬ ಮಾತಿನ ನಿದರ್ಶನ ಅಂತೂ ಮಷಿಯ ತೊಡೆಯಿಂದ ಗಂಗಾನದಿ ಅವಿರ್ಭವಿಸಿದೆ. ಅದು ಅಷ್ಟರಲ್ಲೇ ನಿಲ್ಲದೆ, ಕೆಳಗೆ ಹರಿಯಬೇಕು. ಆ ಹರಿಯಿಸುವ ಕೆಲಸವನ್ನು ಇಂದು ಅಖಂಡ ಕರ್ನಾಟಕದ ಜನತೆ ಮಾಡಬೇಕಾಗಿದೆ. ಅದಕ್ಕಾಗಿ ಒಂದಾಗ ಬೇಕಾಗಿದೆ. ತನ್ನ ಜಾತಿ-ಮತ, ಪಕ್ಷ-ಪಂಗಡಗಳನ್ನು ತೊರೆದು ಒಟ್ಟು ಗೂಡಬೇಕಾಗಿದೆ.

ಆದರೆ, ಅಖಿಲ ಕೇರಳದ ಮಲೆಯಾಳೀ ಜನತೆ ಇಂದು ಒಂದಾಗಿ ಆಯೋಗವನು ಬಹಿಷ್ಕರಿಸಿ, ಕಾಸರಗೋಡು ಕೇವಲ ದ್ದೇ 'ಸ್ವಂತ ಆಸ್ತಿ' ಎನ್ನ ತೊಡಗಿದೆ. ಮೊನ್ನೆ ಒಕ್ಕೋ. ೧೭ರಂದು ಕಾಸರಗೋಡಿನಲ್ಲಿ ನಡೆದ ಘಟನೆ ಒಂದು ಉಲ್ಲೇಖನೀಯ ವಿಷಯ. ಅಂದು ಕೇರಳದ ಮಲೆಯಾಳಿಗಳು 'ಕಾಸರಗೋಡು ಬಂದ್' ಆಚರಿಸಲು ಕರೆಕೊಟ್ಟಿದ್ದರು. ಆದರೆ ಅವರ ಪ್ರಯತ್ನ ಸಂಪೂರ್ಣ ವಿಫಲವಾಯಿತು. ಕಡೆಗೆ ಅವರ 'ಬಲಾತ್ಕಾರದ ಬಂದ್' ನಿಂದಲೂ, ಕಲ್ಲುತೂರಾಟದಂತಹ ಅಸಭ್ಯ ವರ್ತನೆಯಿಂದಲೂ ಅನೇಕ ಕನ್ನಡ ವರ್ತಕ ಬಂಧುಗಳು ಕಷ್ಟನಷ್ಟಗಳಿಗೀಡಾದರು. ಧೃತಿಗೆಡದ ಅಲ್ಲಿಯ ಕನ್ನಡ ಜನತೆ ಕೂಡಲೇ ಒಂದಾಗಿ ಅವರ ದಬ್ಬಾಳಿಕೆಯನ್ನು ಎದುರಿಸಿತು. ಕಾಸರಗೋಡು ನುಚ್ಚುನೂರಾಗುವ ಸಂದರ್ಭದಲ್ಲೂ, ಪೋಲೀಸು ಅಧಿಕಾರಿಗಳು ಮಲೆಯಾಳಿ ಪಂಗಡದ ದಬ್ಬಾಳಿಕೆಯನ್ನು ಪ್ರತಿಭಟಿಸದೆ, ಅಂಗಡಿಗಳನ್ನು ಮುಚ್ಚುವಂತೆ ಕೇಳಿಕೊಳ್ಳತೊಡಗಿ ಬಹಿರಂಗವಾಗಿ ಪಕ್ಷಪಾತಧೋರಣೆಯನ್ನು ಹೊರಗೆಡಹಿದರು. ಸಾರ್ವತ್ರಿಕ ಮೂರು ಗಂಟೆಗಳ ಕಾಲ ಕಾಸರಗೋಡು ನಗರದಲ್ಲಿ 'ಕಲ್ಲುಮುಳ್ಳಿನ ಧ್ವ' ಭೀಕರವಾಗಿ ನಡೆಯಿತು. ಕಡೆಗೆ ಕನ್ನಡ ಧುರೀಣರ ಒತ್ತಾಯಕ್ಕೆಂಬಂತೆ (ಪಕ್ಷೀಯ ಪ್ರವೃತ್ತಿಯನ್ನು ಹೊರಗೆಡಹಿದ ಅಧಿಕಾರಿಗಳು) ಅಶ್ರುವಾಯು ಪ್ರಯೋಗವನ್ನು ನಡೆಸಿ ಒಂದು ವಾರದ ತನಕ ಗಳಲ್ಲಿ ನಿಷೇಧಾಜ್ಞೆ ಜಾರಿ ಮಾಡಿದರು. ಅಂತು ಮಲೆಯಾಳಿಗಳ "ಕಾಸರಗೋಡು ಬಂದ್" ನಗರದಲ್ಲಿ ಮಾತ್ರವಲ್ಲ ಇತರ ಗ್ರಾಮಾಂತರ ಕಡೆಗಳಲ್ಲೂ ಸಂಪೂರ್ಣವಾಗಿ ವಿಫಲವಾಯಿತು. ಈ ಘಟನೆ 'ಕಾಸರಗೋಡು ಕನ್ನಡತನ'ಕ್ಕೆ ಮತ್ತಷ್ಟು ಸುಟವಿಟ್ಟಿರುತ್ತದೆ.

ಈಗ ಅಲ್ಲಿಯ ನಗರದ ೨೨೦ಕ್ಕೂ ಮಿಕ್ಕ ವ್ಯಾಪಾರಿಗಳು ದಬ್ಬಾಳಿಕೆಯಿಂದ ದಕ್ಷಿಣೆಯನ್ನೊದಗಿಸಲು ಕೇಂದ್ರವನ್ನು ವಿನಂತಿಸಿದ್ದಾರೆ. ಕಾಸರಗೋಡು ಬಾರ್ ಎಸೋಸಿಯೇಶನ್‌ನವರು ಪೋಲೀಸು ಅಧಿಕಾರಿಗಳ ಪಕ್ಷಪಾತ ಧೋರಣೆಯನ್ನು ಖಂಡಿಸಿ, ಬೇಲಿಯೇ ಹೊಲ ಮೇದರೆ ಉಳಿಗಾಲವಿಲ್ಲ ಎಂದ ಅಭಿಪ್ರಾಯ ತಾಳಿ, ಠರಾವನ್ನು ಮಂಜೂರು ಮಾಡಿದ್ದಾರೆ. ಮಾತ್ರವಲ್ಲ ಮಹಾಜನ ಆಯೋಗವನ್ನು ಸ್ವಾಗತಿಸಿ ಕಾಸರಗೋಡು ಮೈಸೂರಿಗೆ ಹೋಗಬೇಕೆಂಬ ಠರಾವನ್ನು ಕೇಂದ್ರಕ್ಕೂ, ಆಯೋಗಕ್ಕೂ, ನಿಜಲಿಂಗಪ್ಪನವರಿಗೂ ಕಳುಹಿಸಿದ್ದಾರೆ. ಇಂದು ಕಾಸರಗೋಡಿನ ಜನರೆಲ್ಲರೂ ಕಪ್ಪ ಕಾರ್ಪಣ್ಯಗಳನ್ನು ಎದುರಿಸಲು ಸ್ವರಕ್ಷಣೆಗೆ ಸಿದ್ಧರಾಗಿದ್ದಾರೆ.

ಕಾಸರಗೋಡಿನ ಕನ್ನಡಿಗರು ಇಷ್ಟರವರೆಗೆ ಯಾವ ಗಲಭೆಗೂ ಹೋಗದ ಶಾಂತರೀತಿಯಿಂದಲೇ ತಮ್ಮ ನ್ಯಾಯ ಬೇಡಿಕೆಯನ್ನು ನಿರಂತರವಾಗಿ ಮುಂದಿರಿಸುತ್ತಾ ಬಂದು ಇಂದು ಸಂತೋಷದ ಉಸಿರನ್ನೆಳೆಯುವ ಹಂತಕ್ಕೆ ಮುಟ್ಟುವವರಿಗು ತ್ತಾ ಬಂದಿದ್ದಾರೆ. ಅವರು ಇಷ್ಟರ ವರೆಗೆ ಗಲಭೆ ಎಬ್ಬಿಸದಿದ್ದುದು ಅವರ ಅಂಜುಬುರುಕತನ, ಹೇಡಿತನ ಎಂದುಯಾರಾದರೂ ಭಾವಿಸಿದ್ದರೆ, ಅದು ತಪ್ಪು. ಅದು ದೇಶಭಕ್ತಿಯು, ಪ್ರೇಮದ, ಆತ್ಯುನ್ನತ ಪರಂಪರಾಪ್ತಿಯ ಕುರುಹು. ಹೊರಗಿನ ಮಲೆಯಾಳಿಗಳು ಇದೇ ರೀತಿಯಲ್ಲಿ ದಬ್ಬಾಳಿಕೆಯನ್ನು ಮುಂದುವರಿಸುತ್ತಾ ಹೋದಲ್ಲಿ ಅಲ್ಲಿಯ ಪ್ರಶಾಂತ ತೇಜಸ್ಸಿನಿಂದ ತುಂಬಿದ ಮುಖದಿಂದ ಕೂಡಿದ ಸೌಮ್ಯವದನ ಜನ ನ್ಯಾಯ ಗಂಡಾಂತರಕ್ಕೆ ಸಿಕ್ಕಿದರೆ ಅನಿವಾರ್ಯವಾಗಿ ಮಿಂಚಿನಂತೆ ಎದ್ದು ಸಿಡಿಲಿನಂತೆ ಎರಗಬೇಕಾದ ಪ್ರಸಂಗ ಬರಬಹುದು. ಆದುದರಿಂದ ಕೇರಳೀಯರು ಇದನ್ನು ಜ್ಞಾಪಿಸಿ ದಬ್ಬಾಳಿಕೆಯ ಪ್ರವೃತ್ತಿಗೆ ಇಳಿಯದಿರುವುದು ಉತ್ತಮ.

ಕಾಸರಗೋಡು ಕನ್ನಡನಾಡು ಎಂಬುದಕ್ಕೆ ಆಧಾರಗಳನ್ನ ಇಲ್ಲಿ ಕೊಡುವ ಅವಶ್ಯಕತೆಯೇ ಇಲ್ಲ. ಅಲ್ಲಿಯ ಜನರ ದೈನಿಕ ಜೀವನದಲ್ಲಿ, ಆಚಾರ-ವಿಚಾರಗಳಲ್ಲಿ ರೀತಿ ನೀತಿಗಳಲ್ಲಿ ಅಚ್ಚಗನ್ನಡತನ ಎದ್ದು ಕಾಣುತ್ತಿದೆ. ಸಾರ್ವಜನಿಕ ಸಂಸ್ಥೆಗಳು ನಾಡು, ಭಾಷೆಗಾಗಿ ದುಡಿಯುವ ಕವರೂರು, ಭೌಗೋಳಿಕವಾಗಿ, ಸಂಸ್ಕೃತಿಕವಾಗಿ, ಸಾಮಾಜಿಕರಾಗಿ, ಐತಿಹಾಸಿಕವಾಗಿ-ಯಾವ ರೀತಿಯಲ್ಲಿನೋಡಿದರೂ ಇದು ಕಳಸಾಡಿನ ಅವಿಭಾಜ್ಯ ಅಂಗ. ರಾಷ್ಟ್ರಕವಿ ಗೋವಿಂದ ಪೈಗಳ ಊರು ಇದೇ. ಇಲ್ಲಿ ಕನ್ನಡ ಶಾಲೆಗಳೇ ಅಧಿಕ. ಕೇರಳ ಸರಕಾರ ಕಾಸರಗೋಡಿಗೆ ಬೇಕಾಗಿ ಪ್ರತಿವರ್ಷವೂ ಎಲ್ಲಾ ವಿತ್ತ ಗಳಿಗೆ ಪಶ್ಚಿಮ ಪುತ್ತ ಕವನ್ನೂ ಕನ್ನಡದಲ್ಲಿ ಅಚ್ಚುಹಾಕುತ್ತಲಿದೆ. (ಇದುವೇ ಕನ್ನಡತನಕ್ಕೆ ಒಂದು ದೊಡ್ಡ ಸಾಕ್ಷಿಯಲ್ಲವೇ?) ಇಲ್ಲಿಂದ ಮೂರು ಕನ್ನಡ ಪತ್ರಿಕೆಗಳು (ನಾಡಪ್ರೇವಿ, ಜಯಂತ, ಲಲಿತ) ಪ್ರಸಾರವಾಗುತ್ತಲಿವೆ. ಆದರೆ ಮಲೆಯಾಳ ಪತ್ರಿಕೆ ಒಂದೂ ಕೂಡಾ ಹೊರಡುತ್ತಿಲ್ಲ. ಚಂದ್ರಗಿರಿಯಿಂದುತ್ತರ ಭಾಗದ ಪಂಚಾಯತು ಗಳೆಲ್ಲಾ ಮೈಸೂರಿಗೆ ಹೋಗಬೇಕೆಂದು ಅವಿರೋಧವಾಗಿ ಒಪ್ಪಿವೆ. ಇಷ್ಟರವರೆಗೆ ಈ ಪ್ರದೇಶದಲ್ಲಿ ನಡೆದ ಜನಾವಳಿಗಳೆಲ್ಲಾ (ಚಂದ್ರಗಿರಿಯಿಂದ ಉತ್ತರಕ್ಕೆ) ಕನ್ನಡದ ಪ್ರತಿನಿಧಿಗಳೇ ವಿಜಯಿಗಳಾಗಿದ್ದಾರೆ. ಇನ್ನು ಇಲ್ಲಿಯ ಜನರು ತಮ್ಮ ನಿತ್ಯೋಪಯೋಗೀ ವಸ್ತುಗಳನ್ನು ಪಡೆಯಲು ಹಾಗೂ ಅಡಿಕೆ, ಕಾಳು ಮೆಣಸುಗಳನ್ನು ಮಾರಲು ಕರ್ನಾಟಕದ ಮಂಗಳೂರನ್ನೇ ಶರಣು ಹೋಗಬೇಕಾಗಿದೆ. ಇಂತಹ ಅನೇಕ ಆಧಾರಗಳನ್ನು ನಿರ್ಲಕ್ಷಿಸಿ ಕಾಸರಗೋಡು ಕೇರಳದಲ್ಲಿ ಸೇರಿಸಲ್ಪಟ್ಟಿದೆ. ೧೯೫೬ರಿಂದ ಹಿಡಿದು ಇಂದಿನ ವರೆಗೆ ಅಲ್ಲಿಯ ಕನ್ನಡ ಜನತೆ ತಮ್ಮ "ಕಾಸರಗೋಡು ಪ್ರಾಂತೀಕರಣ ಸಮಿತಿ" ಎಂಬ ಸಂಘಟನೆಯ ಮೂಲಕ ಅವಿಶ್ರಾಂತವಾಗಿ ದುಡಿಯುತ್ತಾ ಬಂದು ಇಂದು ಉಸಿರೆಳೆಯುವ ಮಟ್ಟಕ್ಕೆ ಮುಟ್ಟಿದೆ.

ಆದರೆ.....ನವ್ಯ ಕೆಲವರಾಯಿತೆಂದು ನಿಶ್ಚಿಂತರಾದರೆ ಕಾರ್ಯ ಕೆಟ್ಟು ಹೋಗಬಹುದು, ಇಂದು ದಕ್ಷಿಣ ಕನ್ನಡದ—ಅಷ್ಟೇ ಸಾಕೇ? ಅಖಂಡ ಕರ್ನಾಟಕದ ಜನತೆ ಒಂದಾಗಿ ಕಾಸರಗೋಡಿನ ಕನ್ನಡಿಗರಿಗೆ ಬೆಂಬಲನೀಡಬೇಕು—ಸಿಂಹನಾದ ಮೊಳಗಬೇಕು. ಇದು ಕನ್ನಡಿಗರ ಅಗ್ನಿ ಪರೀಕ್ಷೆಯ ಕಾಲ.

ಇಂದು ಅಖಂಡ ಕೇರಳದ ಮಲೆಯಾಳೀ ಜನತೆ ಆಗೋಗವನ್ನು ಬಹಿಷ್ಕರಿಸಿ ಕಾಸರಗೋಡನ್ನು ಬಿಡಲು ಒಪ್ಪದೆ, "ಕಾಸರಗೋಡು ಪ್ರಶ್ನೆ"ಗೆ ಆಗ ವಾಗ ಮಾತ್ರ ಪಕ್ಷ ಪಂಗಡಗಳನ್ನು ಬಿಟ್ಟು ಒಂದಾಗಿದೆ. ಇದನ್ನು ನೆನಪಿಸಿದರೆ ನಮಗೆ ರೋಮಾಂಚನವಾಗುತ್ತಿದೆ. ಈಗ ಕನ್ನಡಿಗರಾದ ನಾವು ನಿದ್ರಿಸದೆ ನಮ್ಮ ಸಹೋದರರಯದ "ಕಾಸರಗೋಡು ಸೀತೆಯನ್ನು' 'ಕೇರಳ ರಾವಣ" ನಿಂದ ಪರಿರಕ್ಷಿಸಲು ಒಳ್ಳಕಂಕಣಬದ್ಧರಾಗಿ ಬೇಕು.

ಹತ್ತು ವರ್ಷಗಳ ಕೇರಳದ ದಬ್ಬಾಳಿಕೆಯಿಂದ, ಕವಿಮುಷ್ಟಿಯಿಂದ, ವಕ್ರ ದೃಷ್ಟಿಯಿಂದ ಕಾಸರಗೋಡು ಸೋಕು ಮಾಣ್ಣಾಗಬೇಕಾಗಿತ್ತು. ಹತ್ತು ವರ್ಷಗಳಂದ ಅಲ್ಲಿ ಕೇರಳೀಯರು, ಮಲೆಯಾಳಿಗಳ ಅವಿಶ್ರಾಂತ ತುಂಬಿಸೋಣ ನಡೆದಿದೆ. ಶಾಲೆಗಳಲ್ಲಿ, ಕೋರ್ಟು ನೌಕರಿಗಳಲ್ಲಿ, ಪೋಸ್ಟು ಇಲಾಖೆಗಳಲ್ಲಿ ಹಾಗೂ ಇತರ ಸ್ಥಿಗಳಲ್ಲಿ ಹೇರಳವಾಗಿ ಅವರ ತುಂಬತ್ತಾ ಇದ್ದರೂ, —ಒಂದು ದಶಕದ ಮುಲೆಯೂ—ಕಾಸರಗೋಡಲ್ಲಿ ಕನ್ನಡತನವೊದಲಿನಂತೆಯೇ ಹೊಳಪ್ಪ ಹೊಸತಾಗಿದೆ. ಇದು ಅಲ್ಲಿಯ ಕಸ್ತೂರಿಯ ಜೀವಂತಕ್ಕೆ ಒಂದು ಜ್ವಲಂತ ಕುರುಹು.

ನಂಬೂದರಿ ಪಾಡರಿಂದ ಹಿಡಿದು ಎ. ಕೆ. ಗೋಪಾಲರವರ ವರೆಗಿನ ಎಲ್ಲ ಕೇರಳ ರಾಜಕಾರಣಿಗಳೂ ಒಂದಲ್ಲ ಒಂದು ಸಂದರ್ಭದಲ್ಲಿ "ಕಾಸರಗೋಡು ಕನ್ನಡದ್ದೇ—ಮೈಸೂರಿಗೆ ಹೋಗಬೇಕಾದ್ದೇ" ಎಂಬುದಾಗಿ ಹೇಳಿ ತಾವು ಅದನ್ನು ಬಗೆಹರಿಸಲು ಪ್ರಯತ್ನಿಸುವುದಾಗಿ ಮಾತುಕೊಟ್ಟಿದ್ದರು. ಆದರೆ ಅವರುಗಳೇ ಇಂದು ತಮ್ಮ ಸ್ವರವನ್ನ ಸಂಪೂರ್ಣ ಬದಲಾಯಿಸಿ ತಮ್ಮ ಗೌರವಕ್ಕೆ ತಾವೇ ಮಸಿಬಳಿದುಕೊಂಡಿದ್ದಾರೆ. ಅನೇಕ ಕೇರಳದ ರಾಜಕಾರಣಿಗಳು ಇಂದು ಅಧಾರರಹಿತ—ಹುಚ್ಚು ಮಾತುಗಳನ್ನು ಆಡತೊಡಗಿದ್ದಾರೆ—"ಕಾಸರಗೋಡಿನಲ್ಲಿ ಬರೇ ಶೇಕಡಾ ೬ ಕನ್ನಡಿಗರಂತೆ; ಅಲ್ಲಿ ತುಳು ಮಾತನಾಡುವವರಿಲ್ಲ, ಮಲೆಯಾಳಿಗಳಂತೆ, ಕಾರಣ ತುಳು ಭಾಷೆ ಮಲೆಯಾಳ ಭಾಷೆಯ ಭೇದವಂತೆ." ಇಂತಹ ಅಧಾರವಿಲ್ಲದ ಹುರುಳಿಲ್ಲದ ಮಾತುಗಳನ್ನಾಡುವುದರೊಂದಿಗೆ, ಕೇರಳದಲ್ಲಿ ಜನತಾ ಸರಕಾರವಾದಂದಿಗೆ "ಕಾಸರಗೋಡು ಪ್ರಶ್ನೆ" ಮುನ್ನ ಎತ್ತಲ-ಸಾಧ್ಯವಿಲ್ಲ' ಎನ್ನುತ್ತಾರೆ. ಕೇರಳಕ್ಕೆ ಕಾಸರಗೋಡನ್ನು ಕೊಡುವಾಗ ಯಾವ ಜನಪ್ರಿಯ ಸರಕಾರವೂ ಆಲ್ಲರಲಿಲ್ಲ. ಇನ್ನು ಅದನ್ನು ಮೈಸೂರಿಗೆ ಕೊಡಬೇಕಾದಾಗಲಿಲ್ಲಿನ ಜನಪ್ರಿಯ ಸರಕಾರವನ್ನ ಕೇಳುವ ಪ್ರಶ್ನೆಯೇ ಕೆ ಬೇಕು? ಒಂದು ಶಾಶ್ವತ ಸರಕಾರವನ್ನು ಸ್ಥಾಪಿಸಲು ಒಂದಾಗದ ಕೇರಳದ ಮಲೆಯಾಳಿ ಜನತೆ ಇಂದು ಕಾಸರಗೋಡನ್ನು ದಕ್ಕಿಸಿಕೊಳ್ಳಲು ಒಂದಾದುದು ಆಶ್ಚರ್ಯನೇ ಸರಿ!

ಇಂದ ಕಾಸರಗೋಡು ಪ್ರಶ್ನೆಯ ಪರಿಹಾರಕ್ಕಾಗಿ ಬೆನಗಲ್ ಶಿವರಾಯರು ತಮ್ಮ ಸರ್ವ ಪ್ರಯತ್ನಗಳನ್ನು ತೊರೆಯಮಳೆಯಲ್ಲಿದ್ದಾಗ ಎಂಥ ಪ್ರತಿಜ್ಞೆ ಮಾಡಿದ್ದರೋ ಅದನ್ನು ಸಾಧಿಸಲು ಕಾಸರಗೋಡು ಪ್ರಶ್ನೆ ಒಂದು ಪ್ರಶ್ನೆಯಲ್ಲ, ಅದು ಹಿಂದೆ ಕೊಟ್ಟ ಮಾತುಗಳ ಸೂಚಿಕೆಯು ಒಂದು ಪ್ರಶ್ನೆ ಮಾತ್ರ" ಎಂದಿದ್ದಾರೆ

ಆದುದರಿಂದ ಕನ್ನಡಿಗರಾದ ನಾವು—ಈಗ ನಿದ್ರಿಸದೆ—ಎಚ್ಚತ್ತು, ಕರ್ತವ್ಯ ಪರಾಙ್ಮುಖರಾಗದೆ—ಕರ್ತವ್ಯ ಪರರಾಗಿ ಕಾಸರಗೋಡನ್ನು ಪುನಃ ಪಡೆಯಲು ಒಂದಾಗೋಣ.

ಅಖಿಲ ಕರ್ನಾಟಕದ ಜನತೆ

ಒಂದಾಗೋಣ

ಕನ್ನಡ ಕಾಸರಗೋಡನ್ನು

ಮರಳಿ ಪಡೆದೋಣ.

"ಪಾಂಚಜನ್ಯವನು ಊದು ಬಾ

ಕೋಗಿಲೆಯೆ."

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 433/ 1966.

ಮುಖ್ಯಪ್ರಾಣ ಭಟ್ಟ —ವಾದಿ

ಮತ್ತು

ನಾಗಗೋಪಾಲ ರಾವ್, ರಾಮಕೃಷ್ಣ ಕೊರ್ಗ ನಾಯರ್ ಮಗ, ಬೆಳ್ಳಂಗಡಿ ತಾಲ್ಲೂ ಉರುವಾಲುಗ್ರಾಮ —ಪ್ರತಿವಾದಿ.

ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ, ವಾದಿಯು ದಿ. ಪ್ರೊ. ನೋಟನ ಅಳಿಯಜುಗಳನ್ನು ಬರಮಾಡಿಕೊಳ್ಳುವಲ್ಲಿ ನಿಂದು ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 25-11-66ಕ್ಕೆ ಯಿಟ್ಟರು ವುದರಿಂದ ಅದಕ್ಕೆ ನಿಮಾದೇನಾದರೂ ಆಕ್ಷೇಪಣೆಗಿದ್ದಲ್ಲಿ ಸದ್ರಿ ದಿವಸ ವಜ್ಯಾಕ್ಕು ಕೋರ್ಟುಮುಂದೆ ನೀವು ಸ್ವತಃ ಇಪಕೀಲರ ದ್ವಾರಾ ಹಾಜರಾಗಿ ಉದಜರಂಸ ಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮಗೆ ಗೈರು ಜವಾಬಿನಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿದೆ.

(Sd) B. Ishwara Bhat

Advocate, Puttur

ಪುತ್ತೂರು, ತಾ. ೫-11-66.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೧

ಹೀಗೇಕೆ ಆಗುತ್ತಿದೆ

(ಒಂಭತ್ತನೇ ಪುಟದಿಂದ)

ಗೊಂಡಾಗಳೇಕೆ ಅದನ್ನೆದುರಿಸುತ್ತಿರುವರು? ಐಕ್ಯತೆಯ ಧಾನ್ಯವೂಡುತ್ತಿರುವ ಸರಕಾರ ಕೂಡಾ ಅವರಿಗೇತಕ್ಕೆ ಪ್ರೋತ್ಸಾಹಕೊಡುತ್ತಿದೆ?

ಇಂದು ವಿಚಿತ್ರ ರಾಜಕಾರಣಿಯೆನಿಸಿಕೊಂಡಿರುವ ಶ್ರೀ ಶ್ರೀ ಜಯಪ್ರಕಾಶ ನಾರಾಯಣರೇ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸರಸ್ವತಿ ಪೂಜೆಯ ಸಲುವಾಗಿ (ಪ್ರಿನ್ಸಿಪಾಲ) ಮುಖ್ಯೋಪನ್ಯಾಸಕರ ದೌರ್ಜನ್ಯಕ್ಕೊಳಗಾಗಿದ್ದರೂ, ಅವರು ಅಂಜದೆ-ಅಳುಕದೆ ಧೈರ್ಯದಿಂದ ಎದುರಿಸಿದ್ದರು.

ತನಗೆ ಸ್ವಾತಂತ್ರ್ಯಕ್ಕಿಂತಲೂ ಗೋವಧೆಯ ನಿರೋಧ ಕಾನೂನು ಮುಖ್ಯವೆಂದು ಮಹಾತ್ಮ ಗೋಹತ್ಯ ಕರೆಂಚಂದ ಗಾಂಧೀಜಿಯವರು ಘೋಷಿಸಿದ್ದರು, ಅಲ್ಲದೆ ಆಕ್ರಮಣಕಾರಿ ಬ್ರಿಟಿಷರನ್ನು ಗೋಹಂತಕರೆಂದೂ, ಗೋವಧಾ ನಿರೋಧಕ್ಕಾಗಿ ಆಂದೋಲನವನ್ನು ತಾವು ನಡೆಸುವಡಾಗಿ ಹೇಳಿಕೊಂಡಿದ್ದು, ಸ್ವಾತಂತ್ರ್ಯ ಸಿಕ್ಕಿದ ಮೇಲೆ ಬಿಳಿವರ್ಣನನವರುಗಳನ್ನೇ ಚುನಾವಣಾ ಚಿಹ್ನೆಯನ್ನಾಗಿ ಇಟ್ಟುಕೊಂಡಿರುವ ಕಾಂಗ್ರೆಸ್ ಇಂದು ಗೋವಧೆ ವಿರೋಧವನ್ನೇಕೆ ಎದುರಿಸುತ್ತಿದೆ? ಯಾವ ಕಾರಣಕ್ಕಾಗಿ ಹಿಂದೆ ಕಾಂಗ್ರೆಸ್ ನಾಮಫಲಕದಡಿಯಲ್ಲಿ ಜನತೆ ಕಾರಾಗೃಹ ವಾಸವನ್ನನುಭವಿಸಿತ್ತೋ, ಇಂದು ಅವೇ ಕಾರಣಕ್ಕಾಗಿ ಕಾಂಗ್ರೆಸಿಗರ ಕಾರಾಗೃಹವಾಸವನ್ನು ಇತರ ಗೋಭಕ್ತರು, ದೇಶಾಭಿಮಾನಿಗಳು ಕಾಣಬೇಕಾಗಿರುತ್ತದೆ!

ಬಸ್ತಾರಿನ ಬಡ ವನವಾಸಿಗಳು ಶೋಕದಿಂದ ನವರಾತ್ರಿಯನ್ನಾಚರಿಸದೆ ಸುಮ್ಮಗುಳಿದರೂ ಮುಸ್ಲಿಂ ದೇಶದ ಪ್ರಾಂತ ಸರ್ಕಾರವು ಸರ್ಕಾರದ ಖರ್ಚಿನಿಂದ ಅಲ್ಲಿ ನವರಾತ್ರಿಯನ್ನು ಆಚರಿಸಿತು. ಹಾಗಿದ್ದರೂ ಬಂಗಾಲ ನುತ್ತು ಬಿಹಾರಿನಲ್ಲಿ ನೂರಾರು ಜನರು ಸರ್ಕಾರದ ಅಜಾಗರೂಕತೆ ಹಾಗೂ ಅಲ್ಪ ನೀತಿಯಿಂದಾಗಿ ನವರಾತ್ರಿಯ ಸಮಯ ಜೀವಬಿಡಬೇಕಾಗಿ ಬಂತು.ಎಳೆಂಟು ಜನರಿಗಾಗಿ ವಿಶೇಷ ಲುಗಿಬಂಡಿಗಳನ್ನು ಓಡಿಸುತ್ತಿರುವ ಕಾಂಗ್ರೆಸ್ಸು ಸರಕಾರಲಕ್ಷೋಪಲಕ್ಷ ಜನತೆಗಾಗಿ ಏಕೆ ಏರ್ಪಾಡು ಮಾಡಿಕೊಡುವದಿಲ್ಲ. ಅವರಿಗೆ ವಿಮಾನ ಏರ್ಪಾಡು ಮಾಡಿಕೊಟ್ಟಲ್ಲಿ ಸೆಕ್ಯೂಲರಸಮಗೆ ಸುರಂಗ ಬರುತ್ತದೆಯೇ? ಖಂಡಿತ ಆಗಲಿಕ್ಕಿಲ್ಲ. ಮತ್ತೆ ಹೀಗೇಕೆ ಆಗುತ್ತಿದೆ? ಯಾಕೆ ಹೀಗಾಗುತ್ತಿದೆ? ಇಲ್ಲಿ ತಪ್ಪಿನ ಮೂಲ ಎಲ್ಲಿದೆ? ಯೋಚಿಸುತ್ತ ಯೋಚಿಸುತ್ತಾ ಆಲೋಚನೆಯು ಅಂಧಕಾರದಲ್ಲಿ ಅಲೆದಾಡುತ್ತಿದ್ದಾಗ ವಿವೇಕದ ದೀಪ ದಾರಿ ತೋರಿಸಿತು:

"ಪ್ರಿಯ ಸೆನ್ಸ್ಯಾ,ನಿಮ್ಮ ತಾಯಿಯನ್ನು ಯಾರಾದರೂ ಅಪಮಾನಿಸಿದರೆ ನೀನೇನು ಮಾಡುವೆ?'

'ಅವನ ಮೇಲೆ ಬಿದ್ದು, ಅವನಿಗೆ ಮರೆಯಲಾಗದ ಪಾಠ ಕಲಿಸುತ್ತೇನೆ, ಸ್ವಾಮಿಜಿ!"

"ಸರಿಯಾಗಿ ಹೇಳಿದೆ. ಆದರೆ ನಮ್ಮ ನಾಡಿನ ನಿಜವಾದ ತಾಯಿಯಾದ ನಿನ್ನ ಸ್ವಂತ ಧರ್ಮದ ಬಗ್ಗೆ ಇದೇ ರೀತಿಯ ಉತ್ಕಟ ಭಾವನೆ ನಿನಗಿದ್ದಿದ್ದಲ್ಲಿ ಯಾವೊಬ್ಬ ಹಿಂದೂ ಸೋದರನೂ ಕ್ರೈಸ್ತನಾಗಿ ಮತಾಂತರವೊಂದುವದನ್ನು ನೀನು ಎಂದಿಗೂ ಸಹಿಸುತ್ತಿರಲಿಲ್ಲ. ಆದರೆ ಇಂದು ನಿನ್ನ ಕಣ್ಣೆದುರೇ ದಿನನಿತ್ಯ ಈ ರೀತಿ ನಡೆಯುತ್ತಿದೆ. ನೀನು ಮೂತ್ರಕಣ್ಣು ಮುಚ್ಚಿಕುಳಿತಿದ್ದೀಯೆ. ನಿನ್ನ ಧರ್ಮಶಕ್ತಿ ನಿನ್ನ ದೇಶಭಕ್ತಿ ಎಲ್ಲ ಎಲ್ಲಿ ಹೋದುವು? ದಿನ ಬೆಳಗಾದರೆ ಕೈಸ್ತಪಾದ್ರಿಗಳು ನಿಮ್ಮ ಮುಖಕ್ಕೆ ಹೊಡೆಯುವಂತೆ ಹಿಂದೂ ಧರ್ಮವನ್ನು ತೆಗಳುತ್ತಾರೆ. ಆದರೂ,ಅದನ್ನು ಕಂಡು ಸಾತ್ವಿಕ ಕ್ರೋಧದಿಂದರಕ್ತ ಕುದಿದೇಳುವಂತಹರು, ನಿಮ್ಮ ಧರ್ಮದ ಮೂಲ ಕಾಯಲು ಎದ್ದು ನಿಲ್ಲುವಂತವರು ನಮ್ಮಲ್ಲಿ ಎಷ್ಟುಮಂದಿ ಇದ್ದಾರೆ?"

ಧಾರ್ಮಿಕ ವಿಶ್ವವಿಜೇತ ಸ್ವಾಮೀ ವಿವೇಕಾನಂದರ ವಿವೇಕವಾಣಿ ಎಷ್ಟು ಪ್ರಸ್ಪುಟವಿದೆ! ನಮ್ಮಲ್ಲಿಂದು ಆತ್ಮವಿಸ್ಮೃತಿ ನಡೆದಿರುತ್ತದೆ. ಹಿಂದೂಗಳೆನ್ನಲು ನಾವು ಹಿಂಜರಿಯುತ್ತಿದ್ದೇನೆ! ಇತರರು ನಮ್ಮನ್ನು ಜಾತಿಯವಾದಿಗಳೆಂದು ಕರೆಯ ಬಹುದೆನ್ನುವ ಕಳವಳ ನಮ್ಮ ಮನಸ್ಸಿನಲ್ಲಿ ಮನೆ ಮಾಡಿಕೊಂಡಿದೆ. ತಿಳಿದೋ ತಿಳಿಯದೆಯೋ ಅಂತೂ ಆತ್ಮವಿಸ್ಮೃತಿಯು ಪರಿಣಾಮವಿಂದಾಗಿ ಇಂದಿನ ಭಾರತ ಸರಕಾರ ಸಹಾ ವಿರೋಧಿ ಮನೋಭಾವನೆಗೆನ್ನೇ ವಿಶೇಷ ಪ್ರೋತ್ಸಾಹಕೊಡುತ್ತಿದೆ. ಅದನ್ನು ಬಿಟ್ಟು, ಕಾರಿಮಂದೆಯಲ್ಲಿರುವ ಸಿಂಹ ತನ್ನ ನಿಜಚರಿತ್ರೆಯನ್ನು ತಿಳಿದುಕೊಂಡಂತೆ, ನಾವೂ ಎದ್ದುನಿಂತಲ್ಲಿ ಇಂದಿನ ಪ್ರವಾಹದ ಗತಿಯೇ ಬದಲಾದೀತು.

ಆತ್ಮವಿಸ್ಮೃತಿಗೆ ನಮ್ಮ ಮನಸ್ಸುಎಷ್ಟರ ಮಟ್ಟಿಗೆ ಅಸರೆಕೊಟ್ಟಿದೆಯೆಂಬುದರ ಪ್ರದರ್ಶನಕ್ಕಾಗಿಯೇ ಇರುವಂತಿದೆ ಮಂತ್ರಿ ಶ್ರೀ ಯಶವಂತ ಚವ್ಹಾಣ. ಇತ್ತೀಚೆಗೆ ಛತ್ರಪತಿ ಶಿವಾಜಿ ಮಹಾರಾಜರ ಶೌರ್ಯತೆಯನ್ನು ತೆರೆದಿಡುತ್ತ ರಾಷ್ಟ್ರೀಯ ಏಕ್ಯತೆಗೆ ಅವರು ಕರೆಕೊಟ್ಟಿದ್ದಾರೆ. ಒಳ್ಳೆಯ ವಿಷಯವೇ ಇದೆ. ಛತ್ರಪತಿ ಶಿವಾಜಿ ಮಹಾರಾಜರಾದರೋ ಗೋ ಹರಿ ಪಾಲನೆಗಾಗಿ ಹಾಗೂ ವಿಘ್ನಗಳಿಲ್ಲದೆ ವಿನಾಯಕಾದಿ ದೇವ ದೇವತೆಗಳ ಪೂಜೆ ನಡೆಯಬೇಕೆನ್ನುವದಕ್ಕಾಗಿ, ಅರ್ಧಾರ್ತ ಹಿಂದೂಗಳು ನೈಜ ಹಿಂದೂ ಜೀವನವನ್ನು ನಡೆಸಬೇಕೆನ್ನುವದಕ್ಕಾಗಿ ಹಿಂದೂ ಸಾಮ್ರಾಜ್ಯವನ್ನು ಪುನರ್ ಸ್ಥಾಪಿಸಿದರು. ನಮ್ಮ ಇಂದಿನ ರಕ್ಷಣಾ ಮಂತ್ರಿಯವರು ಈ ಸಲ ಒಂದು ಹೆಜ್ಜೆ ಮುಂದೆ ಬಂದು ಮಹಾಶಿವಾಜಿಯವರ ಹಾಗೂ ಮಹಾ ರಾಷ್ಟ್ರೀಯೇತರರ ಒಗ್ಗಟ್ಟಿಗಾಗಿ ಕೇಳಿ ಕೊಂಡಿರುವರು ಉಷ್ಟೇ. ತಾನು ರಕ್ಷಣಾ ಮಂತ್ರಿ ಇದ್ದು, ಶಿವಾಜಿ ಮಹಾರಾಜರು ನಡೆಸಿದ ಮಹಾನ್ ಕಾರ್ಯದ ಒಂದಂಶವನ್ನಾದರೂ ಸಾರ್ಥಕ ಮಾಡೋಣ ಬೇಕೆನ್ನುವ ಹಂಬಲ, ಆಶೆ ಲವಲವಿಕೆ ಅವರಲ್ಲಿದೆಯೇ? ಅದಿದ್ದರೆ ವರೆಗೆ ಪ್ರಕಟವಾಗಿರುವದಿಲ್ಲ. ಇಂದೂ ಮಹಾರಾಷ್ಟ್ರದಲ್ಲಿ ಗೋವಧೆ ಅಡೆತಡೆ ಇಲ್ಲದೆ ಸಾಗುತ್ತಿದೆ. ವಿನಾಯಕನ ವಿಗ್ರಹವನ್ನು ವಿದ್ವಂಸಗೊಳಿಸಲು ವಿದ್ರೋಹಿಗಳೆಲ್ಲ ವಿಂಗಡಿಸಲಾಗಿದ್ದಾರೆ. ನುಂದಿರಗಳು ಪೂಯಾಗಿ ಹೆಸೀದಿಗಳೂ ಇಗರ್ಜಿಗಳೂ ಕಾಂಡು ಬರುತ್ತವೆ. ಈ ವಿಷಯದಲ್ಲಿ ಶ್ರೀ ಯಶವಂತ ಚವ್ಹಾಣರು ಮೂಡಿದ್ದಾದರೂ ಏನು? ತಾನು ಬೊಂಬಾಯಿಯ ಮುಖ್ಯಮಂತ್ರಿಯೂ ಆಗಿದ್ದಾಗಲಾದರೂ ಅದನ್ನು ತಡೆಯಲು ಅಡೀನನ್ನಾದರೂ ಅವರು ಮೂಡಿದ್ದಾರೆಯೇ? ಅಂದು ಹಾಗೆ ಬಿಟ್ಟದ್ದರಿಂದ ಅಲ್ಲವೇ ವಿದ್ರೋಹಿಗಳಿಗೆ ವಿಶ್ವಾಸ ಬೆಳೆದಿರುವದು" ಇಂದಾದರೂ ಬೆಳಗಾಂವಿನ ವಿಷಯದಲ್ಲಿ ರಾಜಿನಾಮೆ ಕೊಡುತ್ತೇನೆಂದು ಬೆದರಿಸುವ ಶ್ರೀ ಚವ್ಹಾಣರು ಈ ವಿಷಯಗಳ ಮೇಲೆ ರಾಜಿನಾಮೆ ಕೊಡಲು ಹಾಗಿರಲಿ, ತುಟಿ ಎರಡು ಮಾಡಲೂ ವಿಮನಸ್ಕೇಷ ಎಣಿಸುತ್ತಿದ್ದಾರೆ.

ಮದ್ರಾಸ್ ಅಥವಾ ತಮಿಳುನಾಡಿನ ಪ್ರಾಂತ್ಯ (ರಾಜ್ಯ?) ಸರಕಾರವು ಹೊಸತಾಗಿ ಒಂದು ಕಾರ್ಯದಲ್ಲಿ ಕಾಲಿಟ್ಟಿದೆ. ಅದು ಹಿಂದೂಮಠ ಪ್ರಚಾರಕರನ್ನು ತಯಾರು ಗೊಳಿಸುವದಿದೆ. ಇದರಲ್ಲಿ ಎರಡು ಹಂತಗಳಿದ್ದು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನೇತನ ಕೊಟ್ಟು ಮುಂದಕ್ಕೆ ತತ್ವಪ್ರಚಾರಕ ಹಾಗೂ ದೇಶಕ ಉದ್ಯೋಗ ಕೊಡಲಾಗುವದು. ಹೊರಗಿನಿಂದ ನೋಡಲು ಎಷ್ಟು ಒಳ್ಳೆಯ ಕೆಲಸ! ಆದರೆ ಇಲ್ಲಿ ನಡೆಯುತ್ತಿರುವದಾದರೂ ಏನು? ವಿನಾಯಕನ ವಿಗ್ರಹಗಳ ವಿಧ್ವಂಸ ನಡೆದಾಗ, ಶ್ರೀ ರಾಮಚಂದ್ರ ಪ್ರಭುವಿನ ಚಿತ್ರಗಳನ್ನು ಹರಿದೊಗೆದಾಗ, ಶ್ರೀ ಮದ್ರಾನೂಯಾಣದಕುರಿತುತುಚ್ಛರೀತಿಯಲ್ಲಿ ಅಪಮಾನಕಾರಕ ಹೇಳಿಕೆ ಕೃತ್ಯಗಳು ನಡೆದಾಗ, ಹೆಚ್ಚೇಕ್ಕೆ,ವಿವೇಕಾನಂದ ಶಿಲೆಯಿಮೇಲೆವಿವೇಕಾನಂದರ ವಿಗ್ರಹವನ್ನು ಇಡಲು ತಡೆ ಬಂದಾಗ ಮೂಕ್ಯವಲ್ಲ, ಇಂದೂ ದೇವಸ್ಥಾನಗಳಿಂದ ವಿಗ್ರಹಗಳು ಕಳುವು ಆಗುತ್ತಿರುವಾಗ ಹಿಂದೂ ಮುಕಪ್ರಚಾರಕ ಮದ್ರಾಸ್ ಸರಕಾರ ಏನುಮಾಡಿರುತ್ತದೆ? ತಮಿಳು ನಾಡಿನಲ್ಲಿರುವ ಒಂದಿಷ್ಟೂ ಭೂ ಪ್ರದೇಶವನ್ನು ಕರ್ನಾಟಕಕ್ಕೆ ಬಿಟ್ಟು ಕೊಡಲಾರದ, ಹೊಸಪೇಟೆಯಲ್ಲೇ ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಪ್ರೋತ್ಸಾಹಕೊಡದಿರುವ ಮದ್ರಾಸ್ ಸರಕಾರವು ಕರ್ನಾಟಕಕ್ಕೆ ಅಥವಾ ಮೈಸೂರಿಗೆ ಹೇರಳವಾಗಿ ದಿನಂಪ್ರತಿ ಗೋವಾಂಶ ಹೋಗುತ್ತಿರುವದನ್ನು ತಡೆಯಲು ಇನ್ನೂ ಪೂರ್ಣ ಗೋವಧಾ ನಿರೋಧ ಕಾನೂನನ್ನು ಜಾರಿಗೆ ತಂದಿರುವದಿಲ್ಲ! ಇವೆಲ್ಲಾ ಹಿಂದೂ ಮಾತ್ರಪ್ರಚಾರದ ಲಕ್ಷಣಗಳೇನು? ಶ್ರೀ ಭಕ್ತವತ್ಸಲಂರವರು ಹಿಂದೂ ವತಕ್ಕ್ಯೂ ನೈಜ ಹಿಂದೂ ಧರ್ಮಕ್ಕೂ ಬಹಳಷ್ಟು ವ್ಯತ್ಯಾಸ ಇರಲೇ ಬೇಕು. ಇಷ್ಟಿದ್ದಲ್ಲಿ ಇಂಹ ಅವಾಂತರಗಳಿಗೆಲ್ಲ ಅಸರೆದೊರಕರೆಲಾರದು.

ಇವೆಲ್ಲವನ್ನು ಯೋಚಿಸುವಾಗ ಶ್ರೀ ವಿವೇಕಾನಂದ ಸ್ವಾಮಿಯೋಜೀಯವರು ಹೇಳಿರುವಂತೆ ನಮ್ಮಲ್ಲಂದು ಧನ್ಯಶ್ರದ್ಧೆ, ದೇಶಭಕ್ತಿಯ ದಾರಿದ್ರ್ಯ ತಾಂಡವವಾಡುತ್ತಿದೆಯೆನ್ನುವದನ್ನ ಬಹಳ ದುಃಖದಿಂದ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಇಂದು ಅನ್ಯಮತಪ್ರಸಾರಕರಿಂದ(ಕಮ್ಯೂನಿಸ್ಟರು ಕೂಡಾ) ಮಾತ್ರ ದೇಶದ್ರೋಹಾದಿ ಪಾತಕಕೃತ್ಯಗಳು ನಡೆಯುತ್ತಿರುವದಲ್ಲಿ. ಅವನ್ನು ಕಂಡು ಸಾತ್ವಿಕ ಕ್ರೋಧದಿಂದ ರಕ್ತ ಕುದಿದೇಳದಂತಹ ಹಾಗೂ ಅವಕ್ಕೆ ಪ್ರೋತ್ಸಾಹ ನೀಡುವ ಹಿಂದೂಗಳಿಂದ ಅಘೋರ ಪಾಪಕೃತ್ಯಗಳು ನಡೆಯುತ್ತವೆ. ಇದಕ್ಕೆ ಹಿಂದೂಗಳಲ್ಲಿ ಒಗ್ಗಟ್ಟಿಲ್ಲದಿರುವದೇ ಮುಖ್ಯ ಕಾರಣವಿದೆ. ಹಿಂದೂಗಳಾದರೋ ತಾವು ಈ ಪವಿತ್ರ ದೇಶದ ನೈಜರಾಷ್ಟ್ರೀಯರೆಂಬ ಉತ್ಕಟ ಹಾಗೂ ಉಚ್ಚಭಾವನೆಯಿಂದ ಧರ್ಮಭಿವಾನದಿಂದ,ಧೈರ್ಯದಿಂದ,ಅತ್ಮವಿಸ್ಮೃತಿಯ ಅಂಧಕಾರವನ್ನು ತೊಡೆದು ಹಾಕಿ ಎದ್ದು ನಿಂತಾಗ ಅಂತಹ ದುರ್ಘಟನೆಗಳು ನಡೆಯಲಾವು. ಆಗ ಮಾತ್ರ ಶಾಂತಿ—ಸಮಾಧಾನಗಳಿಗಾಗಿ ಹಾತೊರೆಯುತ್ತಿದ್ದು, ಭಾರತಪತ್ರ ಭಕ್ತಿಯಿಂದ ದೃಷ್ಟಿಹಾಯಿಸುತ್ತಿರುವ ಜಗತ್ತಿನ ನಾನಾದೇಶಗಳಿಗೆ ತಾವು ನಿಜವಾಗಿ ಶಾಂತಿ—ಸುಖ - ಸಮಾಧಾನಗಳು ಸಿಗುವಂತೆ ಮಾಡಬಹುದು. ಇಲ್ಲದಿದ್ದಲ್ಲಿ ಅವು ಕೇವಲ ಒಣಹರಟೆಗಳೇ ಆದಾವು.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಬುಗಳನ್ನೇ** ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ರೈತ ಭಾಂದವರ ಜೀವನ ಸಂಗಾತಿ.....

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.....

ಎಸ್.ಇ.ಐ. ಇಲೆಕ್ಟ್ರಿಕ್ ಮೋಟಾರು
(¼ H.P. ಯಿಂದ 2. H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಪೀಟರ್ ಸ್ಪಾರ್ಟರುಗಳು .....

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಪಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಲಾಳರ ರಸ್ತೆ, ಮಂಗಳೂರು-1

ಎಲ್ಲೆಲ್ಲಿ ಏನೇನು?

ಎಸ ದೆಮಿ ಪುಟ್ಟೆಕೋತ್ಸವ

ಶ್ರೀಮ ಅಗರ್ವಂದು ಪ್ರಾ॥ ಡಾನ್

ಮಂಜೇಶ್ವರ, ನ. 8— [illegible] ಯೇ ಇನ್ನೂ ಅಭಿವೃದ್ಧಿ ಹೊಂದುತ್ತಿರುವುದರಿಂದ ಎಲ್ಲರೂ ಸುಖವಾಗಿರುವುದಕ್ಕಾಗಿ ಪ್ರತಿಯೊಬ್ಬರೂ ಕಷ್ಟಪಟ್ಟು ಕೆಲಸಮಾಡುವುದು ಅಗತ್ಯವೆಂದು ಕಾರ್ಕಳ ಕುಡಿಯ ಸೆಂಟ್ರಲ್ ಎಜುಕೇಶನಲ್ ಟ್ರಸ್ಟಿನ ಮಂಗಳೂರು ಇಂಜಿನಿಯರಿಂಗ್ ಇನ್ಸ್ಟಿಟ್ಯೂಟಿನ ಡೈರೆಕ್ಟರ್ ಶ್ರೀಯುತ ಕೆ. ಎಸ್. ಜಿ. ಡಾನ್ ಇಲ್ಲಿ ಒತ್ತಿ ಹೇಳಿದರು. ಲಂಚಮುಂದಿಗೆ ಫೆಲೋಶಿಪ್‌ಗಳನ್ನಿತ್ತ ಎಕಾಡೆಮಿ ಆಫ್ ಜನರಲ್ ಎಜುಕೇಶನ ವಾರ್ಷಿಕಪಟಿಕೋತ್ಸವ ಭಾಷಣವನ್ನು ಅವರು ಮಾಡುತ್ತಾ, ಕೆಲಸ ಮಾಡುವುದರಿಂದ ದೇವರ ಸೇವೆ ಮಾಡಿದಂತಾಗುತ್ತದೆಂದರು.

ಸತ್ಯವಂತರಿಗಿದು ಕಾಲವಲ್ಲ

(ನಾಲ್ಕನೇ ಪುಟದಿಂದ)

ವ್ಯಕ್ತಪಡಿಸಿದ್ದಾರೆ...."

'ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯು ಆಧಾರವಂತೆ ...'

'ಹುಂ....ಸದ್ಯ ಆಷ್ಟಾದ್ರೂ ಇದೆ ತಾನೆ?'

"ಮತ್ತೆ ಮಂದು ಪುದಾದ್ರೂ ಏನ? ನಾನು ದಿನ ದೂಡುತ್ತಿಲ್ಲನೆ, ಹಾಗೆ?'

"ಅಯ್ಯೋ, ಪಾಪವೆ?"

"ಛಿ, ಎಂಥದಿದು?"

"ಏನೂ ಇಲ್ಲ. ಈ ಯಲ್ಲು ಕಡ್ಡಿಯನ್ನು ಬಿಗಿಯೂ....ಬದುಕಿದರೂಮುಳುಗಿದರೂ ಜೊತೆಗೇ...."

"ಇನ್ನು ಮುಳುಗೋದಿಲ್ಲ..."

"ಯಾಕೆ?'

"ನನ್ನ ಹುಲ್ಲು ಕಡ್ಡಿಯ ಸಾಂದ್ರತೆ ನೀರಿಗಿಂತ ಬಹಳ ಕಡಿಮೆ..."

"ಟ....."

—ಗೋರಾ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S C No 411/1966.

ವಾದಿ— ನಾರಾಯಣ ಮಡಾಬಲಕ್ಷೇತ್ರ ಹೆಗಡೆ

ಮತ್ತು

ಪ್ರತಿವಾದಿ—ಸುಬಂಣ ಶೆಟ್ಟಿ,

ಸದ್ರಿ ದಾವೆಯ ಪ್ರತಿವಾದಿ—ಸುಬಂಣ ಶೆಟ್ಟಿ, ಹೆಗದೇರೆ ಮನೆ ಅಂತಸ್ಥ ಸೆಡ್ಡಿರ ನುಗ್ಗ, ಕುಂದಾಪುರ ತಾಲ್ಲೂಕು ಕಲ್ಲಿ ಬೆಲ್ತೂರು ಗ್ರಾಮ. ಇವರಿಗೆ—

ನೀವು ವಾದಿಯ ಪೂರ್ವಾಧಿಕಾರಿ ಕಲ್ಲಿ ಬೆಲ್ತೂರು ಗ್ರಾಮದ ಪಡುಮನೆ ಶಿದ್ದು ಹೆಂಗ್ಸಿನ ಮಗ ಬೇಪ ಪೂಜಾರಿಯಿಂದ ರೂ.125 ಸಾಲ ಪಡೆದು ತಾ. 8—6—1964 ರಲ್ಲು ಬರಶಿಕೊಟ್ಟ ದಿವಾಂದ ನೋಟಿನ ತ್ವಲಾ ಬಡ್ಡಿ ಹಣಗಳನ್ನು ವ್ಯಸಲು ಮಾಡುವ ಹಕ್ಕು ತಾ. 8—1—1965 ರಲ್ಲು ವಾದಿಯು ಟ್ರಿನ್ಸು ಫರ ಪಡೆದು ಆ ಬಾಬ್ತುಲ್ಲಿ ಬಡ್ಡಿ ಕೂಡಾ ರೂ 199—50 ಪೈಸೆಯು ನಂತ್ರದ ಬಡ್ಡಿ ಕೋರ್ಟು ಖರ್ಚಿಗೆ ಬರ್ಗೆ ನಿಂಮ ಪೇಲೆ ಮೂಡಿದ ಮೇಲ್ಕಂಡ ದಾವೆಯು ನಿಂಮ ಹಾಜರಾತಿಯ ಬರ್ಗೆ ತಾ. 6—12—1966 ಕ್ಕೆ ಅಪ್ಪೆರ ಸಾರಿತಸ್ಸಿಗೆ ಇಡೇಶಾಜ್ಞಾಗಿಯಾದ್ದೆ. ಈ ಕುರಿತು ನಿಂಮ ಅಪ್ಪೆಲಪವಿದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ಬಂದು ಜವಾಬು ಮಾಡಿಕೊಳ್ಳಿಕ್ಕೆಕ್ಕದ್ದು. ತಪ್ಪಿದಲ್ಲಿ ದಾವೆಯನ್ನು ಏಕಪಕ್ಷದಲ್ಲಿ ತೀರ್ಮಾನಿಸಲಾದೀತು.

[ಕೋರ್ಟು ದ್ಯುಂ ಕ್ರಕಾರ]

G. Ramakrishna Rao.
B. A. L. L. B
Advocate

ಕುಂದಾಪುರ, ತಾ. 9—11—66.

ಡಾ॥ ಟಿ. ಎಂ. ಎ. ಪೈಯವರ ನೇತೃತ್ವದಲ್ಲಿ ಎಕಾಡೆಮಿಯ ನಡೆಸಿರುವ ಜನಹಿತ ಕಾರ್ಯಗಳನ್ನು ಇತರೂ ಅನುಸರಿಸಿ ಬೇಕೆಂದು ಅವರು ತಿಳಿಸಿ, ಮುಂದೆ ಅನೇಕ ಕಡೆಗಳಲ್ಲಿ ಇಂತಹ ಸಲಹಾ ಸಂಸ್ಥೆಗಳು ಉದಿಸಾಲಿವೆಂದು ಅಶಿಸಿದರು.

ಎಕಾಡೆಮಿಯ ಅಧ್ಯಕ್ಷ ಡಾಗೂ ರಿಜಿಸ್ಟ್ರಾರ್ ಡಾ॥ ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿ ಎಕಾಡೆಮಿಯು ೪೮ ಸಂಸ್ಥೆಗಳೂ ಉಚ್ಚಸ್ಥಾನವನ್ನು ಹೊಂದಿವೆ ಎಂದರು. ಆದರೂ ಸಮರ್ಪಣಾ ಪದದ ಜನರ ಸಹಾಯದಿಂದ ಇನ್ನೂ ಹಲವು ಸಂಸ್ಥೆಗಳನ್ನು ಸ್ಥಾಪಿಸುವ ಆರೋಚನೆ ಇದೆ ಎಂದೂ ತಿಳಿಸಿದರು.

ಸಮಾರಂಭದಲ್ಲಿ ಪಾಜಂಬ್ಬವರ ಪೈಕಿ ಅಧಿಕ ಸಾಧಾರಣಾ ಅಯೋಗದ ಸದಸ್ಯರಾಗಿ ಅಧ್ಯಯನಾ ತಂಡದ ಅಧ್ಯಕ್ಷ ಶ್ರೀ ಎಚ್. ಎಂ. ಚೆನ್ನಬಸಪ್ಪ ಹಾಗೂ ಬೆಂಗಳೂರಿನ ವೈದ್ಯಕೀಯ ವಿಶ್ವವಿದ್ಯಾನಿಲಯದಉಪಕುಲಸಚಿವಾ॥ ಕೆ. ಸಿ ನಾರಾಯಣ ಪ್ರಮುಖರಾಗಿದ್ದರು.

ರಾಜ್ಯೋತ್ಸವ ಆಚರಣೆ

ಮಂಗಳೂರು, ನ.೧. ಕನ್ನಡ ರಾಜ್ಯದ ಹತ್ತನೇಯ ವಾರ್ಷಿಕೋತ್ಸವದ ಸಂಬಂಧವಾಗಿ ಮಂಗಳೂರಿನ ಪುರಭವನದಲ್ಲಿ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಕಾರ್ಯಕ್ರಮವೊಂದು ಜರಗಿತು.

ಬ್ರಾಂಥದಲ್ಲಿ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿಗಳಿಂದ ಸಾಮೂಹಿಕ ಪ್ರಾರ್ಥನೆಯಾದ ಬಳಿಕ ನಗರ ಸಾಮಾಧ್ಯಕ್ಷ ಶ್ರೀ ಜಿ. ಸೋಮ ಕೇಶ್ವರ ರಾಯರು ಸ್ವಾಗತ ಭಾಷಣಮಾಡುತ್ತಾ ಕನ್ನಡನಾಡಿನ ಸರ್ವ ಇತಿಹಾಸವನ್ನು ಸೂಕ್ಷ್ಮವಾಗಿ ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಕರ್ನಾಟಕದ ಕವಿಕೋಕಿಲರನ್ನೂ ವಿದ ಶ್ರೀ ಆರೂರು ಪೆಂಕಟ ರಾಯ, ಶ್ರೀ ಡಿ ರಾ. ಬೇಂದ್ರೆ, ಶ್ರೀ ಶ್ರೀಕಂಠಯ್ಯ ಮತ್ತು ಶ್ರೀ ಪು. ತಾ. ನರಸಿಂಹಾಚಾರ್ ರನ್ನು ಈ ಸಂದರ್ಭದಲ್ಲಿ ನೆನಸುವುದು ನಮ್ಮ ಕರ್ತವ್ಯವೆಂದು ನುಡಿದು ನಾಡಿನ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗ ಎಂ.ಎಲ್. ಸಿ. ಯವರು ಮಾತಾಡುತ್ತಾ, ನಮ್ಮ ಅಡಳಿತ ಉತ್ತಮವಾಗಿ ಆಗಬೇಕಾದರೆ ಅಡಳಿತ ಭಾಷೆಯು ರಾಜ್ಯ ಭಾಷೆಯಲ್ಲಿರಬೇಕು, ಎಲ್ಲಾ ರೀತಿಯ ಅಭಿವೃದ್ಧಿಗೆ ಭಾವೈಕ್ಯತೆ ಮುಖ್ಯವಾದುದು, ಎಲ್ಲರೂ ಹಿಮನಸ್ಸಿನಿಂದ ಕೂಡಿ ಬಾಳುವುದು ನಮ್ಮ ಕರ್ತವ್ಯವೆಂದು ನುಡಿದರು.

ಶ್ರೀ ವಿ. ಬಾಲಕೃಷ್ಣ ಪೊಳಲಿಯವರು ಕವಿಗಳ ಪರಿಚಯ ಮಾಡಿತ್ತರು. ನಂತರ ನಡೆದ ಕವಿಗೋಷ್ಠಿಯಲ್ಲಿ ಶ್ರೀ ಕೈಯ್ಯಾರ್ ಕಿಂಞಣ್ಣ ರೈಯವರು ಕನ್ನಡ ನಾಡೆಬ್ಬವೆಂಬ ಕವಿತೆಯನ್ನು ಸಾಶ್ರಾನ್ವಯವಾಗಿ ಹಾಡಿದರು. ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ, ಶ್ರೀ ಆ. ಗೋ. ಕೆನ್ನಿಗೋಳಿ, ಶ್ರೀ ಪ.ಎಂ. ಇನಿನಟ್ಟ, ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ ಮತ್ತು ಶ್ರೀ ಕೊಂಡಾಣ ವಾಸುದೇವ ಶಾನುಭೋಗರು ತಮ್ಮ ತಮ್ಮ ರಚಿಸಿದ ಕವನಗಳನ್ನು ಹಾಡಿದರು.

ಶ್ರೀ ಚರಣ ಕಾರ್ಕೂರು, ಶ್ರೀ ರಂಜಾದಾಸ ಸೇವಾಗೂರು ಮತ್ತು ಶ್ರೀ ಸೀತಾರಾಮನವರು ಕನ್ನಡ ಗೀತೆಗಳನ್ನು ಹಾಡಿದರು. ಗಣಕ ಶಿಕ್ಷಣಾಲಯ ಶಾಲಾ ಬಾಲಕರಿಂದ ದೃಶ್ಯ ರೂಪಕ ಹಾಗೂ ಜಿಲ್ಲಾ ವಾರ್ತಾಪ್ರಸಾರಣಾ ಕೆಯವರಿಂದ ಚಲಚಿತ್ರ ಪ್ರದರ್ಶನವಿಕ್ಕು. ಬಳಿಕ ಯಕ್ಷಗಾನ ಬಯಲಾಟ ನಡೆಯಿತು.

ಕೊನೆಯಲ್ಲಿ ಶ್ರೀ ಎನ್. ಆರ್. ರಂಗನಾಥರವರಿಂದ ವಂದನಾರ್ಪಣೆಯಾಯಿತು. ಬೆಳಿಗ್ಗೆ ನೆಡೆದ ಮೈಪಾನದಲ್ಲಿ ವಿವಿಧ ಕಾರ್ಯಕ್ರಮ ಪ್ರದರ್ಶನಗಳೆದ್ದುವು.

MODERN GARAGE
UDIPI
With SERVICE STATION attached.
Phone } 65 / 231 Residence: 180

ರಾಷ್ಟ್ರೀಯ ಪ್ರಶಸ್ತಿ ಪಡೆದ ಮಣಿಪಾಲ ಪ್ರೆಸ್ಸಿನ ಬಂಧುಗಳಿಗೆ ಸಾರ್ವಜನಿಕ ಸನ್ಮಾನ ಸಮಾರಂಭ

ಉಡುಪಿ, ಉತ್ತಮ ಮುದ್ರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದ ಮಣಿಪಾಲ್ ಪವರ್ ಪ್ರೆಸ್ಸಿನವರನ್ನು ಇದೇ ತಾ. 10ರಂದು ಉಡುಪಿಯ ಕಲ್ಪನಾ ಥಿಯೇಟರಿನಲ್ಲಿ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಕುಮಾರಿ ಎನ್. ಜಿ. ಸ್ಟೀವ್ಸ್‌ರವರಿಂದ ಪ್ರಾರ್ಥನೆಯಾದ ಬಳಿಕ ಸನ್ಮಾನ ಸಮಿತಿಯ ಅಧ್ಯಕ್ಷ ಪ್ರೊ॥ ಕು. ಶಿ. ಹರಿದಾಸ ಭಟ್ಟರು ಸ್ವಾಗತ ಭಾಷಣ ಮಾಡುತ್ತಾ ಮಣಿಪಾಲ ಪ್ರೆಸ್ಸಿನ ಬಂಧುಗಳಿಗೆ ನನ್ಮನದ ಮಾತಿನ ಮೂಲಕ ಗೌರವಾರ್ಪಣೆ ಎಂದರು. ಶ್ರೀ ಪಿ. ರಂಗನಾಥ ಶೆಟ್ಟಿಯವರು ದೇಶದಾದ್ಯಂತದಿಂದ ಬಂದ ಸಂದೇಶಗಳನ್ನು ಓದಿದರು. ರಾಷ್ಟ್ರೀಯ ಪ್ರಶಸ್ತಿ ಪಡೆದ ಬಗ್ಗೆ ಪ್ರಶಂಸಿಸುವ ಹಾಗೂ ಬೆಳ್ಳಿಯಬ್ಬದ ವರ್ಷವನ್ನು ಪ್ರಾರಂಭಿಸುತ್ತಿರುವ ಮಣಿಪಾಲ ಪ್ರೆಸ್ಸಿಗೆ ದೊರೆತ ಈ ಅಪೂರ್ವ ರಾಷ್ಟ್ರಮನ್ನಣೆ ಮುಂದಿನ ಬೃಹತ್ ಪರಂಪರೆಗಳಿಗೆ ಬಂದು ನಾಂದಿಯೆನ್ನುವ ಗೌರವ ಪತ್ರವನ್ನು ಶ್ರೀ ಕೆ. ಹಾನ್ನಯ್ಯ ಶೆಟ್ಟರು ಓದಿ ಪ್ರೆಸ್ಸಿನ ಬಂಧುಗಳಿಗೆಸ್ಸಿಸಿದರು.

ಮಂಗಳೂರು ಬಾಸೆಲ್ ಮಿಶನ್ನ ಪ್ರೆಸ್ಸಿನ ಮೆನೇಜರ್ ಶ್ರೀ ಬಿ. ಹೆರ್ರಿಯಂಗರು ಮತನಾಡುತ್ತ 1841ರಲ್ಲಿ ಪ್ರಥಮವಾಗಿ ಬೆಲ್ಲೆಯಲ್ಲಿ ಪ್ರಾರಂಭವಾದ ತಮ್ಮ ಪ್ರೆಸ್ಸಿನ ವಿಚಾರವನ್ನು ಪ್ರಸ್ತಾಪಿಸಿ ಈಗ ಬೆಲ್ಲೆಯಲ್ಲಿ ನೂರಾರು ಪ್ರೆಸ್ಸುಗಳಾಗಿ ಬೆಳೆದು ಬರುತ್ತಿರುವುದು ಶಭ ಚಿಹ್ನೆಯೆಂದೂ ಹೇಳಿ ಅತ್ಯುತ್ತಮ ಕಲಾವಂತಿಕೆಯನ್ನು ಸಾಧಿಸಿರುವ ಮಣಿಪಾಲ ಪ್ರೆಸ್ಸಿಗೆ ಅಭಿನಂದನೆ ಸಲ್ಲಿಸಿದರು.

ಅನಂತರ ಮಾತನಾಡಿದ ಪ್ರೊ॥ ವಿ.ವಿಎಸ್. ಇನಾಂದಾರರು ಮಣಿಪಾಲ್ ಪ್ರೆಸ್ಸಿನ ಅಚ್ಚು ಕಛ್ಚಾಪ್ಪದ ಮುದ್ರಣವನ್ನು ಕಂಡು ತಾವು ಸಂತೋಷಗೊಂಡಿರುವುದಲ್ಲದೆ ಅದು ಇನ್ನಷ್ಟು ಬೆಳೆದು ಬರುವಂತಾಗಲೆಂದರು. ಮಂಗಳೂರು ಕೆನರಾ ವರ್ಕ್ಸ್ ಶಾಪಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎಸ್. ವಿ. ಕುಡ್ವರು ಮಾತನಾಡಿ ಇತ್ತೀಚೆಗೆ ಜಿಲ್ಲೆಯ ಮುದ್ರಣಕಲೆ ಬಹಳವಾಗಿ ಮುಂದುವರಿದಿದೆಯೆಂದೂ ಸರಕಾರೀ ಮುದ್ರಣಕ್ಕಿಂತ ಕಾಸಗೀ ಕ್ಷೇತ್ರದಲ್ಲಿ ವಿಶೇಷ ನಾಜೂಕುತನ ಇರುವುದೆಂದೂ ಮಣಿಪಾಲ್ ಪ್ರೆಸ್ಸು ಅಚ್ಚು ಕಟ್ಟಾಗಿ ಮುದ್ರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದ ಬಗ್ಗೆ ಅಭಿನಂದಿಸಿದರು. ಡಾ॥ ಕೆ. ಶಿವರಾಮ ಕಾರಂತರು ಭಾಷಣಮಾಡುತ್ತಾ ಪ್ರೆಸ್ಸಿನವರಿಗೆ ಮತ್ತೊಮ್ಮೆ ತೊಡಕ್ಕು, ತೊಂದರೆಗಳನ್ನೆಲ್ಲಾ ಉತ್ತಮ ಮುದ್ರಣಕ್ಕೆ ಪಡಬೇಕಾದ ಪರಿಶ್ರಮವನ್ನು ವಿವರಿಸಿ ಮಣಿಪಾಲ್ ಪ್ರೆಸ್ಸಿನ ಬಂಧುಗಳು ಇತ್ತೀಚೆಗೆ ಸಾಧಿಸಿರುವ ಉತ್ತಮ ಮುದ್ರಣ ಕಲೆಯು ಕೊಂಡಾಡತಕ್ಕ ದೆಂದರು. ಡಾ॥ ಟಿ. ಮಾಧವ ಪೈಗಳು ಪ್ರೆಸ್ಸಿನ ಪರವಾಗಿ ಉತ್ತರಿಸುತ್ತಾ ಪ್ರತಿಯೊಂದು ವ್ಯವಹಾರದಲ್ಲಿಯೂ ಮುಂದುವರಿದಿರುವ ನಮ್ಮ ಜಿಲ್ಲೆಗೆ ಈಗಿರುವ ನೂರಾರು ಪ್ರೆಸ್ಸುಗಳು ಸಾಲದೆಂದೂ ಈಗ ಜನ ಉತ್ಸವಪ್ರಿಯತೆಗೆ ಎಸ್ಸಾದರೂ ಬೆಲೆ ತೆರಲು ಸಿದ್ಧರಿದ್ದಾರೆಂದೂ ಮಣಿಪಾಲ ಪ್ರೆಸ್ಸಿನ ನೇತಾರರೂ ತಂಬಜೋತ್ಸಾಹಿಗಳೂ ಆದ ಶ್ರೀ ಮೋದನ ದಾಸ ಪೈ ಮತ್ತು ಶ್ರೀ ಸತೀಶ ಪೈಗಳ ಪರಿಶ್ರಮ ಹಾಗೂ ಕೆಲಸಗಾರ ಬಂಧುಗಳಿಗೆ ಸಹಕಾರ ಈ ಪ್ರೆಸ್ಸಿನಲ್ಲಿ ಉತ್ಕರ್ಷತೆಗೆ ಕಾರಣವೆಂದೂ ಹೇಳಿ ಸತ್ಕಾರಕ್ಕೆ ಧನ್ಯವಾದ ಅರ್ಪಿಸಿದರು. ಪ್ರೆಸ್ಸಿನ ಮೆನೇಜರ್ ಶ್ರೀ ಬಿ. ಕೃಷ್ಣಯ್ಯನವರು ತಮ್ಮನ್ನು ಗೌರವಿಸಿ ಸತ್ಕರಿಸಿದುದಕ್ಕೆ ಕೃತಜ್ಞತೆಗಳನ್ನರ್ಪಿಸಿದರು.

ಅಧ್ಯಕ್ಷ ಶ್ರೀ ನಾಗೇ ಗೌಡರು ಭಾಷಣ ಮಾಡುತ್ತ ನಿನೇ ಶತಮಾನದಲ್ಲಿ ಸ್ವತಂತ್ರ ಚೀನದಲ್ಲಿ ಮುದ್ರಣ ಆರಂಭವಾಯಿತೆಂದೂ 14ನೇ ಶತಮಾನದಲ್ಲಿ ಗೋವಾದಲ್ಲಾಯಿತೆಂದೂ ಜೇಬಿಗೆ ಬಳಿಕಆದು ವಿಸ್ತರಿಸಿದುದನ್ನು ವಿವರಿಸಿದರು. 16ನೇ ಶತಮಾನದಲ್ಲಿ ಮಂಗಳೂರಲ್ಲಿ ಆರಂಭವಾದ ಮುದ್ರಣವು ಇತಿಹಾಸ ಮುಂದ್ದಾದ ಕನ್ನಡ ಲಿಪಿಗಳನ್ನು ತಯಾರಿಸಿದ ಮಂಗಳೂರು ಅನಂತಾಚಾರಿಯವರ ಸಾಧನೆ ಮಣಿಪಾಲ ಪವರ್‌ಪ್ರೆಸ್ಸಿನ ಉತ್ಕರ್ಷ ದೊಂದಿಗೆ ಅಲ್ಲಿಯ ಪ್ರೆಸ್ಸಿನ ಲಾಂಛನ ಉತ್ಕರ್ಷಗಳಿಗೆ ಕಾರಣವಾಗಿರುವ ಪ್ರೆಸ್ಸಿನ ಮೆನೇಜರ್ ಶ್ರೀ ಎಸ್. ವಿ. ಕುಡ್ವರು ಮೂರನೇ ಪ್ರಶಸ್ತಿ ಪಡೆದ ಬಗ್ಗೆ ಅಭಿನಂದಿಸಿದರು. ಅಂತ್ಯದಲ್ಲಿ ಶ್ರೀ ಎ. ಜಿ. ಅಲ್ಲೆಯವರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಉಪಾಹಾರ ಸತ್ಕಾರವಿತ್ತು.

ವಿರೋಧಿ ಪಕ್ಷಗಳ ಸಂಯುಕ್ತ ಪ್ರಯತ್ನ ಅಗತ್ಯ.

ಉಡುಪಿ, ತಾ. 2ರಂದು ಉ. ಭಾ ಕಮ್ಯುನಿಸ್ಟ್ ಪಾರ್ಟಿ (ಬಲ) ಪ್ರಧಾನ ಕಾರ್ಯದರ್ಶಿ ಶ್ರೀ ಸಿ ರಾಜೇಶ್ವರ ರಾಯರು, ಉಡುಪಿ ಅಲಂಕಾರ್ ಥಿಯೇಟರ್‌ನಲ್ಲಿ, ಡಕ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಪ್ರಥಮ ಕಾರ್ಯಾರ್ಥಶೆ ಶ್ರೀ ಶಾಂತಾರಾಮ ಶೆಟ್ಟಿಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮೊತಾಡುತ್ತಾ ದುರಾಡಳಿತ ಸ್ವಜನ ಪಕ್ಷಪಾತ ಜನರ ಘೋಷಣೆಯ ಮೂಲಕ ರಾಷ್ಟ್ರದಲ್ಲಿ ಅರಾಜಕತೆಯನ್ನು ನಿರ್ಮಿಸುವ ಲಂಚಕೋರ ಕಾಂಗ್ರೆಸ್ಸನ್ನು ಪದಚ್ಯುತ ಗೊಳಿಸಲು ಇರುವ ಏಕ ಮಾತ್ರ ಮಾರ್ಗವೆಂದರೆ ಎಲ್ಲ ವಿರೋಧಿ ಪಕ್ಷಗಳು ಮುಂದಿನ ಚುನಾವಣೆಯಲ್ಲಿ ಸಂಘಟಿತರಾಗಿ ಸಂಯುಕ್ತವಾಗಿ ಪ್ರಯತ್ನಿಸುವುದೊಂದೇ ಆಗಿರುತ್ತದೆ ಎಂದು ಹೇಳಿದರು. ಅವರು ಇಂದು ನಮ್ಮ ದೇಶದ ಮುಂದಿರುವ ಸಮಸ್ಯೆಗಳ ಕುರಿತು ಪ್ರಸ್ತಾಪಿಸುತ್ತಾ; ಕಾಂಗ್ರೆಸಿನ ಧೋರಣೆಯೇ ಈ ಎಲ್ಲ ಸಮಸ್ಯೆಗಳಿಗೂ ಮೂಲಕಾರಣವಾಗಿದೆಯೆಂದು ನುಡಿದರು. ಮತ್ತವಲ್ಲದೇ ಇಂದಿನ ಆಡಳಿತದ ದೋಷದೋಷಗಳನ್ನು ಒತ್ತಿ ಹೇಳಿ ಕಾಂಗ್ರೆಸ್ಸನ್ನು ಮೂಲದಲಿಸಿ ಬರೆ.

ಆರಂಭದಲ್ಲಿ ಶ್ರೀ ಕೆ. ಡಾನ ಸೇರಿಗಾರರು ಪ್ರಾಸ್ತಾವಿಕ ಭಾಷಣಮಾಡಿದರು. ಅಧ್ಯಕ್ಷರು ಮತನಾಡುತ್ತಾ ಅತಿಥಿಗಳ ಪರಿಚಯ ಮಾಡಿತ್ತರು. ಬಳಿಕ ಉಡುಪಿ ಕಮ್ಯುನಿಸ್ಟ್ ಪಾರ್ಟಿಯ ಅಧಿಯಂಬ ಶ್ರೀ ರಾಜೇಶ್ವರ ರಾಯರಿಗೆ ಪಕ್ಷಾಧಿಕೆಯನ್ನು ಅರ್ಪಿಸಲಾಯಿತು.

ಕ್ಷಯರೋಗ ಮುದ್ರೆಗಳ ಮಾರಾಟ

ಉಡುಪಿ, ಕಳೆದ ತಾ. 25ರಂದು ಜರಗಿದ ಉಡುಪಿ ರೋಟರಿ ಕ್ಲಬ್ ಮತ್ತು ಉಡುಪಿ ತಾಲೂಕು ಕ್ಷಯರೋಗ ಸಂಸ್ಥದ ಜಂಟಿ ಸಭೆಯಲ್ಲಿ, ಬಿಹಾರ್ ರಾಜ್ಯದ ಧನಬಾದ್ ಜಿಲ್ಲೆ ಆಕ್ಸ್ತೆಯ ಡಾ॥ ಕಾಮೂರಿ ಪಿರಾಸನ್ನ ನಾಯಕ್‌ರವರು ಕ್ಷಯರೋಗ ಮುದ್ರೆಗಳ ಮೂಂತಿಟವನ್ನು ಡಾ॥ ಕೆ. ಎಲ್. ಏತಾಳರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಪ್ರಾರಂಭದಲ್ಲಿ ತಾಲೂಕು ಕ್ಷಯರೋಗ ಸಂಘದ ಕಾರ್ಯದರ್ಶಿ ರೋಟರಿಯನ್ ಡಾ॥ ಕೆ. ಮೋನಪ್ಪಾಸ ಶೈಯವರು ಮತನಾಡುತ್ತಾ ೧ ಸಾವಿರ ರೂ. ವೆಚ್ಚಿಲ್ಲದ ಮುದ್ರೆಗಳನ್ನು ಮೂರು ಬಣ್ಣಗಳಲ್ಲಿ ಮುದ್ರಿಸಲು ಸಾವು ಹೊಂದಿಸಿರುವುದಾಗಿಯೂ ಅದರಲ್ಲಿ ರೂ. ೪೦೦ ಮೌಲ್ಯದ ಮುದ್ರೆಗಳನ್ನು ಸಭೆಯಲ್ಲಿ ಮಾರಲಾಯಿತೆಂದೂ ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಿ. ಎಸ್. ಸಿ. ಪರೀಕ್ಷೆಯಲ್ಲಿ ಪ್ರಥಮ ರ್ಯಾಂಕ್ಗಳಿಸಿದ ಎಂ. ಜಿ. ಎಂ ಕಾಲೇಜಿನ ಶ್ರೀ ಸುಧಾಕರ ಭಂಡಾರಿಯವರಿಗೆ ಕ್ಷಬ್ಬಿನ ಪರವಾಗಿ ದಯಾಮಾನ ಕೊಟ್ಟು ಗೌರವಿಸಾಯಿತು.

ಬ್ರಿಟಿಷ್ ನೌಕಾ ಕಂಪೆನಿಯ ಇಂಜಿನಿಯರ್ ಶ್ರೀ ಮನೋಹರ ಶೆಟ್ಟಿಯವರು ನಾವರ ಜೀವನದ ಕಾಲು ಮತನಾಡಿದರು. ಕೊನೆಯಲ್ಲಿ ಡಾ॥ ವಿ. ಎಸ್. ಶೆಟ್ಟರು ವಂದನಾರ್ಪಣೆ ಗೈದರು.

'ನಾರದ ಸಂಸಾರ'

(ಎರಡನೇ ಪುಟದಿಂದ)

ಒಮ್ಮ ಡಾಕ್ಟರ್ ಬಂದ್ರಮ್ಮ.

(ಡಾಕ್ಟರ್ ಮತ್ತು ರಾಮಣ್ಣನ ಪ್ರವೇಶ)

ಡಾಕ್ಟರ್— ಸೀತಮ್ಮಾ ಉಮಾ ಹೇಗಿದ್ದಾಳೆ?

ಸೀತಮ್ಮ— ಇನ್ನೂ ಸ್ವಲ್ಪ ಜ್ವರವಿದೆ ಡಾಕ್ಟರ್.

ರಾಮಣ್ಣ— ಬಸ್ಸಿ ಡಾಕ್ಟರ್, ಒಳಗ ಜೆ ಹೋಗಿ ನೋಡಿಕೊಂಡು ಬರುವಿರಂತೆ.

(ಡಾಕ್ಟರ್, ರಾಮಣ್ಣ ಮತ್ತು ಸೀತಮ್ಮ ಗರ್ಮನ)

ರಾಧ— (ಸ್ವಗತ) ಹೇ ಭಗವಂತಾ! ನಮಗೇಕೆ ಈ ಪರಿಯ ಕಷ್ಟ ಕೊಡುತ್ತಿ ಯೂ? ಉಮೆಗೆ ಜಾಗ್ರತೆ ಗುಣವಾಗು ವಂತೆ ಮಾಡುವೇವ. ಬಡವರ ಮೇ ಧನೆ ಇನ್ನೂ ಅರ್ಥವಾಗದೆ?

ರವಿ— (ಪ್ರವೇಶ) ಅಕ್ಕಾ ಅಮ್ಮಾ ಎ ಲ್ಲಿದ್ದಾಳೆ?

ರಾಧ— ಯಾಕೋ?

ರವಿ— ಮೇರಿ ಕವಲವ್ಳ ಕೇಳಿದರು.

ರಾಧ— ಒಳಗಡೆ ಇರಬಹುದು ನೋಡು. (ರವಿ ನಿರ್ಗಮನ); ಸ್ವಗತ ಹುಂ! ರವಿ ಮನೆಗೆ ಬರುವ ಡಾಕ್ಟರ್ ನೋಡಿ ಬಾಗಿನಿಂದಲೂ ತಾನೂ ಡಾಕ್ಟರಾಗಲು ಹಗಲು ಕನಸು ಕಾಣುತ್ತಿದ್ದಾನೆ ....ಡಾಕ್ಟರ್! ... ಡಾಕ್ಟರಾಗಲೂ ಸಾಧ್ಯವೇ

(ಡಾಕ್ಟರ್, ರಾಮಣ್ಣ, ಸೀತಮ್ಮ ಪ್ರವೇಶ)

ಡಾಕ್ಟರ್— ರಾಧಮ್ಮ, ಈ ಮೀಟರ್ ತೊಳೆದು ತಾ.

(ತೆಗೆದುಕೊಂಡು ನಿರ್ಗಮನ)

ಉಮೆಗೆ ಸ್ವಲ್ಪ ಜ್ವರವಿದೆ. ಸಂಜೆಗೆ ಏನೂ ಇರಲ್ಲ. ಇವತ್ತು ಔಷಧಿ ಬೇರೆ ಕೊಡುತ್ತೀನಿ. ಜತೆಗೆ ಮೂರುಗುಳಿಗೆ ಕೊಡುತ್ತೀನಿ. ಉಮೆಗೆ ನಿಶಕ್ತಿ ಜಾಸ್ತಿ.ಟಾನಿಕ್ ಕರಿಸಿಕೊಡಬೇಕಾಗುತ್ತೆ.

ರಾಮಣ್ಣ— ಅದೆಲ್ಲಾ ಸಂಬಳ ಬಂದಮೇಲೆ ನೋಡಿಕೊಳ್ಳೋಣ. ಸದ್ಯಕ್ಕೆ ಕಾಯಿಲೆ ವಾಸಿಯಾದ್ರೆ ಸಾಕಾಗಿದೆ. ಮಕ್ಕಳ ಜಂಜಾಟವೇ ನನ್ನ ಮೆತ್ತಗೆ ಮಾಡಿದೆ.

ಡಾಕ್ಟರ್— ರಾಧ ಹುಟ್ಟಿದಾಗಲೇ ನಿನಗೆ ಹೇಳಿಲ್ಲವೆ? 'Loop for family planning'. ಆಸ್ಪತ್ರೆಗೆ ಬಂದಾಗಲೆಲ್ಲಾ ಹೇಳಿದೆ. ನಾನೇ ಹೆಣ ಕೊಟ್ಟು ಕೊಡಿಸುತ್ತೀನೆಂದೆ ಅದನ್ನ ನೋಡಿದ ಕೂಡಲೆ ನಾಚಿಕೆಯಿಂದ ಮನೆಗೆ ಓಡಿದೆ. ಮದುವೆಯಾಗಿ ಹದಿನೈದು ವರ್ಷವಾಗಿಲ್ಲ. ಆಗಲೇ ಹೆತ್ತು ವ್ಯಾಕ್ಕಳು. ನಿನಗೆ' ಒಂದೆರಡಾದಾಗ ಗೊತ್ತಾಗಲ್ಲ ನಾಕಾದಾಗ... ಕಾಯಿಲೆ ಬಂದಾಗ.... ಊಟಕ್ಕೆ ಗತಿಯಿಲ್ಲದಾಗ.... ನಿಮ್ಮ್ ತಿಪ್ಪನ್ನ ತಿದ್ದಿಕೊಳ್ಳಲು ಯತ್ನಿಸಿದೆವಿರಿ. ಆದರೆ ಕಾರ್ಯ ಮಿಂಚಿ ಹೋಗಿರುತ್ತೆ. ನಾನು ಹೇಳಿದ್ದಾಗ ಕೇಳಿದ್ದರೆ ಮೂರೇ ಮಕ್ಕಳು. ಹಾಲಿನಂತ ಸಂಸಾರವಾಗು ತ್ತಿತ್ತು. ಈಗ ನಾರದ ಸಂಸಾರವಾಗಿದೆ ಅಷ್ಟೆ.

ರಾಧ— (ಪ್ರವೇಶ) ತೆಗೆದುಕೊಳ್ಳಿ ಸಾರ್. (ಕೊಡುವಳು)

ಡಾಕ್ಟರ್—(ಮೀಟರನ್ನು ಒರೆಸಿ ಸಾರಿ ಕೊಡುವಿ, Boxನಲ್ಲಿತುವನ) ರಾಧ ಮುಖ ನೋಡಿದ್ರೆ ನನಗೆ ಆಯ್ಯೋ ಎನ್ನಿಸುತ್ತೆ ರಾಮಣ್ಣ.

ರಾಮಣ್ಣ— ಡಾಕ್ಟರ್ ಡಾಕ್ಟರ್.... Stop it! ನಾನು ಕೇಳಿ ಕೇಳಿ ಬೆಸತ್ತಿದ್ದೇನೆ ಡಾಕ್ಟರ್. ನನ್ನ ಆಫೀಸಿನಲ್ಲೂ ಇದೇ ಮಾತು. ನನ್ನ ಟೇಬಲ್ ಮೇಲೆ ಹರಡಿರುವ ಫೈಲುಗಳು ನೋಡಿದರೇ... ನನ್ನೇ ನೋಡಿ ನಕ್ಕಂತಾಗುತ್ತೆ. ಒಂದೊಂದು ಫೈಲೂ ನನ್ನ ಮಕ್ಕಳ ಮುಖದಂತೆ ಕಾಣುತ್ತೆ. ಫೈಲುಗಳನ್ನೆಲ್ಲಾ ಹುಡುಕಿ ಬಂದ ಕಾಗದಗಳಿಗೆ ಉತ್ತರ ಹೇಳಬಹುದು. ಆದರೆ ಮಕ್ಕಳ ಮುಖ ನೋಡಿ ಯಾವ ಉತ್ತರ ಕೊಡಲಾರದ ಅಶಕ್ತನಾಗಿದ್ದೇನೆ ಡಾಕ್ಟರ್. ಒಬ್ಬರನ್ನಾದರೂ 10th Standard ತನಕ ಓದಿಸಲಿಲ್ಲ. ವಾಸು ನನ್ನ ಕಂಡ್ರೆ ಸಾಕು, ಉರಿದು ಬೀಳುತ್ತಾನೆ. ಪರೀಕ್ಷೆ ಹಣ ಕಟ್ಟಲು ಹಣ ವಿಲ್ಲದೆ ಇದ್ದರಿಂದ ಅವನು ಅಲ್ಲಿಗೆ ಗೋವಿಂದ ಅನ್ನಬೇಕಾಯಿತು. ಅವನನ್ನೊಬ್ಬನಾದ್ರು ಪರೀಕ್ಷೆ ಕಟ್ಟಿಸಿ pass ಮಾಡಿಸ್ದೆ ಎಳ್ಳಿನಷ್ಟಾದರೂ ಕೆಲಸ ಹುಡುಕಬಹುದಿತ್ತು. ಎಲ್ಲರೂ ನನ್ನ ಕಂಡ್ರೆ ಬೈಯುವವರೇ ವಿನಃ ನನ್ನ ವೇದನೆ ಯಾರಿಗೂ ಅರ್ಥವಾಗಿಲ್ಲ ಡಾಕ್ಟರ್.

ಡಾಕ್ಟರ್— ರಾಮಣ್ಣ, ಈಗ ನನ್ನ ಮಾತು ಅರ್ಥವಾಗಿರಬಹುದು. ರಾಮಣ್ಣ ನಿನಗಂತಲೂ ನನಗೆ ಸಂತಾನದ ಜಾಸ್ತಿ ಇದ್ದರೂ ಕೇವಲ ಎರಡೇ ಮಕ್ಕಳು. ಹತ್ತು ಮಕ್ಕಾದ್ರು ಸಾಕುವ ಚೈತನ್ಯ ನನಗಿರಲಿಲ್ಲವೇ? ನಾವು ದೇಶದ ಸ್ಥಿತಿಗಳನ್ನು ನೋಡಬೇಕು. ಭಾರತದ ಜನ ಸಂಖ್ಯೆ ಹೆಚ್ಚಾಗುತ್ತಿದೆ. ಆಹಾರದ ಅಭಾವ ಎಲ್ಲ ಕಡೆಯಲ್ಲೂ ಕೇಳಿ ಬರುತ್ತಿದೆ. ನವ ಭಂಧವರು ತಿಳಿದೂ ತಿಳಿದೂ ಕುಟುಂಬ ಯೋಜನೆ ಸೇರದೆ ಇದ್ದದ್ದು ದೊಡ್ಡ ತಪ್ಪು. ನೀನು ಮಾಡಿಕೊಂಡ ತಪ್ಪಿಗೋಸ್ಕರ ನಿನ್ನ ಮಡದಿ ಮಕ್ಕಳು ಕಣ್ಣೀರಿಡಬೇಕಾಗಿದೆ.

ಸೀತಮ್ಮ— ಹೌದು ಡಾಕ್ಟರ್. ಮಕ್ಕಳ ಮುಖ ನೋಡುವುದಕ್ಕಿಂತಲೂ ನಾಯಿಯುವುದೇ ಮೇಲು.

ಡಾಕ್ಟರ್— ಕೇಳಿದೆಯಾ ರಾಮಣ್ಣ, ಜೀವನದಲ್ಲಿಯೇ ನಿನ್ನ ಸಂಸಾರವೇ ಜಿಗುಪ್ಸೆ ಹೊಂದಿದೆ. ಅಲ್ಲಾ ರಾಮಣ್ಣ. ಸೀತಮ್ಮ ಮುಖ ಈಗ ನೋಡು. ಗುಳಿ ಬಿದ್ದಿರುವ ಕಣ್ಣುಗಳು....ಕುಕ್ಕ ಗಟ್ಟಿರುವ ಮುಖ..ಸೀತಮ್ಮ ಕೇವಲ ಮಕ್ಕಳನ್ನು ಹೆರುವ ಯಂತ್ರವಾಗಿದ್ದಾಳೆ. ಹೆಣ್ಣು ಅಂದರೆ ಗಂಡಸಿಗೆ ಸಿಕ್ಕ ಕಾಸು ವೆಸ್ತುವೆಂದು ತಿಳಿದು ಕೊಂಡೆಯಾ?

ರಾಮಣ್ಣ— ನಾಕ. ಮಾಡಿ ಡಾಕ್ಟರ್ ನಿಮ್ಮ ಉರೀಲರದ ಮಾತುಗಳು ನನ್ನ ಗಾಯಕ್ಕೆ ಬಿಸಿ ಎಣ್ಣೆ ಹಾಕುತ್ತವೆ. ಈಗ ಏನ ಮಾಡಲಿ ಡಾಕ್ಟರ್? ನೀವೇ ಹೇಳಿ ....ಮಡದಿ ಮಕ್ಕಳಿಗೋಸ್ಕರ ...ನನ್ನದೇ ಹಲ ಸುಖವನ್ನೇ ನೋಡಿಕೆ ಹಗಲೂ ರಾತ್ರಿ ದುಡಿಯುತ್ತಿದ್ದೇನೆ. ಅವರ ಮುಖವನ್ನ ನೋಡ ಲಾದ. ಊಟಕ್ಕೆ ಬಡಿಸುವಾಗ ತೂಕ್ಕ.

ಡಾಕ್ಟರ್— ಈಗಿರುವ ಬುದ್ಧಿ ಮೊದಲೇ ಬಂದಿದ್ದರೆ....

ರಾಮಣ್ಣ— ಡಾಕ್ಟರ್ Please-Stop it.Do not Kill me.

ಸೀತಮ್ಮ— ಆಗಿದ್ದು ಆಗಿಹೋಯಿತ. ನನ್ನ ಸಂಸಾರ ನೋಡಿದ್ರೆ ಎಂಥವರು ಬುದ್ಧಿ ಕಲಿತು ಕುಟ್ಟಿದ ಪಕ್ಕಳಿಗಂತೂ ಸಜ್ಜ ಕೆಲಸ ಮಾಡಲ್ಲುವಂತಿಲ್ಲ.

ರವಿ— (ಆತುರದಿಂದ ಪ್ರವೇಶ) ಅಮ್ಮಾ....ಅಮ್ಮಾ.... ಉಮೆಗೆ ಕ್ಕಾ ಮಂಚದಿಂದ ಕೆಳಗೆ ಬಿದ್ದು ಬಿಟ್ಟಳು....

ಸೀತಮ್ಮ— (ಗಾಬರಿಯಿಂದ) ಮಂಚದಿಂದ ಕೆಳಗೆ ಬಿದ್ದಳೆ. ರವಿ ರಾಮಾ (ಡಾಕ್ಟರ್, ರಾಧ, ಸೀತಮ್ಮ ಳಿಕ್ಕರ ರಿಂದ ನಿರ್ಗಮನ ರವಿ ಹೊರಗಡೆ ಪೋಗುವನು)

ರಾಮಣ್ಣ— (ಸ್ವಗತ ಕಷ್ಟ ಪಡಿಸಿ ಜಿಗುತ್ತಾ) ..ಹೂಂ.... ಸಂಸಾರ ನನ್ನ ಹತ್ತು ಮಕ್ಕಳು. ಮನೆತುಂಬಾ ರೋದಿಯನುಯಂತೆ ....ನಾರದ ಸಂಸಾರವಕ್ಕೆ ಜತೆ ನಾನೂ ತಳುವ ಹೊತ್ತು, ಬಂದಿದೆ.... ಈಗಿನ ಕಾಲಕ್ಕ ಪನೆತುಂಬಾ ಮಕ್ಕಳಿರುವುದಕ್ಕಿಂತ ಮನೆ ತುಂಬಾ ಹಣ ವಿರಬೇಕು. ಎಲ್ಲಿ ನೋಡಿದರೂ ಲಕ್ಷ್ಮಿ ಕಾಂಡವವಾಡುತ್ತಿರಬೇಕು. ಪಕ್ಕಳಿದ್ದಿದ್ದರೆ ಕಡೆಗೆ ಒಂದು ದಕ್ಕತ್ವಾದ್ರು ತೆಗೆದು ಕೊಳ್ಳಬಹುದು... ಇನ್ನೂ ರಾಧಳಾದ್ರು ಮಾದುವೆ? ಅವಳು ಜೀವನದಲ್ಲಿಯೇ ಒಂಟಿಯಾಗಿರಬೇಕೆ? ಕಂಕಣ ಬಲವೇ ಇಲ್ಲವೆ? ಆಯ್ಯೋ ದೇವರೇ...ಇನ್ನು ವಾಸ ...ಅವನೆನ್ನಿಬ್ಬ ಕರವಾರಿ ಜೀವಿ...ಬಂದೆರಡು ನಾವಿರ....ಕಡೆಗೆ ಒಂದೆರಡು ನಾರು ಕೊಟ್ಟೆರೆ...ಊಟ ಲಂಗುಲಗವು ಇಲ್ಲದೆ ದುಡಿದು ಎಲ್ಲರ ಕಷ್ಟಗಳನ್ನು ನಿವಾರಿಸುತ್ತೇನೆ. ಸಂಗಿಯ ವರೆಗೂ ದುಡಿಸುತ್ತೇನೆಂದಾ....ಆದರೆ ಭಗವಂತ.. ನನ್ನ ಬಂದ ಬಾಳೇ ಆಗಿದೆ....(ಜ್ಞಾನೆಸಿಕೊಂಡವನಂತೆ) ಜ್ಞಾ....ಯಕ್ಕೆ ಮಾಡಬಾರದ?....ನನ್ನ LIC ಹಣ ಜೇಗ ಇದೆ ನಾನು ಸತ್ತರೆಂದರಿಗೆ ಬರುವಿಗ ತ್ತೆ. ವಾಸು ಎಲ್ಲಾ ನೀನಿಸಿಕೊಂಡು ಜೋಗ ಬಳ್ಳ. ಅವನ ಹೆಸ್ರುಗುಣದಿಂದಲಾದರೂ ಮನೆ ವಂದಕ್ಕೆ ಬಂದರೆ ಅ ಸಂತೋಷ... ಹಣಕ್ಕೆಷ್ಟಕರ ನನ್ನ ಸಾವೇ ... ಹ್ಹಾ ಹ್ಹಾ... ಯಾರಾಗಬೇಕಾದ್ರೆ? ... ಸಾವು.... ಆದರೂ ಚಿಂತೆಯಿಲ್ಲ... (ನಗುತ್ತಾ) ಎಣ್ಣೆ ಬೆಣ್ಣೆಗಾಲ ಜುಣವ ಉನ್ನ ವಸ್ತ್ರದಯಣವೂ ತೀರಿತ್ತು ಬಂದಿರಬೇಕು. ಯಾವುದಾದರೂ ಬಸ್ಸಿಗೋ ಲಾರಿಗೋ ಸಿಕ್ಕಿಬಿತ್ತಿರಿ... ಕಸ್ಕಿಸ್ಕಿ ವೆಂದು ತಿಳಿದು ಆಗಳಿತ್ತು.... ಹಣ ಬರುತ್ತೆ. ಶ್ರೀ ರಾಮಚಂದ್ರಾ! ನನ್ನೆ ಕರೆಕೋರಿಕೆ.... ನನ್ನ ಸಂಸಾರ ಸುಖವಾಗಿ ಎಂತೆ ಮಾಡು ದೇವಾ. ನನ್ನ ವಂಶವಿನ ಜನ್ಮದಲ್ಲಾದರೂ ಮನುಷ್ಯನನ್ನಾಗಿ ಹುಟ್ಟಿಸಬೇಡ. ಒಂದು ಪಕ್ಷ ಹುಟ್ಟಿಸಿದ ಹೆತ್ತು ಹನ್ನೆರಡು ಮಕ್ಕಳಾಗುವಂತೆ ಆ ಶೀರ್ವದಿಸಬೇಡ ಪಕ್ಕ ಸಂತಾನ ಇಷ್ಟ ಕಿದ್ದರೂ ಪರವಾಗಿಲ್ಲ..... Thank you my God. (ರಾಮಣ್ಣ ನಿರ್ಗಮನ. ಲಂಗಳಿಂದ ಕೃಷ್ಣರಾಲ ಪ್ರವೇಶ ನಂತರ ಡಾಕ್ಟರ್, ಸೀತಮ್ಮ, ರಾಧ ಪ್ರವೇಶ)

ರಾಧ— ಅಮ್ಮಾ, ಅಪ್ಪ ಎಲ್ಲಿ ಹೋಗಿದ್ದಾರೆ? ಹಾಲ್ಸ್ಟೌ, ಅವರ ಒಬ್ಬಿ ಹುಡುಗರಿಗೆಲ್ಲಿಯೇ ಇರುವುದು. ಒಂದೆರಡು ದಿನ ಒಬ್ಬರೇ ಹೋಗಿ ಬರಲಿ ಎಂದು ನಿಜ್ಜಾಂತೆ ನಗು ತ್ತಾರೆ.

ಡಾಕ್ಟರ್— ಇದೆ ನಿಮ್ಮ ಸಾಮಾನ್ಯ ಸೀತಮ್ಮ ಜೀವನವಿಡೀ ಜೀವವಿದ್ದೆ ಮನುಷ್ಯರಿಗೆ ಇತ್ತು ಜೀವನವೇ ಕೊಟ್ಟಿ.

ರಾಧ— ಡಾಕ್ಟರ್ ಬಂದಾಗ ಅಪ್ಪ ಎಂದೂ ಕೊಳಗೆ ಹೋಗಿರಲಿಲ್ಲ.

ಸೀತಮ್ಮ—ನನಗೂ ಅನುಮಾನವಾಗುತ್ತಿದೆ.

(ಮೇರಿಯವಲವ್ಳ ಪ್ರವೇಶ)

ಮೇರಿ—(ಅಳುತ ಎಂದು) ಸೀತಮ್ಮ.... ಸೀತಮ್ಮ—

ಸೀತಮ್ಮ ಬ್ಳಾಇಮಲಮ್ಮ, ಏನು ಗಾಬರಿಯಿಂದ ಬಂದ್ರಿ?

ರಾ —ಅಮ್ಮ....ಅಪ್ಪ ಗಾಬರಿಯಿಂದ ಒಡಿಹೋಗ್ಯನ್ಮ

ಮೇರಿ—ಯಿಂ ಯಾರಿಗೇನಾಗಿತ್ರು?

ಸೀತಮ್ಮ— ಡಾಕ್ಟರ್! (ಅಳುವಿಂದ) ನನ್ನ ಪತಿಯ ನ್ನ ಕಾಪಾಡಿ, ಜೀವದಿಗೆ ಹತ್ತಿರವಿರುವ ಪಕ್ಕಳಿಲ್ಲ ನನ್ನ ವ ತ್ಯೆಯಾಗಿ ನಿಲು ಒಬ್ಬರೂ ಇಲ್ಲ.

ಡಾಕ್ಟರ್— ಧೈರ್ಯ ಪರಿಪಡುತ್ತೀರಾ? ಆತುರವಾಗಿ ಹೋದರೆ ಕೃಷ್ಣ ..ಇಲ್ಲದ ಆಸೆ ನಾವಸರಳ ಆಪ್ತ ಕೊಡುತ್ತೀರಲ್ಲ.

ರಾಧ—ಅಮ್ಮ ನನಗೆ ಭಯವಾಗುತ್ತಿದೆ

(ರಾಮಣ್ಣನ ಪ್ರವೇಶ ಕೊಂಡು ಗಂಭೀರವಾಗಿ)

ವಾಸು—(ಎದೇ ಎಂದ) ಇಂಥ ಬೇಕಾದ ಬಸ್ಸಾ ರೆಂಟು ಬೇಕಾಗಿ ಜೈ? ಮನೆಯಲ್ಲಿ ಕಳಿಸಿ ಫೋಲಿಡೇಲ್ ಕಡಿದರೆ ಸಾಲುವ ಎಲ್ಲಿನೇನಪ್ಪಾ?

ರಾಮಣ್ಣ— ನಾನೂ.....

ವಾಸು— ನಾವೆರಡು ಜಿಡೆ ಯಾಕೆಮಾತ ನಾಡುತ್ತೀದ ವ್ಯ? ನಾವು ಒಡವರಾದ್ರು ಮಾನವರ್ಯಾಗಳಿಗೆಬಡವರಂಗಿಲ್ಲವಿಪ್ಪ. ನೀನು ನಾವು ಪ್ರೀತಿ ಯಂತಾ ಮನಸ್ಸಿದ್ದರೆ ಎಲ್ಲರೂ ಸಮಪ ವಿಹಕಂದು ಕೊಟ್ಟವರೇ ಎಲ್ಲರೂ ಒಂದೇ ದಿನ ಸಾಯಬಹುದಲ್ವೆ?

ರಾಮಣ್ಣ— ಏನಿದು.....ನಾಕು ನಿಲ್ಲಿಸು.... ಕೇಳಲಾರೆ ನಿನ್ನ ಭಾಷಣ.

ವಾಸು— ನಾನ ಭಾಷಣ ಮಾಡುತ್ತಿಲ್ಲ. ಇನ್ನೂ ಸ್ವಿಸ್ಪಿಹೊತ್ತಿಗೆ ಮನೆಯೇ ಸ್ಮಶಾನವಾಗುತ್ತಿತ್ತು.

ಸೀತಮ್ಮ—ಹೇಗೇ ಮಾಡಬಹುದೇ?

ರಾ —ಇನ್ನು, ಹತ್ತ ಜನಮಕ್ಕಳ ನೆನಪೂ ಬರಲಿಲ್ಲವೇ?

ಡಾ ರ್—ರಾಮಣ್ಣ, ಎಂಥಹ ಕೆಲಸಕ್ಕೆ ಕೈ ಯೂ ಕೆ ದ್ರೀ ನಾನು ಕೆಲ ಸಾರಿ ನಿಮಗೆ ಜ್ಞಾಪಕ ಮಾಡಿಕೊಟ್ಟಿದ್ದೇನೆ. ಮನುಷ್ಯ ಭಾವನೆಯಿಂದ ಹೇಳಲಿಕ್ಕೆ. ನಿನ್ನ ವಂಶ ದಿನ ಇಲ್ಲದೆ ಇರಲಿಕ್ಕೆ ಹಾರಿ ಹೊಂದಲಿ ಅಂತಾ ಅಲ್ಲ

ರಾಮಣ್ಣ— ಏನು ಗೊಡಲಿ ಡಾಕ್ಟರ್? ನನ್ನ ಸಕ್ಷರೆ ಇವರ ಜೀವನಕ್ಕೆ ಗಂಡಾಂತರವನ್ನುಂಟಾಗಿಸಿತಾ....

ಸೀತಮ್ಮ— ಎಷ್ಟು ಮಂದಿಗೂ ಉಂಟೆ?

ಹದಿನೈದು

NAVAYUGA 17—11—1966
Registered with the Registrar of News Papers for India under No. R. N. 3546/'67

REGD. No: B. G. 176
LICENCE No. 31
Licensed to Post without Prepayment

ಡಾಕ್ಟರ್—ಹೇಗೆ ಸಾಧ್ಯ? ನೀನು ತರುವನೆಂದು ಔಷಧಿಯು ಸಂಬಳ ಇಲ್ಲದಿದ್ರೆ ಗಂಜಿಗಿಂತ ಗತಿ ಇಲ್ಲದಂತಾಗುತ್ತೆ.

ರಾಮಣ್ಣ— ನಾನು ಹತ್ತರೆ L. I. C. ಹಣ ಬರುತ್ತೆ.

ಡಾಕ್ಟರ್— ಕೂತು ತಿನ್ನುವವಂಗೆ ಕುಡಿಕೆ ಹಣ ಎಷ್ಟು ದಿನ ತಾನೆ ಇರುತ್ತೆ?

ರಾಮಣ್ಣ— ಅದ್ಸರಿ ಡಾಕ್ಟರ್, ನಾನು ಯಾವ officeನಲ್ಲಿ peon ಕೆಲಸಕ್ಕೆ....

ವಾಸು— ಅಪ್ಪಾ, ನಾಳು ನಿಲ್ಲಿಸು.... peon ಆಂತೆ. ಈಗ peon ಕೆಲಸ ಸಿಗಬೇಕಾದರೆ 10th standard pass ಆಗಬೇಕಾಗುತ್ತೆ. ಜನ ಸಂಖ್ಯೆ ಜಾಸ್ತಿ ಆದಂತೆಲ್ಲಾ ಸರ್ಕಾರಿ ಆಫೀಸ್ಸಿಗೆ ಬಂದಂತೆ ಕಾಣುತ್ತೆ. ಕ್ಲರ್ಕ್ ಬಂದಿದ್ದಾರೆ. ನನಗೆ ಸಂಬಳ ಕೊಟ್ಟೇಬಿಡ್ರೀ ಮೈಯಲ್ಲಾ ಜಾಡ್ಯವಮಾನ ಇತ್ತೆ. ಸರ್ಕಾರಿ ಕೆಲಸವಂದ್ರೆ ಆತ್ಮಹತ್ಯೆಗಿಂತಲೂ ಘೋರ!

ರಾಧೆ— ಅವಲ್ಲಾ ನೋಡಿದ್ರೆ ಸಂಸಾರ ಹೇಗೆ ನಡಿಬೇಕಣ್ಣಾ?

ವಾಸು— ಈ ನಡಿಸಾದ ಸಂಸಾರಕ್ಕೆ ಸರ್ಕಾರಿ ಸಂಬಳ ಸಾಕಾಗುತ್ತೆಯೇ? ಸ್ವಂತ ವ್ಯಾಪಾರ ಮಾಡಬೇಕು.

ರಾಮಣ್ಣ— L. I. C ಹಣ ಬಂದ್ರೆ ವ್ಯಾಪಾರಕ್ಕೆ ಅನುಕೂಲವಾಗುತ್ತೆ ಅಂತೀ...

ವಾಸು— ಅಪ್ಪಾ, ನಾನೊಂದು ಹೊಸ ಆಯೋಜನೆ ಯೂಂತ? ನೀನು ಸಲೀಸಾಗಿ ಆಫೀಸಿಗೆ ಹೋಗಿ ಬರುವುದು ನೋಡಿಕೋ. ಉಳಿದವರೆಲ್ಲಾ ಕೆಲ್ಸ ಸಿಗುವಂತೆ ನಾನು ನೋಡಿಕೊಳ್ಳುತ್ತೇನೆ.

ರಾಧೆ— ಎಲ್ಲರಿಗೂ!

ಸೀತಮ್ಮ— ಪ್ರಕಾಶ....ಭರತ....ರಘು ....ಜಗದೀಶ...

ವಾಸು— ಪುಲಿಸ್ಟಾಪ್. ನಿನ್ನ ನುಕ್ಕಳ ಹೆಸರು ಹೇಳುತ್ತಾ ಹೋದ್ರೆ ಡಾಕ್ಟರ್ ಕೂಡ ನಗುತ್ತಾರೆ.

ಡಾಕ್ಟರ್— No no, Vasu.

ವಾಸು— ಪ್ರಕಾಶ, ಭರತ ಪಾನಿಪತ ಗೆರೆ ಕಾರ್ಪೆಟ್ ವಿಲ್ಲಾಗೆ ಸೇರುತ್ತಾರೆ. ಕೇಶವ ಮತ್ತು ರಘು ಇದೇ ಊರಿನಲ್ಲಿ Electric Officeನಲ್ಲಿ Daily wagesನಲ್ಲಿ ಸೇರಿ ತ್ತಾರೆ. ಜಗದೀಶ ವೈದ್ಯಕ್ಕೆ ಮನೆಪಡೆ ನೋಡಿಕೊಂಡರೆ ಸಾಕು.

ರಾಧೆ— ಎಲ್ಲರಿಗೂ ಕೆಲಸ ಕೊಡಿಸಿ



ನೀನೇನು ಮಾಡ್ತೀಯೂ ಅಣ್ಣಾ?

ವಾಸು— ವ್ಯಾಪಾರ... ಗರ್ಮಾ ಗರಮ್ ಬಜ್ಜಿ ಕಾಯಿ... ತಂಡಿಗೆ ಗರಮ್ ...ಹೊಸ ಕಡಲೆ ಕಾಯಿ...

ರವಿ— ನನಗೊಂದು ಹಸ್ತ ವೈಸಾದ್ದ ಕೊಡಪ್ಪಾ. (ಎಲ್ಲರೂ ನಗುವರು)

ರಾಮಣ್ಣ— ಆದರ್ಶಾದರೂ ಹಣ ಬೇಡನೇ ವಾಸು?

ವಾಸು— ತಿಮ್ಮಂದಿರ ಹಣ ಹೇಗೋ ಬರುತ್ತೆ. ಸ್ವಲ್ಪ ದಿನ ಸುಧಾರಿಸಬೇಕು ಅಷ್ಟೇ.

ಡಾಕ್ಟರ್— ನೋಡಿದೆಯೂ ರಾಮಣ್ಣ. ಕೂಡುಸಿಗೆ ಊಟುಗೋಲಿನಂತೆ ಸಂಸಾರಕ್ಕೆ ನೆರವಾದ ವಾಸು.

ವಾಸು— ಅಪ್ಪಾ, ನೀನು ಬಯಸು ದಾದರೆ ರಾಧೆಗೆ ಮುಂಜಿನ ತಿಂಗಳೇ ಮಾಪ್ಪೆ ಮಾಡಿ ಬಿಡ್ತೇನೆ.

ಸೀತಾ— ಮದ್ವೆ!

ರಾಮಣ್ಣ— ರಾಧೆಗೆ ಮದ್ವೆ!

ರವಿ— ಅಕ್ಕಾಂಗೆ ಲಗ್ನ!

ರಾಧೆ— ಅಣ್ಣಾ, ನಿನಗೆ ನನ್ನ ಕಂಡ್ರೆ ಯೂವಾಗಲೂ ತಮಾಷೇನೆ.

ವಾಸು— ಇಲ್ಲ ರಾಧ, ನಿಜವಾಗಲೂ. ಒಂದು ಪೈಸಾ ಖರ್ಚಿಲ್ಲದ ಮದ್ವೆ ಮಾಡ್ತೇನೆ. ಆದರೆ ನೀವು ಮಾತ್ರ ಒಪ್ಪಬೇಕಲ್ಲಾ?

ರಾಮಣ್ಣ— ಹುಡುಗ ಯಾರು?

ಸೀತಮ್ಮ— ಅವನು ನಮ್ಮ ಜಾತಿಯವನೇನೆ?

ವಾಸು— ಹೆಣ್ಣಿಗೆ ಬೇಕಾಗಿರುವುದು ಗಂಡು ಜಾತಿ. ಜಾತಿ ಕಟ್ಟಿಕೊಂಡು ಏನು ಮಾಡುತ್ತೀರಾ? ನೀನು ಜಾತಿನೇ ಬಯಸುತ್ತೀಯಲ್ಲಾ. ಇದುವರೆಗೂ ಯಾ ರಾದ್ರೂ ಬಂದು ರಾಧೆಯನ್ನು ಕೇಳಿದ್ರಾ? ಲಕ್ಷ್ಮಿ ಒಂದಿದ್ದರೆ ನೂರಾಗಳು ತಾನಾಗಿಯೇ ಬರುತ್ತಿದ್ದವು.

ರಾಮಣ್ಣ— ಜಾತಿ ಬಟ್ಟು ಮದುವೆ ಮಾಡಿದ್ರೆ ನಿವಾಜ ಒಪ್ಪುತ್ತದೆಯೇ

ವಾಸು— ಹುಂ! ನಿವಾಜ!!....ಸವಾಜಕ್ಕೆ...ದೇಶಕ್ಕೆ ಹೆದುರುವ ನೀನಾಗಿದ್ದರೆ ಹತ್ತು ಮಕ್ಕಳನ್ನು ಪಡೆಯುತ್ತಿರಲಿಲ್ಲ. ರೇಷನಿಗೆ ಅನುಕೂಲವಾಗಲೀ ಅಂತಾ....

ಡಾಕ್ಟರ್— ಮಕ್ಕಳು ಜಾಸ್ತಿ ಇದ್ರೆ ಅನುಕೂಲ ನೋಡಿ. ಪ್ರತಿಯೊಂದು ಸೊಸ್ಯೆಟಿಗೂ ಕ್ಯೂ ನಿಲ್ಲುವುದಕ್ಕೆ.

ರಾಮಣ್ಣ— ಡಾಕ್ಟರ್, ರಾಧೆಯು ಮದ್ವೆ ವಿಚಾರ.

ಡಾಕ್ಟರ್— ನಿಮ್ಮ ಸಂಸಾರಕ್ಕೋ ಸ್ಥಿರವಾಗಿ ಕಂಕಣತೊಟ್ಟು ನಿಂತಿರುವಾಗ ನಾನು ಹೇಳುವುದು ಏನಿದೆ ರಾಮಣ್ಣಾ?

ರಾಮಣ್ಣ— ರಾಧ, ನೀನೇನು ಹೇಳುತ್ತೀಯಮ್ಮಾ?

ರಾಧೆ— ಅಪ್ಪಾ, ಇನ್ನು ಎಷ್ಟು ದಿನಾ ಅಂತಾ ನಿಮಗೆ ಕಷ್ಟ ಕೊಡಲಿ? ಬಡವರಂದ ನಾವು....ಹೆಣ್ಣು ಮದುವೆಯಾಗ ಬೇಕಾದ್ದು ಗಂಡಾದ್ರೆ ಸಾಕಪ್ಪ. ವಾಸಣ್ಣ ನನ್ನ ವಿಷಯದಲ್ಲಿ ಎಂದೂ ಮೋಸ ಮಾಡಲ್ಲ ಅಂತಾ ಸಂಪೂರ್ಣ ನಂಬಿಕೆ ನನಗಿದೆ.

ಸೀತಮ್ಮ— ಏನು ರಾಧ, ಪರಜಾತಿಯವನ್ನ ಲಗ್ನವಾಗುತ್ತೀಯೂ?

ರಾಧೆ— ಅಮ್ಮಾ ಜಾತಿ ನೋಡುತ್ತಾ ಕುಳಿತರೆ ನನಗೆ ಲಗ್ನವಾಗಲ್ಲ. ನೀನು ಅಳುವುದು ತಪ್ಪಲ್ಲ.

ಸೀತಮ್ಮ— ಏನ್ರಿ? ನೀವೂ ಸುಮ್ಮನಿದಿರಲ್ಲ.

ವಾಸು— ಏನಪ್ಪಾ, ನಾಳೆ ನರನನ್ನು ಕರೆ ತರಲಿ?

ರಾಮಣ್ಣ— ದೇವರಿಚ್ಛೆ ಜಬ್ದಂತಾಗಲಿ. ಹಾಗೆ ಮಾಡು ವಾಸು.

ಸೀತಮ್ಮ— ನೀನೆಲ್ಲಾ ಒಂದಾಗಿಂತಾಗಿದ್ದನ್ನ ನೋಡಿ ಯಾರು ಕೇಳಿತ್ತಾರೆ? ಆಗಲೀ...ಅಂತೂ ಮದುವೆಯಾದ್ರೆ ಅದೇ ಸಂತೋಷ.

ವೇರಿ— ರಾಮಣ್ಣನವರೇ?

ರಾಮಣ್ಣ— ಅಣೀ, ನಮ್ಮ ಮಾತಿನಲ್ಲಿ ನಿಮ್ಮನ್ನು ನುರೆತೇ ಬಿಟ್ಟೆ ಕಮಲಮ್ಮ. ನೀನು ಬೇಳಗಿಸಿತ್ತು?

ವೇರಿ— ನಾನು ಈ ರೀತಿ ಹೇಳಿತ್ತೇನೆಂತಾ ತಪ್ಪು ತಿಳಿದು ಕೊಳ್ಳಬೇಡಿ. ನನಗೆ ಮಕ್ಕಳಿಲ್ಲ ಎನ್ನುವುದು ತಮಗೆ ತಿಳಿದ ವಿಚಾರ. ರವಿಶಂಕ್ರ ನನಗೆ ತುಂಬಾ ಪ್ರೀತಿ. ಅವನು ಸಹ ಡಾಕ್ಟರಾಗ ಬೇಕೆಂದು ಆಸೆಪಡುತ್ತಿದ್ದಾನೆ. ನೀವು ಒಪ್ಪುವುದಾದರೆ ಡಾಕ್ಟರ್ ತನಕ ಓದಿಸುತ್ತೇನೆ.

ರವಿ— ಅಮ್ಮಾ, ನಾನು ಮೇರಿ ಮನೆಗೆ ಹೋಗುತ್ತೇನೆಮ್ಮಾ.

ಸೀತಮ್ಮ— ಅವರು ಮಾಂಸ ತಿನ್ನುತ್ತಾರೋ.

ವೇರಿ— ಇಂದಿನಿಂದಲೇ ಬಿಟ್ಟೆ ಅಂತಾ ತಿಳಿಯಿರಿ. ಎಲ್ಲಾ ನಿಮ್ಮ ಮಗನಿಗೋಸ್ಕರ ತ್ಯಾಗಮಾಡುತ್ತೇನೆ. ನನ್ನ ಬರಿದಾದ ಮನೆಯನ್ನು ತುಂಬುವಂತೆ ಮಾಡಬೇಕಮ್ಮ.

ಸೀತಮ್ಮ— ಎಷ್ಟೇ ಮಕ್ಕಳಾದ್ರು ತಾಯಿಗೆ ಭಾರವೇ?

ವಾಸು— ಅಮ್ಮಾ, ಹೆತ್ತು ಮಕ್ಕಳು ಸಾಲದೆ? (ನಗು)

ಮೇರಿ— ಆಗಲ್ಲಾ ಸೀತಮ್ಮ. ಹತ್ತ ಮಕ್ಕಳಲ್ಲಿ ಒಬ್ಬರು ಕಡಮೆಯಾದ್ರೆ ಅಂತಾ ತೊಂದರೆಯೂಗಲ್ಲ.

ರಾಮಣ್ಣ— ಲೇ ಸೀತಾ, ಕಮಲಮ್ಮ ಹೇಳುತ್ತಿರುವುದು ನಿಜ ಕಣೇ. ರವಿಯ ಭವಿಷ್ಯವಾದ್ರು ಸರಿಹೋಗುತ್ತೆ. ಕಮಲಮ್ಮ ರವಿಯನ್ನು ಸಂತೋಷದಿಂದ ಕರೆದು ಕೊಂಡು ಹೋಗಮ್ಮ.

ಮೇರಿ— ಎಲ್ಲಾ ವಾಸುವಿನಿಚ್ಛೆದಂತಾಯಿತು. Thank you my god.

ವಾಸು— ರವಿ, ಮೇರಿ ಮನೆಗೆ ಹೋಗುತ್ತಿಯೂ?

ರವಿ— ಹುಂನಣ್ಣಾ, ಕಮಲಮ್ಮನ ಜತೆ ದಿನಾ ಕಾರ್ಮೆಂಟಿಗೆ ಹೋಗುತ್ತೇನೆ. ನಾನು ಡಾಕ್ಟರ್ ಆಗುತ್ತೇನೆ.

ವಾಸು— (ಸಂತೋಷದಿಂದ) ಆಗಪ್ಪಾ ಆಗು. ನಮ್ಮ ವಂಶಕ್ಕೆ ಕೀರ್ತಿತರುವಂಥವನಾದರೆ ಊರು ತಾನೆ ಬೇಡ ಅಂತಾರೆ. ಆದರೆ ನೀನು ಗಹ ಚಿಪ್ರನಂತೆ ಹತ್ತು ವಕ್ಕಳನ್ನ ನೋಡಿಕೊಳ್ಳಬೇಡ.

ರವಿ— ಅಣ್ಣಾ, ಜಪ್ಪನಷ್ಟು ಮಟ್ಟಾಳನೇ ನಾನು! ನಾನು ಡಾಕ್ಟರ್.

ರಾಧೆ ಏನಂತೆ ತುಂಟಾ. ಅಷ್ಟಂಗೆ ಬೈಯುವಂತಾದೆಯೂ?

ಡಾಕ್ಟರ್— ರಾಮಣ್ಣಾ, ನಾನು ಬರುತ್ತೇನೆ. ನಿನ್ನ ಸಂಸಾರ ಶ್ವಲ್ಪವಮಟ್ಟಿಗೆ ಸುಧಾರಿಸಿತು. ನನಗೂ ಸಂತೋಷ. ಉಮಗೆ ಔಷಧಿಗುಳಿಗೆಕೊಡುತ್ತೇನೆಬರುತ್ತೀಯಾ?

ರಾಮಣ್ಣ— ನಡಿಯಿರಿ ಡಾಕ್ಟರ್, ವಾಸುವಿನಿಂದ ತನಕ ನನಗೇನೂ ಭಯ ಸಿಲ್ಲ. ರಾಧಿ, ಸೀತ ತಂದ. ಕೊಡಮ್ಮಾ.

ರಾಧೆ ಇಗೋ ತಂದೆ (ಒಳಗಡೆ ಹೋಗಿ ಸೀತ ತರುವಳು. ಆ ನಂತರ ಡಾಕ್ಟರ್ ಮತ್ತು ರಾಮಣ್ಣನ ನಿರ್ಗಮನ)

ಮೇರಿ— ರವಿ, ನಾವೂ ಹೋಗೋಣವೇ

ರವಿ—Alright mother

ರಾಧೆ— ಮುಂದಿನವಾರ ಗಣೇಶ ಹಬ್ಬವಿದೆ. ಮೂಡಿ ಕಳಿಸುತ್ತೇವೆ.

ವೇರಿ —ಹಾಗೇ ಆಗಲಿ. ನಾನು ಬರುತ್ತೇನೆ ಸೀತಮ್ಮ.

ಸೀತಮ್ಮ— ಆಗಲಿ ಕಮಲಮ್ಮ.

ಮೇರಿ— ರವಿ ನಾಳೆಯಿಂದ ಕಾರ್ ಟೈಂಟಿಗೆ ಬರಬೇಕು.

ರವಿ— Yes ಮೇಡಂ.

[ರವಿ ಟಾ—ಟಾ ಮಾಡುವನು. ಮೇರಿ ನಿರ್ಗಮನ. ಸಂಜೆ ಹೊತ್ತು ಮರುದಿನ]

"ಸಂಪೂರ್ಣಂ"

ಸೂಚನೆ— ಈ ನಾಟಕವನ್ನು ಅಭಿನಯಿಸಲು ಇಚ್ಛೆವುಳ್ಳವರು ಲೇಖಕ ಸಂಭಾವನೆ ಐದು ರೂಪಾಯಿಗಳನ್ನು ಸಲ್ಲಿಸಿ ಅನುಮತಿ ಪತ್ರ ಪಡೆಯಬೇಕು. ವಿಳಾಸ:—ಪಿ. ಜೆ. ಪರಮೇಶ್ವರಪ್ಪ ಹವರ್ ಹೌಸ್, ಎಂ. ಎಸ್. ಇ. ಬಿ., ರಾಯ್ಚೂರು)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
O. S. No. 468/1966.

ಪಾರ್ವತಿ ಅಮ್ಮ — ವಾದಿ
ಮಜಿ ತಿಂಮಣ್ಣ ಭಟ್ಟ ಕೂಡ—ಪ್ರತಿವಾದಿರು

ನೀಲಗ್ರತಿವಾದಿ ಮಜಿ ತಿಂಮಣ್ಣಭಟ್ಟ ಶಂಕರಭಟ್ಟರಮಗ್ಗ ಬಂಟ್ವಾಳ ತಾಲೂಕು ಪೇರಂಬ ಗ್ರಾಮ ...ಇವರಿಗೆ ಕೋರ್ಟ ಸಮ್ಮಂ ಪ್ರಕಾರ ತಿಳಿಸುವುದೇನೆಂದರೆ, —

ವಾದಿಯು ಜೀವನಾಂಶದ ಬಗೆ ನೀವು ಕೂಡ ೩ ಜನರ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. ೩—೧೨—೬೬ನೇ ಬುಧ್ವಾರ ವುದರಿಂದ ಆದ್ದ ನಿಂಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಅದ್ದ, ದಿನ್ನ ಮುಜ್ಜಾರು ಕೋರ್ಟು ಮುಂದೆ ನೀವು ಸ್ವತಃವ ವಕೀಲರಿದ್ವಾರಾ ಹಾಜರಾಗಿ ಉದ್ದರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾ ದೀತು ಎಂತ ಈ ಮೂಲಕ ತಿಳಿಸೋಣಾಗಿದೆ.

(Sd) C. S. Shastry
Vakil for Piff
ಪುತ್ತೂರು, ತಾ. ೩—೧೧—೬೬.

Edited, Printed & Published by K. H. Shetty at the Navayuga Press, Udipi, S. India.

నవయుగ

24—11—1966



ಕಥಾ ಪ್ರಪಂಚ

ಉಪಜಯ

ಬರೆದವರು
ಶ್ರೀಮತಿ ಯಶೋದಾ ಎನ್. ಚಿನ್ನಿ.

ಗೋಪೀನಾಥ ಕಣ್ಣೆವೆಗಳನ್ನು ಬಲವಾಗಿ ಮುಚ್ಚಿಕೊಂಡು ಹತ್ತಿರ ಸುಳಿಯದ ನಿದ್ದೆಗಾಗಿ ಪರಿತಪಿಸುತ್ತಿದ್ದ. ಆದರೆ ಮುಗಿಯದ ಯೋಚನೆಗಳು ಅವನ ಮಿದುಳನ್ನು ಚುಚ್ಚಿ ಚುಚ್ಚಿ ಎಚ್ಚರಗೊಳಿಸುತ್ತಿದ್ದವು. ಎಷ್ಟು ಹೊರಳಾಡಿದರೂ ನಿದ್ದೆಯು ಸುಳಿವಿಲ್ಲ.

ರೂಪಲತಾ!

ತನ್ನ ಬಾಳನ್ನು ಬೆಳಗ ಬಲ್ಲವಳೆಂದು ನಂಬಿ ಬಯಸಿ ಕೈ ಹಿಡಿದ ಹುಡುಗಿ! ಹಿರಿಯರೆಲ್ಲರ ವಿರೋಧವನ್ನೂ ಅಲಕ್ಷಿಸಿ ಅವಳಿಗಾಗಿ ತಂದೆ, ತಾಯಿ, ಬಂಧುಬಾಂಧವರೆಲ್ಲರನ್ನೂ ತೊರೆದು ಸಂಸಾರ ಹೂಡಿದ ಮೊದಲ ದಿನಗಳು! ರೂಪಾಳ ಜತೆಯಲ್ಲಿ ಸಾವಿರವನ್ನು ಸಂತೋಷದಿಂದ ಸ್ವಾಗತಿಸುವುದು ಸಾಧ್ಯ ಎಂಬ ದೃಢ ನಂಬಿಕೆಯನ್ನಿರಿಸಿ ಹೆಜ್ಜೆಯಿಡುತ್ತಿದ್ದ ದಿನಗಳು! ಆಹ್! ಎಷ್ಟೊಂದು ಸುಂದರ ಸವಿ ನೆನಪು!

ಅನಾಥೆ, ಬಡವೆ ರೂಪಾ ಗೋಪೀನಾಥನಿಗೆ ಒಲಿದು ಬಂದ ಭಾಗ್ಯ ದೇವತೆ!

ಆದರೆ... ರೂಪಾ.....ಇಂದಿಲ್ಲ. ಇನ್ನಿಲ್ಲ. ಆಯ್ಯೋ...

ಕೇವಲ ಇಪ್ಪತ್ತೈದು ವರ್ಷಗಳ ಜೀವನದಲ್ಲೇ ವೈರಾಗ್ಯ ತಳೆದು ಬೇಸತ್ತು ಸಾವನ್ನಪ್ಪಿದ ಪ್ರೀತಿಯ ಅರ್ಧಾಂಗಿ! ಎಂತಹ ಸಾವು! ಅತ್ಮಹತ್ಯೆ!

"ರೂಪಾ! ನನ್ನೊಬ್ಬನ ಸಂಬಳದಿಂದ ದಿನ ದೂಡುವಾಗ ಬಡತನದ ಕಷ್ಟಗಳನ್ನೆಲ್ಲ ಸಹಿಸಬೇಕಾಗುತ್ತೆ." ಎಂದು ಹಿಂದೆ ಗೋಪಿನಾಥ ನುಡಿದಿದ್ದ.

"ಗೋಪೀ! ನೀನು ನಿಜವಾಗಿಯೂ ನನ್ನನ್ನು ಹೀಗೆಯೇ ಪ್ರೀತಿಸುತ್ತಿದ್ದರೆ ನಾನು ಯಾವ ಸಂಕಷ್ಟಗಳನ್ನೂ ಸಂತೋಷದಿಂದ ಸಹಿಸಿಕೊಳ್ಳಬಲ್ಲೆ." ನಗುತ್ತಾ ನುಡಿದ್ದಿದಳು ರೂಪಾ.

ಆರು ವರ್ಷಗಳ ಹಿಂದೆ ಇದೇ ಮನೆಯಲ್ಲಿ ಸಂಸಾರ ಹೂಡಿದ ಮೊದಲ ದಿನಗಳಲ್ಲಿ ಆಡಿದ ಮಾತುಗಳು ಇಂದು ಹೃದಯವನ್ನೇ ಇರಿದು ಗಾಸಿಗೊಳಿಸುತ್ತಲಿವೆ. ಹಾಗಾದರೆ... ಕಾನು ರೂಪಾಳನ್ನು ಪ್ರೀತಿಯಿಂದ ನೋಡಿಕೊಳ್ಳಲಿಲ್ಲವೇ?

ಪ್ರೀತಿಯಿಂದಲೇ ಕರೆತಂದಿದ್ದೆ.

ಪ್ರೀತಿ! ಅಹ್ಹಹ್ಹ! ಸ್ವಾರ್ಥ! ಹುಚ್ಚಾ! ಸ್ವಾರ್ಥ!

ಗೋಪೀನಾಥ ಬೆದರಿದ. ತನ್ನನ್ನು ಯಾರೋ ಅಣಕಿಸುತ್ತಿರುವರೆಂದು ಬೆಚ್ಚಿಬಿದ್ದ. ರೂಪಸಿಯಾದ ತುಂಬು ತಾರುಣ್ಯದ ಬೆಡಗಿ ತನ್ನವಳಾಗುವ ಸಂಭ್ರಮದಲ್ಲಿ ತನ್ನವರೆಲ್ಲರನ್ನೂ ಮರೆತು ಮನೆ ಮಾಡಿದ ಅವನಲ್ಲಿ ಪ್ರೀತಿಗಿಂತಲೂ ಹೆಚ್ಚಿನ ಸ್ವಾರ್ಥವೇ ಮನೆ ಮಾಡಿತ್ತಲ್ಲವೇ?

ಆದರೂ... ರೂಪಾಳನ್ನಾದರೂ ಕೊನೆಯವರೆಗೆ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದರೆ? ಆದೂ ಸಾಧ್ಯವಾಗಲಿಲ್ಲ.

ತನ್ನನ್ನೇ ನಂಬಿ ಬಂದ ಹೆಣ್ಣಿಗೆದ್ರೋಹ! ಆಕೆಯನ್ನು ತಾನು ಮೋಸ ಗೊಳಿಸಿದೆ. ಇಲ್ಲವಾದರೆ ನಗುನಗುತ್ತಾ ಉತ್ಸಾಹದಿಂದ ದಿಟ್ಟತನದಿಂದ ಹೆಜ್ಜೆಯಿಡುತ್ತಿದ್ದ ಆಕೆ ಸಾವನ್ನಪ್ಪುತ್ತಿದ್ದಳೇ?

ಇದಕ್ಕಿಂತಲೂ ಹೆಚ್ಚಿನ ಅನ್ಯಾಯ ಜಗತ್ತಿನಲ್ಲಿ ಬೇರೆ ಇದೆಯೇನು?

ಗೋಪೀನಾಥ ಪುನಃ ಹೊರಳಾಡಿದ.

ವಿಧುಚ್ಛಕ್ತಿಯ ಬೆಳಕಿನಲ್ಲಿ ಜತೆಯಾಗಿ ತೆಗೆಸಿದ ತಮ್ಮಿಬ್ಬರ 'ಫೋಟೊ' ರಾರಾಜಿಸುತ್ತಿತ್ತು.

ರೂಪಲತಾ!

ಎಷ್ಟೊಂದು ಮುದ್ದಾದ ಹೆಸರು! ಹೆಸರಿಗಿಂತಲೂ ಸುಂದರವಾದ ರೂಪರಾಶಿ. ನೋಡಿದಾಗಲೆಲ್ಲ ಇನ್ನೂ ನೋಡಬೇಕೆನಿಸುವಂತಹ ಆಕರ್ಷಕ ಸೌಂದರ್ಯ, ಗೋಪೀನಾಥನನ್ನು ಸೆಳೆದುದರಲ್ಲಿ ಆಶ್ಚರ್ಯವೇನಿರಲಿಲ್ಲ.

ಆದರೆ.... ವಿಧಿಯ ಕ್ರೂರ ಆಣಕದಿದಿರು ಅವರ ಸುಂದರ ಕನಸುಗಳೆಲ್ಲವೂ ಭಗ್ನವಾದುವು ಇಲ್ಲವಾದರೆ ರೂಪಾ ಇಂದು ನಗುತ್ತ ಬಳಿಯಲ್ಲೇ ಕುಳಿತಿರುತ್ತಿದ್ದಳಲ್ಲವೇ?

ಗೋಪೀನಾಥನಿಗೆ ಹಿರಿಯರ ಆಸ್ತಿ, ಸಂಪತ್ತು ತಕ್ಕಷ್ಟಿದ್ದುದರಿಂದಲೂ ಅವನಿಗಿಂತ ಹಿರಿಯರೆಲ್ಲರೂ ಮನೆಯ ವ್ಯವಸ್ಥೆಗಳನ್ನೆಲ್ಲ ನೋಡಿಕೊಳ್ಳುತ್ತಿದ್ದುದರಿಂದಲೂ ತೊಂದರೆ, ತಾಪತ್ರಯಗಳೆಂದರೇನೆಂಬುದು ತಿಳಿದಿರಲಿಲ್ಲ. ಅವನ ದೃಷ್ಟಿಯಲ್ಲಿ ಜೀವನವೆಂದರೆ ಸುಂದರವಾದ ಹೂವಿನ ಹಾಸಿಗೆ. ಅದರಲ್ಲಿ ಯಾವ ಏರುಪೇರುಗಳೂ ಇಲ್ಲವೇ ಇಲ್ಲ.

ಆ ಸುಂದರ ಕನಸಿನ ಲೋಕದಲ್ಲಿ ತೇಲಾಡುತ್ತಿರುವಂತೆಯೇ ಅವನು ರೂಪಾಳ ಕೈಹಿಡಿದ. ಹಿರಿಯರೆಲ್ಲರ ಉಗ್ರ ಕೋಪಕ್ಕೆ ಒಳಗಾಗಿ ಬೇರೆ ಮನೆ ಹೂಡಿದ.

ಮಾದುವೆಯಾಗಿ ನಾಲ್ಕೈದು ತಿಂಗಳುಗಳ ವರೆಗೆ ಮಾತ್ರ ಅವನು ಬಯಸಿದ ಸುಖವಾದ ಕನಸುಗಳಲ್ಲದ ಬದುಕೇ ಅವನ ಪಾಲಿಗೆ ಒದಗಿತ್ತು.

ಆ ಮೇಲೆ, ರೂಪಾ ತಾಯಿಯಾಗುವ ಲಕ್ಷಣಗಳು ತೋರಿ ಬಂದವು. ಹಲ ಕೆಲವು ತೊಂದರೆ, ತಾಪತ್ರಯಗಳು ಅದರೊಂದಿಗೇ ಕಂಡು ಬಂದರೂ ತಮ್ಮ ಪುಟ್ಟ ಸಂಸಾರಕ್ಕೆ ತಮ್ಮ ಪ್ರೇಮದ ಕಂದನ ನಿರೀಕ್ಷೆ ಸಂತೋಷದಾಯಕವಾಗಿಯೇ ತೋರಿತ್ತು. ಹೊಸ ಉತ್ಸಾಹವನ್ನೇ ಕೊಟ್ಟಿತ್ತು. ಅದರೂ ಆ ಉತ್ಸಾಹ, ಸಂತೋಷಗಳೊಂದಿಗೇ ಹಲ ಕೆಲವು ಸಂಸಾರ ತಾಪತ್ರಯಗಳೂ ಸೇರಿಕೊಂಡು ಕಿರುಕುಳವನ್ನು ಕೊಡಲಾರಂಭಿಸಿದುವು. ಆಗಲೇ ಗೋಪೀನಾಥನಿಗೆ ತೋರಿತು:

"ಜೀವನ ಬರಿಯ ಹೂವಿನ ಹಾಸಿಗೆಯಲ್ಲ" ಎಂದ.

ರೂಪಾಳಂತೂ ಹುಟ್ಟಲಿರುವ ಮಗುವಿನ ಸ್ವಾಗತದ ಸಿದ್ಧತೆಯಲ್ಲಿ ಬೇರೆ ಯಾವ ಸಮಸ್ಯೆಗಳ ಗೊಂದಲವನ್ನೂ ಯೋಚಿಸುವ ಸ್ಥಿತಿಯಲ್ಲಿರಲಿಲ್ಲ.

ಗೋಪೀನಾಥನಿಗಾದರೋ ಸಿಗುವ ಸಂಬಳ ಸಂಸಾರವನ್ನು ಅಚ್ಚುಕಟ್ಟಾಗಿ ಮಿತವ್ಯಯದಿಂದ ಸಾಗಿಸಲು ಸಾಕಾಗುತ್ತಿತ್ತಲ್ಲದೆ ಧಾರಾಳವಾಗಿ ವೆಚ್ಚ ಮಾಡಲು ಸಾಧ್ಯವಿರಲಿಲ್ಲ. ಅದರೆ ಆತ ಚಿಕ್ಕಂದಿನಿಂದಲೂ ಶ್ರೀಮಂತ ಕುಟುಂಬದ ಸುಖವಾದ ಸಪ್ಪತ್ತಿಕೆಯಲ್ಲಿ ಹೊರಳಾಡಿ ಬೆಳೆದವ. ಆರ್ಥಿಕ ಅಡಚಣೆಯೆಂದರೇನೆಂದೂ ತಿಳಿಯದವ. ಒಮ್ಮೆಯೇ ಸಂಸಾರದ ನೊಗ ಹೆಗಲನ್ನೇರಿದಾಗ ತಾಪತ್ರಯಗಳೆ ಒಂದೊಂದೇ ಮೆಟ್ಟಲನ್ನೇರಿ ತೊಡಗಿದಾಗ ಸ್ವಲ್ಪ ಹೆದರಿದನೆಂದೇ ಹೇಳಬಹುದು.

ಆದರೂ....ತನ್ನನ್ನೇ ನಂಬಿ ಬಂದ ಹೆಣ್ಣಿದಿರು ತನ್ನ ದುರ್ಬಲತೆಯನ್ನು ತೋರಿಸಿಕೊಳ್ಳಲಾರದವನಾಗಿ ಒಳಗಿಂದೊಳಗೇ ಮಿಡುಕುತ್ತಿದ್ದ.

ಅಷ್ಟರಲ್ಲೇ, ರೂಪಾಳಿಗೆ ಏಳು ತಿಂಗಳು ತುಂಬುವಷ್ಟರಲ್ಲೇ, ಗರ್ಭಪಾತವಾಯಿತು. ರೂಪಾ ತನ್ನ ಸುಂದರ ಕನಸು ಒಡೆದು ನುಚ್ಚು ನೂರಾದ ದನ್ನು ನೋಡಿ ಕಣ್ಣೀರ್ಗರೆದಳು. ಬಾನಂತಿತನದ ನಿಶ್ಯಕ್ತಿಯೊಂದಿಗೆ ಸೇರಿದ ಮನೋವೇದನೆ ಅವಳನ್ನು ಇನ್ನಿಲ್ಲದ ದುರ್ಬಲಳನ್ನಾಗಿ ಮಾಡಿತು.

ಗೋಪೀನಾಥ ದಿಗ್ಭ್ರಮೆಗೊಂಡ.

"ಜೀವನವೆಂದರೆ ಇಷ್ಟೇ ಏನು? ಸುಖ ಸಂತೋಷಕ್ಕಿಂತಲೂ ಹೆಚ್ಚಿನ ಸಾವಿನೋವು, ಕಷ್ಟ ಸಂಕಟ!'

ರೂಪಾಳದು ಮೊದಲಿನಿಂದಲೂ ಸೂಕ್ಷ್ಮವಾದ ದೇಹಪ್ರಕೃತಿ. ಅದಕ್ಕೆ ತಕ್ಕ ಕೋಮಲ ಮನಂ ಮೊದಲ ಬಾರಿಯ ಆಶಾ ಗೋಪುರ ಕುಸಿದುಬಿದ್ದು, ಅಸೆ ನಿರಾಸೆಯಾದಾಗ ಆಕೆ ಬಳಲಿ ಬೆಂಡಾದಳು. ದೇಹದ ಯಾತನೆಯೊಂದಿಗೆ ಮನಸಿಕ ನೆಮ್ಮದಿಯೂ ಕದಡಿ ಆಕೆ ಇನ್ನಷ್ಟು ಸೊರಗಿದಳು.

ಆಳಿಗೆ ಟಾನಿಕ್ಕು, ಹಾಲು, ಹಣ್ಣು ಔಷಧಿ ಎಂಬೆಲ್ಲ ವೆಚ್ಚಗಳು ಬೆಳೆದು ಗೋಪಿನಾಥನ ಆರ್ಥಿಕ ತೊಂದರೆಯನ್ನು ಇನ್ನಷ್ಟು ದೃಢಗೊಳಿಸಿತು. ಗೋಪೀನಾಥ ಒಳಗಿಂದೊಳಗೇ ಧೈರ್ಯ ಗೆಟ್ಟರೂ ಮೊದಲೇ ನೋತು ಸೊರಗಿದ ರೂಪಾಳಿದಿರು ಅದನ್ನು ತೋರಿಸಿಕೊಳ್ಳುವಂತಿರಲಿಲ್ಲ.

ಉತ್ಸಾಹ, ನಗು, ಸಂತೋಷ ತುಂಬಿದ ವಾತಾವರಣ ಕೆಲವೇ ತಿಂಗಳುಗಳೊಳಗೆ ನೀರಸ, ಸಪ್ಪೆಯೂಗಿ ಬೇಸರ ಬರಿಸುವಂತಾಯಿತು.

ಬದುಕಿನ ಚಕ್ರ ತಿರುಗುತ್ತಲೇ ಇತ್ತು. ದಿನೆಗಳುರುಳುತ್ತಲೇ ಇದ್ದವು. ರೂಪಾ ಪುನಃ ಬಸುರಿಯಾದಳು; ಈ ಬಾರಿ ಯಾವ ಉತ್ಸಾಹವನ್ನೂ ಇಬ್ಬರೂ ತೋರ್ಪಡಿಸಿಕೊಳ್ಳಲಿಲ್ಲವಾದರೂ ಒಳಗಿಂದೊಳಗೇ ಇನ್ನಾದರೂ ತಾವು ನಗುವ ದಿನ ಬಂದೀತೆಂಬ ಆಶಾಕಿರಣ ಉದಿಸಿತ್ತು.

ಆಲ್ಲದೆ ಈ ಸಲ ಗೋಪೀನಾಥ ಮೊದಲಿನಂದಲೇ ಡಾಕ್ಟರರ ಆಶ್ರಯ ಪಡೆದ ರೂಪಾಳಿಗಾಗಿ ಹಲವು ಟಾನಿಕ್ಕುಗಳನ್ನೆಲ್ಲ ತರಿಸಿದ. ಹೇಗಾದರೂ ಮಗು ಬದುಕಲಿ, ಸುಖ ಪ್ರಸವವಾಗಲಿ ಎಂಬುದೊಂದೇ ಮುಖ್ಯವೆನಿಸಿದುದರಿಂದ ಆರ್ಥಿಕ

(ಹಿನ್ನೆಲೆಯಿಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಫೋನ್:177 ಉಡುಪಿ, ದ. ಕ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್. ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವೈಭವಾರಿಣಿ ಯಾರು?	1=00
ಹೆಂಡ್ತಿ ಗಂಡನಾದದೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0-50
ಅತ್ಯಾಂಗದೆ	0=60

ಪುಸ್ತಕಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ನಲ್ಮತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ರಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅರ್ಧಯಮಿಕ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ಫ್ಲಯಮಿಶ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸಂಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಅಥವಾ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾದಾರಿಕೆಯನ್ನಾಗಲೀ ಜಾಹೀರಾತಿನ ಸೊಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:



ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಜಕೊಸ್ಲೊವಾಕಿಯಾವನ್ನು ಸಂದರ್ಶಿಸಿದಾಗ, ಫಾರಿನ್ ಲೇಂಡ್ ಫ್ರಂಟ್‌ನ ನೇತೃತ್ವದ ಕೌನ್ಸಿಲಿನ ಸದಸ್ಯರೊಂದಿಗೆ ತೆಗೆಸಿಕೊಂಡ ಚಿತ್ರ.

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೧೩ | ೨೪—೧೧—೧೯೬೬ | No. 13

ಶರಾಬಿ ಮೇಧಾವಿಗಳು

ನಿರ್ದೇಶನವು ಸರಕಾರದ ವಿರುದ್ಧ ನಿಶ್ಯಸ್ತ್ರರಾಗಿ ಕಾರ್ಯಾಡಿದ ಮಹಾತ್ಮಾ ಗಾಂಧಿಜಿಯವರು ಸತ್ಯ—ಅಹಿಂಸೆಗಳ ಸತ್ಯಾಗ್ರಹವನ್ನು ಬಳಸಿಕೊಂಡರು. ತಾನು ಹೂಡಿದ ಸತ್ಯಾಗ್ರಹದಲ್ಲಿ ಹಿಂಸೆಯು ತಲೆದೋರಿದರೆ, ಅವರು ಇಂತಹ ತನ್ನನ್ನೇ ಹೊಣೆಯನ್ನಾಗಿಮಾಡಿ ತನ್ನ ಉತ್ಕೃಷ್ಟವು ನಿರ್ಮಲವಾಗಿದ್ದರೆ, ತನ್ನ ಅನುಯಾಯಿಗಳು ಹಿಂಸಾಚಾರಕ್ಕೆಳಿಯಲು ಪ್ರೇರಿಲ್ಲ ಎಂದು, ಆತ್ಮ ಪರಿಶುದ್ಧಿಗಾಗಿ ಉಪವಾಸ ಮಾಡುತ್ತಲೂ ಇದ್ದರು. ಸತ್ಯ—ಅಹಿಂಸೆಗಳ ಮೇಲೆ ಆಧಾರಿತವಾಗಿ ನಿಂತ ಮಹಾತ್ಮರ ಸತ್ಯಾಗ್ರಹವಿಂದು ಅವರ ಕುಲಜಂತೆ ನಮ್ಮಲ್ಲಿ ಹೇಗೆ ಕಾರ್ಯಾಚರಣೆಗಳಿಯುತ್ತಿದೆ?

'ನಾವೆಲ್ಲರೂ ಭಾರತೀಯರು— ನಮ್ಮನ್ನಾಳುತ್ತಿರುವ ಬ್ರಿಟಿಷರು ತಮ್ಮ ನಾಡಿಗೆ ಮರಳಬೇಕು; ನಮ್ಮ ದೇಶವನ್ನು ನಾವೇ ಆಳಿಕೊಳ್ಳುತ್ತೇವೆ; ಸ್ವತಂತ್ರವಾಗಿ ಬೆಳೆದು ನಿಲ್ಲುತ್ತೇವೆ—" ಇದಕ್ಕಾಗಿ ವಿದೇಶೀಯರ ವಿರುದ್ಧ ಬಳಸಿದ ಸತ್ಯಾಗ್ರಹವಿಂದು ಸ್ವದೇಶೀಯರನ್ನೇ ಬಗ್ಗಬಡಿಯುವ ಪ್ರಬಲಾಸ್ತ್ರವಾಗಿದೆ. ದೇಶದ ಬೇರೆ ಬೇರೆ ಕಡೆಗಳಿಂದ ಬರುತ್ತಿರುವ ವರದಿಗಳಂತೆ ಹಿಂದೆ ಸ್ವದೇಶಿ—ವಿದೇಶಿ ಎಂಬ ಭೇದ ಭಾವನೆಯಿದ್ದಂತೆಯೇ ಇಂದೂ ಅದೇ ಮಾದರಿಯ ಭೇದವನ್ನು ಕಲ್ಪಿಸಿಕೊಂಡಿದ್ದೇವೆ. : ಇಲ್ಲಿಯೂ ಒಂದು ಬಗೆಯ ಆಳುವವರು — ಆಳಿಸಿಕೊಳ್ಳುವವರು, ಶೋಷಕರು—ಶೋಷಿತರು ಎಂದು ಮುಂತಾಗಿ ಭೇದವನ್ನು ನಾವು ಮಾಡಿಕೊಂಡು ನಾನಾ ಬಗೆಯಲ್ಲಿ ನೊಂದಲ ಪಂಗಡದವರ ತಲೆ ಮುರಿಯಲು ಯತ್ನಿಸುತ್ತೇವೆ. ಬೊಂಬಾಯಿ ಬಂದಿನಿಂದ ಆರಂಭವಾದ 'ಬಂದ್' ಕಾರ್ಯಕ್ರಮ ಕೇರಳ, ಬಂಗಾಳ, ಬೆಂಗಳೂರುಗಳಿಗೂ ಹರಡಿ ಇದೀಗ ಎಲ್ ಐ.ಸಿ.ಗೂ ಮುಟ್ಟಿದೆ. ಇನ್ನು ಅಂಚೆ ತಂತಿ ಕಛೇರಿ, ಬ್ಯಾಂಕು ನೊಂದಲಾದುವುಗಳಿಗೂ ಹರಡಿದರೆ, ಅಲ್ಲಿಗೆ ನಾವು ನೆಮ್ಮದಿಯಾಗಿ ಮನೆಯೊಳಗೆ ಉಸಿರು ಬಿಡಬಹುದು— ನಾರ್ವಜನಿಕ ಸೇವಾ ಸಂಸ್ಥೆಗಳೇ "ಸೇವೆ"ಯನ್ನು ಬಂದ್ ಮಾಡುವಂತಹ ದುರವಸ್ಥೆ ಭಾರತದಲ್ಲಿ ಮೂಡತೊಡಗಿದರೆ, ದೇಶದಲ್ಲಿ ಕಲ್ಯಾಣ ರಾಜ್ಯ ನಿರ್ಮಾಣಕ್ಕಾಗಿ ಸ್ಥಾಪನೆಗೊಂಡಿರುವ ಯಂತ್ರ ಹೇಗಬೇಕು? ನಾವೆಲ್ಲ ಒಂದು—ಎಕ್ಯ ದಿಂದಿರಬೇಕು—ಎಂದು ಮುಂತಾದ ಅಮೂಲ್ಯ ಉಕ್ತಿಗಳು ಬರಿಯ ಘೋಷಣೆಯಲ್ಲಿ ನೂತ್ರ ಇಂದು ಉಳಿದಿವೆಯೆಂದು ದುಃಖದಿಂದಲೇ ಹೇಳಬೇಕು. ನಮ್ಮಲ್ಲಿರುವ ಭಾಷೀಯತೆ, ಪ್ರಾಂತೀಯತೆ ಗಳು, ಜಿಧಿಕಾರ ಲಾಲಸೆ—ಅನಧಿಕಾರಿ ಭಾವನೆಗಳು, ಶಾಸಿತ—ಶಾಸಕ ಭಾವನೆಗಳು ಎಲ್ಲೆ ಮೀರಿವೆ. ಇದರಿಂದಾಗಿಯೇ ನಾನಾ ತರದ ಕೀಟಲೆ ಹೆಚ್ಚುತ್ತಿದೆ. ಇಡಿಯ ದೇಶದಲ್ಲಿ ಹರಡಿರುವ ಈ ಭೇದ ಭಾವನೆಯ ವಿಷಗಾಳಿ ಮುಂದಿನ ಕೆಲ ವರ್ಷಗಳಲ್ಲಿ ನಮ್ಮನ್ನೆಲ್ಲಿ ಒಯ್ಯುತ್ತದೆಂದು ಹೇಳಬರುವುದಿಲ್ಲ. ಈ ವರ್ಷ ಉಷ್ಣಗಳಲ್ಲದ್ದು ಎಂದೇ ಹೇಳಬೇಕು. ಇಂದಿರಾ ಗಾಂಧಿಯವರು ಅಧಿಕಾರ ಗ್ರಹಣ ಮಾಡಿದಂದಿನಿಂದಲೂ ಆಂತರಿಕ ಹೊಯ್ದಾಟ ನಿಲ್ಲಲಿಲ್ಲ. ರಾಜ್ಯಗಳ ಸೀಮಾ ವಿವಾದ್ಯಗಳಿಕ್ಕೆನ ಕಾರಣಾನೆ ಮೊದಲಾದ ರಾಜಕೀಯ ಕಾರಣಗಳಿಂದಲೂ ಸತ್ಯಾಗ್ರಹ, ಉಪವಾಸಗಳಿಗೆ, ಶಿಕ್ಷಕರ ನೇಮಕದ ಬಗ್ಗೆಯೂ ಸಂಘ, ಗೋಮಾತೆಯ ಸಂರಕ್ಷಣೆಗಾಗಿ ದೇಶವ್ಯಾಪಿ ಹಿಂಸಾತ್ಮಕ ಆಂದೋಲನ ..... ರಾಜ್ಯ ವಿಭಜನೆಗೆ ಒಂದೆಡೆ ಉಪವಾಸ, ಅದಕ್ಕೆ ವಿರೋಧವಾಗಿ ಬೇರೊಂದೆಡೆ — ನಾವೆಲ್ಲರೂ ತಿಳಿದಿರುವಂತೆ ಎಲ್ಲವೂ ಆರಂಭವಾಗುವುದು ಅಹಿಂಸೆಯಿಂದ, ಸಹೃದಯದಿಂದ ಆದರೆ ಕೊನೆಗೆ ರೇಲುಗಳ ನಾಶ, ಮನೆಗಳಿಗೆ ಬೆಂಕಿ, ಪೋಲೀಸರ ಮೇಲೆ ಕಲ್ಲು ತೂರಾಟ, ಜಂಗಡಿಗಾರರ ಮೇಲೆ ಬಲಾತ್ಕಾರ- ಆಶ್ರುವಾಯು ಪ್ರಯೋಗ, ಗೂಳಿಗುರು—ಗಾಯ.—ಮೃತ್ಯು—ನಾರ್ವಜನಿಕ ವಿತ್ತ ಜೀವಿತಗಳಿಗೆ ಹಾನಿ, ಜೀವನದಲ್ಲಿ ವ್ಯತ್ಯಯ—ರಾಷ್ಟ್ರೀಯ ನಷ್ಟ.....ಇದನ್ನು ಕಂಡೂ ಕಂಡೂ ನಾವು ಆಂದೋಲನದತ್ತ ಒಲಿಯುತ್ತಿದ್ದೇವೆ—ಇದು ದುರದೃಷ್ಟ.

ಇವೆಲ್ಲ ಏನನ್ನು ಸೂಚಿಸುತ್ತವೆ ಎಂಬುದನ್ನು ನಾವು ಗಂಭೀರವಾಗಿ ಪರಾಲೋಚಿಸಬೇಕು. ನಮ್ಮಲ್ಲಿ ದಿನದಿಂದ ದಿನಕ್ಕೆ ಬೇಜವಾಬ್ದಾರಿತನ, ಅನೈತಿಕತೆ ಬೆಳೆಯುತ್ತಿದೆ. ಶರೀರದ ಎಲ್ಲ ಅಂಗಗಳೂ ನೋಡುವುದಕ್ಕೆ ಬೇರೆ ಬೇರೆಯಾಗಿದ್ದರೂ ಪರಸ್ಪರ ಪೂರಕವಾಗಿರುವಂತೆಯೇ ನಮ್ಮ ದೇಶದ ರಾಜ್ಯಗಳು ಎಂಬ ಸತ್ಯ ಕಲ್ಪನೆ ನಮಗಾಗಲಿಲ್ಲ. ಕೆಲವರಲ್ಲಿ ಮನೆ ಮಾಡಿರುವ ಅಹಂಕೃತಿ—ಅಜ್ಞಾನಗಳಿಂದ ದುರ್ಲಾಭ ಪಡೆಯಲು ಹೊಂಚು ಹಾಕುತ್ತಿರುವ ಗೂಂಡಾಗಳೂ ಹಲವಂದಿದ್ದಾರೆ. ತಮ್ಮ ಜೀವನ ಯಾಪನೆಗಾಗಿ ಇವರು ಒಂದಲ್ಲ ಒಂದು ಗೊಂದಲದಲ್ಲಿ ಮುಳುಗಿರುತ್ತಾರೆ. ದುಃಖದ ಸಂಗತಿಯೆಂದರೆ, ರಾಜಕೀಯ ಪಕ್ಷಗಳೂ ದೇಶದ ಹಿತವನ್ನು ಕಡೆಗಣಿಸಿ, ದೇಶವಾಸಿಗಳ ಹಿತಸಾಧನೆಯನ್ನು ಬದಿಗಿಟ್ಟು ಓಟಿಗೆ ಗಣ ಬಂಕಿಗೆ ಗಾಳಿ ಬೀಸುತ್ತಿರುವುದು. ಭಾವನಾವಶೇಷಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ಸನ್ನು ಹೇಗಾದರೂ ಮಾಡಿ ಸೋಲಿಸಲೇಬೇಕೆಂದು ಒಂದಾದ ರಾಜಕೀಯ ಪಕ್ಷಗಳು ದೇಶವನ್ನು ಅಧೋಪತನದತ್ತ ಒಯ್ಯುತ್ತಿವೆಯೆಂಬುದನ್ನು ಗಣಿಸಿಗೆ ತಂದವರಿಲ್ಲ. ಒಂತ್ತಿನ ದುಃಖಕ್ಕೆ ಕಾರಣವಾಗಿದ್ದ ತಾವೆ ಬೆಂಕಿಯಿಟ್ಟ ಕಾರಿ ನೋಡಿಸಿದ ನಮಸ್ಸುಲ್ಲೇ ತಾವು ನೆಲಸುವುದು ಸುಲಭ ಸಾಧ್ಯವಲ್ಲ; ನ್ಯಾಯದಾನಿಯಲ್ಲಿ ನಡೆಯಲಾರದ ವಿನೋಧಿ ಪಕ್ಷಗಳು ಜನತೆಯಲ್ಲಿ ದುಷ್ಟ ಪ್ರವೃತ್ತಿಗಳನ್ನು ಬೆಳೆಸಿಯಾದರೂ ಕಾಂಗ್ರೆಸ್ಸನ್ನು ಸೋಲಿಸುವ ಹುಚ್ಚಿಕೆ ಹಾಕಿದಂತಿದೆ. ಮತಿವಿಕಾರ ಶಂಬುಕನಿಂದ ಸ್ವಾರ್ಥ ಸಾಧಿಯವ ಮೇಧಾವಿಗಳು ಕರಾಬಿಗಳ ಮೇಲೆ ಅಧಿಕಾರ ಜಪಾಯಿಸುವ ಪೂರ್ವ ತಯಾರಿಯನ್ನು ನಿರ್ಲಿಸದೆ ಹೋದರೆ, ದೇಶ ಹಿಂದಿನಂತೆಯೇ ಮತ್ತೆ ಹರಿಹಂಚಾದೀತು—ಐಕ್ಯತಾ ಕಲ್ಪನೆ ಅನೈಕ್ಯದಲ್ಲಿ ಪರ್ಯವಸಾನವಾದೀತು. ನಾವು ಭಿನ್ನತೆಯಲ್ಲೂ ಏಕತೆಯನ್ನು ಕಾಣುವ ಭಾರತೀಯರು, ಇಂತಹ ಕಠಿಪು ದಿನವನ್ನೇ ಏಕೆ ಕಾಣುವಂತಾಗಬೇಕು? ಬುದ್ಧಿ ಜೀವಿಗಳು ಯೋಚಿಸಿ ಈ 'ಆಂದೋಲನ ಗಾಳಿ'ಯನ್ನು ತಡೆಯಲು ಭದ್ರ ಪರ್ವತ ನಿರ್ಮಾಣದಲ್ಲಿ ತಮ್ಮ ಬುದ್ಧಿಶಕ್ತಿಯನ್ನು ಬಳಸಿಕೊಳ್ಳಬೇಕು.

ಒಬ್ಬಳೇ ಮಂಗಳಲ್ಲ

ಆಂಧ್ರದಲ್ಲಿ ಉಕ್ಕಿನ ಐದನೆಯ ಕಾರ್ಖಾನೆ ಸ್ಥಾಪಿಸುವ ವಿಚಿತ್ರ ಭರವಸೆ ಮೂರೆದುದ್ದಾರಿಂದ ಸುಪವಾಸ ನಾರಾಯಣ ಅಯ್ಯಂಗಾರ್ಯರು ದೆಹಲಿಗೆ ಹೋದರು. ಹೈದರಾಬಾದಲ್ಲಿ ವಿಧಾನ ಸಭೆಯ ಎಲ್ಲ ವಿರೋಧಿ ಸದಸ್ಯರೂ ರಾಜೀನಾಮೆ ನೀಡಿದರು, ಇವರ ಸಂಜೀವ ರೆಡ್ಡಿಯವರೂ ಉಕ್ಕಿನ ಕಾರ್ಖಾನೆಯನ್ನು ಆಂಧ್ರಕ್ಕೆ ಒದಗಿಸಿ ಕೊಡಲು ಅಧಿಕಾರ ತ್ಯಾಗಕ್ಕೂ ಸಿದ್ಧರು. ಹೊಟೆಗೇಡಿ ಅಭಿವ್ಯಾಯ ತಳೆಯುವುದಕ್ಕೂ ಹೇಳಿಕೆ ನೀಡುವುದಕ್ಕೂ ನಿಸ್ಸೀಮವಾದ ಮಂತ್ರಿಗಳು ನಮ್ಮಲ್ಲಿ ಧಾರಾಳವಿದ್ದಾರೆ. ಹಿಂದಿ ಚಳವಳಿಯು ವೇಳೆ ಬ್ರಹ್ಮಣ್ಯಂ ಹಿಂದಿ ವಿರೋಧಿ ಚಳವಳಗಾರಿ ಮುಂದೆ ತನ್ನ ನಿಸ್ಪೃಹತೆಯನ್ನು ವ್ಯಕ್ತಪಡಿಸಿ ಶೇರ್ತ ಗಳಸಿದಂತೆ. ಈಗ

(ಉತ್ತರ ಪುಟ ನೋಡಿರಿ)

ವಚನ ಸುಧೆ

ಶೀಲಂ ಸ್ವಧಾನಂ ಪುರುಷೇ
ತದ್ಧಾ ಯಸ್ಯೇದ ಪ್ರಣಶ್ಯತಿ
ನತಸ್ಯ ಜೀವಿತೇನಾರ್ಥೋ
ನ ಧನೇನ ನ ಬಂಧುಃ ಬಿ:॥

ಪುರುಷರಿಗೆ ಶೀಲವೇ ಪ್ರಧಾನ. ಇದನ್ನು ಕಳಕೊಂಡವರ ಜೀವನ, ಸಂಪತ್ತು, ಬಂಧು ಬಳಗ—ಇವುಗಳಿಂದ ದೇಶಕ್ಕೆ ಯಾವ ಪ್ರಯೋಜನವೂ ಇಲ್ಲ

ನರಸಣ್ಣನ ಸರಸ



"ನಾಕರಿಗೆ ಸಂಪು ಹೂಡುವ ಅಧಿಕಾರ ಕಸಿದುಕೊಳ್ಳುವುದು ಅಂದರೆ, ಮಂತ್ರಿಗಳಿಗೆ ಮೂತಾಡುವ ಅಧಿಕಾರ ಕಸಿದುಕೊಂಡಂತೆ. ನೌಕರರು ಲಂಚ ಸ್ವೀಕಾರ ಮಾಡಬಾರದು ಎಂದರೆ, ಮಂತ್ರಿಗಳು ಸಂಚಾರ ಕಾರ್ಯಕ್ರಮವಿಟ್ಟುಕೊಳ್ಳಬಾರದು ಅಂದಂತೆ ...

ಗೇಹ ರಾಜ್ಯದಲ್ಲಿ

ರಾಜಕೀಯದ ಅಮಲು ಕುಡಿದರೆ . . .

'ಹೌದ್ರಿ....'

"ಹೌದು...."

'ಎಂಥದು?"

"ನೀನು ಹೇಳುವಂಥದ್ದು...'

'ನಾನೇನು ಹೇಳುತ್ತೇನೆ?'

'ನಾನು ಜ್ಯೋತಿಷಿಯಲ್ಲ....'

"ಮತ್ತೆ ಹೌದು ಅಂದಿರಲ್ಲಾ...."

"ಹ್ಞೂಂ...."

'ನೋಡಿ...."

"ನೋಡ್ತಾನೇ ಇದ್ದೇನಲ್ಲಾ...."

'ಏನನ್ನೆ?'

'ನಿನ್ನ ನಸುಗೆಂಪು ಸಿಡಿ ನೋ ರೆ ಯನ್ನ...'

"ಸಾಕ್ರಿ...."

'ಸಾಕು...."

"ಏನು?'

'ಸಾಕ್ರಿನ್ ಕಾಫಿ ಕುಡಿಯೋದು...."

'ಅದು ಸಾಧ್ಯಾನೇ ಇಲ್ಲ...."

"ಯಾಕೆ?"

'ನೋಡಿ, ಅನ್ಯಾಯವನ್ನ ಮಾಡೋ ರನ್ನ ಮಣ್ಣಾ ಮುಕ್ಕಿಸ್ತೇನಂದ ಪೌರುಷ ಕೊಚ್ಚಿದ ನಂದಾ ಮನೆಗೆ ಹೋದ್ರು ತಾನೆ?'

"ಅವ್ರು ಹೋದ್ರೆ ಏನಂತೆ? ಜವನರು ಬಂದಿದ್ದಾರೆ. ದೇಶದಲ್ಲಿ ಕಾನೂನು ಸು ವ್ಯವಸ್ಥೆಗಳನ್ನು ಕಾಯಬ್ಡಕೊಳ್ಳಲು ಸರ ಕಾರ ಉಗ್ರ ಕ್ರಮವನ್ನು ಕೈಗೊಳ್ಳಲು ಹಿಂಜರಿಯದು...."

"ಅಲ್ರಿ, ನಂದಾರ ನಿರ್ಗಮನದಿಂದ ಎ ಷ್ಟು ಜನರು ಹಾಯೆಂದು ಉಸಿರು ಬಿಡ ಲಿಲ್ಲಿ?"

'ಯೂಕೆ?'

'ನಂದಾರು ಧ್ಯೇಯವಾದಿಯಂತೆ; ಶಕ್ತ ವಾದಿಯಂತೆ; ನುಡಿದಂತೆ ನಡೆಯಲು ಪ್ರಯತ್ನಿಸುವವರಂತೆ...."

"ಇಂಬಹದು. ಏನಿದ್ದರೂ ಇಂದಿರಾ ಗಾಂಧಿ ಭಾರಿ ಬುದ್ಧಿವಂತೆ..."

"ಯಾಕೆ?'

'ನಂದಾರ ಬಗ್ಗೆ ರಾಜಿನ ಮೆಗೆ ವರೆ ಗೆಲ್ಲಾ ಅನಂತರವೂ ಅವ್ರು ವರ್ತಿಸಿದ ರೀ ತಿ ಅವ್ರಿಗೆ ಪ್ರಥಾಧಿಕ್ಯವನ್ನು ಭದ್ರಮಾಡಿ ಕೊಟ್ಟಿತೂನ್ನ...."

"ಹೌದೆ? ಅಷ್ಟು ಒಳ್ಳೆಯವ್ರೆ, ನವ್ಯ ಗಾಂಧಿ?"

"ಮತ್ತೇನು ಚಿಲ್ಲೆಯವ್ರು ಅಂದದ್ದೆ?"

'ಅಲ್ಲಾ, ಅರ್ಥವಾಗ್ಲಿ, ಸ್ವಲ್ಪ ಬಿಡಿ ಸಿ ಹೇಳ್ತೀರಂತ..."

"ಕರವ ಮುಗಿದು ಬೇಡುವೆನು ..."

"ಸುರು ಮಾಡ್ರಿ.. ರಾತ್ರಿಯಾಣದಲ್ಲಿ ಪಿಟಕಾಯಣ ."

'ಇಲ್ಲ ನೂರಾಯ್ತೂ, ಇನ್ನು ನೀನು ಒ ಗ್ಗರಣೆಯಲ್ಲಿ ರಾಗಿ ಹಾಕಿ ರುಚಿಕೆಡಿಸೋ ದು ಬೇಡ....ಕೇಳು, ನಂದಾರ ಬಗ್ಗೆ ಸಭೆ ಯಲ್ಲಿ ಅಷ್ಟೆಲ್ಲಾ ಟೀಕೆ ಟಿಪ್ಪಣಿಗಳ ನಡೆ ದಾಗಲೂ ಇಂದಿರಾಜಿ ಕಿವಿಗೊಟ್ಟು ಆಲಿ ಸುತ್ತಿದ್ದರಲ್ಲದೆ ಒಂದೇ ಒಂದು ಮಾತಾಡ ಲಿಲ್ಲ....'

'ಅದೇನು ಭಾರಿ ಬುದ್ಧಿವಂತಿಕೆ?"

'ನೋಡು, ಅವ್ರು ಮಾತಾಡುತಿದ್ರೆ ತನ್ನ ಗೃಹಮಂತ್ರಿ ನಂದಾರವರ ರಕ್ಷಣೆ ಯಾಗುತಿತ್ತು. ಮಾತಾಡಿದೆ ಹೋದ್ರಂದ ಅವ್ರ ಭದ್ರತೆಗೆ ಮೋಸ..."

'ಒಂದು ಮಾತಿಗೆ ಅಷ್ಟು ಬೆಲೆ?"

'ನಂದಾರ ಕಾರ್ಯಕ್ರಮದಿಂದ ರೊಚ್ಚಿಗೆದ್ದ ಸಂಗಡವೊಂದಿದೆ. ಇದು ಶ್ರೀಮಂತರದ್ದು— ಲಂಜಕೋರರದ್ದು. ಅತುಲ್ಯಘೋಷ್ ಇವರ ಪ್ರತಿನಿಧಿಯಂ ತೆ ವರ್ತಿಸಿದರು. ಚ ನಾವಣೆಯ ವರ್ಷ ... ನಿಧಿ ಕೂಡಿಸಲು ಹೋಗುವಾಗ ಕಲ ವು ಸಮಸ್ಯೆಗಳು ಬರುತ್ತವೆನ್ನು.... ಇಂ ದಿರಾಜಿಯವರ ಆಯ್ಕೆಯಲ್ಲಾ ಅಂತ ರ್ಲಾಗ ಹಾಕಿದವ್ರು ಅತುಲ್ಯ ಘೋಷ ಸಾ ಹೌದು...."

'ಆದರೆ ಘೋಷಂಗೆ ಹೆದರಿ ಇಂದಿ ರಾ ಸುಮ್ಮನಿದ್ದರು ಅಂತೀರಾ?

'ಹಾಗೇನೂ ಇಲ್ಲ. ನಂದಾರ ವರ್ತ ನೆ—ಬಿಗಿಕಟ್ಟು ಸಹಿಸದ ಹಂಗಡವೊಂದು ಸಚಿವ ಸಂಪುಟದಲ್ಲೇ ಇದೆಯಲ್ಲ. ಎಸ. ಕೆ. ಪಾಟೀಲರೂ ಇವರಲ್ಲಿ ಒಬ್ಬರು...."

"ಯಾಕೆ?'

'ಕಾಮರಾಜ ಯೋಜನೆಯಂತೆ ಪಾ ಟೀಲರ ಹೊರ ಬಂದವರಿಂದಲೇ ಗೃಹ ಖಾತೆ ನಂದಾ ರ ಕೈ ಸೇರಿದ್ದಾಯಿತು. ಒಳ್ಳೆಯ ಖಾತೆ ಎಂದುದನ್ನ ಬಿಕ್ಕ ವುದಕ್ಕೆ ಅವರು ಒಪ್ಪಲಿಲ್ಲ. ಹಾಗಾಗಿ ಒತ್ತಾಯಪೂರ್ವಕವಾಗಿ ಅವರಿಂದ ಬಿಡಿಸಲು ಅತುಲ್ಯರ ಬೆನ್ನು ಏರಿದರು....'

'ಅಂದರೆ, ಅತುಲ್ಯ ಘೋಷರೂ ಪಾ ಟೀಲರೂ ಒಂದೇ ಜನ..."

"ಹಾಗೇನೂ ಅಲ್ಲ. ಘೋಷರ ನಿಂಡಿ ಕೇಟಿನ ಪ್ರತಿಭಾವಂತ ಸದಸ್ಯ..."

'ನಂದಾಂ ಸ್ಥಾನ ಪಾಟೀಲರಿಗೆ ದೊ ರೆತೀತೂಂತ ಅವ್ರು ಹಂಬಲಿಸಿದ್ರೂನ್ನಿ.'

"ಭಾರೀ ಪ್ರಜ್ಞೆ ತ್ಯಾಗ ಮಾಡಿದ್ರು. ಪ್ರಧಾನಿಯವ್ರು ಜವನರನ್ನು ಬೊಂಬಾ ಯಿಂದ ಮನಲಿ ಕರೆಸಿದ್ದೇ ತಡ ಇಲಿಯ ಯೇಂಜು ಸಿಕ್ಕಿದ ಬೆಕ್ಕಿನಂತಾದ್ರು, ಖಾ ಟೀಲರು"

'ಓಹೋ, ಜವನರಿಗೆ ಗೃಹಶಾಖೆ ನೀ ಡುವುದಕ್ಕೆ ಇದಕ್ಕಾಗಿಯೇ ಅಲ್ವೆ ವಿರೋ ಧವಿದ್ದದ್ದು ಅಲ್ವೆ?'

"ಇದನ್ನೆಲ್ಲಾ ಹೇಳೋದಕ್ಕಾಗುತ್ತೆ? ಹೇಳುವ ಕಾರಣ ಬೇರೆಯೆ. ಜವನರು ಗೃಹ ಮಂತ್ರಿಯಾದರೆ, ಕರ್ನಾಟಕ— ಮಹಾರಾಷ್ಟ್ರ ಗಡಿ ವಿವಾದ ಸಮಾಧಾ ನಕರವಾಗಿ ಬಗೆಹರಿ-ಲಾರದು; ಗೋ ವಾ ದೇವಗೆ ಸ್ವಾಯತ್ತ ದೊರೆ ಯದು...."

'ಅಯ್ಯೋ ಪಾಪವೆ? ಇನ್ನೆಲ್ಲ ಇತ್ಯರ್ಥ ವಾಗುವುದ ಹೊರ ಸಂಪತ್ತು ರಚಿತವಾ ದ ಮೇಲೆ ತಾನೆ?'

"ಅಷ್ಟ ಗೊತ್ತಿಲ್ಲದವ್ರಿ... ಗೃಹ ಶಾ ಖೆ ನೋಡ ಕೊಳ್ತಾರಂತೆ! ನಿನಗರಿವ ಷ್ಟು ವಿವೇಕ ಅವಿಗಿಲ್ಲವಲ್ಲಂತ.."

"ಅಲ್ರಿ, ಅದ್ರು ಪಾಟೀಲರಿಗೆ ಏನೂ ಲ ಭ್ಯವಾಗಲಿಕ್ಲಿ ."

'ಅದೇ ನೋಡು, ನಾನು ಅಂದದ್ದು ... ಇಂದಿರಮ್ಮ ಪಾಟೀಲ ವಿರೋಧಿ ಜವ ನರನ್ನೇ ಗೃಹ ಶಾಖೆಗೆ ತಂದರು..."

'ತ್ಯೂಯ್ ಮಾಪ, ತಾನೊಂದು ಬಗೆದ ರೆ, ದೈವ ಬೇರೊಂದು ಬಗೆಯಿತು...."

'ಅದು ಸರೀನ್ನು. ಇದು ಇಲ್ಲಿಗೆ ಮುಗಿ ಯುವುದಿಲ್ಲ.

"ಮತ್ತೆ?"

ಇದೀಗ ಇಂದಿರಾ ಗಾಂಧಿಯವರ ಸಂಪುಟದ ಒಂದು ದೊಡ್ಡ ಮುಳ್ಳು ದೂ ರವಾಯ್ತು. ಇಂದಿರಾ, ಜವನ, ಸುಬ್ರ ಹ್ಮಣ್ಯಂ ತ್ರಿಮೂರ್ತಿಗಳು ಗೆದ್ದರೂನ್ನು. ಇಂದಿರೆ ತನ್ನ ಬುದ್ಧಿವಂತಿಕೆಯನ್ನೇ ತೋ ರಿಸಿದರು. ಆದರೆ, ಇದರ ಲಾಭಬರಿಯ. ಐದು ತಿಂಗಳವರೆಗೆ ಮಾತ್ರ ನೋಡು—'

'ಯಾಕೆ?'

'ಮುಂದೆ ಚುಣಾವಣೆ ಬಂತೆಂತರ ಬರು ವ ಸಮಸ್ಯೆಗಳೇ ಬೇರೆ....ಆಗ ಮತ್ತೆ ಕೈ ಕಾಲು ಬಿಡುವ ಪ್ರಮೇಯ...."

'ಅಂತೂ ಈ ರಾಜಕೀಯವೇ ಹೀ ಗೆ..."

'ಸೂತಕ ಪ್ರಧಾನಿ ನಂದಾರಿಗೆ ಎರಡು ಬಾರಿ ಪ್ರಧಾನಿ ಪಟ್ಟ ಸಿಕ್ಕಿತು. ಈ ಬಾರಿ ಚುನಾವಣೆಯ ಕಾರ್ಯಕ್ರಮ ನೋಡುವವು ಅನ್ನೇ ಅಂತೆ. ಏನಾದರೂ ಮಾಡಿದರೂ—'

"ಥೂ...ಥೂ...ಇದು ನಂಬಿಕೆಗೆ ದೂರ ವಾದದ್ದು...."

"ನೋಡಮ್ಮ ರಾಜಕೀಯದಲ್ಲಿ ಏನೂ ನಡೆಯಬ್ಹುದೆ ಎಂದು ಹೇಳುವುದಕ್ಕೆ ಪ ರಬ್ರಹ್ಮನಿಗೂ ಸಾಧ್ಯವಿಲ್ಲ...."

"ಏನಾದರೂ ಆಗ್ಲಿ ಬಿಡಿ. ನಮಗ್ಯಾಕೆ ಇಲ್ಲದ ರಾಜಕೀಯ..."

'ನಮಗೂ ರಾಜಕೀಯ ಇದೇನ್ನು... ಆದ್ರೆ ಅದ್ರ ಸ್ವರೂಪವೇ ಬೇರೆ....'

"ಯಾವುದು?'

"ಇದೇ..."

'ಅಯ್ಯೋ, ಪೈ ಮುರಿದು ಹೋಯ್ತು...."

ಅದಕ್ಕೆ ಯಾಕೆ ಚಿಂತೆ? ಬೆಸುಗೆ ಹಾ ಕೋಣ..."

'ಅಯ್ಯೋ....ಸಾಕಪ್ಪಾ ಸಾಕು...."

"ನೋಡು, ರಾಜಕಾರಣದ ಶರ ಬು ಕುಡಿದವ್ರು ಸಾಕಪ್ಪಾ ಸಾಕು ಅನ್ನುತ್ತೇ ಬೇಕು ಬೇಕೂಂತಲ್ಲ ಅಂತಿರ್ತಾರೆ..."

"ಹ್ಞೂಂ.... ಅದೂ ಹೌದೂನ್ನಿ... ಈ ರಾಜಕೀಯ ಅದಕ್ಕಿಂತಲ್ಲೂ ಭಾರಿ ಅಮಲಿ ನದ್ದಿರಬೇಕು...."

'ಜಲ್ಲನೇ ಮತ್ತೆ...."

"ಹೌದೂ....ಹೌದೂ...ಹೌದು...."

—ಗೋರಾ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ ೪% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 396/58
R. E. P. 158/1966.

ಅರ್ಜಿದಾರ —ಶೇಷಪ್ಪ ಉಪಾಧ್ಯ, ಎದ್ರಿರು-1. —ವೆಂಕಟ್ರಮಣ ಆಚಾರಿ 2. ಗುಂಡಪ್ಪ ಆಚಾರಿ.

ಉಡ್ಪಿ ತಾಲ್ಲೂ ಸಾಂಡೇಶ್ವರ ಗ್ರಾಮದಲ್ಲಿ ರುವ ಅವ್ಯ ಆಚಾರಿ ಮಗ ವೆಂಕಟ್ರಮಣ ಆ ಚಾರಿ! ಕೂಗ್ಗಣ್ಣ ಆಚಾರಿ ಮಗ ಗುಂಡಪ್ಪ ಆ ಚಾರಿ! ಕೂಡಾ 2 ಜನರಿಗೆ ಈ ಮೂಲ್ಕ ಕಿ ಯಪಡಿಸುವುದೇನೆಂದರೆ—

ಸದ್ರಿ ವ್ಯವಹಾರದಿಯಲ್ಲಿ ನಿಮ್ಮ ವಿರು ದ್ಧ ಅರ್ಜಿದಾರರಿಗೆ ಬರತಕ್ಕ ನಿವ್ವತ್ತಿಗಳನ್ನೆಲ್ಲ ಬ ರುವಹಾಕಿಕೊಳ್ಳುವರು ಅರ್ಜಿದಾರರು ಎದ್ರುವ ಮೇಲೆ ನಾಳ್ದು ಮಾಡಿದ ಮೇಲಿನ ಅಮಲ್ದಾ ರಿಯು ತಾ. 26—11—1966ಕ್ಕೆ ತಮ್ಮಿಗೆ ಇ ರುತ್ತದೆ. ಆ ಕಾರಣ ಜೀನಾದಾರೂ ಅಕ್ಷೇ ಪಣೆ ಇದ್ದರೆ ಸದ್ರಿ ದಿನಾಂಕ ಹಗಲು 11ಗಂಟೆ ಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪಿಸಿರಿ ಮಾಡಿಕೊಳ್ಳತಕ್ಕದ್ದು ಎಂಬ ಸಂ ಗ್ರಿ ಈ ಮೂಲ್ಕ ತಿಳಿಯಪಡಿಯಿದೆ.

N. S. Parameshwariah
Advocate for Petr.
Date, 15—11—66, Coondapoor.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. S. No. 369 of 1966

ಬಿ. ಪ್ರೇಮದಾಸ ಶೆಟ್ಟಿ —ವಾದಿ
ಮತ್ತು
ಪೀಟರ್ ಮೊಂತೆರೋ —ಪ್ರತಿವಾದಿ.

ಇವರೊಳಗೆ

ಪ್ರತಿವಾದಿ ಶ್ರೀ ಪೀಟರ್ ಮೊಂತೇರೊ, ಎಚ್ವರ್ಸ್ ಮೊಂತೇರೋರ ಮಗ, ಮಂಗಳೂರು ತಾಲೂಕ್ಕು, ಬಜ್ಪನಾಡು ಗ್ರಾಮದ ಬೂ ಲ್ಕಿ ಪೇಟೆಯ ಮೈನ್ ರೋಡ್—ಇವರಿಗೆ—

ಮೇಲಿನ ದಾವೆಯ ಕೈವೇತನದ್ದು ಕೀಡಿ ನಿವೃತ್ತಿಯ ಬಗ್ಗೆ ನಿಮ್ಮ ಹಾಜರಿಗೆ ತಾರೀ ಕು 7—12—1966ಕ್ಕೆ ಇಟ್ಟಿರುತ್ತದೆ ಸದ್ರಿ ದಿನಾಂಕ ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಮೇಲಿನ ಕೋರ್ಟಿನಲ್ಲಿ 10 ಗಂಟೆಗೆ ಹಾಜರಾಗಿ ಉದಹರಿಸಿ ತಕ್ಕದ್ದು. ಇಲ್ಲವಾದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಸದ್ರಿ ದಾವೆಯನ್ನು ಪೈಸಲ್ ಮಾಡಲಾದೀತು.

(ಕೋರ್ಟು ಹುಕುಂ ಮೇರೆಗೆ)

(Sd) ಭೋಳೆ ರಘುರಾಮ ಶೆಟ್ಟಿ
ವಾದಿಯ ಕಡೆ ವಕೀಲರು

ಕಾರ್ಕಳ, 15—11—66.

ವಿವೇಚನೆ

ಉಕ್ಕಿನ ಕಾರಖಾನೆಗಳಲ್ಲ —ನರನಾಡಿಗಳು

ಬರೆದವರು
ಶ್ರೀ ಶಿವಶಂಕರ

ಭಾರತ ಸರಕಾರವು ನಾಲ್ಕನೇ ಉಕ್ಕಿನ ತಯಾರಿಕೆಯ ಕಾರ್ಖಾನೆಯನ್ನು ಬೊಕಾರೋದಲ್ಲಿ ತೆರೆದಿರುತ್ತದಾದರೂ ಅದಿನ್ನೂ ಸಮರ್ಪಕವಾಗಿ ಕೆಲಸಕಾರ್ಯಗಳಿಂಭಿಸಿಲ್ಲ ವಾದರೂ ಆಂಧ್ರದ ವಿಶಾಖಪಟ್ಟಣದಲ್ಲಿ ಇದನೇ ಕಾರ್ಖಾನೆಯನ್ನು ತೆರೆಯುವೇ ಕಂಡು ಬಾರೀ ಗಲಾಟೆ—ಕೊಲೆ—ಸುಲಿಗೆಗಳು ನಡೆದವು. ಆಂಧ್ರವು ಇತರ ರಾಜ್ಯಂತ್ರಗಳ ಸಂಪರ್ಕವನ್ನೇ ಕಡಿದು ಕೊಂಡಿತ್ತು. ಸೇನೆಯೇ ಬಂದು ಅಲ್ಲಿ ನಿಲ್ಲ ಬೇಕಾಯಿತು. ಕಾಂಗ್ರೆಸ್ ಕಾರ್ಯಕರ್ತ ಶ್ರೀ ಅಮೃತರಾವ್‌ರವರು ಇಪ್ಪತ್ತು ದಿನಗಳ ಕಾಲ ಉಪವಾಸ ಹೂಡಿದರು. ಅವರ ಶ್ರೀಮತಿಯವರೂ ಸಂತಾಪಸೂಚಕವಾಗಿ ಉಪವಾಸ ಆರಂಭಿಸಿದರು. ಅನಂತರ ಆಲ್ಲಲ್ಲಿ ವಿದ್ಯಾರ್ಥಿಗಳು ವಿಶೇಷ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಬಸ್ಸು ಸುಟ್ಟಿತು. ದೊಂಬಿ ನಡೆಯಿತು. ಹಳಿಗಳನ್ನು ಹೆಕ್ಕಿ ಬಿಸಾಡಲಾಯಿತು. ಬಂಡಿಗಳನ್ನು ಸುಟ್ಟು ಭಸ್ಮಗೊಳಿಸಲಾಯಿತು. ಸಂಸ್ಕಾರವು ಗಲಾಟೆಪೋರರನ್ನು ಸುಡಲಾರಂಭಿಸಿತು. ಆಂಧ್ರದ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿಯವರು ದಿಲ್ಲಿಗೆ ಧಾವಿಸಿದರು, ಹಾರಿ ಹೋದರು. ಹಿಂತಿರುಗಿ ಬಂದು ಗಾಂಧೀವಾದಿ ಶ್ರೀ ಅಮೃತರಾಯರ ಕಿವಿಯಲ್ಲೇನೋ ಗುಣುಗುಟ್ಟಿದರು. ಶ್ರೀ ಅಮೃತರಾಯರು ಅಂದೇ ಉಪವಾಸ ನಿಲ್ಲಿಸಿಬಿಟ್ಟರು. ಶ್ರೀ ರೆಡ್ಡಿಯವರು ಶ್ರೀ ರಾಯರನ್ನು ಹೊಗಳಿದರು. ಶ್ರೀ ರಾಯರು ರೆಡ್ಡಿಯವರನ್ನು ಪ್ರಶಂಸಿಸಿದರು. ದೊಂಬಿ ನಡೆಸಿ ಪ್ರತ್ಯೇಕ ಆಂಧ್ರವಾಕ್ಯವನ್ನು (ರಾಜ್ಯ?) ಪಡೆದುಕೊಂಡಂತೆ, ದೊಂಬಿನಡೆಸಿ ಉಕ್ಕಿನ ಕಾರ್ಖಾನೆಯನ್ನು ಪಡೆದುಕೊಂಡಾಯಿತೆಂದು ಆಂಧ್ರದವರು ಅವರವರ ಬೆನ್ನನ್ನು ಅವರವರೇ ತಟ್ಟಿಕೊಂಡರು. ಆಗ ರೈಲ್ವೇ ಮಂತ್ರಿ ಶ್ರೀ ರಾಮಸುಭಾಗ ಸಿಂಘ್‌ರವರು ಉಕ್ಕಿನ ಕಾರ್ಖಾನೆಯ ಕಾರ್ಯಸ್ಥಾನದಲ್ಲಿ ದಿನ ಒಂದಕ್ಕೆ ರೈಲ್ವೇ ಖಾತೆಗೆ ಐವತ್ತು ಲಕ್ಷ ರೂಪ್ಯ ನಷ್ಟವಾಗಿದೆಂದು ಹೇಳಿದರು. ಅಂಜೆ ಹಾಗೂ ಇತರ ಇಲಾಖೆಗಳಿಗಾದ ನಷ್ಟವೂ ಇದೆ. ಸಮಾರು ಇಪ್ಪತ್ತು ಜನರು ಸತ್ತಹೋದರು. ಕಾಕಿನಾಡದಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀ ಹಾಗೂ ಕಾಂಗ್ರೆಸ್ಸ್ ಅಧ್ಯಕ್ಷ ತಿರು ಕಾಮರಾಜರವರ ಫೋಟೋ ಗೊಂಬೆಗಳನ್ನು ಸುಡಲಾಯಿತು. ಇಂತಹ ಅಪಪೂರ್ವ ಕಾರ್ಯ ಕುಕೃತ್ಯಗಳು ರಾಜಮಹೇಂದ್ರಿ ಮುಂತಾದೆಡೆಗಳಲ್ಲೂ ನಡೆದಿವೆ. ಇನ್ನೂ ಕೆಲವೆಡೆಗಳಲ್ಲಿ ಇವರಿಬ್ಬರ ಗೊಂಬೆಗಳ ಜೊತೆಗೆ ಶ್ರೀ ಬ್ರಹ್ಮಾನಂದ ರೆಡ್ಡಿ ಹಾಗೂ ಶ್ರೀ ಸಂಜೀವ ರೆಡ್ಡಿಯವರ ಗೊಂಬೆಗಳನ್ನೂ ಸುಟ್ಟು ಹಾಕಿದ್ದಾರೆ. ವಿಜಯವಾಡದಲ್ಲಿದ್ದ ಶ್ರೀ ಸಂಜೀವ ರೆಡ್ಡಿಯವರ ಪ್ರತಿಮೆಯನ್ನು ಹಾಳುಗೆಡವಲಾಗಿದೆ. ಶ್ರೀ ಅಮೃತ ರಾಯರು ಉಪವಾಸ ನಿಲ್ಲಿಸಿದೊಡನೆ ಗಲಾಟೆ ಶಾಂತವಾಯಿತು. ಇದನೇ ಉಕ್ಕಿನ ಕಾರಖಾನೆ ವಿಶಾಖಪಟ್ಟಣದಲ್ಲೆಂಬುದು ನಿಶ್ಚಯವೆಂಬಂತಾಯಿತು. ಆ ಕುರಿತು ಕೇಂದ್ರ-ರಾಜ್ಯ ಸರಕಾರಗಳವರು ಘೋಷಣೆ ಮಾಡಲಿರುವರೆಂಬ ಸಮಾಚಾರ ಪ್ರಕಟವಾಯಿತು.

ಪ್ರಧಾನಿಯವರು ಪರಸ್ಪರಾಭಿಪ್ರಾಯವನ್ನು ವ್ಯಕ್ತಪಡಿಸಿದರು — ಇದನೇ ಉಕ್ಕಿನ ಕಾರ್ಖಾನೆಯ ಕುರಿತು ಇನ್ನೂ ನಿಶ್ಚಯಕ್ಕೆ ಬಂದಿಲ್ಲವೆಂದು ಉಕ್ಕಿನ ಮಂತ್ರಿ ಶ್ರೀ ಟಿ. ಯನ್. ಸಿಂಘ್ ಸಭಾ ಜಡೇ ರೀತಿ ಹೇಳಿದರು. ಶ್ರೀ ಬ್ರಹ್ಮಾನಂದ ರೆಡ್ಡಿ ಬಾಯಿಬಿಡಲಿಲ್ಲ. ಶ್ರೀ ಅಮೃತರಾಯರು ತನ್ನ ಪಾಡು ಶ್ರೀ ತಾರಾಸಿಂಘ್‌ರಂತಾಯಿತೆಂದು ತಿಳಿದುಕೊಂಡರು. ಗಲಾಟೆಗೆ ಹುರಿದುಂಬಿಸುತ್ತಿದ್ದವರು! ಶ್ರೀ ಅಮೃತರಾಯರನು ಹೀಗೆಳೆಯಲಾರಂಭಿಸಿದರು. ಶ್ರೀ ತಾರಾಸಿಂಘ್‌ರಂತೆ ಇವರೂ ಪ್ರಾಯಶ್ಚಿತ್ತವನ್ನಾಡಿಕೊಳ್ಳಬೇಕೆಂದು ಹೇಳಿದರು. ಮತ್ತೆ ಗಲಾಟೆಗೆ ಆರಂಭವಾಯಿತು. ಇನ್ನು ಅಲ್ಲಿದ್ದರೆ ಕ್ಷೇಮವಲ್ಲ

(ಎಂಟನೇ ಪುಟ ನೋಡಿರಿ)



ಕ್ಯಾನರಾ ಬ್ಯಾಂಕು ಮತ್ತು ಅದರ ಠೇವುದಾರರು ಅತ್ಯುತ್ತಮವಾದ ಭದ್ರತೆಯ ಭಾವನೆಯನ್ನು ಅನುಭವಿಸುವರು •

ಹಿಂದೆ ತಾವು ಗಳಿಸಿದ ನೆಮ್ಮದಿಯ ನಿಯಮಿತತನದ ಬಳಕೆಯಾಯಕ್ಕೆ ಮತ್ತು ವಿಪುಲವಾದ ಅದರ ಬಿಡ್ತಿಗೆ ಇಂದು ಅವರು ತೃಪ್ತಮನಸ್ಕರಾಗಿದ್ದಾರೆ. ಭವಿಷ್ಯದ ಪವ್ರತೆಯ ಹೆಚ್ಚಿನ ಬಳಕೆಯಾಯಕ್ಕಾಗಿ—ಪ್ರಜ್ಞಾನ ಬಿಡ್ತಿಗಾಗಿ ಅವರು ಮುಂಗೋರಣೆಯುಳ್ಳವರಾಗಿದ್ದಾರೆ. ಕ್ಯಾನರಾ ಬ್ಯಾಂಕಿನಲ್ಲಿಯು ಬಳಕೆಯಾಯದಿಂದ ಕಿರಿಯರೂ ಹಿರಿಯರೂ—ಒಂದೇ ತರನಾದ ಖಚಿತ ಸುಖವಾಯಕ ಭರವಸೆಯನ್ನು ಅನುಭವಿಸುತ್ತಾರೆ. ಕ್ಯಾನರಾ ಬ್ಯಾಂಕು, ಅತೀ ಎಲಿಸ್ಟ ರೀತಿಯಲ್ಲಿ ಅಮೂಲ್ಯವಾದ ಜನತೆಯ ಬ್ಯಾಂಕು—ಸ್ನೇಹಭಾವದ ಸೇವೆಯಲ್ಲಿ ನಿಮ್ಮ 'ಪ್ರತ್ಯೂರ್ವಕ ಹಿತೈಷಿಗಣಾಗಿ' ಅವರು ನಿಮಗೆ ಭರವಸೆ ಕೊಡುತ್ತಾರೆ. ಇಂದೇ ನೀವು ಕ್ಯಾನರಾ ಬ್ಯಾಂಕಿನಲ್ಲಿ ನಿಮ್ಮ ಸೇವಿಂಗ್ಸ್ ಖಾತೆಯನ್ನು ತೆರೆಯಿರಿ—ಮತ್ತು ಅದರ ಬಡ್ಡ

ಚಾರುಚಯನ

ತ್ರಿಶಂಕುವಿನ ಕುಲದವರು ನಾವು

ಯೋಜನೆಯು ಸ್ವರೂಪವಿಲ್ಲದೇನೇ ಜ್ಯಾರಿಯಾಗುವುದು ಸಾಧ್ಯವಿದೆಯೇ ಎಂದು ಯೂರಾದರೂ ಕೇಳಿದರೆ, ಇದೆಯೆಂದೀಗ ಉತ್ತರಿಸಬೇಕಾಗುತ್ತದೆ. ಭಾರತದಲ್ಲಿ, ನಮ್ಮ ದೇಶದಲ್ಲಿ, ಕೆಲವೊಂದು ವೈಶಿಷ್ಟ್ಯಗಳು ಎಲ್ಲ ರಂಗಗಳಲ್ಲಿಯೂ ಇವೆ. ಹುಟ್ಟಿನಿಂದಲೂ ಅಭಿಪ್ರಾಯ ಸ್ವಾತಂತ್ರ್ಯ ಹೊಂದಿದ ನಾವು ಹಲವಾದರು ಮತಗಳ ಅವಲಂಬಿಯಾಗಿದ್ದೀವೆ ತಾನೆ? ದೇವರಿಲ್ಲದೇನೇ ಮೂರ್ತಿ ಕಡೆದರು ಎಂಬಮಾತು ನಾವು ಕೇಳುತ್ತೀವೆ— ದೇವರಿಲ್ಲದ ದೇಗುಲಗಳು ನೂರಾರು ಇವೆ. ಇರುವ ದೇವರ ಮೂರ್ತಿಗಳನ್ನು ಕದ್ದೊಯ್ವವರೂ ಕಡಮೆಯಿಲ್ಲ ಇನ್ನುಳಿದವು ಬರಿಯ ಮೂರ್ತಿಗಳ ಆಲಯಂ— ದೇವರ ಹೆಸರಲ್ಲಿ ಹುಲಿಗಣಾರರ ವಸತಿ— ಹೀಗೆ ಬಗೆಬಗೆಯ ಅಭಿಪ್ರಾಯಗಳು ಒಂದು ವಿಷಯದ ಬಗ್ಗೆ ವ್ಯಕ್ತಗೊಳ್ಳುವುದು ನಮ್ಮಲ್ಲಿ.

ನಾಲ್ಕನೆಯ ಯೋಜನೆಯ ಅವಧಿ ಕಳೆದ ಎಪ್ರಿಲ್ ಒಂದನೆ ದಿನದಂದು ಆರಂಭವೇನೋ ಆಗಿದೆ—ವೆಚ್ಚವೂ ಆಗುತ್ತಿದೆ. ಆದರೆ, ಯೋಜನೆಯ ರೂಪರೇಷೆಯನ್ನೂ ಅಂತಿಮ ಗಟ್ಟಕ್ಕೆ ಬಂದು ನಿಂತಿಲ್ಲ. ಅಂದರೆ, ಯೋಜನೆಯಿಲ್ಲದ ಯೋಜನೆಯೇ ನಮ್ಮದು? ತಲೆಕೆಳಗು ವ್ಯಾಪಾರ ವಲ್ಲವೆ ಇದು! ದೇಶಕ್ಕೇನೇ ಯೋಜನೆ ಬೇಡವಾಗಿ ಉಳಿದವರಿಗಾದರೂ ಅದು ಎಲ್ಲಿಂದ ಬರಬೇಕು? ಆದಕ್ಕೆಂದೇ ಎಲ್ಲೆಂದರಲ್ಲಿ ಗೊಂದಲ— ಗುಲ್ಲು ಹಿಂಸೆ— ಅಶಾಂತಿಗಳು ತಾಂಡವವಾಡುತ್ತಿವೆಯೆನ್ನಬೇಕು. ನಮ್ಮ ನಾಲ್ಕನೆಯ ಯೋಜನೆಯು ಇನ್ನೂ ಅಂತಿಮ ಸ್ವರೂಪಕ್ಕೆ ಯಾಕೆ ಬಂದಿಲ್ಲ? ವಿದೇಶೀ ನೆರವಿನ ಪರಿಮಾಣ ಇನ್ನೂ ಅಸ್ಪಷ್ಟವಾಗಿಯೇ ಇರುವುದರಿಂದ ನಮ್ಮ ಮಂತ್ರಿ ನೂಗಧರು ವಿದೇಶಗಳಲ್ಲಿ ಸಂಚಾರ ಮಾಡಿದಾಗ, ಸಾಧ್ಯವಿರುವ ಎಲ್ಲ ಬಗೆಯ ಸಹಾಯವನ್ನೂ ನೀಡುವ ಭರವಸೆಯನ್ನು ಪಡೆದೇ ಬರುತ್ತಾರೆ. ಆದರೆ, ಕಳೆದ ಎಂಟು ತಿಂಗಳ್ಲೂಂ ನಡೆದದ್ದು— ಮಾನಮೇಷವೇ. ಯೋಜನೆಗೆ ಯಾವ ದೇಶ ಎಷ್ಟು ನೆರವು ನೀಡುತ್ತವೆ ಎಂಬುದನ್ನೀಗಲೂ ನಮ್ಮಿಂದ ಕಲ್ಪಿಸಲು ಸಾಧ್ಯವಿಲ್ಲ. ವಿದೇಶಗಳು ಉದ್ದೇಶ ಪೂರ್ವಕವಾಗಿಯೇ ತಮ್ಮ ಸಹಾಯದ ಪ್ರಮಾಣ ತಿಳಿಸಲು ಹಿಂದಾಗಿಯುತ್ತಿವೆ; ಅಥವಾ ಭಾರತದ ಅರ್ಥ ವ್ಯವಸ್ಥೆಯ ಬಗ್ಗೆ ಸಂದೇಹ ಪಡುತ್ತಿವೆ.

ಜಾಗತಿಕ ಬ್ಯಾಂಕಿನ ಪ್ರತಿನಿಧಿ ಮಂಡಳವು ಸ್ಟೀಫನ್ ಬೆಲ್‌ರವರ ನೇತೃತ್ವದಲ್ಲಿ ಭಾರತದ ಪಂಚವಾರ್ಷಿಕ ಯೋಜನೆಯ ಬಗ್ಗೆ ವಿಶೇಷ ಟೀಕೆ ಮಾಡುವಂತಿದೆ. ನಾವು ನಮ್ಮ ನಾಲ್ಕನೆಯ ಯೋಜನೆಯು ೭೫,೦೦೦ ಕೋಟಿ ರೂಪಾಯಿಗಳ ದ್ದಾಗಿರಬೇಕೆಂದು ಯೋಜಿಸಿದ್ದರೆ, ಬೆಲ್ಲರು ಇಷ್ಟು ಮೊತ್ತದ ಯೋಜನೆಯ ಅವಧಿ ಏಳು ವರ್ಷಗಳದ್ದಿರಬೇಕೆಂದು ಹೇಳುತ್ತಾರೆ. ನಮ್ಮ ಯೋಜನೆ ತಾಧಿಸಲಾರದ ಮಹತ್ವಾಕಾಂಕ್ಷೆ, ಅಥವಾ ಅತಿಶಯೋಕ್ತಿಗಳಿಂದ ಕೂಡಿದೆ ಎಂದವರ ಖಚಿತ ಅಭಿಪ್ರಾಯ. ಈ ಹಿಂದೆ ಪೌಲ್ಕ ವಿಚ್ಛೇದನದ ಸಲಹೆ ಜಾಗತಿಕ ಬ್ಯಾಂಕಿನಿಂದ ಬರುವುದಕ್ಕೂ ಈ ಬೆಲ್ ಮಹಾಶಯರ ವರದಿಯೇ ಕಾರಣವೆಂಬುದನ್ನು ನೆನಪಿಸಿಕೊಂಡರೆ. ಬೆಲ್‌ರವರ ಬೆಲ್ಲು ಭಾರತೀಯರನ್ನು ನೆನೆಗುದಿಗೆ ಬೀಳಿಸುವುದು ಕಂಡಿತ.

ಒಂದುವಾರ ಮೊದಲು ಭಾರತದ ನೆರವು ಕೂಟದ ಸದಸ್ಯ ರಾಷ್ಟ್ರಪ್ರತಿನಿಧಿಗಳು ಸಭೆ ಸೇರಿದ್ದರು. ಬಾರಮಕ್ಕೆ ತಾವು ಸಹಾಯ ನೀಡುವ ಸಾಧ್ಯಾ ಸಾಧ್ಯತೆಗಳನ್ನು ಪರಾಮರ್ಶಿಸಿದರು—ಈ ಸಭೆಜರುಗಿದ ಮೇಲಾದರೂ ವಿದೇಶ ಸಹಾಯದ ಮೊತ್ತವೆಷ್ಟೆಂದು ಗೊತ್ತಾಗಬಹುದಿತ್ತು—ಅದಕ್ಕೆ ಸರಿಯಾಗಿಯೂದರೂ ಯೋಜನೆ ಅಂತಿಮ ರೂಪಕೊಡಬಹುದಿತ್ತು. ಆದರೆ, ಬೆಲ್ ಮಹಾಶಯರು ತಮ್ಮ ಖಚಿತಾಭಿಪ್ರಾಯವನ್ನು ನೇರವುಕೂಟದ ಸದಸ್ಯರಿಗೂ ಸ್ಪಷ್ಟವಾಗಿ ತಿಳಿಸಿದ್ದಾರೆ—ಹೀಗಾಗಿ ಅವೂ ಮೇಲೆಕೆಳಗೆ ನೋಡಿದರೆ ಅಚ್ಚರಿಯಿಲ್ಲ. ಪರಿಣಾಮ ಗೊತ್ತೇ ಇದೆ ನಾವು ತ್ರಿಶಂಕು ಕುಲಜರಾಗಿದ್ದೀವೆ.

೦ ೦ ೦

ಯೋಜನೆಯು ಹೇಗಿರಬೇಕು, ಅದರ ಗಾತ್ರ ಎಷ್ಟಿರಬೇಕು ಎಂಬ ವಿಷಯದಲ್ಲಿ ಭಾರತೀಯ ಅರ್ಥಶಾಸ್ತ್ರಿಗಳಲ್ಲೇ ವಿವಾದವಿದೆ; ಹಾಗಿರವಾಗ ವಿದೇಶಗಳಲ್ಲಿ ಸಹಮತವಿಲ್ಲದೆ ಜೋದರೆ ಚೋದ್ಯವೇನೂ ಇಲ್ಲ. ೭೫,೦೦೦ ಕೋಟಿ ರೂಪಾಯಿಗಳ ಯೋಜನೆಯಿಲ್ಲದೆ ಹೋದರೆ, ದೇಶಕ್ಕೆ ಉಳಿಗಾಲವೇ ಇಲ್ಲವೆನ್ನುತ್ತಾರೆ, ಸಚಿವ ಆಶೆ ೧೯ ಮೆಹತಾ— ಸಂಕಾರವು ಅವರೊಡನೆ ಸೈಗುಟ್ಟುತ್ತಿದೆ. ನಮ್ಮ ನೀಶದ ಲಂತರಿಕ ಸಂಪನ್ಮೂಲಗಳನ್ನ ಹೊಂದಿಕೊಂಡು ಯೋಜನೆಯು ಗಾತ್ರ ಗೊತ್ತು ಮಾಡಬೇಕು—ಇದು ಹೆಚ್ಚಿನವರ ವಾದ —ವಿದೇಶೀ ಸಹಾಯ ಹಡೆಯುತ್ತ ಹೋಗುವುದು ನಮ್ಮ ಸ್ವಾತಂತ್ರ್ಯಕ್ಕೊಂದು ಕಳಂಕವೆನ್ನುತ್ತಾರೆ ಇಂಥವರು. ಇದೂ ತಪ್ಪೆಂದು ಹೇಳಬಾರದು. ನಮ್ಮ ಸಹಾಯಗಾರರು ನಮ್ಮ ಮೇಲೆ ಕಾಲಕಾಲದಲ್ಲಿ ಎಂತಹ ಒತ್ತಾಯ ಹೇರುತಿದ್ದರೆಂಬುದನ್ನು ನಾವು ಬಲ್ಲೆವು. ಅಮೆರಿಕೆಯು ಅಮೆರಿಕನ್ ನೀತಿಯನ್ನು ಸಮರ್ಥಿಸುವವನಂಗೆ ಕೊಕ್ಕ ನೆರವು ನೀಡುವುದಾಗಲೆ, ನಾವವರಿಂದ ನೆರವು ಪಡೆಯುವುದಾದರೆ, ನಮ್ಮ ಸ್ವತಂತ್ರ ನೀತಿಗೆ ತಿಲಾಂಜಲಿ ಕೊಟ್ಟಂತೆಯೇ ಅಲ್ಲವೆ? ಮತ್ತೆ ನಮಗೆ ಸ್ವಾತಂತ್ರ್ಯದೊರೆತು ಲಾಭವೇನು?

ಇದನ್ನು ಲಕ್ಷ್ಯಿಸಿಯೇ ರೂ. ೧೬,೫೦೦ ಕೋಟಿ ರೂಪಾಯಿಗಳ ಮೊತ್ತದ ಯೋಜನೆ ಸಾಕು ಎನ್ನುತ್ತಾರೆ ಶ್ರೀ ಅರ್ಥವಿದ ಶೆಣ್ಯೈ ಅವರು ದೇಶದಲ್ಲಿ ಲಭ್ಯವಿರುವ ಸಾಧನಸಂಪತ್ತಿನಸಂಚಯದಿಂದ ಇಷ್ಟು ಹಣವನ್ನು ಕೂಡಿಸುವುದು ಸಾಧ್ಯವಾಗ ಬಹುದೆನ್ನುತ್ತಾರೆ ಅವರು. ಆಗ ನಮ್ಮ ಪ್ರಗತಿ ವಾರ್ಷಿಕ ಸೇ. ೩.೫ ಆಗುವುದು. ಯೋಜನಾ ಆಯೋಗವು ಇದು ೫ ಸೇಕಡಾ ಆಗಬೇಕೆನ್ನುತ್ತದೆ. ಶ್ರೀ ಬೆಲ್‌ರವರ ಮತ್ತು ಶ್ರೀ ಶೆಣ್ಯೈಯವರ ಅಭಿಪ್ರಾಯಗಳಲ್ಲಿ ಸಮಾನತೆಯಿರುವುದನ್ನು ನಾವು ಗಮನಿಸಬಹುದು. ಇದರಿಂದಾಗಿಯೇ ನಮ್ಮ ಯೋಜನೆ ಮಹತ್ವಾಕಾಂಕ್ಷೆಯಿಂದ ಪ್ರೇರಿತವಾದುದು ಎಂಬ ವಾದವಿದೆ. ಬೆಲ್‌ರವರು ವ್ಯಕ್ತಪಡಿಸಿದ ಅಭಿಪ್ರಾಯದ ಪ್ರಭಾವವು ನೇರವುಕೂಟದ ಮೇಲೆ ಬೀಳುವುದರಿಂದ ಅವು ತಾವು ನೀಡವ ನೆರವಿನ ಪ್ರಮಾಣ ತಿಳಿಸಲು ಇನ್ನೂ ತಡಮಾಡಬಹುದು. ಅದರ ಜೊತೆಗೆ ಭಾರತದ ಅರ್ಥನೀತಿಯ ಮೇಲೆ ವಿಶೇಷ ಪ್ರಭಾವ ಬೀರುವಂತಹ ಸಲಹೆಗಳನ್ನೂ ಕೂಡಬಹುದು. ನಾವು ಆರು ತಿಂಗಳ ಹಿಂದೆ ಮಾಡಿಕೊಂಡಂತಹ ಪೌಲ್ಕ ವಿಚ್ಛೇದನದಿಂದ ಇನ್ನೂ ಜೇತರಾಡಿ ಕೈಕಾಲು ಬಿಡುತ್ತಿರುವಾಗಲೇ ನತ್ತೊಮ್ಮೆ ಆಪ ಪೌಲ್ಕದ ಸಲಹೆ ಬಂದರೂ ವಿಸ್ಮಯ ಪಡಬೇಕಾಗಿಲ್ಲ ನಮ್ಮ ಕಾಲ ಮೇಲೆ ನಾವು ನಿಲ್ಲುವ ಅಧ್ಯಾಯ ಮಾಡಿ ಕೊಳ್ಳದೆ ಹೋದರೆ, ಹಿಂದೊಮ್ಮೆ ವಿದೇಶಗಳ ಮುಂದೆ ಪರೋಕ್ಷವಾಗಿ ತಲೆತಗ್ಗಿಸಿದ ನಾವು ಈಗ ಮತ್ತೊಮ್ಮೆ ಬಾಗ ಬೇಕಾಗಬಹುದು. ಅರ್ಥವಿದರು ಅರ್ಥಗೆಟ್ಟು ದೇಶನನ್ನು ಅಧಃಪತಿತ ಮಾಡದಂತಾಗಲಿ.

ಒಂದು ಕಾಲವಿತ್ತು ದಿನಂಗತ ಪ್ರಧಾನಿ ನೆಹರುರವರು ನಿಶ್ಶರ್ತವಾಗಿ ದೊರೆಯುವ ಸಹಾಯವನ್ನು ಸ್ವೀಕರಿಸುವ ಪರಿಪಾಠವಿಟ್ಟುಕೊಂಡರು. ಇದು ಸರಿಯಾದುದು. ಇಂದು ಕಾಲ ಬದಲಾಗಿದೆ. ಪಂಡಿತ ನೆಹರುರವರೇ; ನಿಶ್ಶರ್ತ ಸಹಾಯವೂ ಇಲ್ಲವೆನ್ನುವಂತಾಗಿದೆ ನೆಹರೂ ನೀತಿಯನ್ನು ಅನುಸರಿಸುವ ನಾವು ಶರ್ತ ಸಹಾಯವನ್ನು ನಿರಾಕರಿಸಬೇಕು; ಆಂತರಿಕ ಸಂಪನ್ಮೂಲಗಳ ಕ್ರೋಢೀಕರಣದಿಂದಲೇ ನಮ್ಮ ಪ್ರಗತಿ ಸಾಧಿಸಲು ಬದ್ಧಕಂಕಣರಾಗಬೇಕು— ನಿಜಾನವಾದರೂ ಇಡುವ ಹೆಜ್ಜೆ ದೃಢವಿರಬೇಡವೆ?

೦ ೦ ೦

ಇವೆಲ್ಲ ಏನನ್ನು ಸೂಚಿಸುತ್ತವೆ? ದೇಶದ ಅರ್ಥವ್ಯವಸ್ಥೆ ಬಗಡಾಯಿಸಿತ್ತಿದೆ. ಖಚಿತ ಬಾಬುಗಳನ್ನು ನಾವು ಹೆಚ್ಚಿಸಿದ್ದೇವೆ, ಅದಾಯಕ್ಕಾಗಿ ತಲೆಕೆರೆಯ ತೂಡಗಿದ್ದೇವೆ. ಈಗಿನ ಅರ್ಥಮಂತ್ರಿ ಶ್ರೀ ಚೀಂದ್ರ ಚೌಧರಿಯವರ ಕರಮಂಜದಲ್ಲಿ ಕುಳಿತಿದ್ದಾರೆ—ಅಲಾಲ ಬಹದೂರರ ಕೊನೆಗಾಲದಲ್ಲಿ ಇವರು ಅಧಿಕಾರ ಸ್ವೀಕರಿಸಿದ್ದರು. ಪೌಲ್ಕ ವಿಚ್ಛೇದನದ ಹೊಣೆಗಾರಿಕೆಯಿಂದ ಇವರು ನುಸುಳಿಕೊಳ್ಳುವುದು ಕಷ್ಟ ಸಾಧ್ಯವಿರುವಾಗಲೇ, ಸಂಪುಟದಲ್ಲಿಯೂ ಚೌಧರಿಯವರ ಬಗ್ಗೆ ವಿರೋಧ ಹೆಚ್ಚುತ್ತಿದೆ. ದೇಶವನ್ನೊಂದು ಆರ್ಥಿಕ ಸಂಕಟದಿಂದ ಪಾರು ಮಾಡಲು ಸಮರ್ಥ ಅರ್ಥಮಂತ್ರಿಯೊಬ್ಬ ಬೇಕಾಗಿದ್ದಾನೆ. ಈ ಹುದ್ದೆಗೆ ಹಿಂದೆ ಅದೇ ಸ್ಥಾನದಲ್ಲಿದ್ದು ದ್ವಿಭಾಷಾ ಮುಂಬಯಿ ರಾಜ್ಯವನ್ನು ಜಾಗೆಯೇ ಮುಂದುವರಿಸುವ ಸರಕಾರಿ ನೀತಿಗೆ ವಿರೋಧವಾಗಿ ರಾಜಿನಾಮೆಯಿತ್ತು ಹೊರಬಂದ ಶ್ರೀ ಸಿ. ಡಿ. ದೇಶಮುಖರ ಹೆಸರೂ ತುಸು ಕೇಳುತ್ತಿದೆ. ಸದ್ಯ ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿರುವ ದೇಶಮುಖರೂ ಹೇಳುತ್ತಾರೆ: 'ದೇಶದ ರಾಜಕೀಯ ಪಕ್ಷಗಳು ಸಮರ್ಥರೂ ಶಕ್ತರೂ ಆದವರನ್ನು ತಮ್ಮ ಪಕ್ಷಗಳಲ್ಲಿ ನೇರಿಸಿಕೊಂಡು ಅವರು ಚುನಾವಣೆಗಳಲ್ಲಿ ಆರಿಸಿಬರುವಂತೆ ಮಾಡಿ ಅಧಿಕಾರ ಪದಗಳಿಗೆ ತಂದರೆ, ಆಡಳಿತ ಉತ್ತಮಗೊಳ್ಳುವುದು."

ಇಂದಿನ ರಾಜಕೀಯ ಪಕ್ಷಗಳಿಂದ ಸಮರ್ಥರೂ ಶಕ್ತರೂ ಬುದ್ಧಿಜೀವಿಗಳೂ, ದೇಶಹಿತಚಿಂತಕರೂ ದೂರವಿದ್ದಾರೆ—ಅಧಿಕಾರದಾಹದಿಂದಲೇ ಪಕ್ಷ ಸೇರುವ, ಪಕ್ಷ ಬದಲಿಸುವ ಓತಿಗಳ ನಡುವೆ ಅಳಲುಗಳು ಏನು ಮಾಡಿಯಾವು? ರಾಜಕೀಯ ಪಕ್ಷಗಳಿಗೆ ದೇಶದ ರಾಜಕೀಯದ ಪ್ರಜ್ಞೆ ಮೊದಲು ಮೂಡದೆ ಹೋದರೆ, ಯಾರು ಏನು ಮಾಡಲು ಸಾಧ್ಯ?

ಆದುದರಿಂದ ನಮ್ಮ ಚುನಾವಣೆಯು ಸಮಸ್ಯೆ ಸಮರ್ಥರನ್ನ ಆರಿಸಲು ಸಾಧ್ಯವಿದೆಯೆ:? ಅಥವಾ ಅಸಮರ್ಥರೇ ನಮ್ಮ ಪ್ರತಿನಿಧಿಗಳಾಗಿ ಉಳಿಯಬೇಕೆ?

ಅಭಿಪ್ರಾಯ

ರಾವಣ ಸನ್ಯಾಸಿಗಳ ದನ ಸಂಘ

ಬರೆದವನು: ಗನ್

ಕಳೆದ ತಾ. ೭ರಂದು ರಾಜಧಾನಿ ದೆಹಲಿಯಲ್ಲಿ ನಡೆದ ವೈಗೀಯ ದುರ್ಘಟನೆಯನ್ನು ಮಾನವರಷ್ಟೇ ಏಕೆ ಮೃಗಗಳು ಸಹ ಸಹಿಸಲಿಕ್ಕಿಲ್ಲ.

ದನಗಳ ಜೀವದ ಹೆಸರಿನಲ್ಲಿ ಜನರು ದನಗಳಿಗಿಂತ ಕೀಳಾಗಿ ವರ್ತಿಸುವಷ್ಟು ಭಾರತದ ಜನಜೀವನ ಸಂಸ್ಕೃತಿಯು ಅಧಃಪತನವಾಯಿತೆಂದರೆ ನನಗೆ ನಾವೇ ಧಿಕ್ಕಾರ ಹಾಕಿಕೊಳ್ಳದೆ ನಿವಾರಹೆ ವಿದೆಯೆ? ಥೂ.....ಎನ್ನದೆ ಪರಿಣಾಮವಿದೆಯೆ?

ಮನೆಗಳಿಗೆ ಬೆಂಕಿ ಕೊಟ್ಟು, ಜನರನ್ನು ಚಿತ್ರಹಿಂಸೆಗೆ ಗುರಿಮಾಡಿ ಶೋಲಗಳಿಂದ ತಿವಿದು ಕೊಲೆ ಮಾಡುವ ಈ ಈ ಟುಕ ರಾಕ್ಷೋರಗೆಗಳು ದನಗಳ ಜೀವವನ್ನುಳಿಸುವುದಕ್ಕಾಗಿ ಹೋರಾಡುವ ದಯಾಮಯಿಗಳೆ? ಲೋಕದ ಕಣ್ಣಾ ಮುಂಬಿ ಜನರನ್ನು ಮೂಕ ಪಶುಗಳನ್ನಾಗಿ ಕುರಿಗಳನ್ನಾಗಿ ಕಾಣುವಂತೆ ಮಾಡಿರುವ ಈ ದನ ಸಂಘದವರನ್ನು ರಾವಣ ಸನ್ಯಾಸಿಗಳೆಂದರೆ ರಾವಣನಿಗೂ ಅಪಮಾನ ಮಾಡಿದಂತಾಗಬಹುದು. ರಾವಣ ಸನ್ಯಾಸಿಯೂ ಈ ಕಾವಿಧಾರಿ ಸನ್ಯಾಸಿಗಳನ್ನು ಗೂಂಥಾ ಭಕ್ತರಾಗಿದಲಿಲ್ಲ ವೆಂಬುದನ್ನು ಮರೆಯಬಾರದು.

ಈ ಹತ್ಯಾಕಾಂಡಕ್ಕೆಂತಲೂ ಇದನ್ನು

ತಾ. 10ರಂದು, ಮಣಿಪಾಲ ಪ್ರೆಸ್ಸಿನವರಿಗೆ ಉಡುಪಿಯಲ್ಲಿ ಜರಗಿದ ಸಮ್ಮಾನ ಸಮಾರಂಭದ ಚಿತ್ರಗಳು

ಸಮ್ಮಾನ ಸಮಿತಿಯ ಅಧ್ಯಕ್ಷ ಪ್ರೊ. ಕು. ಶಿ. ಹರಿದಾಸ ಭಟ್ಟರು ಸ್ವಾಗತ ಭಾಷಣ ಮಾಡಿ ಸಮಾರಂಭದ ಅಧ್ಯಕ್ಷ ಶ್ರೀ ಎಚ್. ಎಲ್. ನಾಗೇಗೌಡರಿಗೆ ಪುಷ್ಪಗುಚ್ಛವನ್ನರ್ಪಿಸುತ್ತಿರುವುದು.



ಡಾ। ಶಿವರಾಮ ಕಾರಂತರು ಭಾಷಣ ಮಾಡುತ್ತಿರುವುದು.



ಶ್ರೀ ಕೆ. ಹೊನ್ನಯ ಶೆಟ್ಟರು ಗೌರವಾರ್ಪಣ ಪತ್ರವನ್ನು ಓದುತ್ತಿರುವುದು.



ಡಾ। ಟಿ. ಎಂ. ಎ. ಪೈಗಳು ಉತ್ತರ ರೂಪದ ಭಾಷಣಗೈಯುತ್ತಿರುವುದು.



ಶ್ರೀ ಎಸ್. ವಿ. ಕುಡ್ವರು ಮಾತನಾಡುತ್ತಿರುವುದು.



ಶ್ರೀ ಎಚ್. ಎಲ್. ನಾಗೇಗೌಡರು ಅಧ್ಯಕ್ಷ ಭಾಷಣ ಮಾಡುತ್ತಿರುವುದು.



ಶ್ರೀ ಬಿ. ಕೃಷ್ಣಯ್ಯನವರು ಕೃತಜ್ಞತೆಗರ್ಪಿಸುತ್ತಿರುವುದು.

ಹೊತ್ತಿಸಿದ ಕೈಗಳ ಕುರಿತು, ನಾವು ಆಲೋಚಿಸಬೇಕಾಗಿದೆ. ಯಾರವರು?

ಬಾಯಿ ಬಿಟ್ಟರೆ ಭಾರತೀಯ ಸಂಸ್ಕೃತಿಯ ಕುರಿತು ಮಾಡುವ ಭಾಷಣ ಬಿಗಿಯುವ ಮೇಧಾವಿಗಳು. ಧರ್ಮ, ತ್ಯಾಗ, ಸತ್ಯಗಳ ಕುರಿತು, ದೇಶಪ್ರೇಮ, ದೈವ ಭಕ್ತಿಗಳ ಕುರಿತು ಉಪನ್ಯಾಸಗಳನ್ನೀಯುವ ಉತ್ಸಿಷ್ಣುಗಳು. ಎಂಥ ಕಡುವಿರೋಧಿಯ ಮನೆಗಾದರೂ ಬೆಂಕಿ ಬಿದ್ದರೆ ಅದನ್ನು ನಂದಿಸಲು ತಾವಾಗಿ ಮುಂದೆ ಹೋಗಬೇಕೆನ್ನುವುದು ಧರ್ಮವೆಂದರೇನೆಂದರಿಯದವರೂ ಭಾರತದಲ್ಲಿ ತಿಳಿದ ಸತ್ಯ. ಆದರೆ ವಿಹಲಿಯಲ್ಲಿ ಈ ಧರ್ಮಭೀರುಗಳು ಮಾಡಿದ್ದೇನು? ರಾಮಂಗಾಡರ ಮನೆಗೆ ಬೆಂಕಿ ಕೊಟ್ಟಿದ್ದು. ಆ ವಾರ್ತೆಯನ್ನು ಪತ್ರಿಕೆಗಳಲ್ಲೋದಿ ಊರಿನಲ್ಲಿ ಎಲ್ಲರಿಗೂ ತೋರಿಸುತ್ತಾ, ಓದಿ ಹೇಳುತ್ತಾ ತಪ್ಪುವರ ಕೃತ್ಯಗಳ ಕುರಿತು ಪೆಮ್ಮೆಪಟ್ಟುಕೊಂಡದ್ದು. ಹಿಗ್ಗಳಿಕೆ ಬಿತ್ತರಿಸಿಕೊಂಡದ್ದು. ಅಂದು ಲೋಕಭವನದಲ್ಲಿ ಮಹಾತ್ಮಾಜಿ ಗುಂಡು ತಗಲಿ ಬಿದ್ದಾಗ ಊರಿನಲ್ಲಿ ಸಿಹಿ ಹಂಚಿದ ಅದೇ ಕೈ ಅದೇ ಬಾಯಿ ಅದೇ ಕಟುಕ ಹೃದಯಗಳು ಇದಕ್ಕೂ ಸೂತ್ರಧಾರಿಗಳೆಂಬುದನ್ನು ಮರೆಯುವುದು ಸಾಧ್ಯವೆ? ಮರೆಯುವುದು ಸಾಧವಲ್ಲ, ಸಹಿಸುವುದಂತೂ ಸರ್ವಥಾ ಸಾಧ್ಯವಿಲ್ಲ.

(ಒಂಭತ್ತನೇ ಸಾಲು ನೋಡಿರಿ)

ಉಕ್ಕಿನ ಕಾರಖಾನೆಗಳಲ್ಲ— ನರನಾಡಿಗಳು

(ಐದನೇ ಪುಟದಿಂದ)

ವೆಂದು ಶ್ರೀ ಅಮೃತರಾಯರು ಡೆಲ್ಲಿ ದಾರಿ ಹಿಡಿದರು— ತಾವು ಪ್ರಧಾನಿಯವರನ್ನು ಕಂಡು ಚರ್ಚಿಸುವದಾಗಿಯೂ, ಅವರು ಇದನೇ ಕಾರ್ಖಾನೆಗೆ ಒಪ್ಪದಿದ್ದಲ್ಲಿ ಅವರ ಮನೆಯೆದುರು ಉಪವಾಸ ಹಾಡುಪದಾಗಿಯೂ ತಿಳಿಸಿದೇ ಅವರು ಹೊರಟಿರುವರು.

ಲೋಕಸಭೆಯಲ್ಲಿ ಈ ವಿಷಯ ಬಂದಾಗ ಆಂಧ್ರದ ಲೋಕಸಭಾ ಸದಸ್ಯರೆ. ಇದನೇ ಕಾರ್ಖಾನೆಯ ನಿರ್ಮಾಣಕ್ಕೆ ಒಡನೆ ಆರಂಭಿಸಬೇಕೆಂದು ಒತ್ತಾಯಿಸುತ್ತಿದ್ದಂತೆ, ತಮಿಳುನಾಡಿನಿಂದ ಬಂದಿರುವ ಸದಸ್ಯರು ಸೇಲಂನಲ್ಲಿ ಕಾರ್ಖಾನೆಯನ್ನು ತೆರೆಯಬೇಕೆಂದು ಕರ್ನಾಟಕದಿಂದ ಹೋಗಿರುವ ಕೆಲ ಸದಸ್ಯರು ಹೊಸಪೇಟೆಯಲ್ಲಿ ಕಾರ್ಖಾನೆ ಇರಬೇಕೆಂದೂ ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತ ಪಡಿಸಿದರು. ಆಷ್ಟು ಹೊತ್ತಿನಲ್ಲಿ ತಮಿಳು ನಾಡಿನ ವಿದ್ಯಾರ್ಥಿಗಳು ತಾವೆಂದೂ ಆಂಧ್ರದ ವಿದ್ಯಾರ್ಥಿಗಳಿಗಿಂತ ಹಿಂದುಳಿದಿಲ್ಲವೆಂಬುದನ್ನು ಜಗಜ್ಜಾಹಿರಗೊಳಿಸಬೇಕೆನ್ನುವ ಪ್ರಯತ್ನಕ್ಕೆ ಮುಂದಡಿಯಿಟ್ಟರು. ಕೇಂದ್ರ ಸರಕಾರ ಸಹಾಯ ಮಾಡಲಿ ಸುಮ್ಮನಿರಲಿ ಸೇಲಮಿನಲ್ಲಿ ಕಾರ್ಖಾನೆ ಆರಂಭಿಸುವದು ಖಂಡಿತವೆಂದು ತಮಿಳುನಾಡಿನ ಮುಖ್ಯಮಂತ್ರಿ ಭಕ್ತವತ್ಸಲಂ ಹೇಳಿರುವದರಿಂದ ತಮಿಳು ನಾಡಿನ ಚಳುವಳಿಗೆ ತಣ್ಣೀರು ಜೆಲ್ಲಿದಂತಾಗಿರುತ್ತದೆ. ಹೊಸಪೇಟೆಯ ವಿಷಯಮಾತ್ರ ಹೊಸತಾಗಿಯೇ ಇದೆ.

ಎಲ್ಲಾ ವ್ಯಾಂತ್ಯದವರಿಗೂ ಉಕ್ಕಿನ ಕಾರಖಾನೆ ಬೇಕೇ ಬೇಕು. ಅದನ್ನು ಪಡೆಯಲು ಅದೇನು ಗಲಾಟೆ ಮಾಡಲೂ ಅವರಲ್ಲಿ ಕೆಲವರು ಸಿದ್ಧವಾಗಿದ್ದಾರೆ. ನಾಳ್ಗನೆಯ ಕಾರ್ಖಾನೆ ಇನ್ನೂ ಉಕ್ಕು ಸಿದ್ಧಗೊಳಿಸುವ ಸ್ಥಿತಿಯಲ್ಲಿಲ್ಲದಿರುವಾಗ ಐದನೇ ಕಾರ್ಖಾನೆಗೇನು ಅವಸರ? ಹಾಗಿದ್ದರೂ ಅದನ್ನು ಪಡೆದೇ ತೀರಬೇಕೆನ್ನುವ ಹಟ! ಇದಕ್ಕೆ ಕಾರಣ ವ್ಯಾಂತ್ಯ ಮನೋಭಾವನೆ ಅಲ್ಲದೆ ಇನ್ನೇನು?

ನಿಜವಾಗಿ ಇದೊಂದು ವ್ಯಾಂತ್ಯದ ಪ್ರಶ್ನೆಯೇ? ಉಕ್ಕಿನ ಕಾರ್ಖಾನೆಗೆ ಯಾವದು ಯೋಗ್ಯ ಸ್ಥಳವೋ ಅದನ್ನಲ್ಲಿ ಸ್ಥಾಪಿಸುವದು ನೈಜ ರಾಷ್ಟ್ರೀಯ ಸರಕಾರದ ಕರ್ತವ್ಯ. ಆದರಲ್ಲಿ ವಿಮಾನಮೇಇವೆಣಿಸುವದು ಉತ್ತಮ ಸರಕಾರದ ಲಕ್ಷಣವಲ್ಲ. ಈಗಿರುವ ಸರಕಾರಕ್ಕೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇಷ್ಟತ್ತು ಜನರ ಜೀವ ಹಾಗೂ ಕೋಟಿಗಟ್ಟಲೆ ರೂಪಾಯಿ ನಷ್ಟ ಮತ್ತು ಜಪತೆಯ ನೈತಿಕ ಅಧಃಪತನ ಆಗಬೇಕಾಯಿತು— ಮತ್ತು ದೃಢ ನಿರ್ಧಾರದ ನಿಶ್ಚಯವಾಗಿಲ್ಲ! ಜವಾಬ್ದಾರಿಯ ಹೊಣೆಹೊತ್ತಿರುವ ಸರಕಾರವಾದರೋ ಗಲಾಟೆಕೋರರಿಗೆ, ಕನಿಷ್ಠ ಪಕ್ಷ ತನ್ನ ಪಕ್ಷದವರಿಗಾದರೂ, ಇದು ರಾಷ್ಟ್ರೀಯ ವಿಷಯ, ಇದರಲ್ಲಿ ನೀವು ಕೈಹಾಕಬಾರದೆನ್ನುವದನ್ನು ತಿಳಿಸುವ ಕಾರ್ಯದಲ್ಲಿ ಬಹಳ ಹಿಂದಕ್ಕೆ ಬಿದ್ದಿರುತ್ತದೆ. ತಿರುಕಾಮರಾಜರ ಬಾಯಿಯಿಂದಾಗಲೀ, ಶ್ರೀಮತಿ ಇಂದಿರಾ ಗಾಂಧೀಜಿಯವರ ಬಾಯಿಯಿಂದಾಗಲೀ ಸ್ಪಷ್ಟವಾಗಿ ಇಂತಹ ಮಾತುಗಳು ಬಂದಿರುವದಿಲ್ಲ. ಅವರೆಲ್ಲರಿಗೂ 'ಪಾರ್ಲಿಮೆಂಟ್' 'ನೋಡೋಣ' ವೆಂದು ಬೇಳೆ ಕಳುಹಿಸುತ್ತಿದ್ದಾರೆ. ಆಂಧ್ರ ವ್ಯಾಂತ್ಯ ಸರಕಾರವಾದರೋ ಗಲಾಟೆ ಕೋರರನ್ನು ಸದೆ ಬಡೆಯುವ ಬದಲು, ಗಲಾಟೆಕೋರರಿಗೆ ಆದರಲ್ಲೂ ಕಾಂಗ್ರೆಸಿಗರಿಗೆ ಸಹಾಯ ಮಾಡಿರುತ್ತದೆ, ದೇಶದ ಮೇಲೆ ಪ್ರೇಮ ಇರುವವನು ಹೀಗೆ ಕೈ ಹಾಕಿಯಾನೇ?

ಉಕ್ಕಿನ ಕಾರ್ಖಾನೆ ಬಹಳ ಮುಖ್ಯವೆನ್ನುವದರಲ್ಲಿ ಸಂದೇಹವಿಲ್ಲ. ಅದು ಭಾರತದ ಯಾವ ಭಾಗದಲ್ಲಿದ್ದರೇನು? ಅದು ಇಂದಿನ ಪರಿಸ್ಥಿತಿಯಲ್ಲಿ ಗಡಿಪ್ರದೇಶದಲ್ಲಿ [ಆಂಧ್ರ—ಕರ್ನಾಟಕ ಅಥವಾ ಕೇರಳ—ತಮಿಳ್ನಾಡ್ಗಡಿಯಲ್ಲಿ] ಇರಬಾರದೆ. ಪಂಚಮಸ್ತಂಭೀಯರಿಗೆ ಅಶ್ರಯವು ಸಿಗಬಹುದಾದಂಥ ಸ್ಥಳದಲ್ಲಿರಬಾರದು. ನೈಯುಕ್ತಿಕ ಅಥವಾ ಪಕ್ಷ ಹಾಗೂ ವ್ಯಾಂತ್ಯದ ಸಂಕೋಚ ದೃಷ್ಟಿಯನ್ನಿಟ್ಟುಕೊಂಡು ಪ್ರಯೋಜನಕ್ಕೆ ಬಾರದ ಸ್ಥಳದಲ್ಲಿರಬಾರದು. ಎಲ್ಲಿ ಆದುರ ಸಿಗುತ್ತದೋ ವಿದ್ಯುಚ್ಛಕ್ತಿ ದೊರಕುತ್ತದೋ, ಬಂದರಿನ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವೋ ಅಂತಹ ಸ್ಥಳದಲ್ಲೇ ಕಾರ್ಖಾನೆಯ ಸ್ಥಾಪನೆಯಾಗಬೇಕು. ಆಗ ಆಂಧ್ರದಲ್ಲಿ ಉಕ್ಕು ತಯಾರಾದಲ್ಲಿ ಆಂಧ್ರದವನಿಗೆ ಮಾತ್ರ ಆ ಉಕ್ಕೆನ್ನುವ ಭಾವನೆಯೂರಲ್ಲೂ ಬರುವದಿಲ್ಲ. ಭಾರತೀಯರೆಲ್ಲರಿಗೂ ಅದರ ಪ್ರಯೋಜನವಾಗುತ್ತದೆ. ಅದನ್ನು ಬಿಟ್ಟು ವ್ಯಾಂತ್ಯ ಮನೋಭಾವನೆಯಿಂದ ,ಹೊಡೆದಾಡಿಕೊಂಡಲ್ಲಿ ಸರಕಾರವು ವಿಶಾಖ ಪಟ್ಟಣದಲ್ಲೂ ಸೇಲಮಿನಲ್ಲೂ ಹೊಸಪೇಟೆಯಲ್ಲೂ ಕಲ್ಲದೆ ಇನ್ನಾರಾದರೂ ಗಲಾಟೆ ನಡೆಸಿದಲ್ಲೆ ಆಲ್ಲೂ ಕಾರ್ಖಾನೆ ತೆರೆದು ಬಿಡುತ್ತದೆ. ಆದರೆ ಅದಕ್ಕಾ ಪ್ರಮಾಣದ್ಲೂರಬಹುದೆನ್ನುವದನ್ನೆಲ್ಲರೂ ವೂಹಿಸಿಕೊಳ್ಳಲುಸಾಧ್ಯವಿದೆ. ಹಿರಿದು ಹಂಚಿಹೋದ ಉಕ್ಕಿನ ಕಾರ್ಖಾನೆ ಬೇಕೇ?

ಇದಕ್ಕೆ ಕಾರಣ ನಮ್ಮಲ್ಲಿ ಏಕಾಂಷ್ಟ್ರೀಯತೆಯ ಅಭಿಪ್ರಾಯ ಇಲ್ಲದಿರುವದೇ. ನಾವೆಲ್ಲರೂ ಭಾರತೀಯರೆಂಬ ಸ್ಪಷ್ಟ ಸತ್ಯ ವಾಕ್ಯದ ಅರಿವು ನಮಗಾಯಿತೆಂದಲ್ಲಿ ನಾವು ಈ ರೀತಿ ಇಂತಹ ವಿಷಯಗಳಿಗಾಗಿ ಕಚ್ಚಾಡಿಕೊಳ್ಳುವದಿಲ್ಲ. ಆಗ ನಮಗೆಗೊತ್ತಾದೀತು. ನಮಗೆ ಬೇಕಾಗಿರುವದು ಇಂತಹ ಉಕ್ಕಿನ ಕಾರ್ಖಾನೆಗೆಗಳಲ್ಲ— ಉಕ್ಕಿನ ನರನಾಡಿಗಳು, ಕಬ್ಬಿಣದ ಮಾಂಸ ಖಂಡಗಳೆಂದು. ಅವು ನಾವು ನಾವೇ ಕಚ್ಚಾಡಿಕೊಳ್ಳಲಿಲ್ಲ. ಪರಕೀಯರ ಆಕ್ರಮಣವನ್ನೆದುರಿಸಲು. ಅವನ್ನು ಬಿಟ್ಟು ತೆಲುಗರು, ತಮಿಳರು, ಕನ್ನಡಿಗರು ಇತ್ಯಾದಿ ಕ್ಷುಲ್ಲಕವಾದಗಳ ಬಗ್ಗೆ ನಾವು ಜಗಳವಾಡುವಶ್ಟು ಕುಬ್ಜಿತವ್ಗೂ ಭಾರತದ ನಾಳಿನ ಭಾಗ್ಯವನ್ನು ತಿದ್ದಲು ಬೇಕಾದ ಶಕ್ತಿ ಚೈತನ್ಯಗಳ ಸಂಚಯದಿಂದ ನಾವು ವಂಚಿತರಾಗುತ್ತೇವೆ. ಭಾರತದ ಭವಿಷ್ಯವು ಕೇವಲ ಶಕ್ತಿ ಸಂಚಯದ ಮೇಲೆಯೇ ನಿಂತಿದೆ.

ಗಾವೋ ವಿಶ್ವಾಸ್ಯ ಮಾತರಃ

ಗೋರಕ್ಷಣೆ—ಜನಸಂರಕ್ಷಣೆ

ಬರೆದವರು

ಶ್ರೀ ಕೆ. ಪೂವಪ್ಪ

ಪ್ರತಿಯೊಬ್ಬನಿಗೂ ಕರ್ಮಕ್ಕೆ ತಕ್ಕ ಫಲ ಬಂದೇ ಬರುವುದು. ಆದರೆ ರಾಜನು ಸರಕಾರವು ಮಾಡಿದ ಕರ್ಮಕ್ಕೆ ಸರ್ವ ಪ್ರಜೆಗಳೂ ಆದರ ಫಲಭಾಗಿಗಳಾಗುತ್ತಾರೆ. ಒಂದುರಾಷ್ಟ್ರವೆಂದರೆ "ಪಶುಧಾನ್ಯೇ ಹಿರಣ್ಯ ಸಂಪದಾ ಶೋಭತೇ ರಾಜತೇ ಇತಿ ರಾಷ್ಟ್ರಂ" ಗೋಧಾನ್ಯ ಸಂಪತ್ತುಗಳಿಂದ ತುಂಬಿದ ದೇಶವು ಆರ್ಥಿಕ, ಧಾರ್ಮಿಕ ಇತ್ಯಾದಿ ಚತುರ್ವಿಧ ಸಂಪತ್ತುಗಳಿಂದ ಮೆರೆಯಲು ಸಾಧ್ಯವಿದೆ. ವರ್ಷಂ ಪ್ರತಿ ಗೂಡಿಯೂಗಿ ಬರುವ ಗೋ ಪೂಜೆಯು ಒಂದು ಧಾರ್ಮಿಕ ಹಿನ್ನೆಲೆಯಾಗಿದೆ. ಗೋವಿನ ವಿಶೇಷತೆಯು ರಾಮಾಯಣ ಮಹಾಭಾರತಾದಿ ಪತಿಹಾಸಿಕಗ್ರಂಥದಲ್ಲೂ ಪುರಾಣ ಶಾಸ್ತ್ರಗಳಲ್ಲೂ ಉಲ್ಲೇಖಿತವಿದೆ. 'ಅಂತಕಾಯ ಗೋಷ್ಠಾತಂ" ಎಂಬಂತೆ ಗೋಹತ್ಯೆ ಮಾಡಿದವನಿಗೆ ಪ್ರಾಣ ದಂಡನೆಯು ಕೂಡ ವಿಧಿಸಲ್ಪಡಬೇಕೆಂಬುದಾಗಿ ನೇದ ಶಾಸ್ತ್ರಗಳು ಸಾರಿ ಗೋಹತ್ಯವನ್ನು ಕಟುವಾಗಿ ಟೀಕಿಸಿವೆ.

ಮನುಷ್ಯ ಜೀವನವು ಬರೀ ಆರ್ಥಿಕ ಸಿದ್ಧಾಂತದಿಂದ ಮಾತ್ರ ನಡೆಯ ಲಾರದು. ಅದರ ಸ್ಥಾಯಿತ್ವಕ್ಕೆ ನೈತಿಕ ಸಿದ್ಧಾಂತವೂ ಬೇಕು. ವ್ಯಾವಹಾರಿಕ ಧರ್ಮದಲ್ಲಿ ನೈತಿಕ ಸಿದ್ಧಾಂತವು ಉಚ್ಚ ಅಂಗವಾಗಿದೆ. ಧರ್ಮದ ಮಹತ್ವವು ಬರೆ ಪೂಜೆ ವಾರಾಯಣಾಗಳಿಂದ ಬರುವುದಿಲ್ಲ. ಧರ್ಮದ ಪರೀಕ್ಷೆಯೂಗ ಬೇಕಾದರೆ ನೈತಿಕ ಆಚಾರವೂ ಒಳ್ಳೆದಾಗಿರಬೇಕು. ಪರೋಪಕಾರ ಮಾಡಿದವನಿಗೆ ಕೃತಜ್ಞತೆ ತೋರಿಸುವದು ಧಾರ್ಮಿಕಸಿದ್ಧಾಂತವಾಗಿದೆ. ಯಾವಾತನು ಪರೋಪಕಾರ ಮಾಡಿದವನಿಗೆ ಕೃತಜ್ಞತೆ ತೋರಿಸುವುದಿಲ್ಲವೋ ಅವನು ಕೃತಘ್ನನಾಗುತ್ತಾನೆ. ಪ್ರತಿಕೃತಜ್ಞತಾ ಭಾವನೆಯಿಂದಲೇ ಗೋವಂಶವನ್ನು ವಿಚಾರಿಸುವುದಾದರೆ ದನವು ಹೆತ್ತ ತಾಯಿಗಿಂತಲೂ ಹಿರಿದಾಗಿದೆ. ತಾಯಿಯೂದರೂ ತನ್ನ ಮಗು ಎಂಬ ಪ್ರೀತಿಯಿಂದ ಹಾಲುಣಿಸುತ್ತಾಳೆ. ಆದರೆ ಮೂತ್ರ ಸದೃಶವಾದ ದನವು ನಮ್ಮ ಉಯುಷ್ಯ ಪೂರ್ಣ ನಿಸ್ವಾರ್ಥದಿಂದ ಆಮೃತ ಸದೃಶವಾದ ಹಾಲುಣಿಸಿ ನಮ್ಮನ್ನು ಜೀವನ ಪರ್ಯಂತ ಸಾಕುತ್ತದೆ.

ಈಕ್ಕೆ ಪ್ರಧಾನವಾದ ನಮ್ಮ ದೇಶದಲ್ಲಿ ನಾವು ಸಂಪೂರ್ಣ ದನಗಳ ಮೇಲೆಯೇ ಹೊಂದಿಕೊಂಡಿದ್ದೇವೆ. ಪರಿಹಿತವನ್ನು ಬಯಸುವದನವು ಗದ್ದೆಗಳಲ್ಲಿ ಬೆಳೆಬೆಳೆಯುವ ಶಕ್ತಿಯನ್ನು ಸ್ಥಾಯಿಯಾಗಿ ನಿಲ್ಲಿಸಲು ಸಾಧನವಾದ ತನ್ನ ಸೆಗಣಿ ಮೂತ್ರ ಎಂಬ ಉತ್ತಮ ಗೊಬ್ಬರವನ್ನು ಕೊಟ್ಟು ನಮ್ಮ ಜೀವನಾಧಾರಕ್ಕೆ ಕಾರಣವಾಗಿದೆ. ವಿಶಾಲ ದೃಷ್ಟಿಯಿಂದ ವಿಚಾರಿಸಿದರೆ ನಾವು ಸಂಪೂರ್ಣ ಗೋವಂಶದ ಮೇಲೆಯೇ ಹೊಂದಿಕೊಂಡಿದ್ದೇವೆ. ಆಯುರ್ವೇದ ಚಿಕಿತ್ಸೆಯಲ್ಲಿ ಗೋಸಂಪತ್ತು ಸುಹಕ್ಕರ ಸ್ಥಾನವನ್ನು ಗಳಿಸಿದೆ ಎಂಬ ವಿಚಾರ ಸರ್ವ ವಿದಿತವಾಗಿದೆ.

ಗೋವಂಶವು ನಮಗೆ ಮಾಡುವ ಉಪಕಾರಕ್ಕೆ ನಾವು ಸರ್ವಸ್ವವನ್ನು ಅವುಗಳಿಗೆ ಅರ್ಪಿಸಿದರೂ ಅವುಗಳ ಋಣದಿಂದ ಮುಕ್ತರಾಗಲಿಕ್ಕಿಲ್ಲ. ಆದರೆ ಇಂದು ಪಾ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಳ್ಕ,

ಸುಬ್ರಹ್ಮಣ್ಯ, ದ. ಕ.

ಚಂಪಾ ಷಷ್ಠಿ ಮಹಾ ರಥೋತ್ಸವ

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲೂಕು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಬಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವಶಿಸ್ಯ ಸಂಪ್ರದಾಯ ಸ್ಕಾರ ಇದೇ ಪರಾಭವ ಸಂವತ್ಸರದ ಕಾರ್ತಿಕ ಬಹುಳ ದಿತಿಯ ಶುಕ್ರವಾರ ತಾ. 9—12—66ರಿಂದ ಉತ್ಸವವು ಪ್ರಾರಂಭವಾಗಿ ತಾ. 11—12—66ರಲ್ಲಿ ಲಕ್ಷದೀಪೋತ್ಸವ,
ತಾ. 16—12—66ರಲ್ಲಿ ಹೂವಿನ ಕೇರು ಉತ್ಸವ,
ತಾ. 17—12—66ರಲ್ಲಿ ಪಂಚಮಿ ರಥೋತ್ಸವ

ತಾ. 18-12-66ರಲ್ಲಿ **ಚಂಪಾ ಷಷ್ಠಿ ಮಹಾ ರಥೋತ್ಸವ,**

ತಾ. 19—12—66ರಲ್ಲಿ ಅವಭೃತೋತ್ಸವವೇ ಮೊದಲಾದ
ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ವಿ. ಸೂ.— ಕಿರುಷಷ್ಠಿ ಉತ್ಸವವು ತಾ. 16-1-67ಕ್ಕೆ ಜರಗುವುದು.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟ್‌ನಲ್ಲಿ

O. S. 466/65.

ಮೋಂಟ ಗೌಡ —ವಾದಿ.
ಶೇಕಪ್ಪ ರೈ ಕೂಡಾ —ಪ್ರತಿವಾದಿರು.

ತಿನೇ ಪ್ರತಿವಾದಿ ಬಾಬು ರೈ, ಶೇಕಪ್ಪ ರೈ ಗಳಿಗೆ.

ಮೇಲಿನ ನಂಬ್ರವನ್ನು ನಮ್ಮ ಹಾಜ್ರಾತಿಯ ಬಗ್ಗೆ 25—11—66ಕ್ಕೆ ಇಟ್ಟಿರುವುದರಿಂದ ಉಪ್ಪುಜ್ಞ , ಮನೇವಾರಿಯ ಆಕ್ಷೇಪಣಾ ಅರ್ಜಿದಾರ್ತಿಗೆ ದಿನ ನೀವು ಕೋರ್ಟಿಗೆ ಬರೀಲಿ ಮೊಕಲಕಾಗ್ಲಿ, ಸ್ವತಹಾ ಆಗ್ಲಿ ಹಾಜರಾಗಿ ಉಡಿಹರಿಸತಕ್ಕದ್ದು. ತಪ್ಪಿದ್ರೆ ಆ ದಿನ ನಿಮ್ಮನ್ನು ಶಿಸ್ತಾಯಮಾಡಿ ನಂಬ್ರದ ತನಿಯನ್ನು ಮುಂದರಿಸಲಾದೀತ..

B. Chidanand Rao
Vakil for Plaintiff

ಪುತ್ತೂರು, 17—11—66.

ಶ್ವಮೂರ್ತಿಯ ಸಭೆಯ ಪ್ರಧಾನಕ್ಕೆ ಒಳಗಾಗಿದ್ದ ಬಡಕಲಾದ ಬಂಜೆ ದನಗಳನ್ನು ಉತ್ತಮ ರೀತಿಯಲ್ಲಿ ಸಾಕಲು ದಾನಿಗಳು ಇನ್ನಷ್ಟು ಅಧಿಕ ಸ್ವಾರ್ಥಗಳಿಗೆ ಒಳಗಾಗಿ ತಮ್ಮ ಎತ್ತುಗಳನ್ನು ಕೃಷಿಯ ಅಭಿವೃದ್ಧಿಗೆ ಉಪಯೋಗಿಸದೆ ಕಸಾಯಿಗಳ ಕತ್ತಿಗೆ ಬಲಿ ಕೊಡುವ ಕರುಣಾಜನಕ ವೃತ್ತಿಯನ್ನು ನಾವು ನಮ್ಮ ಪವಿತ್ರ ಧಾರವಾಹಿಯಲ್ಲಿ ಕಾಣಬೇಕಾಗಿದೆ. ಬರೆಹುಲ್ಲು ಸೊಪ್ಪು ತಿಂದು ಜನರ ಹಸಿವನ್ನು ತಡೆಸಿ ತನ್ನ ಕಷ್ಟವನ್ನು ಲೆಕ್ಕಿಸದೆ ಪರಹಿತವನ್ನು ಬಯಸುವ ಗೋವಂಶವನ್ನು ಕೊಂದು ತಿನ್ನುವ ಚಟವನ್ನು ಬಿಚ್ಚುತ್ತಾ ಬರುವ ಮಾನವರಿಗೆ ಆಕ್ಷಯ ಅಭಾವ ಬರುವುದು ವಿಶೇಷವೇನೂ ಇಲ್ಲ. ಆದ್ದರಿಂದ ಪ್ರಯೋಜನವಿಲ್ಲದ ಮುದಿ ಬಂಜೆ ಎತ್ತು ಬಡಕಲಾದ ದನಕರುಗಳನ್ನು ಕೂಡಾ ಕೊಲ್ಲತಕ್ಕದಲ್ಲ ಎಂಬ ನೈತಿಕ ಭಾವನೆಯನ್ನು ತಾಳಿ ಅವುಗಳನ್ನು ಸಾಕಿ ತವುಗಳಿಂದ ನಮ್ಮ ದೇಶಕ್ಕೆ ತುಂಬಾ ಪ್ರಯೋಜನವಿದೆ ಎಂಬುದನ್ನ ನಮ್ಮ ಜನ ವಿಶಾಲ ಬುದ್ಧಿಯಿಂದ ಆರಿತು ಗೋ ಸಂರಕ್ಷಣೆಯೇ ಆಹಾರದ ಮೂಲ ಮತ್ತು ಜೀವನದ ಆಧಾರ ಎಂಬ ನೈತಿಕ ಭಾವನೆಯನ್ನು ತಾಳಿ ವಿಶಾಲ ದೃಷ್ಟಿಯಿಂದ ವಿಚಾರಿಸಿ ಗೋವಧೆ ನಿಲ್ಲಿಸಿ ದೇಶದ ಆರ್ಥಿಕ ಮತ್ತಾಗೂ ಧಾರ್ಮಿಕ ಉನ್ನತಿಯನ್ನು ಬಯಸುವ ಹುಣ್ಣಿಮೆ ಕಾರ್ಯದ ಪ್ರಯತ್ನವನ್ನು ಕೈಕೊಳ್ಳುವುದು ಆಗತ್ಯ. ಇದಕ್ಕಾಗಿ ಎಲ್ಲರೂ ಪ್ರೋತ್ಸಾಹ ನೀಡುವುದು ಅವಶ್ಯ.

ರಾವಣ ಸನ್ಯಾಸಿಗಳ ದನಸಂಘ

(ಕಳೆದ ಸಂಚಿಕೆಯಿಂದ)

ಭಾರತದಲ್ಲಿ ಸರ್ವತ್ರ ಭೀಕರ ಬರಗಾಲವು ತಾಂಡವವಾಡಿತ್ತಿರುವಾಗ, ಹಳ್ಳಿ ಹಳ್ಳಿಗಳಲ್ಲಿ ಗೋಚರವಾವುಗಳೆಲ್ಲಾ ದರ್ಶನಕ್ಕಾಗಿ ದನಗಳಿಗೆ ಹಿಡಿ ಹುಲ್ಲಿಗೆ ಗತಿ ಇಲ್ಲದಂತಾಗುತ್ತಿರುವಾಗ, ಗೋವುಗಳನ್ನು ದೇವರೆಂದು ನಂಬುವ ಮಾನವರು ಈಗ ಏನು ಮಾಡಬೇಕಾಗಿತ್ತು? ತಮ್ಮ ಸಂಘಟನಾ ಶಕ್ತಿಯನ್ನು ಯಾವುದಕ್ಕಾಗಿ ಉಪಯೋಗಿಸಬೇಕಾಗಿತ್ತು? ಹಸಿದ ಜನರಿಗೆ ಬಡಕಲು ದನಕರುಗಳಿಗೆ ತುಂಡು ರೊಟ್ಟಿ, ಹಿಡಿ ಹುಲ್ಲುಗಳನ್ನಾದಿಸಲು ಪ್ರಯತ್ನಿಸುವದನ್ನು ಬಿಟ್ಟು ದೆಹಲಿಯಲ್ಲಿ ಗೂಂಡಾಗಳನ್ನ ಛೂಬಿಟ್ಟು ಮನೆ, ವಾಹನಗಳಿಗೆ ಬೆಂಕಿ ಇಟ್ಟರೆ ದನಗಳ ಹೊಟ್ಟೆ ಕಣಿಯತೆ? ಅವುಗಳ ಜೀವ ಉಳಿಯತೆ?

"ಹಿಂಸೆಯನ್ನು ನಾವೂ ಪ್ರತಿಭಟಿಸುತ್ತೇವೆ. ಗೂಂಡಾಗಳು ನಮ್ಮೊಂದಿಗೆ ಸೇರಿಬಿಟ್ಟರು. ಗೋವಧಾ ನಿರೋಧವನ್ನು ವಿರೋಧಿಸುವವರೂ ನಮ್ಮೊಂದಿಗೆ ಸೇರಿಬಿಟ್ಟರಬೇಕು___" ಇತ್ಯಾದಿ ಇತ್ಯಾದಿಯಾಗಿ ದನಗಳನ್ನು ಬದುಕಿಸಲು ಹೊರಟಿರುವ ಈ ದನಸಂಘದ ಮುಖಂಡರು ಈಗ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ. ತಮ್ಮಿಂದ ಹತೋಟಿ ಸಾಧ್ಯವಿಲ್ಲದಿರೋಗವುದಾದರೆ ಇವರಿಗೆ ದೆಹಲಿಯಲ್ಲಿ ಏಳು ಲಕ್ಷ ಜನರನ್ನು ಕಲೆ ಹಾಕುವ ಕಾರ್ಯವೇಕೆ ಬೇಕಾಗಿತ್ತು?

ಗುರುಗಳು, ಜಗದ್ಗುರುಗಳು, ಸಾಧು

ಕಾಸರಗೋಡು ಪ್ರಶ್ನೆ
ಕಾಸರಗೋಡು ಪ್ರಶ್ನೆಯ ಕುರಿತು ಕೆಲವು ಸತ್ಯಾಂಶಗಳು

ಲೇಖಕರು: ಶ್ರೀ ಎಂ. ಉಮೇಶ ರಾವ್, ಎಡ್ವಕೇಟ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಉದಕ ಮಂಡಳದಲ್ಲಿ ಸೇರಿದ ದಕ್ಷಿಣ ವಲಯ ಸಮಿತಿಯಮೂರನೆಯ ಸಭೆಯ ವೇಳೆ, ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರ ಸಭೆಯನ್ನು ಕೂಡಿಸಿ ಕಾಸರಗೋಡು ಪ್ರಶ್ನೆಯನ್ನು ಬಗೆಹರಿಸಲು ಯತ್ನಿಸುವೆನೆಂದಾಗಿ ಪಂಡಿತ್ ಹಂಸರೊಡನೆ ಕೇರಳದ ಮುಖ್ಯ ಮಂತ್ರಿ ನಂಬೂದಿರಿಪಾಡರು ಒಪ್ಪಿಕೊಂಡರೂ, ಹಲವು ತಿಂಗಳುಗಳ ವರೆಗೆ ಸಭೆಯನ್ನು ಕರೆಯಲೇ ಇಲ್ಲ. ಅನೇಕ ಸಲ ಒತ್ತಾಯಿಸಿದ ನಂತರ 1959ರ ಮಾರ್ಚ್ ತಿಂಗಳಲ್ಲಿ ಸಭೆ ಕೂಡಿ ಸುವರೆ ಕಾಂಗ್ರೆಸ್, ಪಿ. ಯಸ್. ಪಿ ಮುಸ್ಲಿಂ ಲೀಗ್, ಆರ್.ಎಸ್.ಪಿ.ಪಕ್ಷಗಳ ಮುಖಂಡರಾದ ದಾಮೋದರ ಮೆನೋನ್, ಪಟ್ಟಂತಾನು ಪಿಳ್ಳೆ, ಸೀದಿ ಸಾಹೇಬ್ ಮತ್ತು ನೀಲಕಂಠನ್ ನಾಯರರನ್ನು ನಂಬೂದಿರಿಪಾಡರು ಆಮಂತ್ರಿಸಿದರು. ಸಭೆ ಕೂಡುವ ಕೆಲವು ದಿನಗಳ ಮುಂಚಿತವಾಗಿ ನಾನು ಅವರೆಲ್ಲರನ್ನು ಕಂಡು ಸಭೆಗೆ ಬಂದು ನಮಗೆ ಸಹಾಯ ಮಾಡಬೇಕಾಗಿ ವಿನಂತಿಸಿದೆನು. ತಾನು ಪಿಳ್ಳೆಯವರು ನಮ್ಮ ಬೇಡಿಕೆಯು ನ್ಯಾಯವಾದುದಾಗಿಯೂ ಜನತೆಯು ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಕಾಸರಗೋಡು ತಾಲೂಕನ್ನು ಕೇರಳದ ಅಂಗವಾಗಿ ಇರಗೊಳಿಸುವುದು ಸರಿಯಿಲ್ಲವೆಂಬುದಾಗಿಯೂ ಅನೇಕ ಕಡೆಯಿಂದ ನುಡಿದರು. ಅಲ್ಲದೆ ಕೇರಳ ನ್ಯಾಯ ವಿಧಾಯಕ ಸಭಾ ಮಂದಿರದ ಬಳಿ ನನ್ನನ್ನು ಎರಡು ಸಲ ಕಂಡಾಗ ಇದೇ ಅಭಿಪ್ರಾಯವನ್ನು ವಿಧಾಯಕ ಸಭೆಯ ಪಿ. ಯಸ್. ಪಿ. ಸದಸ್ಯರಾದ ಮೊನ್ನರ ಶ್ರೀಧರನ್ ಮತ್ತು ಶ್ರೀ ಚಂದ್ರಶೇಖರನ್ ರೊಡನೆ ತಿಳಿಸಿದರು. ತಾನು ಖಂಡಿತವಾಗಿ ಸಭೆಗೆ ಬರುವೆನಾಗಿ ವಾಗ್ದಾನವಿತ್ತರು. ಶ್ರೀ ದಾಮೋದರ ಮೆನೋನರು ತನ್ನ ಅಭಿಪ್ರಾಯವನ್ನು ಸೂಚಿಸುವರೆ ಹಿಂಜರಿದರಾದರೂ ಸಭೆಗೆ ಬರುವೆನಾಗಿ ತಿಳಿಸಿದರು. ಸೀದಿಸಾಹೇಬರು ಆರೋಗ್ಯವು ಒಳ್ಳೆಯದಿರಲಿಲ್ಲ. ತನ್ನ ಪರವಾಗಿ ಸಿ. ಯಚ್. ವ ಹಮ್ಮದ್ ಕೋಯರನ್ನು ಕಳುಹಿಸುವರಾಗಿ ಒಪ್ಪಿಕೊಂಡರು. ಅಲ್ಲದೆ ಕಾಸರಗೋಡು ತಾಲೂಕನ್ನು ಮೈಸೂರು ಪ್ರಾಂತ್ಯದಲ್ಲಿ ವಿಲೀನಗೊಳಿಸುವುದನ್ನು ಮುಸ್ಲಿಂ ಲೀಗ್ ನಿರ್ಣಾಧಿಕಾರಿಕವಾಗಿ ವಿರೋಧಿಸುತ್ತದೆಂದು ಹೇಳಿದರು. ಶ್ರೀ ಕಂಠನ್ ನಾಯರರು ಮುಚ್ಚುಪರಿಯಿಲ್ಲದೆ ಹೀಗೆಂದು ನುಡಿದರು, "ನಮ್ಮ ಪ್ರಶ್ನೆಗಳಾಗಲಿ ನ್ಯಾಯಾನ್ಯಾಯಗಳನ್ನು ನಾನು ಹೆಚ್ಚಿಗೆ ಅರಿತವನಲ್ಲ. ಶ್ರೀ ನಂಬೂದಿರಿಪಾಡರು ಈ ವಿಷಯಗಳಲ್ಲಿ ಮೊತ್ತ ನಮ್ಮ ಅಭಿಪ್ರಾಯವನ್ನು ತಿಳಿಯಲಪೇಕ್ಷಿಸುವುದೇಕೆ? ಇತರ ಮುಹಸ್ವದ ಪ್ರಶ್ನೆಗಳ ಕಂರಿಕು ನಮ್ಮ ಸಲಹೆಯನ್ನು ಪಡೆಯುತ್ತಾರೆನೋ? ದೂಸಣೆಗೆ ಆಸ್ಪದವಾದರೆ ನಾನೆಲ್ಲಿಗೂ ಸಹಕಾರಿಗಳಾಗಿ ಬೇಕೆಂದು ಅವರ ಇಚ್ಛೆಯೆ? ನಾನು ಸಭೆಗೆ ಬರುವುದಿಲ್ಲ. ಆ ದಿನ ಕೈಲೋನಲ್ಲಿ ನನಗೆ ಅತ್ಯಗತ್ಯ ಕೆಲಸವಿದೆ. ಆ ಕಾಲದಲ್ಲಿ ಇದೇ, ಕೇರಳದ ಮುಖಂಡರು ಮನೋಭಾವವಿದ್ದಿತು. ಪ್ರತಿಯೊಂದು ರಾಜಕೀಯಪಕ್ಷವೂ, ತನ್ನ ಯೂವುದೊಂದು ಕಾರ್ಯಕ್ರಮದ ದೋಷವನ್ನು ಜನತೆಗೆ ಎತ್ತಿ ತೋರಿಸಿ ಇತರ ಪಕ್ಷಗಳು ತನ್ನ ಬಲವನ್ನು ಕುಂದಿಸಲೆತ್ನಿಸುವವೋ ಎಂದು ಸಂಶಯಪಡುತ್ತಿತ್ತು. ಈ ರೀತಿಯ ಬಲವಾದ ಪರಸ್ಪರ ಅಪಶ್ವಾಸ ಮತ್ತು ಒಂದು ಪಕ್ಷವನ್ನ ಉಳಿದ ಪಕ್ಷಗಳು ಟೀಕಿಸಿ ನಾಶಪಡಿಸಲೆತ್ನಿಸುವ ಕವ್ಯಾಸದಿಂದಾಗಿ ನವ ಗೆ ನ್ಯಾಯ ದೂರಕಲುಸಾಧ್ಯವಾಗಲಿಲ್ಲ. ಇಂದು ಕೂಡಾ ನಮ್ಮ ನ್ಯಾಯ ಸಮ್ಮತವಾದ ಬೇಡಿಕೆಯನ್ನ ತೀವ್ರವಾಗಿ ಎದುರಿಸಲು ಈ ಮನೋಭಾವವೇ ಪ್ರಾಮುಖ್ಯ ಕಾರಣವೆಂದು ತಿಳಿಯಬೇಕಾಗುತ್ತದೆ.

ಮುಖಂಡರಸಭೆಯು ಮಧ್ಯಾಹ್ನ 2 ಗಂಟೆಗೆ ಮುಖ್ಯಮಂತ್ರಿಯವರ ಕೋಣೆಯಲ್ಲಿ ಸೇರಿತು. ನಂಬೂದಿರಿಪಾಡರೂ, ದಾಮೋದರ ಮೆನೋನರೂ, ಮಹಮ್ಮದ್ ಕೋಯರೂ ಹಾಜರಿದ್ದರು. ನಾನು ಹಾಜರಾಗಬಹುದೆಂದು ನಂಬೂದಿರಿಪಾಡರು ತಿಳಿಸಿದ್ದನು. ಶ್ರೀಕಂಠ ನಾಯರರು ಬರಲಾರರೆಂದು ನಾನು ತಿಳಿಸಿದೆನು. ತಾನು ಪಿಳ್ಳೆಯವರು ಒರುವರಂದು ನಿರೀಕ್ಷಿಸಿದೆವು. ಅವರ ವತಿಗೆ ಟೆಲಿಫೋನ್ ಮೂಲಕ ತಿಳಿಸಿದರೂ ಅವರು ಪತ್ತೆಯೇ ಇಗಲಿಲ್ಲ. ೧ ಗಂಟೆಯ ವರೆಗೆ ಅವನ್ನು ಕಾದೆವು. ಅದರಿಂದೆಯಲ್ಲಿ ಕಾಸರಗೋಡು ಪ್ರಶ್ನೆಯ ವಿಷಯ ಸೂಚನಾದಿದವು. ಮಹಮ್ಮದ್ ಕೋಯರು ಲೀಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಂಬೂದಿರಿಪಾಡರೂ ದಾಮೋದರ ಮೆನೋನರೂ ಒಬ್ಬರು ಮತ್ತೊಬ್ಬರ ಅಭಿಪ್ರಾಯವನೇನೆಂದು ತಿಳಿಯಲು ಆತುರ ಹುತ್ತಿದ್ದರಲ್ಲಿ, ತಮ್ಮ ಪಕ್ಷದ ಧೋರಣೆಯನ್ನು ಸ್ಪಷ್ಟಪಡಿಸಲಿಲ್ಲ. ಲೋಕಸಭೆಯ ಚುನಾವಣೆಯು ವೇಳೆ ಶ್ರೀ ಎ. ಕೆ. ಗೋಪಾಲನ್ ಮತ್ತು ಆವರ ಸಹೋದ್ಯೋಗಿಗಳು ಮಂಜೇಶ್ವರ ಮತ್ತ ಕುಂಬಳಾ ಘಟ್ಟಗಳನ್ನ ಮೈಸೂರು ಪ್ರಾಂತ್ಯದಲ್ಲಿ ವಿಲೀನಗೊಳಿಸಬಹುದೆಂದೂ ಕಾಸರಗೋಡು ಘಿಕ್ಕದ ಪ್ರಶ್ನೆಯನ್ನು ನ್ಯಾಯಸಿಗೆಗೆ ಒಪ್ಪಿಸಿರಬಹುದೆಂದೂ ತಮ್ಮ ಪಕ್ಷದ ಅಭಿಮತವೆಂದು ಬಹಿರಂಗವಾಗಿ ಘೋಷಿಸಿದುದರಿಂದ, ನಂಬೂದಿರಿಪಾಡರ ಅಭಿಪ್ರಾಯವು ಇದೇ ರೀತಿ ಇರಬಹುದೆಂದು ನಂಬಲಾಗಿತ್ತು. ಆದರೆ ಇಂದು ಕಮ್ಯುನಿಸ್ಟ್ ಸ್ವಾರಸ್ಯಕ್ಕೆ ಒಳಗೇ ಕಡಿಮೆ ಮಂದಿದುದರಿಂದ ಅವರು ಕಾಸರಗೋಡು ಪ್ರಶ್ನೆಯ ಕುರಿತು ಇತರ ಪಕ್ಷಗಳ ಬೆಂಬಲವನ್ನ ಪೇಕ್ಷಿಸುತ್ತಿದ್ದರೆಂದು ನಾನು ಎಣಿಸಿದೆನು. ತಾನು ಪಿಳ್ಳೆಯವರನ್ನು ವಿಚಾರಿಸುವುದು. ಅತ್ಯಗತ್ಯವೆಂದು ಎಲ್ಲರೂ ಅಭಿಪ್ರಾಯಪಟ್ಟರು. ಬರುವೆನೆಂದು ಕಲ್ಪಿಸಲು ಪಚ್ಚಪ್ಪನೆಯಿಕ್ಕ ಕೂಡ್ಲಿತಾನ ಪಕ್ಷಿಯವರು ಬಾರದಿರುದ್ದುದರಿಂದ ನಾನು ಜೇಜಾರಗೊಂದೆನು. ಆದರೆ ಅವರ ಘೋರಿಸ್ಥಾನವು ಕೆಲಸಕೂಲಿರುವುದರಿಂದ ಸಭೆಯನ್ನು ಮುಂದೂಡಬಹುದೆಂದು ಸೂಚಿಸಲು ನಾನು ಸ್ವೀಕರಿಸಿದೆನು. ಇನ್ನೊಂದು ಸಭೆಯನ್ನು ಬೇಗನೆ ಕರೆಯುವವನಾಗಿ ನಂಬೂದಿರಿಪಾಡರು ತಿಳಿಸಿದರು. ನಾನು ಅಲ್ಲಿಂದ ಹೊರಟು ನನ್ನ ವಸತಿಯ ಕಡೆಗೆ ಹೋಗುವಾಗ ಶ್ರೀ ಚಂದ್ರಶೇಖರನನ್ನು ಎದುರುಗೊಂಡೆನು. ಸಭೆ ವಿಫಲವಾಯಿತೋ ಎಂದು ಅವರು ನನ್ನನ್ನು ಪ್ರಶ್ನಿಸಿದರು. ತಾನು ಪಿಳ್ಳೆಯವರ ತನಗೆ ಅನುಪರವಾಗಿ ಸಭೆಗೆ ಹಾಜರಾಗಬೇಕೆಂದು ತಿಳಿಸಿದ್ದರು ಎಂದು ಅವರು ಹೇಳಿದಂತೆ ನನಗೆ ತೋರಿತು ಅವರು ತವಸರದಿಂದ ಹೊರಟು ಹೋದುದರಿಂದ ಅವರ ಮಾತನ್ನು ಸ್ಪಷ್ಟವಾಗಿ ತಿಳಿಯಲಾಗಲಿಲ್ಲ. ಕೆಲವೇ ದಿನಗಳಲ್ಲಿ ಕಮ್ಯುನಿಸ್ಟ್ ಸರಕಾರದ ಎದ ರಾಗಿ ಜಳಚಳಿಯು ಪ್ರಾರಂಭವಾಗಿ ಅದನ್ನು ಉರುಳಿಸಿದುದರಿಂದ ಎರಡನೆ ಸಭೆಯನ್ನು ಕೂಡಿಸುವ ಅವಕಾಶವಿಲ್ಲದೇ ಹೋಯಿತು.

1960ರಲ್ಲಾ ನಡೆದ ಚುನಾವಣೆಯ ವೇಳೆ ಮಂಜೇಶ್ವರ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸ್ ಉಮೇದುವಾರರಿರಲಿಲ್ಲ. ಸಮಿತಿಯು ಹುರಿಯೂಳು ಗೆದ್ದರು. ಕಾಸರಗೋಡು ಮತದಾರ ಕ್ಷೇತ್ರದ ಕಾಂಗ್ರೆಸ್ ಹುರಿಯಾಳು ಪಿ. ಯಸ್. ಪಿ. ಯಾತ್ತು ಲೀಗಿನ ಬೆಂಬಲಪಡೆದಿದ್ದರೂ ಚಂದ್ರಗಿರಿ ನದಿಯ ತೆಂಕು ಭಾಗದವ್ಯಾಪ್ತಿಯ ಗ್ರಾಮಗಳ ಮತಗಳಿಂದಾಗಿ ಅಭ್ಯರ್ಥಿಯ ಸಮಿತಿಯ ಉಮೇದುವಾರರನ್ನು ಸೋಲಿಸಲು ಶಕ್ತರಾದರು. 1962ರ ಲೋಕಸಭೆಯ ಚುನಾವಣೆಯ ವೇಳೆ, ಶ್ರೀ ಕೆ. ಆರ್. ಗಾರಂತರು ಕಾಂಗ್ರೆಸ್ ಪಕ್ಷದ ಬೆಂಬಲಿದಿದ್ದು ಪಿ.ಯಸ್. ಪಿ ಉಮೇದುವಾರರಾಗಿ ಶ್ರೀ ಎ. ಕೆ. ಗೋಪಾಲನ್‌ರ ಎದುರು ಸ್ಪರ್ಧಿಸಿದರು. ಶ್ರೀ ತಾನು ಪಿಳ್ಳೆಯವರೂ ಚಾಂದ್ರಶೇಖರನೂ ನಮ್ಮ ಮೃತಕಯಕ್ಕೆ ತಾವು ಒಂಬಲ ನೀಡುವೆವಾಗಿ ಭರವಸೆಯಿತ್ತುದರಿಂದಾಗಿ ಮಾತ್ರವೇ ಶ್ರೀ ಕಾರಂತರು ಸಮ್ಮತಿಸಿದರೆಂದು ತಿಳಿಯಬೇಕಾಗಿದೆ. 1962ರಲ್ಲಿ ನಡೆಯಲಿರುವ ಉಮೇದುವಾರರನ್ನೇ ಕಾಂಗ್ರೆಸ್ ಉಮೇದುವಾರನ್ನಾಗಿಸ್ವೀಕರಿಸಲಾದುದು ಇದೇ ರೀತಿಯ ಭರವಸೆಯ ಪರಿಣಾಮವೆಂಬುದಾಗಿ ತಿಳಿಯಲಾಗಿದೆ. ಚೀನಾ ಮತ್ತು ಪಾಕಿಸ್ತಾನಗಳ ಆಕ್ರಮಣದಿಂದಾಗಿ ಅನಂತರ ಯಾವುದನ್ನೂ ಮಾಡಲಾಗಲಿಲ್ಲ. ಹೀಗೆಲ್ಲಾ ನಡೆದಿರುತ್ತಾ, ಕಾಸರಗೋಡು ಪ್ರಶ್ನೆಯನ್ನು ಎತ್ತಬಾರದೆಂಬ ಸಂಯಮವನ್ನು ಕೇರಳದ ಮುಖಂಡರು ಘೋಷಿಸುವುದು ಬಹಳ ವೇದಕರವಾಗಿದೆ.

(ಮುಂದುವರಿದುದು)

ಗಳು, ಸನ್ಯಾಸಿಗಳು, ಯೋಗಿಗಳು ವರಾಧಿಪತಿಗಳು ಇನ್ನಾದರೂ ಇಂಥ ರಾಜಕೀಯ ಹಗಡೆಯೂಟದಿಂದ ದೂರವಿರುವುದು ಉತ್ತಮ. ರಾಜಕೀಯ ಗೊಂಡಗಳು ಸ್ವಾರ್ಥ ಸಾಧನೆಗಾಗಿ ಇಂಥವರನ್ನೂ ಉಪಯೋಗಿಸಿಕೊಳ್ಳುತ್ತಿರುವುದು ತೀರಾ ಖಂಡನೀಯ.

ಈ ಬಗೆಯ ವ್ಯಾಪಕ ನೀತಿಗಳನ್ನು ಧಿಕ್ಕರಿಸಲು, ಪ್ರತಿಭಟಿಸಲು ಜನರಿಂದು ಧೈರ್ಯದಿಂದ ಮುಂದೆ ಬರಬೇಕಾಗಿದೆ.

ಎಲ್ಲೆಲ್ಲಿ ಏನೇನು?

ದಿ। ಎ. ಬಿ. ಶೆಟ್ಟಿಯವರ ಜನ್ಮದಿನಾಚರಣೆ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದ ದಿ॥ ಎ. ಬಿ. ಶೆಟ್ಟಿ ಇವರ 86ನೆಯ ಜನ್ಮ ದಿನಾಚರಣೆಯ ಅಂಗವಾಗಿ ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ನಿಲಯದ ಸಂಘ ಹಾಗೂ ನಿಲಯದ ಹಳೆ ವಿದ್ಯಾರ್ಥಿಗಳ ಸಂಘಗಳವರು ಶ್ರೀ ಮಣೇಲ್ ಶ್ರೀನಿವಾಸ ನಾಯಕ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ತಾ. 18ರಂದು ಸಮಾರಂಭವೊಂದನ್ನು ಏರ್ಪಡಿಸಿದ್ದರು.

ಆರಂಭದಲ್ಲಿ ಶ್ರೀ ಎಸ್. ಆರ್. ಹೆಗ್ಡೆ ಯವರು ಸ್ವಾಗತಿಸಿದ ಬಳಿಕ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಶ್ರೀ ಕೆ. ಎಸ್. ಎನ್. ಅಡಿಗ ಎಂ. ಎಲ್. ಸಿ. ಇವರು ದಿ॥ ಶೆಟ್ಟಿಯವರ ವ್ಯಕ್ತಿತ್ವ ಹಾಗೂ ಕಾರ್ಯ ಪದ್ಧತಿಯನ್ನು ವಿವರಿಸಿ, ಸಮಾಜದ ಎಲ್ಲಾ ವಿಧದ ಜನರ ಗೌರವಕ್ಕೆ ಪಾತ್ರರಾಗಿದ್ದ ಅವರು ಒರ್ವ ಆದರ್ಶ ವ್ಯಕ್ತಿಯಾಗಿದ್ದರು ಎಂದು ನುಡಿದರು. ಸಭಿಕರ ಪರವಾಗಿ ಡಾ॥ ಕೆ. ಬಿ. ಶೆಟ್ಟಿಯವರು ಮಾತನಾಡಿದ ಬಳಿಕ ಅಧ್ಯಕ್ಷರ ಭಾಷಣವಾಯಿತು. ಕೊನೆಯಲ್ಲಿ ಶ್ರೀ ದಿವಾಕರ ರೈಯವರ ಧನ್ಯವಾದ ಸಮರ್ಪಿಸಿದರು.

ನೆಹರೂ ಜಯಂತಿ

ಕಡಿಯೊಳಿ, ನ. 16 — ಯು. ಕನಿಲಾ ಬಾಮಿ ಹೈಸ್ಕೂಲಿನಲ್ಲಿ ಪಂಡಿತ ನೆಹರೂ ಜಯಂತಿ ಮತ್ತು ಮಕ್ಕಳ ದಿನಾಚರಣೆಯು ಸ್ಫೂರ್ತಿ ಯುಂದಿರಿದ ನೇರೃತ್ವದಲ್ಲಿ ಶಾಲಾ ವಿದ್ಯಾರ್ಥಿ ಟಿ. ರಾಜೇಂದ್ರ ಆಚಾರ್ಯರಿಂ ಅಧ್ಯಕ್ಷ ತೆಯಲ್ಲಿ ಜರಗಿತು. ವಿದ್ಯಾರ್ಥಿಯ ಕಾರಣ ಹುರಿಸ— ನೆಹರೂ, ಫ್ರೆಂಚ್ ಪಶ್ಚಿಮ ಸಂಸ್ಕೃತಿ ಸಂಗಮ— ನೆಹರೂ, ಭಾರತೀಯ ಏಕ್ಯತೆಯ ಶಿಲ್ಪಿ — ನೆಹರೂ, ಇಂದಿರಾ ಪ್ರಿಯದರ್ಶಿನಿ ನೆಹರೂ, ನೆಹರೂ ಹಾಗೂ ಚಾರ್ಕಿತ ಅಭರ್ಷ, ಭಾರತದ ಸತ್ ಪುತ್ರ — ನೆಹರೂ ವಿದೇಶ ನೀತಿ, ಪ್ರಜಾಪ್ರಭುತ್ವಕ್ಕೆ ಇನ್ನೊಂದು ಹೆಸರು ನೆಹರೂ, — ನೆಹರೂ ಮಸ್ತ ಸಂಗ್ರಹಾಲಯ ವ್ಯಕ್ತಿ ವಾಚನಾಲಯ — ಎಂಬ ವಿಷಯಗಳ ಮೇಲೆ ವಿದ್ಯಾರ್ಥಿಗಳಾದ ಭಾಸ್ಕರ ತಂತ್ರಿ, ಮುಂಡ್ಕಿದ ಪ್ರಭು, ಜ್ಞಾನೇಶ್ವರ ಶೆಟ್ಟಿ, ಶ್ರೀಧರ ಆಚಾರ್ಯ, ಶಿವಾನಂದ, ಪಾಂಡೇಶ್ವರಿ, ಸುಕುಮಾರ ಕಾಮತ್ ಮತ್ತು ಗಣಪತಿ ಶೆಟ್ಟಿ ಯವರು ಮಾತನಾಡಿದರು. ಸಾವಿತ್ರಿ ಸುತ್ತು ನರ್ಸರಿಲರ "ನೆಹರೂ ಮೃತ್ಯುಪತ್ರ" ಎಂಬ ಗೀತೆಯನ್ನು ಹಾಡಿದರು. ಸುಕುಮಾರ ಹಾಗೂ ಅನಂದ ಮತ್ತು ಕಂಗದಪಳರ ವಿನೋದಾವಳಿ, ಭಾರತ ಮತ್ತು ಸರಸ್ವತಿಯವರ ನೃತ್ಯ ಕಾರ್ಯಕ್ರಮವೂ ನಡೆಯಿತು. ಅಧ್ಯಕ್ಷರು ಮಾತನಾಡುತ್ತ ನೆಹರೂರವರ ಆದರ್ಶ ಭಾರತದ ರಚನೆಯಲ್ಲಿ ಪಡಿಯುವ ಪ್ರತಿಜ್ಞೆಯನ್ನು ಪುನರುಚ್ಚರಿಸುವುದಗತ್ಯವೆಂದರು.

ಈ ಸಂದರ್ಭದಲ್ಲಿ ನಡೆದ ಕಲಿಕಾ ಮತ್ತು ಥ್ರೋ ಬಾಲ್ ಪಂದ್ಯಾವಳಿಗಳಲ್ಲಿ ಜಯಶೀಲರಾದ ತಂಡ ಮತ್ತು ಯಶಸ್ವಿ ಮಾಡಿದಂಗಳ ಅಟಗಾರರಿಗೂ ಸಾಂಗತಿಕ ಸ್ಪರ್ಧೆಯಲ್ಲಿ ಯಶಸ್ವಿಸಿದ ಗಣ್ಯರಿಗೂ, ಪ್ರಥಮತಿ ಮತ್ತು ಸಾಬ್ಯಾಯ ಭಕ್ತರಿಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ಅರಂಭದಲ್ಲಿ ಮಂದಿಳಿದ ನಾಯಕ ಲಕ್ಷ್ಮಿ ನಸಿಂಹ ಉಪಾಧ್ಯಾಯರು ಸ್ವಾಗತಿಸಿದರು. ಕೊನೆಗೆ ಉಪನಾಯಕಿಕೆ ಆರಂಧಿತ ಶೆಟ್ಟಿ ಯವರು ವಂದನಾರ್ಪಣೆ ಮಾಡಿದರು.

ದ. ಕ. ಜಿಲ್ಲಾ ಕೃಷಿಕ ಸಂಘ ಕಾರ್ಕಳ.

ಇದರ ಸಭೆಯು ತಾ. 6.11.1966ರಲ್ಲು ಶ್ರೀ ಯಸ್. ದಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದು, ಈ ಕೆಳಗಿನ ನಿರ್ಣಯ ಮಾಡಿರುತ್ತದೆ.

ದಿಫೆನ್ಸ್ ರೂಲ್ಸ್ ಆಫ್ ಇಂಡಿಯಾ ರೂಲು (D. I. R.) ಕ್ರಕಾರ ಕಡ್ಡಾಯವಾಗಿ ತಾರೀಕು. 11.11.1966ರಿಂದ ಜ್ಯಾರಿಗೊಳಿಸಲ್ಪಟ್ಟಿರುವ ಮೈಸೂರು ರಾಜ್ಯದ 1966ರ ಭತ್ತದಪಲೆವ್ವಿ ಹುಕುಂನಲ್ಲಿ ಹೇಳಿರುವ ಲೆವ್ವಿದರ ಮತ್ತ ಕ್ರಯ ಧಾರಣೆಯು ಕೃಷಿಕರ ಹಿತಾಸಕ್ತಿಗಳಿಗೆ ವಿರುದ್ಧವಾಗಿರುತ್ತದೆ.

ಪೀಮೆ ಎಲ್ಲಾ ತರದ ಸೆಸ್ಸಾಗಳಲ್ಲಿ ತೆರಿಗೆ ಗಳನ್ನು ಅದ ಪರಿಕ ಕೃಷಿ ಉದ್ಯಮಕ್ಕೆ ಮತ್ತು ಕೃಷಿಕರ ಜೀವನಕ್ಕೆ ಅತೀ ಅಗತ್ಯವಾಗಿರುವ ಸಾಮಾಗ್ರಿಗಳ ಬೆಲೆಯು ಗಗನಕ್ಕೆ ಏರುತ್ತಿರುವುದರಿಂದ ಕೃಷಿಕ ಜನತೆಯ ಜೀವನ ಮಟ್ಟವನ್ನೇ ಕುಸಿಯುವಂತೆ ಮಾಡಿದೆ. ಪಟ್ಟಿನ ಆಹಾರೋತ್ಪಾದನೆಗೆ ಅಗತ್ಯವುಳ್ಳ ಬೀಜಗಳನ್ನು, ಫರ್ಟಿಲೈಜರುಗಳನ್ನು, ಕೀಟನಾಶವನ್ನು ನಡಿಸಲು ಬೇಕಾದ ಸಾಲಗಳನ್ನು ಪಡೆಯುವು ಅಸಮರ್ಥರಾಗಿರುವಈಸಂದರ್ಭದಲ್ಲಿ ಕಡ್ಡಾಯವಾಗಿ ವಿಧಿಸಿರುವ ಭತ್ತದ ಲೆವ್ವಿ ಕ್ರಮವು ಮತ್ತು ಭತ್ತದ ಕ್ರಯ ಹೆಚ್ಚು ಆಹಾರೋತ್ಪಾದನೆಗೂ ಹೆಚ್ಚು ಭೂಮಿ ಸಾಗುವಳಿ ಮಾಡುವ ಉದ್ದಿಶ್ಯಕ್ಕೂ ಅಕಂಠಪ್ರಯವಾಗಿದೆ.

ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ಭತ್ತ ಬೆಳೆ ಸಲ್ಪಡುವ ಭೂಮಿಯಲ್ಲಿ ೨/೩ರಷ್ಟು ಭೂಮಿಯು ಬರೇ ಮಳೆಯ ಪ್ರಭಾವದಿಂದಲೇ ಹೊಸಿಸಲ್ಪಟ್ಟಿರುವುದರಿಂದಲೂ ಮಳೆಯು ಪ್ರಮಾಣವು ಕಡಿಮೆಯಾಗುತ್ತಾ ಬರುವ ಆಂಧಿಯು ಅನಿಶ್ಚಿತವಾದುದರಿಂದ ಬೀಜಗಳು ಹೊಲಗಿ ಬೆಳೆ ಜಾಗಾಗಿ ಕೃಷಿಕರಿಗೆ ಎಷ್ಟೋ ನಷ್ಟ ಕಷ್ಟಗಳು ಉಂಟಾಗಿರುವ ವಿಷಯ ಸರ್ವವಿದಿತವಾಗಿದೆ. ಆಹಾರ ಕೊರತೆಯ ಪ್ರದೇಶವಾದ ಈ ಜಿಲ್ಲೆ ಅಪಾರ ಧಾನ್ಯಗಳ ಸಂಗ್ರಹ, ಸಾಗಾಟ, ವಿತರಣೆ ಮತ್ತು ಕೃಷಿಕರ ಮೇಲೆ ಯಾವುದೇ ರೀತಿಯ ನೊಂದಾಣಿಕೆಗಳನ್ನು ನಡೆಸಬೇಕೆಂದೂ ಹೇಳಿದರು.

ಈ ಸಂದರ್ಭದಲ್ಲಿ, ರಾಜ್ಯದ ಆಭಿವೃದ್ಧಿ, ಹಂಚ್ಯಾತ್ ರಾಜ್ಯ ಮತ್ತು ಸ್ಥಳೀಯ ಆಡಳಿತ ಸಚಿವ ಶ್ರೀ ಆರ್. ಎಂ. ಪಾಟೀಲರು ಮಾತಾಡುತ್ತ, 'ನರ್ಸರಿ ಸಾಮಾನ್ಯವಾಗಿ ಸಾವಿರಾರು ಸಸಿಗಳನ್ನು ಸಾರ್ವಜನಿಕರಿಗೆ ಸಾಲ ಕೊಡುವ ಬೇಳೆಗಳಲ್ಲಿ ಸಾಲ ನೀಡಲು ಮುಂದೆ ಬರಬೇಕು. ತಾಗೂ ಇದನ್ನು ಸಾರ್ವತ್ರಿಕಗೊಳಿಸಲು ಬೇಕಾಗಳು ಸಾಲ ನೀಡುವ ಸಮ್ಮ ದೋರಣೆಗಳಲ್ಲಿ ಸೂಕ್ತ ಬದಲಾವಣೆಯನ್ನುಸ್ಥರಿಸಲು ಸಹಾಯವು ಅವಶ್ಯವಿದೆ' ಎಂದು ನುಡಿದರು.

ಉಪನಯಿಲ್ಲಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ದಾಮೋದರ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು. ಬಳಿಕ ಮನರಂಜನಾ ಕಾರ್ಯಕ್ರಮಗಳು ನಡೆಸಲ್ಪಟ್ಟವು.

ಕೆನರಾ ಬ್ಯಾಂಕಿನ ವಜ್ರೋತ್ಸವ ಸಮಾರಂಭ

ಕೃಷಿಕರಿಗೆ ಸಾಲ ಕೊಡುವಂತೆ ಮಂಶ್ರಿ ಪಾಟೀಲರ ಸೂಚನೆ

ಕೆನರಾ ಬ್ಯಾಂಕಿನ ವಜ್ರೋತ್ಸವ ಸಮಾರಂಭದ ಅಂಗವಾಗಿ ಇಂದೆ ತಾ.19ರಂದು ಮಂಗಳೂರಿನ ಕೆನರಾ ಹೈಸ್ಕೂಲ್ ಆವರಣದಲ್ಲಿ ರಾಜ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಬಿ. ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಶ್ರೀ ರಾಧಾಕೃಷ್ಣ ಬಾಳಿಗಾ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಮಾರಂಭದ ಆರಂಭದಲ್ಲಿ ಬೇಂಕಿನ ಚೇಯರ್ಮೇನ್ ಶ್ರೀ ಕೆ. ಪಿ ಜೆ ಪ್ರಭುಗಳು ಸ್ವಾಗತಿಸುತ್ತಾ ಕಳೆದ 60 ವರ್ಷಗಳಲ್ಲಿನ ಬೇಂಕಿನ ಸ್ಥಾಪಕಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ನೀಡುತ್ತಾ, ಈ ಸಾಧನೆಗೆ, ಬೇಂಕಿನ ಸಾಪಕ ದಿ॥ ಸುಬ್ಬರಾವ್ ಪೈಯವರ ಉತ್ತಮ ಧೈರ್ಯಗಳೇ ಕಾರಣವೆಂದು ಸ್ಮರಿಸಿದರು. ಪಟ್ಟಿನ ಆಡಳಿತ ವರ್ಗದ ಮತ್ತು ನಿಬ್ಬಂದಿಯವರ ಶ್ರಮ ಹಾಗೂ ಬೇಂಕಿನ ಹಿತೈಷಿಗಳ ಸೌಹಾರ್ದಯೇ ಕಾರಣವೆಂದರು ಬಳಿಕ ಬೇಂಕಿನ ಡೈರೆಕ್ಟರ್ರೂಗಳಾದ ಶ್ರೀ ಎಂ. ಶ್ರೀನಿವಾಸ ನಾಯಕ್ ಎಂ. ಎಲ್. ಎ. ಇವರು ಬೇಂಕಿನ ವಜ್ರೋತ್ಸವದ ಸ್ಮರಣೆಗಳನ್ನು ಹಿಡಿ ಹೇಳಿದರು. 20 ವರ್ಷ ಗಳ ಕಾಲ ಬೇಂಕಿನ ಡೈರೆಕ್ಟರರಾಗಿದ್ದ ದಿ॥ ಯು. ಶ್ರೀನಿವಾಸ ಮಲ್ಯ ಇವರ ಸ್ಮಾರಕ ನಿಧಿಗೆ ನೀಡಲಾದ ೫೦,೦೦೦ರೂಹಣವಿಯನ್ನು ಚೆಕ್ಕನ್ನು ಶ್ರೀನಿವಾಸ ಮಲ್ಯ ಮೆಮೋರಿಯಲ್ ಟ್ರಸ್ಟಿನ ಅಧ್ಯಕ್ಷೆ ಶ್ರೀ ವಿ. ಎಸ್. ಉಡುಪರವು ಸ್ವೀಕರಿಸಿದರು. ದಿವಂಗತ ಮಲ್ಯರ ಹೆಸರಿನಲ್ಲಿ ಸ್ಥಳೀಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಯೊಬ್ಬನಿಗೆ ನೀಡಲಾದ ರೂ 3,೦೦೦ ಚೆಕ್ಕನ್ನು ಕಾಲೇಜಿನ ಪರವಾಗಿ ಪ್ರಾಧ್ಯಾಪಕ ಡಾ॥ ಟಿ. ಎಸ್. ಸ್. ಬಾಸವಂಬಯ್ಯನವರೂ, ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಹೈಸ್ಕೂಲಿಗೆ ನೀಡಲಾದ ರೂ.1,೦೦೦ ಚೆಕ್ಕನ್ನು ಶ್ರೀಬೈಲಂಕೇರಿ ಮಂಜುನಾಥರವರು ಸ್ವೀಕರಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಬಿ. ಕಾಂ. ಡಿಕ್ರಿ ಪರೀಕ್ಷೆಯಲ್ಲಿ ಪ್ರಥಮ ರೇಂಕ್ ಗಳಿಸಿದ ಶ್ರೀ ಕೆ. ವಾಸುದೇವ ವಿಟ್ಠಲ ಇವರಿಗೆ ರೂ. 100ನ್ನು ನೀಡಲಾಯಿತು.

ಅಧ್ಯಕ್ಷರು ಮಾತನಾಡುತ್ತಾ ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ದಿ॥ ಎ. ಸುಬ್ಬರಾವ್ ಪೈಯವರ ಸಾಧನೆಯನ್ನು ಸ್ಮರಿಸಿ ಸಂತಾಪ, ಅವರ ದೂರದೃಷ್ಟಿ ಮತ್ತು ಪರಿಶ್ರಮದ ಫಲವಾಗಿ ಇಂದು ಕೆನರಾ ಬೇಂಕ್ ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಹೈಸ್ಕೂಲ್ ತಂತ್ರಿಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿವೆ ಎಂದು ನುಡಿದರು. ಮುಂದುವರಿಸುತ್ತಾ ಅವರು, ಬೇಂಕಿನ ಕೆಲವು ನಿಯಮ ಹಾಗೂ ರೆಸರ್ವ್ ಬೇಂಕಿನ ನಿಯಂತ್ರಣ ಮತ್ತು ನಿಬಂಧನೆಗಳಿಂದಾಗಿ, ಕೃಷಿಕರಿಗೆ ಸಾಲ ನೀಡುವಲ್ಲಿ ಬೇಂಕುಗಳು ಕಷ್ಟ ಪಡುವಂತೆ ಆಡಚಣೆಗಳನ್ನು ಎದುರಿಸಬೇಕಾಗಿದೆ, ಇವುಗಳನ್ನು ನಿವಾರಿಸುವತ್ತ ಸರಕಾರವು ಸೂಕ್ತ ರೀತಿಯ ನೊಂದಾಣಿಕೆಗಳನ್ನು ನಡೆಸಬೇಕೆಂದೂ ಹೇಳಿದರು.

ಈ ಸಂದರ್ಭದಲ್ಲಿ, ರಾಜ್ಯದ ಆಭಿವೃದ್ಧಿ, ಹಂಚ್ಯಾತ್ ರಾಜ್ಯ ಮತ್ತು ಸ್ಥಳೀಯ ಆಡಳಿತ ಸಚಿವ ಶ್ರೀ ಆರ್. ಎಂ. ಪಾಟೀಲರು ಮಾತಾಡುತ್ತ, 'ನರ್ಸರಿ ಸಾಮಾನ್ಯವಾಗಿ ಸಾವಿರಾರು ಸಸಿಗಳನ್ನು ಸಾರ್ವಜನಿಕರಿಗೆ ಸಾಲ ಕೊಡುವ ಬೇಳೆಗಳಲ್ಲಿ ಸಾಲ ನೀಡಲು ಮುಂದೆ ಬರಬೇಕು. ತಾಗೂ ಇದನ್ನು ಸಾರ್ವತ್ರಿಕಗೊಳಿಸಲು ಬೇಕಾಗಳು ಸಾಲ ನೀಡುವ ಸಮ್ಮ ದೋರಣೆಗಳಲ್ಲಿ ಸೂಕ್ತ ಬದಲಾವಣೆಯನ್ನುಸ್ಥರಿಸಲು ಸಹಾಯವು ಅವಶ್ಯವಿದೆ' ಎಂದು ನುಡಿದರು.

ಉಪನಯಿಲ್ಲಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ದಾಮೋದರ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು. ಬಳಿಕ ಮನರಂಜನಾ ಕಾರ್ಯಕ್ರಮಗಳು ನಡೆಸಲ್ಪಟ್ಟವು.

ಯಕ್ಷಗಾನ

ದೇಅಂಕಾವಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಕಳೆದ ದಿ ನಾಂಕ '19ರಂದುರಾಜಸೂಯಸುದರ್ಶನ' ಎಂಬ ಕಥಾ ಭಾಗದ ಯಕ್ಷಗಾನ ತಾಳ ಸುದ್ದಳಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀಯು ಬಿ ಗೆಂಗಾಧರ ಭಟ್, ಜಾಲ್ಸೂರು—ಅವರ ಮಯಿಂದ ಜರಗಲ್ಪಟ್ಟ ಈ ಕಾರ್ಯಕ್ರಮದಲ್ಲಿ ಪಲವರುಪಾತ್ರಂಗಿಂದಿದ್ದರು.

ಶ್ರೀ ಕಲ್ಲಡ್ಕ ಬಾಬು ರೈಗಳು ಧನ್ಯವಾದ ವಿತ್ತರು.

ಪಂಚಾಯತ್ ರೇಡಿಯೋ ಸೆಟ್‌ಗಳ ಗತಿ

ವಿದ್ಯುಜ್ಜೆಕ್ತಿ ಇಲ್ಲದಿರುವೆಡೆಗಳಲ್ಲಿ ಸಂಪ್ಯಾತ್‌ಗಳಿಗೆ ವಾರ್ತಾ ಇಲಾಖೆಯಿಂದ ರೇಡಿಯೋ ಸೆಟು ಪೂರೈಸಲಾಗಿತ್ತು. ಈ ಬಗ್ಗೆ ನಿರ್ದಿಷ್ಟ ಫಿರ್ಯಾದನ್ನು ಪ್ರತಿಯೊಂದು ಪಂಚ್ಯಾಯಿಂದಲೂ ಸರಕಾರ ವಸಲ್ ಮಾಡುತಿದೆ ಈ ಬಾರಿ ಒದಗಿಸಲಾದ ಬೆಟ್ಟಿಯು ದೋಷಪೂರ್ಣವಾಗಿದ್ದು, ಒದಗಿಸಿದ ಒಂದು ತಿಂಗಳೊಳಗೆ ಕೆಟ್ಟು ಹೋಗಿ, ರೇಡಿಯೋ ಪ್ರಸಾರ ಸ್ತಬ್ಧವಾಗಿದೆ. ಈ ಸಮಾಚಾರ ಆಧಿಕಾರಿಗಳಿಗೆ ಹಲವು ಬಾರಿ ತಿಳಿಸಿದರೂ, ತಿಂಗಳೆರಡು ದಾಟಿದರೂ, ಯಾವುದೇ ಪಹಿಸಿರುತ್ತಾರೆ. ಗ್ರಾಮೀಣ ಪ್ರಸಾರ ಕಾರ್ಯಾಲಯದ ಜವಾಬ್ದಾರಿ ಇರುವ ಸಂದರ್ಶವಿಜ್ಞಾನ ಪಪಿತ್ಯಕಿಯನ್ನು ಗಮನಕ್ಕೆ ತರಲಿಲ್ಲ. ಆದುದರಿಂದ ಲೆವ್ವಿ ಭತ್ತದಿಂದ ಜ್ಞಾನ ಕುಂದು ಕೊರತೆಗಳ ಹೋಗಲಾಡಿಸಿ ಕೃಷಿಕರ ನ್ಯಾಯವಾದ ಕೇಳಿಕೆಗಳನ್ನು ಮನ್ನಿಸಲೇಕಾಗಿ ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘವು ಅಗ್ರಹಪೂರ್ವಕವಾಗಿ ವಿಶ್ವಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಎಂ. ಡಿ. ಅಧಿಕಾರಿ,
ಅಧ್ಯಕ್ಷರು.
ಬೋಳ ರಮಾನಂದ ಮಲ್ಯ,
ಯಂ. ಗೋವಿಂದ ರಾವ್,
ಕಾರ್ಯದರ್ಶಿಗಳು

ಮಕ್ಕಳ ದಿನಾಚರಣೆ

ವಿಟ್ಲ, ಸಾ. 14—11—66. 'ನೆಹರೂರವರ ಶಿಕ್ಷಣತ್ವ ಚಿಂತನ ಮತ್ತು ತ್ಯಾಗಪೂರ್ಣ ದೇಶಸೇವೆ'—ಇವುಗಳು ಚಿಕ್ಕ ಬಾಲಕಿಯರ ಅಪೇಕ್ಷಣಿಯಾಗಬೇಕು. ನೆಹರೂರವರು ತೋರಿಸಿ ಕೊಟ್ಟ ದಾರಿಯಲ್ಲಿ ಮುಂದಿನ ಪೀಳಿಗೆಯು ಮುಂದುವರಿಯು ಬೇಕು ಎಂಬುದಾಗಿ ವಿಟ್ಲ ಪೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜೆ. ಕೆ. ರಾವ್ ಇವರು ಹೇಳಿದರು. ಅವರು ಇಂದು ಬೆಳಿಗ್ಗೆ ಶಾಲಾ ಪರಿಸರದಲ್ಲಿ ಮಕ್ಕಳ ದಿನಾಚರಣೆಯ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಶಾಲೆಯ ಹಿರಿಯ ವಿದ್ಯಾರ್ಥಿನಿಯರು ಹುಡುಗಿಯರಿಂದ ಪ್ರಾರ್ಥನೆಯಾದ ಬಳಿಕ ಸಿ. ಕೆ. ಗಂಗಾಧರ್ ಸ್ವಾಗತಿಸಿದರು. ಕುಮಾರಿ ತಾರಾತ್ಮ ಮತ್ತು ಪ್ರಸನ್ನ ಎಂಬಿಬ್ಬರು ಬಾಲಕಿಯರು ಮಕ್ಕಳ ದಿನಾಚರಣೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಸುಳ್ಯದ ದಿನಾಚರಣೆಯು ಅಂಗವಾಗಿ ಆಟೋಟಗಳೂ ಮತ್ತು ಭಾವನೆಗಳ ಕಾರ್ಯಕ್ರಮಗಳೂ ನಡೆದವು. ಅಧ್ಯಕ್ಷರು ಮಾತನಾಡಿದರು. ಸಭೆಯ ಕಾರ್ಯದರ್ಶಿಯವರಾದ ಶ್ರೀ ಯು. ರಾಮ ಭಟ್ಟರು ಮಕ್ಕಳ ಪರವಾಗಿ ಅಧ್ಯಕ್ಷರಿಗೂ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಾಲಕಿಯರಿಗೂ ಧನ್ಯವಾದಗಳನ್ನು ಅರ್ಪಿಸಿದರು.

(ಮೂರನೇ ಪುಟದಿಂದ)

ಸಂಜೀವ ರೆಡ್ಡಿಯವರು ಅವ್ಯುತರಾಯರಿಂದ ಅಮೃತವಾನ ಮೂಡಿ ಅಜರಾಮರವಾಗಲು ಸಿದ್ಧರಾಗಿದ್ದಾರೆ. ಅದರೆ ಸಂಜೀವ ರೆಡ್ಡಿಯವರೂ ಆಂಧ್ರೀಯರೂ ನಿಜ ಯ ಮಾಡಬೇಕಾದ ಸಂಗತಿಯೊಂದು ಉಳಿದೇ ಕಾರವಾನೆ—ಸಂಜೀವ ರೆಡ್ಡಿ ಪ್ರವರಿಗೆ ಅದಾಕಾರ. ಇವೆರಡರಲ್ಲಿ ಯಾವುದನ್ನು ಬುಮುಸುತ್ತಾರೆ? ಎರಡೂ ತಮಗೆ ಬೇಕು ಎಂದರೆ, ಭಾರತಾಂಬೆಗೆ ಅಂದೆ ಮ್ಮಳೊಬ್ಬಳೇ ಮಗಳಲ್ಲ. ಈಗಾಗಲೇ ಇ ದಿನೇಳು ಪೆಮ್ಮಕ್ಕಳು – ಸಂತಾನ ವಿರೋಧ ಶಸ್ತ್ರಕ್ರಿಯೆ ಆಕೆ ಮಾಡಿಕೊಂಡಿಲ್ಲ. ಮೊನ್ನೆ ತಾನೇ ಹಿರಿಯೂರನ್ನವನ್ನು ಹೆತ್ತು ಈಗ ವಂಕಿಧಾರಣೆ ಮಾಡಿದ್ದಾಳೆ.

ಅಪಜಯ

(ಎರಡನೇ ಪುಟದಿಂದ)

ತಾಪತ್ರಯಗಳನ್ನು ಒಮ್ಮೆಗೆ ಮರೆತ.

ಕೊನೆಗೂ ಅದುದು ಫಿರಾಸೆಯೆ ?. ಡಾಕ್ಟರ ಯೂವ ಇಂಜೆಕ್ಷನ್ನೂ ಗರ್ಭಪಾತವನ್ನು ನಿಲ್ಲಿಸಲು ಶಕ್ತವೆನಿಸಲಿಲ್ಲ. ರೂಪಾಳ ಪಾಲಿಗೆ ಜಗತ್ತೇ ಶೂನ್ಯವೆನಿಸಿತು. ಆ ವಳನ್ನು ಸಮಾಧಾನ ಪಡಿಸುವ ಶಕ್ತಿ ಗೋಪಿನಾಥನಲ್ಲಿದ್ದರಿ ತಾನೇ?

ರೂಪಾ ಜೀವಚ್ಛವವಾದಳು. ಅವಳ ಸುಖದಲ್ಲಿನ ಮುಗ್ಧ ನಗು ಮಾಯವಾಗಿ ಜುಗುಪ್ಸೆಯೂ ವಕ್ಕಿಸಿತು. ದಿನವಿಡೀ ಒಂದೆರಡು ಮಾತನಾಡಿದರೇ ಹೆಚ್ಚು ಎನ್ನುವಂತೆ ಮೌನವಾಗಿಯೇ ವ್ಯಥೆ ಸುನ್ನನಭವಿಸ ತೊಡಗಿದಳು. ಅದರೂ....ಗೋಪೀನಾಥನ ಬಾಡಿದ, ಸೋತ ಮೊಗವನ್ನು ನೋಡಿದಾಗ ಅವನಿಗಾಗಿಯಾದರೂ ಬಾಳಬೇಕೆಂದು ಕೊಳ್ಳವಳು ಗೋಪಿನಾಥನಾದರೋ ರೂಪಾಳಿದಿರು ತನ್ನಳಲನ್ನು ತೋರಿಸಿಕೊಳ್ಳಬಾರದೆಂದು ನಗುವ ಮುಖವಾಡವನ್ನು ಧರಿಸುತ್ತಿದ್ದಂತಿತ್ತು. ಆದರೆ ಈ ರೀತಿಯ ಕೃತ್ರಿಮ ಜೀವನ ಅವರನ್ನೇ ಬೇಸರಗೊಳಿಸುತ್ತಿತ್ತು. ಮತ್ತೂ ಎರಡು ಬಾರಿ ವಿಫಲವಾದ ಪರೀಕ್ಷೆಗೆ ಗುರಿಯಾದಳು. ಅವರ ಜಾಲಿಗೆ ನಗುವ ಕಂದನ ಕನಸು ಮಾತ್ರ ಉಳಿಯಿತು. ಬದುಕು ನೀರಸ, ಶೂನ್ಯ, ಅಸಹನೀಯವೆನ್ನುವಂತಾಯಿತು.

ಇನ್ನವರ ಜಾಲಿಗೆ ಯಾವಶಶಾಜ್ಯೋತಿಯೂ ಉಳಿಯಲಿಲ್ಲ. ಜೀವನದಲ್ಲಿ ಸುಖ, ಸಂತೋಷಗಳಿಗೆ ಸ್ಥಾನವಿದೆಯೆಂದೂ ಎನಿಸಲಿಲ್ಲ. ಆ ಮನೆಯಲ್ಲಿ ನಗುವ, ಮಾತನಾಡುವ ಸದ್ದೇ ಕೇಳಿಬರುತ್ತಿರಲಿಲ್ಲ. ಒಂದು ರೀತಿಯ ಸ್ಮಶಾನ ಮೌನವಿರುತ್ತಿತ್ತು. ಪ್ರೇ ಮುಖ, ಸೋತದೇಹ, ಸೊರಗಿದ ಜೀವ, ವೈರಾಗ್ಯದ ದಿನಚರಿ ಇವೇ ಅವರ ನಿತ್ಯನಿರಾಮವಾಗಿ ಬಿಟ್ಟಿತು.

ಗೋಪೀನಾಥನಿಗೆ ಬದುಕು ಅಸಹ್ಯವೆನಿಸಿತು. ಎಷ್ಟೊಂದು ಕ್ರೂರ ಜಗತ್ತು! ಸಾವು, ನ್ಯಥೆ, ಗೋಳು ಇದಕ್ಕೆ ಕೊನೆಯೆಂದು? ಮುಕ್ತಾಯವೇ ಇಲ್ಲ....!

ರೂಪಾಳಿಗಾಗಿ ಅವಳ ಬಸಿರು, ಬಾಣಂತಿತನಕ್ಕಾಗಿ ಸಂಬಳ ಸಾಲದೆ ಆಲ್ಲಲ್ಲಿ ಸಾಲ ಮಾಡಿದ್ದ. ತನಗೆ ಬೇಕೆನಿಸುತ್ತಿದ್ದ ಸಿನಿಮಾ, ಸಿಗರೇಟು ಇವೆಲ್ಲ ವನ್ನೂ ನಿಲ್ಲಿಸಿ ಬಿಟ್ಟಿದ್ದ. ಶ್ರೀಮಂತ ಸುಕುಮಾರ ಸಾಲಗಾರನಾಗಿ ಅವಮಾನದಿಂದ ಒಳಗೊಳಗೇ ಕುದಿಯುತ್ತಿದ್ದ. ಜೀವನ ರಥ ಕುಂಟುತ್ತ, ಸಾಗುತ್ತಿತ್ತು.

ಆಗಲೇ ಅವರ ಸಂಸಾರಿ ವಿರಸದ ಕಿಚ್ಚಿನಿಂದ ಉರಿಯಲಾರಂಭಿಸಿತು. ಒಳಗಿಂದೊಳಗೇ ದಹಿಸುವ ದುಃಖಾಗ್ನಿ ಸಿಡುಕಿಗೆ ಎಡೆಕೊಟ್ಟಿತು. ಆಫೀಸಿನ ಕೆಲಸಗಳ ಗೊಂದಲ, ಸಾಲ ಕೊಟ್ಟವರ ಅಪಹಾಸ್ಯದ ಕೆಡಿಯುಸೋಂಕು, ಮಾನಸಿಕ ಹೊಣೆಗೆ ಇವೆಲ್ಲವುಗಳಿಂದ ಕಂಗೆಟ್ಟು ಮನೆ ಸೇರುವಾಗ ಸ್ವಾಗತಿಸುವ ಮುಗುಳು ನಗುವಿನ ಬದಲು ಅಸ್ಥಿಪಂಜರವಾಗಿದ್ದ ರೂಪಾಳ ದೇಹ ಗೋಪೀನಾಥನನ್ನು ಕಂಗೆಡಿಸುತ್ತಿತ್ತು.

ಸೌಂದರ್ಯ ರಾಣಿಯೆಂದು ಕೈ ಹಿಡಿದ ಮಡದಿ ಎಲುಬಿನ ಗೂಡಾಗಿದ್ದಳು.

ಒಬ್ಬ ರೂಪಾ ನೋವನ್ನೆಲ್ಲ ಮಾತಿನಲ್ಲಿ ಹರಿಯಿಸಿ ಕೊನೆಯದಾಗಿ ಹೇಳಿದಳು.

"ನಿಜವಾಗಿಯೂ ನಾನು ನಿರ್ಧಾರ್ಗೆ. ನನ್ನ ಕೈ ಹಿಡಿದು ನಿಮಗೂ ಈ ದುರವಸ್ಥೆಯೊದಗಿತು.'

'ಹಾಂ. ಹೌದು. ಈಗೇನ ಮಾಡಲಿ?' ಸಿಡಿಮಿಡಿಗೊಂಡು ಗೋಪೀನಾಥ ಕೇಳಿದ.

ಅವನ ಮಾತಿನುರಿ ತಗಲಿದ ರೂಪಾ ಬೆಚ್ಚಿದಳು.

"ಅಯ್ಯೋ!.... ಇಷ್ಟೆಲ್ಲ ಕಷ್ಟವನ್ನನುಭವಿಸಿಯೂ ನಾನೇಕೆ ಸಾಯಲಿಲ್ಲ?' ಅಳುತ್ತಲೇ ಕನ್ನೊಳಗೇ ನುಡಿದಳಾಕೆ

"ಇನ್ನಾದರೂ ಸಾಯಬಹುದಲ್ಲ?" ತಾನೇನು ಮಾತನಾಡುತ್ತಿರುವೆನೆಂಬುದರ ಪರಿವೆಯೇ ಇಲ್ಲದವರಂತೆ ನುಡಿದ ಗೋಪಿನಾಥ.

"ಓಹ್ಂ...." ರೂಪಾ ಬೆದರಿ ಕಂಗೆಟ್ಟಳು. ಅವಳ ಮುಖ ವಿವರ್ಣವಾಯಿತು. ಕರಿಛಾಯೆತು. ಆಕೆ ಮುಂದೆ ಮಾತು ಬೆಳೆಸಲಿಲ್ಲ. ಗೋಪೀನಾಥನಿಗೂ ಮಾತು ಬೇಡವಾಗಿತ್ತು. ತಾನೇನು ಆಡುತ್ತಿರುವೆನೆಂಬುದರ ಯೋಚನೆಯೂ ಅಪ್ರಿಯವಾಗಿತ್ತು ಎಂದೇ ಆ ಬಗ್ಗೆ ಯೋಚಿಸಲಿಲ್ಲ.

ಮರುದಿನ ಆಫೀಸಿನಿಂದ ಬರುವಾಗ ಮನೆಯ ಮುಂಬಾ ಗದ್ದಲ ಕೇಳಿಬರುತ್ತಿತ್ತು. ಗೋಪೀನಾಥ ಹೆದರುತ್ತಲೇ ಒಡಿ ಬಂದ.

ಆಗಲೇ ಅರ್ಧ ಸುಟ್ಟ ರೂಪಾಳ ವಿರೂಪಗೊಂಡ ದೇಹವನ್ನು ಹೊರಗೆಳೆದು ತಂದು ಮಲಗಿಸಿದ್ದರು.

ಕೋಣೆಯೊಳಗೆ ಇದ್ದ ಸೀರೆಗಳನ್ನೆಲ್ಲಾ ಸುತ್ತಿಕೊಂಡು ಡಬ್ಬಿಯಲ್ಲಿದ್ದ ಚಿಮಿಣಿ ಎಣ್ಣೆಯನ್ನೆಲ್ಲ ಹೊಯ್ದು ಕೊಂಡು ರೂಪಾ ಜೀವನ್ಮುಕ್ತಳಾಗಿದ್ದಳು.

"ಅಯ್ಯೋ...ರೂಪಾ...." ವಿಕಾರವಾದ ಶವದ ಮೇಲೆ ಬಿದ್ದು ಕೆರುಚಿದ ಗೋಪೀನಾಥ. ಆದರೆ ರೂಪ ಉಸಿರೆತ್ತಲಿಲ್ಲ.

ರೂಪಾ ಇನಿಲ್ಲ

ಗೋಪೀನಾಥ ಮನಃ ಹೊರಳಾಡಿದ. ತಟ್ಟನೆ ಎದ್ದು ಕುಳಿತ.

"ಅಯ್ಯೋ!...ನಾನು ಸ್ವಾರ್ಥಿ." ಎಂದು ಕೆರುಚಿದ.

ರೂಪಾ ತನ್ನಿಂದಾಗಿಯೇ ಮೃತಳಾದಳು. ಈ ನೋವಿಗೆ ತನ್ನನ್ನು ಎಂದೆಂದಿಗೂ ದಹಿಸುತ್ತಲೇ ಇರುವುದು. ಇದಂದಿಗೆ ತನಗೆ ಯಾ ಕ್ತಿಯೇ ಇಲ್ಲ.

ಗೋಪೀನಾಥ ನಿಟ್ಟುಸಿರು ಬಿಟ್ಟು [illegible]

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್.ಪಿತಾಳೆ, ಎಂ.ಬಿ.ಬಿ.ಎಸ್.

ನಿತ್ಯದಲ್ಲಿ ತಗಲುವಂಥ ಸಾಮಾನ್ಯ ರೋಗಗಳ ಬಗ್ಗೆ ಸುಲಭ ಮತ್ತು ಸಿಸಾರವಾಗಿ ಬರೆಯಲಾಗಿರುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಸ್.ಡಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ಸಾಹಿತ್ಯ ಪುಸ್ತಕ ಭಂಡಾರ, ಉಡುಪಿ

ಒಲಿದು ಬಾ ದೇವಿ ಒಲಿದು ಬಾ

ಒಲಿದು ಬಾ ದೇವಿ ಒಲಿದು ಬಾ.
ತವರು ಮನೆಯಿಂದ;
ತವರು ಊರಿಂದ;
ಸಾಗರದ ವಿಾನಂತೆ ತೇಲಿ ಬಾ
ಬಲಜಾಣೆ,ಓ ದೇವಿ;ಎನ್ನೆದೆಯನಾಳ ಬಾ
ಎನ್ನ ಬಾಳಿಗೆ ನೀರೆರೆಯೆ ಬಾ;
ಎನ್ನ ಬಾಳ್ಗೆಳತಿ; ಜಗಿದು ಬಾ.
ಒಲಿದು ಬಾ ದೇವಿ ಒಲಿದು ಬಾ....

ನಿನ್ನ ನೆನೆಸುತಿಹೆ;
ನಿನ್ನ ಕರೆಯುತಿಹೆ;
ನಿನ್ನ ಹಾರೈಸುತಿಹೆ; ಓಡಿ ಬಾ ..
ಉಳ್ಕ್ಯಪೊಲ್ಮೆಯ ಸತಿಯಾಗಿ ಬಾ;
ಕನಸು ನೆನಸಾಗಿ ಬಾ;
ಎನ್ನ ಬಾಳ ಬೆಳಕಾಗಿ ಬಾ;
ಬಾರೆ ಬಾ; ದೇವಿ; ಓಡಿ ಬಾ....
ಎನ್ನ ಹೃದಯ ತುಂಬಿ ಬಾ;
ವ ನೆಗೆ ಸುಮಂಗಲಿಯಾಗಿ ಬಾ;
ವಂಶ ಉಜ್ಜೀವಿತಗೊಳಿಸೆ ನಲಿದು ಬಾ;....
ಹೃದಯ ವೀಣೆಸು ವೀಣೆಯೇ ಬಾ;
ಮಧುರ ಗೀತೆಯ ಹಾಡೆ ಬಾ;
ಶರವೇಗದಿಂ ಓಡಿ ಬಾ;
ಒಲಿದು ಬಾ ದೇವಿ ಒಲಿದು ಬಾ...

ನೀ ಹೃದಯ ರಾಣಿ; ಓ ನಾಗವೇಣಿಕಿ ...
ಬಾರೆ ಭಾವ ಜೀವನ್ಮಣಿಕಿ....;
ನೀನೆ ಪ್ರೇಮದ ಸತಿಯು;
ನೀನೆ ಜೀವನ ರತಿಯು;
ನೀ ಎನ್ನ ಬಾಳ್ಗೆ ಸೊಡರಾಗಿ ಬಾ;....
ಹಗಲಿರುಳೂ ನೆನಸುತಿಹೆ;
ಉರಿದುರಿದೂ ಸವೆಯುತಿಹೆ;
ತುಂಬಿದ ಶೂನ್ಯವ ಕಳೆಯುತ ಬಾ;....
"ನಾರಾಯಣ"ನ ಹೃನ್ನಿವಾಸ ಗೆದ್ದು ಬಾ.
ಒಲಿದು ಬಾ ದೇವಿ ಒಲಿದು ಬಾ...
(ಅಂದಿಕಾಕಸಯದತ್ತರ ಕ್ಷಮೆ ಕೋರಿ)

—ನಾರಾಯಣ, ಏತಡ್ಕ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.....

ಧನ ಇಲೆಕ್ಟ್ರಿಕ್ ಮೋಟಾರು ಮತ್ತು (½ H.P. to 30 H.P.) ಪಂಪು ಸೆಟ್ಟುಗಳು.....

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ನಗು ಬಿಷ !

ನೀನೆನ್ನ ಮೊಗ ನೋಡಿ ನಗದಿರೆಂ ಚೆಲುವೆ
ನಕ್ಕೆಯಾದರೆ ನಾನು ಮರೆವೆನೆನ್ನಿರವ!
ಹೊನ್ನ ಬಣ್ಣದಿ, ಹಸುರು ಸೋಗೆಗಳ ನಡುವೆ!
ಪರಿಮಳಿಪ,ಕೇದಗೆಯ ತೆರದಿ ನೀ ನಗುವೆ!
ಮುತ್ತು ಮುಳ್ಳಿನ ಬೇಲಿ ಹುಬ್ಬುವುದು ನನ
ಸರ್ಪವಡಗಿಹುದಂತೆ ನಗುವೊಗದಿ ನಿನ್ನ!
ಅದರೆನುವೆ ನಿನ್ನ ನಗು ಮೂಡಕದ ಸರ್ಪ!
ಅದರೆದುರು ಮಣಿಯುವುದು ನನ್ನೆದೆಯು ದರ್ಪ!
ದೆಂಡಾಗಿ, ಬಸವಳಿದು ಬೆಂಗಡಲಿನಲ್ಲಿ
ಬಾಯೂರಿ ನಡುಗುತಿಹ ಪಾಂಥನೆಮ್ಮರಲ್ಲಿ
ದಿಟ್ಟಿ ನಿಲುಕದ ಮಳಲ ನಡುವೆ ಕೊಳದಂತೆ ಮಂಳುಗೊಳಿಸುವ ನಗುವ! ವೃಗ ಜಲವು ಅಂತೆ!
ಅದಕೆನುವೆ ನೀನೆನ್ನ ಮೊಗ ನೋಡಬೇಡ!
ಕಣ್ಮುಚ್ಚಿಕೊಳ್ಳುತಿಹೆ! ನೀನು ನಗಬೇಡ!
ಮನವೊಂದು ಮಗು! ಅದಕೆ ನೂರಾರು ಬಯಕೆ!
ನಗುಕಾಣಲಲಿಪೀತು! ನಗುನೊಗದ ಸೊಗಕೆ!
ಯಮಪಾಶ ಜೀವನವು ಸೆಳೆವಂತೆ ನಿನ್ನ
ನಗು—ಉರುಳು ಸೆಳೆದೀತು ಶಾಂತಿಯನು ನನ್ನ!
ನಿನ್ನ ನಗು ನೊರೆನಲಿವ ಅಲೆಗಳಹ ಕಡಲು
ಅದ ಕಂಡು ನಡುಗುತಿದೆ ನನ್ನ ಎದೆ, ಒಡಲು!
ಹಾನಿಹರಣಕೆ ಅಲೆಯು,ಮತ್ಸ್ಯದುವೆ ದಾನಿ ಯಾವುದುಳಪುದೊ? ಆರಿಯೆ! ನಾನಲ್ಲ ಜ್ಞಾನಿ!
ಸಂಜೆಗತ್ತಲ ಸೊಗಸು, ಉಷೆ, ಚಂದ್ರ ಕಿರಣ
ಹರಿದ ಪಲಿಲದ ಒನಪು! ಸೌಂದರ್ಯಗಾನ!
ಈವ ಸುಖವಿದಂತಿಲ್ಲ ನಿನ್ನ ನಗು! ಮೊಸಳೆ
ಅಡಗಿರುವತಳಕಿಳಕೊಳ್ವು,ನಾನಿನ್ನು ಹುಸುಳಿ
ನಿನ್ನ ನಗು ನುಂಗೆ ವಿಷ! ಮನಕುಸುಮವ ವನ್ನುಕೊರೆವ ಹುಳ! ಎಂದಂತೆ
ದೂರವಿರೆ ಸಿನ್ನು!
ಆದಕಾಗಿ ನಾನಿಳೆಯೆ ಬಲು ದೂರ ಸರಿವೆ!
ನೀನೆನ್ನ ಕಡೆನೋಡಿ ನಗದಿರೆಂ ಚೆಲುವೆ!

—ಯೆನ್. ಕೃಷ್ಣ ಮೂರ್ತಿ.

READ & ADVERTISE IN
NAVAYUGA WEEKLY

NAVAYUGA 24—11—1968
Registered with the Registrar
of News Papers for India
under No. K. N. 3546/'67

REGD. No. B. G. 176
LICENCE No. 31
Licensed to Post without Prepayment

ಸಾಮಾಜಿಕ ಪ್ರಶ್ನೆ

ಮದ್ಯಪಾನ ಮತ್ತು ಧನಸಂಚಯ

ಆಂಗ್ಲೇಯರ ಆಳ್ವಿಕೆಯ ಕಾಲದಲ್ಲಿ ನಮ್ಮ ದೇಶದಲ್ಲಿ ಮದ್ಯಪಾನವನ್ನು ಮಾಡುವುದು ನ್ಯಾಯಸಮ್ಮತವಾಗಿತ್ತು. ಇತರ ವಸ್ತುಗಳಂತೆಯೇ ಮದ್ಯವನ್ನು ಮಾರುವ ಮೂರುಕಟ್ಟೆಗಳು ಇದ್ದುವು. ಇದರಿಂದ ಸರಕಾರಕ್ಕೆ ಹೇರಳವಾದ ಆದಾಯ ಬರುತ್ತಿತ್ತು.

೧೯೪೭ನೇ ಇಸವಿಯಲ್ಲಿ ನಮ್ಮ ನಾಯಕರು ನಮ್ಮ ದೇಶವನ್ನು ಆಂಗ್ಲೇಯರ ದಾಸ್ಯಶೃಂಖಲೆಯಿಂದ ಸ್ವತಂತ್ರಗೊಳಿಸಿದರು. ನಮ್ಮ ದೇಶದ ಕಾನೂನುಗಳಲ್ಲಿ ಬದಲಾವಣೆಗಳುಂಟಾದುವು. ನಮ್ಮ ದೇಶದ ಪಿತಾಮಹನೆಂದೆಣಿಸಲ್ಪಟ್ಟ ಮಹಾತ್ಮಾ ಗಾಂಧೀಜಿಯವರು ಮದ್ಯಪಾನವನ್ನು ನಿಷೇಧಿಸುವುದು ದೇಶದ ಹಿತದೃಷ್ಟಿಯಿಂದ ಒಳಿತೆಂದು ವಾದಿಸಿದರು. ಅಂತೆಯೇ ನಮ್ಮ ಸರಕಾರವುಮದ್ಯಪಾನವನ್ನು ನಿಷೇಧಿಸಿತು. ಒಂದು ಹೊಸ ಕಾನೂನನ್ನು ಹೊರಡಿಸಿ ತನ್ಮೂಲಕ ಮದ್ಯದ ಮಾರಾಟ ಹಾಗೂ ಮದ್ಯಪಾನ ಮಾಡಿದವರನ್ನು ಶಿಕ್ಷಿಸಲು ಒಂದು ಪ್ರತ್ಯೇಕ ಇಲಾಖೆಯನ್ನು ನಿಯುಮಿಸಿತು. ಈ ಇಲಾಖೆಯು ಗೂಢಚಾರರನ್ನೂ ಒಳಗೊಂಡಿತ್ತು.

ಮದ್ಯಪಾನವನ್ನು ಮಾಡುವುದು ಮಹಾಪಾತಕವೆಂದು ನಮ್ಮ ಹಿರಿಯರು ಹೇಳುವುದಿದೆ. ಪಂಚ ಮಹಾಪಾತಕಗಳಲ್ಲಿ ಇದೂ ಒಂದು ಎಂದು ಪರಿಗಣಿಸಲ್ಪಡುತಿತ್ತು. ಮೂತ್ರವಲ್ಲ ಇದು ಜೂಜು, ಬೇಟೆ ಮೊದಲಾದ ಸಪ್ತವ್ಯಸನಗಳಲ್ಲೂ ಒಂದು ಎಂದು ಹೇಳುವುದಿದೆ.

ಮದ್ಯಕ್ಕೆ ಅವಮಲು ಇನ್ನೂ ಹೆಚ್ಚಾಗ ಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ವ್ಯಾಪಾರಿಗಳು ಅದಕ್ಕೆ ಏನೇನೋ ವಿಷವಸ್ತುಗಳನ್ನು ಸೇರಿಸುವುದರಿಂದ ಅದು ಮಾನವ ಶರೀರಕ್ಕೆ ಅಪಾಯಕರವೆನ್ನುವುದರಲ್ಲಿ ಸಂದೇಹವಿಲ್ಲ. ಇಂತಹ ಮದ್ಯವನ್ನು ಸೇವಿಸುವುದರ ಪರಿಣಾಮವಾಗಿ ಎಷ್ಟೋ ಜೀವನಾಶವು ಸಂಭವಿಸುವುದುಇದೆ.

ಮದ್ಯವನ್ನು ಸೇವಿಸಿದವನಿಗೆ ಅದರಿಂದಾಗಿ ಈ ಲೋಕದ ಗೋಡವೆಯೇ ಇರುವುದಿಲ್ಲ. ದೇಹ, ಮನಸ್ಸು ಹಾಗೂ ನಾಲಿಗೆ ಇವುಗಳೊಂದಿರುವ ಸಂಬಂಧವು ಕಡಿದು ಹೋಗುವುದು. ಪರಿಣಾಮವಾಗಿ ಕೆಲವು ಬಾರಿ ಅತನ ಬಾಯಿಯಿಂದ ಹೇಯವಾದ ಮಾತುಗಳು ಹೊರಬರುವುದೂ ಇವೆ. ತುಚ್ಛವಾದ ಕೆಲಸಗಳನ್ನು ಮಾಡಲೂ ಆತ ಹಿಂಜರಿಯುವುದಿಲ್ಲಾರ.

ತನ್ನ ಕೈಯಲ್ಲಿರುವ 'ಕಾಸು' ಮುಗಿಯುವ ತನಕ ಆತ ಅದನ್ನು ಕೊಟ್ಟು, ಮದ್ಯಪಾನವನ್ನು ಮಾಡಬಹುದು. ತರುವಾಯ ತನ್ನ ಹೆಂಡತಿ ಮಕ್ಕಳ ಕತ್ತಿನಲ್ಲಿರುವ ಚಿನ್ನಾಭರಣಗಳನ್ನು, ಮೂರಿಯಾದರೂ ಮದ್ಯಪಾನವನ್ನು ಮಾಡಬಹುದು. ಹೀಗೆ ಒಬ್ಬಾತ ಹಿಂದು ಬಾರಿ ಮದ್ಯವನ್ನು ಸೇವಿಸಿದನೆಂದರೆ ಆದು ಆತನನ್ನೂ, ಆತನ ಮನೆಯಾರೂ ನೆರೆಕರೆಯವರನ್ನೂ ಹಾಳುಗೆಡಹುವುದರಲ್ಲಿ ಸಂದೇಹವಿಲ್ಲ.

ಮದ್ಯಪಾನದಿಂದ ಉಂಟಾಗುವ ಇಂತಹ ಅನರ್ಥಗಳನ್ನು ಬಗೆದು ಪಾನನಿಷೇಧವನ್ನು ಜಾರಿಗೆ ತಂದರು. ದೇಶಕ್ಕೆ ಬರುವ ಆದಾಯಕ್ಕಿಂತ ಪ್ರಜೆಗಳ ನೈತಿಕ ಮಟ್ಟದ ಉನ್ನತಿಯೇ ಮಿಗಿಲು. ಆದರೆ "ತಾನೊಂದು ಬಗೆದರೆ ದೈವವಿನ್ನೊಂದೆಣಿಸಿತು" ಎನ್ನುವಂತೆ ಆದರಿಂದ ಉಂಟಾಗುವ ಅವಗುಣಗಳೇ ಹೆಚ್ಚಾದವು.

ಮದ್ಯಪಾನವನ್ನು ನಿಷೇಧಿಸುವ ಸಲುವಾಗಿ ನೇಮಿಸಿದ ಇಲಾಖೆ ತನ್ನ ಗುರಿಯನ್ನು ಸಾಧಿಸಲಾರದೆ ಹೋಯಿತು. ಯಾವ ಅಧಿಕಾರಿಗಳು ಆದನ್ನು ಪತ್ತೆಹಿಡಿಯಬೇಕೆತ್ತೋ ಅದೇ ಅಧಿಕಾರಿಗಳು ಆದನ್ನು ಪರೋಕ್ಷವಾಗಿ ಪ್ರೋತ್ಸಾಹಿಸಿದರು. ಅಧಿಕಾರಿಗಳಿಗೂ ಮದ್ಯಪಾನದ ರುಚಿ ಚಟಹಿಡಿಯಿತು. "ಹಣ ಕಂಡರೆ ಹೆಣ ಬಾಯ್ಬಿಡುವುದು' ಎಂಬ ಲೋಕೋಕ್ತಿಯ ಸತ್ಯಾಂಶವನ್ನು ದೃಢೀಕರಿಸಲೋ ಎಂಬಂತೆ ಈ ಕ್ಷೇತ್ರದಲ್ಲೂ ಲಂಚ, ಭ್ರಷ್ಟಾಚಾರ ಇನ್ನಷ್ಟು ಹೆಚ್ಚಿತು. ಇದರ ಪರಿಣಾಮವಾಗಿ ಜನರ ನೈತಿಕ ಮಟ್ಟವು ಹದಮೀರಿ ಕೈಗಟ್ಟಿತು.

ಇಂದು ನಮ್ಮ ಸರಕಾರವು ಈ ಕಾಯಿದೆಯನ್ನು ಮತ್ತಷ್ಟು ಸಡಿಲುಗೊಳಿಸಿದೆ. ಅಂದರೆ ಅದು ಮದ್ಯಪಾನವನ್ನು ಪ್ರೋತ್ಸಾಹಿಸಿದಂತಲ್ಲವೆ? ನಮ್ಮ ಸರಕಾರಕ್ಕ ಪರಿಸ್ಥಿತಿ ಕೆಟ್ಟಿದೆ. ಮದ್ಯಪಾನವನ್ನು ಪ್ರೋತ್ಸಾಹಿಸಿದರೂ ತೊಂದರೆ ನಿಷೇಧಿಸಿದರೂ ತೊಂದರೆ ಅಂತೂ ಒಟ್ಟಿನಲ್ಲಿ ಹೇಳಬೇಕಾದರೆ ನಮ್ಮ ಪರಿಸ್ಥಿತಿಯು "ಅತ್ತ ದರಿ; ಇತ್ತ ಹುಲಿ" ಎಂಬಂತಾಗಿದೆ. ನಮ್ಮ ದೇಶದ ನಾಯಕರಿಗೆ ಇದೊಂದು ಬಗೆಹರಿಯದ ಸಮಸ್ಯೆಯಾಗಿದೆ. ಹಲವರು ಇದರ ಇತ್ಯರ್ಥಕ್ಕಾಗಿ ಪ್ರಯತ್ನಿಸಿ, ಸೋಲನ್ನನುಭವಿಸಿದರು.

ಇಂದು ನಮ್ಮ ಸರಕಾರವು ಮದ್ಯದಂಗಡಿಗಳನ್ನು ತೆರೆಯಲು ಸಮ್ಮತಿ ಕೊಟ್ಟಿದೆ. ವೀಳೆಕ್ಕೆ ಅಪಾಯಕಾರಿಯಲ್ಲದ ಉತ್ತಮ ತರದ ಮದ್ಯವು ಇಷ್ಟಿ ಮಾರಲ್ಪಡುವುದು. ಇದರಿಂದಾಗಿ, ಕೀಳು ತರಗತಿಯ ಮದ್ಯದ ತಯಾರಿ ಕಡಿಮೆಯಾದೀತೆಂಬ ಭಾವನೆ ಸರಕಾರದ್ದು ಆದರೆ ಇದರಿಂದಾಗುವ ಕೆಡುಕುಗಳನ್ನು ನಾವು ಮರೆಯುವಂತಿಲ್ಲ. ಸರಕಾರವೇ ಮದ್ಯಪಾನಕ್ಕೆ ಪ್ರೋತ್ಸಾಹ ನೀಡಿದೆಂದರೆ ಇನ್ನಷ್ಟು ಜನರು ಈ ದುಶ್ಚಟಕ್ಕೆ ಬಲಿಯಾಗುವುದರಲ್ಲಿ ಸಂದೇಹವಿಲ್ಲ.

ಜನರು ಹೆಚ್ಚಿನ ಪ್ರಮಾಣದಲ್ಲಿ ಮದ್ಯ ಸೇವನೆ ಮಾಡುವರೆಂದು ಈ ಮೊದಲೇ ಹೇಳಿದ್ದೆನಷ್ಟೆ. ಮದ್ಯದಂಗಡಿಗಳಲ್ಲಿ ಮಾಲ್ಪಡುವ ಉತ್ತಮ ತರದ ಮದ್ಯದ ಬೆ ಸ್ವಲ್ಪ ಹೆಚ್ಚಾಗಿಯೇ ಇರುವುದು—ಇದ ಕೈಯಲ್ಲಿ ಕಾಸು ಇರುವವರಿಗೆ ಉಳಿದ ರು ಕೈಯಲ್ಲಿರುವ ಕಾಸು ಮುಗಿದ ಕೂ ಲೇ, ಮೊದಲೇ ಹೇಳಿದಂತೆ, ತನ್ನ ಹೆಂ ತಿ ಮಕ್ಕಳ ಕತ್ತಿನಲ್ಲಿದ್ದ ಚಿನ್ನವನ್ನು ಪ ರಿಯಾದರೂ ಮದ್ಯಸೇವನೆಯನ್ನು ವ ಡುವನು. ತರುವಾಯ ಹಣಕ್ಕೆ ಬೇ ನೂ ದಾರಿಯಿಲ್ಲದಾಗ ಕದಿಯಲು ಪ್ರ ರಂಭಿಸುತ್ತಾನೆ. ಕದ್ದಾದರೂ ಹಣ ಸಿ ದಿದ್ದಾಗ, ಆತನು ಕೀಳುತರಗತಿಯ ಮ ವನ್ನಾದರೂ ಸೇವಿಸುವನು. ಈ ನುದ್ಯ ಬೆಲೆ ಸ್ವಲ್ಪವಷ್ಟಿಗೆ ಕಡಮೆಯಾಗಿಯೆ ಇರುವುದು. ಕೀಳುತರಗತಿಯ ಮದ್ಯ ನ್ನು ಸೇವಿಸುವುದು ಆರೋಗ್ಯಕ್ಕ ದೈ ಯಿಂದ ತೀರ ಅಪಾಯಕರ. ಜೀವನ ವಾ ಗು ವ, ಮ ನ ವ ವಿ ರೋ ಧಿ ರೋಗಗಳಿಗೆ ಬಲಿಯಾಗುವ ಪ್ರಸಂಗ ಳೂ ಕಡಮೆಯಿಲ್ಲ. ಆದುದರಿಂದ ಜನ ನ್ನು ಹಾಳುಗೆಡಹುವ ಈ ಮದ್ಯದಂಗ ಗಳು ದೇಶದ ಹಿತದೃಷ್ಟಿಯಿಂದ ಒಳಿತ ಕಾನೂನನ್ನು ಸಡಿಲು ಬಿಡುವುದು ಎಂದ ನೈತಿಕಮಟ್ಟವನ್ನು ಇಳಿಸಿತೆ.

ಹಾಗಾದರೆ ಇದಕ್ಕೆ ಇನ್ನು ಪರಿಹಾರವೇ ಇಲ್ಲವೇನು? ಇದೆ. ಮದ್ಯಪಾನವನ್ನು ಮಾಡಿದರೆ ಕೆಡುಕುಗಳು ಬಹಳ. ಕೆಡುಕುಗಳೊಂದಿಗೆ ಹೋಲಿಸಿನೋಡಿದ ಗ ಆದರಿಂದ ನಮಗೆ ಬರಬಹುದಾದ ದಾಯತೀರ ಕಡಮೆ. ಇಂದು ಮಾನವನ ನೈತಿಕಮಟ್ಟವು ಬಹಳಷ್ಟು ಕೆಟ್ಟುಹೋಗಿದೆ. ಕಾನೂನುಗಳ ಮೂಲಕ ಮದ್ಯಪಾನವನ್ನು ತಡೆಹಿಡಿಯುವುದು ಕಷ್ಟಸಾಧ್ಯವೂ ಅಪಾಯಕಾರಿ. ಹಾಗಾದರೆಇನ್ನಾವ ದಾರಿ?

ಮಾನವನ ನೈತಿಕ ಮಟ್ಟವನ್ನು ಉತ್ತಮ ಗೊಳಿಸಲು ಪ್ರಯತ್ನಿಸಿಕು. ಮಾನವನು ಮಾನವನಂತೆ ಬಾಳಕು. ಅವನು ನಾಗರಿಕನಾಗಬೇಕು. ಷ್ಟ್ರದ ಉತ್ತಮ ಪ್ರಜೆಯಾಗಬೇಕು ಷ್ಟ್ರದ ಸೃಢವಾದ ಪಂಚಾಗಡ ಅಡಿಗನ್ನಿಡಲು ಪ್ರತಿಯೊಬ್ಬನೂ ಪಾಲುಗಾನಾಗಬೇಕು. ನಮ್ಮ ಜನರಿಗೆ ಈ ಶ್ನೆ ಶ್ರದಲ್ಲಿರುವ ಶತ್ರು 'ಅಜ್ಞಾನ' ಎಂದೆ ಇದನ್ನು ಹೊಡೆದೋಡಿಸಬೇಕು. ದ್ಯಪಾನದಿಂದಾಗುವ ಒಳಿತು ಕೆಡುಕುಳನ್ನು ಜನರಿಗೆ ಮಂದಟ್ಟಾಗುವಂತೆ ಡಬೇಕು. ಇದು ವಿದ್ಯಾಭ್ಯಾಸವೊಂ ದಿಂದಲೇ ಸಾಧ್ಯ. ಜನರಿಗೆ ಒಳ್ಳೆಯ ವಿ ದ ಫಲಬೇತು ನೀಡಬೇಕು. ಈ ಶ್ನೆ ದಲ್ಲಿ ಜನರಿಗೆ ಉತ್ತಮ ನಿಕ್ಷಣ ನೀಡಿದ ಮಾಹಾತ್ಮಾ ಗಾಂಧೀಜಿಯವರ ಕನಸಾದ "ರಾಮರಾಜ್ಯ" ನನಸಾಗುವುದರ ಏನು ಸಂದೇಹ?

—ಶ್ರೀ ಮುಂಡೋಡು
ನಾರಾಯಣ ಭಟ್

ಹಣ ಭದ್ರವಾಗಿದ್ದರೆ ಮಾತ್ರ ಸಾಕೇ?

ಭದ್ರತೆಯೊಂದಿಗೆ ಆವಶ್ಯಕ ಸಂದರ್ಭದಲ್ಲಿ ಬೇಕಷ್ಟು ಹೊತ್ತ ಕೈಗೆ ದೊರಕುವಂತಿದ್ದರೆ ಮಾತ್ರ ಹಣದ ಉಪಯುಕ್ತತೆ ಹೆಚ್ಚುವುದು.

— ಈ ಸೂತ್ರಕ್ಕೆ ಹೊಂದುವ ಯೋಜನೆ ಸಿಂಡಿಕೇಟ್ ಬ್ಯಾಂಕಿನ ಸೇವಿಂಗ್ಸ್ ಬ್ಯಾಂಕ್ ಖಾತೆ.

ಸೇವಿಂಗ್ಸ್ ಬ್ಯಾಂಕ್ ಖಾತೆಯ ಗುಣಲಾಭಗಳು ಬಹಳ:

ಹಣ ಖಾತೆಯಲ್ಲಿರುವಷ್ಟು ಕಾಲ ಸೇ. 4ರಂತೆ ಬಡ್ಡಿ ಗಳಿಸುವುದು ● ಹಣ ಹಿಂದಕ್ಕೆ ಪಡೆಯಲು ಮುಂದಾಗಿ ತಿಳಿಸುವ ಅವಶ್ಯಕತೆಯಿಲ್ಲ ● ವರ್ಷದಲ್ಲಿ 150 ಬಾರಿ ಖಾತೆಯಿಂದ ಹಣ ಪಡೆಯುವ ಸೌಲಭ್ಯವಿದೆ ● ಚೆಕ್ಕು ಪುಸ್ತಕವನ್ನು ಉಪಯೋಗಿಸುವ ಸೌಲಭ್ಯದೊಂದಿಗೆ ನಿಮ್ಮ ಯಾವತ್ತೂ ವೆಚ್ಚದ ಬಾಬ್ತು ಹಣವನ್ನು ಚೆಕ್ಕು ಮೂಲಕ ಸಲ್ಲಿಸುವ ಅನುಕೂಲತೆ ದೊರೆಯುವುದು ● ಪ್ರತಿ ವಾರ ರೂ. 1500/- ರಷ್ಟು ಹಣವನ್ನು ಉಚಿತವಾಗಿ ರವಾನಿಸುವ ಸೌಲಭ್ಯ ನಿಮಗೆ ಲಭಿಸುವುದು ● ಕೇವಲ ರೂ. 5ನ್ನು ತೆತ್ತು ತೆರೆಯಬಹುದಾದ ಈ ಖಾತೆಯಲ್ಲಿ 25 ವೈಸೆಯನ್ನು ಕೂಡಾ ನೀವು ಜಮಾ ಮಾಡಬಹುದಾಗಿದೆ.

ಎಲ್ಲಾ ವರ್ಗದ ಜನರಿಗೆ, ಎಲ್ಲಾ ಅಂತಸ್ತಿನ ಮಂದಿಗೆ ಏಕರೀತಿಯಲ್ಲಿ ಅನುವಾಗುವ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ತೆರೆದು ಮೇಲಿನ ಎಲ್ಲಾ ಸೌಲಭ್ಯಗಳನ್ನು ಹೊಂದಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

1—12—1966

ಪುಟ ೨೦

ದೇವಲೋಕದಲ್ಲಿ

ಅಧಿಕಾರದ ದುರುಪಯೋಗ ಫಲ

ಲೇಖಕರು
ಶ್ರೀ ಹಳೆನಾಡು ಸುಬ್ರಾಯ ಭಟ್ಟ

ಒಂದುದಿನ ದೇವ ಸಭೆಯಲ್ಲಿ ದೇವೇಂದ್ರನು ಮಯೂರಾಸನದಲ್ಲಿ ಮಂಡಿಸಿದ್ದನು. ಸಕಲ ದೇವತೆಗಳೂ ಆಸನಾರೂಢರಾಗಿದ್ದರು. ಆದರೆ ಒಂದು ಯೂರ ಮುಖದಲ್ಲಿಯೂ ನಗುವಿನ ಸುಳಿವಿರಲಿಲ್ಲ.. ಸಂತೋಷದ ಕಳೆಕಾಣದಂತಾಗಿ ಕರ್ತವ್ಯದ ಹೊಣೆ ಮರೆಕಂತಿತ್ತು. ರಾಹು ಗ್ರಸ್ತನಾದ ಚಂದ್ರನಂತೆ ಅಂದಿನ ಸಭೆಯು ಕಳೆಗುಂದಿತ್ತು. ಯೂರೊಬ್ಬರೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಎಲ್ಲೆಲ್ಲಿಯೂ ಸ್ಮಶಾನ ಮೌನ ಆವರಿಸಿತ್ತು. ನರ್ತನ ವಾದ್ಯಗಳ ಸದ್ದಡಗಿ ಕೆಲ ದಿನಗಳೇ ಕಳೆದಿತ್ತು. ಎಷ್ಟು ಯೋಚಿಸಿದರೂ ಬಗೆಹರಿಯದ ಸಮಸ್ಯೆಯಲ್ಲಿ ದೇವತೆಗಳೆಲ್ಲಾ ಮುಳುಗೇಳುತ್ತಿದ್ದರು.

ಆಗಲೇ ಹೊರ ಬಾಗಿಲಲ್ಲಿ ಕೇಳಿದ ನಾರಾಯಣ ಗಾನವನ್ನು ಕೇಳಿ ಎಲ್ಲರ ಮುಖದಲ್ಲಿ ಒಮ್ಮೆ ಸಂತೋಷದ ರೇಖೆ ಸುಳಿದು ಮಾಯವಾಯಿತು.

ದೇವೆಂದ್ರನಾದಿಯಾಗಿ ಸಕಲ ದೇವತೆಗಳೂ ಬಂದು ನಾರದರನ್ನು ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿ; ಅತಿಥಿ ಸತ್ಕಾರ ಗೈದು ಕೈಮುಟ್ಟಿ ನಿಂತರು.

ದೇವತೆಗಳ ಮುಖಾವಲೋಕನದಿಂದಲೇ ನಾರದರಿಂಗೆ ಒನ್ಮೆಲೇ ಆಶ್ಚರ್ಯವಾಯಿತು. ಯೂರ ಮುಖದಲ್ಲಿಯೂ ಸಂತೋಷದ ಕಳೆಯಾಗಲೀ; ತಿಳಿ ನಗುವಿನ ಸುಳಿವಾಗಲೀ ಕಂಡು ಬರಲಿಲ್ಲ.

ಆಗ ದೇವೆಂದ್ರನನ್ನು ಕುರಿತು—"ಸುರೇಂದ್ರ! ದೇವತೆಗಳ ಮುಖವೇಕೆ ಕಂದಿದೆ? ಸ್ವರ್ಗಾಧೀಶ್ವರನಿಗೆ ಈ ಕಲಿಯುಗದಲ್ಲಿ ಬಂದ ಅತಂಕವಾದರೂ ಏನು? ಹಿಂದೆ ರಕ್ಕಸರ ಹಾವಳಿಯಿಂದ ಕಂಗಾಲಾದ ದೇವತೆಗಳನ್ನು ಕಂಡಂತಿದೆಯಲ್ಲ ಇಂದು?" ಎಂದು ಪ್ರೀತಿಯಿಂದಲೇ ಕೇಳಿದರು.

ಆಗ ಸಹಸ್ರಾಕ್ಷನು ಕೈಮುಗಿದು ವಿನಯದಿಂದ—"ಸುಂಮುನಿಗಳೇ! ಕೃತ, ದ್ವಾಪರ, ತ್ರೇತಾಯುಗದಲ್ಲಿ ಬಂದ ಕೃಷ್ಣಕ್ಕಿಂತಲೂ ಕಠಿಣತಮ ಕಷ್ಟ ಈ ಕಲಿಯುಗದಲ್ಲಿ ಬಂತಲ್ಲಾ?" ಎಂದನು.

"ಕಲಿಯುಗದಲ್ಲಿ ದೇವತೆಗಳಿಗೆ ಕಷ್ಟವೇ? ಯಾರಿಂದ?"

"ಭೂಲೋಕದ ಮಾನವರಿಂದ!'

'ನಿಮ್ಮ ಭಕ್ತರಿಂದ ನಿಮಗೆ ತೊಂದರೆಯೇ?"

'ಹೌದು ಸ್ವಾಮಿ!"

'ಹೇಗೆ? ಯಾವತರದ ತೊಂದರೆಯೂ ಗಿದೆ?'

"ಇಂದು ನಮ್ಮ ಕೆಲಸ ನಾವು ಪೂರೈಸಲು ಅಸಮರ್ಥರಾಗಿದ್ದೇವೆ. ಕೆಲಸವಿಲ್ಲದೆ ಆಲಸಿಗಳಾಗುತ್ತಿದ್ದಾರೆ ದೇವತೆಗಳು. ಸ್ವರ್ಗವೆಂಬುದು ನಿದ್ರಾವಸ್ಥೆಗಿಳಿದಿದೆ ಇಂದು."

"ಮಾನವರಿಂದಾದ ಉಂಟಾದ ಅಂತಹ ತೊಂದರೆ ಏನು ದೇವೇಂದ್ರ?" "ಅದೇನೂ ಸಾಮಾನ್ಯ ತೆರನಾದುದಲ್ಲ ಮುನಿಗಳೇ! ಮಾನವರಿಂದು ದೇವತೆಗಳನ್ನೇ ಮರೆತಿದ್ದಾರೆ. ಭೂಲೋಕದಲ್ಲಿಂದು ಯಜ್ಞಯಾಗಾದಿಗಳು ನಡೆಯುತ್ತಿಲ್ಲ. ದಾನ ಧರ್ಮದ ಸುಳಿವಿಲ್ಲ; ಕುಲಧರ್ಮವನ್ನು ಮರೆತು, ತನ್ಮ್ಯಾ ಇಷ್ಟಾರ್ಥವನ್ನು ಲಂಚ, ವಂಚನೆ; ಅನ್ಯಾಯಗಳಿಂದಲೇ ಪಡೆಯಲು ಮಾನವರು ಮುಂದಾಗಿದ್ದಾರೆ.

ಮಾನವ ಲೋಕದಲ್ಲಿ ಯಮನಿಗಿಂದು ಎಲ್ಲಿಡೆಯೂ ಸೋಲೇ ಪ್ರಾಪ್ತಿಯಾಗಿದೆ.ಇಂದು ಮಾನವರುರೋಗ ರುಜಿನಗಳಿಗೆ ಬೆದರುತ್ತಿಲ್ಲ. ಮುದುಕರನ್ನೂ ಸಾಯಿಗೊಡುತ್ತಿಲ್ಲ ಸತ್ಪವನ್ನು ಕೂಡಾ ಬದುಕಿಸುವ ಪ್ರಯತ್ನವನ್ನೇ ಮಾನವರಿಂದು ಮಾಡ ಹೊರಟಿದ್ದಾರೆ.

ಇನ್ನು ಅಗ್ನಿಯ ಕೆಲಸ ದಿನೇ ದಿನೇ ಕಡಿಮೆಯಾಗುತ್ತಿದೆ. ಬೆಂಕಿ ಇಲ್ಲದ ಬದುಕುವ ಉಪಾಯ ಕಂಡುಕೊಳ್ಳುತ್ತಿದ್ದಾರೆಂದು. ಅಡಿಗೆ ದೀಪಗಳಿಗಾಗಿಯೂ ಅಗ್ನಿಯನ್ನು ಆದರಿಸುತ್ತಿಲ್ಲವಿಂದು.

ವರುಣನ ಸ್ಥಿತಿಯಂತೂ ಹೇಳತೀರದಾಗಿದೆ. ಮಳೆ ಬಾರದಿದ್ದರೂ ಬೆಳೆ ಬೆಳೆಯಲು ಹೊಸ ಯೋಜನೆ ಕಂಡು ಕೊಂಡಿದ್ದಾರೆಂದು ನೆರೆ ಹಾವಳಿ ತಪ್ಪಿಸಲು ಹೊಸ ಕ್ರಮ ಕೈಗೊಂಡಿದ್ದಾರೆ. ಕೃತಕ ಮಳೆ ತರಿಸುವ ಉಪಾಯವನ್ನು ಕೂಡಾ ಹುಡುಕ ಹೊರಟಿದ್ದಾರೆ.

ಯೂರ ಕೈಗೂ ಸಿಲುಕದ ವಾಯುವನ್ನು ಕೂಡಾ ನಿಯಂತ್ರಿಸಲು ಹೊರಟಿದ್ದಾರೆ. ಕೆಲವು ವನೆಗಳ ಒಳ ಪ್ರವೇಶಕ್ಕೂ ಅನುಮತಿಯಿಲ್ಲವಾಗಿದೆ ಇಂದು.

ಕುಬೇರನ ಹೆಸರನ್ನು ಉಚ್ಚರಿಸುವವರೇ ಇಲ್ಲವಾಗಿದ್ದಾರೆ. ತಮಗೆ ಬೇಕಾದ ಸಂಪತ್ತನ್ನು ತಾನೇ ವಂಚಕತನದಿಂದ ಗಳಿಸ ಹೊಂಟಿದ್ದಾರೆ.

ಹೆಚ್ಚೇಕೆ? ಕಾಮ ಸಮೋಹ ಕಾಲಿರಿಸಲು ಸಕ್ಕೆಲ್ಲದ ಚಂದ್ರಲೋಕಕ್ಕೂ ಮಾನವನು ಕಾಲಿರಿಸಲು ಹೊರಟಿದ್ದಾನೆ.

ಇನ್ನು ಮುಂದೆ ದೇವತೆಗಳಾದ ನಮ್ಮನ್ನು ಯಾರು ಆರಾಧಿಸುತ್ತಾರೆ? ಮುಂದೆ ನಾವು ಹೇಗೆ ಬದುಕಬೇಕು? ಇದಕ್ಕಾವ ಉಪಾಯ ಮಾಡಲಿ?' ಎಂದು ವಿನಯದಿಂದ ಕೈ ಮುಗಿದು ವಿನಂತಿಸಿಕೊಂಡನು. ಆಗ ನಾರದರು "ದೇವೇಂದ್ರ! ಮಾನವರಿಂದ ದೇವತೆಗಳಿಗೆ ಕಷ್ಟ ಬರುವುದೇ ಕಲಿಯುಗದ ಮಹಿಮೆ. ನಿನ್ನ ಕಾರ್ಯಕ್ಕೂ ಇಂದು ತಡೆಯಾಗಿದೆ. ಭೂಲೋಕದಲ್ಲಿ ನಾರದರ ಸಂಖ್ಯೆಯೇ ಹೆಚ್ಚಾಗಿದೆ. ಸಜ್ಜನರಿಗೆ ಕಷ್ಟ ವಾದರೂ ದುರ್ಜನರ ಬಾಳು ಸ್ಥಿರವಲ್ಲ; ಎಲ್ಲವನ್ನೂ ಬ್ರಹ್ಮನಲ್ಲಿ ವಿನಂತಿಸಿಕೊಂಡರೆ ತಕ್ಕ ಪರಿಹಾರ ಸಿಕ್ಕೀತು' ಎಂದು ಮೇಲೆದ್ದರು.

ದೇವತೆಗಳಾದಿಯಾಗಿ ಎಲ್ಲರೂ ನಾರದರನ್ನನುಸರಿಸಿ ಬಹ್ಮಲೋಕಕ್ಕೆ ತೆರಳಿದರು.

ಬ್ರಹ್ಮನು ಆಲಸಿಯಾಗಿ ಹಾಸಿಗೆಯಲ್ಲಿ ಮಲಗಿದ್ದನು. ನಾರದನ ಗಾನ ಕೇಳಿದಾಗ ಮೇಲೆದ್ದು ಹುಸಿನಗೆಯಿಂದಲೇ ಎಲ್ಲರನ್ನೂ ಸ್ವಾಗತಿಸಿದರು.

ಬ್ರಹ್ಮನು ಬಡವಂದ ದೇವತೆಗಳನ್ನು ಕಂಡು ಬಂದ ಕಾರಣ ಕೇಳಲು; ನಾರದರು ಎಲ್ಲವನ್ನೂ ಸಾದ್ಯಂತವಾಗಿ ವಿವರಿಸಿ ಪರಿಹಾರ ಮಾರ್ಗ ಸೂಚಿಸಬೇಕೆಂದು ಕೇಳಿಕೊಂಡರು.

ಕ್ಷಣಕಾಲ ಬ್ರಹ್ಮನುಯೋಚಿಸಿದನು. ಯಾವ ಉತ್ತರ ದೊರಕುವುದೋ ಎಂದು ದೇವತೆಗಳೆಲ್ಲಾ ಕಾತರರಾಗಿದ್ದರು.

ಆಗ ಬ್ರಹ್ಮನು ಒಮ್ಮೆ ಆಕಳಿಸಿ ಮೈ ಮುರಿದು ನಿಟ್ಟುಸಿರಿಟ್ಟು ಹೇಳ ಹೊರಟನು.

"ದೇವಾಧಿ ದೇವತೆಗಳೇ! ಮಾನವರು ಉಳಿದಲ್ಲಿ ಕೈಯಿರಿತ್ತಿದೆ ಎಂಬುದು ಬ್ರಹ್ಮ ಲೋಕಕ್ಕೂ ಈ ಗಾಗಲೇ ಮನವರಿಕೆಯಾಗಿದೆ. ಇಂದು ನನ್ನ ಸೃಷ್ಟಿಯು ಕಾರ್ಯಕ್ಕೂ ಅಡ್ಡಿಯನ್ನುಂಟು ಮಾಡುತ್ತಿದ್ದಾರೆಂದು ಮಾನವರು. ಬ್ರಹ್ಮನ ಕೆಲಸ ತಾನೇ ಪೂರೈಸುತ್ತಿದ್ದಾರೆ. ಜನನದ ಕಡೆ ಹಿಡಿದು, ಗಂಡು ಹೆಣ್ಣುಗಳ ನಿಯಂತ್ರಣವನ್ನು ತಾವೇ ಮಾಡಹೊರಟಿದ್ದಾರೆ. ಮಾನವರ ಮಾತ್ರವಲ್ಲ; ಪ್ರಾಣಿಗಳ ನಿಯಂತ್ರಣವನ್ನು ಕೂಡಾ ಮಾಡ ಹೊರಟಿರುವಾಗ; ಬ್ರಹ್ಮನ ಹೆರನ್ನಿಂದು ಹೇಳುವವರೇ ಇಲ್ಲವಾಗಿದ್ದಾರೆ. ನಾನೇ ಸಂಕಷ್ಟದಲ್ಲಿರುವಾಗ ನಿಮಗೆ ಪರಿಹಾರ ಮಾರ್ಗ ಏನೆಂದು ಸೂಚಿಸಲಿ?" ಎಂದನು ವಿಷಾದದಿಂದ. "ಹಾಗಾದರೆ ನಮ್ಮನ್ನು ಯಾರು ಕಾಯಬೇಕು ದೇವಾ?"ಎಂದು ಒಕ್ಕೊರಲಿನಿಂದ ದೇವತೆಗಳು ಕೂಗಿದರು.

ವೈಕುಂಠಕ್ಕೆ ತೆರಳಿ ನಾರಾಯಣನನ್ನು ಸ್ತುತಿಸಿದರೆ ನಿಮ್ಮ ಕಷ್ಟ ಪರಿಹಾರವಾದೀತು' ಎಂದನು ಬ್ರಹ್ಮ.

ನೀವು ನನ್ನ ಜೊತೆಗೆ ಅಲ್ಲಿಯವರೆಗೆ ಬರುವ ಕರ್ತವ್ಯವೇ ಬೇಕು' ಎಂದು ಮತ್ತೊಮ್ಮೆ ಬ್ರಹ್ಮನಿಗೆ ಅಡ್ಡಬಿದ್ದರು, ಬಂದವರು.

ಬ್ರಹ್ಮನು ದೇವತೆಗಳನ್ನು ಒಡಗೂಡಿ ಕೊಂಡು ವೈಕುಂಠಕ್ಕೆ ತೆರಳಿದನು.

ಆಗ ನಾರಾಯಣನು ಕ್ಷೀರ ಸಾಗರದಲ್ಲಿ ವಿಷ್ಣುಶೇಷನ ಮೇಲೇರಿಗ ಸುಖನಿದ್ದೆಯಲ್ಲಿದ್ದನು.

ದೇವತೆಗಳೆಲ್ಲಾ ನಾರಾಯಣ ಸ್ಮರಣೆ ಮಾಡುತ್ತ ಕಾಲುದಿಸೆಯಲ್ಲಿ ಕುಳಿತರು. ಆಗಲೆ ನಾರಾಯಣನು ಎಚ್ಚೆತ್ತನು; ನಗುಮುಖದಿಂದಲೇ ಕಣ್ಣುಜ್ಜಿ ಎದ್ದು ಕುಳಿತನು. ಬ್ರಹ್ಮನಾದಿಯಾಗಿ ಸರ್ವರನ್ನೂ ಕಂಡುಶ್ಚರ್ಯ ನಟಿಸಿ; ಬಂದ ಕಾರಣ ಕೇಳಿದನು.

ಆಗ ಬ್ರಹ್ಮನು ಎಲ್ಲವನ್ನೂ ನಿವೇದಿಸಿ ಕಾವಾಡೆಂದು ಕೈ ಮುಗಿದನು.

ನಾರಾಯಣನು "ನಿಮ್ಮ ಅಹಂಕಾರವೇ ನಿಮ್ಮನ್ನು ಹಾಳುಮಾಡಿತು. ಅಧಿಕಾರದ ದುರುಪಯೋಗ ಪಡಿಸಿ ಈಗ ಪಶ್ಚಾತ್ತಾಪ ಪಡುತ್ತಿದ್ದೀರಿ" ಎಂದನು ನುಗುತ್ತ ನಗುತ್ತಾ.

"ಯಾವ ತಪ್ಪು ನಮ್ಮಿಂದ ಘಟಿಸಿತು.

(ಪಸ್ಮೊಂದನೇ ಪುಟ ನೋಡಿರಿ)

ಶ್ರೀ ಕೆ.ಕೆ.ಶೆಟ್ಟಿ,ಎಂ.ಎಲ್. ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇಗರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದಲೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂತಯ ಪಿಶಾಚಿ	0=75
ಕುತಲವ	0=50
ಆತ್ಯಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಆತ್ಯಾಧುನಿಕ ಸಲಕರಣೆ — ಸಾಕಯರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ:77 ಕುಂದಾಪುರ, ಪಿ. ಕ.

ಕವಮುಂಗ ಗಿ—ಗಿತಿ—ಗಿಲಿಕಿಟಿ

ನಲ್ಮಾತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ನಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಇಂಚಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆದಿರಬೇಕು. ಅಕ್ಷರಗಳು ಸ್ಪಷ್ಟವಾಗಿ ಅಳತೆಗಳಿಂದ ಬರೆಯಲ್ಪಡಬೇಕು. ಅಧಿಕೃತ, ಆನುವಾದಿಕವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಮಂಡಿಕೇರ್ಪ್ ಬೇಕಾದ ಯಾವುದೇ ಕಾರ್ಯವಿಲ್ಲಿ ಯಾವ ಮಟ್ಟದಲ್ಲಿ ಇದ್ದರೂ 'ನವಯುಗ'ದ ಪತ್ರಿಕೆಗೆ ಜನರು ಮಾಡುವ ಸಹಾಯಕ್ಕೆ ಬೆಲೆಯಿರುವುದು.

ಮುಖಪತ್ರದಲ್ಲಿ:

ಕೃತಕ ಹೃದಯ ಜೋಡಣೆಯು ಅಪರೇಶನ್ನಿನಲ್ಲಿ ಯಶಸ್ಸಾಗಿದ್ದ ಮೊದಲ ವಿಷಯ ಎನ್ನಲೆಂಬಾ ಡೆಲ್ ವಿಲ್ಲೆ ಪಸ್ಯಾಸ್ಪತ್ರೆ (ಮಧ್ಯೆ) ಟೆಕ್ಸಾಸಿನ ಆಸ್ಪತ್ರೆಯಿಂದ ಮುಗುಳ್ನಗೆಯಿಂದಲೇ ಹೊರ ಬರುತ್ತಿದ್ದಾರೆ.

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೧೪ | ೧—೧೨—೧೯೬೭ | No. 14

ಬೆಕ್ಕಿಗೆ ಆಟ್ಟ ಇಲಿಗೆ?

ಅವೆರಿಕೆ ಯು ಹಾರಾಯ್ತುವುದೆಂದು ಭಾರತವು ನಂಬಿದ ಅಕಾರಣ ಧಾನ್ಯದ ಬಿಡುಗಡೆಗೊಂದು ನಿರ್ಬಂಧವನ್ನು ತಂದು ಚರಿತೆಗೆಳಸಿ. ಈ ನಿಲುವಿಂದಾಗಿ ದೇಶದಲ್ಲಿ ಆಹಾರ ಪೂರೈಕೆಗೂ ಧಕ್ಕೆ ಬಂದಿರಬೆಯ್ಯಬೇಕು. ಬಿಹಾರ ರಾಜ್ಯದಲ್ಲಿ ಮಳೆ—ನೆರೆಗಳ ಕಾರಣದಿಂದ ಅಕಾಲ ಪರಿಸ್ಥಿತಿ ಕಲೆದೋಂಡಿ; ಉಳಿಗಾಡೆ ಕಳೆದ ವರ್ಷಕ್ಕಿಂತ ಪರಿಸ್ಥಿತಿ ಪ್ರಧಾರಿಸಿ ಸಿ: ಇದರಿ ಆಹಾರದ ವಿಷಯದಲ್ಲಿ ನಾವು ಸಂಗಡವಿಷ್ಟಿ ಪರಿಸ್ಥಿತಿ ಇನ್ನೂ ಹಪ್ಪುರುವುದಿಲ್ಲ. ನಾವು ಬೆಳೆಯುವ ಆಹಾರವು ನಮಗೆ ಸಾಕಾಗುವಂತಹ ಸ್ಥಿತಿ ಇರುವ ವರೆಗೆ, ಆಹಾರಕ್ಕಾಗಿ ನಾವು ಪರರೆಯರ ಮುಖ ನೋಡುವ ವರಗೆ ನಮಗೆ ಈ ಶ್ರಿತಂಕವು ಸ್ವರ್ಗ ತಪ್ಪುವುದಿಲ್ಲ.

ಹಲವು ಸಮಯದಿಂದ ನದಿದು ಬರುತ್ತಿರುವ ಮಿಯಿತನಾಮ ಹೋರಾಟವೇ ಅಮೆರಿಕೆಯ ಈ ನೀತಿಗೆ ಮುಖ್ಯ ಕಾರಣವೆನ್ನಬೇಕು. ಏಮಿತನಾಮ ಸಮರವನ್ನು ತನ್ನ ವಾನ—ವ್ಯಾಣಾಳ ಪ್ರಶ್ನೆಯೆಂದು ಅಮೆರಿಕೆ ನಂಬಿ ಅದಕ್ಕಾಗಿ ಹೋರಾಡುತ್ತಿದೆ. ಪ್ರಪಂಚದ ಹಚ್ಚಿನ ದೇಶಗಳು ಅಲ್ಲಿ ಅಮೆರಿಕೆಯ ನೀತಿಯನ್ನು ಖಂಡಿಸುತ್ತಿವೆ ಅದಂ ಹಸ್ತಕ್ಷೇಪವನ್ನು ವಿರೋಧಿಸುತ್ತಿವೆ. ಸವಸ್ಕೆ ಶಾಂತ ವಾತಾವರಣದಲ್ಲಿಯೇ ಬಗಹರಿಯುಬೇಕೆಂದೂ ಅಮೆರಿಕೆಯು ತನ್ನ ಸೇನೆಯನ್ನು ಹಿಂದೆಗೆಯಬೇಕೆಂಂ ಭಾರತವೂ ಅಭಿಪ್ರಾಯ ಪಡುತ್ತಿದೆ. ಮಿಕ್ಕ ಇದಕ್ಕಾಗಿ ಒಂದಲ್ಲ ಹಲವು ರೀತಿಯ ಪ್ರಯತ್ನವನ್ನೂ ಅದು ಮಾಡಿದೆ; ಮಾಡುತ್ತಿದೆ. ಇದು ಅಮೆರಿಕೆಗೆ ಇಷ್ಟವಿಲ್ಲವೆಂದರೂ ಸಂಹಿತೀಲವ ತಳಕದಿಯ. ಮೇಲೆ ನಿಂತ ಭಾರತದ ವಿದೇಶ ನೀತಿಗೇನೋ ಅನುಗುಣವಾಗಿಯೇ ಇದೆ. ವೈದ್ಯ ತನ್ನ ಜ್ಞಾನದಿಂದ ರೋಗಿಗೆ ನೀಡಿದ ಔಷಧಿ ಕಹಿಯಾಗಿಯೇ ಇರುತ್ತದೆ. ಇದನ್ನು ತಿರಸ್ಕರಿಸುವ ರೋಗಿಯು ರೋಗ ಗುಣವಾಗಿ ಬದಿದ್ದು; ಜತೆಗೆ ಆತನಿಗೆ ವೈದ್ಯನ ನೇಲೂವೈರಭಾವನೆ ಮಾಡಲು ಕಾರಣವಾಗುವುದು. ಇಂಥಹುದೇ ಪರಿಸ್ಥಿತಿ ಅಮೆರಿಕೆ—ಭಾರತಗಳ ಸಂಬಂಧಗಳಿಗೂ ಬಂದಿದಿ. ಆಹಾರವಿಲ್ಲದೆ ಯಾರೂ ಸಾಯುವಂತಾಗಬಾರದು; ಕಂಠಗಾಗಿ ಆಹಾರ, ಭಾರತವು ಎನ್ನುವ ಕೃತಿಯನ್ನು ಬಯಸುತ್ತಿದೆಯೋ ಅಷ್ಟೆ ಅಮೆರಿಕೆ ನೀಡುವುದು—ಎಂದು ಮುಂದಾದ ಘೋಷಣೆ, ಹೇಳಿಕೆಗಳು ಆಕಾಶಕ್ಕನನ್ನೂ ಭೇದಿಸಿ ಕಿಣಿದಾಡುತ್ತಿವೆ. ಆದರೆ ಕಂದು? ಅಮೆರಿಕನ್ ನೀತಿಯನ್ನು ಅನುಸರಿಸಿದವರಿಗೆ ಯಾವ ಸಹಾಯವೂ ದೊರೆಯುವುದಂತಹ ಸಂದರ್ಭ ಭಾರತವು ಅಮೆರಿಕೆಯ ಪಿಗುತನಾದು ನೀತಿಯನ್ನು ಜೀರ್ಣಿಸಿಕೊಳ್ಳಬಿಲ್ಲ; ಕೆಂಪು ಚೀನಾದೊಡನೆ ನಿಸಂದವಿದ್ದರೂ ಅದಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರತಿನಿಧ್ಯ ನೀಡಲು ವಿರೋಧಿಸುವುದಿಲ್ಲ; ಅಮೆರಿಕ ಹೇಳಿದಂತೆ ದರ ಣಾಗತ ನೀತಿಯನ್ನು ಸರಿಸಿ ಕಾಶ್ಮೀರವನ್ನು ದಾನಪಿತ್ರರೂಪ ಪಾಕಿಸ್ತಾನದೊಡನೆ ಸ್ನೇಹ ಬೆಳೆಸಲು ಎಂದಾಗುವುದಿಲ್ಲ... ಹೀಗಿರುವಾಗ ಅಮೆರಿಕೆಯು ಸಹಾಯ ಪಡೆಯುವ ಅರ್ಹತೆ ಭಾರತಕ್ಕಿಲ್ಲ ವುದಿಲ್ಲ. ಆದರೆ, ಪ್ರಜಾಸ್ವಾತಂತ್ರ್ಯ ಉಳಿವಿಕೆಗಾಗಿ ಇಂದು ಕೋಟಿ ಜನರು ಸಿಸ್ಸೂ ಬಟ್ಟೆಕೂಳ್ಳಲೂ ಅಮೆರಿಕೆ ಸಿದ್ಧವಿಲ್ಲ; ಇದಕ್ಕಾಗಿಯೇ 'ಹಂ-ವು ಸಾಬಾರದ; ಕೋಲು ಮುರಿಯದಿರಬೇಕು' ಎಂಬ ನೀತಿಯನ್ನು ಅನುಸರಿಸುತ್ತಿದೆ. ಸಹಾಯ ಕೊಡುವ ಘೋಷಣೆ ಹೊರಡಿಸಿದ್ದೇ—ಇದಕ್ಕೆ ಏನಾದರೂ ಅಡ್ಡ ಬರುತ್ತದೆ. ಪಂಚವಾರ್ಷಿಕ ಯೋಜನೆಯು ನೆರವಿನ ಒಗ್ಗೆ ಈ ಇಂಥ ನೀತಿ. ಇತ್ತೀಚೆಗೆ ನೆವು ಕೂಟದ ರಾಷ್ಟ್ರಗಳು ತಡವಾಗಿಯಾದರೂ ಸಭೆ ಸೇರಿದುದು; ಆದರೆ, ನೆರಳ ಎಷ್ಟರ ನಷ್ಟಗೆ ನೀಡಬಹುದೆಂಬುದು ಇನ್ನೂ ಸಂಧಿಗ್ಧ. ಇಂಥಹ ಪರಿಸ್ಥಿತಿಯಲ್ಲಿ ನಾವಿ ಹೇಗೆ ಬದುಕಿಬಹುದು? ನಮ್ಮ ಯೋಜನೆ ಹೇಗೆ ಕಾರ್ಯಗತವಾದೀತು? ಆಹಾರ ಪೇಗೆ ದೊರೆತೀತು?

ಅಮೆರಿಕಾದಿಂದ ಅಹಂಂ ಪಡೆಯುವಂತೆಯೇ ಕೆನೆಡಾ, ಆಸ್ಟ್ರೇಲಿಯಾ, ರಶ್ಯಾಗಳಿಂದಲೂ ಭಾರತ ಪಡೆಯಬೇಕು ಎಂಬುದೀಗ ಅಮೆರಿಕೆಯ ನಿಲುವು. ಇದನ್ನೆಲ್ಲಾ ನೋಡುವಾಗ ಅಮೆರಿಕೆಯಿಂದು ಭಾರತದ ಸ್ನೇಹಿತರಾಷ್ಟ್ರವಾಗಿರದೆ ಸಲಹೆಗಾರ ರಾಷ್ಟ್ರವೆನಿಸಿದೆಯೇ ಎಂಬ ಸಂದೇಹ ಬರುತ್ತದೆ. ಭಾರತ—ಪಾಕ್ ವಿವಾದದ ಮಟ್ಟಿಗೆ ಇದು ಸಂಪೂರ್ಣ ಸರಿಯೆ ನಿಸಿದೆ. ಎನಿದ್ದರೂ ಅದು ಸಲಹೆ ನೀಡಬಹುದ; ನ್ಯಾಯವೆಂದು ತೋರಿದ್ದನ್ನೆ ನಾವು ಒಪ್ಪಲೂಬಹುದು. ಆದರೆ ಪರ ರಾಷ್ಟ್ರವೊಂದರಿಂದ ಸಲಹೆ ಪಡೆದೇ ಎಲ್ಲವನ್ನೂ ಕಾರ್ಯಗತಗೊಳಿಸಿಯೇ ಮುಂದುವರಿಯುವಂತಹ ದುರವಸ್ಥೆ ನಮ್ಮದಾಗಬೇಕೆ? ಇದಾಗ ಬಾರದೆಂದಿದ್ದರೆ, ಸ್ವಾವಲಂಬನೆಯೊಂದೇ ನಮ್ಮ ನೀತಿಯಾಗಬೇಕು. ನೆರವುಗಾರರ ಈ ಬೆಕ್ಕಿನ ಚಟದಿಂದ ನಾವು ಪಾರಾಗಲಿಯಲು ಸ್ವಾರಿಯಾದರೆ, ಸ್ವಾವಲಂಬನೆಯನ್ನು ನಾವು ಸಾಧಿಸಬೇಕು; ಕಠಿಣ ಲಂಬಿಗ ಕನಸಿಸುಲ್ಲೂ ಸುಖವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡು ಏಂದುವಂ ಮುಂದೆ ಬೇಕು.

ಕೆನರಾ ಬ್ಯಾಂಕಿಗೆ

ದಕ್ಷಿಣ ಕನ್ನಡ ಜಿಲ್ಲೆ ಬ್ಯಾಂಕುಗಳ ತವರೂರು. ಈ ಶತಮಾನದ ಆದಿಯಲ್ಲಿ ನಿ ಎ. ರ್ಬ್ಯಾಂಕ್ ಸೈ ನರ ವಾರದ ಕೀರ್ತನೆಯಿಂದ ಅರಂಭವಾದ ಪಣೆಗಳು ಬ್ಯಾಂಕು ಉದ್ಯಮವನ್ನು ಭದ್ರಕ್ಕೆ ಗಾಂ ಕೊಂಡೊಯ್ದವು. ಇದೀಗ ಅರವತ್ತು ವರ್ಷಗಳ ತಂಬಿ, ನಮ್ಮ ಮಹೋತ್ಕೃಷ್ಟವನ್ನು ಅಭಿವಿಸ್ತರಿಸುವ ಈ ಬ್ಯಾಂಕಿಗೆ ರೂ. ೧೧೦ ಕೋಟಿಗೆಗಳ ವ್ಯವಹಾರವನ್ನು ಒಂಡಾಯಿತ್ತ ದೇಶದ ಮೂಲೆಮೂಲೆಯಲ್ಲಿ ಒಳ್ಳಿ ಶಾಖೆಗಳನ್ನು ಹರಡಿಸಿ; ದೇಶದ ಬ್ಯಾಂಕಿಂಗ್ ಉದ್ಯಮಕ್ಕೆ ಒಂದು ಶಿಸ್ತನ್ನು ಹೊಂದಿದೆ — ಇಂಥ ನಮಗೆ ಹೆಮ್ಮೆಯ ವಿಷಯ.

ಒಂದು ಬ್ಯಾಂಕಿಂಗ್ ಸಂಸ್ಥೆ ಜನತೆಯಿಂದ ಗೂರ್ಣಗೀಕೃತವಾಗಲು ಕೇವಲ ಹಣವಿದ್ದರೆ ಸಾಲದು, ಜನಿಷ್ಟವನ್ನು ಕಳೆಯಿಸಿಕೊಂಡಿರುವ ಕೆನರಾ ಬ್ಯಾಂಕು ಬೆಳೆ ಯುವ ಕ್ಕಾಗಿ ನೇರ ವಾಡುವ, ನೆರವಾಡುವುದಕ್ಕಾಗಿ ಬೆಳೆಯುವ ಉದ್ದೇಶವುಳ್ಳ ಮಂಡಳಿಯಿಂದ ನಿಯಂತ್ರಿತವಾಗಿದೆ. ವಜ್ರಮಹೋತ್ಸವದ ಈ ಸಂದರ್ಭದಲ್ಲಿ ಬ್ಯಾಂಕಿನ ಸಮಗ್ರ ಅಭಿವೃದ್ಧಿಯಲ್ಲಿ ಆಭಿರಂದನೆಗಳನ್ನು ಸಲ್ಲಿಸುವುದರೊಡನೆ ಬ್ಯಾಂಕು ಇನ್ನೂ ಎತ್ತರಕ್ಕೆ ಬೆಳೆಯಲಿ, ಬನಗಳನ್ನು ಕಾಣುವಂತಾಗಲೆಂದು ಹಾರೈಸುತ್ತೇವೆ.

ಮಣಿಪಾಲದಲ್ಲಿ ದಾದಿಯರ ಸಮ್ಮೇಳನ

ಮಣಿಪಾಲ,ಆರೋಗ್ಯನುಂತ್ರಿ ಡಾ|| ಕೆ. ನಾಗಪ್ಪ ಆಳ್ವರವರು ಏಮಿನ ವಿಸೆಂಬರ್ ೧೯೦೦ರಂದು ಇಲ್ಲಿ ರಾಜ್ಯದ ಪಾದಿಯರ ಸಮ್ಮೇಳನವನ್ನು ಉದ್ಘಾಟಿಸಿದರು.

ಕರ್ನಾಟಕ ಬಾ ಮಿಡಿಕಲ್ ಕಾನೂನು ಪರಿಷತ್ತಿನ ಜನರಲ್ ಆಶ್ರಯದಲ್ಲಿ ಅವರಂಭವಾದ ಈ ಸಮ್ಮೇಳನದಲ್ಲಿ ನಿಮಿಯಲಿಯ ನಾಲ್ಕುದಿನಗಳ ಈ ಸಮ್ಮೇಳನದಲ್ಲಿ ಕರ್ನಾಟಕದ ೭೦೦ ಶುಶ್ರೂಷಕಿಯರು ಭಾಗವಹಿಸುವರೆಂದು ನಿರೀಕ್ಷಿಸಲಾಗಿದೆ.

ನರಸಣ್ಣನ ನರಸ



'ಬಶ್ರಾಬಕ್ಕಿತ್ವನ್ನು ಪ್ರತಿಬಂಧಿಸಲು ಹೊಕ್ಕ ಇಂಯೆದೆ ಮಾಡುವ ವಿಚಾರವಿದೆಯಂತೆ...'

'ಪಕ್ಕಿ ಜಪದ ಆರ್ಥವಿವರಣೆ ಯೇಗೆ ಕೊಡಬೇಕು ಎಂಬುದೇ ಇವನ ತಲೆಗೂ ಹೊಳೆಯುವುದಿಲ್ಲವಂತೆ...'

ಗೇಹ ರಾಜ್ಯದಲ್ಲಿ

ನಿತ್ಯ ಬರುವ ನೆಂಟ ನುಚ್ಚಿಗಿಂತ ಕಡೆ

"ಅಲ್ರಿ, ಇದು ಎಂಥದೂಂಕ?"

"ಯಾವುದು?"

'ನೋಡಿ....."

"ಅಲ್ಲ, ದ್ವಾದಶೀ ದಿನ, ದೇವಸ್ಥಾನಕ್ಕೆ ಹೋಗಿ ಬರ್ತೇನೆಂತ ಹೋಗಿ ಬಂದವ್ಳೇ ಸುರು ಮಾಡಿದೆಯಲ್ಲಾ ಮಹಾ ಭಾರತವನ್ನ..."

"ಅಂದ್ರೆ ನೀವನ್ನೋದೇನು? ನಾನು ಬಾಯಿ ಬಿಚ್ಚದೇಂದ್ರೆ ಆಟಂಬಾಂಬು ಸಿಡಿದಾಂಗೆ ಏರಿ ಹೋಗ್ತಾ ಇದೀರಾ...."

"ಆಟಂಬಾಂಬು ಈಗ ಭಾರಿ ಹಳೆಯ ದಾಯ್ತು. ಆದನ್ನು ಯಾರು ಕೇಳ್ತಾರೆ? ಈಗ ಹೈಡ್ರೋಜನ್ ಬಾಂಬು ನ್ಯೂಟ್ರನ್ ಬಾಂಬು...."

'ಹ್ಞೂಂ....ಯಾವ ಬಾಂಬು ಬಂದ್ರೂ ನಮ್ಮ ಬಿದಿರು ಮೆಳೇ ಬಾಂಬಿನ ಸ್ಥಾನ ಮಾನ ಕುಗ್ಗಿಲ್ಲ...'

'ಹ್ಞೆ ಹ್ಞೆ....ಅದು ಬಾಂಬು ತಲ್ಲೆ, ಬಂಬು....ಬಂಬೂ...'

'ಬಂಬೋ, ಕಂಬೋ....ಏನಿದ್ರೆ ಏನಂತೆ? ಅದ್ರೆ..'

'ಆಯ್ತಪ್ಪ ...ಏನೋ ಅನ್ನ ಬೇಗೂಂತ ಬಾಯಿತೆರೆದೆ...."

'ಅಲ್ಲ, ಮತ್ತೇನಿಲ್ಲಾ, ನಾಳೆ ಎಲ್ ಐಸಿ ಬಂದ್ ಅಂತೆ...."

'ಹಡ್ಡಿಂ...."

'ಯಾಕೆ?"

'ಬಂದ್ ಅಂತ ಹೇಳಿದವ್ರೇ ತಿಳಿಸ್ಲಿಲ್ಲ?"

'ಇಸ್ಲ ಉಂಟೆ? ಏನೋ ಮೆಶೀನು ಒರುತ್ತದಂತೆ—ಜಲ್ಲು, ಬಂದಿದೆಯಂತೆ ಆ ಭೀಮ ಅನೇಕ ಮನುಷ್ಯರ ಕೆಲಸ ಮಾಡ್ತಾನಂತೆ. ಆದ್ರಿಂದ ಈಗಿರುವ ನೌಕರನ್ನು ಕೆತ್ತು ಹಾಕ್ತಾರಂತೆ—ಇನ್ನು ಮುಂದೆ ನೌಕರಿ ಸಿಗೋದಿಲ್ಲಂತೆ. ಆದ್ರಿಂದ ಈ ಕಂಪ್ಯೂಟರ್‌ಗಳ ಬಳಕೆಗೆ ವಿರುದ್ಧವಾಗಿ ಬಂದ್ ಅಂತೆ—'

'ಹ್ಞೂಂ...."

"ಅಲ್ಲ, ನಾನು ಇಷ್ಟೆಲ್ಲ ಹೇಳಿದ್ರೂ ನೀವು ಹ್ಞೂಂ ಅಂತ ಭಾರಿ ಸಸಾರ ಮಾಡಿ ಬಿಟ್ರಲ್ಲಾ...."

'ಸಸಾರವೆಲ್ಲಿ ಬಂತೆ? ಅದೂ ಹಾಡೂ ಅಂತ ಹ್ಞೂಂ ಅಂದೆ...."

"ಹಾಗಾದ್ರೆ ಅವ್ರು ಹೇಳಿದ್ದು ನಿಜಾನೆ?"

"ಇದರಿಂದ ಯಾರನ್ನೂ ಕೆಲಸದಿಂದ ಕಿತ್ತು ಹಾಕುವುದಲ್ಲಂದ ಅಧಿಕಾರಿಗಳು ನಂಬಿಕೆ ಕೊಡ್ತಾನೆ ಬಂದಿದ್ದಾರೆ...."

"ಸರಿ. ಆದ್ರೆ ನಿನ್ಮು ಮಂತ್ರಿಗಳನ್ನ ಯಾರು ನಂಬ್ತಾರೆ..."

"ಯಾಕೆ?"

"ನೋಡಿ.... ನಿನ್ಮ ಮಂತ್ರಿಗಳ ನೀತಿ ಡೋಲಾಯಮಾನವಾದದ್ದು...."

"ಯಾಕೆ ಹಾಗಂತ?"

"ಮತ್ತೆ ಂಥದು? ಎಲ್ಲ ಹನ್ನೊಂದನೆ ತಾರೀನ ನಿರ್ಧಾರ. ಇಂದು ಯಾವುದನ್ನು ಇಲ್ಲ ಇಲ್ಲ ಅಂತ ನಾರುತ್ತಾರೆಯೋ. ಅವನ್ನೇ ನಾಳೆ ಮಾಡ್ತಾರೆ..."

'ಉದಾಹರಣೆ...."

'ಒಂದು ರೂಪಾಯಿಯ ಮೌಲ್ಯಭೀದನ...ಎರಡು ಪಂಜಾಬ ವಿಭಜನೆ...."

'ನಾಕು ನಾಕು....ನೀನೇನೂ ಈಗ ಚಿಲ್ರೆಯವರೆಲ್ಲ...ಭಾರಿ ಸೂಟ್ ಆಗಿದ್ದಿ ಕಣೆ...."

'ಅಲ್ರಿ, ಕಲ್ಕತ್ತದಲ್ಲಿಯೋ ಎಲ್ಲೊ ಹಲವು ನೂರು ನೌಕರರು ವಜಗೆ ಹೋದರಂತೆ...."

'ಅಲ್ವೆ, ನಿನಗೆ ಇದೆಲ್ಲ ಆಯದವ್ರಾ

"ನನಗೆ ಮತ್ಯಾರು ಹೇಳ್ತಾರೆ? ದೇವಸ್ಥಾನದ ಹೊರಗಡೆ ನಮ್ಮ ನಳಿನಿ ಸಿಕ್ಕಿದ್ಲು...?

"ಸರಿ ಹೋಯ್ತು ಬಿಡು...ಕೈತುಂಬ ಸಂಬಳ ಪಡೆದು ಆರಾಮವಾಗಿರೋದ್ರಿಂದ್ಲೇ ಇಂತಹ ಒಂದೊಂದು ಯೋಚನೆ ಹೊಳೆಯುತ್ತೆ....ಅದೇ ಅನ್ನುತ್ತಾರಲ್ಲ... ಕುದುರೆಗೆ ಮೊದಲೇ ಹುರುಳಿ; ಮಗುವಿಗೆ ಮೊದಲೇ ಕಾಲಾವಿ ಅಂತ...."

"ಅದೆಂಥದ್ದೋ...ಅವಳ ವಾದ ಬೇರೆ ....ದೇಶದಲ್ಲಿ ಈಗಾಗಲೇ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಿರುವಾಗ ಕಂಪ್ಯೂಟರ್‌ಗಳು ಬಂದರೆ, ಇರುವ ನೌಕರಲ್ಲಿಯೂ ಕೆಲವರಿಗೆ ಕತ್ತರಿ, ಹೊಸನೌಕರರಿಗೆ ಎಲ್ ಐಸಿ ಬಾಗಿಲು ಬಂದ್...."

'ಓಹೋ;.... ಎಲ್ಐಸಿ ಅಂದರೆ ಗುಳೇ ಹೊಡೆದವ್ರ ಗಂಜೀ ಕೇಂದ್ರವೇನು?'

"ಅಂದ್ರೆ?"

'ದೇಶದ ನಿರುದ್ಯೋಗ ಸಮಸ್ಯೆಯನ್ನು ದೂರಮಾಡಲು, ಅಧಿಕಾಧಿಕ ಜನರಿಗೆ ಉದ್ಯೋಗ ದೊರಕಿಸಲು ಸರಕಾರ ವಿಮಾ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಿದ್ದೇ, ಅಥವಾ ಖಾಲಿಸಿದವರಿಗೆ ದಕ್ಷ ಸೇವೆಯೊದಗಿಸಲು, ಹಳ್ಳಿ ಹಳ್ಳಿಗೂ ವಿಮಾ ಸಂದೇಶವನ್ನು ಮುಟ್ಟಿಸಲು...'

"ಅದು ಎಂಥದೇ ಇರಲಿ, ಹೊಸ ನೌಕರಿಗ ಪ್ರವೇಶವಿಲ್ಲ; ಇದಾವವರಿಗೆ ನೌಕರಿ ಹೋಗುವ ಸಂಭವ.... ಹೀಗಿರುವಾಗ..."

"ಸರಿನ್ನು. ನಿನ್ನ ಬನ್ನೆಸ್ಸೇ ಕೇಳು. ಅಷ್ಟೆನಾ ಸಕತ್ತು ಇರಲಿ. ಖಾಲಿಸಿಮೇಲೆ ಬೋನು ಬೇಕೂಂತ ಎಲ್ಲೆಸಿಗೆ ಬರೆದ್ರೆ, ಅರಸೇ ಮಂಸಿಕರಂದು ಬಿಂಬತ್ತಿಡೀಡಿಗ ಇಷ್ಟು ಹಣ ಕಳ್ಸಿ ಕೊಡೀಂತ. ಮತ್ತೆ ವರ್ಷಾಂತಿಕದ ಕರ್ಚಿಗೆ ಸಾಲದೂರುಮುತ್ತೆ..."

'ಹ್ಞೂಂ... ಎಲ್ಲೊ ಒಂದೆರಡು ಕೇಸು ಆಂಥದ್ದಾರಬಹುದು.. ಎಷ್ಟಾದ್ರೂ ಮನುಷ್ಯನಷ್ಟಿಮೆ?'

"ಪ್ರೀಮಿಯಂ ಕಟ್ಟದ್ದಕ್ಕೆ ರಶೀದಿ ಬರಬೇಕಾದ್ರೆ ಲೇವ್ಸ್ ನೋಟೀಸು ಬಂದು ಬಿಡುತ್ತೆ.....ಹೋಗಿ ಕೇಳಿದ್ರೆ; ನೀವು ಪ್ರೀಮಿಯಂ ಕಟ್ಟಿ ಆಗಬಹುದ್ರಿ ಈ ನೋಟೀಸು ರೆಜಿಸ್ಟರ್ ಆಂಬಂತೇ ಇದೀಂತಾರೆ....ಪ್ರೀಮಿಯಂಗೇನು ಗ್ಯಾರಂಟಿ ನಮ್ಮ ಪ್ರೀಮಿಯಂ ಜವು, ಜಮ ಮಾಡಿದೀರಂತ..."

"ಅದಕ್ಕೆಲ್ಲಾ ನೀವು ಮಾಡೋದೂ ಎಲ್ಲೋ ಒಂದೆಂಡು ಜನ ಅಂಥವ್ರು ಇರಬಹುದೂಂತ ಎಲ್ಲರನ್ನೂ ಹಾಗೇ ತಿಳ್ಕೊಳ್ಳೊದೆ?'

'ಅದು ಸರೀನ್ನು ನನಗೆ ಯೋಜನೆ ಮತ್ತೇನೂ ಇಲ್ಲ. ಎಲ್ಐಸಿ ಖಾಲಿಸಿದಾರಂ ಸೇವೆ ಮಾಡೋಕೆ ಇರುವಷ್ಟು.... ಸಮಯವನ್ನು ಸಾಧಿಸೋ ಬೇಕು.... ಅದಕ್ಕಾಗಿ ಆಂಥ್ರಗಳನ್ನು ಕೊಂಡುಕೊಂಡು ಸಮರ್ಪಕ ಸೇವೆ ಸಲ್ಲಿಸುಗ್ರಲ್ಲಿ ತಪ್ಪೇನು?'

'ನಾನೂ ಹಾಗೇ ಅಂದೆ... ಮತ್ತೆ ನೋಡಿ ನಾನು ಕೇಳಿದೆ.... ನೀವೆಲ್ಲ ಕಂಪ್ಯೂಟರ್ ಬೇಡ ಅಂತ ಬಂದ್ ಮಾಡ್ತೀರಿ. ಆಕ್ಕೆ ಮಿಲ್ಲು ಬೇಡಾಂತ ಭತ್ತ ಕುಟ್ಟುವವ್ರು ಬಂದ್ ಮಾಡಿದ್ರೆ, ಯಂತ್ರಿಕ ನೇಗಿಲು ಬೇಡಾಂತ ಉಳುವವ್ರು ಬಂದ್ ಮಾಡಿದೆ, ಏನು ಮಾಡೋದಂತೆ...."

'ಛಲೆ ಛಲೆ...'

'ಇನ್ನೂ ಕೇಳಿದೆ...ಕಾರು ಬರಬಾರದೂಂತ ಜಟ್ಕಾ ಸಾಬಿಗಳು, ಬಸ್ಸುಗಳು ಬೇಡಾಂತ ಎತ್ತಿನ ಗಾಡಿಯವ್ರು, ಶಾಲೆಗಳು ಬೇಡಾಂತ ವಿದ್ಯಾರ್ಥಿಗಳು—ದೋಲಿಹೊರುವವ್ರು ಮೂಟೆ ಹೊರುವವ್ರು.... ಹೀಗೆ ಎಲ್ಲಾ ಆದ್ರೆ...'

'ಹ್ಞೂಂ.....ಇನ್ನು ನೋಡು...ಕಂಪ್ಯೂಟರ್ಸ್ ಬೇಕೂಂತ ಖಾಲಿಸಿದವರೇ ಉಸವಾಸ ಸತ್ಯಾಗ್ರಹ ಆರಂಭ ಮಾಡದಿದ್ರೆ ಸಾಕು...."

'ಯಾಕೆ ಕೂಡದು?'

'ಕೂಡದು ಯಾಕೆ? ಅಲ್ರೆ ದೇಶದಲ್ಲಿ ಈ ಬಂದು—ಸತ್ಯಾಗ್ರಹಗಳೆಲ್ಲ ಬೆಲೆಯಿಲ್ಲದಂತಹವಾಗಿ ಪರಿಣಮಿಸಿವೆ...."

'ಯಾಕೆ?"

'ನಿತ್ಯ ಬರ್ತಿಹ ನೆಂಟ ನಚ್ಚಿಗಿಂತಲೂ ಕಡೆ...."

"ಅದೂ ಹೌದೂನ್ನಿ. ಈಗೀಗ ಇದು ಪ್ರತಿನಿತ್ಯದ ನೂತು.... ಆದ್ರೆ ಇದು ಹೀಗೇ ಎಂದುನರಿದ್ರು...."

'ಅದೇ ನೋಡು.... ಅರಂಭದಲ್ಲಿ ಅಹಿಂಸೆ.. ಶಾಂತಿ.... ಮುಂದೆ ಆಶಾಂತಿ-ಹಿಂಸೆ..'

'ಹ್ಞೂಂ.... ಬೆಂಕಿ ಉರಿಯುವ ತನಕ ನಮ್ಮ ಕೈಯುಲ್ಲಿ; ಹುಚ್ಚಿದ ಮೇಲೆ ನಾವೇ ಆದಂ ಕೈಯಲ್ಲಿಲ್ಲವೆ!'

'ಹತ್ತಾ ವಂಡುವುದು ನೀನು; ಮತ್ತು

(ಬಂಭತ್ತನೇ ಪುಟ ನೋಡಿರಿ)

ಬೆಳ್ತಂಗಡಿ ಲೇಂಡ್ ಟ್ರಿಬ್ಯುನಲ್‌ನಲ್ಲಿ

L. R. O. P. 24/66.

ಕೆ. ಪದ್ಮಯ್ಯ ಹೆಗ್ಡೆ —ಅರ್ಜಿದಾರ

ಅನಂತಮತಿ —ಎದ್ರಿ

ಬೆಳ್ತಂಗಡಿ ತಾಲೂಕು ನಾರಾಕಿ ಗ್ರಾಮದ ಕಂಬದಬೆಟ್ಟು ಎಂಬಲ್ಲಿರುವ ಶ್ರೀ ನೇಮಿರಾಜ ಆತಿಶಯರಿಂದ ಸೊನೆ ಅನಂತಮತಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲಿನ ಅರ್ಜಿಯು ಅರ್ಜಿದಾರನು ನಿಮ್ಮಿಂದ ಬರಬೇಕಾದ 66—667 ನೇ ಇ. ಜಿ. ಯ ಪರ್ಚೇಸ್ ಇತ್ಯಾದಿ ವಸೂಲಿ ಬಗ್ಗೆ ಮೇಲಿನ ಅರ್ಜಿಯೂಡಿದ್ದಾಗಿರುತ್ತದೆ. ಸದ್ರಿ ಅರ್ಜಿನಿಮ್ಮ ಹಾಜರಾತಿ ಬಗ್ಗೆ ತಾ. 13—12—66 ಕ್ಕೆ ಇಟ್ಟಿರುತ್ತದೆ. ಅದ್ದರಿಂದ ಸದ್ರಿ ವ್ಯಾಜ್ಯದ ವಿಷ್ಣು ನೀವು ಸ್ವತಹ ಯಾ ವಕೀಲ ಮುಖಾಂತರ ಹಾಜರಾಗಿ ಉಚಿತರಿಸತಕ್ಕದ್ದು. ತಪ್ಪಿದಲ್ಲಿ ಮೇಲಿನ ಅರ್ಜಿಯಲ್ಲಿ ನಿಮ್ಮನ್ನು ವಿರುದ್ಧವಾಗಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದೀಕ್ಷ.

B. K. Suryanarayana Rao

Advocate for Applicant

ಬೆಳ್ತಂಗಡಿ, ತಾ. 12—11—66.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಳ,

ಸುಬ್ರಹ್ಮಣ್ಯ, ದ. ಕ.

ಚಂಪಾ ಷಷ್ಠಿ ಮಹಾ ರಥೋತ್ಸವ

ದಕ್ಷಿಣ ಕನ್ನಡ ಜಲ್ಲಾ ನುಳ್ಳ ತಾಲೂಕು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಬಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವಶಿಸ್ಯ ಸಂಪ್ರದಾಯ ಪ್ರಕಾರ ಇದೇ ಪಂಚಾಂಗ ಸಂವತ್ಸರದ ಕಾರ್ತಿಕ ಬಹುಳ ೧೩ನೆಯ ಶುಕ್ರವಾರ ತಾ. 9—12—66ರಿಂದ ಉತ್ಸವವು ಸಾರಂಭಗೊಂಡಿ ತಾ. 11—12—66ರಲ್ಲು ಲಕ್ಷದೀಪೋತ್ಸವ,

ತಾ. 16—12—66ರಲ್ಲು ಹೂವಿನ ತೇರು ಉತ್ಸವ,

ತಾ. 17—12—66ರಲ್ಲು ಪಂಚಮಿ ರಥೋತ್ಸವ

ತಾ. 18-12-66ರಲ್ಲು ಚಂಪಾ ಷಷ್ಠಿ ಮಹಾ ರಥೋತ್ಸವ,

ತಾ. 19—12—66ರಲ್ಲು ಅವಭೃತೋತ್ಸವವೇ ನೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ವಿ. ಸೂ.— ಕೆರುಷಷ್ಠಿ ಉತ್ಸವವು ತಾ. 16-1-67ಕ್ಕೆ ಜರಗುವುದು.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ! ಕೆ.ಎಲ್.ಐತಾಳ್, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಕೆಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ಪರಿಹಾರೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ವಿಶ್ವಭಾರತ ಪುಸ್ತಕ ಭಂಡಾರ, ಉಡುಪಿ

ವಿವೇಚನೆ

ಪ್ರಜಾರಾಜ್ಯದಲ್ಲಿ ಜಾತಿ ಭೂತ

ಬರೆದವರು

ಶ್ರೀ ಸ ನಾರಾಯಣ

ಭಾರತ ಬೃಹತ್ತಾ ರಾಷ್ಟ್ರ. ಜನನಿಬಿಡ ಬಡ ರಾಷ್ಟ್ರ. ಪ್ರಜಾಪ್ರಭುತ್ವ ಯಶಸ್ವಿಯೊದ ವಿಶ್ವದ ಏಕೈಕ ರಾಷ್ಟ್ರ. ಭಾರತಕ್ಕೆ ತನ್ನದೇ ಆದ ಪರಂಪರೆ ಇದೆ. ಸಂಸ್ಕೃತಿ, ಧರ್ಮ, ನಾಗರೀಕತೆಗಳ ದೃಷ್ಟಿಯಿಂದ. ಐತಿಹಾಸಿಕ ಘಟನೆಗಳಂತೂ 'ಭಾರತ ಚರಿತೆ'ಯಲ್ಲಿ ಹೇಳವಾಗಿವೆ. ವಿಶ್ವದ ಇತಿಹಾಸದಲ್ಲಿ ಭಾರತದ ಅಧ್ಯಾಯಕ್ಕೆ ಅಗ್ರಸ್ಥಾನ.

ಭಾರತ ಸಂಪದ್ಭರಿತ ರಾಷ್ಟ್ರ. ದೈವದತ್ತವಾದ ಹಲವಾರು ಸೌಲಭ್ಯಗಳು ಇವೆ ಶಕ್ತಿಯುತ ರಾಷ್ಟ್ರ. ಶಾಂತಿಪರ ರಾಷ್ಟ್ರ. ನಮಗೆ ನಾನಾ ಬಗೆಯ ಅನುಕೂಲಗಳಿವೆ. ಅಂತಃಕಲಹಗಳು, ಅನನುಕೂಲತೆಗಳೂ ಹೇರಳವಾಗಿವೆ.

ಪರಕೀಯರ ಧಾಳಿಗೆ, ಸುಲಿಗೆಗೆ ಭಾರತದಂತೆ ಒಳಗಾದ ರಾಷ್ಟ್ರ ಬೇರೊಂದು ಇಲ್ಲವೆಂದು. ಧಾಳಿಗಳಿಂದ, ಸುಲಿಗೆಗಳಿಂದ ಸಂಪತ್ತು ಸೂರೆಯಾಯಿತು. ಸಂಸ್ಕೃತಿ ನಲಸಮಯವಾಯಿತು, ಕಲೆಯು ಕೊಲೆಯಾಯಿತು. ಬ್ರಿಟೀಷರ ಎಲ್ಲಿಕೆ ಭಾರತದಲ್ಲಿ ಆರಂಭವಾದ ಕರುವಾಯು ಮತ್ತೊಂದು ಅಧ್ಯಾಯ ಆರಂಭವಾಯಿತ. ಬ್ರಿಟಿಷ್ ಆಧಿಕಾರಿಗಳಿಗೆ ರಾಜ ಪ್ರತಿನಿಧಿಗಳಿಗೆ ಒಡೆದು ಆಳುವ (ಭೇದೋಪಾಯ) ನೀತಿ ಚೆನ್ನಾಗಿ ಕರಗತವಾಗಿತ್ತು. ಭಾರತೀಯರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡರು. ರಾಷ್ಟ್ರೀಯ ಸ್ವಾತಂತ್ರ್ಯದಿಂದಿಗೆ ವಿಚಾರ ಸ್ವಾತಂತ್ರ್ಯ, ಸ್ವೈಕ್ಯ ಸ್ವಾತಂತ್ರ್ಯಗಳೂ ಮರುಕಳಿಸಿದವು. ಸುಮಾರು ವರ್ಷಗಳ ಬ್ರಿಟಿಷರು ದಬ್ಬಾಳಿಕೆ ಎನ್ನುವ ಅನಿವಾರ್ಯವಾಯಿತು. ನಮ್ಮ ನಾಡಿನಲ್ಲಿ ನೀರಿನ ಪೈದಿಗಳಂತೆ ಬಾಳಬೇಕಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿಯೂ ಇದ್ದಂತಹ ಹಲವು ಸಮಸ್ಯೆಗಳು ಸ್ವಾತಂತ್ರ್ಯೋತ್ತರದಲ್ಲಿಯೂ ಉಳಿದವು. ರಾಷ್ಟ್ರೀಯತ್ವಕ್ಕಾಗಿ, ಸ್ವಾತಂತ್ರ್ಯಕ್ಕಾಗಿ, ಜನತೆಯು ಉದ್ದೇಶಕ್ಕಾಗಿ ಕಾಯಾ ವಾಚಾ ಮನಸಾ ದುಡಿದ ವ್ಯಕ್ತಿಗಳು ಹೇಳಲು ಹೆಸರಿಲ್ಲದಂತೆ ಮರೆಯಾದರು. ಭಾರತ ಸ್ವಾತಂತ್ರ್ಯ ಪಡೆದ ನಂತರ ಸ್ವಾರ್ಥಿಗಳು ಪುಢಾರಿಗಳೂ ಡಾಂಭಿಕರೂ ಗದ್ದುಗೆಗಳನ್ನು ಏರಿದರು.

ಬಿಳಿಯರ ನಂತರ ಬಿಳಿಯ ಟೋಪಿಯವರ ಅಧಿಕಾರ ಆರಂಭವಾಯಿತು. ಕೆಲವು ಪ್ರಮುಖರ ಪಟ್ಟಗಳು ಬಿಳಿಯ ಗಾರರ ಪಟ್ಟದಂತೆ ಭದ್ರವಾದವು. ಕಾಂಗ್ರೆಸ್ ಸಂಸ್ಥೆಗೆ, ಖಾದಿ ಉಡುಪಿಗೆ (ನಮ್ಮವರಿಗೆ) ಇದ್ದ ಬೆಲೆ, ಗೌರವ, ಪಾವಿತ್ರತೆಗಳು ಮಸಿ ಬಳಿದುಕೊಂಡವು.

ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಮುಂಚೆ ಭಾರತ ಸ್ವಾತಂತ್ರ್ಯ ಚಿಂತನೆಯೇ ಮುಖ್ಯ ಸಮಸ್ಯೆಯಾಗಿತ್ತು. ಪ್ರಬಲ ಸಂಗತಿಯಾಗಿತ್ತು. ಸ್ವಾತಂತ್ರ್ಯ ದೊರೆತ ನಂತರ ಒಂದು ಸಮಸ್ಯೆಗೆ ಬದಲು ಸಮಸ್ಯೆಗಳು ಹೆಚ್ಚಾಗಿ ಸೇರಿದವು. ಸಂಖ್ಯೆ ಹೆಚ್ಚಾಯಿತು. ಪರಿಹಾರ ಮಾರ್ಗ ದೊರೆಯದಾಯಿತು. ಆ ಸಮಸ್ಯೆಗಳಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ, ಆಭಿವೃದ್ಧಿ ಸಮಸ್ಯೆಗಳಿಗಿಂತಲೂ ಜಾತಿಯ ಸಮಸ್ಯೆ ಭೂತದಂತೆ ನಿಂತಿತು. ಭೂತದ ಆಕಾರವೂ ದೊಡ್ಡದು. ಅದರ ಕೃತ್ಯವೂ ಅಷ್ಟೇ ಹಿಂಸಾತ್ಮಕ ಭೂತ ಯಾವ ಸಂಕೋಚವೂ ಇಲ್ಲದ ದೊರೆತನವನ್ನು ನೆಲೆ ದುಕೊಳ್ಳುತ್ತದೆ.

ಭಾರತ ಪ್ರಜಾತಂತ್ರಾತ್ಮಕ ರಾಜ್ಯವಾಯಿತು. ಗಣರಾಜ್ಯವೆಂದು ಘೋಷಿಸಿತು. ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ಅಧಿಕಾರಗಳು, ವ್ಯವಹಾರಗಳು, ಆಡಳಿತಗಳು ಜಂಗಿಗೆ ಬಂದವು. ಸುಧಾರಣೆಗಳೂ ಆದವು, ಸಮಸ್ಯೆಗಳು ಬಗೆಹರಿಯಲಿಲ್ಲ. ಸಮಸ್ಯೆಗಳನ್ನು ಬಗೆಹರಿಸುವ ಸಮಸ್ಯೆಗಳೇ ಹೆಚ್ಚುತ್ತಿದವು.

ಸಂವಿಧಾನಾತ್ಮಕವಾಗಿ ಸಂಪೂರ್ಣ ಪ್ರಭುತ್ವವನ್ನು ಲೋಕತಂತ್ರಾತ್ಮಕ ಗಣರಾಜ್ಯವಾದ ಭಾರತದಲ್ಲಿ ಅಂತಸ್ಥರಿಗೂ ಅವಕಾಶ ದೊರೆಯಿತು. ನಿರಪರಾಧಿಗಳಾದ ಜನತೆಯ ಬಡತನ, ಅಜ್ಞಾನ, ನಂಬಿಕೆಗಳನ್ನು ರಾಜಕೀಯ ಧುರೀಣರು, ಅಧಿಕಾರಿಗಳು ದುರುಪಯೋಗ ಪಡಿಸಿಕೊಂಡರು. ಪ್ರಜಾಸತ್ತಾಭುತ್ವದಲ್ಲಿ ಪ್ರಜೆಯೇ ರಾಜ. ಎಲ್ಲ ಪ್ರಜೆಗಳೂ ರಾಜರಂಗ ಸಿಂಹಾಸನವನ್ನೇರಲು ಸಾಧ್ಯವೇ? ಪ್ರಜಾತ್ರತಿನಿಧಿಗಳು, ಪ್ರಜೆಗಳ ಉದ್ಧಾರಕ್ಕಾಗಿ ಸತತ ದೇಶಸೇವಾನಿರತರಾದ ರಾಜಕಾರಣಪಟುಗಳೆ, ದೇಶಭಕ್ತರು ನಾವಾಗ್ಯಾಜ್ಯದ ಸಾರಥಿಕನನ್ನು ಕೈಗೊಂಡರು

ಭಾರತದಲ್ಲಿ ಜನಸಂಖ್ಯೆಯೂ ಹೆಚ್ಚು, ಸಮಸ್ಯೆಗಳ ಸಂಖ್ಯೆಯೂ ಹೆಚ್ಚು. ಜಾತಿ, ಭಾಷೆಗಳ ಸಂಖ್ಯೆಯಂತೂ ಎಣಿಕೆಗೆ ನಿಲುಕದಷ್ಟು ಇಂದಿನ ರಾಜಕೀಯ, ಪಾಸಗಿ ವ್ಯವಹಾರಗಳಲ್ಲಿ ವಿಶೇಷವಾಗಿ ಜಾತೀಯತೆಯ ವಿಷ ಕುಂಬಿದೆ. ವಿದ್ಯೆ, ವಿಜ್ಞಾನ ಬೆಳೆದಂತೆಲ್ಲ ವಿವೇಕ ಮೂಡಿ ಬರಲಿಲ್ಲ. ಸಂಕುಚಿತ ಮನೋಧೋರಣೆ ವಿಸ್ತಾರವಾಗಿ ಬೆಳೆಯಿತು ಪಾಪಾರು ಕಳ್ಳರಿಯಂತೆ, ಜಾತಿಯ ಪ್ರಜಾಪ್ರಭುತ್ವದ ಯಾವ ವ್ಯವಹಾರವೂ ಇಲ್ಲ. ಉದ್ಯೋಗ ದೊ

(ಎಂಟನೇ ಪುಟ ನೋಡಿರಿ)



ವಿಕ್ಸ್ ವೆಪೋರಬ್ ಕೂಡಲೆ ಆರಾಮನನ್ನುಂಟುಮಾಡುತ್ತದೆ... ನಿಮ್ಮ ಮಗು ನಿರಾತಂಕವಾಗಿ ಉಸಿರಾಡಿಸುವುದು... ಅದು ಇಡೀ ರಾತ್ರಿ ಗಾಢವಾಗಿ ಮಲಗುವದು

ನಿಮ್ಮ ಮಗು ತನ್ನ ಸುಖ-ಸೌಕರ್ಯಗಳಿಗೆ ನಿಮ್ಮನ್ನು ಅವಲಂಬಿಸಿದೆ ಅದರಿಂದಲೇ ನಿಮ್ಮ ಮಗುವಿಗೆ ನೆಗಡಿಯ ಬಾಧೆಯ ಹೊದಲ ಲಕ್ಷಣಗಳಾದ ಕಣ್ಣು-ಮೂಗುಗಳಿಂದ ನೀರು ಸುರಿಯುವಿಕೆ, ಗಂಟಲು ಕಟ್ಟುವುದು, ಉಸಿರಾಟದಲ್ಲಿ ಪೀಕರೆ ಮುಂತಾದವು ಕಂಡುಬಂದಲ್ಲಿ, ವಿಕ್ಸ್ ವೆಪೋರಬ್‌ನ್ನು ಉಪಯೋಗಿಸಿ.

ನಿಮ್ಮ ಮಗುವಿನ ನೆಗಡಿಗೆ ವಿಕ್ಸ್ ವೆಪೋರಬ್ ಅತ್ಯುತ್ತಮ ಉಪಾಯವಾಗಿದೆ ಏಕೆಂದರೆ ಅದು ನೆಗಡಿಯ ಪ್ರಬಲರೋಗದ ಅತಿಮುಖ್ಯವಾದ ಭಾಗಗಳಲ್ಲಿ ಅಂದರೆ ಮೂಗು ಗಂಟಲು ಎದೆಗಳಲ್ಲಿ—ಮೂರುಮುಖಾಂತರ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಮಗುವಿನ ಹೃದಯದ ಬಡಿತಕ್ಕೆ ಒಳ್ಳೆಯದಾದ ಚರ್ಮಕ್ಕೆ ಒಳ್ಳೆ ಆರೋಗ್ಯಾವಹವಾಗಿದೆ.

ನಿಮ್ಮ ಮಗುವಿಗೆ ಜಗಡಿ ಆದಾಗ ನೀವು ಮಾಡಬೇಕಾದುದು ಇಷ್ಟು ಮಾತ್ರ ವಿಕ್ಸ್ ವೆಪೋರಬ್‌ನ್ನು ಎಳಿಕೆ ನಿಮ್ಮ ಮಗುವನ್ನು ಆರಾಮವಾಗಿ ಹಾಸಿಗೆಯಲ್ಲಿ ಹಾಯಿಸಿ ಮಲಗಿಸಿರಿ ನಿಮ್ಮ ಮಗು ಇಡೀ ರಾತ್ರಿ ಗಾಢವಾಗಿ ಮಲಗಿರುವಾಗ ವಿಕ್ಸ್ ವೆಪೋರಬ್ ತನ್ನ ಕ್ರಿಯೆಯನ್ನು ಮಾಡುತ್ತಿದೆ ಬೆಳಗಾಗುವಷ್ಟರಲ್ಲಿ ನೆಗಡಿಯ ಬಾಧೆ ಇಲ್ಲದಂತಾಗಿ ನಿಮ್ಮ ಆಳ್ಳೆಯ ಮುದ್ದು ಮಗು ಲವಲವಿಕೆಯಾಗಿ, ಸಂತೋಷದಲ್ಲಿ

ವಿಕ್ಸ್ ವೆಪೋರಬ್

3 ಸೈಜ್‌ಗಳಲ್ಲಿ

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S No. 52/56.

B. ಶೇಷಪ್ಪ ....ವಾದಿ.

Vs

C K. ನಂಬಿಯಾರ್ (Dead) ಸಹಾಪ್ರತಿವಾದಿಗಳು.

1. C. K. ಸರಸ್ವತಿ. C K. ನಂದಿಯಾರರ ಮಗಳು. ಮಂಗಳೂರು ಕಸಬ್ಬಾ ಗ್ರಾಂ, PO. ಮಂಗಳೂರು, S. K. ಇವರಿಗೆ —

ವಾದಿಯು ನಿಮ್ಮ ಮೇಲೆ ನೋಟಿನ ದಾವೆ ಹೂಡಿರುತ್ತಿದ್ದು, ಸದ್ರಿ ವಾದಿಯು ನಿಮ್ಮ ಪ್ರಾಪರ್ತಿಯ ಬಗ್ಗೆ ತಾ. 6—12—1956 ಕ್ಕೆ ಇಟ್ಟಿರುವುದರಿಂದ ಸದ್ರಿ ದಿವಸ ನೀವು ಸ್ವತಹ ವಕೀಲರ ಮುಖಾಂತರ ಹಾಜರಾಗಿ ಉಡಪಡಿಕೆತಕ್ಕದ್ದು. ಕಪ್ಪದಲ್ಲಿ ನಿಮ್ಮನ್ನು ಶಿಕ್ಷಾ ನೂಡಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order

(Sd) K. Rama Bhat

Advocate for Plaintiff

ಪುತ್ತೂರು, 6—11—1956.

ತ್ರಿವಿಕ್ರಮಾವತಾರದತ್ತ

ಪ್ರಗತಿಪರ ರೈತರ ಜಿಲ್ಲೆ - ಮಂಡ್ಯ

ಅಮೆರಿಕನ್ ಗಗನಯಾತ್ರಿ ರಿಚರ್ಡ್ ಗೋರ್ಡನ್ ಮತ್ತು ಚಾರ್ಲ್ಸ್ ಕೊನ್ರಾಡರು ಹಸನ್ಮುಖಿಗಳಾಗಿದ್ದಾರೆ.

ಇದೇ ನವೆಂಬರ್ ೧೫ರಿಂದ ಒಂದು ವಾರದ ವರೆಗೆ ಮಂಡ್ಯ ಜಿಲ್ಲೆಯಲ್ಲಿ ಅಧಿಕ ಆಹಾರ ಧಾನ್ಯಗಳ ಬೆಳೆಗೆ ಸಂಬಂಧಪಟ್ಟಂತೆ ತೀವ್ರ ರೀತಿಯ ಪ್ರಚಾರ ಚಳವಳಿಯೊಂದು ನಡೆಯಿತು. ಈಚೆಗೆ ಇಂತಹ ಚಳವಳಿಯೊಂದು ಯಶಸ್ವಿಯಾಗಿ ತುಂಗಭದ್ರಾ ಪ್ರದೇಶದಲ್ಲಿ ನಡೆದಿತ್ತೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ. ಅಧಿಕ ಪ್ರಮಾಣದಲ್ಲಿ ಬೆಳೆಯುವ ಹೈಬ್ರಿಡ್ ಜೋಳ, ತೈಚುಂಗ್ ಭತ್ತಗಳಂತೆ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆದು ಆ ಮೂಲಕ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವಂತೆ ಮಾಡುವುದು ಈ ಚಳವಳಿಯ ಉದ್ದೇಶ.

ಮೈಸೂರು ರಾಜ್ಯದ ಒಟ್ಟು ಹತ್ತೊಂಭತ್ತು ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಗೆ ವ್ಯವಸಾಯಾಭಿವೃದ್ಧಿಯ ದೃಷ್ಟಿಯಿಂದ ಒಂದು ಪ್ರಮುಖವಾದ ಸ್ಥಾನವಿದೆ. ಜಿಲ್ಲೆಯಲ್ಲಿ ಲಭ್ಯವಿರುವ ಉತ್ತಮ ನೀರಾವರಿ ವ್ಯವಸಾಯಾಭಿವೃದ್ಧಿಗೆ ಮುಖ್ಯ ಕಾರಣ. ಜೊತೆಗೆ ಒಳ್ಳೆಯ ಫಲವತ್ತಾದ ಭೂಮಿ ಮತ್ತು ರೈತರ ಶ್ರದ್ಧೆ—ಇವುಗಳ ಫಲವಾಗಿ ಕೃಷಿ ಸಂಪತ್ತಿನ ದೃಷ್ಟಿಯಿಂದ ಈ ಜಿಲ್ಲೆ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿದೆ.

ಒಮ್ಮೆ ಕುಗ್ರಾಮವಾಗಿದ್ದ ಮಂಡ್ಯ ಇಂದು ಒಂದು ಪಟ್ಟಣವಾಗಿ ಬೆಳೆಯುತ್ತಿದೆ. ಮಂಡ್ಯ ಈ ಭಾಗದ ರೈತರ ಸಂಪತ್ತನ್ನೂ ಅವರ ಉತ್ತಮ ಜೀವನವನ್ನೂ ಪ್ರತಿಬಿಂಬಿಸುವ ಸ್ಥಳವೆನ್ನಬಹುದು. ಇಲ್ಲಿರುವ ರೈತರ ವಿವಿಧೋದ್ದೇಶ ಸಹಕಾರಿ ಸಂಘ ಇಡೀ ದೇಶಕ್ಕೆ ಮಾದರಿಯಾಗಿದ್ದು, ಈ ಜಿಲ್ಲೆಯ ಜನರ ಸಂಘ ಶಕ್ತಿಯನ್ನು ಬಹಳ ಜೋರಾಗಿ ಪ್ರತಿಬಿಂಬಿಸುತ್ತದೆ.

ನದಿ ನೀರಿನ ಆಸರೆ

ಇತಿಹಾಸದ ಹಾಳೆಗಳನ್ನು ತಿರುವಿ ಹಾಕಿದಾಗ ನನಗೆ ಒಂದು ಅಂಶ ಬಹು ಸ್ಪಷ್ಟವಾಗಿ ಎದ್ದು ಕಾಣುತ್ತದೆ ಜಗತ್ತಿನ ಯಾವ ಒಂದು ವಿಶಿಷ್ಟ ನಾಗರಿಕತೆಯೇ ಆಗಲಿ ಅದು ನದಿ ಜಲಾನಯನ ಪ್ರದೇಶಗಳಲ್ಲಿ ಬೆಳೆದು ರಾರಾಜಿಸಿರುವುದು. ಪ್ರಪಂಚ ದೇಶದಲ್ಲಿಯೂ ಇಷ್ಟೆ ಒಂದೊಂದು ಪ್ರಮುಖ ನದಿಯ ಜಲಾನಯನ ಪ್ರದೇಶದಲ್ಲಿಯೂ, ಒಂದೊಂದು ವಿಶಿಷ್ಟ ಸಂಸ್ಕೃತಿ ರೂಪುಗೊಂಡು ಆ ಪ್ರದೇಶದ ಜನಜೀವನದ ಮೇಲೆ ಪ್ರಧಾನ ಬೀರಿದೆ.

ಕೊಡಗಿನಲ್ಲಿ ಹುಟ್ಟಿ ಹರಿದು ಬರುವ ಪವಿತ್ರ ಕಾವೇರಿ ನದಿಯು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಮೂಲಕ ಹರಿದು ತನ್ನ ಸಮುದ್ರದಲ್ಲಿ ಒಲಸಾತವಾಗಿ ಧುಮುಕಿ ಮುಂದೆ ಕೊಳ್ಳೇಗಾಲದ ವೂರ್ಗವಾಗಿ ತಮಿಳುನಾಡನ್ನು ಪ್ರವೇಶಿಸುತ್ತದೆ. ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುವ ಸ್ಥಳದಲ್ಲಿ—ಮೈಸೂರಿನಿಂದ ಎಂಟು ಮೈಲಿ ದೂರದಲ್ಲಿಯೆ ಕೃಷ್ಣರಾಜ ಸಾಗರ ಅಣೆಕಟ್ಟು ಪ್ರದೇಶದಲ್ಲಿ ಸುಮಾರು ಹದಿನಾರು ಬದುರ ಮೈಲಿಗಳಷ್ಟು ವಿಸ್ತೀರ್ಣವಾದ ಜಲಾಶಯ ಭಾಗದಲ್ಲಿ ಸಂಗ್ರಹಿಸಲ್ಪಡುವ ಈ ನದಿಯ ನೀರನ್ನು ನಾಲೆಗಳ ಮೂಲಕ ಮಂಡ್ಯ ಜಿಲ್ಲೆಯ ವಿವಿಧ ಭಾಗಗಳಿಗೆ ಹಾಯಿಸಲಾಗುತ್ತದೆ.

ಜಗದ್ವಿಖ್ಯಾತ ಎಂಜಿನಿಯರ್ ದಿವಂಗತ ಡಾ॥ ಸರ್ ಎಂ. ವಿಶ್ವೇಶ್ವರಯ್ಯನವರಿಂದ ನಿರ್ಮಿಸಲ್ಪಟ್ಟ ಕೃಷ್ಣರಾಜ ಸಾಗರ ಮಂಡ್ಯದ ರೈತರ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯಿತು ಮಲೇರಿಯಾ ರೋಗದಿಂದ ನರಳುತ್ತಿದ್ದ ಈ ಜಿಲ್ಲೆಯ ಜನರಲ್ಲಿ ಒಂದು ಹೊಸ ಚೈತನ್ಯ ತುಂಬಿ ಬಂತು. ಒಂದು ಹೊಸ ಹುರುಪು ಎಲ್ಲೆಲ್ಲೂ ಕಾಣತೊಡಗಿತು.

ನಾಂದ್ರ ಬೇಸಾಯ ಜಿಲ್ಲೆ

ಮೂವತ್ತು ವರ್ಷಗಳ ಹಿಂದಿನ ಕಹಿ ನೆನಪುಗಳು ಅಳಿದು ಈಗ ಹೊಸ ಜೀವನ ಈ ಜಿಲ್ಲೆಯಲ್ಲಿ ಆರಂಭವಾಗಿದೆ. ೧೯೬೨ ಜನವರಿ ೧೭ರಂದು ಈ ಜಿಲ್ಲೆಯನ್ನು ನಾಂದ್ರ ಬೇಸಾಯ ಜಿಲ್ಲೆಯೆನ್ನಾಗಿ ಸಾರಲಾಯಿತು. ಬೇಸಾಯದ ಅಭಿವೃದ್ಧಿಗೆ ಆಗತ್ಯವಾದ ಎಲ್ಲಾ ಆವಶ್ಯಕತೆಗಳನ್ನು ರೈತರಿಗೆ ಒದಗಿಸಿಕೊಟ್ಟು ಅತ್ಯಧಿಕ ಬೇಸಾಯಾಭಿವೃದ್ಧಿಯನ್ನು ಸಾಧ್ಯಗೊಳಿಸುವುದೇ ಈ ಕಾರ್ಯ ಯೋಜನೆಯ ಮುಖ್ಯ ಉದ್ದೇಶ ಈ ಉದ್ದೇಶ ಸಫಲವಾಗುತ್ತಿದ್ದರಾಜ್ಯದ ಆಹಾರ ಧಾನ್ಯಗಳ ಕೊರತೆಯನ್ನು ತೊಡೆದುಹಾಕುವ ದಿಶೆಯಲ್ಲಿ ಈ ಜಿಲ್ಲೆ ಇಂದು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಜಿಲ್ಲೆಯಲ್ಲಿ ಐ ಎಡಿ ಪಿ. (ನಾಂದ್ರ ಬೇಸಾಯ ಯೋಜನೆ) ಜಾರಿಗೆ ಬಂದು ಇಂದಿಗೆ ಏನು ವರ್ಷಗಳಾಗಿವೆ.

ಕಲವು ಅಂಕಿ ಅಂಶಗಳು

ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಎಳು ತಾಲ್ಲೂಕುಗಳಿವೆ. ಭೂಗೋಳ ಹಿಂದೊಂದು ತಾಲೂಕಿನಿಂದ ಹಿಡಿದೊಂದು ತಾಲ್ಲೂಕಿಗೆ ವೈತ್ಯಾಸ ಹೊಂದಿಸ್ಕೊದೆ. ಸಾಮಾನ್ಯವಾಗಿ ಮೂರು ಬೇರೆ ಬೇರೆ ವರ್ಗದ ಮಣ್ಣು ಇಲ್ಲಿ ಕಾಣಸಿಗುತ್ತದೆ. ಮದ್ದೂರು, ಮಳವಳ್ಳಿ, ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳಲ್ಲಿ ಲಭ್ಯವಿರುವ ಕಂಪು ಮಣ್ಣು ತುಂಬಾ ಬೇಸಾಯ ಯೋಗ್ಯವಾಗಿದ್ದು ಸುಧಾರಿತ ಬೇಸಾಯ ವಿಧಾನಗಳಿಗೆ ಒಳ್ಳೆಯ ಆವಕಾಶವನ್ನು ಕಲ್ಪಿಸುತ್ತವೆ ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ, ಮದ್ದೂರು ಮತ್ತು ಪಾಂಡವಪುರದ ಕೆರೆಗಳು ಹಾಗೂ ನಾಲಾ ಪ್ರದೇಶದಲ್ಲಿರುವ ಜೇಡಿ ಮಣ್ಣು ತುಂಬಾ ಫಲವತ್ತಾದದ್ದು. ಮಂಡ್ಯ, ಮಳವಳ್ಳಿ ಮತ್ತು ನಾಗಮಂಗಲ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಮರಳಿನಿಂದ ಕೂಡಿದ ಅಷ್ಟು ಫಲವತ್ತಾಗಿಲ್ಲದ ಸಾಧಾರಣ ಮಣ್ಣು ಕಾಣಸಿಗುತ್ತವೆ.

ಒಟ್ಟು ೧೩೦೦ಕ್ಕೆಳ್ಳಿಗಳಿಂದ ಕೂಡಿದ ಈ ಜಿಲ್ಲೆಯನ್ನು ಅಭಿವೃದ್ಧಿ ಕಾರ್ಯಗಳಿಗಾಗಿಂದು ಒಟ್ಟು ೧೧೧ ಬ್ಲಾಕ್‌ಗಳನ್ನಾಗಿ ವಿಂಗಡಿಸಲಾಗಿದೆ

ಜಿಲ್ಲೆಯ ಒಟ್ಟು ಜನಸಂಖ್ಯೆ ಸುಮಾರು ಒಂಭತ್ತು ಲಕ್ಷ. ಈ ವೈಕಿ ಎಂಟು ಲಕ್ಷದಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ೧ ಲಕ್ಷದಷ್ಟು ಜನ ಪಟ್ಟಣ ಪ್ರದೇಶದಲ್ಲಿದ್ದಾರೆ.

ಹೊಸ ಬೆಳೆಗಳ ಪ್ರಚಾರ

ಮಂಡ್ಯ ಮುಖ್ಯವಾಗಿ ಬೇಸಾಯ ಪ್ರಾಧಾನ್ಯವಾದ ಜಿಲ್ಲೆ. ೯೦೬ ಎಕರೆಗಳಷ್ಟು ಭೂಮಿಗೆ ವಿಶೇಷವಾದ ನೀರಾವರಿ ಸೌಕರ್ಯವಿದೆ. ಆದರೆ ಒಟ್ಟು ಬೇಸಾಯ ಭೂಮಿಯಲ್ಲಿ ಶೇಕಡ ೨೦ ರಷ್ಟು ಭಾಗಕ್ಕೆ ನೀರಾವರಿ ಸೌಲಭ್ಯವಿದ್ದಂತಾಗಿದೆ. ಭತ್ತ, ರಾಗಿ, ಕಬ್ಬು, ನೆಲಗಡಲೆ ಮತ್ತು ಅಲೂಗೆಡ್ಡೆ ಇವು ಜಿಲ್ಲೆಯ ಮುಖ್ಯ ಬೆಳೆಗಳು. ಇತ್ತೀಚೆಗೆ ಕಡಿಮೆ ಕಾಲದಲ್ಲಿ ಅಧಿಕ ಉತ್ಪನ್ನ ಕೊಡುವ 'ಹೈಬ್ರಿಡ್' ಬೆಳೆಗಳನ್ನು ಇನ್ನಿ ಬೆಳೆಯಲಾಗುತ್ತಿದೆ 'ಹೈಬ್ರಿಡ್' ಜೋಳ ಮತ್ತು 'ಹೈಬ್ರಿಡ್' ಮುಸುಕಿನ ಜೋಳ —ಇವುಗಳ ಫಲ ತುಂಬಾ ಆಶಾದಾಯಕವಾಗಿದೆ. ರೈತರು ಈ ಹೊಸ ಬೆಳೆಗಳನ್ನು ಹೆಗೆಯುವ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ಪ್ರದರ್ಶಿಸಿದ್ದಾರೆ. ಈ ಬೆಳೆಗಳನ್ನು ಮಂಡ್ಯ ಜಿಲ್ಲೆಯಲ್ಲಿ ಇನ್ನೂ ಹೆಚ್ಚು ಜನಪ್ರಿಯಗೊಳಿಸಿ ರೈತರು ಈ ಬೆಳೆಗಳನ್ನು ಅಧಿಕ ಪ್ರಮಾಣದಲ್ಲಿ ಹೆಗೆಯುವಂತೆ ಮಾಡುವುದು ತುಂಬಾ ಅವಶ್ಯವೆನಿಸಿದೆ. ಹೋದ ವರ್ಷ ಮಳೆಯ ಅಭಾವದಿಂದಾಗಿ ನೀರಾವರಿ ನಾಲೆಗಳಲ್ಲಿ ಬತ್ತಿ ಹೋಗಿ ಬೇಸಾಯ ಕಾರ್ಯ ತುಂಬಾ ಆತಂಕಕ್ಕೊಳಗಾದ ಸಮಯದಲ್ಲಿ, ಲಭ್ಯವಿರುವ ಕಡಿಮೆ ಪ್ರಮಾಣದ ನೀರಿನಿಂದಲೇ ಬೇಗ ಫಸಲು ಕೊಡುವ ಆಹಾರ ಧಾನ್ಯಗಳ ಬೆಳೆ ಎಂಬುದನ್ನು ತೆಗೆಯುವುದು ವಿವೇಕದ ಮಾರ್ಗವೆಂಬುದರ ಕಟು ಸತ್ಯ ಅನುಭವಕ್ಕೆ ಬಂತು. ಗದ್ದೆಗಳಲ್ಲಿ ರಾಗಿಯಪಸಲನ್ನು ತೆಗೆಯುವ ವಾಸ್ತವಿಕ ಪೋರಣೆಯನ್ನು ರೈತರು ಅನುಸರಿಸಿ, ತಮ್ಮ ಸಕಾಲಿಕ ವಿವೇಕ ಬುದ್ಧಿಯನ್ನು ಪ್ರದರ್ಶಿಸಿದರು.

ಅಭಿನಂದನೀಯ ಸಾಧನೆ

ನೀರಾವರಿ ಸೌಕರ್ಯದ ಪಲವಾಗಿ ಕಬ್ಬು ಅಥವಾ ಭತ್ತ ಇವುಗಳಷ್ಟನ್ನೇ ಬೆಳೆಯುತ್ತಿದ್ದ ರೈತರು ನೀರಿನ ಅನುಕೂಲ ನೋಡಿಕೊಂಡು ಪರಿಸ್ಥಿತಿಗನುಗುಣವಾಗಿ ಬೇರೆ ಬೆಳೆಗಳನ್ನು ತೆಗೆಯುವ ವಿವೇಚನೆಯನ್ನು ತೋರಿಸಿದುದು ಅಭಿನಂದನೀಯವೆನ್ನಬಹುದು.

ಅಷ್ಟೇ ಅಲ್ಲ, ಮಂಡ್ಯದ ರೈತರು ಕಡಿಮೆ ಅವಧಿಯ ಹಾಗೂ ಕಡಿಮೆ ನೀರು ಬೇಕಾಗುವ ತಳಿಯ ಜೋಳ—ಟಿಚ್ ಭತ್ತವನ್ನೂ ಯಶಸ್ವಿಯಾಗಿ ಬೆಳೆದಿದ್ದಾರೆ.

ಈ ಪರಿವರ್ತನೆಗೆ ಅವಶ್ಯಕವಾದ ಮಾರ್ಗದರ್ಶನವನ್ನು ಐ. ಎ. ಡಿ. ಪಿ ತಜ್ಞರು ರೈತರಿಗೆ ಒದಗಿಸಿ ಕೃತಕೃತ್ಯರಾಗಿದ್ದಾರೆ.

ಸಹಕಾರಿ ಚಳುವಳಿಯ ಪ್ರಗತಿ

ಮಂಡ್ಯ ಜಿಲ್ಲೆಯ ಬೇಸಾಯ ಪ್ರಗತಿಯ ವಿಷಯವನ್ನು ಪ್ರಸ್ತಾಪಿಸುವಾಗ ಈ ಜಿಲ್ಲೆಯಲ್ಲಿ ಸಹಕಾರಸಂಘಗಳು ಸಾಧಿಸಿರುವ ಪ್ರಗತಿಯನ್ನು ಪ್ರಸ್ತಾಪಿಸದೇ ಇರಲು ಸಾಧ್ಯವಿಲ್ಲ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ೬೧೧ ಸಹಕಾರ ಸಂಘಗಳಿದ್ದು, ಇವುಗಳ ಪೈಕಿ ಬಹುತೇಕ ಸಹಕಾರಿ ಸಂಘಗಳು ತುಂಬಾ ಯಶಸ್ವಿಯಾಗಿ ಕೆಲಸ ಮಾಡುತ್ತಿವೆ. ಬೇಸಾಯಕ್ಕೆ ಸಂಬಂಧವಾದ ಸಹಕಾರ ಸಂಘಗಳು ಸಂಖ್ಯೆಯೇ ಅಧಿಕವಾಗಿರುವುದೂ ಸಹಜವೇ ಆಗಿದೆ. ಜಿಲ್ಲೆಯಲ್ಲಿರುವ ಒಟ್ಟು ೧೩೦೯೬೬೨ ರೈತ ಕುಟುಂಬಗಳ ಪೈಕಿ ೬೧೧೫೫ ಜನರು ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಟ್ಟಿದ್ದಾರೆ.

ರೈತರಿಗೆ ಬೇಕಾದ ಎಲ್ಲ ಅವಶ್ಯಕತೆಗಳನ್ನು ಸಹಕಾರ ಸಂಘಗಳ ಮೂಲಕವೇ



ಶ್ರೀ ಚಾರ್ಲ್ಸ್‌ರವರು ಜೆಮಿನಿ-೧೧ರಿಂದ ಕಳಿಸಿದ ಗಾಢ ವರ್ಣದ ಕಂಬಳಿಯ ಒಂದು ಚಿತ್ರ. ಇದನ್ನು ೬೫ ಎಂ ಎಂ ಮೋಟರ್ ಎತ್ತರಿಂದ ತೆಗೆದ ಲಾಯಿತು.



ಜೆಮಿನಿ-೧೧ ಗಗನ ಯಾತ್ರಿ, ಗೋರ್ಡನ್ ಎರಡು ತಾಸುಗಳ ಕಾಲ ಇದರಿಂದ ಹೊರಬಿದ್ದು 'ಆಗಸ' ಅಂತರಿಕ್ಷದಲ್ಲಿ ಮೂಡಿ ಹೋದರು. ಚಿತ್ರಗಳನ್ನು ತೆಗೆದರು.

ಒದಗಿಸಲಾಗುತ್ತಿದೆ. ಶೇಕಡ ೬೦ರಷ್ಟು ಸೆದಪು ಗೊಬ್ಬರವೇ ನೊದಲಾದ ಪರಕು ಗಳ ರೂಪದಲ್ಲಿಯೂ ಶೇಕಡ ೪೦ರಷ್ಟು ಭಾಗ ನಾಗದು ರೂಪದಲ್ಲಿ ದೊರಕುತ್ತದೆ. ಸಹಕಾರ ಸಂಘಗಳ ವತಿಯಿಂದ ದೊರಕುವ ಇತರ ಸಾಮಗ್ರಿಗಳ ಹಾಗೂ ನಗದು ರೂಪದ ಸೌಲಭ್ಯಗಳ ಸಹಾಯ ರೈತರಿಗೆ ಒಂದು ದೊಡ್ಡ ಆಸರೆಯಾಗಿದೆ ಜಿಲ್ಲೆಯಲ್ಲಿ ಸಾಂದ್ರ ಬೇಸಾಯ ವ್ಯವಸ್ಥೆ ಜಾರಿಗೆ ಒಂದವೆಲೆ ರೈತರ ಫಲಿಸಿದ ಮೊದಲ ಹಾಗೂ ಸಂಕ್ಷಿಪ್ತ ಕಾರ್ಯಕ್ರಮವಿ ಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ ರೈತರ ಬೇಸಾಯೋತ್ಪನ್ನ ಸಹಕಾರಿ ಮಾರಾಟ ಸಂಘವು ಒಂದು ಬೃಹತ್ ಪ್ರಮಾಣದ ಸಹಕಾರ ಸಂಘವಾಗಿದ್ದು, ೨೦೦೦ಟನ್‌ಗಳಷ್ಟು ಭತ್ತವನ್ನು ತುಂಬಿಡಬಹುದಾದಂತಹ "ಸಿಲೋ" (ಕಣಜ) ಸೌಕರ್ಯವನ್ನು ಒಟ್ಟು ೧೫೫ ಲಕ್ಷರೂಗಳ ವೆಚ್ಚದಲ್ಲಿ ಇದೀಗ ಒದಗಿಸಿಕೊಳ್ಳುತ್ತಿವೆ ಕೇಂದ್ರ ಆಹಾರ ಮತ್ತು ಬೇಸಾಯ ಮಂತ್ರಿ ಶಾಖೆಯು ಒಂದ ಟನ್ ಅಕ್ಕಿ ಮಾಡುವ ಸಾಮರ್ಥ್ಯದ ಜವಾಸನೆ ಮೂದಲು ಅಕ್ಕಿಯ ಮಿಲ್ಲನ್ನೂ ಈ ಸಹಕಾರ ಸಂಘಕ್ಕೆ ಒದಗಿಸಿದೆ. ಸಂಘವು ಸುಧಾರಿತ ಬೇಸಾಯೋಪಕರಣಗಳನ್ನು ತಯಾರಿಸುವ ವರ್ಕ್‌ಷಾಪನ್ನು ಸ್ಥಾಪಿಸಿಕೊಂಡಿದೆ. ಗೊಬ್ಬರ ಮಿಶ್ರಣಮಾಡುವ ಹಾಗೂ ಕೋಳಿಗಳ ಆಹಾರವನ್ನು ತಯಾರಿಸುವ ಕಾರ್ಖಾನೆಯನ್ನೂ ಸ್ಥಾಪಿಸಿಕೊಂಡಿದೆ. ೧೫೦ ಒಕ್ಕಲಿಗರ ವೆಚ್ಚದಲ್ಲಿ ದನಗಳ ಮೇವು ತಯಾರಿಸುವ ಕಾರ್ಖಾನೆಯನ್ನೂ ಈ ಸಂಘವು ಸ್ಥಾಪಿಸಲಿದೆ.

ಸಹಕಾರ ಸಂಘಗಳು ಮಾರಾಟಕ್ಕೆ ಭತ್ತ ಸಂಗ್ರಹಿಸುವ ಕಾರ್ಯದಲ್ಲಿ ಸರ್ಕಾರದ ಏಜೆನ್ಸಿಯಾಗಿ ಕೆಲಸ ಮಾಡುತ್ತವೆ. ೧೯೬೪-೬೫ರಲ್ಲಿ ಒಟ್ಟು ೭೪೪೪ ಕ್ವಿಂಟಾಲ್‌ಗಳಷ್ಟು ಭತ್ತವನ್ನು ಈ ರೀತಿ ಸಂಗ್ರಹಿಸಿದುವು. ರೈತರಿಗೆ ಒಳ್ಳೆಯ ಬೆಲೆ ಬರುವ ತನಕ ದಾಸ್ತಾನನ್ನು ಸಂಗ್ರಹಿಸಿಟ್ಟು ಆ ದಾಸ್ತಾನಿನ ಆಧಾರದ ಮೇಲೆ ರೈತರಿಗೆ ಸಾಲದ ರೂಪದಲ್ಲಿ ಮುಂಗಡ ಹಣ ಪಾವತಿ ಮಾಡುವ ವ್ಯವಸ್ಥೆಯೂ ಸಹಕಾರ ಸಂಘಗಳಲ್ಲಿ ಜಾರಿಯಲ್ಲಿದೆ. ಸಹಕಾರ ಸಂಘಗಳು ಉತ್ತಮ ದಾಸ್ತಾನು ಸೌಕರ್ಯವನ್ನು ಹೊಂದಿರುವುದು ಗಮನಾರ್ಹ ಬೆಸ್ತನೆ ಬೀಜ, ಕೃತಕ ಗೊಬ್ಬರ ಇತ್ಯಾದಿಗಳನ್ನೂ ದಾಸ್ತಾನು ಮಾಡಿಟ್ಟು ರೈತರಿಗೆ ಸಕಾಲಕ್ಕೆ ಒದಗಿಸುವುದು ಇದರಿಂದ ಸಾಧ್ಯವಾಗಿದೆ.

ಇಡೀ ಜಿಲ್ಲೆಗೆ ಒಟ್ಟು ೧೯೬೬ ದಾಸ್ತಾನು ಕೇಂದ್ರಗಳು ಮುಂಜೂರಾಗಿದ್ದು ಈ ಪೈಕಿ ೧೩೮ ಕೇಂದ್ರಗಳು ಈಗಾಗಲೇ ಸಿದ್ಧವಾಗಿವೆ ಅವು ೧೫೫೦೦ ಟನ್‌ಗಳ ದಾಸ್ತಾನು ಸಾಮರ್ಥ್ಯವನ್ನು ಹೊಂದಿವೆ. ಇನ್ನುಳಿದ ೬೫ ದಾಸ್ತಾನು ಕೇಂದ್ರಗಳ ಪೈಕಿ ೩೮ ಕೇಂದ್ರಗಳು ನಿರ್ಮಾಣದ ವಿವಿಧ ಘಟ್ಟಗಳಲ್ಲಿದ್ದು ಪದ್ಮದಲ್ಲಿಯೇ ಸಿದ್ಧವಾಗಲಿವೆ ಇವುಗಳಲ್ಲದೇ ಮಂಡ್ಯ ಮತ್ತು ಮದೂರು—ಈ ಎರಡು ಕಡೆಗಳಲ್ಲಿ ೨೦೦೦ ಟನ್ ಸಾಮರ್ಥ್ಯದ ಎರಡು ಕೇಂದ್ರಗಳಿವೆ. ಹೀಗೆ ರೈತರಿಗೆ ಇರುವ ದಾಸ್ತಾನು ಸಂಗ್ರಹ ಸೌಕರ್ಯ ತುಂಬಾ ಗಮನಾರ್ಹವಾದದ್ದು.

ಸಾಂದ್ರ ಬೇಸಾಯ ವ್ಯವಸ್ಥೆ ಜಾರಿಗೆ ಬರುವದಕ್ಕೆ ಮೊದಲು ಜಿಲ್ಲೆಯಲ್ಲಿ ಒಟ್ಟು ೬೫ ಸಹಕಾರಿ ಸಂಘಗಳಿದ್ದವು ಈ ಎಲ್ಲ ರೈತರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವ ಕಾರ್ಯದಲ್ಲಿ ಅವುಗಳಿಗೆ ಸಾಮರ್ಥ್ಯವಿಲ್ಲದ ಕಾರಣ ಸಾಂದ್ರ ಬೇಸಾಯ ವ್ಯವಸ್ಥೆ ಜಾರಿಗೆ ಬಂದ ಮೇಲೆ ಈ ೬೫ ಸಹಕಾರ ಸಂಘಗಳ ಜೊತೆಗೆ ೩೫ ಸಹಕಾರ ಸಂಘಗಳನ್ನು ಹೊಸ ಚೈತನ್ಯ ತುಂಬಲಾಗಿದೆ. ಈ ಸಂಘಗಳು ರೈತರಿಗೆ ಅವಶ್ಯಕವಾದ ಸಾಲ ಸೌಲಭ್ಯಗಳು, ಅವರ ಆವಶ್ಯಕತೆಗಳ ಪೂರೈಕೆ ಹಾಗೂ ಮತ್ತಿತರ ಸೇವಾ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿವೆ. ಇದರ ಸಹಕಾರ ಸಂಘಗಳನ್ನೂ ಪುನರ ಜ್ಜೀವನಗೊಳಿಸುವ ಕಾರ್ಯ ನಡೆಯುತ್ತಿದೆ.

ರೈತರ ಆವಶ್ಯಕತೆಗಳ ಪೂರೈಕೆ

ರೈತರ ಮುಖ್ಯ ಆವಶ್ಯಕತೆಯಾದ ಬಿತ್ತನೆ ಬೀಜಗಳನ್ನು ಒದಗಿಸುವ ಕಾರ್ಯದಲ್ಲಿ ಐ. ಎ. ಡಿ. ಸಿ ಒಂದು ಮಹತ್ವಾಕಾಂಕ್ಷಿ ಪಾತ್ರವನ್ನು ವಹಿಸುತ್ತಿದೆ ಸುಧಾರಿತ ಬೀಜಗಳನ್ನು ಒದಗಿಸುವ ಕಾರ್ಯಕ್ಕೆ ವಿಶೇಷ ರೀತಿಯ ಗಮನವನ್ನು ಕೊಡಲಾಗುತ್ತಿದೆ. ಉತ್ತಮ ಜಾತಿಯ ಬಿತ್ತನೆ ಬೀಜಗಳನ್ನು ಸಂಗ್ರಹಿಸಿ ಆವಶ್ಯಕತೆಗಳನ್ನು ಸಕಾಲಕ್ಕೆ ರೈತರಿಗೆ ಒದಗಿಸುವ ಕಾರ್ಯವನ್ನು ಮಾಡಲಾಗುತ್ತಿದೆ.

೧೯೬೬—೬೭ರಲ್ಲಿ ವಿವಿಧ ಜಾತಿಯ ಒಟ್ಟು ೬೦೦೦ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಸಂಗ್ರಹಿಸಿ ರೈತರಿಗೆ ಒದಗಿಸುವ ಕಾರ್ಯವನ್ನು ಮಾಡಲಾಯಿತು. ಕೃತಕ ಗೊಬ್ಬರದ ಸಂಗ್ರಹಣೆ ಹಾಗೂ ಸೂರೈಕೆ ಕಾರ್ಯ ಕೂಡ ಆಶ್ಚರ್ಯಪಡುವಷ್ಟು ಸಮರ್ಪಕವಾಗಿದೆ.

ಅಧಿಕ ಉತ್ಪಾದನೆಗಾಗಿ ರೈತರಿಗೆ ಕೃತಕ ಗೊಬ್ಬರಗಳ ಉಪಯೋಗ ಎಷ್ಟು ಅವಶ್ಯವೆಂಬ ಜ್ಞಾನವನ್ನು ರೈತರಿಗೆ ಕರಪತ್ರಗಳ ಮೂಲಕ ತಿಳಿಸಿಕೊಡಲಾಗುತ್ತಿದೆ. ಕೃತಕ ಗೊಬ್ಬರಗಳನ್ನು ಎಂಥ ನೆಲಕ್ಕೆ ಎಷ್ಟು ಪ್ರಮಾಣದಲ್ಲಿ ಬಳಸಬೇಕು ಎಂಬುದರ ಬಗ್ಗೆ ರೈತರಿಗೆ ತಿಳಿವಳಿಕೆ ಕೊಡುವ ಕಾರ್ಯಕ್ಕೆ ವಿಶೇಷ ಗಮನವನ್ನು ಕೊಡಲಾಗುತ್ತಿದೆ ಅನೇಕ ಕಡೆಗಳಲ್ಲಿ ಇದಕ್ಕಾಗಿ ಪ್ರಾತ್ಯಕ್ಷಿಕ ಪ್ರಮಾಣದ 'ಡೆಮಾನ್‌ಸ್ಟ್ರೇಷನ್ ಪ್ಲಾಟ್ಸ್'ಗಳನ್ನು ನಿರ್ವಹಿಸಲಾಗಿದೆ. ಇದರಿಂದಾಗಿ ಒಂದೇ ಬಗೆಯ ನೈಟ್ರೋ

[ಉಳಿದದ್ದನ್ನು ಮುಂದೆ ನೋಡಿರಿ]

ಸಿಂಡಿಕೇಟ್ ಬ್ಯಾಂಕು

ತನ್ನ

ಪೂನಾ ಶಾಖೆಯನ್ನು

712, ಖಾರೆಮಾಡೆ, ನಾರಾಯಣ ವೇಟ್ಸ್, ಲಕ್ಷ್ಮೀ ರೋಡ್, ಪೂನಾ-2

ಎಂಬಲ್ಲಿ

ದಶಂಬರ 9, 1966ರಂದು ತೆರೆಯಲಿದೆಯೆಂದು ತಿಳಿಸಲು ಹರ್ಷಪಡುತ್ತದೆ.

ವ್ಯಾಪಕ ಪ್ರಮಾಣದ ಪರಿಪೂರ್ಣ ಆರ್ಥಿಕ ಸೇವೆಗೆ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಮಣಿಪಾಲ, ದಕ್ಷಿಣ ಕನ್ನಡ.

ಪ್ರಜಾರಾಜ್ಯದಲ್ಲಿ ಜಾತಿ ಭೂತ

(ನಿನ್ನೆಯ ಸಂಚಿಕೆಯಿಂದ)

ಯಲು ಜಾತಿ, ಕಾಲೇಜಿನಲ್ಲಿ ಸೀಟು ಬೇಕು ಅದಕ್ಕೂ ಜಾತಿ. ಚುನಾವಣೆಗೆ ನಿಲ್ಲಬೇಕು— ಜಾತಿ. ಜಾತೀಯತೆಯ ಅಂಧ ಅಭಿಮಾನ ತುಂಬಿ ತುಳುಕುತ್ತಿದೆ.... ರಾಜಕೀಯ ಧುರೀಣರೂ ಸಮಾಜ ಸೇವಕರೂ ಪಂಥಾಧಿಪತಿಗಳೂ ಅಧಿಕಾರಿಗಳೂ ಎಲ್ಲಕ್ಕೂ ಮೇಲಾಗಿ ಸರಕಾರವೇ ಈ ರೋಗಕ್ಕೆ ಅವಕಾಶ—ಪ್ರೋತ್ಸಾಹ ನೀಡುತ್ತಿದೆ ಎಂಬುದು ದುಂಬಿದ್ದಷ್ಟಕರ ಸಂಗತಿ. ವಿದ್ಯೆ, ವಿವೇಕ, ಪ್ರತಿಭೆಗಳಿಗೆ ಇಲ್ಲದ ಸಾಧನ, ಪುರಸ್ಕಾರ ಜಾತಿಗೆ, ಪ್ರಜಾರಕ್ಕೆ ಇದೆ. ಜಾತೀಯತೆಯ ಆಧಾರದ ಮೇಲೆ ವ್ಯವಹಾರಗಳು ಉಳಿದಿನೆ—ಬೆಳೆದಿವೆ.

ನಮ್ಮದು ಜಾತ್ಯತೀತರಾಷ್ಟ್ರ. ನಮ್ಮಲ್ಲಿ ಮೇಲು ಕೀಳು ಎಂಬ ಭೇದವಿಲ್ಲ. ಸರ್ವರಿಗೂ ಸಮಾನ ಹಕ್ಕುಂಟು. ವಿಚಾರಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಇಷ್ಟ ನಿಷ್ಠಾ ತಂತ್ರ್ಯ ಮೊದಲಾದ ಸ್ವಾತಂತ್ರ್ಯಗಳ ಸಾಲಭ್ಯವುಂಟು ಸಂವಿಧಾನದಲ್ಲಿ. ಅದರೊಂದಿಗೆ ನಾಟಕ ನಿಯಂತ್ರಣ, ಮಸೂದೆ, ಭಾಷಣನಿಯಂತ್ರಣ ಮಸೂದೆ, ಲೇಖನ ನಿಯಂತ್ರಣ ಮಸೂದೆ, ಮುದ್ರಕರ ನಿಯಂತ್ರಣ ಮಸೂದೆಗಳನ್ನು ಪ್ರಸ್ತಾಪಿಸಿ ಉಗ್ರ ಎಚ್ಚರಿಕೆಗಳನ್ನೂ ಸಂಗ್ರೀವಾಜ್ಞೆಗಳನ್ನೂ ಹೇಡುತ್ತಿದೆ ಜನಕಾ ಸರ್ಕಾರ. ಇದೊಂದು ಬಗೆಯ ವಿಚಿತ್ರ ವಿಪರ್ಯಾಸ.

ಕತ್ತಿ, ಕೋವಿ, ಫಿರಂಗಿಗಳಿಂದ ಶಾಸನಗಳಿಂದ ಜನತೆಯು ಮನೋಭವವನ್ನೂ, ಸ್ವಾತಂತ್ರ್ಯವನ್ನೂ ಹತ್ತಿಕ್ಕತ್ತೇನೆಂದು ಸರ್ಕಾರ ಭಾವಿಸಿದ್ದರೆ ಅದು ಭ್ರಮೆ. ಜನತೆಯು ನುನಸಿಗೂ ಒಳಿತು-ಕೆಡುಕ. ಅನುಕೂಲ, ಅನಾನುಕೂಲಗಳ ಯೋಚನೆ ಇದೆ. ಅನ್ಯಾಯ ಅಕ್ರಮ ಅತ್ಯಾಚಾರ, ಭ್ರಷ್ಟ ಚಾರಗಳನ್ನು ಕಂಡು ರೋಸಿದ ಜನತೆ ಪ್ರತಿಭಟಿಸಿ ನಿಂತಿದೆ. ಸರ್ಕಾರ ನೂತನೇ ಅಲ್ಲ ಹಿಮಾಲಯ ಪರ್ವತವನ್ನೇ ಸಿಡಿದು ಉಳಿಸಿತು.

"ಚಾತುರ್ವರ್ಣಂ ಮಯಾಸೃಷ್ಟಂ ಗುಣಾ ಯುಣ ವಿಭಾಗಶಃ" ಎಂದು ಗೀತಾಚಾರ್ಯ ಹೇಳುತ್ತಾನೆ. ಗುಣ ಮತ್ತು ವೃತ್ತಿಗಳನ್ನು ಅನುಸರಿಸಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣ (ಜಾತಿ)ಗಳನ್ನು ಸೃಷ್ಟಿಸಿದ್ದಾನೆ ಎಂಬುದು ಅರ್ಥ. ಇಂದು ಸಂಕಾರ ನಿರ್ಧರಿಸಿರುವ ವಿಭಾಗಿಸಿರುವ ಜಾತಿಗಳಿಗೆ ಯಾವುದು ಆಧಾರ. ವಿದ್ಯೆಯೆ? ವಿವೇಕವೇ? ಅಥವಾ ಆರ್ಥಿಕ, ಸಾಂಸ್ಕೃತಿಕ ವ್ಯವಹಾರಗಳೇ?

ಜಾತಿ, ಕೋಮು, ಭಾಷೆ, ಪಾಂಥವ್ಯ, ಹಣ, ಅಧಿಕಾರ, ಅಥವಾ ಕೊಲೆ, ಸುಲಿಗೆ, ಬೆದರಿಕೆ ಮೊದಲಾದ ಅನೀತಿಯುತ ರೀತಿನೀತಿಗಳ ಮೂಲಕ ನಿಷ್ಠನಗಳಿಸಿ ಪೀಠ ಬಂದು ಮೆರೆಯುವ ರಾಜಕೀಯ ಧುರೀಣರ, ಅಧಿಪತಿಗಳ ಪೀಠ, ಕತ್ತಿಯ ಮೊನೆಗಿಂತಲೂ ಹರಿತ; ಅವು ಕಲ್ಪಿಸಿದ ಸಾಧನ ಮರಗಳ ನೆಲೆ ಕಟ್ಟಿದ ಮಾಯಾ ಸೌಧ.

ಜನತೆಯ ಹಿತಾಹಿತಗಳನ್ನು ಗ್ರಹಿಸದ ಸಂಕಾರದ ಆಡಳಿತ ಪಾಳೆಯಗಾರಿಕೆಯ ವ್ಯವಹಾರವಾ ಬಹುದು, ಪ್ರಜಾಪ್ರಭುತ್ವ ಎನಿಸಲಾರದು.

ಮಹಾಭಾರತಾನಾಣೆ ಸಮರ್ಪಿಸಿದಂತೆಲ್ಲ ಜಾತೀಯತೆಯು ಮುಖವಾಡದ ಪಿಶಾಚಿಯ ದರ್ಶನ ಹೆಚ್ಚುತ್ತದೆ. ಭಾಂತಪದ ಹಿರಿಮೆ, ಸಂಸ್ಕೃತಿ, ನಾಗರೀಕತೆ, ಧರ್ಮಗಳ ಬಗ್ಗೆ ಏಕೋ ಪ್ರಕಾರವೀಗಿ ಉಪನ್ಯಾಸ ಕೊಡುವ ಬಿರಿಯ ವ್ಯಕ್ತಿಗಳ ಜಾತೀಯತೆಯ ಧೋರಣದ ಬಲಗೆ ಬಿದ್ದಿದ್ದಾರೆ. ಜಾತ್ಯಾತೀತ ರಾಷ್ಟ್ರ, ಕೋಮು ವಾರು ಭಾವನೆಗಳಿಗೆ ಇಲ್ಲಿ —ವಕಾಶವಿಲ್ಲ ಎಂದು ಹೇಳುವ ರಾಜಕಾರಣಿಗಳು, ಅಧಿಕಾರ ಪಾಣಿಯಿಂದ ಹೇಳಿದರೂ, ತಮ್ಮ ಮೇಜಿನ ಬಳಿಗೆ ಬಂದ ಅಭ್ಯರ್ಥಿಯ ಜಾತಿಯ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪಿಸುವ ಪರಿಪಾಠವೆಬೆದು ಬಂದಿದೆ ವಿಷಯ ಎಷ್ಟಿದ್ದರೂ ವ್ಯಕ್ತಿಯ (ಜೀವಿಯು) ವಿನಾಶಕ್ಕೆ ಕಾರಣವಾಗಲು ಸಾಧ್ಯ. ವಿಷದ ವಿಷಯವನ್ನು ಅರಿತ ಕೂಡಲೇ ಸೂಕ್ತ ಚಿಕಿತ್ಸೆ ನಡೆಯ ಬೇಕಾದದ್ದು ಜಗತ್ಯ. ಅದು ಶಸ್ತ್ರ ಚಿಕಿತ್ಸೆಯಾದರೂ ಅಭ್ಯಂತರ ಏನಿಲ್ಲ. ಇಲ್ಲವಾದರೆ ವಿಷ ತನ್ನ ಕೆಲಸ ಮಾಡದೆ ಬಿಡದು.

ವ್ಯಕ್ತಿಯು, ಸಮಾಜದ ಸರ್ಕಾರದ ಭದ್ರತೆಗೆ ಉದ್ಧಾರಕ್ಕೆ "ಜಾತಿ" ಸ್ಫೂರ್ತಿಯೊಂದೇ ಮೂಲ ಆಧಾರವಲ್ಲ. ನಮ್ಮ ರಾಷ್ಟ್ರ ಸಂಸ್ಕೃತಿ, ಧರ್ಮಗಳ ಬಗ್ಗೆ ಅಭಿಮಾನ ಬೆಳೆಸಬೇಕು. ನಮ್ಮ ಅಭಿಮಾನ ಅಂಧ ಅಭಿಮಾನವಾಗಿಬಾರದು. ಸಮಾಜ, ಸರ್ಕಾರಗಳ ವ್ಯವಹಾರಗಳಲ್ಲಿ, ನೀತಿ ನಡೆ ಎಳಕೆಗಳಲ್ಲಿ ಪಾರ್ಮಾರ್ಡು ಆಗಬೇಕಾದು ದುರಿನಿವಾರ್ಯ, ಜಾತೀಯತೆಯ ಅಧಿಕಾರದ ಮೇಲೆ ಬೆಳೆದ ಗುಂಪು, ಆಡಳಿತ, ವ್ಯವಹಾರ ಎಂದಿಗೂ ಉದ್ಧಾರವಾಗದು. ನಾನು ಹಿಂದು, ನಾನು ಭಾರತೀಯ ಎಂದು ಹೇಳಿಕೊಳ್ಳಬೇಕಾದುದು ಅಗತ್ಯ. ನೂರೆಂಟು ಜಾತಿ, ಸಾವಿರಾರು ಒಳಪಂಗಡಗಳು ನಮ್ಮ ಉದ್ಧಾರಕ್ಕೆ ರಾಷ್ಟ್ರದ ಏಳಿಗೆ ಸಹಕಾರಿ ಯಾಗಲಾರವು.

ರಾಷ್ಟ್ರ ಸಮಾಜ, ಸರ್ಕಾರ, ಪತ್ರಿಕಾ ಸಂಸ್ಥೆಗಳ ನಿಟ್ಟುಗಳಲ್ಲಿ ಅಂಟು ನಂಟಾಡಿದ ಹೋದರೆ, ಅಲ್ಪತನ ಮನೆಯೊಳಗೆ ದಿದ್ದರೆ ಯಾವ ಸಾರ್ಥಕವೂ ಆಗಲಾರದು.

ಮೊದಲು ವನೋವಿಕಾಸ, ಅನಂತರ ವ್ಯಕ್ತಿತ್ವ ವಿಕಾಸ. ಭಾವನೆ ಭವ್ಯವಾಗಿರಬೇಕು. ಬಾಳಿಗೆ ಬೆಳಕು ನೀಡುವಂತಿರಬೇಕು. ನಮ್ಮ ಬಾಳಿನ ಎಳ್ಳಕೆಗೆ "ಜಾತೀಯತೆಯ" ಕಲ್ಪನೆಯಾಗ ಬಾರದು. ಜಾತೀಯತೆಯ ಅಂಧ ಅಭಿಮಾನ ಅಳಿಯುದ ಹೊರತ ಪ್ರಜಾಸ್ವಭುತ್ವದ ಪ್ರಜ್ಞೆಯ, ಸರ್ಕಾರದೆಯುದ್ಧಾರವಿಲ್ಲ. ಜೆ ವಿನಾಶದ ತುದಿತಟ್ಟಿನ ಮುಂಚೆ ವೇಕ ಪಡೆಯ ಬೇಕಾದುದು ಅಗತ್ಯ.

ಮೂವನ ಮುಗಳ್ನೋ?

ತಂಗಾಳಿ ಬೀಸುವ ವೇಳೆ
ಹೊಂಬಣ್ಣದ ಕಿರಣಗಳೋಲೆ
ಇಂಪಾದ ಗಾನವ ಹಾಡೇ
ನೈ ಮರೆತು ನಿಂದಿರುವವಳೇ?

ಒಂದಾಗಿ ಹಾಡೋಣ ||

ಪಳ ಪಳನೆಂದು ಹೊಳೆಯುತ
ಪುಟ ಪುಟನೆಂದು ಹಾರುತ
ಜೇಲುಮೆಯ ಮುಖವ ಕೋರುತ
ನಿಂದಿರುವೇತಕೆ ಮೌನವ ನುಗುತೆ?

ಒಂದಾಗಿ ಹಾಡೋಣ ||

ಇಂಪಾದ ಗಾನದ ಸಧುರ
ಇರುವುದೆಂತು ಮುಖ ಪೀತ ಸುಂದರ
ವಸಂತ ಕಾಲದ ಸೈಭವ
ಸುಖ ಶಾಂತಿಗಳ ಸೌರಭವ

ಒಂದಾಗಿ ಹಾಡೋಣ ||

ವಸಂತ ಕಾಲದ ಹೂ ಚೆಂದ,
ನವಿಲಿನ ನಾಟ್ಯಕೆ ಬಾ 'ಚುಂದ'
ಲಲಿತ ನೆನ್ನೀ ಮಾತಿನ ಅರ್ಥ
ತಿಳಿಯುವೆ ನಿನಗೆ ಪ್ರೇಮದ ಅರ್ಥ

ಒಂದಾಗಿ ಹಾಡೋಣ ||

—ಜೇಮ್ಸ್ ಡಾಯಸ್.

ವಸುಂಧರಾ ಚಿತ್ರಮಂದಿರ

(ಸಿಂಪೂರು ಲಕ್ಷ್ಮಣ್)

ಧಾರವಾಡದ ವಸುಂಧರಾ ಚಿತ್ರಮಂದಿರ, ನಾಲ್ಕು ದಶಕಗಳ ಹಿಂದೆ ಬ್ರಿಟಿಷರು, ಸ್ಥಾನಿಕರು ಮತ್ತು ಶ್ರೀಮಂತರು ಬಡವರಿಗೆ ಹೀರುತ್ತಿರುವಾಗ ಆವರಿಲ್ಲರನ್ನು ರಂಜಿಸುವ ಕೊನೆಯುಸಿರಿನ ವರೆಗೂ ಎದ್ದು ಬದ ಜನತೆಯ ಬಂಧುವಾಗಿ ಬಾಳಿದ ಸಿಂದೂರ ಲಕ್ಷ್ಮಣನ ಜೀವನವನ್ನು ತೆರೆಗೆ ತರಲು ನಿರ್ಧರಿಸಿದ್ದಾರೆ. ಸೊನ್ನೆಯ ವಿಜಯ ದಶಮಿಯ ದಿನದಿಂದು [ತಿ—೧೦—೬೬] ಶುಭ ಮಹೂರ್ತದೊಂದಿಗೆ ನಟ-ನಟಿಯರ ಆಯ್ಕೆಯ ಕಾರ್ಯವು ಉಳ್ಳಾಗಿನ ಚಟುವಟಿಕೆಗಳ ಕೇಂದ್ರ ಸ್ಥಾನವಾಗಿದ್ದ ಜಮುಖಂಡಿ ಬಳಿಯ ಕಲ್ಲಂಬಿ ಗ್ರಾಮದಲ್ಲಿ ನಡೆಯಿತ್ತಿದ್ದ ಚಿತ್ರೀಕರಣದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ಚಿತ್ರದಲ್ಲಿ ನಾಡಿನ ಹತ್ತೊಂಭತ್ತು ಜಿಲ್ಲೆಯ ಕಲಾವಿದರೆಲ್ಲದೆ ಚಿತ್ರೀಕರಣದ ಪ್ರತಿ ನಟನಟಿಯರು ಖಂಡೊಳ್ಳುವರು ಲಕ್ಷ್ಮಣನ ಜೀವನದ ಬಗ್ಗೆ ಎಲ್ಲರಿಗೂ ತಿಳುವಳಿಕೆ ಯಾಗಬೇಕೆಂಬ ಉದ್ದೇಶದಿಂದಲೇ ಆಯ್ಕೆಯ ಕಾರ್ಯವನ್ನು ಕಲ್ಲಂಬಿಯಲ್ಲಿ ನಡೆಯಿಸಲಾಯಿತು ಸ್ಥಳೀಕರಿಗೆ ವಿಶೇಷ ಮತ್ತು ಕಾಣಬರಿಕಾರ ಎಂ. ಜೀವನದು ಈ ಚಿತ್ರದ ಸೂತ್ರಧಾರಕರಾಗಿದ್ದು, ಕಥೆ, ಸಂಭಾಷಣೆಗಳನ್ನೂ ಅವರೇ ಬರೆದಿದ್ದಾರೆ. ಮೈಸೂರಿನ ಸ್ವಿಮಿಯುರದಲ್ಲಿ ಚಿತ್ರವಾಗಲಿರುವ ಈ ಚಿತ್ರದ ದಿಗ್ದರ್ಶಕರು ಆಥಣಿಯ ಬಾಬು ಡಾಯ್ದು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 427/66.

ಗಿಡ್ಡ —ವಾದಿ.

ಯಂ. ಆರ್. ವೆಂಕಟೇಶ್ —ಪ್ರತಿವಾದಿ.

ಬೆಳ್ತಂಗಡಿ ತಾಲೂಕು ಶಕ್ತಿಕ್ಕ ಗ್ರಾಮದ ಒಳಂಬಳ ಎಂಬಲ್ಲಿರುವ ರಂಗಮಂದಿರ್ವ.ಗ. ಪ್ರತಿವಾದಿ ಯು. ಆರ್. ವೆಂಕಟೇಶರಿಗೆ.

ವಾದಿಯು ನಂದು ಮೇಲೆ ಡಿ.ಪ್ಲೊ. ನೋಟಿನಲ್ಲಿ ಬಾಕಿಯಾದ ಐವೇಜಿನ ಬಗ್ಗೆ ದಾವಲು ಮಾಡಿದ ದಾವೆಯು ತಾರೀಕು 6—12—1966ಕ್ಕೆ ನಿಮ್ಮ ಹಾಜರಾತಿಗೆ ಬರ್ಗೆ ಇಟ್ಟಿರುತ್ತದೆ. ಆದುದರಿಂದ ತಾರೀಕು 6—12—1966 ರಲ್ಲು ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಸ್ವತಃ ಯಾ ವಕೀಲರ ಮೂಲಕ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ದಾವೆಯನ್ನು ತೀರ್ಮಾನಿಸಲ್ಪಟ್ಟೀತು. ತಿಳಿದಂಡಿ.

(R.I.A. 2446/66 ರ ಆಜ್ಞೆಯ ಮೇರೆಗೆ)

(Sd) ಪಿ. ರಾಮಚಂದ್ರ ಭಟ್ಟ

ವಾದಿ ಕಡೆ ಎಡ್ವೋಕೇಟ್

ಪುತ್ತೂರು 18—11—66.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O.S. 420/66

ಪಳ್ಳಂ ಕುಂಞ ಜ್ಯಾರಿ ..ವಾ
ರಾಮಂಡ ಗೌಡ ಸೋ.. ಪ್ರತಿವಾದಿ

1ನೇ ಪ್ರತಿವಾದಿ. ರಾಮಂಡ ಗೌಡ ಸುಬ್ಬ ಗೌಡರ ಮಗ...ಮಂಡೆಕೋಲು ಗ್ರಾಮದವನಾಲು ಬೆಂಗಳೂರು ನಿವಾಸಿಗೆ ಕೋರ್ಟು ಸುಂಗಂ ಸ್ಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾ. 25—7—66ರಲ್ಲು ನೀವು ಕೂಡಾವಿದಿಗೆ ಬರಕೊಟ್ಟ ಎಳ್ಳದ ಗೈರಿ ಚೀಟು ಕಾರ 63—64ಕ್ಕೆ ಬರತಕ್ಕೆ ಒಂದು ವರ್ಷ ದ ಗಡಿನೆ ಬಾಕಿಗೆ ವಾದಿ ಕೂಡಿದ ಈ ದಾವೆಯನ್ನು ತಾ 7—12—66ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿನ ಈ ಕೋರ್ಟು ಮುಂದೆ ಹಾಜರಾಗಿ ಉದೆಸರ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿಯಕ್ಕೆ ಕಂಡಂತೆ ತೀರ್ಮಾನಿಸಲಾಗುವುದು.

(Sd) M. Sadashiva Rao
Vakil for Plff.

Puttur, 21—11—66.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬುರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶೆ

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

READ & ADVERTISE IN
NAVAYUGA WEEKLY

ಪ್ರಗತಿಪರ ರೈತರ ಜಿಲ್ಲೆ– ಮಂಡ್ಯ

(ಏಳನೇ ಪುಟದಿಂದ)

ಜನ್ ಗೊಬ್ಬರಗಳ ಬೇಡಿಕೆ ಕಡಿಮೆಯಾಗಿ (ಉದಾಹರಣೆಗೆ ಅಮೋನಿಯಂ ಸಲ್ಫೇಟ್) ಈಗ ರೈತರು ಯೂರಿಯಾ, ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್ ಇವುಗಳನ್ನು ಬಳಸತೊಡಗಿದ್ದಾರೆ.

ಸೇವಾ ಸಹಕಾರಿ ಸಂಘಗಳು

ರೈತರ ಅವಶ್ಯಕತೆಗಳನ್ನ ಸೇವಾ ಸಹಕಾರ ಸಂಘಗಳ ಮೂಲಕ ಒದಗಿಸುವ ಕಾರ್ಯದಲ್ಲಿ ಸಾಗಿ ಗಮನಾರ್ಹ ಪ್ರಗತಿಯನ್ನು ಈ ಜಿಲ್ಲೆಯಲ್ಲಿ ಸಾಧಿಸಲಾಗಿದೆ. ಬಿತ್ತನೆ ಬೀಜಗಳ ಮತ್ತು ಸಸ್ಯ ಸಂರಕ್ಷಕ ಪದಾರ್ಥಗಳ ಸರಬರಾಜು ಈಗ ಸೇವಾ ಸಹಕಾರ ಸಂಘಗಳ ಮೂಲಕವೇ ನಡೆಯುತ್ತಿದೆ. ಸಹಕಾರ ಸಂಘಗಳ ಪಾತ್ರ, ಬೇರೆ ಬೇರೆ ಬೆಳೆಗಳಿಗೆ ಬೇರೆ ಬೇರೆ ಬೇಸಾಯ ಪದ್ಧತಿಗಳು, ಸಸ್ಯರೋಗ ನಿವಾರಣೆ ಕ್ರಮಗಳು, ಭೂಮಿಯ ಸಾರ ಪರೀಕ್ಷೆ ಇತ್ಯಾದಿ ವಿಚಾರಗಳಲ್ಲಿ ಅಧಿಕಾರಿಗಳಿಗೆ ಹಾಗೂ ಇತರರಿಗೆ ತಂಬೇಕೆ ಕೊಡುವ ನಿರ್ದಿಷ್ಟ ಕಾರ್ಯಕ್ರಮವನ್ನೂ ಐ. ಎ. ಡಿ. ಸಿ. ರೂಪಿಸಿಕೊಂಡಿದೆ ಪ್ರತಿವರ್ಷ ಈ ಕಾರ್ಯಕ್ರಮ ನಡೆಯುತ್ತದೆ. ಈತರಬೇತಿ ಕಾರ್ಯಕ್ರಮಗಳು ಬೇಸಾಯ ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗಲು ತುಂಬಾ ಸಹಕಾರಿಯಾಗಿದೆ.

ಪ್ರತಿಯೊಬ್ಬ ರೈತನೂ ತನ್ನ ಭೂಮಿಯನ್ನು ಪರೀಕ್ಷೆ ಮಾಡಿಸಿ ಅಲ್ಲಿ ಯಾವ ಯಾವ ಬೆಳೆ ತೆಗೆಯಬಹುದೆಂಬ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಲು ಅವಕಾಶ ಪಡೆದಿದ್ದಾನೆ. ಮಂಡ್ಯ ಜಿಲ್ಲೆಗೆ ಪ್ರತ್ಯೇಕ ಭೂಪರೀಕ್ಷಾ ಪ್ರಯೋಗಾಲಯವನ್ನು ಸ್ಥಾಪಿಸುವುದಕ್ಕೆ ಎಂಜಿನಿಯರಿಂಗ್ ಕಛೇರಿಯ ಇದೂ ನಿರ್ಮಾಣ ಕಾರ್ಯ ಕೂಡ ಈ ಗಂಗಲೇ ಆರಂಭವಾಗಿದೆ. ಈ ಪ್ರಯೋಗಾಲಯ ಸಿದ್ಧವಾದ ನಂತರ ಭೂಪರೀಕ್ಷಾ ಕಾರ್ಯ ಹೆಚ್ಚು ಬಿರುಸಿನಿಂದ ನಡೆಯಲು ಅವಕಾಶವಿರುತ್ತದೆ.

ಈಗ ಮಂಡ್ಯ ಜಿಲ್ಲೆಯು ಬೇಸಾಯದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಆ ದೃಷ್ಟಿಯಿಂದ ಅಭಿವೃದ್ಧಿಯನ್ನು ತಡೆಯಲು ಹೊಂದಿರುವ ಮೂಲಭೂತವಾಗಿರುವ ದೃಷ್ಟಿಯಿಂದ ಒಂದು ಬಹುಮುಖ್ಯ ಸ್ಥಿತ್ಯಂತರವನ್ನು ಹೊಂದಿದೆ. ಬೇಸಾಯಕ್ಕೆ ಸಂಬಂಧ ಹೊಂದಿರುವ ವಿವಿಧ ಕೈಗಾರಿಕೆಗಳು ಬೆಳೆಯುವ ದೃಷ್ಟಿಯಿಂದಲೂ ಇದೀಗ ಅವಕಾಶಗಳು ಹಚ್ಚುತ್ತಿವೆ.

ರೈತನು ತನಗೆ ಲಭ್ಯವಿರುವ ಸಾಧನಗಳ ಪೂರ್ಣ ಪ್ರಯೋಜನ ಪಡೆದು ಅಧಿಕ ಆದಾಯ ಬೆಳೆಯು ಏಕ್ರಮವನ್ನು ಸ್ಥಾಪಿಸುವನೆಂಬ ನಿರೀಕ್ಷೆ ಇದೆ. ಮಂಡ್ಯ ಜಲ್ಲೆ ಮೈಸೂರು ರಾಜ್ಯದ ಕಣಜ ಎನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅಂತೆಯೇ ಮಂಡ್ಯ ಜಿಲ್ಲೆ ಒಂದು ಮಾದರಿ ರೈತ— ಸಂಸ್ಕೃತಿಯ ಕೇಂದ್ರವಾಗಿ ಬೆಳೆಯುವುದೆಂದೂ ಆಶಿಸಬಹುದಾಗಿದೆ.

ನಿತ್ಯ ಬರುವ ನೆಂಟ ನುಚ್ಚಿಗಿಂತ ಕಡೆ

(ನಾಲ್ಕನೇ ಪುಟದಿಂದ)

ಬೆಳಿಗ್ಗೆಯಿಂದು ನಾನು ಅಂತ ಈ ಬಂಧುಗಳ ಜಂಜಾಟ....'

"ಅಂದ್ರೆ ಅಭ್ಯಾಸ ಆಗಿ ಬಿಡುತ್ತೆ...."

"ಮೊತ್ತ ಮೊದಲು ಬಂಗಿರಿ ಹಿಗರೇಟು ಸೇದಿದಾಗ ಏನೋ ಒಂದು ತರಾ ಆಗುತ್ತೆ....ನಂತರ ಅದೇ ಪ್ರಕೃತಿ ವಿರೋಧವಾಗಿ ಈ ಸೇವನೆ ಶರೀರಕ್ಕೆ ಒಗ್ಗಿ ಹೋಗುತ್ತೆ ಅಂತೆ....ಹಾಗೆ.....ಹಾಗೆಯೇ ಎಬ್ಬಿಸೋದೂ ಒಂದು ಹಾಬ್ಬಿ ಆಗಿದೆ ಇದು ನನ್ನ ಬೇಶದದಲ್ಲಿ....'

"ಹೆಚ್ಚಾಯಿ...."

'ಏನು ಬೇಕಾದ್ರೂ ಇರ್ಲಿ ನನ್ಮೇಲೆ-? ನಮಗಂತೂ ಒಂದು ಬೇಡ ಸತ್ಯಾಗ್ರಹಾನೂ ಬೇಡ.'

"ಹ್ಞಾದ್ರಿ... ನಾವು ಬಾದು ಮಾಡೋದು ಮನ್ಗೆ ನವ್ಕ ಹುಡುಗ ಮನೇನೇ ಬಂದು ಮಾಡೋದು.... ಆಗ ನಾವೆಲ್ಲಿ ಹೋಗೋದು?....

"ಹ್ಞಹ್ಞಹ್ಞ... ತನ್ನ ಆಪ್ಪ ಬೇದಿ ಮಲಿ ಮೆರವಣಿಗೆ ಮಾಡಿ ಧಿಕ್ಕಾರ ಧಿಕ್ಕಾರಾಂತ ಕೂಗೋದನ್ನು ಕೇಳಿನ ಮಗ್ಗನಾಳೆ ತನ್ನ ಆಪ್ಪನಿಗೇ ಧಿಕ್ಕಾರ ಧಿಕ್ಕಾರಾಂತ ಯಾಕೆ ಕೂಗಾಡಬಾರದು? ..."

'ಸುಮ್ಮನಿರೀಧ್ರೆ... ನಿನ್ಮುಂದು ಇವತ್ತು ಈಗ್ಲೇ ಜಳೀ ಸುರುವಾಯ್ತು....'

"ನನಗೆ ದೀಪಕ್ಕೆ ಹೋಗಬೇಕು...."

ಪ್ರಕೃತಿಯು ಸೊಬಗು

ಸೊಬಗಿಗೆಲ್ಲಿ ಹದ್ದಿದೆ?
ಉತ್ತೆಗೆ ನಿಷೆ ಇಲ್ಲದಿರೆ
ಪೂರ್ವ ವೀಕ್ಷೆ ಮೆದ್ದಿದೆ!
ನೋಡಲು ಸೋಲೆತ್ತಿದೆ,
ಸುಮನೋಹರ ಪ್ರಕೃತಿ ನಗುತ–
ಕವಿ ಮನವನೆ ಕದ್ದಿದೆ!
ಸೊಬಗಿಗೆಲ್ಲಿ ॥

ಗಿರಿ ಮೈ ಕೊಡವೆದ್ದಿದೆ!
ಸೆರಗ ಜಾರಿ ಬಿದ್ದಿದೆ!
ಸಮಮಲಿಯುವ ಸದ್ದಿದೆ!
ಸಿರಿ ಸೊಬಗನು ಪ್ರೊದ್ದಿದೆ
ಸುರ, ಚಿರ, ವರಕರ ಪ್ರಕೃತಿಯು–
ಕವಿ ಮನವನೆ ತಾ ಸೆದ್ದಿದೆ!!
ಸೊಬಗಿಗೆಲ್ಲ॥

ಚಿರ ಮರ್ಮರ ಸದ್ದಿದೆ!
ಎಲರಲರನು ತಿದ್ದಿದೆ!
ಹುಂಬಿ ಬಳಿಗೆ ಪೊದ್ದಿದೆ!
ಪುಂಗವರ ವಂದ್ದಿದೆ!
ನಂದದ ಆನಂದ ಬುಗ್ಗೆ—
ವಿವನಗಳೆದ್ದಿದೆ!!
ಸೊಬಗಿಗೆಲ್ಲಿ ॥

ಕನು ಕಣ್ಣ ತಿದ್ದಿದೆ
ಸೊಗದು ಸುಳಿದೆದ್ದಿದೆ!
ಭಾವಕರೆದೆ ಗೆದ್ದಿದೆ.
ದುಗುಡವ ನೆಗೆದೊದ್ದಿದೆ!
ಪ್ರಕೃತಿಯೆದ್ದು ಕವಿಯುದೆಯನು–
ರಸಕ್ಕಿಪ್ಪಿಯೊಳದ್ದಿದೆ!!
ಸೊಬಗಿಗೆಲ್ಲಿ ॥

—"ಪ್ರೇಮೂರ್ತ."

"ನಾನೂ ಬರ್ತೀನಿ...'

"ಚಳಿಯೂಗುತ್ತೆ ಇಂತಂತಿ ...'

'ಇಲ್ಲಿ ಬನ್ನೀಧ್ರೆ...."

"ಅಯ್ಯೋ....ನಿನ್ನ ದೊಂದು....'

'ಹೌದು....ನನ್ನದಿದ್ದೇ ಒಂದು.'

"ಅಯ್ಯೋ...."

'ಇದಕ್ಕೇ ಬಂದ್ದೇ ಇಲ್ಲ...ನಿತ್ಯ ನೆಂಟ ನಾದ್ರೂ ಮೂಗಿಕ್ಕಕ್ಕೂ ಮಿಗಿಲು...?"

—ಗೋರಾ.



ಜಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾವ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಪೂಲುಕೋಟೆ, ಉಡುಪಿ, ದ. ಕನ್ನಡ

ಉಡುಪಿ ತಾಲೂಕು ಯುವಕ ರೈತ ಮೇಳ

ಉಡುಪಿ, ಏ. 15, ಉಡುಪಿ ಕಾಫಿ, ಬ್ರಹ್ಮಾವರ ಮತ್ತು ಬಾರಕೂರು ನಿರ್ದೇಶಿತ ಯೋಜನಾ ಕ್ಷೇತ್ರಗಳ ತಾಲೂಕಿನ ಎಲ್ಲಾ ಯುವಕ ರೈತ ಬೆಳೆಗಳ ಉಡುಪಿ ತಾಲೂಕು ಅಭಿವೃದ್ಧಿ ಅಧಿಕಾರಿ ಶ್ರೀ ಎಂ. ಪದ್ಮರಾಜ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ. ಜಿಲ್ಲಾ ವೈದ್ಯಾಧಿಕಾರಿ ಡಿಪ್ಟಿ ಡೈರೆಕ್ಟರ್ ಶ್ರೀ ಜಿ. ಬಿ. ನಾಗರಾಜರವರು ಮೇಳವನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ಹೀಗೆ ಯುವಕರು ಕೃಷಿಯಲ್ಲಿ ಆಸಕ್ತಿ ವಹಿಸಲು ಮುಖ್ಯ ಕಾರಣವೆಂದರೆ ಸುಂದರವಾದ ಅವರು ರೈತರು ಕಂಬಾ ಗೂಬಾ ಗಳನ್ನು ಆಸಕ್ತಿಯಿಂದ ಬೆಳೆಸಬೇಕು. ಬೇರೆ ಬೇರೆ ಬೆಳೆಗಳನ್ನು ಉದಾಹರಣೆಗಾಗಿ ಸಬೇಕು ಎಂದು ನುಡಿದರು. ಈ ಸಂದರ್ಭದಲ್ಲಿ ಬೆಂಗಳೂರಿನ ಗೋಪಾಲಾಚಾರಿಯರು ಗೇರ್ಟರದ ಕಾರ್ಯ ವಿವರ ನೀಡಿದರು.

ಅಧ್ಯಕ್ಷರ ಭಾಷಣದಲ್ಲಿ ರೈತರಿಂದ ಸಿಬೆರಿಕೆ ಅಗಾ ಮಾಡಿಸಲಿಕ್ಕೆ ಬೇಕಾಗಿ ಹೀಗಾದರೆ ಆಯಿ ಸಿಕ್ಕಿತ್ತು ಸಂಘಕ್ಕೆ ಬಂದು ಹೇಳಿದರು ಮಾತ್ರಕ್ಕೆ ಸಿಬ್ಬಂದಿಗಳಿಗೂ ಸಮಸ್ಯೆಯಾಗುವ ಸಂಭವವಿದೆ. ಆದ್ದರಿಂದ ಸಾಧ್ಯವಾದಷ್ಟು ಕೃಷಿಕರೇ ಬೇಕಾದ ಸಾಮಗ್ರಿಗಳನ್ನು ಸಂಘಕ್ಕೆ ಬಂದು ಕೊಂಡು ಹೋಗಬೇಕೆಂದು ಸಲಹೆ ನೀಡಿದರು. ಸಮಾಜ ಶಿಕ್ಷಣಾಧಿಕಾರಿ ಶ್ರೀ ಎಂ. ವೆಂಕಟ್ರಮಣ ಗೌರವ ಧನ್ಯವಾದ ಸಮರ್ಪಿಸಿದರು.

ಸಮಾರೋಪ ಸಮಾರಂಭ

ತಾಲೂಕು ಮಟ್ಟದ ರೈತ ಸಮ್ಮೇಳನದ ಸಮಾರೋಪ ಕಾರ್ಯಕ್ರಮ ತಾ. 16-4-61 ರಂದು ಶ್ರೀ ಟಿ. ಎ. ನೈಮುನ್ನ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ವಿದ್ಯಾರ್ಥಿ ಜಿ. ಶ್ರೀನಾರಾಯಣ ನಾಯಕರವರು ಸ್ವಾಗತ ಭಾಷಣ ಮಾಡಿದರು. ಅನಂತರ ಇಲಾಖೆಯ ಕಾರ್ಯಕರ್ತರಾದ ಶ್ರೀ ರಂಗಣ್ಣನವರು ವ್ಯಾಖ್ಯಾನಕಾರರಾಗಿ ಮಾತನಾಡಿದರು.

ಅಧ್ಯಕ್ಷರು ಮಾತನಾಡುತ್ತಾ, ಈ ಸೀಮೆಯ ಅಮೂಲ್ಯ ಸಮಸ್ಯೆಯನ್ನು ಬಗೆಹರಿಸಲು ಇಲಾಖೆಯ ಕೆಲಸಗಳನ್ನು, ಸರ್ಕಾರದ ಪ್ರಗತಿಕ ಸಾಲಸೌಲಭ್ಯ ಬೇರೆ ದೇಶಗಳನ್ನು, ಅವುಗಳ ನಾವು ಅಳವಡಿಸಿಕೊಳ್ಳಬೇಕಾದ ವಿಷಯಗಳನ್ನು ವಿವರಿಸಿ ಮಾತನಾಡಿದರು. ಕೊನೆಯಲ್ಲಿ ಅವರು ಮಾತನಾಡುತ್ತಾ ಕೃಷಿಕರು ಸಂಘಕ್ಕೆ ಬಂದು ಸಲಹೆ ಪಡೆಯಲು ಸಂಕೋಚಪಡಬಾರದೆಂದೂ ಸಂಘದ ಸಿಬ್ಬಂದಿಗಳು ಕೃಷಿಕರಿಗೆ ಸಹಾಯ ಮಾಡಲು ಸಿದ್ಧರಿರಬೇಕೆಂದೂ ಹೇಳಿದರು. ಕೃಷಿಕರಿಗೆ ಮಾರ್ಗದರ್ಶನ ನೀಡುವಲ್ಲಿ ಅವರ ಯೋಜನೆಗಳಿಗೆ ಸಹಕಾರ ನೀಡಿದರು.

ದ. ಕ. ಜಿಲ್ಲಾ ವೈದ್ಯಾಧಿಕಾರಿ ಶ್ರೀ ನಾರಾಯಣ ಕೃಷ್ಣರವರು ಭಾಷಣ ಮಾಡಿ ಇಲ್ಲಿನ ಮಣ್ಣಿನಲ್ಲಿ ಸಾರವಿಲ್ಲದ ಅಂಶವು ಕಡಿಮೆಯಿದ್ದು ಗೊಬ್ಬರದ ಪ್ರಯೋಗವನ್ನು ನಾವು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ಹೇಳಿದರು.

ಅಂತ್ಯದಲ್ಲಿ ಶ್ರೀ ಎಂ. ವಿ. ಗೌಡರು ಧನ್ಯವಾದ ಸಮರ್ಪಿಸಿದರು.

ಎಲ್ಲೆಲ್ಲಿ ಏನೇನು?

ಕನರಾ ಬೇಂಕಿನ ಪಜ್ರೋತ್ಸವ ಸಮಾರಂಭ

ಶ್ರೀ ಅಮ್ಮೆಂಬಳ ಸುಬ್ಬರಾವ್ ಪೈಗಳಿಂದ 60 ವರ್ಷಗಳ ಹಿಂದೆ, 1906ರಲ್ಲಿ ಸ್ಥಾಪಿಸಲ್ಪಟ್ಟು ಪ್ರಗತಿಪರವಾಗಿ ಬೆಳೆದ ಕೆನರಾ ಬೇಂಕಿನ ವಜ್ರೋತ್ಸವದ ಸಲುವಾಗಿತ್ತಾ. 17ರಂದು ರಾತ್ರಿ ಪತ್ರಿಕಾಗೋಷ್ಠಿಯೊಂದು ಮಂಗಳೂರಿನ ವುಡ್‌ಸೈಡ್ ಹೋಟೆಲಿನಲ್ಲಿ ಜರಗಿತು. ಬೇಂಕಿನ ಅಧ್ಯಕ್ಷರಾದ ಶ್ರೀ. ಕೆ. ಪಿ. ಜಿ. ಪ್ರಭು ಗಳು ಪತ್ರಿಕಾ ಪ್ರತಿನಿಧಿಗಳನ್ನು ಸ್ವಾಗತಿಸಿ ಬ್ಯಾಂಕಿನ ಬೆಳವಣಿಗೆಯನ್ನು ವಿವರಿಸಿದ ಜ್ಞಾಪನೆಯ ಅಂಗವಾಗಿ ಅವರು ಕೈಕೊಳ್ಳಲಿರುವ ನೇಮಗಳನ್ನು ತಿಳಿಸಿದರು.

ಕೆನರಾ ಬೇಂಕಿನಮೊದಲಬ್ರಾಂಚ್ ಇರುವ ಬಿ ಒಂದು ಪುಸ್ತಕ ಭಂಡಾರ ಹಾಗೂ ಮಳಿಗೆ ಆಟಕೆ ಜೊಂಟಿಗಳ ಕೇಂದ್ರವನ್ನು ರಚಿಸುವುದು; ಬೇಂಕಿನ ಕೆಳವರ್ಗದ ನೌಕರರಿಗೆ ಮನೆಕಟ್ಟಲು ಸಹಾಯ; ಸುರತ್ಕಲಿನ ಇಂಜಿನಿಯರಿಂಗ್ ಕಾಲೇಜು, ವೈಶ್ಯಕೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಬಡಮೂಲಗಳಿಗೆನ್ನು ನೀಡುವುದು; ಶ್ರೀನಿವಾಸ ಮಲ್ಯಾಸ್ಪತ್ರೆಗೆ ಸಹಾಯ; ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುವ ಕಾಮರ್ಸ್ ಪದವೀಧರರಿಗೆ ರೂ. 100 ನಗದು ಬಹುಮಾನ — ಇವು ಪ್ರಾಮುಖ್ಯ ಸೇವಾ ಕಾರ್ಯಗಳು. ಆನಂತರ ಸಂಸ್ಥೆಯ ಪ್ರಗತಿನಿಧಿಗಳು ಕೇಳಿದ ಪ್ರಶ್ನೆಗಳನ್ನು ಉತ್ತರಿಸುತ್ತ, ಇಂದಿನ ಪರಿಸ್ಥಿತಿಯಲ್ಲಿ ಕೆನರಾ ಬೇಂಕಿನಂಥ ವ್ಯಾಪಾರೀ ಬೇಂಕುಗಳು ರೈತರಿಗೆ ಕೃಷಿ ಕೈಗಳಗಾಗಿ ಸಾಲ ನೀಡಲು ತಕ್ಕವಾಗಿಲ್ಲ — ಎಂದರು.

ಬೇಂಕಿನ ಡೈರೆಕ್ಟರರಿಗೆ ಶುಭಾರಂಭೆ

ಕೆನರಾ ಬೇಂಕಿನ ಅಧ್ಯಕ್ಷ ಹಾಗೂ ಡೈರೆಕ್ಟರ್‌ರನ್ನು ಸನ್ಮಾನಿಸಿ, ಬೀಳ್ಕೊಡಲೆಸಿ ಸಭೆಸಲು ಸಮಾರಂಭವು ತಾ. 18ರಂದು ನಗರ ಸಭಾಧ್ಯಕ್ಷೆ ಶ್ರೀ ಜಿ. ಸೋಮೆಶ್ವರರಾಯರ ಅಧ್ಯಕ್ಷತೆಯಲ್ಲಿ ಕೆನರಾ ಪೈ ಸ್ಕೂಲಿನ ಪಠಾರದಲ್ಲಿ ಜರಗಿತು.

ಸಮಾರಂಭದಲ್ಲಿ ಪ್ರಾರ್ಥನೆಯಾದ ಮೇಲೆ ಸನ್ಮಾನ ಸಮಿತಿಯ ಪರವಾಗಿ ಶ್ರೀ ಯು. ರಾಜಾರಾಯರು ಮಲ್ಯರು ಸ್ವಾಗತಿಸಿದರು. ಆನಂತರ ಶ್ರೀ. ಬಿ. ಮಂಜಯ್ಯ ಹೆಗ್ಡೆ ಶ್ರೀ ಆರೂರು ಶ್ರೀನಿವಾಸರಾವ್, ಶ್ರೀ ದೇವದಾಸ ಗಿರಿಧರ ಲಾಲ್ ಚಂದ್ರಾನ, ಶ್ರೀ ಬಿ. ಎಂ. ಇದಿನಬ್ಬ, ಡಾ| ಎಂ. ಪಿ. ಪೈ ಮತ್ತು ಶ್ರೀ ಬಿ. ಆರ್. ಕಾಮತರಯರು ಮಾತನಾಡುತ್ತಾ ಬೇಂಕಿನ ಸ್ಥಾಪಕರಿಗೆ ಧನ್ಯತೆ, ಸಲ್ಲಿಸಿದ ಸೇವೆ ಇತ್ಯಾದಿಗಳನ್ನು ಶ್ಲಾಘಿಸಿದರು.

ಎನ್. ಸಿ. ಸಿ. ವಾರ್ಷಿಕೋತ್ಸವ

ಮಂಗಳೂರು, ನ. 22 — ಎನ್. ಸಿ. ಸಿ. ಯ ೧೪ನೇ ವಾರ್ಷಿಕೋತ್ಸವದ ಅಂಗವಾಗಿ ಇಲ್ಲಿಯ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಎನ್. ಸಿ. ಸಿ. ವಿಭಾಗಗಳಿಂದ ಕ್ಯಾಡೆಟ್ಟುಗಳು ತಾ. 20ರಂದು ಆಣಕು ಯುದ್ಧವನ್ನು ಪ್ರದರ್ಶಿಸಿದರು.

ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ಕ್ಯಾಡೆಟ್ಟುಗಳ ಉತ್ತಮ ಪ್ರದರ್ಶನವನ್ನು ಪ್ರಶಂಸಿಸಿ ದೇಶದ ಹಿತಕ್ಕಾಗಿ ಪಡೆಯುವಂತೆ ಸಲಹೆ ನೀಡಿದರು.

ಎನ್. ಸಿ. ಸಿ. ಫೈರ್‌ಕ್ಟರ್ — ಜನರಲ್ ರವರ ಸಂದೇಶವನ್ನು ಓದಲಂಬಿಸಿದ. ಹಿರಿಯ ಅಧಿಕಾರಿ ಮೇಜರ್ ಅಮ್ಮಣ್ಣಾರಾಯರು ಕಾರ್ಯಕ್ರಮದ ನಾಯಕತ್ವವಹಿಸಿದ್ದರು.

ಪಕ್ಷಾತೀತ ಸಭೆಯಲ್ಲಿ ನಿರ್ಣಯ
ಕಾಸರಗೋಡು ಕರ್ನಾಟಕಕ್ಕೆ ಸೇರಲಿ

ಕೇರಳ ಗಡಿ ಪ್ರದೇಶದಲ್ಲಿನ ಕನ್ನಡಿಗರ ತಾ. 18ರಂದು ಪಕ್ಷಾತೀತ ಸಾರ್ವಜನಿಕ ಸಭೆಯೊಂದು ಡಿ. ಕೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಕಾಸರಗೋಡು ಕರ್ನಾಟಕದಲ್ಲಿ ಸೇರುವ ಕಾಲ ಸನ್ನಿಹಿತವಾಗುತ್ತಿದೆ ಎಂದೆಂ, ಮುಂಬರುವ ಚುನಾವಣೆಯಲ್ಲಿ ಶಕ್ತಿ ಮೀರಿ ದುಡಿಯುಬೇಕೆಂದೂ ಕಾಸರಗೋಡಿನ ಜನತೆಗೆ ಆಗಿರುವ ಅನ್ಯಾಯವನ್ನು ಏಕ ಸದಸ್ಯ ಆಧಾರದ ಮುಂದೆ ಸಾಧ್ಯ ರೀತಿಯಿಂದ ನ್ಯಾಯವಾದಿಸಬೇಕೆಂದೂ ಹೇಳಿದರು.

ಡಾ| ಕೆ. ಶಿವರಾವು ಕಾರಂತರು ಮೊತ್ತ ನಾಡುತ್ತ, ಕಾಸರಗೋಡಿನಲ್ಲಿ ಶಾಲೆಯುವ ಬಗ್ಗೆ ಕನ್ನಡಿಗರು ಒಮ್ಮತ ಮೂಡಬೇಕಾದ ಪ್ರಯತ್ನವನ್ನು ವಿವರಿಸಿದರು. ಮಾಜೇಶ್ವರ ವಿಭಾಗಾಧಿಂದಬೇಕೇರಳ ವಿಧಾನ ಸಭೆಯ ಸದಸ್ಯರಾಗಿದ್ದ. ಶ್ರೀ ವಿ. ಮಹಾಬಲಭಂಡಾರಿಯವರು, ಕಾಸರಗೋಡು ಕರ್ನಾಟಕಕ್ಕೆ ಸೇರಿಸುವ ವಿಚಾರದಲ್ಲಿ ಆ ಭಾಗದ ಜನರು ತೆಳೆದುಂಡ ಕಾರ್ಯಕ್ರಮಗಳನ್ನು ವಿವರಿಸಿದರು.

ಸಂತರ ಕಯ್ಯಾರ ಕಿಂಞಣ್ಣರೈ, ಬಿ. ಕುಟಿಕಳ್ಳಾಯ, ಡಾ| ಪಿ. ಎನ್. ಭಟ್ಟ, ಪ್ರಿನ್ಸಿಪಾಲ್ ಶ್ಯಾಮ್ ಭಟ್, ಡಾ|| ಅನಂತ ರಾಮಯ್ಯಶೆಟ್ಟಿ, ಸುಬ್ಬಯ್ಯ ನಾಯಕ್, ಎಂ. ಎಲ್. ಎ. ಮೊದಲಾದವರು ವಿಕಸಭಾಧ್ಯಕ್ಷರಿಗೆ ಮುಂದೆ ವಂಡಿಸಬೇಕಾದ ವಿಷಯ ಹಾಗೂ ಮುಂದಿನ ಕಾರ್ಯಕ್ರಮಗಳ ಕುರಿತು ಚರ್ಚಿಸಿದರು.

ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ವಿನಂತಿಸಿರುವ ಶ್ರೀ ಬಿ. ವಿಠಲದಾಸ ಪೈ ಬಿಲ್ಲುರು ಮುಂದಿಸಿದ ನಿರ್ಣಯವು ಸರ್ವಾನುಮತದಿಂದ ಮೂಸ್ಯವಾಯಿತು.

ಮೆಂಬರಬಯಿಗೆ ಹೋಗುವ
ಪ್ರಯಾಣಿಕರಿಗೆ ಸೂಚನೆ

ತಾವುಗಳೆಲ್ಲಿ ಹರಿಪರ ಸೂಗರವಾಗಿ ಹೋಗುವ ಸರಿಯಷ್ಟೆ. ಆದರೆ ಬಸ್‌ಸ್ಟ್ಯಾಂಡಿನಲ್ಲಿ ಇಳಿದ ಕೂಡಲೇ ಕೆಲವು ಟ್ರಾಲ್‌ಕರುಗಳು ಬಂದು ಬೊಂಬಾಯಿಗೆ ಅಗ್ಗದ ಟಿಕೆಟ್ ಕೊಂಡಿದೆ; ರೈಲುಬಂಡಿ ಸಿದ್ಧವಿಲ್ಲವೇ ಕರಕೊಂಡು ಹೋಗುವ ಸಾಧ್ಯತೆ ಮತ್ತು ಬಲ್ಲಾಳ್ ಬಸ್ಸು ಬಂದು ನಿಂತಿದೆ ಸೀಟು ಖಾಲಿ ಇದೆ, ಅಂತ ಹೇಳಿ ನಂಬಿಸಿ ಸೆಕೆಂಡ್‌ಗಳನ್ನು ಕಂಡುಂಡು ಹೋಗುತ್ತಾರೆ. ಸ್ವಲ್ಪ ದೂರ ಹೋದ ಕೂಡಲೆ ಆ ಭ್ರಾಂತೀಕರು ನಾಪತ್ತೆ. ಅನೇಕರೆ ಕೈಯಲ್ಲಿ ಇರುವಷ್ಟಲ್ಲ ಕಳಕೊಂಡ ನಾಲ್ಕು ದಿನಗಳಲ್ಲಿ ದುಡ್ಡೆತ್ತಿ ಕೊಂಡು ಬೊಂಬಾಯಿಗೆ ಹೋಗವರು ಎಷ್ಟೋಜನರಿಂದ ಅದ್ದರಿಂದ ಇನ್ನು ಮೇಲಾದರೂ ಅವಸರ ಯಾವ ಬಸ್ಸು ನಿಲ್ದಾಣದಲ್ಲಿ ಬಂದು ನೇರ ಬಸ್ಸು ರೈಲು ನಿಲ್ದಾಣಕ್ಕೆ ಹೋಗಬೇಕೆಂದು ಸೂಚಿಸುತ್ತೇನೆ.

ಕೆ. ಬಾಬು ಆಚಾರಿ,
ಹರಿಪರ

ಪಂಪ್ಸೆ ರಸ್ತೆಯ ದುರವಸ್ಥೆ

ಪಂಪ್ಸೆ ರಸ್ತೆ ಮೊದಲೇ ಅಗಲ ಕಿರಿದಾದುದು. ಇತ್ತೀಚೆಗೆ 2—3 ವರ್ಷಗಳಿಂದ ಅದರ ರಿಪೇರಿಯೇ ನಡೆದಿಲ್ಲ. ರಸ್ತೆ ಬದಿಯಲ್ಲಿ ವರ್ಷಗಟ್ಟಲೆಯಿಂದ ರಾಶಿ ಮಾಡಿರುವ ಜಲ್ಲಿಕಲ್ಲಿನಿಂದಾಗಿ ಎಲ್ಲೆಡೆಯೂ ತುಂಬಾ ಇಕ್ಕಟ್ಟಾಗಿದೆ. ಈ ನೂಗುವಾಗಿ ಓಡಾಡುವ ಬಸ್ಸು, ಲಾರಿ, ಕಾರು, ಜೀಪುಗಳಿಗೇನೂ ಕಡಿಮೆ ಇಲ್ಲ. ಆದರೂ ರಸ್ತೆಯ ದುರವಸ್ಥೆಯನ್ನು ಯಾರೂ ಗಮನಿಸಿದಂತೆ ತೋರುವುದಿಲ್ಲ. ವಾಹನ ಚಾಲಕರ ಪರಿಸ್ಥಿತಿಯನ್ನು ಸಾರ್ವಜನಿಕರಿಗೆ ದುರವಸ್ಥೆಯನ್ನೂ ನೋಡಿದರೆ "ದೇವರೇಗತಿ" ಎನ್ನಬೇಕಾಗುತ್ತದೆ. ಸಂಬಂಧಪಟ್ಟವರು ಇನ್ನಾದರೂ ಈ ಕಡೆಗೆ ಶೀಘ್ರಗಮನ ಹರಿಸುವರೆ?

ಬೋರ್ಡುಗಳ ಪೈಪ್ಲೈನಿನ ಪುನರ್ರಚನೆ

ಬಾಡುವಿ ಬೋರ್ಡು ಪಯಂ ನಿತಂಡಂ ಪೈಪಿನ ಪುನರ್ರಚನಾ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕ ಸಭೆಯೊಂದು ತಾ. 16ರಂದು ಶ್ರೀ ಸುಬ್ಬರಾಜ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ರಾಜಾಸ್ಥಾನ ಮೈಕ್ರೋಸಿಸ್ಟಾಮ್ಸ್ ಪ್ರೈವೇಟ್ ಲಿಮಿಟೆಡ್ ಅಹಮದಾಬಾದ್ ಇದರ ಪ್ರತಿನಿಧಿಗಳಾದ ಶ್ರೀ ಎಸ್. ಎಸ್. ಭಾಟಿಯಾ ಮತ್ತು ಶ್ರೀ ಎಸ್. ಎಸ್. ಮೆಹತಾ ಇವರು ಸಭೆಗೆ ಹಾಜರಿದ್ದರು. ಸಭೆಯಲ್ಲಿ ಸುಮಾರು 200 ಸಾರ್ವಜನಿಕರಿಗೆ ಮೇಲ್ಪಟ್ಟು ಈ ಪಥಕ್ಕೆ ಕಟ್ಟಡವನ್ನು ತೆಗೆದು ಹಾಕಿ ಸುಸೂತ್ರ ಒಂದು ಲಕ್ಷ ರೂ. ವೆಚ್ಚದಲ್ಲಿ 12 ಕೊಡಪಿ ಹಾಗೂ ಬಯಲು ರಂಗಮಂದಿರವನ್ನು ರಚಿಸುವುದು ಅವಶ್ಯವೆಂದರು.

ಬಳಕ ಈ ಬಗ್ಗೆ ಬೇಕಾಗುವ ರೂ. ಒಂದು ಲಕ್ಷದಲ್ಲಿ 10 ಸಾವಿರ ರೂ. ಸಾರ್ವಜನಿಕರಿಂದ ಸಂಗ್ರಹಿಸಬೇಕೆಂದೂ ಉಳಿದುದನ್ನು ಸರಕಾರ ಹಾಗೂ ತಾಲೂಕು ಬೋರ್ಡ್ ಒದಗಿಸಿ ಕೊಡಬೇಕೆಂದೂ ಕೇಳಿಕೊಳ್ಳಲಾಯಿತು.

ಕೊನೆಗೆ ಶ್ರೀಗಳಾದ ಟಿ. ಎ. ಪೈ ಅಧ್ಯಕ್ಷ, ಎಂ. ಮಧ್ವರಾಜ ಎಂ. ಎಲ್. ಎ ಕೋಸಾಧಿಕಾರಿ, ಆರೂರು ಲಕ್ಷ್ಮೀನಾರಾಯಣರಾವ್ ಮತ್ತು ರೋಕಪೆರ್ನಾಂಡೀಸ್ ಉಪಾಧ್ಯಕ್ಷರು, ಬಿ. ಎನ್. ಆಚಾರ್ಯ ಕಾರ್ಯದರ್ಶಿ, ಕು. ಶಿ. ಹರಿದಾಸ್ ಭಟ್ಟ, ಶ್ರೀ ಪಕಿ ಆಚಾರ್ಯ, ಬಿ. ಕಾಳಪ್ಪ ಶೆಟ್ಟಿ, ಟಿ. ರಮೇಶ ಪೈ, ಡಾಲ್ಫಿ ಕೆ. ಆಚಾರ್ಯ, ಎಸ್. ಎಲ್. ನಾರಾಯಣ ಭಟ್ಟ, ಕೆ. ಸಂಜೀವ ಶೆಟ್ಟಿ, ಎಂ. ಆರ್. ಕಾನಾಡ್ ಮತ್ತು ಆನಂಡ ಕುಂಡ ಹೆಗ್ಡೆಯವರು ಸದಸ್ಯರಾಗಿರುವ ಸಮಿತಿಯೊಂದನ್ನು ರಚಿಸಲಾಯಿತು. ಅಂತ್ಯದಲ್ಲಿ ಶ್ರೀ ಬಿ. ಎನ್. ಆಚಾರ್ಯರುವಂದು ನೆಗಳನ್ನರ್ಪಿಸಿದರು.

ಕರ್ನಾಟಕ ಪ್ರಾದೇಶಿಕ
ಆಯುರ್ವೇದ ಮಂಡಲದ ನಿಯೋಗ

ಕರ್ನಾಟಕ ಪ್ರಾದೇಶಿಕಆಯುರ್ವೇದ ಮಂಡಲದ ಮಂತ್ರಿಯಿಂದ ಅದರ ಸ್ಥಾಯಿ ಸಮಿತಿಯ ಬಿಜಾಪುರದ ಪರಿನಿಧಿಗಳ ನಿರ್ಣಯದಂತೆ ಶ್ರದ್ಧಾಶೀಲ ಎಂ. ಸಿ. ಮೋದಿ, ಡಾ| ಬಿ. ಆರ್. ಹರಿದಾಸ (ಅಧ್ಯಕ್ಷ) ಡಾ| ಎ. ವಿ. ಗದಗ ಮತ್ತು ಡಾ| ಎನ್. ಪಿ. ಉಪಾಧ್ಯಾಯ (ಕಾರ್ಯದರ್ಶಿ) ಇವರುಗಳ ಒಂದು ನಿಯೋಗವು ತಾ. 7-11-1966ರಂದು ಬೆಂಗಳೂರಿನಲ್ಲಿ ಆರೋಗ್ಯ ಮಂತ್ರಿ ಡಾ| ಶೀ. ನಾಗಪ್ಪ ಆಳ್ವ ಇವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಒಂದು ನಿವೇದನ ಪತ್ರವನ್ನರ್ಪಿಸಿತು.

ಆರೋಗ್ಯ ಮಂತ್ರಿಗಳು ಆಯುರ್ವೇದದ ಪ್ರಗತಿಗಾಗಿ ಇತ್ತೀಚೆಗೆ ಆಗಾಗ ಕೊಟ್ಟಿರುವ ಹೇಳಿಕೆಗಳನ್ನು ಮಂಡಲವು ಸ್ವಾಗತಿಸುತ್ತದೆ. ಆದರೆ ಅವುಗಳು ಈ ವರೆಗೂ ಹೇಳಿಕೆಗಳಾಗಿವೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲವೆಂಬುದನ್ನೂ ಮತ್ತು ಆಯುರ್ವೇದ ವಿಜ್ಞಾನದಲ್ಲಿ ಸರಕಾರವು ತೋರಿಸುತ್ತಿರುವ ಮಲತಾಯಿ ಧೋರಣೆಯನ್ನೂ ತಿಳಿದು ವಿಷಾದಿಸುತ್ತದೆ. ಆಯುರ್ವೇದದ ಪ್ರಭಿನ್ನ ದೃಷ್ಟಿಯ ಸಲುವಾಗಿ ಈ ಕೆಳಗಿನ ಸೂಚನೆಗಳನ್ನು ಸರಕಾರವು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸಿತು.

1. ಸರಕಾರವು ಅಖಿಲ ಭಾರತದ ಮಟ್ಟದಲ್ಲಿ ಆಯುರ್ವೇದ ಪದವಿ ಶಿಕ್ಷಣವನ್ನು ಕೂಡಲೇ ಪ್ರಾರಂಭಿಸಬೇಕು. ಜಮ್ಮು ಅಂಗೀಕರಿಸಿದ ಪಾರ್ಲೆಕ್ಯಮವನ್ನು ಆಗಾಗ ಬದಲಾಯಿಸಬಾರದು.

2. ಆಯುರ್ವೇದ ಕಾಲೇಜ್‌ಗಳಿರುವ ಸ್ಥಳಗಳಲ್ಲಿ ಕನಿಷ್ಠ ಪಕ್ಷ ಒಂದನ್ನಾದರೂ ಒಳ ರೋಗಿಗಳಿರುವ ಆಸ್ಪತ್ರೆಗಳನ್ನು ಸ್ಥಾಪಿಸಿ, ಮೆಡಿಕಲ್ ಕಾಲೇಜುಗಳಿಗೆ ಸಂಯೋಜಿಸಿದ ಆಸ್ಪತ್ರೆಗಳಂತೆಯೇ ಈ ಆಸ್ಪತ್ರೆಗಳ ಸಂಪೂರ್ಣ ಖರ್ಚನ್ನು ಸರಕಾರವೇ ವಹಿಸಿಕೊಳ್ಳಬೇಕು. ಕಾಲೇಜುಗಳನ್ನು ಅಭ್ಯಾಸಕ್ಕೆ ಯೋಗ್ಯವಾಗುವಂತೆ ಸರ್ವ ಸಲಕರಣೆಗಳಿಂದ ಕೂಡಿಡಬ್ಬುಗಳನ್ನಾಗಿ ಮಾಡಿ ಅವುಗಳಿಗೆ ಉದಾರವಾದ ಸಹಾಯ ಧನವನ್ನು ಮಂಜೂರು ಮಾಡಬೇಕು.

3. ವೇತನ ಮತ್ತು ಸ್ಥಾನಮಾನಗಳಲ್ಲಿ ಆಯುರ್ವೇದ ಪದವೀಧರರು ಮೆಡಿಕಲ್ ವಿಜ್ಞಾನ ಪದವೀಧರರಿಗೆ ಸಮಾನರೆಂದು ಪರಿಗಣಿಸಬೇಕು.

4. ಆಯುರ್ವೇದದಲ್ಲಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗಳ ಸಲುವಾಗಿ ಬೆಂಗಳೂರಿನಲ್ಲಿ ಒಂದು ಸಂಸ್ಥೆಯನ್ನು ಕೂಡಲೇ ಸ್ಥಾಪಿಸಬೇಕು.

5. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಧಾನ ನಗರಗಳಲ್ಲಿ ಆಯುರ್ವೇದ ಆಸ್ಪತ್ರೆಗಳನ್ನೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಯುರ್ವೇದ ಔಷಧಾಲಯಗಳನ್ನೂ ಸ್ಥಾಪಿಸುವ ಸಲುವಾಗಿ ಒಂದು ಮೂರ್ ಪ್ಲಾನನ್ನು ಸರಕಾರವು ಕೂಡಲೇ ತಯಾರಿಸಬೇಕು.

6. ರಾಜ್ಯದಲ್ಲಿರುವ ಆಯುರ್ವೇದ ಸಂಸ್ಥೆಗಳ ಮೇಲ್ವಿಚಾರಣೆಯ ಸಲುವಾಗಿ ಆಯುರ್ವೇದ ಶಾಖೆಯನ್ನು ಈಗಿರುವ ಮೆಡಿಕಲ್ ಶಾಖೆಯಿಂದ ಪ್ರತ್ಯೇಕಿಸಿ ಆಯುರ್ವೇದ ಶಾಖೆಗೆ ಸ್ವತಂತ್ರ ನಿರ್ದೇಶಕನಾಗಿ ಒಬ್ಬ ನುರಿತ ಆಯುರ್ವೇದ ಪದವೀಧರನನ್ನೂ ಕೂಡಲೇ ನೇಮಿಸಬೇಕು.

7. ಆಯುರ್ವೇದ ವೈದ್ಯರ ರಿಜಿಸ್ಟ್ರೇಶನ್ ಕಾನೂನು ಪತ್ರ ನಿಯಮಗಳು ಜಾರಿಗೆ ಬಂದ ತಾ. 12-8-62ನೆ ತಾ. 12-8-67 ಎಂಬ ಕಿದ್ದತೆಯ ರಿಜಿಸ್ಟ್ರೇಶನ್ ಕಾನೂನು ರಾಜ್ಯದಲ್ಲಿನ ವೈದ್ಯರಿಗೆಲ್ಲಾ ಸರಿಯಾಗಿ ಪ್ರಚಾರವಾಗದಿರುವುದರಿಂದ ರಿಜಿಸ್ಟ್ರೇಷನ್ ಮಾಡಿಸುವ ಅವಧಿಯನ್ನು ತಾ. 12—8—67ರಿಂದ 12—8—70ರ ವರೆಗೆ ಮುಂದೂಡಬೇಕು. ಮತ್ತು ಸರಕಾರವು ಆಯುರ್ವೇದ ವಿಚಾರದಲ್ಲಿ ಆಗಾಗ ಪ್ರಕಟಿಸುವ ಪ್ರಕಟನೆಗಳನ್ನು ಮಂಡಲಕ್ಕೆ ತಿಳಿಸುತ್ತಿರಬೇಕು.

ಈ ಎಲ್ಲಾ ವಿಚಾರಗಳನ್ನು ಆರೋಗ್ಯ ಮಂತ್ರಿಗಳಿಗೆ ಕೂಲಂಕಶವಾಗಿ ವಿವರಿಸಲಾಯಿತು. ಅವರು ಎಲ್ಲಾ ವಿಷಯಗಳನ್ನೂ ಸಮಾಧಾನಚಿತ್ತದಿಂದ ಕೇಳಿ ಪ್ರತಿಯೊಂದಕ್ಕೆ ಹೆಚ್ಚಿನವುಗಳನ್ನು ಆದಷ್ಟು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರಲಾಗುವುದೆಂದೂ, ಮುಖ್ಯವಾಗಿ ಆಯುರ್ವೇದ ಶಾಖೆಗೆ ಒಬ್ಬ ಪ್ರತ್ಯೇಕ ಉಪನಿರ್ದೇಶಕರನ್ನು ದಶಂಬರ ತಿಂಗಳಾಂತ್ಯದೊಳಗೆ ನೇಮಿಸಲಾಗುವುದೆಂದು ಭರವಸೆಕೊಟ್ಟರು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಅಧಿಕಾರದ ದುರುಪಯೋಗ ಫಲ

(ಎರಡನೇ ಪುಟದಿಂದ)

ಹೇಳಿ ದೇವಾ?" ಎಂದು ದೇವತೆಗಳೆಲ್ಲಾ ಅಂಜಲಿ ಬದ್ಧರಾಗಿ ಕೇಳಿದರು.

"ಎಲ್ಲವನ್ನೂ ಹೇಳುವೆ ಕೇಳಿರಿ. ಗುಮ್ಮನು ಎಷ್ಟುಜನ ತಾಯಂದಿರ ಎಳೆಯ ಮಕ್ಕಳನ್ನು ನಿಷ್ಕಾರಣವಾಗಿ ಎಳೆದು ತಂದಿಲ್ಲ? ಎಷ್ಟುಜನ ಬಾಲೆಯರನ್ನು ವಿಧವೆಯರನ್ನಾಗಿ ಮಾಡಿಲ್ಲ? ಎಷ್ಟು ಮನೆಗಳನ್ನು ವಿನಾಕಾರಣ ಮಜಾವೂರಿಗೆ ತುತ್ತಾಗಿಸಿಲ್ಲ? ಯಮನ ತಪ್ಪಿಗೆ ಎಮ್ಮೆ ಇದೆಯೇ?

ಅನ್ಯಾಯವಾಗಿ ಅಗ್ನಿ ಅದೆಷ್ಟು ಬಡ ತಾಯಿಗಳ ಮನೆಯನ್ನು ಆಹುತಿ ತೆಗೆದುಕೊಂಡಿಲ್ಲ?

ವರುಣನು ಅದೆಷ್ಟು ಮಹಾಪೂರಗಳನ್ನು ಬರಿಸಿ ಹಾಹಾಕಾರವನ್ನುಂಟು ಮಾಡಿಲ್ಲ? ಅದೆಷ್ಟೋ ಮೇಳೆ ಮಳೆ ಬರಿಸದೆ ಬರಗಾಲ ಬರಿಸಿಲ್ಲ?

ವಾಯುವಿನ ಕೇಪಾಟೋಪಾವೇನಾದರೂ ಸಾಮಾನ್ಯವೇ? ಎಲ್ಲೆಡೆಗೂ ಪ್ರವೇಶದೊರಕಿಸಿಕೊಳ್ಳುವೆನೆಂಬ ಅಹಂಕಾರದಿಂದ ಅದೆಷ್ಟು ಸೌಗಿಗಳನ್ನು ಬಾಧೆ ಪಡಿಸಿಲ್ಲ? ಮನವನ್ನು ಕಬಳಿಸುವ ಅಗ್ನಿಗೆ ಅದೆಷ್ಟು ಪ್ರೋತ್ಸಾಹ ಕೊಟ್ಟಿಲ್ಲ? ಬಡ ತಾಯಿಗಳ ಮನೆಯ ಪಶುಗಳನ್ನು ಉರುಳಿಸುವಾಗ ಒಂದಿಷ್ಟಾದರೂ ಕರುಣೆ ತೋರಿದ್ದನೇ?

ಪಂಚತ್ವನ್ನು ಪಡೆಯುವಾಗ ಕುಬೇರನು ಅದೇಕೆ ಮಾನವರಲ್ಲಿ ಪಕ್ಷಪಾತವನ್ನೆಣಿಸಿದನು?

ನಾರದನ ಸಂಚಾರ ಭೂಲೋಕದಲ್ಲಿ ಎಲ್ಲರ ಮನೆಗೂ ಅದೇಕೆ ಸಾಗಲಿಲ್ಲ?

ಬ್ರಹ್ಮನೇ ದಾರಿತಪ್ಪಿದ ಮೇಲೆ ನಮ್ಮೆಲ್ಲರನ್ನು ದೂರಿ ಫಲವೇನು? ಕಷ್ಟದ ಫಲವವರನ್ನು ಕಂಡರೆ ಮತ್ತೂ ಕಷ್ಟ ಕೊಡುವ ಭಾವನೆ ಏಕೆ ಬ್ರಹ್ಮನಿಗೆ ಬಂದಿತ್ತೆಂದು? ಊಟಕ್ಕೆಕ್ಕಿದ ಬಡವರಿಗೆ ಹತ್ತಾರು ಮಕ್ಕಳನ್ನು ಕೊಟ್ಟು; ಶ್ರೀಮಂತರಿಗೆ ಬರೇ ಒಂದೆರಡಿಸ್ಸಿತ್ತು ಅದೇಕೆ ಸುಮ್ಮನುಳಿದನು? ಹೆಣ್ಣು ಬೇಕೆಂಬುವರಿಗೆ ಗಂಡುಗಂಡು ಬೇಕೆಂಬುವರಿಗೆ ಹೆಣ್ಣು ಸೃಷ್ಟಿಸಿ ಅದೇಕೆ ಮಾನವರನ್ನು ಹಿಂಸಿಸಿಹೊರಟನು? ಇದರಿಂದಲೇ ನಿಮಗಿಂದು ಕಷ್ಟ ಪ್ರಾಪ್ತಿಯಾಯಿತು. ಅಧಿಕಾರ ಸೂತ್ರ ಕೈಗೆದೊರಕಿದಾಗ ನ್ಯಾಯವಾದುದನ್ನೆ ಮಾಡಿದರೆ ಅದು ಸ್ಥಿರವಾಗಿ ನಿಲ್ಲುವುದು' ಎಂದನು.

"ನನ್ನ ತಪ್ಪನ್ನು ಕ್ಷಮಿಸಿ ಮುಂದೆ ಕಾವಾಡು ದೇವಾ!' ಎಂದು ಎಲ್ಲರೂ ಪಾದಕ್ಕೆರಗಿದರು.

'ದೇವತೆಗಳಾದ ನೀನೇ ಅಧಿಕಾರ ಮದದಿಂದ ಹೀಗಾದ ಮೇಲೆ ಸಾಮಾನ್ಯ ಮಾನವ ಎಂತೂ ಹೆಚ್ಚುಕಾಲ ಉಳಿಯುವಂತಿಲ್ಲ. ಅದಕ್ಕಾಗಿಯೇ ನನ್ನ ಮಾಯೆಯಿಂದ ಧವನನ್ನು ಮುಚ್ಚಿ; ಅಧರ್ಮಕ್ಕೆ ಜಯ ದೊರಕುವಂತೆ ಮಾಡಿಬಿಟ್ಟಿದ್ದೇನೆ. ಆದರಿಂದಲೇ ಇಂದು ಅನ್ಯಾಯ ಅಧರ್ಮಗಳೇ ತಲೆ ಎತ್ತಿ ಎಲ್ಲೆಡೆಯೂ ಕಾಣಿಸ್ತಿವೆ. ಅದು ಕೇವಲ ಅಲ್ಪಕಾಲದ ಜಯವೆಂದುಮಾನವರು ತಿಳಿಯುವಷ್ಟು ಜ್ಞಾನಶೂನ್ಯರಾಗಿಲ್ಲವಿಂದು. ಆದರಿಂದಲೇ ಮುಂದೆ ದುರ್ಜನರ ನಾಶವಾಗಿ; ಭೂಭಾರವಿಳಿದು ಲೋಕಕಲ್ಯಾಣ ವುಂಟಾಗುವುದು. ಅಕ್ಷಯವರೆಗೆ ವೈಕುಂಠದಲ್ಲಿಯೇ ಇದ್ದು ಬಿಡಿ" ಎಂದನು.

ಎಲ್ಲರೂ ನಾರಾಯಣ ಭಜನೆ ಗೈಯುತ್ತಾ ವೈಕುಂಠದಲ್ಲಿಯೇ ಮುಂದಿನ ಸುದಿನವನ್ನು ಕಾಯುತ್ತಾ ಕಳೆದರು.

ಹೊಸ ಆಹಾರ

ಅಧಿಕ ಲೈಸೀನ್ ಇರುವ ಜೋಳ

ಮುಸುಕಿನ ಜೋಳವು ವಾಸ್ತವವಾಗಿ ಅಮೆರಿಕಾ ಖಂಡದ ಉತ್ಪನ್ನ. ಇದರ ಮೂಲ ಮಧ್ಯ ಅಮೆರಿಕ. ೫೦೦೦ ವರ್ಷಗಳ ಹಿಂದೆ ಇದ್ದ ಅಜ್ಟೆಕ್—ಮೂಯಾ ನಾಗರಿಕತೆಯ ಕಾಲದಿಂದ ಇಂದಿನವರೆಗೆ ಸಂತತಿಯಾಗಿ ಮುಸುಕಿನ ಜೋಳದ ವ್ಯವಸಾಯ ನಡೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಪಂಚದಲ್ಲಿ ಪ್ರತಿ ವರ್ಷ ಉತ್ಪನ್ನವಾಗುವ ೨೦ ಕೋಟಿ ಟನ್‌ಗಳಷ್ಟು ಮುಸುಕಿನ ಜೋಳವು ೨ ಕೋಟಿ ಟನ್‌ಗಳಷ್ಟು ಪ್ರೋಟೀನನ್ನು ಪೂರೈಸುತ್ತಿದೆ. ಇದರ ಅರ್ಧಾಂಶವನ್ನು ಮನುಷ್ಯರು, ಉಳಿದ ಅರ್ಧಾಂಶವನ್ನು ಪೌಷ್ಟಿಕಾಯದ ಪ್ರಾಣಿಗಳು ಉಪಯೋಗಿಸುತ್ತಿವೆ.

ಇತ್ತೀಚೆಗೆ ಪರಿವರ್ತನಕಾರಿ ವಂಶವಾಹಿ ಕಣವೊಂದನ್ನು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಇದರಿಂದ ಮುಸುಕಿನ ಜೋಳದ ಪ್ರೋಟೀನಿನ ಅಂಶವನ್ನು ಪರಿವರ್ತಿಸಲು ಸಾಧ್ಯವಾಗುವುದು. ಈ ಸಂತೋಷಕರ ಸುದ್ದಿಯಿಂದಾಗಿ ಪೂರ್ವದ ಆಹಾರದಲ್ಲಿ ಮುಸುಕಿನ ಜೋಳವು ಮುಖ್ಯಪಾತ್ರವನ್ನು ವಹಿಸುವ ದಿನ ಶೀಘ್ರವೇ ಬರಬಹುದು.

ಈಗ ಮನುಷ್ಯರು ಮತ್ತು ಪ್ರಾಣಿಗಳು ತಿನ್ನುವ ಮುಸುಕಿನ ಜೋಳದಲ್ಲಿ ಲೈಸೀನ್ ಮತ್ತು ಟ್ರಿಪ್ಟೋಫ್ಯಾನ್ ಎಂಬ ಅಮಿನೋ ಆಸ್ಲ್ಗಳು ಸಾಕಷ್ಟು ಪ್ರಮಾಣದಲ್ಲಿಲ್ಲ. ಇವು ಪ್ರೋಟೀನ್ ನಿರ್ಮಾಣಕ್ಕೆ ಅತ್ಯವಶ್ಯ ದ್ರವ್ಯಗಳು. ಒಪೇಕ್2ಎಂಬ ಹೊಸ ರಿನ ಪರಿವರ್ತನ ಶೀಲ ವಂಶವಾಹಿಯನ್ನು ಸಾಮಾನ್ಯ ಮುಸುಕಿನ ಜೋಳಕ್ಕೆ ಅಳವಡಿಸಿದಾಗ, ಲೈಸೀನ್ ಮತ್ತು ಟ್ರಿಪ್ಟೋಫ್ಯಾನ್‌ಗಳ ಅಂಶ ಅಧಿಕವಾಗುವುದು, ಮುಸುಕಿನ ಜೋಳದ ಪ್ರೋಟೀನಿನ ಗುಣಾಂಶದಲ್ಲೂ ಇಮ್ಮಡಿ ಸುಧಾರಣೆಯಾಗುವುದು. ಈಗ ಪ್ರಪಂಚದಲ್ಲಿ ಬೆಳೆಯುವ ಎಲ್ಲ ಮುಸುಕಿನ ಜೋಳವನ್ನು ಅಧಿಕ ಲೈಸೀನ್ ಭರಿತ ಜೋಳಕ್ಕೆ ಪರಿವರ್ತಿಸಿದರೆ, ಮನುಷ್ಯರ ಪೋಷಣೆಗೆ ಉಪಸುಸ್ತಾಗಿರುವ ಪ್ರೋಟೀನಿನ ದೃಷ್ಟಿಯಿಂದ, ಪ್ರಪಂಚದ ಜೋಳದ ಉತ್ಪಾದನೆಯನ್ನು ಇಮ್ಮಡಿಗೊಳಿಸಿದಂತಾಗುವುದು ಎಂದು ಹೇಳಬಹುದು.

ನವ್ಯ ಈಗಿನ ಕಡಿಮೆ ಪ್ರೋಟೀನಿನ, ಕಡಿಮೆ ಗುಣಾಂಶದ ಮುಸುಕಿನ ಜೋಳಕ್ಕೆ ಒಪೇಕ್—2ಎಂಬ ಪರಿವರ್ತನಕಾರಿ ವಂಶವಾಹಿಯನ್ನ ಸೇರಿಸಿ ಅದನ್ನು ಕಡಿಮೆ ಪ್ರೋಟೀನಿನ ಉತ್ತಮ ಗುಣಾಂಶದ ಮುಸುಕಿನ ಜೋಳವಾಗಿ ಪರಿವರ್ತಿಸುವ ಬಗೆಗೆ ವಿಜ್ಞಾನಿಗಳ ಗಮನ ಇಮವರೆಗೆ ಕೇಂದ್ರೀಕೃತವಾಗಿದೆ. ಇಂಥಹ ಮುಸುಕಿನ ಜೋಳದಲ್ಲಿ ಒಟ್ಟು ಶೇಕಡಲರಿಂದ 10ರಷ್ಟು ಪ್ರೋಟೀನ್ ಇರುವುದು. ಪರ್ಡ್ಯೂ ವಿಶ್ವವಿದ್ಯಾನಿಲಯದಲ್ಲಿ ಇದನ್ನು ಪ್ರಾಯೋಗಿಕವಾಗಿ ಉತ್ಪಾದಿಸಲಾಗಿದ. ಗ್ವಾಟೆಮಾಲಾದ ಮಕ್ಕಳಿಗೆ ಇದನ್ನು ಕೊಟ್ಟು ಪೋಷಕ ಮೌಲ್ಯವನ್ನ ಪರೀಕ್ಷಿಸಲಾಗಿದೆ. ಮಕ್ಕಳಿಗೆ ನಿರ್ದೇಶಿಸಲಾದ ಪ್ರೋಟೀನ್ ಪ್ರಮಾಣ ದೊರಕುವಂತೆ, ಈ ಜೋಳದ ಗಂಜಿಯನ್ನು ಒದಗಿಸಲಾಯಿತು. ಅಧಿಕ ಲೈಸೀನ್ ಭರಿತ ಮುಸುಕಿನ ಜೋಳದಲ್ಲಿಯ ಪ್ರೋಟೀನ್ ಕನಿತೆಗೆದು ಬಣ ಮಾಲಿನಲ್ಲಿರುವ ಪ್ರೋಟೀನಿನಷ್ಟೇ ಉತ್ತಮವೆಂದು ಕಂಡು ಬಂದಿದೆ.

ಈ ರೀತಿಯ ಮುಸುಕಿನ ಜೋಳವನ್ನು ವಿಸ್ತೃತವಾಗಿ ಉಪಯೋಗಿಸಿದರೆ, ಕ್ಷಾಮ ಪೀಡಿತ ಪ್ರಪಂಚಕ್ಕೆ ಉತ್ತಮ ಗುಣದ ಪ್ರೋಟೀನ್ ಅನೇಕ ದಶಲಕ್ಷ ಟನ್‌ಗಳಷ್ಟು ದೊರೆಯುವುದು. ಆದರೆ ಮುಸುಕಿನ ಜೋಳದಂತೆ ಉತ್ತಮ ಗುಣದ ಪ್ರೋಟೀನನ್ನ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ಸಾಧ್ಯವಿದೆ.

ಕೆಲವು ವರ್ಷಗಳ ಹಿಂದೆ ಇನ್ನೊಂದು ವಿಶೇಷ ರೀತಿಯ ಮುಸುಕಿನ ಜೋಳವನ್ನು ಸಿದ್ಧಗೊಳಿಸಲಾಯಿತು. ಪ್ರಥಮತಃ ಇಲಿನಾಯ್ ವಿಶ್ವವಿದ್ಯಾನಿಲಯದಲ್ಲಿ ಇದನ್ನು ಸಿದ್ಧಗೊಳಿಸಲಾಯಿತು. ಇದನ್ನು ಅಧಿಕ ಪ್ರೋಟೀನಿನ, ಹೈಡಿಮೆ ಗುಣಾಂಶದ ಮುಸುಕಿನ ಜೋಳ ಎಂದು ಕರೆಯಬಹುದು. ಸಾಮಾನ್ಯ ಮುಸುಕಿನ ಜೋಳದಲ್ಲಿ ಶೇಕಡ ಅರಿಂದ ೧೦ರಷ್ಟು ಪ್ರೋಟೀನಿದೆಯಾದರೆ ಇದರಲ್ಲಿ ಶೇಕಡ ೨೦ರಷ್ಟು ಪ್ರೋಟೀನಿದೆ; ಆದರೆ ಈ ಪ್ರೋಟೀನು ಒಳಹ ಕೀಳು ದರ್ಜೆಯದು. ಇದನ್ನು ಮನುಷ್ಯರ ಆಥವಾ ಪ್ರಾಣಿಗಳ ಆಹಾರಕ್ಕೆ ಇದುವರೆಗೆ ಉಪಯೋಗಿಸಿಲ್ಲ.

ಒಪೇಕ್—೨ ಎಂಬ ಪರಿವರ್ತನಕಾರಿ ವಂಶವಾಹಿಯನ್ನು ಇಲಿನಾಯ್ ನ ಅಧಿಕ ಪ್ರೋಟೀನಿನ ಮುಸುಕಿನ ಜೋಳಕ್ಕೆ ಯಶಸ್ವಿಯಾಗಿ ಅಳವಡಿಸಿ, ಅಧಿಕ ಪ್ರೋಟೀನಿನ, ಉತ್ತಮ ದರ್ಜೆಯ ಮುಸುಕಿನ ಜೋಳವನ್ನು ಸಿದ್ಧಗೊಳಿಸಲಾಗಿದೆ. ಇದರಲ್ಲಿರುವ ಪ್ರೋಟೀನಿನ ಅಂಶವು ಸಾಮಾನ್ಯ ಮುಸುಕಿನ ಜೋಳದಲ್ಲಿರುವುದಕ್ಕಿಂತ ಇಮ್ಮಡಿಯಾಗಿರುತ್ತದೆ.

ಈಗ ಪ್ರಪಂಚದಲ್ಲಿ ಬೆಳೆಯಲಾಗುತ್ತಿರುವ ಎಲ್ಲ ರೀತಿಯ ಮುಸುಕಿನ ಜೋಳಗಳನ್ನ ಅಧಿಕ ಪ್ರೋಟೀನಿನ, ಒಪೇಕ್—೨ರ ಜೋಳವಾಗಿ ಪರಿವರ್ತಿಸಿದರೆ, ಪ್ರತಿ ವರ್ಷ ೨ ಕೋಟಿ ಟನ್‌ಗಳಷ್ಟು ಹೆಚ್ಚಿನ ಉತ್ತಮ ದರ್ಜೆಯ ಪ್ರೋಟೀನು ನವಗೆ ದೊರೆಯುವುದು. ಈಗ ಪ್ರಪಂಚದಲ್ಲಿರುವ ಪ್ರೋಟೀನಿನ ಕೊರತೆಗಿಂತ, ಇದು ಇಮ್ಮಡಿ ಪ್ರಮಾಣಕ್ಕಿಂತಲೂ ಅಧಿಕವಾಗಿರುತ್ತದೆ. ಪ್ರಪಂಚದಲ್ಲಿರುವ ಪ್ರೋಟೀನಿನ ಕೊರತೆ ಐದು ಲಕ್ಷ ಟನ್‌ಗಳೆಂದ ಒಂದು ಕೋಟಿ ಟನ್‌ಗಳ ವರೆಗೆ ಇದೆ ಎಂದು ಅಂದಾಜು ಮಾಡಲಾಗಿದೆ. ಹೀಗೆ ಅಧಿಕಪ್ರೋಟೀನಿನ ಒಪೇಕ್—೨ರ ಮುಸುಕಿನ ಜೋಳವು ಪ್ರೋಟೀನಿನ ಕೊರತೆಯನ್ನು ನಿವಾರಿಸಲು ಸಹಾಯಕ ವಾಗಬಲ್ಲದು.

ಮುಸುಕಿನ ಜೋಳದಪ್ರೋಟೀನಿನಪೌಷ್ಟಿಕತೆಯನ್ನು ಹೆಚ್ಚಿಸಬಲ್ಲ ಪರಿವರ್ತನಕಾರಿ ವಂಶವಾಹಿಯನ್ನು ಕಂಡು ಹಿಡಿದ ನಂತರ, ಸರಕಾರಗಳು ಮತ್ತು ಖಾಸಗಿ ಸಂಸ್ಥೆಗಳು ಈಗ ಇತರ ಪ್ರಮುಖ ಧಾನ್ಯಗಳ ಮತ್ತು ಬೇಳೆಗಳ ಪ್ರೋಟೀನಿನ ಗುಣ ಹಾಗೂ ಪ್ರಮಾಣವನ್ನು ಹೆಚ್ಚಿಸುವ ವಿಧಾನಗಳನ್ನು ಕಂಡು ಹಿಡಿಯಲು ಪ್ರಯತ್ನಿಸಲಾರಂಭಿಸಿವೆ.

o o o o o o o

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಶ್ರೇತ ಭಾಂದವರ ಜೀವನ ಸಂಗಾತಿ.....

ಇಮಾನಿ ಕೂಡ್ ಆಯಿಲ್ ಇಂಜಿನ್ (5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.....

ಎಸ್.ಇ.ಐ. ಇಲೆಕ್ಟ್ರಿಕ್ ಮೋಟಾರು (1 H.P. ಯಿಂದ 20H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಪೀಟರ್ ಸ್ಪಾರ್ಟರುಗಳು.....

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಪಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ಶಾ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು. 1

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

NAVAYUGA 1—12—1966
Registered with the Registrar of News Papers for India under No. R. N. 3548/'57

REGD. No: B. G. 176
LICENCE No. 31
Licensed to Post without Prepayment

ಮಹಾತ್ಮರ ಮಾರ್ಗದರ್ಶನ

ದುರ್ಜನರನ್ನು ಸಜ್ಜನರನ್ನಾಗಿಸಿದ

ತುಳಸೀದಾಸರು

ಲೇಖಕರು: ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ಚರಿತಂ ರಘುನಾಥಸ್ಯ ಶತಕೋಟಿ
ಪ್ರವಿಸ್ತರಮ್ |
ಏಕೈಕ ಮಕ್ಷರಂ ಹುಂಸ್ಯಾಂ |
ಮಹಾಪಾತಕ ನಾಶನಮ್ ॥

ನೂರು ಕೋಟಿಗಳ ವರೆಗೆ ವಿಸ್ತಾರವುಳ್ಳ ಶ್ರೀರಾಮಚಂದ್ರನ ಚರಿತ್ರೆಯೊಳಗಣ ಪ್ರತಿಯೊಂದು ಅಕ್ಷರವೂ ಮಹಾ ಮಹಾ ಪಾತಕಗಳನ್ನು ನಾಶಮಾಡುವಂಥದಾಗಿರುತ್ತದೆಂಬುದನ್ನು ನೋಲಿನ ಶ್ಲೋಕವು ಹೇಳುತ್ತಿದೆ. ಇಂತಹ ರಾಮಾಯಣದ ಕಥೆಯನ್ನು ತುಳಸೀದಾಸರೂ ಬರೆದಿರುತ್ತಾರೆ. ಮಗಾತ್ಮರೆನಿಸಿದ ತುಳಸೀದಾಸರು ದುಷ್ಟರನ್ನು ಸನ್ಮಾರ್ಗಕ್ಕೆ ತಿರುವುದು ಕರ್ತವ್ಯವೆಂದು ಅರಿತಿದ್ದರು.

ಕಳ್ಳರೊಂದಿಗೆ ತುಲಸೀದಾಸರು

ಒಂದುದಿನ ಅವರು ಕಾಶಿಗೆ ಹಿಂತಿರುಗಿ ಬಂದ ನಂತರ ಅರ್ಧ ರಾತ್ರಿ ಸಮಯದಲ್ಲಿ ತಮ್ಮ ನಿವಾಸಸ್ಥಾನಕ್ಕೆ ಹೋಗುತ್ತಿರುವಾಗ ಒಂದು ಕಳ್ಳರ ಗುಂಪನ್ನು ಕಂಡರು. ಕತ್ತಲಲ್ಲಿ ಇವರು ಬರುತ್ತಿರುವುದನ್ನು ಕಂಡು ಕಳ್ಳರೆಲ್ಲರೂ ಒಬ್ಬನು—"ನೀನು ಯಾರು" ಎಂದನು. "ನಿನ್ನಂತೆಯೇ ನಾನೊಬ್ಬನು' ಎಂದರು, "ನೀನು ಹೊಸದಾಗಿ ಕೆಲಸ ಮಾಡಲು ಹೊರಟಂತಿದೆ. ನಿನ್ನ ಕೆಲಸದಲ್ಲಿ ಲಾಭ ಸಿಗಬೇಕಾದರೆ ನಮ್ಮ ಜೊತೆಯಲ್ಲಿ ಹೊರಡು' ಎಂದನು ಕಳ್ಳ. ತುಲಸೀದಾಸರು ಅವರ ಹಿಂದೆಯೇ ಹೊರಟರು. ಕಳ್ಳರು ಒಂದು ಮನೆಗೆ ಕನ್ನ ಹಾಕಿ ಇವರನ್ನು ಕಾವಲಿಗಿರಿಸಿ ಒಳಗೆ ಹೋದರು. ಅವರೆಲ್ಲಾ ಒಳಕ್ಕೆ ಹೋದ ಕೂಡಲೇ ಇವರು ತಮ್ಮ ಜೋಳಿಗೆಯಲ್ಲಿದ್ದ ಶಂಖವನ್ನು ತೆಗೆದು ಊದಿದರು. ಅದನ್ನು ಕೇಳಿ ಕಳ್ಳರೆಲ್ಲರೂ ಓಡಿದರು. ಕಳ್ಳರು ಮತ್ತೊಂದು ಮನೆಯೊಳಗೆ ನುಗ್ಗಿದರು. ಅಲ್ಲಿಯೂ ಇವರೇ ಕಾವಲಾಗಿದ್ದುದರಿಂದ ಮತ್ತೆ ನ್ಮೆ ಶಂಖವನ್ನು ಊದಿದರು ಇದನ್ನು ಒಬ್ಬ ಕಳ್ಳನು ನೋಡಿದನು. ಕಳ್ಳರೆಲ್ಲರೂ ಓಡಿ ಒಂದಡೆ ಏಕಾಂತದಲ್ಲಿ ಸೇರಿ ತುಳಸೀದಾಸರನ್ನು ವಿಚಾರಿಸಿದರು. "ಹೌದು. ನಾನೇ ಶಂಖವನ್ನು ಊದಿದೆನು. ನೀವು ನನ್ನನ್ನ ಕಾವಲಿಗಿಟ್ಟು ಬೇರೆಯಾದರೂ ನೀವು ಮಾಡುವ ಕೆಲಸವನ್ನು ನೋಡಿದರೆ ಕೂಡಲೇ ನಮಗೆ ತಿಳಿಸಲು ಹೇಳಿದ್ದಿರಿ. ನೀವು ಕಳ್ಳತನ ಮಾಡುತ್ತಿರುವಾಗ ಭಗವಾನ್ ಶ್ರೀರಾಮನನ್ನು ಕಂಡೆನು. ಇನ್ನು ನಿಮಗೆ ಖಂಡಿತ ತಿಳಿಸ್ಪೆಯಾಗುತ್ತವೆಂದರಿತು, ನಿಮ್ಮನ್ನು ಎಚ್ಚರಿಸಲು ನಾನು ಶಂಖವನ್ನು ಊದಬೇಕಾಯಿತು" ಎಂದರು. ತುಲಸೀದಾಸರ ಮಾತುಗಳನ್ನು ಕೇಳಿ ಕಳ್ಳರು ಅವರನ್ನು ಗುರುತಿಸಿ, ಅವರ ಚರಣಗಳಿಗೆ ಎರಗಿದರು. ಅನಂತರ ಅವರು ತುಳಸೀದಾಸರ ಶಿಷ್ಯರಾದರು.

ರಾಮನಾಮ ಸತ್ಯ ಹೈ

ಅವರು ಕಾಶಿಯಲ್ಲಿರುವಾಗ ಓರ್ವ ಬ್ರಾಹ್ಮಣನು ಮರಣಪಟ್ಟನು ಆಗ ಅವನ ಪತ್ನಿಯು ಅಲಂಕಾರಗಳನ್ನು ಧರಿಸಿ ಪತಿಯೊಂದಿಗೆ ಸತಿಯಾಗಿ ಹೋಗಲು ಹೊರಟಿದ್ದಳು. ದಾರಿಯಲ್ಲಿ ತುಲಸೀದಾಸರು ಬರುತ್ತಿರಲು ಆ ಸ್ತ್ರೀಯ ಅವರಿಗೆ ಸಾಷ್ಟಾಂಗನೆರಗಿದಳು. ಆಗ ದಾಸರು—'ಸೌಭಾಗ್ಯವತಿಯಾಗಿರು' ಎಂದು ಆಶೀರ್ವದಿಸಿದರು. ಆದರೆ ಅವರಿಗೆ ಕೂಡಲೇ ಅವಳಪತಿ ತೀರಿದ ವಿಚಾರ ತಿಳಿಯಿತು—"ಅಮ್ಮಾ, ನನಗೆ ತಿಳಿಯದಂತೆ ಶ್ರೀ ರಾಮನೇ ಈ ಮಾತುಗಳನ್ನಾಡಿಸಿದರು. ಇನ್ನು ನೀನು ರಾಮ ಭಜನೆಯನ್ನು ಮಾಡುತ್ತಾ ಉಳಿದ ಆಯುಸ್ಯವನ್ನು ಕಳೆ. ಸತೀತ್ವದಿಂದಲೇ ಸ್ವರ್ಗ ಸಿಗುತ್ತದೆ. ಸ್ವರ್ಗದ ಆಸೆಯನ್ನು ಮಾಡಬೇಡ. ಸ್ವರ್ಗವೇ ಈ ಮರ್ತ್ಯಲೋಕಕ್ಕೆ ಇಳಿದು ಬರಬೇಕಾಗುವುದು' ಎಂದರು.

ಶವವನ್ನು ಹೊತ್ತವರು ಆಗಲೇ ಸ್ಮಶಾನವನ್ನು ಸೇರಿದ್ದರು. ಅಲ್ಲಿ ಮೃತನಾಗಿದ್ದ ಬ್ರಾಹ್ಮಣನು ಎದ್ದು ಕುಳಿತಿದ್ದನು. ಈ ಘಟನೆಯಿಂದ ರಾಮನಾಮದ ಮೇಲೆ ಎಲ್ಲರಿಗೂ ವಿಶ್ವಾಸವುಂಟಾಯಿತು. ಅಂದಿನಿಂದ ಕಾಶಿಯಲ್ಲಿ ಹಿಂದುಗಳು ಶವವನ್ನು ಹೊತ್ತುಕೊಂಡು ಹೋಗುವಾಗ 'ರಾಮ ನಾವ. ಸತ್ಯ ಹೈ' ಎಂದು ಹೇಳುತ್ತಾ ಹೋಗುವುದು ವಾಡಿಕೆಯಾಗಿದೆ. ಆ ದಿನವೇ ಸ್ಮಶಾನದಲ್ಲಿದ್ದವರೆಲ್ಲಾ ತುಳಸೀದಾಸರ ಶಿಷ್ಯರಾದರು.

ಕಳ್ಳರು ಪಲಾಯನ

ತುಲಸೀದಾಸರು ಒಂದುದಿನ ಕಾಶಿಯಲ್ಲಿ ರಾತ್ರಿ ಮನೆಗೆ ಹಿಂದಿರುಗಿ ಬರುತ್ತಿರುವಾಗದಾರಿಯಲ್ಲಿ ಕಳ್ಳರು ಮುತ್ತಿದರು. ಭಗವತ್ ಚಿಂತಾ ಮಗ್ನರಾಗಿದ್ದ ಅವರು ಮೂರುತಿಯನ್ನು ಸ್ತುತಿಸಲು ತಕ್ಷಣವೇ ಮೂರುತಿಯು ಅಲ್ಲಿ ಪ್ರಕಟನಾದನು. ಅವನ ಭೀಮ ಸ್ವರೂಪವನ್ನು ಕಂಡು ಕಳ್ಳರು ಪಲಾಯನ ಗೈದರು.

ಇಬ್ಬರು ಕಾವಲುಗಾರರು

ತುಲಸೀದಾಸರ ಬಳಿಗೆ ಅನೇಕ ಜನರು ಬರುವುದನ್ನು ಕಂಡು ಅವರ ಬಳಿ ವಿಶೇಷ ಧನವಿರಬಹುದೆಂದು ಭಾವಿಸಿ ಅರ್ಧರಾತ್ರಿ ಸಮಯದಲ್ಲಿ ಕೆಲವು ಜನ ಕಳ್ಳರು ಬಂದಗ. ಆಗ ಇವರ ಮುಂದೆ ಮುಂದೆ ನಿಲವರ್ಣದ ದೇಹವಿರುವ ಇಬ್ಬರು ಕಾಮುಗಾರರನ್ನೇ ಕಂಡು ಅವರು ಹಿಂದಿರುಗ ಬೇಕಾಯಿತು. ಮರುದಿನ ಆ ಕಳ್ಳರು ಸಾಧುವೇಷದಲ್ಲಿ ಬಂದು ಇವರನ್ನು ಕುರಿತು—"ಸ್ವಾಮಿ, ತಮ್ಮ ಮನೆಯ ಮುಂದೆ ರಾತ್ರಿ ಇಬ್ಬರು ಶ್ಯಾಮ ಗೌರಾಂಗರು ಕಾವಲಿರುತ್ತಿರಲ್ಲ, ಅವರು ಯಾರು?" ಎಂದು ಕೇಳಿದರು. ಆಗಲೇ ತುಳಸೀದಾಸರು ಇವೆಲ್ಲಾ ಮೂರುತಿಯ ಕೃಪೆಯೆಂದು ಭಾವಿಸಿ, ಅವರಿಗೆ ತಮ್ಮಲ್ಲಿದ್ದುದನ್ನೆಲ್ಲಾ ತಿಳಿಸಿದರು. ಅಂದಿನಿಂದ ಅವರು ತುಳಸೀದಾಸರ ಶಿಷ್ಯರಾದರು.

ಹೀಗೆ ತುಳಸೀ ದಾಸರು ದುರ್ಜನರನ್ನು ಸಜ್ಜನರನ್ನಾಗಿ ಮಾಡಿದ ಮಹಾತ್ಮರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. No. 394/1964.

ತ್ಯಾಂಪು ಮೊಲಿ— —ವಾದಿ.

ಮತ್ತು

ಕೃಷ್ಣರಾಯ ನಾವಡ (ಸೌತಿ) ಕೂಡಾ.. ಪ್ರತಿವಾದಿರು.

ಇವರೊಳಗೆ

ಮೇಲ್ಕಂಡ ವ್ಯಾಜ್ಯದ 2ನೇ ಪ್ರತಿವಾದಿ—U.N. ಚಂದ್ರಶೇಖರ ರಾವ್, ಕೃಷ್ಣರಾಯನಾವಡರ ಮಗ, ಉಡುಪಿ ತಾಲ್ಲೂಕು ಬೆಣಗ್ರಾಮದ ಉಚ್ಚಿಲ—ಇವರೀಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯು ಆಸ್ತಿ ಸ್ವಾಧೀನತೆ ವಗೈರೆ ಕೇಳಿದಾಕ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. 30—12—1966ಕ್ಕೆ ಇಟ್ಟಿರುತ್ತದೆ. ಸದ್ರಿ ದಾವೆಯಲ್ಲಿ ನಿಮಗೆ ಉದಾಹರಣೆ ದಾಕ್ಲು ಮಾಡಿರುವುದಿದ್ದಲ್ಲಿ ಮೇಲ್ಕಂಡ ತಾ. 30—12—66ನೇ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟ್ ವ್ಯಾಂಡ ಸ್ವತಹಾ ನವಕೀಲರ ಮುಖಾಂತರ ದಾಖಲು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ನ್ನು ಸಿವ್ಯಾ ನಡಿ ಸದ್ರಿ ವ್ಯಾಜ್ಯವನ್ನು ಏಕ ಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದು.

P. V. Acharya
Vakil for Plaintiff

ಉಡುಪಿ, ತಾ. 18—12—66.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಅಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸಚ್ಚಾಯ್ ಸಿಳ್ಳಯೇ ಶಕ್ತವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ವಿ.ಪಿ.ಪೋಸ್ಟಿನಿಂದ ಕಳಿಸಬಹುದು.
ರಿಯಾಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

8—12—1966

ಬೆಲೆ ೧೦ ಪೈಸೆ

ಕಥಾ ಪ್ರಪಂಚ

ಮಣಿ ಮಂಜಾಗಿತ್ತು

ಲೇಖಕಿ

ಶ್ರೀಮತಿ ಬಿ. ರಮಾ ನಾಗೇಶ್

ಫ್ಯಾನ್ ತಿರುಗುತಿತ್ತು. ಹಗಲು ಹೊತ್ತಿನಲ್ಲಿ ಬಿಸಿಲಿನ ಬೇಗೆ ಹೆಚ್ಚಾದ್ದರಿಂದ ರಾತ್ರಿ ಕಾಲದಲ್ಲೂ ಸೆಕೆ ಹೆಚ್ಚಾಗಿತ್ತು. ಫ್ಯಾನ್ ಅಡಿಯಲ್ಲಿ ಕುಳಿತಿದ್ದ ಮೊಲಿನಿಗೆ ಯೋಚನೆ ಬಗೆಹರಿದಿರಲಿಲ್ಲ. ತಾಯಿ ಮೂರು ಬಾರಿ ಬಂದು ನೋಡಿದಾಗಲೂ ಆಕೆ ಯೋಚಿಸುತ್ತಲೇ ಇದ್ದಳು. ಕೊನೆಗೊಮ್ಮೆ ತಾಯಿ "ಮೊಲಿನಿ" ಎಂದರು ಮಿದುವಾಗಿ.

ಆಕೆ ಉತ್ತರಿಸಲಿಲ್ಲ.

"ಮೊಲಿನಿ ಊಟ ಆಯಿತೆ"

ಆಗಲೂ ನಿರುತ್ತರ.

"ಮೊಲಿನಿ ಗಂಟೆ ಹನ್ನೊಂದು; ಊಟಕ್ಕೇಳಮ್ಮಾ" ಎಂದು ಮೈದಡವಿದರು, ಕೊನೆಯ ಬಾರಿ.

ನಿದ್ದೆಯಿಂದ ಎಚ್ಚತ್ತೆದ್ದಳಂತೆ "ಹೊತ್ತಾದದ್ದೇ ತಿಳಿಯಲಿಲ್ಲಮ್ಮಾ, ಆಗಲೇ ಊಟಕ್ಕೆ ಕರೆಯಿ ಬಾರದಿತ್ತೇನಿ?" ಎಂದಳು ಮೊಲಿನಿ.

"ನೀನೇನೋ ಯೋಚಿಸುತ್ತಾ ಇದ್ದೆಯಲ್ಲಾ?'

"ಹೌದಮ್ಮಾ, ಇವತ್ತು ಬಂದಿದ್ದ ಕೇಸಿನ ಕುರಿತೇ ಯೋಚಿಸುತಿದ್ದೆ. ಎಷ್ಟು ಹೇಳಿದರೂ, ಬೇಖನಗಳನ್ನು ಓದಿದರೂ, ಆಹಾರ ಅಭಾವ ಬಂದರೂ, ಈ ಜನರಿಗೆ ತಿಳಿಯುವುದಿಲ್ಲವಲ್ಲಾ, ಎಂದು ಭಾಷಣಕ್ಕೆ ಆರಂಭಿಸಿಯೇ ಬಿಟ್ಟಳು ಮೊಲಿನಿ.

"ನೀನೇನು ಹೇಳುತ್ತೀ? ಯಾವುದರ ಕುರಿತು?'

"ಅಲ್ಲಾ ಅಂದರೆ, ಇವತ್ತೊಂದು ಹೆಂಗಸು ಹೆರಿಗೆಗೆ ದೂರದ ಹಳ್ಳಿಯಿಂದ ಬಂದಿದೆ. ಹನ್ನೆರಡನೆಯ ಹೆರಿಗೆಯಂತೆ. ಆಕೆಗೆ ಇನ್ನು ಮಕ್ಕಳೇ ಬೇಡ ಎನ್ನುವ ವನಸ್ಸು. ಆದರೆ ಮಕ್ಕಳಾಗದಿದ್ದಂತೆ ಒಪರೇಶನ್ ಮಾಡಿಸಿಕೊಳ್ಳಲು ಬೆದರಿಕೆ. ಹಾಗೆಲ್ಲಾ ಮಾಡಿದರೆ ಇನ್ನೊಂದು ಜನ್ಮಕ್ಕೆ ಮಕ್ಕಳಾಗದೆ ಹೋದರೆ, ದೇವರ ಶಾಪ ಬಂದರೆ ಎನ್ನುವ ಯೋಚನೆ...."

'ಸರಿ ತಾನೇ? ದೇವರು—ಕೊಡುವವನಿಗೆ ತಿಳಿಯದೆ?" ಎಂದು ಮಧ್ಯದಲ್ಲೇ ತಾಯಿ ಬಾಯಿ ಹಾಕಿದರು.

"ಮನುಷ್ಯ ತನ್ನ ಕೈಯಾಲ್ಲಿ ಆಗದಿರುವುದಕ್ಕೆ ಆಗುವುದಕ್ಕೆ ಎಲ್ಲಕ್ಕೂ ದೇವರು ದೇವರು ಎನ್ನುವ ಈ ಭಾವನೆ ಹೋಗುವ ತನಕ ದೇಶಕ್ಕೆ ಉದ್ಧಾರ ಖಂಡಿತ ಇಲ್ಲ' ಎಂದಳು ಮೊಲಿನಿ.

"ಉದ್ಧಾರ ಅಂದರೆ ಏನು ಮೊಲಿನಿ? ಮಕ್ಕಳು ಮನೆಯ ಆಸ್ತಿ. ಮಕ್ಕಳಿಲ್ಲದ ಮನೆ ಯಾಕೆ? ಕುಟುಂಬ ಬೆಳೆಯಬೇಕು, ಕುಟುಂಬ ಹಿರಿದಾಗಬೇಕು; ಸಂಪಾದನೆ ಹೆಚ್ಚಾಗಬೇಕು ಎನ್ನುವುದೇ ಮದುವೆಯ ಉದ್ದೇಶ ಅಲ್ಲವೇ?" ಎಂದು ಮೊಲಿನಿಯ ತಾಯಿ ಅನ್ನುವಷ್ಟರಲ್ಲಿ—

"ಬೇಳು ಹೌದು, ಎಂಟು ಹತ್ತು ಯಾಕೆ? ಹೆಂದದ ಎರಡು ಮೂರು ಮಕ್ಕಳ ಸಂಸಾರ ಇದ್ದರೆ ಸಾಲದೇ? ಮಕ್ಕಳ ವಿದ್ಯಾಭ್ಯಾಸ, ಈ ಬೆಲೆ ಏರಿದ ಕಾಲಕ್ಕೆ ಆಹಾರದ ಕಷ್ಟ, ಬಟ್ಟೆ ಬರೆ ಒದಗಿಸಲಾಗದ ಸ್ಥಿತಿ! ನೀನೊಮ್ಮೆ ಬಾ ಆಸ್ಪತ್ರೆಗೆ ತೋರಿಸುತ್ತೇನೆ—ಎಷ್ಟೆಲಾ ಒದ್ದಾಟ.." ಎಂದುಹೇಳುತ್ತಲೇ ಮೊಲಿನಿಗೆ ಛೇದ್ದಳು,

ಗಂಟೆ ಹನ್ನೊಂದುವರೆ ಬಡೆಯಿತು. ಆ ನಾದದೊಂದಿಗೆ ವೂತೂಮುಗಿಯಿತ. ಊಟಮಾಡಿ ತಾಯಿ ಮಕ್ಕಳು ಮಲಗಿಕೊಂಡರು.

೦ ೦ ೦

'ಇವತ್ತೊಂದು ಸಿಜರಿಂಗ್ ಕೇಸಿದೆ ಬರುವಾಗ ತಡವಾಗುತ್ತದೆ. ನೀವ್ಹುಬನ್ನಿ," ಎಂದು ಮೊಲಿನಿಯಿಂದೆ ಆಕೆಯ ತಂದೆಗೆ ಫೋನ್ ಮೂಲಕ ಸರೆ ಬಂದಿತು.

'ಏನಂತೆ?' ಎಂದರು ಮೊಲಿನಿಯ ತಾಯಿ

"ಓಪರೇಶನ್ ಮಾಡಿ ಮಗುವನ್ನು ತೆಗೆಯುವುದಿದೆಯಂತೆ. ತಡವಾಗುತ್ತದಂತೆ ನಾನಲ್ಲಿಗೆ ಹೋಗಬೇಕೆಂದಿದ್ದಾಳೆ ಮೊಲಿನಿ" ಎಂದು ವೀರಪ್ಪನವರು ಹೇಳಿದರು.

'ಹಿಂತಿರುಗುವಾಗ ರಾತ್ರಿ ಎರಡೋ ಮೂರೋ" ಎಂದಳು ರುದ್ರವ್ಮ.

"ಹೇಗೆ ಹೇಳಲಿ?' ಎಂದರು ವೀರಪ್ಪ

"ಹೀಗೆ ಕಾಲ ಕಳೆಯುತ್ತಾ ಇದ್ದರೆ ಮೊಲಿನಿಗೆ ಮದುವೆ ಯಾವಾಗ?' ಎಂದು ಅನಿರೀಕ್ಷಿತವಾದ ಪ್ರಶ್ನೆಯನ್ನು ಗಂಡನೊಡನೆ ಕೇಳಿದರು ರುದ್ರಮ್ಮ.

'ಏನು ಮಾಡುವುದು? ಅವಳಿಗೆ ಹೇಳಿದರೆ ಈ ಜನಸಂಖ್ಯೆ ಬೆಳ್ಳುತ್ತಿರುವಾಗ, ಆಹಾರ ಅಭಾವ ಇರುವಾಗ, ಸಮಾಜ ಸೇವೆಮಾಡಬೇಕಾದ ಜನರು ಸುಖ ಭೋಗದ ಆಲೋಚನೆ ಮಾಡಬಾರದು" ಎಂದು ನನಗೆ ಬುದ್ಧಿ ಹೇಳುತ್ತಾಳೆ. ನಾನೇನು ಮಾಡಲಿ?..." ಎಂದರು ವೀರಪ್ಪ.

"ನಾನು ಮೊನ್ನೆ ಮೊನ್ನೆ ಅವಳೊಡನೆ ಮಾತನಾಡುವಾಗ ಅವಳ ಹಿಂದಿನ ಮನಸ್ಸು ಬದಲಾಗಿದ್ದಂತೆ ಕಂಡಿತು' ಎಂದರು ರಾಗವಾಗಿ ರುದ್ರಮ್ಮ.

'ಅವಳ ಜತೆ ಡಾಕ್ಟರ್ ನಾರಾಯಣಿಗೆ ಮದುವೆ ಆಯಿತೆಂದು ಅವಳೇ ಹೇಳಿದಳು. ಹಾಗಾದರೆ ನಿನಗೆ ಯಾವಾಗ ಅಂದೆ. ಯಾವಾಗಲಾದರೂ ಆದರಾಯಿತಲ್ಲಾ ಎಂದಳು ಅವಳಾಗ', ಎಂದು ಮಾತು ಮುಂದರಿಸಿದರು ಮೊಲಿನಿಯ ತಾಯಿ.

'ಹಾಗೆ ಹೇಳಿದಳೆ? ನೋಡುವಾ, ಇನ್ನೊಮ್ಮೆ ಅವಳನ್ನು ವಿಚಾರಿಸುತ್ತೇನೆ, ಎಂದು ಹೇಳಿ ಊಟ ಎಲ್ಲಾ ತೀರಿಸಿ ಆ ಸ್ಪತ್ರೆಯ ಕಡೆಗೆ ಹೊರಟರು ವೀರಪ್ಪ.

ಕಾರಿನಲ್ಲಿ ಹೊರಟ ಅವರು ಆಸ್ಪತ್ರೆಯನ್ನು ಸೇರಿ ನೈಟ್ ಡೂಟಿಯ ಡಾಕ್ಟರನ್ನು ಸಂಧಿಸಿದರು. ಲೋಕಾಭಿರಾಮವಾಗಿ ಮಾತನಾಡುತ್ತಾ ಆಡುತ್ತಾ—

"ಇವತ್ತಿನ ಹೆರಿಗೆ ಯಾರದು?" ಎಂದರು ವೀರಪ್ಪ.

'ಹೊಸ ಮನೆ ಮಧ್ಯಸ್ಥರ ಹೆಂಡತಿಯದು' ಎಂದರು ಡಾಕ್ಟರರು.

"ಬಹಳ ಕಷ್ಟವೇ?" ಎಂದರು ವೀರಪ್ಪ.

'ಕಷ್ಟ ಏನು ಬಂತು? ಮೊದಲಿನ ಎರಡು ಹೆರಿಗೆಗಳೂ ಸಿಜರಿಂಗಿನಲ್ಲಿಯೇ ಆಯಿತು. ಇನ್ನು ಜಾಗ್ರತೆ ಬೇಕು. ಎಂದು ಮಧ್ಯಸ್ಥರೊಡನೆ ಸಾರಿ ಸಾರಿ ಹೇಳಿದ್ದರು. ಒಂದು ವರ್ಷ ಆಗುತ್ತಲೇ ಇನ್ನೊಂದು ...' ಎಂದು ನಿಟ್ಟುಸಿರೊಂದನ್ನು ಹೊರ ಸೂಸಿದರು ಡಾಕ್ಟರರು.

'ಏನು ನೂಡವುದಕ್ಕಾಗಿ ಹೆದೆ ದೇವರು ಕೊಡುವಾಗ...' ಎಂದರು ವೀರಪ್ಪ.

'ಎಲ್ಲಾ ಭಾರ ದೇವರ ಮೇಲೆ ಹಾಕಿದರಾಗದು ವೀರಪ್ಪನವರೇ, ನಾವೂ ಮಾನವರು. ಸ್ವಲ್ಪ ಸಂಯಮ ಬೇಕು ನೋಡಿ. ಹೆಂಡತಿ ಎಂದರೆ ಅವಳೇನು ಪ್ರಾಣಿಯೇ? ನಾವು ವೈದ್ಯರು. ಹೇಳುವಷ್ಟನ್ನು ಹೇಳುತ್ತೇವೆ. ತಿಳಿಯುವವರು ನೀವು ತಾನೇ? ಆರೋಗ್ಯ ನೋಡಬೇಕು....ದೇಶದ ಈಗಿನ ಸ್ಥಿತಿ ನೋಡಬೇಕು....ಮುಖ್ಯ ಮನುಷ್ಯ ವಿವೇಕಿಯಾಗಿರಬೇಕು..." ಎನ್ನುತ್ತಿರುವಾಗಲೇ.

'ಅನ್ ಸೆಕ್ಸೆಸ್ಫುಲ್' ಎನ್ನುತ್ತಾ ಬೇಸರದಿಂದ ಹೊರ ಬಂದಳು ಮೊಲಿನಿ. ಹಿಂದೆಯೇ ಬೇಸರದ ಮುಖಗಳಿಂದ ಡಾಕ್ಟರ್ ಬದ್ರುನ್ನಿಸಾ| ಡಾ. ಸಕ್ಸೆನಾ, ಡಾ| ನಿರ್ಮಲಾ ಬಂದರು.

"ಏನಾಯಿತು?' ಎಂದರು ನೈಟ್ ಡ್ಯೂಟಿಯ ಡಾಕ್ಟರರು.

'ತಾಯಿ ಹೋದಳು, ಮಗು ಉಳಿಯಿತು" ಎಂದರು ಡಾ. ಸಕ್ಸೆನಾ.

'ನಾವೇನು ಮಾಡಲಿಕ್ಕಾದೀತು? ದೇವರಿಚ್ಛೆ" ಎಂದರು ಡಾ. ಬದ್ರುನ್ನಿಸಾ.

'ಮೊಲಿನಿ ಬಹಳ ಪ್ರಯತ್ನ ಮಾಡಿದರು. ಆದರೆ ಉಪಯೋಗವಾಗಲಿಲ್ಲ" ಎಂದರು ಡಾ. ನಿರ್ಮಲಾ.

'ಆಯಿತಲ್ಲಾ' ಎಂದರು ಮೊಲಿನಿ.

೦ ೦ ೦ ೦ ೦ ೦ ೦

"ಈ ಜನರಿಗೆ ಏನು ಹೇಳಿದರೂ ತಿಳಿಯುವುದಿಲ್ಲಮ್ಮಾ. ಪ್ರಾಣಿಗಳಂತೆ ವರ್ತಿಸುತ್ತಾರೆ' ಎಂದಳು ಮೊಲಿನಿ.

"ಏನು ಮಗ ಹಾಗೆ ಹೇಳುತ್ತಿ?" ಎಂದರು ರುದ್ರಮ್ಮ

'ನೋಡಮ್ಮಾ ಆಕೆಗೆ ಗರ್ಭಪಾತ ಆಗಿ ನಾಲ್ಕು ತಿಂಗಳಾಗುತ್ತವೆ ಮೂತ್ರ. ಏತ್ತೊಮ್ಮೆ ಗರ್ಭಿಣಿ, ಜನರಿಗೇಕೆ ಅರ್ಥವಾಗುವುದಿಲ್ಲವೋ ತಿಳಿಯುವುದಿಲ್ಲ. ವಿಶ್ರಾಂತಾನದ ಯೋಚನೆಯೇ ಅವರಿಗಿಲ್ಲ ಬರೆ ಖಾಕವೀ ಪುನೋವೈತ್ತಿ' ಎಂದಳು ಮೊಲಿನಿ.

"ಒಬ್ಬೊಬ್ಬರು ಒಂದೊಂದು ತರ. ನೀನು ಮಾಡಲಿಕ್ಕಾಗುತ್ತದೆ. ಹೇಳು?' ಎಂದು ತಾಯಿ ಮಗಳು ಸಂವಾದ ಆಗುತ್ತಿರುವಾಗಲೇ ವೀರಪ್ಪನವರು ಒಂದು ಫೋಟೋ ಹಿಡಿದು ಒಳಗೆ ಬಂದರು.

'ಯಾರ ಫೋಟೋ?' ಎಂದರು ರುದ್ರಮ್ಮ.

'ನೋಡು ನೋಡು. ಮತ್ತೆ ಹೇಳು' ಎಂದರು ವೀರಪ್ಪ.

ಫೋಟೋ ಮೊಲಿನಿಯ ಕೈಗೆ ಹೋಯಿತು. ನೋಡುತ್ತಾ ನೋಡುತ್ತಾ ನಸು ನಕ್ಕು ತಾಯಿಯ ಕೈಗೆ ಫೋಟೋ ಕೊಟ್ಟು ಆಸ್ಪತ್ರೆಗೆ ಹೊರಟು ಹೋದಳು.

"ಯಾರ ಫೋಟೋ ಅದು?" ಎಂದಳು ರುದ್ರಮ್ಮ.

"ಆನಂತಕೃಷ್ಣನವರ ಮಗ"

"ಏನು ಕೆಲಸ?"

'ಡಾಕ್ಟರರು. ಒಳ್ಳೆಯ ಪ್ರಾಕ್ಟೀಸಿದೆ'.

'ನಿನಗೆಲ್ಲಿ ಸಿಕ್ಕಿತು?"

"ಇದೇ ಈಗ ಬರುತ್ತಾ ಇರುವಾಗ ಅವರ ಮನೆಗೆ ಕರೆದುಕೊಂಡು ಹೋದರು. ಅವರ ಒಬ್ಬ ಮಗ ಡಾಕ್ಟರರೆಂದು ನನಗೆ ತಿಳಿದೇ ಇರಲಿಲ್ಲ. ಬಾಗಿಲಲ್ಲಿ ತೂಗು ಹಾಕಿದ್ದ ಫೋಟೋ ನೋಡಿ ವಿಚಾರಿಸುವಾಗ ತಿಳಿಯಿತು. ಅವನ ತಿನ್ನಿ ಫೋಟೋ ಇದು ತಿಳಿತಾ?" ಎಂದರು ವೀರಪ್ಪ ಗೆಲುವಿನಿಂದ 'ಮೊಲಿನಿ ನೋಡಿ ಮುಗುಳುನಕ್ಕಳಲ್ಲಾ. ಪ್ರಯತ್ನಿಸಿ ನೋಡಿ' ಎಂದರು ರುದ್ರಮ್ಮ.

'ಯಾವುದಕ್ಕೂ ಅವಳು ಒಪ್ಪಬೇಕಲ್ಲಾ? ಅವಳ ಮನಸ್ಸನ್ನು ಒಲಿಸಿಕೋ' ಎಂದರು ವೀರಪ್ಪ.

(ಹದಿನೈದದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ ... ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ
++
ಸಂಪಾದಕ—ಪ್ರಕಾಶಕರು:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ತೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫
++
ಜಾಹೀರಾತು ದರಗಳು:
ಇಂಚಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50
++
ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವನ್ನು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾಸಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.
ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಸೂಚನೆಗಳನ್ನಾಗಲೀ ಸಿಂಡಿಕೇಟ್ ಬೇರಿಂಕ್ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಹೆಸರಿಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಭಕ್ತ ಸಮುದಾಯದ ಸ್ವರ್ಗ—ಶ್ರೀಕ್ಷೇತ್ರ ಧರ್ಮಸ್ಥಳದ ಅಭಿವೃದ್ಧಿ—ಸಮೃದ್ಧಿಯನ್ನೇ ಪರಮ ಧ್ಯೇಯವನ್ನಾಗಿಸಿಕೊಂಡ ಉಜ್ವಲ ಯೋಜಕರೂ ಮಹಾ ಸಾಧಕರೂ ಆದ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೧೫	೮—೧೨—೧೯೬೬	No. 15

ವಜನ ಸುಧೆ

ಶ್ರುತಂ ಪ್ರಜ್ಞಾನುಗಂ ಯಸ್ಯ
ಪ್ರಜ್ಞಾ ಜ್ಞಾನ ಶುತಾನುಗಾ ॥
ಆತ್ಮಂಭನ್ಯಾರ್ಯ ಮಯೂರದಃ
ಪಂಡಿತಾಖ್ಯಾಂ ಲಭೇತ ಸಃ ॥

ಯಾವನ ವಿದ್ಯೆಯು ಬುದ್ಧಿಯನ್ನೂ ಬುದ್ಧಿಯು ವಿದ್ಯೆಯನ್ನೂ ಅನುಸರಿಸಿತ್ತ ದಿಯೋ ಪ್ರಜ್ಞರ ಗೌರವವನ್ನು ಯಾರು ಕೆದಿಸುವುದಿಲ್ಲವೋ ಅವನು ನಿಜವಾದ ಬುದ್ಧಿವಂತನು.

ತುಪ್ಪ ಉಗುಳಿದರು

ಶ್ರೀ ಕಾಮರಾಜರು ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಪಕ್ಷದಲ್ಲಿಯೂ ಕೆಲವೊಮ್ಮೆ ಸರಕಾರದಲ್ಲಿಯೂ 'ಅಸಿರೀಕ್ಷಿತ'ಗಳು ನಡೆಯುತ್ತ ಬಂದಿವೆ. ಪ್ರಧಾನಿ ನೆಹರುರವರು ತನಗಿಂತ ಅಭಿನ್ನವೆಂದು ಭಾವಿಸಿದ್ದ ಶ್ರೀ ವಿ. ಕೆ. ಕೃಷ್ಣ ಮೆನನ್ನರಿಗೆ ಅಶಾನ್ಯ ಮುಂಬಯಿ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಲು ಟಿಕೇಟು ದೊರೆಯದೆ ಹೋದದ್ದು ಗೃಹಮಂತ್ರಿ ನಂದಾರ ನಿರ್ಗಮನಕ್ಕೆಂತಲೂ ದೊಡ್ಡ ಸಂಗತಿಯೆನ್ನಲು ಬೇಕು. ಒಂದು ಕಾಲದಲ್ಲಿ ಭಾರತದ ಪರವಾಗಿ ಕಾಶ್ಮೀರದ ಮೇಲೆ ಮಾತ ಮಾತಾಡುತ್ತಲೇ ಮೈಮರೆಯುತ್ತಿದ್ದ, ದೇಶದ ಸಂರಕ್ಷಣಾ ಮಂತ್ರಿಯಾಗಿ ಪ್ರಧಾನಿಗಳ ಆಪ್ತರಾಗಿ ಮೆರೆಯುತ್ತಿದ್ದ ಕೃಷ್ಣ ಮೆನನ್ನರು ಕಳೆದೆರಡು ಚುನಾವಣೆಗಳಲ್ಲಿಯೂ ಈಶಾನ್ಯ ಮುಂಬಯಿಯಿಂದ ಆಯ್ಕೆ ಹೊಂದಿದ್ದರು. ಇವರ ಸೋಲು – ಗೆಲುವುಗಳನ್ನು ಪ್ರಧಾನಿ ನೆಹರುರವರು ಭಾರತದ ವಿದೇಶ ನೀತಿಯ ಸೋಲು-ಗೆಲುವು ಎಂದು ಸಾರಿದ್ದುಂಟು. ಇಂತಹ ಒಬ್ಬ ಅಂತಾರಾಷ್ಟ್ರೀಯ ವ್ಯಕ್ತಿಗೆ ಕಾಂಗ್ರೆಸ್ ಟಿಕೇಟು ನಿರಾಕರಿಸುವುದೆಂದರೆ, ಅದ ಸಾಮಾನ್ಯ ಘಟನೆಯಲ್ಲ

ಇದೇಕೆ ಹೀಗೆ? ಮೆನನ್ನರು ತನ್ನ ಹಿಂದಿನ ಮಕ್ಕಾರ ಕ್ಷೇತ್ರವನ್ನೇ ಈ ಬಾರಿಯೂ ಆಯ್ದುಕೊಂಡರು. ಆದರೆ, ಪ್ರಾದೇಶಿಕ ಕಾಂಗ್ರೆಸ್ಸು ಇದನ್ನು ಒಪ್ಪಲಿಲ್ಲ. ಶ್ರೀ ಎಸ್. ಕೆ. ಪಾಟೀಲರ ಕೈವಾಡವೂ ಇದರಲ್ಲಿದೆಯೆಂದು ಹೇಳಲಾಗುತ್ತಿದೆ. ಇತ್ತೀಚಿಗಿನ ದಿನಗಳಲ್ಲಿ ಶ್ರೀ ಪಾಟೀಲರ ಮನಸ್ಸು ಸ್ವಿಮಿತದಲ್ಲಿದ್ದಂತಿಲ್ಲ. ತನಗೆ ದೊರೆತಿರುವ ರೇಲ್ವೆ ಖಾಯೆಯಿಂದಲೇ ಅವರು ಸೃಪ್ತರಾದಂತಿಲ್ಲ. ಜೀವನ ಮತ್ತು ಪಾಟೀಲರ ನಡುವೆ ಒಂದು ತರದ ವೈಜೋಟಿಯೂ ಇದೆಯೆಂಬುದೂ ವ್ಯಕ್ತವಾಗುತ್ತಿದೆ. ಯೋಜನಾ ಆಯೋಗದಿಂದ ಹೊರಬರಲು ಬಯಸುವ ಶ್ರೀ ಎಸ್. ಜಿ. ಬರ್ವೆಯವರೂ ಶ್ರೀ ಮೆನನ್ನರ ಕ್ಷೇತ್ರಕ್ಕೆ ನಾಮಪತ್ರ ಹಾಕುವಂತಾದುದು ಪ್ರಾದೇಶಿಕ ಕಾಂಗ್ರೆಸ್ಸಿನ ಪುಣ್ಯ. ಶ್ರೀ ಮೆನನ್ನರು ಬೇರೆಯೇ ವ್ಯತದಾರ ಕ್ಷೇತ್ರವನ್ನು ನೋಡಿಕೊಳ್ಳಬೇಕೆಂದು ಅವರಿಗೆ ಮೊದಲೇ ಸೂಚಿಸಲಾಗಿತ್ತು—ಹಾಗಿದ್ದರೂ ಮೆನನ್ ತನ್ನ ಪಟ್ಟು ಬಿಡಲಿಲ್ಲ. ರಾಜ್ಯ ಸಮಿತಿ ಮೆನನ್ನರ ಅವೇದನವನ್ನು ಒಪ್ಪದೆ ಕೇಂದ್ರಕ್ಕೆ ರವಾನಿಸಿತು. ಕೇಂದ್ರ ಪೇಟೆಯಲ್ಲಿ ಸಿಕ್ಕಿತು. ಉಳಿದೆಲ್ಲ ಕ್ಷೇತ್ರಗಳಿಗೆ ಪ್ರಾದೇಶಿಕ ಕಾಂಗ್ರೆಸ್ ಸಿಫಾರಸು ಮಾಡಿದವರನ್ನೇ ಕೇಂದ್ರವೂ ಒಪ್ಪಿಕೊಂಡಿತು. ಈಶಾನ್ಯಮುಂಬಯಿಯೊಂದನ್ನು ಅವನಲ್ಲಿನಿರ್ಧರಿಸಿ ಕಾಮರಾಜರಿಗೆ ಅಂತಿಮ ನಿರ್ಧಾರ ಕೈಗೊಳ್ಳಲು ಅಧಿಕಾರವಿತ್ತಿತು. ಪ್ರಧಾನಿ ಇಂದಿರಾ ಗಾಂಧಿಯವರು ಮೆನನ್ನರನ್ನು ಪರೋಕ್ಷವಾಗಿ ಬೆಂಬಲಿಸಿದ್ದರು; ಪ್ರಾದೇಶಿಕ ಚುನಾವಣಾ ಸಮಿತಿಯ ಶಿಫಾರಸುಗಳನ್ನು ಸಾಮಾನ್ಯನಾಗಿ ಮನ್ನಿಸುವ ಪರಿಪಾಟ ಈ ಬಾರಿಯಿರುವುದರಿಂದ ಕಾಮರಾಜರಿಗೆ ಮೆನನ್ ಪ್ರಕರಣ ಬಿಸಿತುಪ್ಪವಾಯಿತು. ಕೇರಳ, ಮದ್ರಾಸು ಅಥವಾ ಇನ್ನಾವುದಾದರೂ ರಾಜ್ಯದಲ್ಲಿ ಒಂದು ಮತದಾರ ಕ್ಷೇತ್ರವಾರಿಸಿಕೊಳ್ಳುವಂತೆ ಮೂಡಲು ತೆರೆಯು ಹಿಂದೆ ಬಹಳಷ್ಟು ಪ್ರಯತ್ನ ನಡೆಯಿತು. ಆದರೆ ಮೆನನ್ನರ ವಾದವೊಂದೇ: 'ಕಾಂಗ್ರೆಸಿಗನಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಗೊಂಡ ವ್ಯಕ್ತಿಗೆ ಅದೇ ಮತದಾರ ಕ್ಷೇತ್ರದಿಂದ ಸ್ಪರ್ಧಿಸಲು ಒಪ್ಪದಿರುವುದರ ಅರ್ಥವೇನು?'—ಮೆನನ್ ಬೇರೆ ಕ್ಷೇತ್ರಗಳಿಂದ ಸ್ಪರ್ಧಿಸಲು ನಿರಾಕರಿಸಿಯೇ ಇರಬೇಕು—ಏಕೆಂದರೆ, ಅವರು ಕೆಲವೊಂದು ವಿಶಿಷ್ಟ ನೀತಿಯನ್ನು ಪಾಲಿಸುತ್ತ ಬಂದವರು. ಅಂತೂ ಕಾಮರಾಜರೂ ಕೇಂದ್ರ ಸಮಿತಿಯ ಸದಸ್ಯರೂ ಮೆನನ್ ಬಿಸಿತುಪ್ಪವನ್ನು ನಂಗಲು ಹೆದರಿದರು.—ಉಗುಳಿಬಿಟ್ಟರು.

ಶ್ರೀ ಮೆನನ್ ಪಾರ್ಲಿಮೆಂಟಿಗೆ ಬರಬೇಕೆತ್ತು—ಇದು ಕಾಂಗ್ರೆಸ್ ಮತ್ತು ಕಾಂಗ್ರೇಸೇತರ ರಾಜಕೀಯ ಪಕ್ಷಗಳ ಸಾಮಾನ್ಯಾಭಿಪ್ರಾಯ. ಆದರೆ, ಮೆನನ್ ತನ್ನ ವಿಶಿಷ್ಟ ನೀತಿಯನ್ನು ತ್ಯಾಗವಾದರೂ ಸಡಿಲಿಸದೆ ಹೋದರೆ, ಈ ಅಭಿಪ್ರಾಯಕ್ಕೆ ಬೆಲೆ ಬರುವುದಿಲ್ಲ. ಶ್ರೀ ಮೆನನ್ನರು ನಮಗೆ ಬೇಕು ಎನ್ನುವವರೂ (ಈಶಾನ್ಯ) ಮುಂಬಯಿಯಲ್ಲದ್ದಾರೆ— ಮೆನನ್ ಅವರಿಗೆ ಉತ್ತೇಜನ ನೀಡದೆ ಹೋಗಬಹುದು.— ಆದರೆ, ಅನ್ಯಾಯ—ನ್ಯಾಯವಿವೇಚನೆಯಿಲ್ಲದೆ ಪ್ರತಿಯೊಂದಕ್ಕೂ ಕೈಯೆತ್ತುವ ಇಂದಿನ ಈ ಕಲುಷಿತ ವಾತಾವರಣದಲ್ಲಿ ತುಸುವಾದರೂ ಗೊಂದಲವಿಲ್ಲದೆ ಹೋಗದಿರದು. ಮೆನನ್ ಹೇಳುತ್ತಾರೆ: "ನಾನು ಕಾಂಗ್ರೆಸಿಗ." ಈ ಭಾವನೆಯನ್ನು ಅವರು ಕಟ್ಟುನಿಟ್ಟಾಗಿ ಉಳಿಸಿಕೊಳ್ಳಬೇಕು. ಜನವಾಣಿಯ ಮುಂದೆ ರಾಜಕಾರಣಿ ಬೇಡವಾದರೂ ಕೆಲವೊಮ್ಮೆ ತಲೆಬಾಗಿಸಲೇಬೇಕು ಮೆನನ್ನರ ರಾಜಕೀಯ ಜೀವನದಲ್ಲಿ ಇದೀಗ ಇಂತಹ ಎರಡನೆಯ ಘಟನೆ.

ನಮಗೊಂದು ಪ್ರಶಸ್ತಿ

ಇಷ್ಟೇನು, ಗೋವೆಯನ್ನು ಮಹಾರಾಷ್ಟ್ರದಲ್ಲಿ ಸೇರಬೇಕೆ, ಕೇಂದ್ರಾಧೀನ ಪ್ರದೇಶವಾಗಿಯೇ ಮುಂದುವರಿಯಬೇಕೆ ಎಂಬುದನ್ನು ಜನಮತಗಣನೆಯಿಂದ ನಿರ್ಧರಿಸಲು ತಕ್ಕ ಶಾಸನ ತರುವಿಯೂ ಆಯಿತು. ಇದಕ್ಕೆ ಪೂರ್ವಭಾವಿಯಾಗಿ ಬಾಂಡೋಡ್ಕರರ ಸರಕಾರದ ರಾಜೀನಾಮೆಯನ್ನೂ ಸ್ವೀಕರಿಸಿ ಶಾಸನ ಸಭೆಯನ್ನೂ ವಿಸರ್ಜಿಸಲಾಯಿತು. ಕನ್ನಡಿಗರು ತಮ್ಮನ್ನು ತಾವೇ ವಿಚಾರಿಸಿಕೊಳ್ಳಬೇಕಾದ ಪ್ರಶ್ನೆಯೊಂದಿದೆ—ಗೋವೆಯು ಕರ್ನಾಟಕದಲ್ಲಿ ವಿಲೀನವಾಗುವ ಪ್ರಮೇಯ ಇಲ್ಲವೇ ಇಲ್ಲ. ಇದೇಕೆ ಎಂಬುದನ್ನು ಸವಿವರಿಸಲು ನವ ಪ್ರಾಜ್ಞರ ಕೈಗೆ ಇತರರು ನೀಡಿದ ಪ್ರಶಸ್ತಿ ಸಾಕ್ಷ್ಯವೇ ಸಾಕ್ಷಾ ಹೇಳುತ್ತಿದೆ. ಗೋವೆ ವಿಮೋಚನೆ ಬಗೆಗಿನ ಮೊದಲನೆಯ ಸತ್ಯಾಗ್ರಹದ ಕಾಲಕ್ಕೆ ಪೋರ್ಚುಗೀಸರ ಗುಂಡಿನ ರುಚಿ ನೋಡಿದ ಮುಖ್ಯ ಪ್ರದೇಶದ ಶ್ರೀಮತಿ ಸಹೋದರಾ ಬಾಂಡೆ ರೈಯವರು ಈ ಪ್ರಶಸ್ತಿ ನೀಡಿದ್ದಾರೆ. 'ಮೈಸೂರಿಯನ್ನರಿಗೆ ಆಡಳಿತಾತ್ಮಕ ಬುದ್ಧಿವಂತಿಕೆಗಳು ಇಲ್ಲ' (ಆದಕ್ಕಾಗಿಯೂ ಗೋವೆಯು ಮಹಾರಾಷ್ಟ್ರದಲ್ಲಿಯೇ ಸೇರಬೇಕೂ)—ಇಂತಹ ಪ್ರಶಸ್ತಿ ಪುರಾಣಜ್ಞರಿಂದ ಪಡೆದ ನಾವೂ ನಮ್ಮ ಸರಕಾರವೂ ಧನ್ಯವೆನ್ನದೆ ಮತ್ತೇನು ಮಾಡಬಹುದು?

ಅಮೆರಿಕನ್ನರಿಗೆ ಭಾರತದಲ್ಲಿ ಆನ್ಲೆ

ಕಡಿಯೂರು, ಬ್ರಹ್ಮಾವರ, ಎಸ್. ವಿ. ಎಸ್. ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ. ರಾಮಕೃಷ್ಣ ಸಂದಯನವರು ಯು. ಕಮಲಾ ಜಾಯಿ ಹೈಸ್ಕೂಲಿನಲ್ಲಿ ತನ್ನ ಅಮೆರಿಕ ಸ ಯಾತ್ರೆಯ ಕುರಿತು ಖ. ಶರಂದು ಭಾಷಣ ಮಾಡಿದರು. ಅಮೆರಿಕೆಯ ಜನರ ರೀತಿ-ನೀತಿ, ನಯ—ವಿನಯ ಮೊದಲಾದವುಗಳನ್ನು ವಿವರಿಸಿದ ಅವರು ಭಾರತೀಯ ಸಂಸ್ಕೃತಿ ಪುತ್ತು ಜನತೆಯ ಮೇಲೆ ಅವರು ತೋರಿರುವ ಆಸ್ಥೆಯನ್ನು ವಿವರಿಸಿದರು. ರಂಗಾಮು ಮ್ಯೋಪಾಧ್ಯಾಯ ಶ್ರೀ ಎಚ್. ಅನಂತಯ್ಯ ಹಂದಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಂಭದಲ್ಲಿ ಶ್ರೀ ಆರ್. ಪಿ. ಶೆಟ್ಟಿಯವರು ಸ್ವಾಗತಿಸಿದರು. ಕೊನೆಯುಲ್ಲಿ ವಿದ್ಯಾರ್ಥಿ ನಾಯಕ ಶ್ರೀ ಕೆ. ಶಿವಪುರಾಣಿಯವರು ಧನ್ಯವಾದವರ್ಪಿಸಿದರು.

ನರಸಣ್ಣನ ಸರಸ

'ಅನ್ಯಾಯವಾಗಿ ಅಧಿಕ ವೇತನ ನೀಡಿ, ಅದು ತಪ್ಪೆಂದು ತಿಳಿದ ಮೇಲೆ ಕೊಟ್ಟ ವೇತನವನ್ನು ಮರಳಿ ಪಡೆಯುವುದೂ ವೈನಾಮು ಕರಣದ ನಿರ್ಧರಿಸಿದೆಯಂತೆ....'

'ಇದಕ್ಕೇ ಬುದ್ಧಿಯಲ್ಲದ ಜನ ಅಂತ ಅಂದುಕೊಂಡದ್ದು ಇದೇಕೆ?'

ವಿಚಾರ ಮಂಥನ

ಪ್ರಖರ ದೇಶಭಕ್ತಿಯ ಅಭಾವ

ಬರೆದವರು — ಶ್ರೀ 'ಶಿವಶಂಕರ', ಮದರಾಸು.

ಅಭಾವ, ಕೊರತೆ....ಅಂತಹ ಶಬ್ದಗಳಿಗೆ ಇಂದು ಅಭಾವ ಬಂದಿರದಿಲ್ಲ. ಅಂತಹ ಪದಗಳ ಪ್ರಯೋಗ ಅಡೆತಡೆ ಇಲ್ಲದೆ ಅವ್ಯಾಹತವಾಗಿ ನಡೆಯುತ್ತಿದೆ. ಆಹಾರ ಅಭಾವ, ಬಟ್ಟೆಯ ಅಭಾವ, ಸಂಪತ್ತಿನ ಅಭಾವ....ಇಂತಹ ಅಭಾವಗಳಿಗಿನಿತೂ ಅಭಾವ ಇಲ್ಲ. ಈ ಪದ ಪ್ರಯೋಗದಕ್ಕೆ ಪ್ರಜೆಗಳ ಮನಸ್ಸು ಜೋರಾಗಿ ಒಡುತ್ತಿದೆ—ನಾಗಾಲೋಟದಿಂದೆ. ಆದರೆ ಅಂತಹ ಅಭಾವ ಪ್ರಾಣಿಗಳಿಗೂ ಬರುತ್ತದೆ—ಮಾನವನಿಗೆ ಮಾತ್ರವಲ್ಲನೆಂದು ಕೆಲವರು ಹೇಳುವದುಂಟು. ನರನಿಗೂ ವಾನರನಿಗೂ ಇರುವ ವ್ಯತ್ಯಾಸ ಅದೆಂದು ಅವರು ಅನ್ನುವದುಂಟು. ಅದು ಅಪ್ಪಟ ಸತ್ಯವೂ ಹೌದು. ಆದರೂ ಕೆಲವಂಗದು ರುಚಿಸುವದೇ ಇಲ್ಲ. ಅವರಿಗೆ ರುಚಿಸುವದಿಲ್ಲವಾದರೂ ಮಾನವತಾ ಪ್ರೇಮಿಗಳು ಮುರೆಮೊಚಿ ಕಟು ಸತ್ಯವನ್ನು ಹೇಳಿ ಬಿಡುತ್ತಾರೆ, ಸಂಬಂಧಪಟ್ಟವರಿಗದು ಬಹಳ ಕಹಿಯಾಗಿರುತ್ತದೆ. ಅವರಿಗದು ಕಹಿಯಾಗುತ್ತದೆಂದು ಸತ್ಯವನ್ನು ಬಚ್ಚಿಡುವದು ನ್ಯಾಯವಿರುವದಿಲ್ಲ.

ಭಾರತದ ರಾಷ್ಟ್ರಾಧ್ಯಕ್ಷ ಶ್ರದ್ಧೆಯ ರಾಧಾಕೃಷ್ಣನವರು ಅಂತಹ ಒಂದು ಕಟು ಸತ್ಯವನ್ನಾಡಿದ್ದಾರೆ. ದಿವಂಗತ ವಿಶ್ವೇಶ್ವರಯ್ಯನವರ ಸ್ಮತಿಯ ಅನಾವರಣ ಕ್ಕಾಗಿ ಶ್ರೀಯುತರು ಹೈದ್ರಾಬಿಗೆ ಬಂದಿದ್ದಾಗ ಒಂದು ಸಂದರ್ಭದಲ್ಲಿ ಅವರು ಇಂದು ದೇಶದಲ್ಲಿ ನಡೆಯುತ್ತಿರುವ ಗಲಾಟೆ-ಗೊಂದಲಗಳಿಗೆ ಜನರಲ್ಲಿರುವ ದೇಶಭಕ್ತಿಯ ಅಭಾವವೇ ಕಾರಣವೆಂದು ಸ್ಪಷ್ಟವಾಗಿ ಸೂಚಿಸಿದರು. ಅದೆಂತಹ ಅಪ್ಪಟ ಸತ್ಯ! ಇಂದು ಪ್ರತಿಯೋರ್ವನೂ ಕೂಡಲು ತನಗೇನು ಸಿಗುತ್ತದೆಂಬುದನ್ನು ಮಾತ್ರ ನೋಡುತ್ತಾನಲ್ಲದೆ ದೇಶದ ಒಳಿತಿನಕ್ಕೆ ಗಮನ ಹರಿಸುತ್ತಿರುವದಿಲ್ಲ ನೆಂದೂ ಅವರಾಡಿರುವರು.

ತೆರೆದ ಹೃದಯದಿಂದ ಬಂದಿರುವ ಬಿಚ್ಚು ನುಡಿಗಳವು. ಅಲ್ಲೊಬ್ಬರು ಇಲ್ಲೊಬ್ಬರು ಅದಕ್ಕೆ ಅಪವಾದ ಇರಬಹುದು ಅಷ್ಟೇ. ಡಾಕ್ಟರ್ ರಾಧಾಕೃಷ್ಣನ್ ರವರು ದೇಶದ ರೋಗನೇನೆಂಬುದನ್ನು ಸ್ಪಷ್ಟವಾಗಿ ಹೇಳಿರುವರು. ಹೇಳಿಬಿಟ್ಟ ಕಾರಣ ಮಾತ್ರದಿಂದಾಗಿ ಅದು ಗುಣವಾಗಿಬಿಡುತ್ತದೆಯೇ? ಎನ್ನುವದು ಬೇರೆ ವಿಷಯ. ಈ ಕಾರಣ ಹೇಳಲೂ ಧೈರ್ಯವಂತರು ಇಂದು ಬೇಕಲ್ಲ! ಡಾಕ್ಟರ್ ರಾಧಾಕೃಷ್ಣನ್ ಅ ಮಾತುಗಳನ್ನಾಡಿದಲ್ಲಿ ಅದಕ್ಕೆ ಬೆಲೆ ಇರುತ್ತದೆ, ಇತರರಾಡಿದಲ್ಲಿ ಇವರಿಗೆ ಬೇರೇನೂ ಕೆಲಸವಿಲ್ಲವೆ ನ್ನುವ ಚುಚ್ಚು ನುಡಿಗಳನ್ನು ಕೇಳಬೇಕಾಗಿ ಬರುತ್ತದೆ. ಇರ್ಪತ್ತನೇ ಶತಮಾನದಲ್ಲಿ ದೇಶಭಕ್ತಿಗೆ ಅರ್ಥವೇ ಇಲ್ಲವೆನ್ನುವವರು ಅಂತಹ ಮಾತುಗಳನ್ನು ಸಹಿಸಿಕೊಳ್ಳುವಂತಿಲ್ಲ.

ಏನೇ ಇದ್ದರೂ ಊರಿಗೆ ಉಪದೇಶ ಕೊಡುವದು ಬಹಳ ಸುಲಭದ ಕೆಲಸ. ದೇಶಭಕ್ತಿಯ ದಾರಿದ್ರ್ಯತೆ ತಾಂಡವವಾಡುತ್ತಿದೆಂದು ರಾಷ್ಟ್ರಾಧ್ಯಕ್ಷರೇ ಹೇಳಬೇಕಾದಲ್ಲಿ ತಾಂಡವ ನೃತ್ಯ ಎಂತಹ ಘಟ್ಟಕ್ಕೆ ಬಂದಿದೆಂಬುದನ್ನು ವಿವೇಕಶಾಲಿಗಳು ತಿಳಿದುಕೊಳ್ಳಬಹುದು. ಹಾಗಿದ್ದರೂ ಈ "ದೇಶಭಕ್ತಿ" ಅಂದರೆ ಅದೇನೆಂಬುದನ್ನು ಅವರು ಕೇಳದೆ ಬಿಡಲಿಕ್ಕಿಲ್ಲ. ಇಂದು ಪರಿಸ್ಥಿತಿ ಆ ರೀತಿ ಇದೆ ದೇಶಭಕ್ತಿಯೆಂದರೆ ದೇಶದ ಮೇಲೆ ಭಕ್ತಿಯೆಂದಿರುವದೆಂದು ಸುಲಭವಾಗಿ ಹೇಳಿ ಬಿಡಬಹುದು. ಕನ್ನಡ ಅರ್ಥವಾಗದಿದ್ದರೂ ಪೇಟ್ರಿಯೊಟಿಸಂ" ಹೇಳಿದರೆ ಕೆಲವರಿಗೆ ಒಡನೆ ಗೊತ್ತಾಗುತ್ತದೆ 'ಈ ದೇಶಭಕ್ತಿ ಅಥವಾ ಪೇಟ್ರಿಯೊಟಿಸಂ ಅಂದರೇನು?, ಇಪ್ಪತ್ತನೆಯ ಶತಮಾನದಲ್ಲಿ ಅದರ ಅವಶ್ಯಕತೆ ಏನು? ಸೋಷಿಯಾಲಿಸಮಿನೆದುರು ಈ ಹಳೆಯ ಕಾಲದ ಪೇಟ್ರಿಯೊಟಿಸಂ ಏತಕ್ಕೆ" ಪ್ರಶ್ನೆಗಳಿಗೆ ಬರಗಾಲ ಬಂದಿರುವದಿಲ್ಲ.

ದೇಶಭಕ್ತಿಯೆನ್ನುವಾಗ ದೇಶದ ಸ್ಪಷ್ಟ ಚಿತ್ರ ನಮ್ಮ ಕಣ್ಮುಂದೆ ಬಂದು ನಿಲ್ಲಬೇಕು. ಆಗ, ಮೂರ್ತ ದೇಶಭಕ್ತಿಯೆಂಬುದು ಕೇವಲ ತುಟಿಗಳಿಗೆ ಬರುವ ಬಣ್ಣ ಶಬ್ದವಾಗಿರದೆ ಹೃದಯ ವೀಣೆಯಿಂದ ಮಿಡಿದು ಬಂದ ಅಮರಗಾನವಾಗುತ್ತದೆ. ದೇಶ ಅಂದರೆ ಒಂದಿಷ್ಟು ಭೂ ಪ್ರದೇಶ ತಾನೇ?—ಕಲ್ಲು ಮುಳ್ಳು, ಮಣ್ಣು, ಮರ ಗಿಡ ಇತ್ಯಾದಿ ಇವು ಸಾಧಾರಣ ಭೌಜಿಕ ವಾಯಿಯಿಂದ ಬಂದಿರುವವಾಗಳಲ್ಲ. ಭಾರತದ ಮಹಾ ಮಹಾ ಪ್ರಧಾನರೊಬ್ಬರ ಭಾರೀ ಪ್ರಕಟನೆಯೇ ಇದೆ. ಇದಕ್ಕೆ ಇತರರ ಸಹಾನುಭೂತಿಯೂ ಇದೆ. ಇಲ್ಲದಿದ್ದಲ್ಲಿ, ನಿಜವಾಗಿನವ್ಮಲ್ಲಿದೇಶಭಕ್ತಿ, ಅಣು ಮಾತ್ರ ಇರುತ್ತಿದ್ದರೂ ಕೂಡಾ ದೇಶವಿಭಜನೆಯ ಘೋರದಾತಕತನವನ್ನು ನಮ್ಮ ಕೈಯಾರೆ ನಾವು ಮಾಡುತ್ತಿದ್ದೆವೆಯೇ? ಇರಲಿ. ಏನೋ ಒಮ್ಮೆ ಎಡವಿ ಬಿದ್ದು ಬಿಟ್ಟೆವು. ಆನಂತರವಾದರೂ ನಾವು ಎಚ್ಚರದಿಂದಿರಬೇಕಲ್ಲವೇ? ಜೈನಾಕ್ರಮಣ ನಡೆಸಿದಾಗ ಆಗ ಇದ್ದ ಪ್ರಧಾನಿಯವರು ಹೇಳಿದ್ದಾದರೂ ಏನು? ಜೈನಾ ಆಕ್ರಮಿಸಿಕೊಂಡಿರುವದು ಹುಲ್ಲೂ ಮೊಳೆಯದ ಪ್ರಯೋಜನ ರಹಿತ ಭೂ ಪ್ರದೇಶ! ಅದಕ್ಕಾಗಿ ಹೋರಾಟ ನಡೆಸುವದು ಸರಿಯಲ್ಲ! ಹೀಗಿರುವದು ಒಂದೆರಡು ಬಾರಿಯಲ್ಲ - ಬಾರಿ, ಬಾರಿ, ಅನೇಕ ಬಾರಿ. ಬೇರು ಬಾರಿಯು ವಿಷಯದಲ್ಲಿ ಅಲ್ಲಿ ಜನರೇ ವಾಸಿಸುತ್ತಿಲ್ಲವೆಂದು ಆಗಿನ ಪ್ರಧಾನಿಯವರು ಹೇಳಿಲ್ಲವೇನು? ಶ್ರೀಹಟ್ಟಿದ ತಿಶ್ರೀ ಎಗ್ರಾಯಿತು? ಕಚ್ಚ ಒಪ್ಪಂದದ ಕರಾಳಛಾಯೆ ಏನು? ಅರ್ಧಕಾಶ್ಮೀರ ಇಂದು ಯೂರ ಆಕ್ರಮಣಕ್ಕೊಳಗಾಗಿ ಇದೆ. ಈ ರೀತಿ ದೇಶವನ್ನು ಭಿನ್ನವಿಭಿನ್ನಗೊಳಿಸುತ್ತ ನಾವು ಹೋದಂತೆ ನಮ್ಮಲ್ಲಿ ದೇಶಭಕ್ತಿ ವೃದ್ಧಿ ಹೊಂದುತ್ತದೆಯೇ? ಮುಂಬರುವ ಪೀಳಿಗೆಗೆ ದೇಶಭಕ್ತಿಯೆನ್ನುವ ಒಂದು ಶಬ್ದವಿತ್ತು ಅನ್ನುವದಕ್ಕಾದರೂ ಕುರುಹು ಉಳಿದೀತೇ? ಗಡಿಯ ಪ್ರಶ್ನೆ ಅದು ಬಹಳ ಗಡಿಬಿಡಿಗು ಪ್ರಶ್ನೆ ಇರವದರಿಂದ ಒಂದಿಷ್ಟು ಗಡಿ ಬಿಡಿರೆಂದು ಹೇಳಿದಲ್ಲಿ ತಪ್ಪೇನಾಗುವದಿಲ್ಲವೆಂದು ಕೆಲವರು ರಾಗ ಎಳೆಯಬಹುದು. ಹುಲ್ಲು ಮೊಳೆಯದ, ಕಲ್ಲೂ ಮುಳ್ಳೂ ಇರದ ಗಡಿಯ ಪ್ರಶ್ನೆ ವಿಷಯ ಒಂದು ಬದಿಗಿರಲಿ.

ಒಳಗೆ ನಡೆಯುತ್ತಿರುವದಾದರೂ ಏನು? ಉಕ್ಕಿನ ಯಂತ್ರಾಲಯಕ್ಕಾಗಿ, ಉಗಿ ಬಂಡಿಯ ಹಳಿಗಾಗಿ, ಭಾಷೆಗಾಗಿ.. ಹೊಡೆದಾಟನೇ ಹೊಡೆದಾಟ! ಅದೆಲ್ಲ ನಾಲದು ಎಂಬಂತೆ ಒಳಗೂ ಗಡಿಬಿಡಿಯ ಗಲಾಟೆ! ಅದಕ್ಕಾಗಿ ಹೊಡೆದ ಬಡಿತ ಮತ್ತು ಗಡಿಗಾಗಿ ರಕ್ತದ ಕಾಲುವೆಯು ಹರಿದಾಟ, ಇವೆಲ್ಲಾ ಒಂದೇ ದೇಶದೊಳಗೆ ನಡೆಯಲು ಸಾಧ್ಯವೇನು? ಉಕ್ಕಿನ ಯಂತ್ರಾಲಯ ನಮ್ಮ ದೇಶದ ಯೂನಿಯುತ್ವವಾದ ಸ್ಥಳದಲ್ಲಿದ್ದರೇನಂತೆ? ಉಗಿ ಬಂಡಿಯು ಹಳಿ ಅವಶ್ಯಕತೆಯು ಅಂಗಣದಲ್ಲಿ ಎಲ್ಲಿದ್ದರೇನಂತೆ? ಒಂದಿಷ್ಟು ಪ್ರದೇಶ ಯೂನಿಯ ಪ್ರಾಂತ್ಯಕ್ಕೆ ಹೋದರೇನಂತೆ? ನಮ್ಮ ದೇಶದ ಯೂನಿಯತ್ವದ ಒಂದು ಭಾಷೆ ವ್ಯವಹಾರಿಕ ಭಾಷೆಯಾದರೆ ನಮಗಾಗುವ ಅವಮಾನವೇನು? ನಷ್ಟವೇ ಆದರೂ ಏನು? ಅದನ್ನು ಬಿಟ್ಟು ಅನ್ಯರ ಭಾಷೆಯನ್ನ ಶಿರದ ಮೇಲಿಟ್ಟು ಕೊಂಡು ಕುಣಿಯುವದು ದೇಶ ಭಕ್ತಿಯ ಲಕ್ಷಣವೇನು? ಇದು ಒಂದೇ ಒಂದು ದೇಶವಾದಲ್ಲಿ ದೇಶದೊಳಗೆ ಅತ್ತಿಂದಿತ್ತ, ಅಕ್ಕಿ, ರಾಗಿ, ಗೋಧಿ, ನೀರು ವಿದ್ಯುತ್ ಪ್ರವಾಹ ವಗೈರೆ ಸರಾಗವಾಗಿ ಹೋಗುತ್ತಿರಬಾರದೇಕೆ? ಇಷ್ಟೆಲ್ಲಾ ಅಡೆತಡೆಗಳನ್ನಿಟ್ಟುಕೊಂಡು ದೇಶ ಭಕ್ತಿಯ ದಾಂಡ್ರುತೆಯ ತಾಂಡವ ನೃತ್ಯ ನಡೆಯುತ್ತಿದೆನ್ನುವದರಲ್ಲಿ ಅರ್ಥವಾದರೂ ಏನು?

ಆಹಾರಾದಿ ಅನ್ಯಾನ್ಯ ವಸ್ತುಗಳ ಅಭಾವವೆಂಬ ಮರುಭೂಮಿ ದೇಶಭಕ್ತಿ ಶೂನ್ಯತೆಯ ಝಳದಿಂದ ಭಯಂಕರ ಬಣಬಣ ಮರ ಭೂಮಿಯೇ ಆಗುತ್ತಿದೆ. ನಂದನವನವನೆಂದು ಪ್ರಖ್ಯಾತಿಪಡೆದಿರುವ ಭವ್ಯ ಭಾರತವಿಂದು ಭಿಂಗಾಡ್ಡು, ಮರುಭೂಮಿಯಾಗುತ್ತಿದೆ. ಹಾಗಾದರೆ ಮರಣ ಹೋಮವೇ ನಮಗೆ ಗತಿ ಏನು? ಜಗತ್ತನ್ನು ಬಾಳಿಬದುಕಿಸಿರುವ ಮಹಾನ್ ಘಂಟಿತಾನುಬಂಧುಳುವದಕ್ಕಷ್ಟವೇ? ಅಮೇರಿಕದ ಅಭಯ ಹಸ್ತವಿಲ್ಲದಿದ್ದಲ್ಲಿ ಭಾರತ ಬಾಳಲಾರದೇ? ಎಷ್ಟವೇ ಚಿಂಬುಜಿಎಸಿಸಿಕೊಂಡಿದ್ದ ಭಾಗ್ಯದಬಟ್ಟಲು ಭಾರತ ಇಂದು ರಷ್ಯಾದ ಋಣದಿಂದ ಪಾರಾಗುವಂತಿಲ್ಲವೇ? ದೇಶಭಕ್ತಿಯ ದಾರಿದ್ರ್ಯತೆಯ ಪಿಡುಗು ಭಾರತದ ಜೀವನವನ್ನು ಹಿಂಡಿ ಹಿಸುಕಿ ಗುಳುಂಕರಿಸಿಕೊಂಡೀತೇ?

ಇಸ್ರೇಲ್! ನಮ್ಮ ಚಿಕ್ಕ ಭೂಮಿ. ಅ ಮರುಳುಗಾಡು ಇಂದು ನಂದನವನ ಆಗುತ್ತಿದೆ. ಅಂದೆಂತು ಸಾಧ್ಯವಾಗುತ್ತಿದೆ? ಜಗತ್ತಿಲ್ಲೆಲ್ಲೂ ಚದುರಿ ಹೋಗಿದ್ದಯಹೂದ್ಯರು ತಮ್ಮ ಮರುಳು ಭೂಮಿ ಮುಲ್ಲ ಒಯಾಸಿಸ್ ಕಂಡುಹಿಡಿದರು. ಅದುವೇ ದೇಶಭಕ್ತಿಯ ಒಯಾಸಿಸ್. ಅಲ್ಲಿ ದೇಶಭಕ್ತಿ ಭಗ್ನ ಭುಗ್ಗೆಯಾಗಿ ಪುಟಿದೇಳುತ್ತಿದೆ. ಅದನ್ನಡಗಿಸಲು ಅರಬರಾಗಲಿ ಅಮೇರಿಕನ್ನರಿಗೂ ಸಾಧ್ಯವೇ ಇಲ್ಲ.

(ಹದಿಮೂರನೇ ಪುಟ ನೋಡಿರಿ)

ನೂರು ಬೇಡಿಕೆ: ಒಂದು ಉತ್ತರ

ನಮ್ಮ ಬದುಕಿನ ಬೇಡಿಕೆಗಳು ಒಂದಲ್ಲ, ಎರಡಲ್ಲ. ನೂರು! ಉದ್ಯೋಗ, ವಿಹಾರ, ಮನೆಯಾಡಳಿತೆ, ಮಕ್ಕಳ ವಿದ್ಯಾಭ್ಯಾಸ, ಅವರ ಪಾಲನೆ, ವಿವಾಹ..... ಹೀಗೆ ಒಂದರ ಬೆನ್ನಿಗೆ ಇನ್ನೊಂದು ಬೇಡಿಕೆ ಸದಾ ಎದುರಾಗುತ್ತದೆ. ನಿತ್ಯ ಆದಾಯವಿರಲಿ, ಮಾಸಿಕ ವರಮಾನವಿರಲಿ, ಅವು ಬದುಕಿನುದ್ದಕ್ಕೂ ಬರುವ ಬೇಡಿಕೆಗಳನ್ನು ಇದಿಂಸಿ ಶಕ್ಯ ಪರಿಹಾರ ನೀಡಲಾರವು. ಕ್ರಮವಾಗಿ ಕೂಡಿಟ್ಟ ಹಣ ನಮ್ಮ ಬದುಕಿನ ಸಮಸ್ಯೆಗಳನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸಬಲ್ಲುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದು, ಹಣ ಕೈ ಸೇರಿದಂತೆ ಅದರಲ್ಲಿ ಕೂಡಿಟ್ಟು ಬಸ್ಸಿರಿ. ಹಣದ ಬೇಡಿಕೆ ಬಂದಾಗ ಖಾತೆಯಿಂದ ಬೇಕಷ್ಟು ಮೊತ್ತವನ್ನು ಹಿಂತೆಗೆಯಿರಿ. ಮುಂಬಹಣ ಕೈಗೆ ಬಂದಾಗ ಅದನ್ನು ಖಾತೆಯಲ್ಲಿ ತುಂಬಿಸಿರಿ. ಎಷ್ಟೊಂದು ಅನುಕೂಲ! ತೀರಾ ಸರಳ ವಾದರೀತಿಯ ಖಾತೆಯಿದು. ಅದರ ಪ್ರಯೋಜನ ಹೊಂದಲು ನಿಮಗೆ ಸವಿೂಪವಿರುವ ನಮ್ಮ ಬ್ಯಾಂಕಿನ ಶಾಖೆಯಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆಯಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ರಾಜ್ಯ.

ವಿವೇಚನೆ

ನವ್ಯ ಸಾಹಿತ್ಯ

ಬರೆದವರು:— ಶ್ರೀ ಸ. ನಾರಾಯಣ

ಕನ್ನಡ ಸಾಹಿತ್ಯದ ಎತ್ತರ, ಒಕ್ಕರ, ವಿಸ್ತಾರಗಳು ಅಗಾಧವಲ್ಲವಾದರೂ ಅಲ್ಪ ವಲ್ಲ ಸಾಹಿತ್ಯ ಕ್ಷೇತ್ರದಲ್ಲಿ ಬೆಳೆದ ಕಣ್ಣ ಕಥೆ, ಕವನ, ಹರಟೆ, ನಾಟಕ, ಕಾದಂಬರಿ, ಪ್ರಬಂಧಗಳು ವಿಶೇಷವಾಗಿ ಬೆಳೆಯುತ್ತಿರುವುದು ಸಮಾಧಾನಕರ ಸಂಗತಿ. ಸಮಯ-ಗಳನುಸಾರವಾಗಿ ಸಾಹಿತ್ಯ ರಂಗದ ಪ್ರಾಕಾರದಲ್ಲಿ ಮಾರ್ಪಾಡಾಗದಿರುವುದು ಅನಿವಾರ್ಯ ಸಮಯ ಸನ್ನಿವೇಶಗಳಿಗನುಸಾರವಾಗಿ ಜೀವನವು ಮಾರ್ಪಾಡಾಗಬೇಕಾಗುತ್ತದೆ. ಸಾಹಿತ್ಯವೂ ಹೊಸರೂಪತಾಳಬೇಕಾಗುತ್ತದೆ.

ಸುಮಾರು ನಾಲ್ಕು ದಶಕಗಳಿಂದ ಕನ್ನಡ ಸಾಹಿತ್ಯ ವಾಹಿನಿ ತುಂಬಿ ಹರಿಯುತ್ತಿದೆ. ಸಾಹಿತ್ಯ ವಾಹಿನಿಯನ್ನೂ ಬಳಸಿಕೊಂಡು ಬೆಳೆದ ಜನ್ಮವು ಉಂಟು ಬೆಳೆಯಲ್ಲಿ ಎಣಿಸುವಷ್ಟು ಮಂದಿ ಮಾತ್ರ ಸಾಹಿತ್ಯದ ಅಗತ್ಯವಿಲ್ಲ ಎನ್ನುವಂತಿಲ್ಲ. ಏನ್ನೆ, ಇಂದು ನಾಳೆಗಳಿಗೆ ಸಾಹಿತ್ಯದ ಆಗತ್ಯವಿದೆ. ಸಾಹಿತ್ಯವನ್ನು ರೂಪಿಸುವಂತಿಲ್ಲ. ಸಾಹಿತ್ಯಕ್ಕೆ ಪಂಪರಾಗತ ಇತಿಹಾಸವಿದೆ, ಮಹತ್ವವಿದೆ. ಸಾಹಿತ್ಯ ಆರ್ಯರಿಗೂ ಬೇಕು, ಅನಾರ್ಯರಿಗೂ ಬೇಕು. ವಿದ್ಯೆಯನ್ನೂ ಕರತಲಾಮಲಕ ಮಾಡಿಕೊಂಡು ವಿಜ್ಞಾನದ ಪ್ರಚಂಡ ಶಕ್ತಿಯಿಂದ ವಿಶ್ವವನ್ನೇ ಹಸ್ತಗತ ಮಾಡಿಕೊಳ್ಳುವ ವ್ಯಕ್ತಿಗೂ ಸಾಹಿತ್ಯ ಅಗತ್ಯ ಎಂದು ಹೇಳದಿರುವಂತೆಯೇ ಇಲ್ಲ. ಸಾಹಿತ್ಯ ವೆಂದರೆ ಕೇವಲ ಕಲ್ಪನೆಯಿಂದ ರಚಿಸಿದ ಕಥೆ, ಕವನ, ನಾಟಕ, ಕಾದಂಬರಿಗಳಂದಷ್ಟೇ ಅಲ್ಲ, ಇತಿಹಾಸವು ಸಾಹಿತ್ಯ, ವಿಜ್ಞಾನವೂ ಸಾಹಿತ್ಯ, ವೈದ್ಯಕೀಯವೂ, ಸಾಹಿತ್ಯ, ಇತಿಹಾಸ, ವಿಜ್ಞಾನ, ವೈದ್ಯಕೀಯ, ಮೊದಲಾದ ಎಲ್ಲ ಬಗೆಯ ವಿದ್ಯೆಗಳಿಗೂ ಸಾಹಿತ್ಯಕ್ಕೂ ನಿಕಟ ಸಂಬಂಧವಿದೆ. ಈ ಸಂಬಂಧ ಇನ್ನೊಬ್ಬರೂ ಕೂಡಿಸಿದುದಲ್ಲ, ಸ್ವಾಭಾವಿಕವಾಗಿ ಬೆಳೆದು ಬಂದದ್ದು. ಭದ್ರವಾಗಿ ಉಳಿದದ್ದು. ಇಂದು ಜ್ಞಾನ್ನ, ವಿಜ್ಞಾನ, ವೇದಾಂತ, ಕೃತಿಗಳೆಲ್ಲವೂ ಮಾನವನಿಗೆ (ವ್ಯಕ್ತಿಗೆ) ಪಂಚಿಯವಾಗಲು ವಿದ್ಯೆ ಬೇಕು. ಆ ವಿದ್ಯೆ ಯಂತೆಯೇ ಸಾಹಿತ್ಯವೂ ಸಕಲಕಾಲ, ಸಾಹಿತ್ಯ ಸ್ವರೂಪದ ದರ್ಶನ ಶ್ರೀಸಾಮಾನ್ಯನಿಗೂ ಆಗ ಬೇಕು. ಸಾಮಾನ್ಯನಿಗೂ ಆಗಬೇಕು. ಸಾಹಿತ್ಯ ದರ್ಶನದಿಂದ ಓದುಗ ಅಸ್ಪದರ್ಶನ ಮಾಡಿಕೊಳ್ಳಿಬಲ್ಲ. ತನ್ನ ಹಿರಿಮೆಯನ್ನು ತಾನು ತಿಳಿಯಬಲ್ಲ. ಅಷ್ಟೇ ಏಕೆ ಸಾಮಾನ್ಯ ಅಸಾಮಾನ್ಯನಾಗಬಲ್ಲ. ಭವ್ಯತೆಯೇ ಬಾಳ ಉಸಿರು ಎಂದು ನಂಬುವ ವ್ಯಕ್ತಿಗೆ ಸಾಹಿತ್ಯ ಗುರಿಮಟ್ಟಲು ಮೊದಲ ಮೆಟ್ಟಲು. ಕತ್ತಲೆಯಲ್ಲಿ ಕೈ ದೀವಿಗೆ.

ಸಾಹಿತ್ಯದಲ್ಲಿ ಅದರಲ್ಲಿಯೂ ಉತ್ತಮ ಸಾಹಿತ್ಯದಲ್ಲಿ ಹಲಭಾಗಗಳು ಸೇರಿರುತ್ತವೆ. ವಿಜ್ಞಾನ ತತ್ವಜ್ಞಾನ, ವೇದಾಂತ, ಕಲೆ, ಮೊದಲಾದ ಪ್ರಾಕಾರಗಳು ಎಲ್ಲರಿಗೂ ಪರಿಚಿತ. ರಾಮಾಯಣ, ಮಹಾಭಾರತ ಆದಿ ಹಲವು ಪ್ರಾಚೀನ ಗ್ರಂಥಗಳೂ, ವೇದ, ಉಪನಿಷತ್ತುಗಳೂ, ಮೃಚ್ಛಕಟಿಕ ಶಕುಂತಲ, ಕಿರಾತಾರ್ಜುನೀಯ, ಉತ್ತರರಾಮ ಚರಿತೆ, ಗದುಗಿನ ಭಾರತ, ಗದಾಯುದ್ಧ, ನಿಕ್ಕಾಮರ್ಜುನ ವಿಜಯ, ಸಿರಿಭೂವಲಯ, ರಾಮಾಶ್ವಮೇಧ ಎಲ್ಲವೂ ಸಾಹಿತ್ಯದ ವಿವಿಧ ಮುಖಗಳೇ ಆಗಿವೆ.

ಸಾಹಿತ್ಯದಲ್ಲಿ ನವರಸಗಳಿಗೆ ಸಮಾನ ಸ್ಥಾನವಿದೆ. ಸಾಹಿತ್ಯ ಕರತಲ ರಂಗಭೂಮಿ ಎನ್ನುವುದರಲ್ಲಿ ಅತಿಶಯವೇನಿಲ್ಲ ಪ್ರಾಚೀನ ಕಾವ್ಯಾದಿಗಳಲ್ಲಿಯೂಗಲಿ, ಆಧುನಿಕ ಕಥೆ, ನಾಟಕ, ಕಾದಂಬರಿಗಳಲ್ಲಿಯೂಗಲೀ ಶೃಂಗಾರ ರಸಕ್ಕೆ ಪ್ರಾಧಾನ್ಯತೆ ಕೊಟ್ಟಿರುವುದು ವಿಶೇಷವಾಗಿ ಕಾಣಬರುತ್ತದೆ. ಶೃಂಗಾರದ ಸ್ವರೂಪ ಆಯಾ ಕಾಲ, ದೇಶ, ಕವಿ, ಶೈಲಿಗಳಿಗನುಸಾರ ವಾಗಿ ಸ್ವಲ್ಪಮಾರ್ಪಾಡನ್ನೂ ಹೊಂದಿರಬಹುದಷ್ಟೇ ಆದರೆ ಶೃಂಗಾರ ರಸದ ಸ್ಥಾನ ಹಿರಿದು ಎಂಬುದೆಂತೂ ಸ್ಪಷ್ಟ.

ಇತ್ತೀಚಿನ ಕೆಲವು ಬರಹಗಾರರು (ಓದುಗರೂ ಸಹ) ಕೇವಲ ಕಥೆ, ಕಾದಂಬರಿಗಳಲ್ಲಿ ಶೃಂಗಾರ ಪೂರ್ಣ ಸನ್ನಿವೇಶಗಳನ್ನು ನಿರೂಪಿಸುವುದರಿಂದ, ಪ್ರೇಮಮಯ ಸಂಭಾಷಣೆಗಳನ್ನು ಹೆಣೆಯುವುದರಿಂದ, ಕೇಳು ಕಾಮನೆಯ ಘಟನೆಗಳನ್ನೂ ವರ್ಣಿಸುವುದರಿಂದ ತಾವು ಆಧುನಿಕ ಯುಗದ ನವ ಪಂಥದ ಬರಹಗಾರರು ಎಂದು ಹೇಳಿಕೊಳ್ಳುವ ವಾಡಿಕೆ, ಸಂಪ್ರದಾಯ ಬೆಳೆದು ಬಂದಂತೆ ತೋರುತ್ತದೆ.

ನವ್ಯ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ಆಧುನಿಕ ಸಾಹಿತ್ಯ (ಹಾಗು ಅನುಕರಣೀಯ ಸಾಹಿತ್ಯ) ಯಾವುದು ಎಂಬುದನ್ನು ಬರಹಗಾರರು, ಓದುಗರು ವಿವೇಚಿಸುದು ಅತ್ಯಗತ್ಯ. ಸಾಹಿತ್ಯ ಪ್ರಾಕಾರಗಳ ಪರಿಜಯವಿಲ್ಲದೆ ಸಾಹಿತ್ಯದ ಸ್ವರೂಪಗಳನ್ನು ಅಭ್ಯಸಿಸದ, ಅನುಭವವಿಲ್ಲದ, ಸಾಧನೆಯಿಂದ ಬರಹಗಾರಿಕೆಯನ್ನು ಗಳಿಸಿಕೊಳ್ಳದ ಬಹುಮಂದಿ ಸಾಹಿತ್ಯ ಸೇವೆಗಾಗಿ ಮುಂದೆ ಬಂದರು. ಬರಹಗಾರರು ಎನಿಸಿಕೊಂಡರು. ಸಾಧನೆ, ಶಕ್ತಿ, ಶೈಲಿಗಳಿಂದಲ್ಲ. ಕೇವಲ ಹಣದ ಬಲದಿಂದ ಅಥವಾ ಪ್ರಭಾವದ ಬಲದಿಂದ. ಇವರಿಂದಲೇ ರೂಪುಗೊಂಡ ಸಾಹಿತ್ಯವೂ ಬೆಳೆಗಿಗೆ ಬಂತು, ಬಲವಿಲ್ಲದೆ ಬಡಕಲಾಗಿ ಬರಗಾಲದ ಹೆಣದಂತೆ.

ಇತ್ತೀಚೆಗೆ ನಾಡಿನಲ್ಲಿ ದಿನ ಪತ್ರಿಕೆ, ವಾರ ಪತ್ರಿಕೆ, ಪಕ್ಷ ಪತ್ರಿಕೆ, ಮಾಸ ಪತ್ರಿಕೆಗಳು ಬೆಳೆಯುತ್ತಿರುವುದು ಸಾಹಿತ್ಯದ ಪ್ರಗತಿಗೆ ಶುಭ ಸೂಚನೆ. ದಿನ ಪತ್ರಿಕೆಯವರು ತಮ್ಮ ವಾರದ ವಿಶೇಷ ವಾಜ್ಮಯದಲ್ಲಿ ವಾರ, ಪತ್ರಿಕೆ, ಪಕ್ಷ ಪತ್ರಿಕೆ ಮತ್ತು ಮಾಸಪತ್ರಿಕೆಗಳು ವಿಶೇಷವಾಗಿ ಕಥೆಗಳನ್ನು ಪ್ರಕಟಿಸುತ್ತಿವೆ. ಪ್ರಕಟವಾಗುತ್ತಿರುವ ಕಥೆಗಳಲ್ಲಿ ವಿಶೇಷವಾಗಿ ಎಲ್ಲವೂ ಪ್ರೇಮದ ಹಾವಿಜುನ್ನೇ ಹಿಡಿದಿರುತ್ತವೆ. ನವ್ಯ ಕಥೆ, ನವ್ಯ ಸಾಹಿತ್ಯ ಎನ್ನುವ ಹೆಸರಿನಲ್ಲಿ ವಿಚಿತ್ರ ಕಥೆಗಳು ಬೆಳಕಿಗೆ ಬರುತ್ತವೆ. ಉತ್ತಮ ಕಥೆಗಳು ಪ್ರಕಟವಾಗುವುದಿಲ್ಲ. ಶೈಲಿಯಲ್ಲಿ ಸೊಗಸಿಲ್ಲ. ನೂತನತೆ ಇಲ್ಲವೆಂದು ಉದ್ಘರ್ಷಣೆ ಕಡಿಮೆಯಾಗಿಲ್ಲ.

(ಹನ್ನೆರಡನೇ ಪುಟ ನೋಡಿರಿ)

ವಿಕ್ಸ್ ವೆಪೋರಬ್ ಕೂಡಲೆ ಆರಾಮವನ್ನುಂಟುಮಾಡುತ್ತದೆ...ನಿಮ್ಮ ಮಗು ನಿಮಿಷಂಕವಾಗಿ ಉಸಿರಾಡಿಸುವುದು...ಅದು ಇಡೀ ರಾತ್ರಿ ಗಾಢವಾಗಿ ಮಲಗುವದು

ನಿಮ್ಮ ಮಗುವು ತನ್ನ ಸುಖ-ನಿದ್ರೆಯಲ್ಲಿಗೆ ನಿಮ್ಮನ್ನು ಆಲಿಂಗಿಸಿದೆ ಉದಯಿಸಲೇ ನಿಮ್ಮ ಮಗುವಿಗೆ ಶೀತದಿಂದ ಬಾಧೆಯ ಪೂರ್ವದ ಲಕ್ಷಣಗಳಾದ ಕೆಮ್ಮು-ಮೂಗಿನಲ್ಲಿಂದ ನೀರು ಸುರಿಯುವಿಕೆ, ಗಂಟಲು ಕಟ್ಟುವುದು, ಉಸಿರಾಡಿದಲ್ಲಿ ತೊಂದರೆ ಮುಂತಾದವು ಕಂಡುಬಂದರೆ, ವಿಕ್ಸ್ ವೆಪೋರಬ್ಬನ್ನು ತಿಕ್ಕಿರಿ

ನಿಮ್ಮ ಮಗುವಿನ ನೆಗಡಿಗೆ ಎಕ್ಸ್ಟಾ ವೆಪೋರಬ್ ಅತ್ಯಮಿಕ ಉಪಾಯವಾಗಿದೆ ಏಕೆಂದರೆ ಅದು ನೆಗಡಿಯ ಪ್ರಭಾವೆಯ ಎಡ ಹಿಮಿಷದ ಪ್ರಾರಂಭ ಲಿಯಲ್ಲಿ ಮೊದಲು ಗಂಟಲು ಮತ್ತು ಎದೆಗಳಲ್ಲಿ—ಬಾಧಾಸ್ಥಾನಗಳಲ್ಲಿ ಕಾರ್ಯಮಾಡುತ್ತದೆ. ಮಗುವಿನ ಮೈಮೇಲಿನ ಚರ್ಮಕ್ಕೆ ಬಿಸಿ ಎದೆಕಾಪ್ಪಾಡುವಾಗಿದೆ

ನಿಮ್ಮ ಮಗುವಿಗೆ ನೆಗಡಿ ಆದಾಗ ನೀವು ಮಾಡಬೇಕಾದ ಮೊದಲ ಕೆಲಸ ವಿಕ್ಸ್ ವೆಪೋರಬ್ಬನ್ನು ತಿಕ್ಕಿ ನಿಮ್ಮ ಮಗುವಿನ ಎದೆಯನ್ನು ಚೆನ್ನಾಗಿ ಮಾಲೀಷು ಮಾಡಿರಿ. ನಿಮ್ಮ ಮಗುವಿನ ಮೂಗಿನ ಹೊಳ್ಳೆಗಳಿಗೆ ಸ್ವಲ್ಪ ಪ್ರಮಾಣದಲ್ಲಿ ವಿಕ್ಸ್ ವೆಪೋರಬ್ ತನ್ನ ಕ್ರಿಯೆಯನ್ನು ಪ್ರಾರಂಭಿಸುತ್ತದೆ. ಮೇಲಾಗಿ ಮಲಗಿರುವಾಗ ನಿಮ್ಮ ಮಗುವಿನ ಮೂಗಿನ ಹೊಳ್ಳೆಗಳು ಬಂದ್ ಆಗಿರುವುದರಿಂದ ನಿಮ್ಮ ಎಲ್ಲಾ ಮಗುವು ಚೆನ್ನಾಗಿ ನಿದ್ರೆ ಮಾಡುತ್ತದೆ ಮತ್ತು ಉಸಿರಾಡಿಸುವುದು ಸುಲಭವಾಗುತ್ತದೆ

ವಿಕ್ಸ್ ವೆಪೋರಬ್ ೫ ಸೈಜ್‌ಗಳಲ್ಲಿ

ವನಿತಾ ರಂಗ

ಈರ್ವರು ಸಮಾಜ ಸೇವಿಕೆಯರು: ಎರಡು ಮುಖ

ಲೇಖಕರು: ಶ್ರೀ ಬಿ. ನರಸಿಂಗ ರಾವ್

ಸ್ವದೇಶೀಯ ಲೋಕಮಾನ್ಯ ತಿಲಕರ ಜೀವನ ಕಥೆಯನ್ನೋದುವಾಗ ಇಬ್ಬರು ಪ್ರಸಿದ್ಧ ಸ್ತ್ರೀ—ಕಾರ್ಯಕರ್ತೆಯರು ನಮ್ಮ ದೃಷ್ಟಿಗೆ ಬೀಳುತ್ತಾರೆ. ಈರ್ವರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಜೆನ್ನಾಗಿ ಮುಡಿದವರೇ. ಒರ್ವಳು ತನ್ನ ಹಿಂದೂಧರ್ಮವನ್ನು ತ್ಯಜಿಸಿ ಪರಧರ್ಮವನ್ನು ಸ್ವೀಕರಿಸಿದರೆ, ಇನ್ನೊಬ್ಬಳು ವಿದೇಶಿಯಳಾದರೂ ಹಿಂದೂಧರ್ಮವನ್ನು ಸ್ವೀಕರಿಸಿದ್ದೇ ಇವರಿಬ್ಬರ ನಡುವೆ ಇರುವ ವಿರೋಧಾಭಾಸ! ಒರ್ವಳು ಹಿಂದೂಧರ್ಮ ಗ್ರಂಥಗಳನ್ನು ಹೀನಾಯವಾಗಿ ಸಿರಸ್ಕರಿಸಿದ್ದರೆ, ಮತ್ತೊಬ್ಬಳು ಅದರಿಂದ ಪ್ರಭಾವಿತಳಾಗಿ ಪ್ರಚಾರ ಕೈಗೊಂಡಳು.

ಒಬ್ಬಳ ಕಥನಃ "ಅಕ್ಕ-ತಂಗಿಯರೇ!' ವೇದ-ಪುರಾಣಗಳು ತಾವು ತಿಳಿದಷ್ಟು ಮಹಾಗ್ರಂಥವೇನೂ ಬಿಗಿಲ್ಲ. ನಮ್ಮ ಶಾಸ್ತ್ರ ಪುರಾಣಗಳ ರಚಯಿತರಾದ ಪಂಡಿತ್ ಮಹಾಶಯರು ಅವನ್ನೆಲ್ಲ ದೊಡ್ಡ ದೊಡ್ಡ ಶಬ್ದಗಳಿಂದ ತುಂಬಿಸಿಟ್ಟಿರುವುಗಳನ್ನು ಮಹಾ ಗ್ರಂಥಗಳ ಸಾಲಿಗೆ ಸೇರಿಸಿದ್ದಾರೆ! ತತ್ವ ಜ್ಞಾನವು ಅವುಗಳಲ್ಲೆಂದಂತೆ ಇಂದಿನವಿಶ್ವದಲ್ಲಿ ಅವ್ಯಾವೋಗಿಯಾಗಿದೆ. ವೇದ ದತ್ತ ಪ್ರತಿಯೊಂದು ವಸ್ತುವನ್ನೂ ಪೂಜ್ಯ ದೇವತೆಯ ಸಾಲಿಗೆ ಸೇರಿಸಿ ಮೂಢ ಪೂಜೆಯ ಆಡಂಬರಕ್ಕೆ ತೊಡಗಲು ಹೇಳಿದ ತಾವು ಈ ಸಪ್ತ ಸ್ವರ್ಗಗಳನ್ನೂ, ಪಾತಾಳಗಳನ್ನೂ ನಂಬುತ್ತೀರಾ? ಹಿಂದೂ ಧರ್ಮದಲ್ಲಿ ಇಂತಹ ಹಲವಾರು ಮಾನವ ಕಲ್ಪಿತ ಅಬದ್ಧಗಳು ತುಂಬಿಕೊಂಡಿವೆ. ಎಲ್ಲಿ ನೋಡಿದರಲ್ಲಿ ಅಸಹ್ಯಕಾರೀ ವಿಷಯಗಳು ತುಂಬಿ ಜನರ ಮನಸ್ಸನ್ನು ಹಾಳುಗೆಡುತ್ತಿವೆ.

ಈ ಉದ್ಗಾರವೆಳೆದವಳು ಒರ್ವ ಪ್ರಸಿದ್ಧ ಭಾರತೀಯ ಮಹಿಳೆ ಹತ್ತೊಂಬತ್ತನೇ ಶತಕದ ಕೊನೆಗೆ ಅಮೇರಿಕಾದ ಭೌತಿಕವಾದವನ್ನು ಮುಂದರಿಸಿ ಸಾಧಿಸಹೊರಟ ಭಾರತೀಯ ಸಮಾಜ ಸೇವಿಕೆ—ಪಂಡಿತ ರಮಾ ಬ್ಯಾ! ಸ್ವಯಂ ಕ್ರಿಸ್ತ ಧರ್ಮವನ್ನವಲಂಬಿಸಿ, "ಶಾರದಾ ಸದನ" ವೆಂಬ ಅನಾಥಾಶ್ರಮವನ್ನು ಸ್ಥಾಪಿಸಿ ಅನಾಥಮಹಿಳೆಯರಿಗೆ ಆಶ್ರಯದಾತೆಯೆನಿಸಿದ್ದಳು. ಈ ಮಹಿಳೆ ಈ 'ಸದನದಲ್ಲಿ ಆಶ್ರಯ ಪಡೆದ ಮಹಿಳೆಯರಿಗೆಲ್ಲ ಗೋಚರವಾಗಿ, ಮೂರ್ಮಿಕವಾಗಿ ಕ್ರಿಸ್ತ ಧರ್ಮದ ಉಪದೇಶ ನೀಡಿ ಅವರನ್ನೆಲ್ಲಾ ಕ್ರಿಸ್ತೀಯರಾಗಿ ಪರಿವರ್ತಿಸಲು ಹೆಣಗಾಡುತಿದ್ದಳು. ಅವಳ ಈ ಪ್ರಚಾರದಿಂದಾಗಿ ಆ ಅನಾಥ ಮಹಿಳೆಯರಲ್ಲಿ ಹಲವರು ವಿದೇಶಿಯ ಯುವಕರನ್ನು ವಿವಾಹವಾಗಿ, ಮನೆಮಠಗಳನ್ನು ಪಡೆದು ಕ್ರಿಸ್ತೀಮತದ ಪ್ರಗತಿಗೆ ಕಾರಣರಾದರು. ಈ ಕಾರ್ಯದಲ್ಲಿ 'ಬ್ಯಾ' ಯವರು ಜನರ ಸಹಾನುಭೂತಿಯ ಸಾಕಷ್ಟು ದೊರಯುತ್ತಿತ್ತು. ಆಗ ಅವಳು ವಿದೇಶದಲ್ಲಿ ಪ್ರಶಂಸೆಗೆ ಪಾತ್ರಳಾಗುವ ಆಸೆಯಿಂದ ಅಮೇರಿಕಾಕ್ಕೂ ತೆರಳಿದಳು. ಅದೇ ದಿನಗಳಲ್ಲಿ ಸ್ವಾಮಿ ವಿವೇಕಾನಂದರೂ ಅಮೇರಿಕಾಕ್ಕೆ ತೆರಳಿದ್ದರು. ಅವರ ಭಾಷಣಗಳಿಂದಾಗಿ ಅಮೇರಿಕದ ಜನತೆಯ ಮೇಲೆ ಭಾರೀ ಪ್ರಭಾವವುಂಟಾಯಿತು. ಹೀಗಾಗಿ 'ಬ್ಯಾ' ಯವರಿಗೆ ಈ ಸಡಗರದಲ್ಲಿ ಸಹಾನುಭೂತಿ ಎಂತು ದೊರಕೀತು? ಇವಳ ವೇಷಾಂತರದ ಗೌರವವನ್ನು ಸ್ವಾಮೀಜಿಯವರು ತಿಳಿಯ ಹೇಳುತ್ತಿದ್ದರೋ, ಅದನ್ನೇ ಜರೆಯುತ್ತಿದ್ದರು 'ಈ ಪಂಡಿತಾಗ್ರಾಣಿ'.

ಲೋಕಮಾನ್ಯ ತಿಲಕರಿಗೆ 'ಬ್ಯಾ'ಯವರ ಬಾಯಿ ಬಡಾಯಿಯ ಸಮಾಚಾರವು ತಿಳಿಯುತ್ತಲೇ ಅವರ ಸಂಕುಚಿತ ವೃತ್ತಿಗಾಗಿ ಅವರು ಭಾರೀ ಮರುಕಪಟ್ಟು ಚಿಂತೆಗೊಳಗಾದರು 'ಕೇಸರಿ' ಯ ಸಂಪಾದಕೀಯದಲ್ಲಿ ಬರೆದರು—' ಪುರಾತನ ಕಾಲದಲ್ಲಿ ಋಷಿ ಮುನಿಗಳು ತಪಸ್ಸು ಗೈಯುತಿದ್ದಾಗ ಅಪ್ಸರೆಯರು ಅತಂಕ ಒಡ್ಡುತಿದ್ದರು. "ಬ್ಯಾ" ಯವರನ್ನು ನಾವು ಆಧುನಿಕ ಅಪ್ಸರೆಯೆಂದರೆ ಹೆಚ್ಚಿನಿಸದು ಹಿಂದುವಾಗಿ ಹುಟ್ಟಿದರೂ, ತನ್ನ ಧರ್ಮವನ್ನು ಇವಳು ತಿಳಿಯಲಿಲ್ಲ. ಆದರೆ ಪರಧರ್ಮವೊಂದನ್ನು ತಿಳಿಯಲು ಇವಳಿಗೆ ಕ್ಷಮತೆ ಆವೆಂತು ದೊರೆಯಿತೋ!" ಬ್ಯಾಯವರೆನ್ನುತ್ತಾರೆ—ಹಿಂದೂಸ್ಥಾನದಲ್ಲಿ ಪುರುಷರು ನೂರು, ನೂರಿಪ್ಪತ್ತೈದರಿಂದ ಅಧಿಕ ಮದುವೆಯಾಗುತ್ತಾರೆಂದು, ಅಂತಿದ್ದರೆ ಪುರುಷರಿಗೆ ತಮ್ಮ ಮುಕ್ಯತ್ವಾರೆಂದು ಗುರುತಿಸಲು ಕಷ್ಟವಾಗುತ್ತದಲ್ಲವೆ? ಹಾಗಿದ್ದರೆ—ಇದು ಸತ್ಯವಂದರೆ—"ಬ್ಯಾ"ಯವರಿಗೆ ತಮ್ಮ "ಆಶ್ರಮ'ಕ್ಕೆ ಬರುವ ಅನಾಥರಿಗೆ ಕೊಂತೆಯೂ ಗದು. ಆದರೆ ಅನಾಥ ಹೆಂಗುಸರನ್ನು ಹುಡುಕುವುದೇ ಇವರಿಗೊಂಯ ಸಮಸ್ಯೆ ಎನಿಸಿತ್ತು. ಒಮ್ಮೆ ಶಾರದಾಸದನವನ್ನು ನುಗ್ಗಿದಳಿಂದರೆ ಆ ಸ್ತ್ರೀಯು "ಬ್ಯಾ"ಯ ಕಟ್ಟಪ್ಪಣೆಗೆ ಒಳಗಾಗಿಯೇ ತೀರಬೇಕಿತ್ತು. ಧರ್ಮಾಂತರ ಹಾಗೂ ವಿದೇಶಿಯರೊಡನೆ ವಿವಾಹವಾಗುವುದು ನಿರ್ಬಂಧವಾಗಿತ್ತು. ಅನಾಥರ ಸೇವೆಗಾಗಿ ಮಹರ್ಷಿ ಕರ್ವೆಯವರು "ಅನಾಥ ಮಹಿಳಾಶ್ರಮ" ಹಾಗೂ ಅನಾಥ "ವಿದ್ಯಾರ್ಥಿ" ಗೃಹವನ್ನು ನಡೆಸುತ್ತ ಬಂದಿದ್ದಾರೆ. ಅಲ್ಲಿ ಜಾತಿ-ಧರ್ಮಗಳ ಕಡರ ಬಂಧನವೂ ಇಲ್ಲ. ಮಾನವತೆಯ ದೃಷ್ಟಿಯಲ್ಲಿ ಎಲ್ಲರೂ ಒಂದೆಂದು ಸಾರಲಾಗುತ್ತಿದೆ.

ಪೂನಾದ ತಾತ್ಯಾಲಿಕ ಕಲೆಕ್ಟರ್‌ಸಿಫ್ಟ್ ಸಾಹೇಬರು ಬ್ಯಾಯವ 'ಶಾರದಾ ಸದನ ವಸ್ತು'ಗುಲಾಮಖಾನೆ' ಯೆಂದು ಕರೆದು ಅದರಕಾರ್ಯಕರ್ತೆಯರೊಡನೆಕಟುನಾಗಿ ವರ್ತಿಸಿರುವರು. ಸರಕಾರವು ಈ ತರದ ಕಟುನಿಟ್ಟಿನ ದುರುದ್ದೇಶಪೂರ್ಣ, ಸೋಗಿನ ವ್ಯವಹಾರ ನಡೆಸುವ ಸಮಾಜ ಸೇವಿಕೆಯಂರನ್ನು ಗೌರವಿಸುತ್ತಲೇ ಇಲ್ಲ.

ಅಮೇರಿಕಾದಿಂದ ಹಿಂದಿರುಗಿದ ನಾಲ್ಕು ವರ್ಷಗಳ ನಂತರ "ಬ್ಯಾ" ಯವರು ದಕ್ಷಿಣ ಭಾರತವನ್ನು ಸುತ್ತುತ್ತಾ, ಅಲೆಯುತ್ತಾ ಇರುವಾಗ, ಹೋದಲ್ಲೆಲ್ಲ ಜನತೆ ಅವರಿಗೆ ಸೀದಾ ಬಾಯ್ದೆರೆಯಾಗಿ ಪ್ರಶ್ನೆಕೇಳಿ ಹಣ್ಣು ಕ್ಯಾ – ನೀರು ಕ್ಯಾ ವಾಡಿ ಬಿಟ್ಟರು. ತಮಗೆ ಕ್ರಿಸ್ತ ಧರ್ಮವನ್ನವಲಂಬಿಸಿದೊಡನೆ ಸತ್ಯದಅನುಭವವಾದಂತೆ ತಮ್ಮ ಶಿಷ್ಯೆಯಂಗೆಕೇ ಆಗಲಿಲ್ಲ ಎಂದು ಜನತೆ ಕುಕ್ಕಿ, ಕುಕ್ಕಿ ಕೇಳಿದರು. 'ಸಂಚಿತ ವ್ಯ'ವನ್ನು ತಾವು ಹೀನೈಸುವುದಾದರೆ "ಬ್ರಿಸ್ಕ" ದ ಜಲವನ್ನೆಂತು ಪವಿತ್ರವೆನ್ನುವರಿ? ನಮ್ಮ ಪುರಾಣದಲ್ಲಿ ವಿಪರೀತ ಕಲ್ಪನಾಚಿತ್ರಣವಿದ್ದರೆ ಬ್ಯಾಬಲ್ಲಿನ ಕಟ್ಟುಕತೆಯ ಕುರಿತು ಅದೇಕೆ ನೀವು ಬಾಯಿ ಬಿಡುತ್ತಿಲ್ಲ?

ಶ್ರೀಮತಿ ಎನ್ನಿಬೆಸೆಂಡ್ ರವರೂ ಬ್ಯಾಯ ಸಮಕಾಲೀನ ಸ್ತ್ರೀಯೊಗಿದ್ದಳು. ವಿದೇಶಿಯಳಾಗಿದ್ದಾಗ್ಯೂ ಅವಳು ಹಿಂದೂ ಧರ್ಮವನ್ನವಲಂಬಿಸಿ, ಭಾರತಕ್ಕಾಗಿಯೆ ಹಿಂದೂಧರ್ಮ ಸಂಸ್ಥೆಯ ಪ್ರಚಾರಕ್ಕೆ ಮುಂದಾದಳು.

ಶ್ರೀಮತಿಯವರು ಬನಾರಸದಲ್ಲಿ ಹಿಂದೂ ಕಾಲೇಜ್ ಎಂಬ ಹೆಸರಲ್ಲಿ ವಿದ್ಯಾ ಸಂಸ್ಥೆಯನ್ನು ನಡೆಸಿದರು. ಅಲ್ಲಿ ಹಿಂದೂ ಧರ್ಮ ಹಾಗೂ ವ್ಯಾಚೇನ ಶಿಕ್ಷಣಪ್ರಣಾಲಿಯ ರೂಪುರೇಷವನ್ನು ದೃಷ್ಟಿಯಲ್ಲಿರಿಸಿ ಯುವಕರಿಗೆ ಶಿಕ್ಷಣವಿತ್ತಳು. ಒಮ್ಮೆ ವಿದ್ಯಾರ್ಥಿಗಳು ನಿವೇದಿಸಿಕೊಂಡರು; ಇಲ್ಲಿ ಭೋಜನದ ವ್ಯವಸ್ಥೆ ಜಾತಿ ಪ್ರೀತಿಗೆ ಸರಿಯೂಗಿ ನಡೆಯುತ್ತಿಲ್ಲ.

ಇದರ ಕುರಿತು ಲೋಕಮಾನ್ಯರು ತಮ್ಮ ಸಹೂಚಾರ ಪತ್ರಿಕೆ 'ಕೇಸರಿ'ಯಲ್ಲಿ ಬರೆದರು: "ಕಾಲೇಜಿನಂತಹ ಸಾರ್ವಜನಿಕ ಸ್ಥಾನಗಳಲ್ಲಿ ಭೇದಭಾವಕ್ಕೆ ಅವ್ಕಾಶವಿರದು. ಅಂತಹ ಬೇಧಿಕೆಗಳನ್ನು ಮುಂದಿರಿಸುವ ವಿದ್ಯಾರ್ಥಿಗಳು, ತಮ್ಮ ಸಂಸ್ಥೆಯ ಸ್ಥಾಪಕಳು ಒರ್ವ ವಿದೇಶಿ ಮಹಿಳೆಯೆಂದು ಅರಿತಿಲ್ಲವೇ? ಅವಳು ಹಿಂದೂ ಧರ್ಮವನ್ನವಲಂಬಿಸಿದಳು ಮತ್ತು ಹಿಂದೂ ಧರ್ಮದ ಮಹತ್ವವನ್ನು ಹೆಚ್ಚಿಸುವ ದೃಷ್ಟಿಯಿಂದ ಕಾಲೇಜನ್ನು ನಡೆಸಿದರೂ, ಕಾಲೇಜು ವಿದ್ಯಾರ್ಥಿಗಳಾದವರು ತಿಂದು-ಉಣ್ಣುವ ಸಾಮಾನ್ಯ ವಿಷಯಗಳ ಬಗ್ಗೂ ಭಿನ್ನಾಭಿಪ್ರಾಯವೇಕೆ ಇಡುತ್ತೀರಿ? ನನಗೆ ಈ ಕುರಿತು ಭಾರೀ ಬೇಡವೆಜೆ."

ಲೋಕಮಾನ್ಯರು ತಮ್ಮ ಆಚಾರ—ವಿಚಾರಗಳಲ್ಲಿ ಭಾರೀ ನಿಷ್ಠೋತರಾಗಿದ್ದರು. ಇವುಗಳನ್ನು ಅವರು ತಮ್ಮದೇ ದೃಷ್ಟಿಕೋಣದಲ್ಲಿ ವಿವೇಚಿಸಿ ಸರಿಯೆಂದು ತೋಚಿದಲ್ಲಿ ಅನ್ಯರಿಗೆ ಹೇಳಲು ಎಳಸ್ವೂ ಹಿಂಜರಿಯುತ್ತಿರಲಿಲ್ಲ. ಇದೇ ಕಾರಣದಿಂದಾಗಿ ಅವರು 'ಶ್ವಕೇಸು' ಮಹಿಳೆಯೋರ್ವಳ ದೋಷವನ್ನು ಸ್ಪಷ್ಟವಾಗಿ ಜನತೆಯ ಮುಂದಿರಿಸಿದರು. ಮತ್ತು ವಿದೇಶಿಯೋರ್ವಳಕಾರ್ಯವನ್ನು ಶ್ಲಾಘಿಸುವಿಕೆಗೆ ಪರವಾಗಿ ಬರೆದರು. ಇಂತಹ ದೂರದರ್ಶಿಯವ್ಯಕ್ತಿ ಮುಂದಾಳ-ಗಳನ್ನು ಗಳಿಸಿದ ನಮ್ಮ ದೇಶವಾದೇ ಧನ್ಯ.

ನಾವಿಂದು, 'ಸ್ವತಂತ್ರಾಂದರು ಪರಕೀಯರ ಗುಲಾಮತನವನ್ನು ಬಿಟ್ಟಿಲ್ಲ. ಈ ಮೇಲೆ ಹೇಳಲ್ಪಟ್ಟ ಈರ್ವರ ಸಮಾಜ ಸೇವಿಕೆಯರ ಜೀವನದಿಂದ ನಾವು ಕಲಿಯ ಬೇಕಾದ್ದು ತುಂಬಾ ಇದೆ. ಈ ಸಮಾಜ ಸೇವಿಕೆಯರ ಕುರಿತು ಯೋಚಿಸುತ್ತಾ ನನಗೊಂದು ವಿಷಯ ನೆನಪಿಗೆ ಬರುತ್ತಿದೆ. ಅದೇ ತಿಲಕರಿಂದ ಮಾತು—"ಧರ್ಮದ ರಕ್ಷಣೆಯನ್ನು ಸ್ತ್ರಿಯರೇ ಜೆನ್ನಾಗಿ ಮಾಡಬಲ್ಲರು."

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. I. A 720/66.
O. S. 259/65.

ಅರ್ಜಿದಾರರು:— ಗೋಪಾಲಕೃಷ್ಣ ಅಡಾಯರ್, ಬಗ್ವೆ ಜನರಲ್ ಪರರ್ ಹಿಫ್‌ಎಟರ್ನ್, ತಂದೆ ಮೂಢಿದ ಅಡಾಯರ್ಯ, ಸೇನಾಪುರ.

ಎದ್ರಿ:— ವೆಂಕಟ್ರಮಣ ನ್ಯಾಕ್, ಸಾ ಸ್ವಾನ ಪದ್ಮನಾಭ ನ್ಯಾಕನ ಮಗ, ಕುಂದಾಪುರ ತಾಲೂಕು ಸೇನಾಪುರದಲ್ಲಿರುವವ.

ಮೇಲ್ಕಂಡ ಎದ್ರಿಗೆ ತಿಳಿಯಪಡಿಸಿದ್ದು—

ಅರ್ಜಿದಾರನು ಮೇಲ್ಕಂಡ ದಾವೆಯಲ್ಲಿ ಫೈನಲ್ ಡಿಕ್ರಿ ಕೊಡಿಸುವಂತೆ ಅರ್ಜಿಮಾಡಿಕೊಂಡಿರುತ್ತಾನೆ. ಸದ್ರಿ ಅರ್ಜಿಯು ತನಿಖೆ ಬಗ್ಗೆ ತಾ. 22—12—66ಕ್ಕೆ ಇಟ್ಟಿರುತ್ತದೆ. ಮೇಲ್ಕಂಡ ಅರ್ಜಿಯಲ್ಲಿ ನಿನಗೆ ಅಕ್ಷೇಪಣೆಗಳೇನಾದರೂ ಇದ್ದರೆ ಆ ದಿವ್ಸ ಇಗಲು 11 ಗಂಟೆಗೆ ಕೋರ್ಟು ಕುಂಡೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇಲ್ಲವಾದರೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲ್ಪಡುತ್ತದೆ.

(ಕೋರ್ಟು ಹುಕುಂ ಪ್ರಕಾರ)

ಎ. ಎಸ್. ಎನ್. ಹೆಬ್ಬಾರ್
ಅರ್ಜಿದಾರರ ನಿಡ್ಡೊರೇಟ್

ಕುಂದಾಪುರ, 28—11—1966.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.....

ಧನ (½ H.P. to 30 H.P.) ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು.....

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ನಂಬಿದವರಿಗೆ ತನ್ನ ತೆತ್ತಿಹ ಮಂಜುನಾಥನ ನೆಲೆವೀಡು

ಮಂಜುನಾಥನ ಮುಂಜಳ ಬಾಹುಬಂಧನವೆಂದರೆ ಭವಭಯ ಬಂಧನ ಮುಕ್ತಿ

ಪಡುವಣ ಕಡಲ ತೀರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ತೀರ್ಥ—ಪುಣ್ಯ ಕ್ಷೇತ್ರಗಳ ಪುಂಜವಾಗಿ ಮೆರೆಯುತ್ತಿದೆ. ಈ ಜಿಲ್ಲೆಯ ಒಳನಾಡು ಮಲೆ—ಗುಡ್ಡ ಬೆಟ್ಟಗಳಿಂದ ಆವೃತವಾದ ಒಂದು ಬೀಡು - ನೆಲ್ಯಾಡಿ ಬೀಡು; ಹಕ್ಕದಲ್ಲೇ ಶ್ರೀ ಚಂದ್ರನಾಥ ಸ್ವಾಮಿಯ ಬಸದಿ. ಬೀಡಿನೂಡೆಯರು ಬರ್ಮಣ್ಣ ಹೆಗ್ಗಡೆಯವರು ಧರ್ಮಭೀರುಗಳು, ಸಜ್ಜನರು, ಕರುಣಾಳು. ಇವರ ಪತಿ ಅಮ್ಮು ದೇವಿ—ಪತಿಯಂತೆ ಸತಿ, ಗುಣದಲ್ಲಿ, ನಡೆಯಲ್ಲಿ, ಮಾತಿನಲ್ಲಿ, ವಿನಯ ಮೊದಲಾದ ಸದ್ಗುಣಗಳಲ್ಲಿ ಇವರಿರ್ವರೂ ಸರ್ವಸಮಾನರು. ನೆಲ್ಯಾಡಿ ಬೀಡು ಆ ಕಾಲದಲ್ಲಿಯೇ ದಾನ—ಧರ್ಮಗಳ ನೆಲೆವೀಡಾಗಿತ್ತು.

ಅಪೂರ್ವ ಅನುಭವ

ಒಂದುದಿನ ಭಗವದ್ಭಕ್ತರಾದ ಈ ದಂಪತಿಗಳಿಗೊಂದು ವಿಚಿತ್ರ ಅನುಭವವಾಯ್ತು. ದೇವಾಂಶ ಸಂಭೂತರಾದ ಧರ್ಮದೇವತೆಗಳು ಮಾನವ ರೂಪದಾಳಿ ಆನೆ ಕುದುರೆಗಳ್ನೇರಿ ಪರಿವಾರ ಸಮೇತರಾಗಿ ದೈವಿಕ ತೇಜಸ್ಸಿನಿಂದ ಕೂಡಿ ನೆಲ್ಯಾಡಿ ಬೀಡಿಗೆ ಬಂದಿಳಿದರು. ತಮ್ಮ ಸಹಜ ನಮ್ರ—ವಿನಯದಿಂದ ದಂಪತಿ ಸತ್ಕಾರ ಪಡೆದ ಈ ದೇವತೆಗಳು ಪ್ರೀತರಾದರು. ತಮ್ಮ ಇರುವಿಕೆಗೆಂದು ನೆಲ್ಯಾಡಿ ಬೀಡನ್ನೆ ಬೇಡಿದರು. ಕಾಳರಾಹು, ಕಳರ್ಕಾಯಿ, ಕುಮಾರಸ್ವಾಮಿ ಮತ್ತು ಕನ್ಯಾ ಕುಮಾರಿ ಎಂಬ ದೇವತೆಗಳು ತಾವೆಂದೂ ತಮಗೆ ಬೇರೆ ಬೇರೆ ಗುಡಿಗಳನ್ನು ಕಟ್ಟಿಸಿ ಕಾಲ ಕಾಲಕ್ಕೆ ಪರ್ವ—ನಡಾವಳಿಗಳನ್ನು ನಡೆಸಿಕೊಂಡು ಬರಬೇಕೆಂದೂ ಆದೇಶವಿತ್ತರು. "ನಮ್ಮ ದೂತನಾದ ಅಣ್ಣಪ್ಪನಿಂದ ನಾವು ಎಲ್ಲ ಕಾರ್ಯಗಳನ್ನೂ ನಡೆಸುವೆವು. ನೀವು ಶ್ರದ್ಧೆ—ಭಕ್ತಿಗಳಿಂದ ನಮ್ಮನ್ನು ಆರಾಧಿಸಿಕೊಂಡು ಬಂದರೆ, ನಿಮ್ಮ ಕುಟುಂಬ— ಸಂಪತ್ತು— ಆಯುರಾರೋಗ್ಯಾದಿಗಳನ್ನು ಅಭಿವೃದ್ಧಿಗೊಳಿಸುವೆವು. ದೇಶದೇಶಾಂತರಗಳಲ್ಲಿ ನಮ್ಮ ಪ್ರಭಾವವನ್ನು ಹರಡಿ ಧಾರಾಳವಾಗಿ ಹರಕೆ—ಕಾಣಿಕೆಗಳನ್ನು ತಂದಿಸಿಕೊಡುವೆವು. ಅದರಿಂದ ಸರ್ವರಿಗೂ ವಿಶೇಷವಾದ ದಾನಧರ್ಮ ಸದಾಕಾಲ ನಡೆಯುತ್ತಿರಬೇಕು. ನಿಮ್ಮ ಮಾತನ್ನು ನಿಜವಾಗಿಸಿಕೊಟ್ಟು ನಿಮ್ಮ ಬಯಕೆಗಳಿಗೆ ಬೆಂಬಲಿಗರಾಗಿ ನಿಮ್ಮ ಸರ್ವ ಕಾರ್ಯಗಳಿಗೂ ಜಯ ದೊರೆಯುವಂತೆ ಮಾಡುವೆವು ಇದಕ್ಕೆ ವಿರೋಧವಾಗಿ ನಡೆದರೆ, ನಿಮಗೇನೇ ಕೇಡುಂಟಾಗುವುದು" ಎಂದು ಹೇಳಿದರು-ಹೆಗ್ಗಡೆ ದಂಪತಿಗಳು ತಮಗಾದ ದಿವ್ಯದರ್ಶನದಿಂದ ಸಂತೃಪ್ತರಾದರು; ದಿವ್ಯ ಪ್ರೇರಣೆಯಂತೆ ನಡೆಸುಕೊಂಡರು. ನೆಲ್ಯಾಡಿ ಬೀಡಿನ ಅಸುಪಾಸು 'ಕುಡುಸು' ವೆಂಬ ಅನ್ವರ್ಥನಾಮಕ್ಕೆ ಗುರಿಯಾಯಿತು.

ಮಂಜುನಾಥನ ಆಗಮನ

'ದೇವರ ಆರಾಧನೆಯಿಲ್ಲದಲ್ಲಿ ನಾವು ಸಂತರ್ಪಣೆಗೆ ಬರುವುದಿಲ್ಲ' ಎಂದರು ಬ್ರಾಹ್ಮಣರು. ಹೆಗ್ಗಡೆಯವರಿಗೆ ಚಿಂತೆಯಾಯಿತು. ಇದನ್ನು ತಿಳಿದ ಧರ್ಮದೇವತೆಗಳು ದೂತನಾದ ಅಣ್ಣಪ್ಪನನ್ನು ಕಳಿಸಿ ಕದಿರಿಗೆ ಕಾಶಿಯಿಂದ ತಂದಿದ್ದ ಶಿವಲಿಂಗವನ್ನು ತರಿಸಿ ಈಗ ದೇವಾಲಯವಿರುವಲ್ಲಿ ಇರಿಸಿದರು. ಅನಂತರ, ದೇವಾಲಯ ಕಟ್ಟಿಸಿ ನಿತ್ಯ ಪೂಜೆ— ಉತ್ಸವಗಳ ವ್ಯವಸ್ಥೆಗೆ ಮೊದಲಾಯಿತು. ದೇವರ ಆರಾಧನೆ ಮೊದಲಾದುದಿಂದ ದಾನ-ಧರ್ಮಕಾರ್ಯಗಳು ನಿರಾತಂಕವಾಗಿ ಸಾಗಿದುವು-ದಿನಗಳುದ ವಚ್ಚುತ್ಯಾಗಿ ತನ್ನ ಒಡೆತನದ ಭೂಮಿಯಲ್ಲಿ ಒಂದು ಭಾಗವನ್ನು ವಿಂಗಡಿಸಿಟ್ಟರು ಬರ್ಮಣ್ಣ ಹೆಗ್ಗಡೆಯವರು.

ಇದಲ್ಲವೂ ನಡೆಯುತ್ತಿದ್ದು ಸುಮಾರು ಐದಾರು ವರ್ಷಗಳಿಗೆ ಮೊದಲು. ಅಂದಿನಿಂದ ಇಂದಿನವರೆಗೂ ಕುಡುಮದ ಕೀರ್ತಿ ಶಶಿಯಂತೆ ಬೆಳೆಯುತ್ತ ಬಂತು. ಧರ್ಮದೇವತೆಗಳ ಮಾತಿನಂತೆ ಸ್ಥಳವನ್ನು ಸಂದರ್ಶಿಸುವ ಯಾತ್ರಿಕರಿಗೆ ಸಂಖ್ಯೆ ಹೆಚ್ಚುತ್ತ ಬಂತು. ಇಂದು ಪರಿಪೂರ್ಣವಾದ ಸಿಸ್ಪೃಹಾತ್ಮಕ ದಾನ-ಧರ್ಮಗಳು ಇಂದಿಗೂ ಯಾವ ಲೋಪದೋಷವೂ ಇಲ್ಲದ ನಡೆದು ಬರುತ್ತಿದೆ. ವಿಸ್ಮಯ. ಅದರ ಎಸ್ಟಿಸ್ಥಿತಿ.

ಧರ್ಮಸ್ಥಳವಾಯಿತು

ಕುಡುಮದ ಹೆಸರು ಧರ್ಮಸ್ಥಳವೆನ್ನಿಸಿದುದು ಹೇಗೆ ಮತ್ತು ಯಾವಾಗ? ಇದೂ ಇನ್ನೊಂದು ಐತಿಹಾಸಿಕ ಘಟನೆ. ಗಟನೆಯ ರೂವಾರಿ ಮಧ್ವಮತ ಸ್ಥಾಪಕ ಶ್ರೀಮದಾನಂದತೀರ್ಥರು. ಅದರ ಸ್ಥಾಪನೆಯಾಗಿದ್ದ ಶ್ರೀ ವಾದಿರಾಜರು ವಿಶೇಷ ಪ್ರಭಾವಶಾಲಿಯೂ ಆಗಿ ಮೆರೆಯುತ್ತಿದ್ದರು. ತಮ್ಮ ಸ್ವಾಮಿಯಂತೆಯೇ ಪ್ರಭಾವಶಾಲಿಗಳಾದ ಇವರು ಪುಣ್ಯ ತೀರ್ಥದರ್ಶನ ಲಾಭಕ್ಕಾಗಿ ಕಡುಮಕ್ಕೆ ಆಗಮಿಸಿದರು. ಆಗ ಅಲ್ಲಿ ಅಧಿಕಾರದಲ್ಲಿದ್ದ ದೇವರಾಜ ಹೆಗ್ಗಡೆಯವರು ಯತಿಗಳನ್ನು ಆದರದಿಂದ ಸ್ವಾಗತಿಸಿದರು; ಭಯಭಕ್ತಿಗಳಿಂದ ತಮ್ಮಲ್ಲಿ ಭಿಕ್ಷೆ ಸ್ವೀಕರಿಸುವಂತೆ ಬೇಡಿಕೊಂಡರು. ಹೆಗ್ಗಡೆಯವರ ಆದರ ಸತ್ಕಾರಗಳಿಂದಲೂ ಇಲ್ಲಿ ನಡೆಯುತ್ತಿರುವ ದಾನ— ಧರ್ಮಗಳಿಂದಲೂ ಪ್ರಭಾವಿತರಾದ ಶ್ರೀ ಶ್ರೀಗಳು 'ಕುಡುಮ' ಎಂಬ ಹೆಸರಿನ ಬದಲು 'ಧರ್ಮಸ್ಥಳ' ಎಂಬ ಹೊಸ ನಾಮಕರಣ ಮಾಡಿದರು. ಎರಡೂ ಪದಗಳ ಅರ್ಥವೊಂದೇ ಆದರೂ ಸಂಸ್ಕೃತ ಪದ ಧರ್ಮಸ್ಥಳವೆಂಬ ಹೆಸರಲ್ಲಿ ಈ ತೀರ್ಥಕ್ಷೇತ್ರ ಸುಪ್ರಸಿದ್ಧವಾಗಿಸಿ ಕರ್ಮಶ್ರುತವಾಗಿದೆ. ಹೆಗ್ಗಡೆಯವರ ವಂಶವನ್ನು ಸಕ್ರಿಯಮಾಡಿಕೊಡುವುದಾಗಿ ವಿಶ್ವಾಸವಿತ್ತ ಧರ್ಮದೇವತೆಗಳ ಮಾತಿನಂತೆ 'ಮಂಜು ಬಿಡದ ಮಂಜುನಾಥ" ಎಂಬ ಪೂತು ಬಳಕೆಯಲ್ಲಿದೆ ಮಾತ್ರವಲ್ಲ; ಸತ್ಯ ವೆಂಬುದು ಇಂದಿಗೂ ಭಕ್ತ ಜನ ವಿದಿತವಿದೆ.

ಎದ್ದು ನಿಂತ ಬೆಟ್ಟ

ಶ್ರೀಕ್ಷೇತ್ರ ಧರ್ಮಸ್ಥಳ ತಲೆಯೆತ್ತಿ ನಿಂತಿರುವುದು ಒಂದು ಬೆಟ್ಟದ ಮೇಲೆ. ಇದನ್ನು 'ಜಯ ಕೀರ್ತಿ ಬೆಟ್ಟ' ನೆನ್ನುತ್ತಾರೆ.' ಶಿವರಾತ್ರಿ ಪರ್ವತವೆನ್ನು

(ಹತ್ತನೇ ಪುಟ ನೋಡಿ)



ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು

ಧರ್ಮಸ್ಥಳ, ದ. ಕನ್ನಡ

ಮಹಾಶಯರೆ,

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಮೂರವತ್ತನಾಲ್ಕನೆಯ ಅಧಿವೇಶನವು ದ. ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಗಣಿಸಿಸಿಯು ಇಸವಿ ಡಿಸೆಂಬರ್ ತಿಂಗಳು ಹತ್ತು ಮತ್ತು ಹನ್ನೊಂದನೆಯು ತಾರೀಖುಗಳಲ್ಲಿ ನಡೆಯುವುದು. ಈ ಸಮ್ಮೇಳನಗಳ ಉದ್ಘಾಟನೆಯನ್ನು ವಿಶಾಲ ಮೈಸೂರಿನ ಸಾರಿಗೆ, ಕಾರ್ಮಿಕ, ಪ್ರವಾಸೋದ್ಯಮ ಶಾಖೆಗಳ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಡಿ. ದೇವರಾಜ ಅರಸ್, ಬಿ.ಎಸ್.ಸಿ, ಅವರು ನೆರವೇರಿಸಲು ದಯಮಾಡಿಸಿಕೊಟ್ಟು ಸಮ್ಮತಿಸಿರುತ್ತಾರೆ.

ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆಯನ್ನು ಕಾರಣಗೋಡು ತಾಲ್ಲೂಕಿನ ಎಡನೂರು ಶ್ರೀಮದಾಧೀಶ್ವರರಾದ ಪೂಜ್ಯ ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತಿ ಶ್ರೀಪಾದಂಗಳವರೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ವಿದ್ವತ್ಶ್ರೀ ಪ್ರೊ! ವಿನಾಯಕ ಕೃಷ್ಣ ಗೋಕಾಕ್, ಎಂ. ಎ. (ಆಕ್ಸನ್.) ಅವರೂ ವಹಿಸಲು ಕೃಪೆಯಿಟ್ಟು ಒಪ್ಪಿರುತ್ತಾರೆ.

ಈ ಸಮ್ಮೇಳನಗಳಿಗೆ ತಾವು ದಯಮಾಡಿಸಬೇಕಾಗಿ ಪ್ರಾರ್ಥನೆ.

ಡಿ. ರತ್ನವರ್ಮ ಹೆಗ್ಗಡೆರು,
ಅಧ್ಯಕ್ಷರು ಸ್ವಾಗತ ಸಮಿತಿ

ಕೆ. ಎಸ್. ಧರಣೇಂದ್ರಯ್ಯ,
ಕಾರ್ಯದರ್ಶಿ.

ಶ್ರೀ ಧರ್ಮಸ್ಥಳ, ದ. ಕನ್ನಡ
ತಾ. ೧೦-೧೧-೧೯೬೬.

(ಕಾರ್ಯಕ್ರಮಗಳಿಗೆ ಐದನೇ ಪುಟ ನೋಡಿರಿ)

ಭಕ್ತ ಜನರಿಗೆ

ಮಂಜುನಾಥನ ಶ್ರೀಕ್ಷೇತ್ರ ಧರ್ಮ



ಶ್ರೀ ಧರ್ಮಸ್ಥಳ ಕ್ಷೇತ್ರ

ಧರ್ಮದಾಗರ ಧರ್ಮಸ್ಥಳದ ಸ್ಥಳ ಮಹಿಮೆಯಂತೆಯೇ ಆಡಳಿತ ವಿಧಾನವೂ ವಿಶಿಷ್ಟವಾದುದು. ಶ್ರೀ ಕ್ಷೇತ್ರದ ಆರಂಭದಿಂದ ಇಂದಿನ ವರೆಗೂ ಧರ್ಮವಾರಾಮುಣರೂ ಭಗವದ್ಭಕ್ತರೂಉದಾರ ಮನಸ್ಕರೂ ಆಡಳಿತಾಧಿಕಾರಿಗಳಾಗಿ ಬಂದಿರುವುದು ಇಲ್ಲಿನ ವೈಶಿಷ್ಟ್ಯ. ಧರ್ಮದೇವತೆಗಳಿಂದ ಅನುಗೃಹೀತರಾದ ಶ್ರೀ ವರ್ಮಣ್ಣ ಹೆಗ್ಗಡೆಯವರೇ ಶ್ರೀಕ್ಷೇತ್ರ ಧರ್ಮಸ್ಥಳದ ಮೊತ್ತಮೊದಲ ಧರ್ಮಾಧಿಕಾರಿಯಾಗಿ ಧರ್ಮ ದೇವತೆಗಳ ಆಶಯಕ್ಕೊಂದು ರೂಪುಕೊಡುವಲ್ಲಿ ಮುಂದಾದರು; ಕೀರ್ತಿ ಗಳಿಸಿದರು; ಯಶಗಳಿಸಿದರು. ಈ ಪರಂಪರೆಯಲ್ಲಿ ಗಣನೆಯವರೇ ಈಗಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರ ತೀರ್ಥರೂಪ ಶ್ರೀ ಚಂದಯ್ಯ ಹೆಗ್ಗಡೆಯವರು.

ಕಾಲಕಾಲದಲ್ಲಿ ಅಧಿಕಾರಕ್ಕೆ ಬಂದ ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳು ದೇವಾಲಯದ ಆಡಳಿತವನ್ನು ಸುಸೂತ್ರವಾಗಿ ನಡೆಸುವುದಲ್ಲದೆ, ದೇಗುಲದ ಕೀರ್ತಿ-ಪ್ರತಿಷ್ಠೆಗಳನ್ನು ನಾಲ್ದೆಸೆಯಲ್ಲಿ ಹರಡುವುದರಲ್ಲಿಯೂ ಪ್ರಯತ್ನಶೀಲರಾದರು. ಭಕ್ತರನ್ನು ಆಕರ್ಷಿಸಲು, ದೇಗುಲದಲ್ಲಿ ದೇವಕಳೆಯನ್ನು ಹೆಚ್ಚಿಸಲು ಅವಿಶ್ರಾಂತ ದುಡಿದರು. ಯಾತ್ರಿಕರ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮುಂದಾದರು. ದೇವಾಲಯದ ಹೆಸರಲ್ಲಿ ಆಸ್ತಿಪಾಸ್ತಿಗಳನ್ನು ಸಂಪಾದಿಸಿ, ತನ್ಮೂಲಕ ಆಯವನ್ನು ಹೆಚ್ಚಿಸಿಕೊಂಡರು—ಶ್ರೀ ಕ್ಷೇತ್ರದಲ್ಲಿ ನಡೆಯುವ ದಾನ ಧರ್ಮಾದಿಗಳಲ್ಲಿ ನ್ಯೂನತೆ ತಲೆದೋರದಂತೆಯೂ ಪ್ರತಿದಿನ ಕಿಕ್ಕಿರಿದು ಬರುತ್ತಿರುವ ಭಕ್ತ ಜನರಿಗೆ ಆಸೌಕರ್ಯವನ್ನುಂಟುಮಾಡದಂತೆಯೂ ಅತೀವ ಮುತುವರ್ಜಿಯಿಂದ ಧರ್ಮಾಧಿಕಾರಿಗಳು ಪರಿಶ್ರಮಿಸುತ್ತ ಬಂದಿದ್ದಾರೆ. ಶ್ರೀ ಚಂದಯ್ಯ ಹೆಗ್ಗಡೆಯವರೂ ತಮ್ಮ ಪರಂಪರೆಯನ್ನು ರಕ್ಷಿಸಿಕೊಂಡು ಬಂದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವರು.

ಪ್ರಗತಿಗೆ ಮೂಲ ಚಂದಯ್ಯ ಹೆಗ್ಗಡೆ

೧೮೮೪ರಲ್ಲಿ ಜನಿಸಿದ ಚಂದಯ್ಯ ಹೆಗ್ಗಡೆಯವರು ಎಳೆಪ್ರಾಯದಲ್ಲಿಯೇ ಗುರುತರ ಹೊಣೆ ಹೊರುವ ಪ್ರಸಂಗ ಬಂದಿತು. ೧೯೦೯ನೆಯ ಪೀಳಿಗೆಯ ಧರ್ಮಾಧಿಕಾರಿ ಶ್ರೀ ಧರ್ಮಪಾಲ ಹೆಗ್ಗಡೆಯವರು ಬರಿಯ ಒಂದೂವರೆ ವರ್ಷಕಾಲ ಅಧಿಕಾರದಲ್ಲಿದ್ದ ದಿವಂಗತರಾದುದರಿಂದ ಶ್ರೀ ಚಂದಯ್ಯ ಹೆಗ್ಗಡೆಯವರು ತಮ್ಮ ಗಣನೆ ವಯಸ್ಸಿನಲ್ಲಿಯೇ ಪಟ್ಟವೇರಿದರು. ಆಪ್ತಾಯಸ್ಥರ ದರೂ ತನ್ನ ಸಹಾಯಕರ ಸಹಾಯದಿಂದ ಅಧಿಕಾರವನ್ನು ಸೇವೆಮಾಡುವ ಸದವಕಾಶವೆಂದು ನಂಬಿ ಶ್ರೀಯುತರು ಮುಂದುವರಿದರು.

ಗಂಭೀರತೆ, ಮಿತಭಾಷಿತನ, ಕಾರ್ಯದಕ್ಷತೆಗಳ ತ್ರಿವೇಣಿ ಶ್ರೀ ಚಂದಯ್ಯ ಹೆಗ್ಗಡೆಯವರು. 'ಅತಿಥಿ ದೇವೋ ಭವ' ಎಂಬ ಆರ್ಯೋಕ್ತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡ ಇವರು ಭಕ್ತಜನ ಅತಿಥಿಗಳಿಗೆ ಸೌಕರ್ಯ ಹೆಚ್ಚಿಸುವತ್ತ ತಮ್ಮ ಗಮನ ಹರಿಸಿದರು — ಶ್ರೀ ಧರ್ಮಸ್ಥಳದ ಅಧುನಿಕೀಕರಣಕ್ಕೆ ಶ್ರೀ ಗಣೇಶ ಹಾಡಿದರು. ಶ್ರೀ ಕ್ಷೇತ್ರದ ಧಾರ್ಮಿಕ ನಡಾವಳಿಗಳಿಂದ ಭಗವಂತನು ಇಲ್ಲಿ ನಿಜಕ್ಕೂ ಆವಾಸ ಮಾಡಿದ್ದಾನೆ—ಶ್ರೀಕ್ಷೇತ್ರದ ದರ್ಶನ ಲಾಭದಿಂದ ತಮ್ಮ ಜನ್ಮ ಸಾರ್ಥಕವೆಂಬ ಆಸ್ತಿಕರ ವಿಶ್ವಾಸದಿಂದ ಶ್ರೀ ಧರ್ಮಸ್ಥಳಕ್ಕೆ ಬರುವ ಯಾತ್ರಿಕರ ಸಂಖ್ಯೆ ಹೆಚ್ಚುತ್ತ ಬಂದಿತು— ಅಧುನಿಕ ಪ್ರಯಾಣ ಸೌಕರ್ಯಗಳು ಲಭ್ಯವಾದ ಮೇಲೆ ಕೇಳುವುದೇನು? ಭಗವಂತನ ನೆಲೆಗೆ ಬಂದ ಭಗವದ್ಭಕ್ತರು ಪ್ರಸನ್ನರಾಗಿ ಅನುಗೃಹೀತರಾಗಿ ಮರಳಿ ಬೇಕು. ಮಿತ ಪರಿಮಾಣದ ಸೌಕರ್ಯ ಸಾಧನಗಳು ಭಕ್ತಜನ ಸಾಗರಕ್ಕೆ ಎಲ್ಲಿ ಸಾಕು? ಇತ್ತ ಶ್ರೀ ಚಂದಯ್ಯ ಹೆಗ್ಗಡೆಯವರ ದೃಷ್ಟಿ ಹರಿಯಿತು. ಯಾತ್ರಾರ್ಥಿಗಳ ಹಿತಕ್ಕಾಗಿ, ಅವರ ತೊಂದರೆಗಳನ್ನು ದೂರ ಮಾಡುವ ಸಲುವಾಗಿ ವಸತಿ ಸೌಕರ್ಯವನ್ನು ಸಾಧ್ಯವಾದಷ್ಟು ಹೆಚ್ಚಿಸಿದರು. ಪರಿಣಾಮವಾಗಿ ಧರ್ಮಚಿಕ್ಕದ ವಿಸ್ತರಣೆಯಾಯಿತು— ಯಾತ್ರಿಗಳು ಮಂಜುನಾಥನ ಮಂಜುಳ ಸಾನ್ನಿಧ್ಯದಲ್ಲಿ ಮೈಮರೆತು ಭಗವಂತನಲ್ಲೇ ಲೀನವಾಗುವಂತಾಯಿತು.

ಶ್ರೀ ಚಂದಯ್ಯ ಹೆಗ್ಗಡೆಯವರ ಯೋಜನೆ ಮತ್ತು ಸಾಧನೆಗಳು ಹಲವು. ದೇಗುಲದ ಉಗ್ರಾಣದ ಕೆಳಧಾಗವನ್ನು ಕಲ್ಲಿನಿಂದ ಕಟ್ಟಿಸಿ ಅದನ್ನು ಭದ್ರನಾಗಿರಿಸಿದರು. ಉಜಿರೆಯಿಂದ ಶ್ರೀಕ್ಷೇತ್ರದ ವರೆಗೆ ಕಾಲ್ನಡೆಯಾಗಿಯೇ ಬರುವ ಸಹಸ್ರಾರು ಯಾತ್ರಿಕರ ನೀರಡಿಕೆ ಇಂಗಿಸಲು ದಾರಿಯಲ್ಲಿ ಚಿಮ್ಮುನ ನೀರಿನ ವ್ಯವಸ್ಥೆ ಮಾಡಿದರು. ನಳ್ಳಿ ನೀರಿನ ಸೂಯ್ಯೆ ಮಾಡಿದರು. ದೈವ ಗುಡಿಗಳನ್ನು ಹೊಸತಾಗಿ ಕಟ್ಟಿಸಿ ಬಸದಿಗೆ ಪಂಚಕಲ್ಯಾಣನನ್ನೂ ದೈವಗಳಿಗೆ ನಡಾವಳಿಗಳನ್ನೂ ಕೊಟ್ಟರು— ಹೀಗೆ ಶ್ರೀಕ್ಷೇತ್ರದ ಮಹಿಮೆ ಹಿರಿಮೆ, ಕ್ಷೇತ್ರ ಪ್ರೇಮಿಗಳಿಗೆ ಸೌಕರ್ಯವೆಲ್ಲವನ್ನೂ ಹೆಚ್ಚಿಸುವುದರಲ್ಲೇ ತಮ್ಮ ದೇಹ ಸವೆಸಿ ೧೯೧೮ರಲ್ಲಿ ದೈವಾಧೀನರಾದರು. ನಡುಹರೆಯದಲ್ಲೇ ಕೊಲನ ಕರಿಗೆ ಒಗೊಟ್ಟ ಹೆಗ್ಗಡೆಯವರಿಗೆ ಆಗ ತಾನೇ ಒಂದು ಗಂಡು ಕೂಸು ಹುಟ್ಟಿತ್ತು. (ಈ ಕೂಸೇ ಇಂದಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು).

ಶ್ರೀ ಮಂಜಯ್ಯ ಹೆಗ್ಗಡೆ

ಮುಂದೆ, ಶ್ರೀ ಮಂಜಯ್ಯ ಹೆಗ್ಗಡೆಯವರು ಶ್ರೀ ಕ್ಷೇತ್ರದ ಧರ್ಮಾಧಿಕಾರ ಪದವೇರಿದರು. ತನ್ನ ಎಂಟನೆಯ ವಯಸ್ಸಿನಲ್ಲೇ ಶ್ರೀ ಮಂಜುನಾಥನ ಆವಾಸದಿಂದ ಮಂದಿರವಾಗಿ ಮೆರೆಯುವ ಕ್ಷೇತ್ರದಲ್ಲಿ ಇರತೊಡಗಿದ್ದರು. ಹಿರಿಯರಾದ ಶ್ರೀ ಚಂದಯ್ಯ ಹೆಗ್ಗಡೆಯವರ ವೇಲ್ಚಿಚಾರಣೆ, ಕಾರ್ಯಾಚರಣೆಗಳ ಪ್ರಭಾವ ಇವರ ಮೇಲೆ ಬೀರದೆ ಉಳಿಯುವುದು ಹೇಗೆ? ಹಾಗಾಗಿಯೇ ಇವರು ನಡೆದ ದಾರಿಯನ್ನೇ ತುಳಿದು ಇನ್ನೊಂದು ವೈಲುಗಲ್ಲು ನಿಲ್ಲಿಸಿದರು, ಶ್ರೀ ಮಂಜಯ್ಯ ಹೆಗ್ಗಡೆಯವರು.

೧೯೧೮ರಲ್ಲಿ ಅಧಿಕಾರ ವಹಿಸಿದ ಶ್ರೀಯುತರು ಬಾಲ್ಯದಿಂದಲೇ ಸರಳರು; ಅವರ ಭಾವನೆ ಉದಾತ್ತವಾದುದು; ಮನನ ಚಿಂತನ ಅನೋಘವಾದುದು. ಸಂಪೂರ್ಣ ವಿನೇಯನಶೀಲತೆಯೇ ಇವರ ವ್ಯಕ್ತಿತ್ವದ ಕೀಲಿಕೈ. ತನ್ನ ಹೃದಯಕ್ಕೆ ಉತ್ತಮವೆಂದು ಕಂಡು ಬಂದ ವಿಚಾರಗಳನ್ನು ತಾವು ಸಾಧಿಸಿ ಇತರರಿಗೆ ಬೋಧಿಸುವ ವಿಧಾನವಿವರದು. ಪ್ರತಿಕಾರ್ಯವನ್ನೂ ಶ್ರದ್ಧೆ, ಆಸಕ್ತಿ, ಉತ್ಸಾಹದಿಂದ ಕಲಾತ್ಮಕವಾಗಿ ನೆರವೇರಿಸುವುದೇ ಇವರ ವೈಶಿಷ್ಟ್ಯ.

ಶ್ರೀಕ್ಷೇತ್ರದ ಭಗವತ್ ಕಲೆಗೆ ಚ್ಯುತಿಯೊದಗಬಾರದು. ಇದಕ್ಕಾಗಿ ಅನೂಚಾನವಾಗಿ ನಡೆದುಬಂದ ದೇವಾಲಯದ ಕಾರ್ಯಗಳಿಗೆ, ನಿಯಮಗಳಿಗೆ ಲೋಪಬಾರದಂತೆ ನೋಡಿಕೊಳ್ಳುವತ್ತ ಲಕ್ಷ್ಯ ಹರಿಸಿದರು. ತಾವೇ ಈ ಕೆಲಸವನ್ನು ಮಾಡಲು ಮುಂದಾದರು. ದೇವತಾಕಾರ್ಯದಲ್ಲಿ ಶ್ರದ್ಧೆ, ಭಕ್ತಿಗಳು ಕೂಡಿಬರಬೇಕು — ಎಂಬುದನ್ನು ತನ್ನ ಆಚರಣೆಯಿಂದ ತೋರಿಸಿಕೊಟ್ಟರು. ಶ್ರೀಕ್ಷೇತ್ರವನ್ನು ಸಂದರ್ಶಿಸುವ ಯಾತ್ರಿಕರಿಗೆ ಮೊದಲು ಪಡಿಯುಕ್ಕಿಯನ್ನು ಕೊಡುವ ಪದ್ಧತಿಯಿತ್ತು. ಇದರಿಂದ ಕಲವು ಯಾತ್ರಿಕರಿಗೆ ಬೇರೆ ಬೇರೆ ತರದ ತೊಂದರೆಯೂಗುತಿದ್ದುದನ್ನು ಮನಗಂಡು, ಭೋಜನದ ವ್ಯವಸ್ಥೆಯನ್ನೂ ಮಾಡಿದರು. ಕೆಲ ದೇವತೆಗಳಿಗೆ ನೀಡುತ್ತಿದ್ದ ರಕ್ತಾಹುತಿಯನ್ನು ನಿಲ್ಲಿಸಿ



ಶ್ರೀ ಕುಮಾರಸ್ವಾಮಿಯ ಗುಡಿ

ಶ್ರೀ ಚಂದ್ರನಾಥ ಸ್ವಾಮಿಯ ಬನದಿ

ವಂತನ ದರ್ಶನ

ಸುವೈಕುಂಠವಾಗಿ ಮೆರೆಯುತ್ತಿದೆ

ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ
ಶ್ರೀ ರತ್ನವರ್ಮ ಹೆಗ್ಗಡೆಯವರು

ಅಹಿಂಸೆಯುತ್ತ ಆಸಕ್ತರಾದರು. ದೇವದಾಸಿ ಪದ್ಧತಿಯನ್ನು ಕೈತ್ತು ಹಾಕಿ ಉತ್ತಮ ಪರಂಪರೆಯನ್ನು ಹಾಕಿಕೊಟ್ಟರು. ಧರ್ಮ, ಶಿಕ್ಷಣ ಮತ್ತು ಕಲಾ ಪ್ರಚಾರಕ್ಕಾಗಿ ಹಣವನ್ನು ವಿನಿಯೋಗಿಸತೊಡಗಿದರು. ನೇತ್ರಾವತಿ ಹೊಳೆಗೊಂದು ಸೇತುವೆಯನ್ನು ಕಟ್ಟಿಸಿ ಭಕ್ತರಿಗೂ ಭಗವಂತನಿಗೂ ಮಧ್ಯದ ಸೇತುವೆನಿಸಿದರು.

ಶ್ರೀ ಮಂಜಯ್ಯ ಹೆಗ್ಗಡೆಯವರು ಧರ್ಮಪ್ರಿಯರು; ಸರ್ವ ಧರ್ಮ ಸಮ್ಮಾನಕರು. ದೀಪೋತ್ಸವದ ಸಮಯದಲ್ಲಿ ಅಪರಿಮಿತ ಯಾತ್ರಾರ್ಥಿಗಳು ಸೇರುವುದುಶ್ರೀ ಕ್ಷೇತ್ರದ ಆಕರ್ಷಣೆ. ಪ್ರಚಾರಕ್ಕೆ ಇದೊಂದು ಅಪೂರ್ವ ಅವಕಾಶ. ಶ್ರೀ ಹೆಗ್ಗಡೆಯವರು ಇದೇ ಸಂದರ್ಭದಲ್ಲಿ ಸರ್ವಧರ್ಮ ಸಮ್ಮೇಳನವನ್ನು ನಡೆಸಿ, "ಎಲ್ಲರಿಗೂ ಬೀಮಿಗೊಯ್ಯುವುವು" ಎಂಬ ಅಂಗ್ಲ ಗಾದೆಯ ಯಥಾರ್ಥತೆಯನ್ನು ಭಾರತೀಯರಿಗೂ ಮಾಡಿತೋರಿಸಿ, ಅಧುನಿಕ ಭಾರತದ ಪರಮಾವಶ್ಯಕತೆಯೊಂದನ್ನು ಸೂರೈಸಲು ಮುಂದಾದರು. ಇದೇ ವೇಳೆ ಸಾಹಿತ್ಯ ಸಮ್ಮೇಳನವನ್ನೂ ಆರಂಭಿಸಿ ಧರ್ಮ ಸುಧೆಯೊಡನೆ ಸಾಹಿತ್ಯ ಸುಧೆಯನ್ನೂ ಭಕ್ತ ಜನರಿಗೆ ನೀಡಲು ಮುಂದಾದರು. ಇವೆರಡೂ ಸಮ್ಮೇಳನಗಳು ಇಂದೂ ನಿರ್ವಿಘ್ನವಾಗಿ ನಡೆದುಬರುತ್ತಿವೆ.

ಉಜಿರೆಯ ಸಿದ್ಧವನ ಗುರುಕುಲ ಶ್ರೀ ಹೆಗ್ಗಡೆಯವರ ತಪಶ್ಚರ್ಯೆಯ ಫಲ. ಅಲ್ಲಿ ಸಂಸ್ಕೃತ, ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷಾ ಶಿಕ್ಷಣ ನೀಡುವ ಸೌಲಭ್ಯವೊದಗಿಸಿದವರು ಇವರು. ಧರ್ಮಸ್ಥಳದಲ್ಲಿ ಡಿ. ಕೆ. ಏ. ಹೈಸ್ಕೂಲಿನ ಸ್ಥಾಪನೆಯಾಯಿತು. ಇದೀಗ ಡಾಯರ್ ಸೆಕೆಂಡರಿ ಶಾಲೆಯಾಗಿದೆ. ಸ್ವಯಂ ಕಲಾವಿದರಾದ ಶ್ರೀ ಹೆಗ್ಗಡೆಯವರು ಕಲಾವಿದರನ್ನಾದರಿಸಿದರು; ಗೌರವಿಸಿದರು. ಶ್ರೀ ಹೆಗ್ಗಡೆಯವರೇ ಬರೆದ ಕೆಲವು ಚಿತ್ರಗಳು ಶ್ರೀಕ್ಷೇತ್ರದಲ್ಲಿವೆ. ಕಾಡು ಭೂಮಿಯನ್ನು ನಾಗುಭೂಮಿಯಾಗಿ ಮಾಡಿದರು; ಸಂಚಾರಿ ಆಸ್ಪತ್ರೆಯೊಂದನ್ನು ಸ್ಥಾಪಿಸಿದರು. ಜನಸೇವೆಯೇ ಜನಾರ್ದನನ ಸೇವೆ—ಎಂಬ ಸತ್ಯವನ್ನು ಮನಗಂಡು ಅದನ್ನು ಅನುಷ್ಠಾನಕ್ಕೆ ತಂದರು. ಹೀಗೆ ಶ್ರೀಕ್ಷೇತ್ರದ ಬಹುಮುಖ ಅಭಿವೃದ್ಧಿಗಾಗಿ ದುಡಿದು ಶ್ರೀ ಮಂಜಯ್ಯ ಹೆಗ್ಗಡೆಯವರು ೧೯೫೫ರಲ್ಲಿ ಯಶಶ್ಶರೀರರಾದರು.

ಶ್ರೀ ರತ್ನವರ್ಮ ಹೆಗ್ಗಡೆಯವರು

ಇಂದಿನ ಧರ್ಮಾಧಿಕಾರಿಗಳಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಶ್ರೀ ಚಂದಯ್ಯ ಹೆಗ್ಗಡೆಯವರ ಸುಪುತ್ರರು; ಶ್ರೀ ಮಂಜಯ್ಯ ಹೆಗ್ಗಡೆಯವರ ಕೂಸಿಗೂಲದಲ್ಲಿ ಅವರಿಂದ ಅಧಿಕಾರ ಗ್ರಹಣ ಮಾಡಿದರು. ೧೯೫೫ರ ಸಪ್ತಂಬರ ೧೫ರಂದು ಇವರ ಪಟ್ಟಾಭಿಷೇಕ ವಿಧ್ಯುಕ್ತವಾಗಿ ನೆರವೇರಿತು. ಅಂದಿನಿಂದಲೂ ಶ್ರೀ ಹೆಗ್ಗಡೆಯವರು ಕ್ಷೇತ್ರ ಮೇಲ್ಮೆಯೊಂದನ್ನೇ ತಮ್ಮ ಉದ್ದೇಶವಾಗಿಟ್ಟು, ತಮ್ಮ ಪೂರ್ವ ಪುರುಷಂತೆಯೇ ಅಹರ್ನಿಶಿ ಪರಿಶ್ರಮಿಸುತ್ತಿದ್ದಾರೆ.

ಸರ್ವಧರ್ಮಗಳನ್ನೂ ಏಕಸೂತ್ರವಾಗಿ ಕಾಣುವ ಉದಾರ ಹೃದಯ, ಸರಳತನ, ಶಿರಾಡಂಬರತೆ, ನಗುಮೊಗದ ಸತ್ಕಾರ, ಸಹಾನುಭೂತಿ ಪೂರ್ಣ ಸರಳ ವಾಣಿ—ಇವು ಶ್ರೀ ರತ್ನವರ್ಮ ಹೆಗ್ಗಡೆಯವರ ರತ್ನಪ್ರಾಯ ಗುಣಗಳು. ಶ್ರೀ ಹೆಗ್ಗಡೆಯವರೊಡನೆ ಮಾತನಾಡುವ ಯಾವನೇ ಇರಲಿ, ತನ್ನನ್ನೂ ತನ್ನ ಸಂಕಟವನ್ನೂ ಮರೆತೇ ಬಿಡುತ್ತಾನೆ—ಹಾರ್ದಿಕವಾದ ಮಾತುಕತೆ ಶ್ರೀ ರತ್ನವರ್ಮರಿಗೆ ದೈವದತ್ತವಾಗಿ ಬಂದುದು.

ಶ್ರೀ ರತ್ನವರ್ಮ ಹೆಗ್ಗಡೆಯವರ ಮನಸ್ಸು ಅಳವಾದುದು. ಒಂದು ಯೋಚನೆ—ಯೋಜನೆ ತಲೆಗೆ ಹೊಳೆಯಿತೆಂದರೆ, ಅದ ಆಳವಾದ ಮನಸ್ಸಾಗರದಲ್ಲಿ ದುಮುಕುವುದು; ವಸ್ತುಸ್ಥಿತಿಯನ್ನರಿಯುವುದು. ವಿತ್ತ ಕೈತ್ತೆ ಎದ್ದು ಬಂದ ನವನೀತ ಕಾರ್ಯರೂಪಕ್ಕೆ ಬರುವುದು—ಇದರಲ್ಲಿ ಮತ್ತೆ ವ್ಯತ್ಯಯ—ಲೋಪ ದೋಷಗಳಿಗೆ ಅವಕಾಶವೆಂಬುದಿಲ್ಲ. ದೇವಾಲಯವು ಅಂತರಂಗ-ಬಹಿರಂಗ ಪರಿಶುದ್ಧವಿರಬೇಕು; ಶುಭ್ರತೆ, ನಿರ್ಮಲತೆಗಳು ಅಲ್ಲಿ ನೆಲಸಿರಬೇಕು. ನಿತ್ಯಳಂಕನಾದ ಭಗವಂತನ ಸಾನ್ನಿಧ್ಯ ನಿಷ್ಕಳಂಕತೆಯಿರುವಲ್ಲೇ ಮೂಡುವುದು. ಕೆಲಬು ಹಿಡಿದ ಕನ್ನಡಿಯಲ್ಲಿ ಪ್ರತಿಬಿಂಬ ಕಾಣಿಸುವುದೆ? ಶ್ರೀಕ್ಷೇತ್ರದ ಮಹಾದ್ವಾರವನ್ನು ಪ್ರವೇಶಿಸುತ್ತಲೇ ನಾವು ಆಚ್ಚರಿಪಡುತ್ತೇವೆ. ಈ ಬೃಹತ್ ಕ್ಷೇತ್ರ ಎಷ್ಟು ಪರಿಶುದ್ಧವಿದೆ! ಇಷ್ಟರಿಂದಲೇ ಭಕ್ತನ ಹೃದಯದ ಕೊಳೆ ದೂರವಾಗುವುದು; ಆತನಿಗೆ ಭಗವದ್ ಸಾಕ್ಷಾತ್ಕಾರವಾಗಲು ಅರ್ಹನಾಗುವುದು - ಶ್ರೀ ರತ್ನವರ್ಮ ಹೆಗ್ಗಡೆಯವರ ಹೃದಯದ ಪರಿಚಯ ಇಲ್ಲಿ ಆಗುತ್ತದೆ. ರತ್ನಕ್ಕೆ ಕೆಲಬು ಹಿಡಿಯುವುದಿಲ್ಲ; ಶ್ರೀ ರತ್ನವರ್ಮ ಹೆಗ್ಗಡೆಯವರ ಹೃದಯವೂ ಕಲುಷವಿದೂರ; ಅಂತೆಯೇ ಅವರ ಆಡಳಿತೆಯ ಶ್ರೀಕ್ಷೇತ್ರ ಕೂಡ.

ಶ್ರೀ ಹೆಗ್ಗಡೆಯವರದು ಮಹಾಸಾಧನೆ. ಪರಂಪರಾ ಪ್ರಾಪ್ತವಾದ ಸೇವೆ, ಧರ್ಮ, ಪೂಜೆ, ಉತ್ಸವ ಇತ್ಯಾದಿ ಧಾರ್ಮಿಕ ಸಂಪ್ರದಾಯಗಳಿಗೆ ಹೊಸ ಪ್ರಾಣ ಪ್ರತಿಷ್ಠೆ ಮಾಡಿದರು ಇವರು. ವಸಂತ ಮಹಲಿನ ಕಟ್ಟಡವನ್ನು ಇವರು ಸುವರ್ಣ ಗೊಳಿಸಿದರು. ಮಂಜುನಾಥನಿಗೆ ರಜತ ರಥವನ್ನು ನಿರ್ಮಿಸಿ ಒಪ್ಪಿಸಿದರು; ಮಂಟಪ—ಗೋಪುರಗಳಿಗೆ ಬಣ್ಣದ ಇಟ್ಟಿಗೆ ಕಟ್ಟಿಸಿದರು; ಗಣಪತಿ ದೇವರ ಬಾಗಿಲಿಗೆ, ದೇವಾಲಯದ ಹೊರ ಗೋಪುರದ ಕಂಬಗಳಿಗೆ ಬೆಳ್ಳಿ ಹೊದಿಸಿದರು. ದೇವಾಲಯದ ಕೆರೆ, ಹೂದೋಟದ ಸುಶ್ರೂಷಕ್ಕಿನ ಆವರಣ ಕಟ್ಟಿಸಿದರು, ಲಲಿತೋದ್ಯಾನ, ಅಣ್ಣಪ್ಪನಬೆಟ್ಟ ನೆಲ್ಯಾಡಿಬೀಡು-ಇವು ಸರಳ ಸುಂದರವಾದುವು— ಇವರ ಕಾಲದವ್ಲ.

ಯಾತ್ರಾರ್ಥಿಗಳ ಹಿತಸಾಧನೆ ಶ್ರೀ ಹೆಗ್ಗಡೆಯವರ ಮಹಾಸಾಧನೆ. ಇಂದು ಅಧುನಿಕ ಮಾದರಿಯ ಚಿಕ್ಕ ಚಿಕ್ಕ ಕೋಣೆಗಳಂಥ ಕೂಡಿದ ಛತ್ರಗಳ ಸಾಲೇ ನಮ್ಮ ದೃಷ್ಟಿಗೆ ಗೋಚರಿಸುತ್ತದೆ. ಎಲ್ಲೆಲ್ಲೂ ವಿದ್ಯುದ್ದೀಪಗಳ ಸೌಕರ್ಯ— ಪ್ರತಿಷ್ಠಿತ ಹಾಗೂ ಅಧ್ಯ ಮಹನೀಯರಿಗಾಗಿ ಪ್ರತ್ಯೇಕ ಛತ್ರ—ಹೀಗೆ ಇಂದು ಯಾವ ಭಕ್ತನಾದರೂ ಧರ್ಮಸ್ಥಳದಲ್ಲಿ ಅನಸು

ಶ್ರೀ ರತ್ನವರ್ಮ ಹೆಗ್ಗಡೆಯವರ [illegible]
[illegible]

ಶ್ರೀ ಹೆಗ್ಗಡೆಯವರು ಮನ್ಯು ಅತಿಥಿ ಸ್ವೀಕರಿಸಿ ಬಿ.ವಿ. ಭಾಳಿಗೆ ಅಭಿನಂದನಾ ಸ್ವೀಕರಿಸುತ್ತಿದ್ದಾರೆ. ನಡುವೆ ಇರುವವರು ಸಭಾಧ್ಯಕ್ಷೆ ಶ್ರೀ ಏ.ಆರ್.ನಾಯ್ಡು, ಎಂ. ಎಲ್. ಏ.



ಯಾತ್ರಿಕರಿಗಾಗಿ ಹೊಸತಾಗಿ ನಿರ್ಮಿತವಾದ ಛತ್ರ

ಕೂಲವಾಯಿತು ಎಂದು ಹೇಳದಂತಹ ವ್ಯವಸ್ಥೆಯೊದಗಿದೆ. ಇದು ಶ್ರೀ ರತ್ನವರ್ಮ ಹೆಗ್ಗಡೆಯವರ ಸಾಧನೆಯ ಫಲ. ಶ್ರೀ ಕ್ಷೇತ್ರದ ದರ್ಶನಕ್ಕಾಗಿ ಬರುವ ಪ್ರತಿಯೊಬ್ಬನಿಗೂ ಇಂದು ಉಚಿತ ವಸತಿ, ಭೋಜನ ಮತ್ತು ಭಗವದ್ದರ್ಶನ ಲಾಭ ದೊರೆಯುವುದು. ದೇವಳದ ಭೋಜನಶಾಲೆಯಲ್ಲಿ ಊಟಮಾಡಲು ಇಷ್ಟಪಡದವರು ಹಿಂದಿನಂತೆಯೇ ಪಡಿಯಕ್ಕಿಯನ್ನೂ ಪಡೆಯಬಹುದು. ವಿದ್ಯಾರ್ಥಿ ಸಮುದಾಯಕ್ಕೂ ಉಚಿತ ಭೋಜನ ನಿಶ್ಚಲವ್ಯವಿದೆಯೆಂಬಲ್ಲಿ.

ಶ್ರೀ ಹೆಗ್ಗಡೆಯವರು ಧರ್ಮಭಿಮಾನಿಗಳು; ಕಲಾರಸಿಕರು; ಸಾಹಿತ್ಯಪ್ರೇಮಿಗಳು; ಹುಟ್ಟು ಕೃಷಿಕರು; ಇವರ ಹೃದಯ ಸರಸ; ಮನಸ್ಸು ಕೋಮಲ; ಕಾರ್ಯಸಾಧನೆ ಸಾಗರ. ಇದರಿಂದ ಅನೇಕ ಕಲೆ—ಸಾಹಿತ್ಯ ಸೇವಾ ಸಂಸ್ಥೆಗಳು ನಾನಾ ಪರಿಯಿಂದ ಸಹಾಯ ಪಡೆಯುತ್ತಿವೆ. ದೇವಾಲಯವು ಭಕ್ತ ಸಮುದಾಯದ ಆತ್ಮೋನ್ನತಿಯನ್ನು ಸಾಧಿಸಬೇಕು—ಆತ್ಮೋನ್ನತಿ ಸಾಧನೆಯ ವಿವಿಧ ದ್ವಾರಗಳನ್ನು ತೆರೆದಿಡುವುದು ದೇವಳದ ಕರ್ತವ್ಯ. ಇದಕ್ಕಾಗಿಯೇ ಶ್ರೀ ಹೆಗ್ಗಡೆಯವರು ಸದಾ ದುಡಿಯುವವರು. ಇವರ ದುಡಿಮೆ ದಿನವೆರಡು ರಾತ್ರಿ ನಾಲ್ಕೆಂಬಂತೆ ಮುಂದುವರಿಯುತ್ತಿದೆ.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಯು ಮತ್ತು ಉಜಿರೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಈ ವರ್ಷ ಆರಂಭವಾದ ಎರಡು ಶಿಕ್ಷಣ ಸಂಸ್ಥೆಗಳು. ಮಲೆನಾಡಿನ ವಾತಾವರಣವಿರುವ ಉಜಿರೆಯಲ್ಲಿ ಸಿದ್ಧವನದಲ್ಲೇ ಕಾಲೇಜು ಇದೆ. ನಗರದ ಕೃತಕ ಹಾಗೂ ವಿಷಮ ವಾತಾವರಣದಿಂದ ದೂರವಾಗಿ ಪ್ರಕೃತಿ ಮಾತೆಯ ಮಡಿಲಲ್ಲೇ ಉಳಿದು, ಬೆಳೆದು ಸರಸ್ವತಿ ದೇವಿಯ ಉಪಾಸನೆ ಮಾಡುವ ಈ ಕ್ಷೇತ್ರ ಆದರ್ಶಮಯವಾಗಿದೆ; ಈ ಶಿಕ್ಷಣ ಸಂಸ್ಥೆಗೆ ಉಜ್ವಲ ಭವಿಷ್ಯವಿದೆ. ಮಲೆನಾಡಿನಲ್ಲೂ ಕಾಲೇಜು ತೆರೆದು ಅದನ್ನು ನಡೆಸುವ ಎದೆಗಾರಿಕೆಯನ್ನು ತೋರಿದ ಶ್ರೀ ಹೆಗ್ಗಡೆಯವರು ಅಭಿನಂದನಾರ್ಹರೆಂದು ಬೇರೆ ಹೇಳಬೇಕೆ? (ಗೇಟ್‌ವೇ ಆಫ್ ಧರ್ಮಸ್ಥಳ) "ಧರ್ಮಸ್ಥಳದ ಹಬ್ಬಗಳು" ರಚನೆಯು ಕೆಲಸ ಕೆಲಸಮಯ ಮೊದಲೇ ಆರಂಭವಾಗಿದ್ದು ಇಂದಿದು ಪೂರ್ಣಗೊಂಡಿದೆ; ನಮ್ಮ ಸ್ವಾಗತಕ್ಕೆ ಸದಾ ಸಿದ್ಧವಾಗಿ ನಿಂತಿದೆ. ಶ್ರೀಕ್ಷೇತ್ರ ಪುನ್ನ ಪ್ರವೇಶಿಸುವಲ್ಲಿಯೇ ಬಲಭಾಗದಲ್ಲಿ ೧೩೦ ಕೋಣೆಗಳುಳ್ಳ ಹೊಸತೊಂದು ಭಕ್ತ ಇಲ್ಲೇ ಎಡಭಾಗದಲ್ಲಿ ಪೇಟೆ ಅಂಗಡಿಗಳಿಗನುಕೂಲವಾಗುವಂತೆ ಕಟ್ಟಿದ ಕಾಂಕ್ರೀಟ್ ಛಾವಣಿಯ ಈ ವರ್ಷದಲ್ಲಿ ನಿರ್ಮಿಸಿದ್ದು. ನೇತ್ರಾವತಿ ನದಿಯ ನೀರನ್ನು ಶ್ರೀ ಕ್ಷೇತ್ರಕ್ಕೆ ಪೂರೈಸುವ ಸರಬರಾಯಿ ಯೋಜನೆಯೂ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿದೆ—ಇನ್ನು ಕೆಲ ಸಮಯದಲ್ಲೇ ಇದೂ ಪೂರ್ಣ ಹೊಂದುವುದು.

ಶ್ರೀ ರತ್ನವರ್ಮ ಹೆಗ್ಗಡೆಯವರೊಬ್ಬ ಜನೆ ಬಾಡ್ಡದು, ದೇವನು ಬೊಡ್ಡವನು; ಆತನು ತನ್ನ ಎಲ್ಲ ಕೆಲಸವನ್ನೂ ದೊಡ್ಡ ರೂಪದಲ್ಲಿಯೇ ಮಾಡಿಸಿಕೊಳ್ಳುತ್ತಾನೆ ಎನ್ನುವುದರಲ್ಲಿ ಅಚಲ ವಿಶ್ವಾಸ ಶ್ರೇಯಸ್ಕರಿಗೆ. ಹಿರಿಯರು ನಡೆದ ದಾರಿಯನ್ನು ತಪ್ಪದೆ ಅವರು ಇಟ್ಟುಕೊಂಡಿದ್ದ ಆದರ್ಶಗಳನ್ನು ಒಂದೊಂದಾಗಿ ಸಾಧಿಸುವಲ್ಲಿ ನಿರತರಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಅಧಿಕಾರವೇರಿ ಬರಿಯ ೧೧ವರ್ಷಗಳು ಸಂದುವು. ಸಟ್ಟಿ ಭಿಷೇಕದ ೧೧ನೆಯ ವರ್ಧಂತಿ ತಾರೀಕು. ೧೩-೯-೬೬ ರಂದು ವೈಭವದಿಂದ ನೆರವೇರಿತು. ಅಂದುವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈರುಂರ ಬಾಳಿಗರು ಮುಖ್ಯ ಅತಿಥಿಗಳಾಗಿದ್ದು ಶ್ರೀ ಹೆಗ್ಗಡೆಯವರ ಕಾರ್ಯಶಕ್ತಿರತಿಯನ್ನೂ ಶ್ರೀಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನೂ ಕಣ್ಣಾರೆಕಂಡು ಆನಂದಿಸಿದರು.

ನಂಬಿದವರಿಗೆ ತನ್ನತೆತ್ತಿಹ ಮಂಜುನಾಥನ ನೆಲೆವೀಡು

(ಏಳನೇ ಪುಟದಿಂದ)

ತ್ತಾರೆ. ಕಳೆದ ಎಂಟು ನೂರುವರ್ಷಗಳ ಸುದೀರ್ಘಾವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ; ದೇಶದಲ್ಲಿ, ಪ್ರಪಂಚದಲ್ಲಿ ಅನೇಕ ಸಾಮ್ರಾಜ್ಯಗಳು ತಲೆಯೆತ್ತಿದುವು—ಅಂತೆಯೇ ನಿರ್ನಾಮವಾದುವು. ಪ್ರಪಂಚದಸ್ತಿಶ್ವನೇ ಬೇರೆಯೊಗಿದಯೇ ಎಂಬಷಂದೇಹವುಂಟಾಗುವುದು. ಆದರೆ, ಶ್ರೀಕ್ಷೇತ್ರದ ಮಹಿಮೆ—ಹೆಸರುಗಳು ಹಿಂದಿನಂತೆಯೇ ಇಂದಿಗೂ ಉಳಿದಿವೆ—ಅದು ಸೂರ್ಯಚಂದ್ರರಿರುವ ತನಕವೂ ಉಳಿಯುವುದು. ಎದ್ದುನಿಂತ ಬೆಟ್ಟದಂತೆಯೇ ಶ್ರೀ ಕ್ಷೇತ್ರವೂ ತಲೆಯೆತ್ತಿ ನಿಂತಿದೆ; ನಿಲ್ಲುತ್ತದೆ.

ತನ್ನತೆತ್ತಿಹ ಭಕ್ತಕುಟುಂಬಿ

ಶ್ರೀಕ್ಷೇತ್ರ ಧರ್ಮಸ್ಥಳದ ಹೆಸರು ಕೇಳದವರು ಯಾರೂ ಇಲ್ಲ. ನೋಡದವರೂ ವಿರಳ. ಒಮ್ಮೆ ಮಂಜುನಾಥನ ದರ್ಶನ ಮಾಡಿದವರು ಮತ್ತೆ ಮತ್ತೆ ಆತನಿಂದ ಆಕರ್ಷಿತರಾಗುತ್ತಾರೆ. ಇಲ್ಲಿಯೇ ಮಂಜುನಾಥನ ಶ್ರೇಷ್ಠತೆಯಿರುವುದು. ಕಳೆದ ಎಂಟು ನೂರು ವರ್ಷಗಳಿಂದ ಲೂ ತನ್ನನಂಬಿದವರಿಗೆ ತನ್ನ ತೆತ್ತಿಹನೆಂಬ ಬಿರುದನ್ನು ಮೆರೆದ ಭಕ್ತ ಕುಟುಂಬಿ ಶ್ರೀ ಮಂಜುನಾಥ ಸ್ವಾಮಿ ಮುಂದೆಯೂ ತನ್ನ ಭಕ್ತರನ್ನು ಸಲಹುತ್ತಿನೆ. ಭಗವಾನ್ ಮಂಜುನಾಥನ ಶ್ರೀ ನಿಲಯ ಧರ್ಮಸ್ಥಳ; ಭಕ್ತಜನ ಸಮುದಾಯದ ಆತ್ಮೋನ್ನತಿಸೌಭಾಗ್ಯದ ಪ್ರೇರಕ ಶಕ್ತಿ ಶ್ರೀನಿಲಯ ಧರ್ಮಸ್ಥಳ; ದುಃಖ ತಪ್ತರ ಆರ್ತನಾಶ ಎಂಬಿವ ಸುಖ ಶ್ರೀ ನಿಲಯ ಧರ್ಮಸ್ಥಳ; ಭವರೋಗ ವೈದ್ಯ ಮಂಜುಳ ಮಂಜುನಾಥನ ಆವಾಸ ಶ್ರೀ ನಿಲಯ ಧರ್ಮಸ್ಥಳ.

ಮಂಜುನಾಥನ ಮಂಜುಳ ಬಂಧು ಬಂಧನವೆಂದರೆ ಭವಭಯ ಬಂಧನಮುಕ್ತಿ. ಇದಕ್ಕಾಗಿ ಪಾತ್ರೋರೆಯುದವರು ಯಾರು? ತನ್ನ ಕೃಪಾಕಟಾಕ್ಷದಿಂದ ಉದ್ಧರಿಸಬಲ್ಲ ಶ್ರೀ ಮಂಜುನಾಥನ ಶರಣು ಹೋಗದವರು ಯಾರು?

ಸರ್ವಧರ್ಮ ಸಮ್ಮೇಳನ, ಧರ್ಮಸ್ಥಳ

ತಾ॥ ೧೦—೧೨—೧೯೬೬ನೆಯ ಶನಿವಾರದ ಕಾರ್ಯಕ್ರಮ

ಉದ್ಘಾಟಕರು:
ಸನ್ಮಾನ್ಯ ಶ್ರೀ ವಾನ್ ಡಿ. ದೇವರಾಜ ಅರಸರವರು

ಅಧ್ಯಕ್ಷರು:
ಪರಮಪೂಜ್ಯರೂ, ತಪೋಧನರೂ, ಸದ್ಗುರುಗಳೂ ಆದ ಎಡನೂರು ಶ್ರೀ ಮಠಾಧೀಶ್ವರಾದ ಶ್ರೀ ಶ್ರೀ ಶ್ರೀ ಕೇಶವಾನಂದಭಾರತಿ ಶ್ರೀಪಾದಂಗಳವರು.

ಮಧ್ಯಾಹ್ನ ೪ ಗಂಟೆಗೆ ಪ್ರಾರ್ಥನೆ: ಶ್ರೀ ಬಿ. ಎಸ್. ರಾಮಾಚಾರ್ ಅವರು

ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು

ಉದ್ಘಾಟನೆ: ಸನ್ಮಾನ್ಯ ಶ್ರೀವಾನ್ ಡಿ. ದೇವರಾಜ ಅರಸರವರು

ಅಧ್ಯಕ್ಷ ಭಾಷಣ: ಪರಮಪೂಜ್ಯ ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತಿ ಶ್ರೀ ಪಾದಂಗಳವರು

ಸಂಗೀತ: ಶ್ರೀಮತಿ ಶ್ಯಾಮಲಭಾವೆ ಮತ್ತು ಮಂಡಲಿಯವರಿಂದ

ಭಾಷಣಗಳು: (ಈ ಕೆಳಗೆ ಕಂಡ ಎರಡು ವಿಷಯಗಳಲ್ಲಿ ಯಾವುದಾದರೊಂದನ್ನು ಭಾಷಣಕಾರರು ಆರಿಸಿಕೊಳ್ಳಬಹುದು.)

೧. ರಾಷ್ಟ್ರದ ಏಕ್ಯತೆಗೆ ಧರ್ಮದ ಕಾಣಿಕೆ. ೨. ಔದ್ಯೋಗಿಕ ಪ್ರವೃತ್ತಿಯೇ ವಿಶ್ವಶಾಂತಿಯ ತಳಹದಿ.

ಸರ್ವಶ್ರೀ ೧. ವಿದ್ವಾನ್ ವಾಚಸ್ಪತಿ ವರ್ಧಮಾನ ಪಾರ್ಶ್ವನಾಥ ಶಾಸ್ತ್ರಿಗಳು, ೨. ಜ್ಞಾನಾಲಂಕಾರ ಭೀಮಸೇನಶಾಸ್ತ್ರಿ ರಘುನಾಥಾಚಾರ್ಯರು, ೩. ಪ್ರಿನ್ಸಿಪಾಲ್ ಕೆ. ಎಂ. ರೇವಣಸಿದ್ದಯ್ಯ, ಎಂ. ಎ., ಅವರು ೪. ಪ್ರೊ॥ ಕೆ. ಟಿ. ಪಾಂಡುರಂಗಿ, ಎಂ.ಎ., ಅವರು

ನೃತ್ಯ: ಕುಮಾರಿ ಜಯಶ್ರೀ, ಲಲಿತಕಲಾವಿಕೇತನ, ಉಡುಪಿ

೫. ಮೌಲ್ವಿ ಸೈಯದ್ ಕಾಸಿಮ್ ಅವರು ೬. ರೆವರೆಂಡ್ ಫಾದರ್ ಸಿರಿಯನ್ ಪೈ ಅವರು, ಅಧ್ಯಾತ್ಮ ಸಂಸ್ಕೃತಿ ಸಮಾಜ ಕೇಂದ್ರ, ಮಂಗಳೂರು. ೭. ಶ್ರೀ ಹೊಂಬುಜ ಕ್ಷೇತ್ರದ ಶ್ರೀ ಕುಂದಕುಂದ ವಿದ್ಯಾತೀರದ ಬ್ರಹ್ಮಚಾರಿಗಳು ೮. ವಿದ್ವಾನ್ ಸುಬ್ರಾಯ ಪುರಾಣಿಕರು. ೯. ಪಂಡಿತ ಡಿ. ಪದ್ಮನಾಭ ಶರ್ಮರವರು.

ವಂದನಾರ್ಪಣೆ: ಶ್ರೀ ಜೆ. ಸ್ವಾಮಿದಾಸ್ ಅದರು

ಸಾಹಿತ್ಯ ಸಮ್ಮೇಳನ, ಧರ್ಮಸ್ಥಳ

ತಾ॥ ೧೧—೧೨—೧೯೬೬ನೆಯ ಭಾನುವಾರದ ಕಾರ್ಯಕ್ರಮ

ಅಧ್ಯಕ್ಷರು:
ಪದ್ಮಶ್ರೀ ಪ್ರೊ॥ ವಿ. ಕೆ. ಗೋಕಾಕರವರು

ಮಧ್ಯಾಹ್ನ ೪ ಗಂಟೆಗೆ ಪ್ರಾರ್ಥನೆ: ಶ್ರೀ ಬಿ. ಎಸ್. ರಾಮಾಚಾರ್ ಅವರು

ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು

ಅಧ್ಯಕ್ಷ ಭಾಷಣ: ಪದ್ಮಶ್ರೀ ಪ್ರೊ॥ ವಿ. ಕೆ. ಗೋಕಾಕ್ ಅವರು

ಸಂಗೀತ: ಆಸ್ಥಾನ ವಿದ್ವಾನ್ ಚಿಂಗಲಪಲ್ಲಿ ರಾಮಚಂದ್ರರಾವ್ ಅವರು ಮತ್ತು ಮಂಡಲಿ

ಭಾಷಣಗಳು: (ಈ ಕೆಳಗೆ ಕಂಡ ಎರಡು ವಿಷಯಗಳಲ್ಲಿ ಯಾವುದಾದರೂ ಒಂದನ್ನು ಭಾಷಣಕಾರರು ಆರಿಸಿಕೊಳ್ಳಬಹುದು)

೧. ವಿದ್ಯಾರ್ಥಿಗಳ ಆತ್ಮವಿಕಾಸಕ್ಕೆ ಸಾಹಿತ್ಯದ ಕಾಣಿಕೆ ೨. ಮುಂದಿನ ಪೀಳಿಗೆಗೆ ಸಾಹಿತ್ಯ ಸೃಷ್ಟಿ.

ಸರ್ವಶ್ರೀ ೧. ಡಾ॥ ಆರ್. ಎಸ್. ಮುಗಳಿ, ಎಂ. ಎ., ಬಿ. ಟಿ. ಡಿ. ಲಿಟ್. ಅವರು ೨. ಪಿ. ಎಸ್. ಭಟ್, ಎಂ. ಎ., ಅವರು ೩. ಪ್ರೊ॥ ಹಂ.ಪ. ನಾಗರಾಜಯ್ಯ, ಎಂ. ಎ., ಅವರು ೪. ಪ್ರೊ॥ ಶ್ರೀನಿವಾಸರಾವ್ ಕೊಡ್ಕಣಿ, ಎಂ. ಎ., ಅವರು

ಕಾವ್ಯವಾಚನ: ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು

ಸಂಗೀತ: ಶ್ರೀಮತಿ ಎಂ. ಎನ್. ರತ್ನ ಮತ್ತು ಕುಮಾರಿ ಸುಶೀಲರವರು

೫. ಪ್ರೊ॥ ಕೆ. ಗುರುರಾಜ ಭಟ್ಟರು, ಎಂ. ಎ. ಪಿಎಚ್. ಡಿ., ಅವರು ೬. ಕುವಾರಿ ಎಸ್. ವಿಮಲ, ಎಂ. ಎ., ಅವರು ೭. ಎಂ. ಕೇಶವ ಭಟ್ಟರು, ಬಿ. ಎ., ಅವರು ೮. ವೈ. ವಿ. ಪಾರ್ಶ್ವನಾಥರವರು.

ವಂದನಾರ್ಪಣೆ: ಶ್ರೀ ಜೆ. ಸ್ವಾಮಿದಾಸ್‌ರವರು.

ಈ ಕೆಳಗೆ ಕಂಡಂತೆ ವಿಶಿಷ್ಟ ಕಾರ್ಯಕ್ರಮಗಳನ್ನು ವರ್ಷದಿಂದ ಏರ್ಪಡಿಸಲಾಗಿದೆ:—

ತಾ. ೯-೧೨-೧೯೬೬ನೆಯ ಶುಕ್ರವಾರ (ಮನೋರಂಜನ ಕಾರ್ಯಕ್ರಮ)

ಸಂಜೆ ೬-೩೦ ಗಂಟೆಗೆ: ಶ್ರೀಮತಿ ಎಂ. ಎನ್. ರತ್ನ ಮತ್ತು ಕುಮಾರಿ ಸುಶೀಲ ಅವರು ಮತ್ತು ಮಂಡಲಿಯವರಿಂದ ಸಂಗೀತ.

ರಾತ್ರಿ ೯-೩೦ ಗಂಟೆಗೆ: ಲಲಿತೋದ್ಯಾನದಲ್ಲಿ ಭಗವಾನ್ ಶ್ರೀಮಂಜುನಾಥ ಸ್ವಾಮಿಯ ಪೂಜೆ.

ರಾತ್ರಿ ೧೧ ಗಂಟೆಗೆ: ನಾಟಕಾಭಿನಯ.

ತಾ॥ ೧೨—೧೨—೧೯೬೬ನೆಯ ಸೋಮವಾರ

ರಾತ್ರಿ ೪-೩೦ ಗಂಟೆಗೆ: ಭಗವಾನ್ ಶ್ರೀ ಚಂದ್ರನಾಥ ಸ್ವಾಮಿಯವರ ಬೈತ್ಕಾಲಯದಲ್ಲಿ ಸಮಾಧಿಸರಣ ಪೂಜೆ

ರಾತ್ರಿ ೧೧ ಗಂಟೆಗೆ: ಯಕ್ಷಗಾನ ಬಯಲಾಟ— ಶ್ರೀಮಂಜುನಾಥೇಶ್ವರ ಯಕ್ಷಗಾನ ಮಂಡಲಿಯವರಿಂದ ಸೇವೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವ ಸರು ದಯವಿಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಮೊರಿಬಲೆ ಎಳೆದಾಗ (ಕಥಾ ಸಂಕಲನ)

ಬರೆದವರು: ಶ್ರೀ ಗೋಪಿನಾಥ ರಾವ್ ಸರ್ವದೆ.

ಪ್ರಕಾಶಕರು: ಕಿರಣ ಪ್ರಕಾಶನ, ವಿದ್ಯಾ ಕಿರಣ, ಉಡುಪಿ, ದ. ಕ.

ಪುಟಗಳು: ೧೧೪. ಬೆಲೆ: ರೂ. ೧.

ಸಪ್ತಕಥಾ ಸರೋಜಗಳೆಗೆ ಗುಚ್ಛ 'ಮೊರಿ ಬಲೆ ಎಳೆದಾಗ'ದಲ್ಲಿ ಜೀವನದ ಸಹಜಾನುರಕ್ತಿ ಅನುರಾಗ ಪ್ರೇಮವೇ—ಒಂದೆಲ್ಲ ಒಂದು ರೀತಿಯಲ್ಲಿ ಇಲ್ಲಿ ಚರ್ವಿತವಾಗಿರುವುದನ್ನು ನಾವು ಕಾಣಬಹುದು. 'ಪರಿವರ್ತನೆ' ಪ್ರಸಿದ್ಧ ಡಕಾಯತನೊಬ್ಬನ ಮನಃಪರಿವರ್ತನೆಯ ಆದರ್ಶವಾದವನ್ನು ಪ್ರತಿಪಾದಿಸಿದರೆ, "ಕಾಲು ಮುರಿದ ಹುಡುಗಿ ಮತ್ತು ಹೊಸಲಂಗ' ಸಾಹಿತ್ಯದ ದುರವಸ್ಥೆಯ ಒಂದು ರೂಪವನ್ನು ಮುಂದಿರಿಸುತ್ತದೆ; "ಪುನರ್ಮಿಲನ" ಒಂದು ಬಗೆಯಲ್ಲಿ ವಿಧವಾ ವಿವಾಹವನ್ನು ಸಮರ್ಥಿಸುವಂತಿದೆ—ವಿಧವೆ ವಿದುರರಿಬ್ಬರೂ ಮೊದಲೇ ಪ್ರಣಯಿಗಳಾಗಿದ್ದರು ಎಂಬುದು ಬೇರೆ ದೇಶಪ್ರೇಮ—ದೇಶದ ಕಡೆಗೆ ನಾಗರಿಕನಿರುವ ಕರ್ತವ್ಯ ಸಮರ್ಥಕ ಕಥೆ ಕರ್ತವ್ಯದ ಕರೆ". ಪ್ರಣಯಗಳಿಬ್ಬರೂ ಭಗ್ನ ಹೃದಯರಾಗಿ ತ್ರಿವೇಣಿ ಸಂಗಮದಲ್ಲಿ ನೆಗೆದರೂ ಮತ್ತೆ ಜೀವಂತರುಳಿದು ಸಂಗಮಗೊಂಡ ಸುಖಾಂತದ ಕಥೆ "ಸಂಗಮ" ವಾದರೆ, "ಮೊರಿಬಲೆಎಳೆದಾಗ" ಭಗ್ನ ಪ್ರಣಯಿಗಳ ಕಥೆ 'ಹಂ, ಇಂದು ದೀಪಾವಳಿ'—ಅಗಲದ ಪ್ರೇಮಿಗಳು ಮತ್ತೆ ಒಂದಾದ ಘಟನಾವಳಿ.

ಕಥಾವಸ್ತುವಿನಲ್ಲಿ ಯಾವುದೇ ಹೊಸತನವನ್ನು ಶ್ರೀ ಸರ್ವದೆಯವರು ಅಯ್ದುಕೊಂಡಿಲ್ಲ. 'ಪ್ರಣಯ' ವು ರಕ್ತಗತವಾಗಿರುವ ಜಗತ್ತಿನಲ್ಲಿ ಅದರಿಂದ ಭಿನ್ನವಾದ ಸಾಹಿತ್ಯ ಸೃಷ್ಟಿಯೂ ಅಸಾಧ್ಯವೋನೇನೋ! ಇಂದಿನ ಸಿನಿಮಾ ಪ್ರಪಂಚದ ಅಕಸ್ಮಿಕ— ಅವಿಶ್ವಸ್ಥ— ಘಟಿತ ಘಟನಾವಳಿಯೂ ಲೇಖಕರ ಮೇಲೆ ಪ್ರಭಾವ ಬೀರಿದಂತೆ ಭಾಸವಾಗುತ್ತದೆ. ಶೈಲಿ, ತಂತ್ರ ಪ್ರಯೋಗ, ಚರಿತ್ರ ಚಿತ್ರಣ, ಘಟನಾ ಪ್ರಧಾನತೆ —ಮೊದಲಾದುವುಗಳ ಮೂಸದಂಡದಿಂದ ಅಳೆಯುವಾಗ ಇಲ್ಲಿನ ಕಥೆಗಳು ನಿಲ್ಲುವುದು ಕಷ್ಟ. ಇದು ಲೇಖಕರ ಮೊದಲ ಕೃತಿ—ಈ ದೃಷ್ಟಿಯಿಂದ ನಾವು ವಿಮರ್ಶಿಸುವುದಾದರೆ, 'ಮೊರಿ ಬಲೆಯೆಳೆದಾಗ" ಒಂದು ಉತ್ತಮ ದುರಂತ ಕಥೆ. ಇಲ್ಲಿನ ಚರಿತ್ರ ಚಿತ್ರಣ ಮತ್ತು ಮುಖ್ಯ ಘಟನಾ ಪೋಷಣ ಸಮರ್ಥಕವಾಗಿ ಮೂಡಿದೆ. ತಂತ್ರ—ಶೈಲಿಗಳೂ ತೃಪ್ತಿಕರ.

ಶ್ರೀಸರ್ವದೆಯವರಿಂದ ಹೊಸ ನವುರಾಗಿದೆ. ಹೇಳಬೇಕಾದ್ದನ್ನು ಹೇಳಲು ಸಮರ್ಥವಾಗಿದೆ. ಜೀವನದ ಸುಖ ದುಃಖಗಳನ್ನು ಸರಿಯಾಗಿ ಉಂಡು, ಅಳವಟ್ಟಲ್ಲಿ ಉತ್ತಮ ಕಥೆಗಾರರಾಗುವ ಯೋಗ್ಯತೆಯುಳ್ಳವರು. ಜೀವನವನ್ನು ಏಕ ದೃಷ್ಟಿಯಿಂದ ಲೇ ನೋಡುವುದಕ್ಕಿಂತ ಬೇರೆ ಬೇರೆ ದೃಷ್ಟಿಯಿಂದ ನೋಡುವ ಶಕ್ತಿ ಮೂಡಬೇಕ —ಇದು ನವ್ಯ ಹೊಸ ಕಥೆಗಾರರಿಲ್ಲರಿಗೂ ಅನ್ವಯಿಸುವ ಮಾತು. ಶ್ರೀ ಸರ್ವದೆಯವರೂ ಇದಕ್ಕೆ ಅಪವಾದವೆನ್ನುವಂತಿಲ್ಲ. ಸಂತೋಷದ ಸಂಗತಿಯೆಂದರೆ, ಈ ಸಂಕಲನವನ್ನು ವೀಕ್ಷಿಸುವಾಗ ಶ್ರೀ ಸರ್ವದೆಯವರಲ್ಲಿ ಕನ್ನಡಿಗರು ಆಶಾಭಾವನೆಯಿಟ್ಟುಕೊಳ್ಳುತದು ಕಂಡಿತ.

ಬಂಗಾರದ — ಬಟ್ಟಲು

ಲೇಖಕರು: ಶ್ರೀ ಕೆ. ಸದಾನಂದ ರಾವ್. ಪ್ರಕಾಶಕರು: ಗೀತಾಪ್ರಕಾಶನ, ಕಾಸರಗೋಡು. ಪುಟಗಳು: ೬೯. ಬೆಲೆ: ೦—೫೦.

ಕನಕನ ಹಳ್ಳಿಯ ಲೋಭಿ ಬಸವಯ್ಯನ ಮಗ ಕನಕಯ್ಯನು ತಂದೆಯ ಕೃಪಣತನಕ್ಕೆ ನೊಂದು ಮನೆ ತೊರೆದು, ದೈವ ಸಹಾಯದಿಂದ ಬಂಗಾರದ ಬಟ್ಟಲ ದೊರೆಯಾದನು. ಬಸವಯ್ಯ ಸುಲಿಗೆ ಗೀಡಾಗಿ ಅಕಾಲದಿಂದಾಗಿ ಕನಕಯ್ಯನ ಆಶ್ರಯಕ್ಕೇನೇ ಬರಬೇಕಾಯಿತು. ತಂದೆ ಮಕ್ಕಳು ಮತ್ತೆ ಒಂದಾದರು—ಇದಿಷ್ಟಿನ ಕಥೆ.

ಮುಖ್ಯವಾಗಿ ಮಕ್ಕಳಿಗಾಗಿ ಬರೆದ ಸೀತಿ ಕಥೆಯಿದು. ಇಲ್ಲಿ ಬಸವಯ್ಯನ ಲೋಭಕ್ಕೆ, ಕನಕಯ್ಯನ ಉದಾರತೆಗೆ ಹೆಚ್ಚು ಬಲ ಬಿದ್ದಿದೆ. ತನ್ನ ತಂದೆಯನ್ನು ಮತ್ತೆ ಕಂಡ ಕನಕಯ್ಯನ ಮನದ ವೇದನೆ, ಆಂತರ್ದ್ವಂದ್ವ—ಮಾನವತೆ—ಇವು ಸ್ಪಷ್ಟವಾಗಿ ನಿರೂಪಿತವಾಗಿವೆ. ಮಕ್ಕಳ ಭಾಷಾಜ್ಞಾನವನ್ನು ಹೆಚ್ಚಿಸಲು ನೆರವಾಗುವ ಆಡುಂಬೊಲ, ಮಿತವಿಭ್ರಾಂತ, ಪಶ್ಚಾತ್ತಾಪದಗ್ಧ, ಬಿರುಬಿಸಿಲು ಮೊದಲಾದ ಒಳ್ಳೆಯ ಶಬ್ದಗಳ ಪ್ರಯೋಗವೂ ನಡೆದಿದೆ. ಶ್ರೀರಾಯರ ಭಾಷೆ- ಶೈಲಿಗಳು ಹೃದಯ ಸ್ಪರ್ಶಿಯಾಗಿವೆ. ವಸ್ತುವನ್ನು ಬೆಳೆಸಿಕೊಂಡು ಹೋದ ಕ್ರಮವೂ ಮೆಚ್ಚುಗೆಯಾಗುವಂತಿದೆ. —ಗೋರಾ.

ಕವಿತಾ ವಿತಾನ

ಎನ್ನ ಮನ ಕಲ್ಲಾಗಿ ಮಾಡು!

ಓ ದೇವ! ಕರುಣ ನಿಧೆ
ಬೇಡುವೆನು ನಾ ವಿಭೋ
ನೀಡೆನಗೆ ಕಲು ಮನವ
ಮೃದುತನವನಳಿಸು
ದಾರು ಕುಪ್ಪೆಯದಾಗಿ,
ನೋವು ಬೇನೆಗಳ ಸಂಸಿ;
ನಿತ್ಯ ಸಂತಸ ಪಡೆವ
ಕಲು ವತಿನವ ನೀಡು!
ಭಾವನೆಗೆ ಗರಿಕೆದರಿ
ಸೂಕ್ಷ್ಮಾತಿ ಸೂಕ್ಷ್ಮಗಳನರಿತು
ನಿತ್ಯ ಕೊರಗಿ ಕರಗುವ
ಮನವೆನಗೆ ನೀನೀಯು ಬೇಡ.
ಎರಡು ಮುಖವನು ಹೊತ್ತು
ಸರಿಯುತಿದೆ ಈ ಜಗವು;
ಒಳಗೊಂದು, ಹೊರಗೊಂದು
ಅದೆ ಇಂದು ಸತ್ಯ.
ಹರಿವ ನೀರಿಗೆ ಇದಿರಾಗಿ
ಈಜಿ ನಾಗಲು ಬಹುದೆ,
ಒಂದಾಗಿ ನೀರಿನಲಿ
ಹರಿದು ಹೋಗುವ ಮನವೆನಗೆ ದೇಕು
ಉಕ್ಕಾಗಲೀ ಮನವು,
ಕೊಕ್ಕೆ ಮೆರೆಯಲಿ ಒಮ್ಮೆ;
ಸಿಕ್ಕಾದ ಮೃದುತನವು
ಆಳದುಳಯಲಿ ಗಡುಸು
ನೋವ ಕಂಡು ನಲಿಯಲಿ!
ಮಾರ್ದವತೆಯು ಅಳಿಯಲಿ!!
ಅದನಿತ್ತು ಹರಸೆನ್ನ
ಎನ್ನ ಮನ ಕಲ್ಲಾಗಿ ಮಾಡು!!!

—ಸುಬ್ರಾಯ ಅನಂತಪುರ.

ಮುದನ ಶ್ಯಾಮ

ಪುಟ್ಟಾಣಿ 'ಉದಯರವಿ'
ಜೇನು ಹನಿಗಿಂತ ಸವಿ.
ನನ್ನ ಮೂವನ ಕುವರ! ನನ್ನ ಅಳಿಯ!
ನಮ್ಮೊಲುಮೆ ಬಾನಿನಲಿ
ಹುಟ್ಟಿರುವ ಹೊಸ ಬೆಳ್ಳಿ!
ಕೇರಿಗೇ ತಂದಿಹನು ದಿವ್ಯ ಕಳೆಯ!

ಮಲ್ಲಿಗೆಯ ಹೂ ರಂಬೆ
ಸಕ್ಕರೆಯ ಸವಿ ಬೊಂಬೆ
ಬಟ್ಟೆಯಿಳಿಸಿದ ಪ್ರೇಮ ಪಾಕನವನು!
ಹುಣ್ಣಿಮೆಯ ಬಾಂದಳದ
ತುಂಬು ಚಂದಿರನಂದ
ನಮ್ಮ ಬಾಳಿರುಳಿನಲಿ ನಗುತಿರುವನು!

ಕಂಡ ಕಡೆಗಳಿಗೆಲ್ಲ
ಕಗವ ಮುಗಿಯುವನಲ್ಲ!
ಆ ಮಗುವಿನೆದೆಯಲ್ಲಿ ಎನು ಶಕ್ತಿ?
ಹೂ ಬನದ ಹಾದಿಯಲಿ
ನನ್ನ ತೋಳಲಿ ತೂಗಿ
'ಹುಡುಗಿ ದೇವರು' ಎನುವುದವನ ಭಕ್ತಿ!!

ಅವನ ಭಾವನೆಯಲ್ಲಿ
ಕಸಪೊರಕೆಯೂ ದೈವ
"ಕಸಪೊರಕೆ ದೇವರನು ನೋಡು
ಮಾಮ!"
ಎನ್ನುವನು ನುದ್ದಿನಲಿ
ಪ್ರೇಮ ಸರಕದ್ದಿನಲಿ
ಮುಟ್ಟಾಟವಾಡುವನು ಮದನ
ಶ್ಯಾಮ!!

—"ತ್ರಿಮೊರ್ತಿ"

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

17ನೇ ಟಿಬಿ ಮುದ್ರೆ ಮಾರಾಟ ಚಳವಳಿ

(ಭಾರತ ಕ್ಷಯರೋಗ ನಿರೋಧಕ ಸಂಘ, ನವದೆಹಲಿ, ಇವರಿಂದ ಸಂಘಟಿತ)



ನೀವು ನಿಮ್ಮ ಮಿತ್ರರಿಗೂ ಸಂಬಂಧಿಕರಿಗೂ ಕಳುಹಿಸುವ ಪತ್ರಗಳ ಮೇಲೆ ಟಿಬಿ ಮುದ್ರೆಗಳನ್ನು ಅಂಟಿಸಿದರೆ, ಈಗಾಗಲೇ ಹಲವು ಕ್ಷಯರೋಗಿಗಳನ್ನು ರಕ್ಷಿಸಿದ ಕ್ಷಯರೋಗ ನಿರೋಧ ಕಾರ್ಯಕ್ಕೆ ನೀವೂ ಸಹಾಯ ಮಾಡಿದಿಂದೇ ಅರ್ಥ. ಇಷ್ಟೇ ಅಲ್ಲದೆ ಈ ವರ್ಷ ಇಲ್ಲವೆ ಮುಂದಿನ ವರ್ಷ ಕಂಡು ಬರುವ, ಪ್ರಾಯಶಃ ಅವರಲ್ಲೊಬ್ಬನು ನಿಮ್ಮ ಪರಿಚಿತನೂ ಇರಬಹುದು— ಹೊಸ ರೋಗಿಗಳ ರಕ್ಷಣೆಗೂ ನೀವು ಸಹಾಯ ಮಾಡಿದಂತಾಗುವುದೆಂದೂ ಅರ್ಥವಾಗುತ್ತದೆ.

ಒಂದು ಟಿಬಿ ಮುದ್ರೆಯ ಬೆಲೆ 10 ಪೈಸೆ ಮಾತ್ರ.

ಮುದ್ರೆಗಳು ಸಿಗುವ ಸ್ಥಳಗಳು:— 1. ಮೈಸೂರು ರಾಜ್ಯ ಟಿಬಿ ಎಸೋಸಿಯೇಶನ್, ಕುರುಬರ ಸಂಘ ಹೌಸ್ಬೆಲ್ ಬಿಲ್ಡಿಂಗ್, ಗಾಂಧಿ ನಗರ, ಬೆಂಗಳೂರು,
2. ದಕ್ಷಿಣ ಕನ್ನಡ ಜಿಲ್ಲಾ ಟಿಬಿ ಎಸೋಸಿಯೇಶನ್ ಮಂಗಳೂರು ಮತ್ತು ಅವುಗಳ ಬೇರೆ ಬೇರೆ ಏಜನ್ಸಿಗಳು.

ಈ ಸ್ಥಳದ ದಾತೃಗಳು

Seth Mafatlal Charity Trust, Bombay

ನವ್ಯ ಸಾಹಿತ್ಯ

(ಜನವರಿ ಸಂಚಿಕೆಯಿಂದ)

ಇತ್ತೀಚೆಗೆ ಮಾರುಕಟ್ಟೆಗೆ ಬರುತ್ತಿರುವ ಕಾದಂಬರಿಗಳ ಸಂಖ್ಯೆಯೂ ವಿಪುಲವಾಗಿದೆ. ಹಾಗೂ ಪ್ರಕಟವಾದ ಹತ್ತು ಕಾದಂಬರಿಗಳನ್ನು ಹಿಡಿದು ಪರಿಶೀಲಿಸಿದರೆ ಒಂದು ಅಥವಾ ಎರಡು ಮಾತ್ರ ಕಾದಂಬರಿತಂತ್ರ, ಕಥಾವಸ್ತು, ಶೈಲಿ ನಿರೂಪಣೆಯ ದೃಷ್ಟಿಯಿಂದ ಯೋಗ್ಯವೆಂದು ಹೇಳಬಹುದಷ್ಟೆ. ಉಳಿದುದೆಲ್ಲವೂ ಚರ್ವಿತಚರ್ವಣ ಅಥವಾ ಪ್ರಗತಿಯ ಹಾದಿಯಲ್ಲಿ ನಡೆದ ಅಶ್ಲೀಲ ಬರಹಗಳ ಮೂಲ ಪುಟಗಳನ್ನು ತುಂಬಲು ಬಳಸುವ ಏಕೈಕಮಾರ್ಗ ಕೀಳುಕಾಪುದ ವರ್ಣನೆಯೇ ಆಗಿದೆ ಎಂದು ತೋರುತ್ತದೆ. ಅಂತೂ ಮುದ್ರಿತವಾಗಿ, ಪ್ರಕಟನಾಲಯದ ಮೂಲಕ ಮಾರುಕಟ್ಟೆಯಲ್ಲಿ ಸಿದ್ಧವಾಗಿರುತ್ತವೆ.

ಜೀವನದ ಹತ್ತು ಮುಖಗಳ ಪರಿಚಯ ಓದುಗನಿಗೆ ಆಗಲು ಕಥೆ, ಕಾದಂಬರಿಗಳು ಮುಖ್ಯ ಸಾಧನಗಳು ಅಶ್ಲೀಲ ಕಥೆ ಕಾದಂಬರಿಗಳೇ ಜೀವನದ ಹತ್ತು ಮುಖಗಳು ಅಲ್ಲವಲ್ಲ. ತಾವು ಪ್ರಗತಿಶೀಲ ಸಾಹಿತಿಗಳು, ನವ್ಯ ಸಾಹಿತ್ಯ ಸೇವಾಪರರು, ಆಧುನಿಕ ಬರಹಗಾರರ ಶ್ರೇಣಿಯಲ್ಲಿರುವವರು ಎಂಬ ಭಾವನೆ ಇತ್ತೀಚಿನ ಬರಹಗಾರರಿಗೆ ಬಲವಾಗಿ ಬೇರೂರಿರುವಂತೆ ತೋರುತ್ತದೆ.

ನವ್ಯ ಕಥೆ, ನವ್ಯ ಕಾದಂಬರಿ, ಪ್ರಗತಿಶೀಲ ಸಾಹಿತ್ಯ, ಆಧುನಿಕ ಸಾಹಿತ್ಯ ಎಂಬ ಹೆಸರಿನ ಮರೆಯಲ್ಲಿ ಇಂದು ಗಣನೀಯವಾಗಿ ಅಶ್ಲೀಲ ಸಾಹಿತ್ಯ ಬೆಳೆಕಿಗೆ ಬರುತ್ತಲೇ ಇದೆ. ಕಲ್ಪನೆಗೂ ಮೀರಿದಂತಹ ಸಾಹಿತ್ಯ ಬರುತ್ತಿದೆ. ಈ ಬಗೆಯ ಸಾಹಿತ್ಯ ಓದುಗನ ಮೇಲೆ ಅದರಲ್ಲೂ ಕಿರಿಯ (ವಯಸ್ಸಿನಿಂದ) ಓದುಗರ ಮೇಲೆ ಆಗುವ ದುಷ್ಪರಿಣಾಮವನ್ನೂ ಲೇಖಕರು, ಪ್ರಕಾಶಕರು, ಮೂರಾಟಗಾರರು ಚಿಂತಿಸುವುದು ಅತ್ಯಗತ್ಯ. ಇಂದು ಬೆಳೆಯುತ್ತಿರುವ ಅಶ್ಲೀಲ ಸಾಹಿತ್ಯ ಒಂದು ಜನಾಂಗದ ನೈತಿಕ ಮಟ್ಟವನ್ನೂ ಆಧೋಗತಿಗೆ ತರುತ್ತಿದೆ ಎಂದು ಧಾರಾಳವಾಗಿ ಹೇಳಬಹುದಾಗಿದೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕಥೆ ಕಾದಂಬರಿಗಳ ಕಲ್ಪನೆ, ಚಿಂತನೆ, ಪರಿಚಯ ಸಾಮಾನ್ಯವಾಗಿ ಇರುವುದಿಲ್ಲ. ಅವರ ಮತಿ ಕೇವಲ ನಂದನವನ, ಬಾಲಜಗತ್, ಮಕ್ಕಳ ಮಂಟಪ ಅಜ್ಜಿಯ ವರೆಗೆ ಮಾತ್ರ ಮೀನಲಂಗಿರುತ್ತದೆ. ಆದರೆ ಪ್ರೌಢ ಶಾಲೆಯ ಅಂತರವನ್ನು ದಾಟಿದ ತರುಣಾಯ ಜೀವನದ ನಾನಾ ಮುಖಗಳನ್ನು ಕಾಣುವ, ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸುವ ಸ್ವಭಾವ ವಿದ್ಯಾರ್ಥಿಗಳಲ್ಲಿ ಬೆಳೆಯುವುದು ಸಹಜ. ವಿಜ್ಞಾನ ಯುಗದಲ್ಲಿ ಚಲನ ಚಿತ್ರಗಳೂ ವಿಶೇಷ ಪರಿಣಾಮಕಾರಿ, ಪ್ರೋತ್ಸಾಹನೀಡುತ್ತವೆ. ಕಥೆಗಳೆಂದಲೂ ಕಾದಂಬರಿಗಳೂ ವಿದ್ಯಾರ್ಥಿಗಳಿಗೆ ವಿಶೇಷವಾಗಿ ನಿಕಟವರ್ತಿಗಳಾಗುತ್ತವೆ. ಅತ್ಯಾಸಂಯಮ ಎಲ್ಲರಿಗೂ ಅಸಾಧ್ಯ. ಪಬ್ರದ ಕೋಟೆಯನ್ನು ಪುಡಿ ಪುಡಿ ಮಾಡಬಹುದು ಆದರೆ ಮನಸ್ಸನ್ನು ಅಂಕೆಯಲ್ಲಿ ಇಟ್ಟುಕೊಳ್ಳುವುದು ಸಾಧ್ಯವೆ. ಅಶ್ಲೀಲ ಕಾದಂಬರಿಗಳು ಓದುಗನ ಮನಸ್ಸಿನ ಮೇಲೆ ವಿಚಿತ್ರ ದುಷ್ಪರಿಣಾಮ ಬೀರುವ ಪ್ರಸಂಗಗಳೇ ಹೆಚ್ಚು.

ಮರೆಯಲ್ಲಿ ಕಾವ್ಯ ಪ್ರಯೋಜನಾತ್ಮಕ ಕಾದಂಬರಿಗಳನ್ನು ಓದುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣವಾಗಿದೆ ಎಂದು ಇತ್ತೀಚೆಗೆ ಸ್ಪಷ್ಟವಾಗಿ ತಿಳಿದುಬರುತ್ತಿದೆ. ಪ್ರಗತಿಶೀಲ ಸಾಹಿತ್ಯ ಯಾವುದು ಎಂಬುದನ್ನು ಸ್ವಲ್ಪಮಟ್ಟಿಗೆ ವಿವೇಚಿಸುವುದು ಒಳಿತು. ಸಮಾಜದ ಉನ್ನತಿಗೆ, ಸಮಾಜದ ಜನತೆ ನೈತಿಕ ಜೀವನದ ಪುನರುದ್ಧಾರಕ್ಕೆ ಜೀವನದ ಹತ್ತು ಸಮಸ್ಯೆಗಳನ್ನು ಸರಳವಾಗಿ ಯಾವ ಬಗೆಯು ಕೊಳಕೆಯೂ ಇಲ್ಲದಂತೆ ವಿಸ್ತರಿಸಿ ವಿವರಿಸಿ ಬಿಡ್ಡಂತಹ ಸಾಹಿತ್ಯ ಉತ್ತಮ ಸಾಹಿತ್ಯವಾಗಬಹುದು. ಜನಪ್ರಿಯ ಸಾಹಿತ್ಯವಾಗಬಹುದು. ಪ್ರಗತಿಶೀಲ ಸಾಹಿತ್ಯವಾಗಬಹುದು. ಸಾಹಿತ್ಯ ದಲ್ಲಿ, ಜೀವನದಲ್ಲಿ, ಸಮಾಜದಲ್ಲಿ ಪ್ರಗತಿಯೂಗುವುದು ಬೇಡವೆ? ಗುಂಪುಗುಳಿಕನ ಪಕ್ಷಪಾಂಗಡಗಳ ಬಡಿದಾಟ, ಜಾತಿ ಮತಗಳ ವೈಷಮ್ಯ, ಐಶ್ವರ್ಯ, ಆಂತಸ್ತು, ಅಧಿಕಾರಿಗಳ ಅಹಂಕಾರ, ದಯದಾಕ್ಷಿಣ್ಯರಹಿತ ವರ್ತನೆ ಶತ್ರು, ಧರ್ಮ ನೀತಿ ನಿಯಮಗಳ ಉಚ್ಚಾಟನೆನಡೆದ ವ್ಯಕ್ತಿಯ ಜೀವನ ಒಂದು ಗುರಿಯನ್ನೂ, ಉದ್ದೇಶವನ್ನೂ ಅರಿಯದೆ ಅಸ್ತವ್ಯಸ್ತವಾಗಿದೆ. ಸಮಾಜದ ಜನ ಜೀವನದಲ್ಲಿ ನೈತಿಕಮಟ್ಟ ಅಧೋಗತಿಯ ಎಲ್ಲೆಯನ್ನೂ ದಾಟಿದೆ ಸುಸಂಸ್ಕೃತರು, ನವನಾಗರಿಕರು, ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಜನತೆ ನಮ್ಮ ಜೀವನ, ಸಂಸ್ಕೃತಿ, ನಾಗರಿಕತೆ, ವ್ಯವಹಾರ ಯಾವ ಮಟ್ಟದಲ್ಲಿದೆ ಎಂಬುದನ್ನು ಒಂದು ಬಾರಿ ವಿವೇಚಿಸಿದರೆ ಅನುಕೂಲವಾದೀತು.

ಸಾಹಿತ್ಯ ಕನ್ನಡಿ ಇದ್ದಂತೆ, ಮುಖವಿನ್ನು ತೋರಿಸುತ್ತದೆ. ನಮ್ಮ ಪ್ರತಿಬಿಂಬ ನಮಗೆ ಕಾಣುತ್ತದೆ. ನಮ್ಮ ಮುಖ ಹೊಲಸಾಗಿದ್ದರೆ ಅದು ನಮ್ಮ ಮುಖ ತೋರಿಸಿದ ಕನ್ನಡಿಯಷ್ಟೆ? ಹೊಲಸನ್ನು ತೊಳೆದುಕೊಳ್ಳಲು ಸಲಹೆಗಳನ್ನೆ, ನೀರಿದೆ, ಸೋಪಿದೆ ಒರೆಸಿಕೊಳ್ಳಲು ಶುಭ್ರವಾದ ವಸ್ತ್ರವಿದೆ. ಅವುಗಳನ್ನು ಬಳಸಿಕೊಳ್ಳುವುದು ಬೇಡವೆ? ವ್ಯಕ್ತಿಯ ಹೃದಯ ಅದರಲ್ಲಿಯೂ ವಿದ್ಯಾರ್ಥಿಯ ಹೃದಯ (ಸಾಮಾನ್ಯವಾಗಿ ಎಲ್ಲರ ಹೃದಯವೂ ಅಷ್ಟೇ) ಪ್ಲಾಸ್ಟರ್ ಆಫ್ ಪ್ಯಾರಿಸ್ ಇದ್ದಂತೆ. ಅದರಿಂದ ಪಿಶಾಚಿಯನ್ನೂ ಮಾಡಬಹುದು ಪರಮೇಶ್ವರನನ್ನೂ ಮಾಡಬಹುದು. ಬುದ್ಧ, ಗಾಂಧಿ, ವಿವೇಕಾನಂದರನ್ನೂ ಸೃಷ್ಟಿಸಬಹುದು ಹಿಟ್ಲರ್, ರಾವಣ, ಕೀಚಕ ಇವರನ್ನು ರೂಪಿಸಬಹುದು. ದೈವೀ ಶಕ್ತಿಗೆ ಎಂದಿದ್ದರಂತೂ ಏನಾಶಕ್ಯವಿದ್ದಲ್ಲ. ದೈವಶಕ್ತಿ ನಿಸ್ಸಾಯಕವಾದುದು ನಿಧಾನ. ಆದರೆ ಅದು ಉಳಿಯುವುದು ಶಾಶ್ವತ—ನಿಶ್ಚಯ.

ರಾಜಕಾರಣಿ, ವೈದ್ಯ, ಉಪಾಧ್ಯಾಯ, ನ್ಯಾಯಪಂಡಿತ, ಇಂಜಿನಿಯರ್ ಮೊದಲಾದವರಂತೆ ಸಾಹಿತಿಯೂ ರಾಷ್ಟ್ರದ ಆಧಾರಸ್ತಂಭ. ರಾಷ್ಟ್ರ ನಿರ್ಮಾಪಕರಲ್ಲಿ ಒಬ್ಬ. ಅವನ ಸೇವೆಯನ್ನು ಸಮಕಾಲೀನ ಜನತೆಯಷ್ಟೆ ಅಲ್ಲ. ಮುಂದಿನ ಪೀಳಿಗೆಗಳು ಸ್ಮರಿಸುತ್ತವೆ. ವಾಲ್ಮೀಕಿ, ವ್ಯಾಸ, ಹೋಮರ್, ಕಾಳಿದಾಸ, ಫೇಕ್ಸಪಿಯರ್ ಗಾರ್ಕಿ, ಝುಕೊವ್, ನಾರಣಪ್ಪ, ಮುದ್ದಣ್ಣ ಯಾರೂ ಇಂದು ಇಲ್ಲ. ಆದರೆ ಇವರ ಹೆಸರುಗಳು ಕೃತಿಗಳು ಶಾಶ್ವತವಾಗಿ ಉಳಿದಿಲ್ಲವೇನೇ.

ಸಾಹಿತ್ಯ ವ್ಯಕ್ತಿಯ ಬಾಳಹಾದಿಯಲ್ಲಿ ಬೆಳಕು ತೋರುವ ಕೈದೀವಿಗೆ ಮಾರ್ಗದರ್ಶನ ನೀಡುವ ಜೊತೆಗಾರ, ಪ್ರಿಯ ಬಂಧು. ಇಂದು ಬೆಳೆಯುತ್ತಿರುವ ಕಥೆ, ಕಾದಂಬರಿಗಳು ಕತ್ತಲೆಯಿಂದ ಬೆಳಕಿಗೆ ಕರೆ ತರುವ ಬದಲಾಗಿ, ಬೆಳಕಿನಿಂದ ಕತ್ತಲೆಗೆ ಕರೆದೊಯ್ಯಲು ಸಾಮರ್ಥ್ಯ ಪಡೆದಿವೆ—ಸಿದ್ಧವಾಗಿವೆ. ಉತ್ತಮ ಸಾಹಿತ್ಯದ ಬೆಳೆವಣಿಗೆ, ಪ್ರಕಟಣೆಗಾಗಿ ಸಮಾಜದ ಹಿತಚಿಂತಕರು, ಪೋಷಕರು, ಸಾಹಿತ್ಯ ಸೇವಕರು, ಸುಧಾರಕರು ಹೋರಾಟ ನಡೆಸಲೂ ಸಿದ್ಧವಾಗಬೇಕು. ಅಶ್ಲೀಲ ಸಾಹಿತ್ಯದ ಹಾವಳಿಯನ್ನು ತಡೆಗಟ್ಟಲು ಸೂಕ್ತ ಕ್ರಮಕೈಗೊಂಡು ಬಹಿಷ್ಕರಿಸಿದ್ದರೆ. ಇಂದು ಬೆಳೆಯುತ್ತಿರುವ ಬೆಂಕಿ ಮೂನನೀಯತೆ ತೀಲ, ಸಂಸ್ಕೃತಿಗನ್ನು ಭಸ್ಮನೂಡಲು ಸಾಧ್ಯ. ಬೆಂಕಿ ಭೀಕರ ಜ್ವಾಲೆಗಳಾಗುವ ಮುಂಚೆ ಆರಿಸಲು ಪ್ರಯತ್ನಿಸದಿದ್ದರೆ ಸರ್ವನಾಶವಾದೀತು. ಇದು ಕಣ್ಣು ಮುಚ್ಚಿಕುಳಿತು ನಾಳೆ ಏನಾಗುತ್ತೊ ಪಡುವುದು ಬೇಡ.

— —

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. 28/66.

1. ಮಿಸೆಸ್ ಗ್ರೇಸಿ ಫೆರ್ನಾಂಡಿಸ್ 2. ಮಗ್ದಲಿನ್ ಮಚ್ಚಾದೋ —ಅರ್ಜಿದಾರರು

ಮತ್ತು

1. ಮೇರಿ ಜೋಜೋ 2. ಲಿಲ್ಲಿ ಡಿಸೋಜ 3. ಮಟಿಲ್ಡಾ ನಜರೇತ್ —ಎದ್ರಿರು

ಯವರೊಳಗೆ

ನೋಟೀಸ್

1ನೆ ಅರ್ಜಿದಾರಳ ಅತ್ತೆ 2ನೆ ಅರ್ಜಿದಾರಳ ಅಜ್ಜಿ ಮಿಸೆಸ್ ರೆಜಿನಾ ಫೆರ್ನಾಂಡಿಸ್ ಬ್ಯಾಯು ತಾ. 8—5—1964ರಲ್ಲಿ ಉಡುಪಿತಾಲ್ಲೂ ಶಿವಳ್ಳಿ ಗ್ರಾಮದ ಮಳ್ಳಂಪಳ್ಳಿಯಲ್ಲಿ ವೃತಪಟ್ಟಿರುವುದರಿಂದ ಅವರ ಅಂತಕ್ಕೆ ತಕ್ಕ ಉಡುಪಿ ಸಿಂಡಿಕೇಟ್ ಬ್ಯಾಂಕಿನ ಕೆಥೋಲಿಕ್ ಬ್ರಾಂಚಿನಲ್ಲಿರುವ ರೂಪಾಯಿ 3642—60 ಪೈಕಿ 1ನೇ 1ಅಂಶಕ್ಕೆ ಅಂದ್ರೆ 660—66 ನ್ನು ನಗೂಲು ಪಡಿಯುವರೆ ಅರ್ಜಿದಾರರ ಪರವಾಗಿ 2ನೇ ಅರ್ಜಿದಾರಳಿಗೆ ಲೆಟ್ಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ ಕೊಡಬೇಕಾಗಿ ಅರ್ಜಿದಾರರು ಅರ್ಜಿ ಕೊಟ್ಟಿರುವದರಿಂದ ಆ ಬಾಬ್ತು ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ ಸಾಕಷ್ಟು ಯುಕ್ತ ಮೇಲ್ಕಂಡ ಕೋರ್ಟಿನಲ್ಲಿ ತಾ. 3—1—67ನೆ ದಿನ ಬೆಳಿಗ್ಗೆ 11 ಗಂಟೆಗೆ ಸ್ವತಹ ವ ವಕೀಲರ ಮೂಲಕ ಹಾಜರಾಗಿ ಜಾಹೀರುಮಾಡಿಕೊಳ್ಳಬೇಕು. ಯಿಲ್ಲವಾದ್ರೆ ಏಕ ಪಕ್ಷವಾಗಿ ಅರ್ಜಿ ಅಂಗೀಕಾರ ಮಾಡಲ್ಪಡುವದು.

(ಕೋರ್ಟ ಹ್ಯುಂ ಪ್ರಕಾರ)

B. Yogishwara Holla

Advocate for Petitioners.

Udipi, 26—11—66.

ಸುಸ್ಥಾಪಿತ ಮತ್ತು ಉತ್ತಮವಾದ ಎಲ್ಲಾ ಕರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶಿ

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 27/1966

1. ಮಿಸೆಸ್ ಗ್ರೇಸಿ ಫೆರ್ನಾಂಡಿಸ್ 2. ಮಗ್ದಲಿನಾ ಮಚ್ಚಾದೋ —ಅರ್ಜಿದಾರರು

ಮತ್ತು

1. ಮೇರಿ ಜೋಜೋ 2. ಮಟಿಲ್ಡಾ ರೇತ್ 3. ಲಿಲ್ಲಿ ಡಿಸೋಜ —ಎದ್ರಿ

ನೋಟೀಸ್

1ನೆ ಅರ್ಜಿದಾರಳ ಗಂಡನ 2ನೆ ಅರ್ಜಿದಾರಳ ತಂದೆ ವಾಸುದೇವ ಫೆರ್ನಾಂಡಿಸರು ತಾ. 2.2.1964ರಲ್ಲಿ ಉಡುಪಿತಾಲ್ಲೂ ಶಿವಳ್ಳಿ ಗ್ರಾಮದ ಮಳ್ಳಂಪಳ್ಳಿಯಲ್ಲಿ ವೃತನಾದುದರಿಂದ ಅವರ ಬಾಬ್ತು ಉಡುಪಿ ಸಿಂಡಿಕೇಟ್ ಬ್ಯಾಂಕಿನ ಕೆಥೋಲಿಕ್ ಬ್ರಾಂಚಿನಲ್ಲಿರುವ ವೃವಹಾರ ಪೈಕಿ ರೂಪಾಯಿ 4642—60 ರ ಮಟ್ಟಿಗೆ ವಿಮೂಲು ಪಡಿಯುವರೆ 2ನೆಯವಳ ಲೆಟರ್ಸನಲ್ಲಿ ನಿಕ್ಷೇಪರ್ಸ್ ಸರ್ಟಿಫಿಕೇಟು ಕೊಡ ಬೇಕಾಗಿ ಅರ್ಜಿದಾರರು ಅರ್ಜಿ ಕೊಟ್ಟಿರುವದರಿಂದ ಆ ಬಾಬ್ತು ಯಾರಿಂದಾದೂ ಆಕ್ಷೇಪಣೆ ಸಾಮರರು ಯಿದ್ರೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಖು 3—1—67ನೆ ದಿವ್ಸ ಬೆಳಿಗ್ಗೆ 11 ಗಂಟೆಗೆ ಸ್ವತಹ ವ ವಕೀಲರ ಮೂಲಕ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು. ಇಲ್ಲವಾದ್ರೆ ಏಕ ಪಕ್ಷವಾಗಿ ಅರ್ಜಿ ಅಂಗೀಕಾರ ಮಾಡಲ್ಪಡುವದು.

ಕೋರ್ಟ ಹ್ಯುಂ ಪ್ರಕಾರ

B. Yogishwara Holla

Advocate for Petitioners

Udipi, 26—11—66.



ಪ್ರಖರ ದೇಶಭಕ್ತಿಯ ಅಭಾವ

(೧೩ನೇ ಪುಟದಿಂದ)

ಇಲ್ಲಿ ನಾವು ಜಗತ್ತಿನಲ್ಲೆಲ್ಲೂ ಚದರಿ ಹೋಗಲು ಪ್ರಯತ್ನಿಸುತ್ತಿದ್ದೇವೆ. ನಮ್ಮ ಪೈಬಣ್ಣವೊಂದು ತಡೆಯೂಗದಿರುತ್ತಿದ್ದಲ್ಲಿ ಅಷ್ಟುಮಾತ್ರವಲ್ಲ ನಮ್ಮ ತಂದೆತಾಯಿಯವರು ಆ ಒಂದು ಕೆಟ್ಟಕೆಲಸವನ್ನು ಮಾಡದಿರುತ್ತಿದ್ದಲ್ಲಿ ನಾವಿಲ್ಲಿ ಇರುತ್ತಿರಲಿಲ್ಲ. ಅದೇನೊ ದೈವದೋಷದಿಂದ ಇಲ್ಲಿ ಹುಟ್ಟಿಬಿಟ್ಟಿದ್ದೇನೆಂದು ಹೇಳಿರುವವರಿಗೂ ನಾವಿಂದೂ ಜೈ ಹಾಕುತ್ತಿಲ್ಲವೇನು? ನಾವಾದರೋ ಒಯಸಿಸ್ ಮಾತ್ರವಲ್ಲ ಅಮರ ಪ್ರವಾಹವನ್ನೇ ಸೃಷ್ಟಿಸಿರಿ ಮೃಗಮರೀಚಿಕೆಯ ಹಿಂದುಗಡೆ ಸ್ವ— ಸಂತೋಷದಿಂದ ಓಡುತ್ತಿದ್ದೇವೆ! ಇನು ಅಧಃಪತನದ ಕೂಪನೆ ಇಲ್ಲದೆ ಇನ್ನೇನು? ದೇಶಭಕ್ತಿ ನಾಶಕೊರತೆಯನ್ನು ಹೋಗಲಾಡಿಸಲು ಆವೇಶಕದಿಂದಲೋ, ರಷ್ಯಾದಿಂದಲೋ, ಚೀನಾದಿಂದಲೋ ಸಹಾಯದ ಕೈ ಬಂದೀತೆಂದು ಎದರ ನೋಡುತ್ತ ನಾವು ದಿನಕಳೆಯುತ್ತಿದ್ದೇವೆ.

ಹೀಗೆ ಇಂದು ನಮಗೆ ಈ ಭಾರತ ಭೂಮಿಯ ಮೇಲೆ ಒಂದಿನಿತೂ ಭಕ್ತಿ ಇರುವದಿಲ್ಲ. ಹಾಗಾಗಿ ಸ್ವಾರ್ಥಕ್ಕಾಗಿ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಈ ಭಯಂಕರ ಹಾಗೂ ಘೋರ ರೂಪವನ್ನು ಬದಲಾಯಿಸಬೇಕಾದಲ್ಲಿ ಸರಕಾರವೂ ಜನತೆಯೂ ಮುಂದೆ ಬರಬೇಕು, ಒಂದಾಗಬೇಕು. ಜನತೆಯ ಮನಸ್ಸಿನಲ್ಲಿ ಉತ್ಕಟ ದೇಶಭಕ್ತಿಯ ಭುಗ್ಗೆ ಭುಗಿಲೆಳುವಂತೆ ಸರಕಾರ ಪ್ರಯತ್ನಿಸಬೇಕು. ಅವರು ವಿಶ್ವ ದೇಶಭಕ್ತಿಯ ವಿಷಗಾಳಿಯನ್ನು ಹರಡುವ ಬದಲು ನೈಜ ದೇಶಭಕ್ತಿಯ ಸುಗಂಧಯುಕ್ತ ಪಾವನ ಪವನವನ್ನು ಹಬ್ಬಿಸಬೇಕು. ಆಗ ಇಲ್ಲಿಯ ಜನತೆಯು —ಈ ವಿಶ್ವದಲ್ಲಿ ಅತಿ ಪುನಿತ ಪುಣ್ಯಭೂಮಿ ಎನಿಸಬಲ್ಲ, ಜಗದೆಲ್ಲ ಜೀವಿಗಳು ಕರ್ಮ ನೆವೆಸಲು ಬಂಲೇಬೇಕಾದ ಒಂದೇ ಭೂಮಿ ಎಂದರೆ, ಅದು ಭಾರತ, ದೇವರೆಡೆಗೆ ಸಾಗುತ್ತಿರುವ ಪ್ರತಿಯೊಂದು ಜೀವವೂ ತನ್ನ ಅಂತಿಮ ನೆಲೆ ಕಂಡುಕೊಳ್ಳಲು ಬಂಬೇಕಾದ ಕರ್ಮಭೂಮಿಯೇ ಇದು. ಸುಜನತೆ ಉದಾರತೆಗಳಲ್ಲಿ, ಶಾಂತಿ ಶುಚಿತೆಗಳಲ್ಲಿ ಮಾನವತೆಯು ತುಟ್ಟತುದಿ ಮುಟ್ಟಿರುವ ನಾಡು ಇದೇ. ಮತ್ತು ಎಲ್ಲಕ್ಕಿಂತ ಎಂಗಿಲಾಗಿ ಅಂತರ್ಮುಖತೆ ಹಾಗೂ ಅಧ್ಯಾತ್ಮಿಕತೆಗಳಿಗೆ ತವರೂರು ಭಾರತ....

ಜ್ಞಾನವು ಇತರ ದೇಶಗಳಿಗೆ ಹರಡಿವ ವೆನ್ನು ಅದು ತನ್ನ ತಾರುಮಾಡಿಕೊಂಡಿದ್ದ ಪ್ರಾಚೀನ ಭೂಮಿಯೇ ಇದು, ಈ ಭಾರತ ಹಿಮುಕೀರೀಟ ಧರಿಸಿದ ನಾಲು ನಾಲು ಶಿಖರಂಗಳು ತೆರಿತೆರೆಯಾಗಿ ನೋಲೆದ್ದು ಸ್ವರ್ಗದ ರಹಸ್ಯಗಳನ್ನೇ ಹಣಿಕಿ ನೋಡುತ್ತಿರುವಂತೆ ತೋರುವ ಶಾಶ್ವತ ಹಿಮಪಾಲಯಗಳಿವೆ ಮತ್ತು ಆಧ್ಯಾತ್ಮ ಸ್ವರ್ಣತೆಯ ಮಾರ್ತರೂಪವಾಗಿ ಭೋರ್ಗರೆವ ಸಾಗರದಂತಹ ಮಹಾನದಿಗಳ ನಾಡೇ ಇದು. ಈ ಲೋಕದಲ್ಲೇ ಅಗ್ರರೆನಿಸಿದಂಥ ಋಷಿ ಮಹರ್ಷಿಗಳ ಪಾದಸ್ಪರ್ಶದಿಂದ ಪುನೀತವಾದ ಭೂಮಿ ಇದು— ಭಾರತ. ಮಾನವನ ಪ್ರಕೃತಿಯ ಬಗೆಗೆ ಹಾಗೂ ಅಂತರಿಕ ಜಗತ್ತಿನ ಕುರಿತಾಗಿ ಶೋಧನೆಗಳು ಮೊದಲು ಆರಂಭವಾದುದಿಲ್ಲ. ಆತ್ಮದ ಅಮರತೆಯ ಕಲ್ಪನೆ ಮೊದಲು ಉದಯವಾದುದಿಲ್ಲ. ಸರ್ವಶಕ್ತ ಪರಮಾಲಕ ಭಗವಂತನ ಮುಂತಾ ಮಾನವನಲ್ಲಿ ಹಾಗೂ ನಿಸರ್ಗದಲ್ಲಿ ನೆಲೆಸಿರುವ ಭಗವಂತನ ಅಸ್ತಿತ್ವದ ಸಿದ್ಧಾಂತಗಳ ಜನನ ಮೊದಲು ಇಲ್ಲಾಯಿತು. ಧರ್ಮ ಹಾಗೂ ತತ್ವಜ್ಞಾನದ ಸರ್ವೋಚ್ಚ ಆದರ್ಶಗಳು ಸಾಕಾರವಾದುದೂ ಇದೇ ಭೂಮಿಯಲ್ಲೇ. ಧರ್ಮ ಹಾಗೂ ತತ್ವಜ್ಞಾನದ ಹೆದ್ದಿರೆಗಳು ಉಕ್ಕಿರಿದ ಸಾಗರದ ಅಲ್ಲೆಗಳಂತೆ ಪುನಃ ಪುನಃ ಮೇಲೆದ್ದು ಇಡೀ ಜಗತ್ತನ್ನು ಆವರಿಸಿದುದೂ ಇಲ್ಲಿಂದಲೇ..... ಅಂತರ್ನಿಹಿತ ಪರಿಶುದ್ಧವದ ಸೃಷ್ಟಿಗಾಗಿ ಸದಾ ತುಯ್ದಾಡುವ ಮಾನವನಿಗೆ ಮನಶಾಂತಿ ನೀಡುವತ್ತ ತತ್ವಜ್ಞಾನನೀತಿ, ಉದ್ಯತ್ಕರ್ಮಗಳಜನ್ಮ ಭೂಮಿ ಇದು! ಮಾನವನು ಪಾಶವೀಯತೆಯೆಲ್ಲ ಮುಕ್ತುಗನ್ನು ಕೆತ್ತಿಸೆದ ತನ್ನಜನ್ಮಾಂತ್ಯರ ಹಿತ ಆನಂದಮಯ ಆತ್ಮದರೂಪದಲ್ಲಿ ತನ್ನನ್ನ ತಾನು ಕಂಡುಕೂಳ್ಳುವಂಥ ಸರ್ವವಿದ್ಯೆಗಳ ಸಾಧನಾಸ್ಥಳ ಈ ಭಾರತ! ಸುಖ ಭೋಗಗಳನ್ನುಂಡು, ಅದಕ್ಕಿಂತ ಮಿಗಿಲಾದ ದುಃಖಕಷ್ಟಗಳ ನಂಜನ್ನು ಕುಡಿದು, ಕಡೆಗೆ ಅವೆಲ್ಲವೂ ಅಪಾರವೆಂಬ ಅನುಭವ ಮನುಷ್ಯನ ಮೊದಲಿಗೆ ಕಂಡುಕೊಂಡ ಭೂಮಿಯೇ ಇದು. ನವ ಯೌವನದ ನಂದದಲ್ಲಿ, ವಿಲಾಸದ ಅಮಲಿನಲ್ಲಿ ಮುಳುಗಿದ ಮಾನವನು ಆ ಎಲ್ಲ ವಿಷಯಾವಿಶಯಗಳನ್ನು ಮೊಟ್ಟ ಮೊದಲಿಗೆ ಹುಡುಕಿದುದು ಇದೇ ಭೂಮಿಯಲ್ಲೇ... ಮಾನವ ಜೀವಿಯು ಸಮಸ್ತ ವಿಶ್ವದ ವಿಕಾತ್ಮತೆಯನ್ನು ಕಂಡುಡು ಇಲ್ಲೆಯೇ. ವಿಶ್ವದ ಒಂದೊಂದು ನಾಡಿವಿಡಿತವೂ ತನ್ನ ನಾಡಿವಿಡಿತವೇ ಎಂಬುದನ್ನವನು ಕಂಡ ಕೊಂಡುದೂ ಇಲ್ಲಿಯೇ.... ಶತಶತಮಾನಗಳ ಆಘಾತಗಳಿಗೆ, ನೂರಾರು ಪರಕೀಯ ಆಕ್ರಮಣಗಳಿಗೆ ಜಗ್ಗದಿರುವ ಧಾರಕ ಇದು. ತನ್ನ ಮೃತ್ಯುಂಜಯ ಮನೋಬಲ ಹಾಗೂ ಸತ್ವದಿಂದ ಪ್ರಚಂಡ ಹೆಬ್ಬಂದಿಗಿಂತ ಭದ್ರವಾಗಿ ನಿಂತಿರುವ ಭೂಮಿಯೇ ಇದು. ಆತ್ಮ ಸ್ವರೂಪಪರಿಪೂರ್ಣತೆಯೇ ಭಾರತ ವರ್ಷವೂ ಅನಾದಿಯಾಗಿದೆ, ಅನಂತವಾಗಿದೆ. ಅಮರವಾಗಿದೆಂಬ ವಿವೇಕೋದಯವನ್ನು ಪಡೆದೀತು. ಆಗ ಮಾತೃ ಎಲ್ಲರಿಗೂ ಇದು ಪುಣ್ಯಭೂಮಿ, ಕರ್ಮಭೂಮಿ, ಧರ್ಮಭೂಮಿಯಾಗಿದೀತು. ಈ ರೀತಿ ಅವರಲ್ಲಿ ವಿವೇಕೋದಯವಾಯಿತೆಂದರೆ ನಂತರ ಆ ದೇಶಭಕ್ತಿಯ ಜಿಜುಮೆ ಪುಟಿಯುವದನ್ನು ನಿಲ್ಲಿಸಲು ಅದ್ಯಾರಿಂದಲೂ ಸಾಧ್ಯವಾಗದು. ಆಗ ಅವರೆಲ್ಲಿಂದ ಬಾಯಿಯಿಂದ ಸದಾಗವಾಗಿ ಜಯ ಜಯ ಭಾರತ ವರ್ಷ ಹವೂರಾ, ತ್ರಿಭುವನ ಸುಂದರ ಪರಮ ಪ್ಯಾರಾ.... ಮಾತೃಭೂಮಿ, ಪಿತೃಭೂಮಿ ಧರ್ಮಭೂ ಮಹಾನ್, ಭಾರತ ಭೂ ಮಹಾನ ಹೈ ಮಹಾನ ಹೈ ಮಹಾನ್.... ಹಾಡು ಹೊರ ಹೊಮ್ಮುತ್ತ— ಬಂದು ಗೂಡುವಾ ಮುಂದೆ ಸಾಗುವಾ— ಬಂಧುಭಾವದಿಂದ ಸೇರುವಾ — ಹಿಂದು ಭೂಮಿ ಸೇವೆ ಗೈಯ್ಯುವಾಭೇದ ದೇಶಭಕ್ತಿಯು ಪ್ರಖರ ಪ್ರವಾಹ ಹರಿದು ಆವರು — ಹೇ, ವಾತ್ಸಲ್ಯಮಯಿ ಮೂಕೈ ಭೂಮಿಯೇ, ಮಹಾ ಮಂಗಲಿಯಾದ ಪುಣ್ಯ ಭೂಮಿಯೇ ನಿನಗೆ ವಂದಿಸುವೆನು ನಿನಗೆ ಅನಂತಪ್ರಣಾಮಗಳೆಂದಾರು.

— —

ಉಡುಪಿ ಭೂಮಾಲಿಕರು ಮತ್ತು ಕೃಷಿಕ ಸಂಘದ ಮನವಿ

ಉಡುಪಿ, ನವಂಬರ ೨೬, ಉಡುಪಿ ತಾಲೂಕು ಭೂಮಾಲಿಕರ ಮತ್ತು ಕೃಷಿಕರ ಸಂಘದ ಸಭೆಯು ಜರಗಿ ಲೆನಿಂಗ್ರಾಡ್‌ದಲ್ಲಿ ಪ್ರಕೃತ ನಡೆಯುವ ಭತ್ತ ಅಕ್ಕಿಯ ಧಾರಣೆ, ಜೀವನಸಾಗಣ ಧಾರಣೆ, ಮೊದಲಾದವುಗಳ ಕುರಿತು ವಿಮರ್ಶೆ ನಡೆಯಿತು ಅಲ್ಲದೆ ಕಳಸ್ತ ತರಗಿಸಿಯ ಭತ್ತದವರನ್ನು ಕಡಿಮೆ ಪಕ್ಷ ಕ್ವಿಂಟಲಿಗೆ ರೂ. ೪೦ಕ್ಕೆ ನಿರ್ಬಂಧಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವನ್ನು ಮಾಡಲಾಯಿತು. ಮತ್ತು ಭತ್ತ ಲೆವಿಯ ಕೈವಾಸನ್ನು ನಿಲ್ಲಿಸಿ ಒದಕ್ಕೆ ಬದಲಾಗಿ ಅಕ್ಕಿಯನ್ನೇ ಲೆವಿಯಾಡಬೇಕೆಂಬ ಬೇಡಿಕೆಯನ್ನು ಸರಕಾರಕ್ಕೆ ಅವರವರ ಇಚ್ಛೆಯಂತೆ ಭತ್ತ ಮತ್ತು ಅಕ್ಕಿ ಕೊಡುವ ಸವಲತ್ತು ಸಿಗುವಂತಾಗಬೇಕೆಂದು ಎಕ್ಕೆ ಅಧಿಕವಾಗಿ ಅಡಕ್ಕೆಯಿಂದ ಕಡಿಮೆ ಭೂಮಿ ಹಿಡುವಳಿಯಿರುವ ಜಮೀನಿಕರಿಗೆ ಅವರುಸ್ವತಃ ಸಾಗುವಳಿ ಮಾಡುವಷ್ಟು ಅಂತಹ ಭೂಮಿಯನ್ನು ಲೆವಿಯಿಂದ ವಿನಾಯಿತಿಗೊಳಿಸಬೇಕು. ಮುಂತಾದ ನಿರ್ಣಯಗಳಾದುವು.

— —

ನಮ್ಮ ನಿಮ್ಮೊಳಗೆ...

ಏನು ಸೋಜಿಗಾಪ್ಪ ಈ ಪಂಪು

ಒಂದು ಎಕ್ರೆ ನೀರು ದಾಹೋಳ್ಗೆ ಬರೀ ಹತ್ತು ಪೈಸೆ ಖರ್ಚಾಪ್ತಿ! ಇದು ದ್ಯಾಗೇ ಅರತೀರ ಅಲ್ಲಾ ಒಂದಾಳು ದಿನ್ವಾ ಎಲ್ಲಾ ಮಾಡೋ ಕೆಲ್ಸಾನ್ನ ಎರಡು ಗಂಟೆ ಒಳಗೆ ಮುಗಿಸ್ಕೈತೆ ಕಣ್ಲಾ.

ಪೈ ಮೂಳೆನೇಲ್ಲಾ ಮುರ್ಕೊಂಡು ವಿನಾಕಲ್ಲಾ ಕೆಲ್ಸ ಮಾಡಾಕೈತ್ರೆ ಎಂಗಾ ಎತ್ತೆಗೂ ನೀರು ಕಾಸ್ಕಾಳಾಕೈತ್ರಿಲ್ಲಿ. ಅವಲು ದಾವಲೂ ನಂಬಿ ಕಾರ್ಬೇಕ್ಲಿ. ಅಗಿನ ಕಾಲ್ದಾಗೆ ಶಿವ ಕೊಪ್ರೆ ನುಳಿ, ಅನ್ನ, ಇಲ್ದಿದ್ದೆ ಬರೇ ಗೆಣಸು ಕದಪಾ ತಾನಾಗ ಹತ್ತು ವರ್ಷಾದೆ ಮುಸುಂಗೆ ಬಾರ್ದೇಲ್ಲಾ ಸರಿಯಾಯ್ತು, ಹೇಳಕ್ಕೆ ನೀರಿದು ನೂರಾ ನಿನ್ನುಚ್ಚ ಕೊಡದು ಎರಡು ಕಾಸ್ಗೂನು. ಇನೆ ಸುಖಂಯಿಯ ಆ ಕಸ್ಟಾನ.

ನಾ ಹೇಳೋದನ್ನ ಕೇಲ್ದಿ ನಿಮ್ಮನ್ನ ಮುರ್ತನ್ನ ಬಿಡ್ತಲ್ಲಾ, ಅಸಿಕ ಖಾಲ್ತಿ ಇಪ್ಪಿದ್ದು ಈ ಟ್ರಾಕ್ಟರ್ರು ಸೀನೇ ಸೊಬ್ರ, ತರೇ ಬೇಟಾ. ನಮ ಪಕ್ಕದ ಹೊಲಾ ನೋಡು, ಬೆ ಬಿತ್ತನೆ ಕಾಲ್ದಾ ನಸ್ಟೆ ಕುಯೀತಾ ಇದೆ.

ಅವೆನು ಕಾಲ ಬದಲಾಯ್ತನಪಾ. ನಾನು ಅಂಜ್ಕೊಂಡ ಹಾಗೆ ಈ ಎಲ್ಲಾ ಆ

ಜೈಕಾಜಿನೆಟ್ಟೊ ಸಿಂಥೆಸಿ

DA-೪೮೫೨೯

ಎಲ್ಲೆಲ್ಲಿ ಏನೇನು?

ಪೂರ್ಣಪ್ರಜ್ಞ ಸಂಜೆ ಕಾಲೇಜು ಉದ್ಘಾಟನೆ

ಉಡುಪಿ, ನವಂಬರ್ 25, ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಕೆ. ಎಲ್. ಶ್ರೀನಿವಾಸಯ್ಯರು ಉಡುಪಿ ಆದಮರು ಮರ ಎಜುಕೇಶನ್ ಸಮಿತಿ ಮತ್ತು ಉಡುಪಿ-ನಾಗರಿಕ ಸಮಿತಿಯ ಆಶ್ರಯದಲ್ಲಿ ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಆರಂಭಿಸಲಾದ ಶ್ರೀ ಪೂರ್ಣಪ್ರಜ್ಞ ಇವನಿಂಗ್ ಕಾಲೇಜನ್ನು ಉದ್ಘಾಟಿಸಿದರು. ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಡಾ| ಶ್ರೀನಿವಾಸಯ್ಯರು ತಮ್ಮ ಉದ್ಘಾಟನಾ ಭಾಷಣದಲ್ಲಿ ಆದಮರು ಮರದ ಶ್ರೀ ವಿಭುದೇಶ ತೀರ್ಥ ಪಾದಂಗಳವರ ವಿದ್ಯಾಸೇವೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಧರ್ಮಪೀಠದ ಗುರುಗಳೊಬ್ಬರು ಇಂಥ ಇವನಿಂಗ್ ಕಾಲೇಜನ್ನು ಆರಂಭಿಸುವುದು ಅಂತ್ಯ ಶ್ರೇಷ್ಠ ಸಂಗತಿಯೆಂದರು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾ ಸೌಕರ್ಯವನ್ನೊದಗಿಸಲು ಇಂಥ ಕಾಲೇಜುಗಳು ಅವಶ್ಯಕವೆಂದು ನುಡಿದರು. ಇಂದು ನಮ್ಮ ದೇಶದಲ್ಲಿ ಅಶಾಂತಿ ಹಾಗೂ ಶಾಂತಭಂಗದ ಚಳವಳಿಯು ಹಬ್ಬಿದ್ದು, ನಮ್ಮ ಪ್ರಜಾಪ್ರಭುತ್ವವು ಗಂಡಾಂತರ ಪರಿಸ್ಥಿತಿಯಲ್ಲಿದ್ದ. ವಿದ್ಯಾರ್ಥಿಗಳು ಇಂತಹ ಚಳವಳಿಗಳಲ್ಲಿ ಭಾಗವಹಿಸುತಿರಲು ಸಾಮಾಜದಲ್ಲಿ ನೈತಿಕತೆಯು ಅಧಃಪತನಕ್ಕೆ ಹೊಂದುತ್ತಿರುವುದೇ ಕಾರಣವಾಗಿದೆಯೆಂದೂ ಅವರು ಹೇಳಿದರು.

ಆರಂಭದಲ್ಲಿ ನ್ಯಾಗರಿಕ ಸಮಿತಿಯ ಅಧ್ಯಕ್ಷರಾದ ಶ್ರೀ ವಿ. ಜಿ. ಶೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಸಮಿತಿಯ ಉಪಾಧ್ಯಕ್ಷರಾದ ಶ್ರೀ ಎಸ್. ನಿತಾರಾಮ ಕಾಮತರು ಸಮೂರಂಭಕ್ಕೆ ಶುಭಹಾರೈಸಿ ಬಂದ ಸಂದೇಶಗಳನ್ನು ಓದಿದರು. ಸಂಧ್ಯಾಕಾಲೇಜಿಗೆ ನೆರವಾದವರ ಹೆಸರನ್ನು ಸಮಿತಿಯ ಕಾರ್ಯದರ್ಶಿ ಶ್ರೀ ಎಚ್. ಎಸ್. ಕೆದ್ಲಾಯರು ಓದಿದರು. ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರ್‌ರವರು ಮತ್ತು ಡಾ| ವಿ. ಎಸ್. ಶೆಟ್ಟಿಯವರು ಕಾಲೇಜಿಗೆ ಶುಭಹಾರೈಸಿ ಮಾತಾಡಿದರು. ಶ್ರೀ ಆದಮರು ಮರದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರು ಭಾಷಣ ಮಾಡುತ್ತಾ ಇಲ್ಲಿಯ ವಿದ್ಯಾರ್ಥಿಗಳು ಸಾಮಾಜದಲ್ಲಿ ಯೋಗ್ಯ ಸ್ಥಾನವನ್ನು ಪಡೆಯಲೆಂದು ಆಶಿಸಿದರು.

ಇವನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಬಿ. ದಾಮೋದರ ರಾಯರು, 'ಆಫೀಸುಗಳಲ್ಲಿ ದುಡಿಯುತಿದ್ದು, ಪ್ರೌಢ ಶಿಕ್ಷಣವನ್ನು ಪಡೆಯಬೇಕೆನ್ನುವವರಿಗೆ ಈ ಕಾಲೇಜು ಯೋಗ್ಯವಾಗಿದೆ'ಯೆಂದರು. ಸಮೂರಂಭದ ಅಧ್ಯಕ್ಷರಿಂದ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು, ಈ ತೇರ್ಗಡೆಯಲ್ಲಿ ಒಳ್ಳೆಯ ಕೀರ್ತಿಯನ್ನು ಸಂಪಾದಿಸಿಕೊಟ್ಟ ಡಾ| ಟಿ ಮಾಧವ ಪೈ ಮತ್ತು ಅದಮರು ಶ್ರೀಗಳವರ ಸೇವೆಯನ್ನು ಪ್ರಶಂಸಿಸಿದರು.

ಕೊನೆಯಲ್ಲಿ ಶ್ರೀ ಎಸ್. ಯು. ಪರಶುರಾಮ ನಾಯಕರು ಧನ್ಯವಾದ ಸಮರ್ಪಿಸಿದರು. ರಾತ್ರಿ ನಾಟಕ ಪ್ರದರ್ಶನ ನಡೆಯಿತು.

ಬೈಕಂಪಾಡಿಯಲ್ಲಿ ಮಂತ್ರಿ ಡಾ। ಆಳ್ವರು

ರಾಜ್ಯದ ಆರೋಗ್ಯ ಮಂತ್ರಿ ಸಚಿವ ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಬೈಕಂಪಾಡಿ ಗ್ರಾಮಪಂಚಾಯತ್ ಸಾರ್ವಜನಿಕ ಸಭೆಯೊಂದು ದಿನಾಂಕ 21ರಂದು ಬೆಳಿಗ್ಗೆ ಬೈಕಂಪಾಡಿ ಶಾಲಾ ಪಂಚಾರದಲ್ಲಿ ಜರಗಿತು.

ಆರಂಭದಲ್ಲಿ ಜವಳಿ ಹಮ್ಮಬ್ಬನವರು ಸ್ವಾಗತಿಸಿದ ಬಳಿಕ ಮೊಕ್ತೇಸರ ಇಬ್ರಾಹಿ ಬ್ಯಾರಿಗಳು ಸಚಿವರಿಗೆ ಹೂಹಾರ ಹಾಕಿದರು. ಶ್ರೀ ಕೃಷ್ಣಾನವರು ಸ್ವಾಗತ ಭಾಷಣ ಮಾಡಿದರು. ಪಕೇಲ್ ಶ್ರೀ ಗಂಗಾಧರ ದಾಸರು ಮನವಿಪತ್ರವನ್ನು ಓದಿದರು. ಮಾನವಿಯಲ್ಲಿ ಬಂದರಿನ ಬಳಿ ಕೈಗಾರಿಕೆಗಳ ಸಲುವಾಗಿ ತೆರೆದಿರುವ ವಶಪಡಿಸಿರುವ ಸ್ಥಳದಲ್ಲಿ ಬೈಕಂಪಾಡಿ ಸೇರಿರುತ್ತದೆ, ನಾವು ಈ ಜಾಗ ಬಿಟ್ಟುಕೊಟ್ಟಲ್ಲಿ ನಮಗೆ ಯಾವ ಅಡಚಣೆಯೂ ಆಗಬಾರದು-ಎಂದಿತ್ಯಾದಿ ವಿಚಾರಗಳಿದ್ದವು ಬಳಿಕ ಮಂಗಳೂರು ತಾಲೂಕು ಬೋರ್ಡ್ ಉಪಾಧ್ಯಕ್ಷ ಶ್ರೀ ಬಿ. ಎಂ. ಇದಿನಬ್ಬರವರು ಮಾತನಾಡುತ್ತ ಇಲ್ಲಿಂದ ಬಲಿಸೆ ಹೋಗುವವರಿಗೆ ಯಾವ ತೊಂದರೆಯೂ ಆಗಕೂಡದೆಂದು ಹೇಳಿದರು. ಸಚಿವರು ಮನವಿಗೆ ಉತ್ತರಿಸುತ್ತಾ ತೇರ್ಗಡೆಗೆ ಎಲ್ಲ ಸವಲತ್ತುಗಳನ್ನು ಒದಗಿಸಲು ತಾನು ಪ್ರಯತ್ನಿಸುತ್ತೇನೆಂದೂ ಯಾವ ಕೊಂದರೆಯೂ ಆಗದಂತೆ ನೋಡಿಕೊಳ್ಳುತ್ತೇನೆಂದೂ ಭರವಸೆಯಿತ್ತರು. ಕೊನೆಯಲ್ಲಿ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಗಣಕ ಯಂತ್ರದ ಪ್ರಯೋಗ ನಿಷೇಧಿಸಿ ಮುಷ್ಕರ

ಉಡುಪಿ, ನವಂಬರ 25, ಜೀವನಿಮೂಕೊಪ್ಪೋರೇಶನಿನಲ್ಲಿ ಆರಂಭವಾಗಿರುವ ಇಲೆಕ್ಟ್ರಾನಿಕ್ ಗಣಕಯಂತ್ರ ಪ್ರಯೋಗದ ವಿರುದ್ಧ ದೇಶದಾದ್ಯಂತ ಜೀವನಿಮೂ ನೌಕರರು ಕೈಗೊಂಡಿದ್ದ ಸಾಂಕೇತಿಕ ಮುಷ್ಕರವು ಇಲ್ಲಿಯೂ ಯಶಸ್ವಿಯಾಗಿ ಕೊನೆಗೊಂಡಿತು.

ಮುಷ್ಕರ ಹೂಡಿದ್ದ ನೂರಾರು ನೌಕರರು ಇಂದು ಪೂರ್ವಾಹ್ನ ಸೈಕಲುಗಳನ್ನೇರಿ ಗಣಕೀಕರಣದ ವಿರುದ್ಧ ಘೋಷಣೆಗಳನ್ನೆಬ್ಬಿಸುತ್ತಾ ನಗರದ ಬೀದಿಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮುಂಜಾನೆಯಿಂದ ಸಂಜೆಯ ವರೆಗೂ ಸ್ಥಳೀಯ ವಿಭಾಗ ಕಾರ್ಯಾಲಯದ ಮುಂದೆ ನೌಕರರು ಮತಪ್ರದರ್ಶನ ಹಾಗೂ ಘೋಷಣೆಗಳನ್ನು ಮೊಳಗಿಸುತ್ತಿದ್ದರು. ಮೆರವಣಿಗೆಯ ನಂತರ ಸಂಜೆ ವಿಭಾಗ ಕಾರ್ಯಾಲಯದ ಬಳಿ ಸೇರಿದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಪಿ. ರಂಗನಾಥ ಶೆಣೈಯವರು ಯಂತ್ರಕ್ಕೆ ಜಯವಾಗಲಿ ಎಂದು ಹಾರೈಸಿ, ನಿರುದ್ಯೋಗ ಸಮಸ್ಯೆಯನ್ನು ಗಣಕೀಕರಣದಿಂದ ಉಲ್ಬಣಗೊಳಿಸಿದರೆ ಅದು ಬಗೆಹರಿಯದ ಸಮಸ್ಯೆಯಾಗಿ ಬಿಡುತ್ತದೆಂದರು.

ಪ್ರಧಾನಕಾರ್ಯದರ್ಶಿ ಶ್ರೀ ಬಿ. ಕೆದಿಲಾಯರು ನೌಕರರೆಲ್ಲರನ್ನು ಅಭಿನಂದಿಸಿ ಮಾತಾಡಿದ ಮೇಲೆ ಶ್ರೀ ಟಿ. ವಿ. ರಾವ್, ಟಿ. ಪಿ. ಆಚಾರ್ಯ, ಬಿ. ವಿ. ಕೆದಿಲಾಯ, ಕೆ. ಅರ್. ಆಚಾರ್ಯ, ಕೆ. ಅನಂದ ಗಾಣಿಗ, ಮೊದಲಾದವರು ಸಂದರ್ಭೋಚಿತವಾಗಿ ಮಾತಾಡಿದರು.

ಉಡುಪಿಯಲ್ಲಿ ಭೀಮಸೇನ್ ಜೋಶಿ ಸಂಗೀತ ಸಭಾ

ಉಡುಪಿ, ಇದರ ಆಶ್ರಯದಲ್ಲಿ ಶ್ರೀ ಭೀಮಸೇನ್ ಜೋಶಿಯವರ ಸಂಗೀತ ಕಾರ್ಯಕ್ರಮವು ಕಳೆದ ತಾ. 28ರಂದು ರಾತ್ರಿ ಸ್ಥಳೀಯ ವರದೇಂದ್ರ ಕಲಾಮಂದಿರದಲ್ಲಿ ಜರಗಿತು.

ಆರಂಭದಲ್ಲಿ ಸಂಗೀತಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಸ್ವಾಗತಭಾಷಣ ಮಾಡಿದರು. ಶ್ರೀ ಜೋಶಿಯವರು ತಮ್ಮನ್ನು ತಾವು ಕಾರ್ಯಕ್ರಮದಲ್ಲಿ ಲಲಿತಗೊಂಡು, ಆಲಾಪ್, ವಿಲಂಬತ್, ಖಯಾಲ್‌ಗಳನ್ನು ಹಾಡಿ, ಕೊನೆಗೆ ದಾರವಾಡ ಕನ್ನಡ ಗೀತೆಗಳನ್ನು ಹಾಡಿದ ಮೇಲೆ ಭೈರವಿಯಲ್ಲಿ ಕಾರ್ಯಕ್ರಮವನ್ನು ಅಂತ್ಯಗೊಳಿಸಿದರು. ಶ್ರೀ ಜೋಶಿಯವರೊಂದಿಗೆ ತಬಲಾದಲ್ಲಿ ಶ್ರೀ ಎಸ್. ವಿ. ಪಟವರ್ಧನರೂ, ಹಾರ್ಮೋನಿಯಂನಲ್ಲಿ ಶ್ರೀ ಪಾರ್ಕೂರ್ ದಾಸರೂ ಸಹಕರಿಸಿದ್ದರು. ಕೃತಜ್ಞತೆಯ ವಂದನೆಯನ್ನು ಶ್ರೀ ಜೋಶಿಯವರ ತರುಣಶಿಷ್ಯರಾದ ಶ್ರೀ ಪ್ರಭಾವಗುಪ್ತ ಮತ್ತು ಶ್ರೀ ಸಾಲಗಾಂವಕರ್ ನೀಡಿದ್ದರು. ಕೊನೆಯಲ್ಲಿ ಶ್ರೀ ಟಿ. ಪಿ. ಆಚಾರ್ಯರ ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಉಡುಪಿ ಲೇಂಡ್ ಟ್ರೈಬ್ಯೂನಲ್ ಕೋರ್ಟ್‌ನಲ್ಲಿ

L. T. O. P. 137/1966.

ಶ್ಯಂಗಾರಿ ಅಮ್ಮ —ಅರ್ಜಿದಾರಳು

ಮತ್ತು

ಹಿರಿಯಣ್ಣ ಶೆಟ್ಟಿ —ಕೆಳಮನೆ ದೇವಪ್ಪ ಶೆಟ್ಟಿ ಮಗ-ಉದ್ಪಿ ತಾಲ್ಲೂ ಉಪ್ಪೂರು ಗ್ರಾಮದ ಅಬ್ಬಣ್ಣಕಾಡ್ಲು —ಎದ್ರಿ

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದ್ರೆ: —

ಪಾರೀಕು 20—11—1936 ನೇ ರಿಜಿಸ್ಟ್ರಿ ನಿತಿ ಮೂಲಗೇಣಿ ಚೀಟಿಗೆ ಕಾರಣವಾದ ಸ್ಥಿರಾಸ್ತಿಯು ಬಾಬ್ತು ಕಳದ ಏಪ್ರಿಲ್ ವಸಾಸಂವತ್ಸರಕ್ಕೆ ಬರತಕ್ಕ ಗೇಣಿಯನ್ನು ಮೈಸೂರು ಭೂ ಸುಧಾರಣಾ ಮುನೂದೆ ಪ್ರಕಾರ ವ್ಯಸಲು ಕೇಳಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ. 14.12.1966ಕ್ಕೆ ಯಿಟ್ಟಿದೆ. ಆದಾಹರಣವು ಥಾದ್ದಿದ್ದರೆ ಆದಿನ ಸದ್ರಿ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜ್ರಾಗಿ ಜ್ಞಾಹೀರು ನೋಡಿಕೊಳ್ಳ ಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡುವದು.

K. Balachandra Rao,
Advocate for Petitioner.
Udipi, 3—12—1966.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 104/62
R. E. P. 214/1966.

ಅರ್ಜಿದಾರ —ದೇವರಾಯ ಶಾನುಭಾಗ

ಎದ್ರಿರು—ರೋಲ್ಡಮ್ ಪಿಂಟೊ ಕೂಡಾ.

ಕುಂದಾಪುರ ತಾಲ್ಲೂ ಗಂಗೊಳ್ಳಿ ಗ್ರಾಮದಲ್ಲಿರುವ ಪಿಂಟೋರರ ಮಗ 2ನೇ ಎದ್ರಿ ಲೋರೆನ್ಸ್ ಪಿಂಟೋ ರುಜಾರಿ ಪಿಂಟೋರರ ಮಗಳು 4ನೇ ಎದ್ರಿ ಲೂಸಿ ಪಿಂಟೋ ರುಜಾರಿ ಪಿಂಟೋರರ ಮಗಳು 5ನೇ ಎದ್ರಿ ರೋಸಿ ಪಿಂಟೋ ಮಂಗಳೂರು ತಾಲೂಕು ಸಿರಿಗೆಬೆಟ್ಟು ಗ್ರಾಮದಲ್ಲಿರುವ ಇಂಡ್ಯ ಮನುವೇಲ್ ರೇಗರ ಮಗ 6ನೇ ಎದ್ರಿ ಇರೋ ಕೂಡಾ 4ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ವ್ಯವಸ್ಥಾಪನಯಲ್ಲಿ ಎದ್ರಿರ ಹಕ್ಕಿನ ಸ್ಥಿರ ಆಸ್ತಿಯನ್ನು ಯೇಲಂ ಪೂಡುವ ಬಗ್ಗೆ ಅರ್ಜಿದಾರನು ದಾವ್ಲು ಪೂಡಿದ ಯೇಲಂ ಇಸ್ಥಿಹಾರಿನ ಪರಿತಾಗಳನ್ನು ನಿರ್ಣಯಿಸುವ ದಿನಕ್ಕೆ ತಾ. 13—12—1966ಕ್ಕೆ ತಪ್ಪಿಸಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಪಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿದೆ.

(Sd) G. V. Aithal
Advocate for Petr.
Date 13—11—1966, Coondapoor.

● ಸುರಕ್ಷಿತ ಬಂಡವಾಳ ಹೂಡುವಿಕೆಗೆ ● ನಿಮ್ಮ ಹಣದ ಭದ್ರತೆಗೆ ● ನಿರೀಕ್ಷೆಗೂ ಮೀರಿದ ಪ್ರತಿಫಲಕ್ಕೆ

— ಇಂದೇ ನನ್ನಲ್ಲಿ ವ್ಯವಹರಿಸಿರಿ —

ವಿಜಯಲತಾ ಚಿಟ್ ಫಂಡ್ (ಪ್ರೈವೇಟ್) ಲಿಮಿಟೆಡ್

ಸೆಂಟ್ರಲ್ ಮಾರ್ಕೆಟ್ ರೂಂ. ನಂಬರ್ 112, ಮಂಗಳೂರು—1.

ಉಡುಪಿ ಶಾಖೆ— ಬಡಗುನೇಟೆ, ಉಡುಪಿ.

(ಪ್ರಮುಖ ಏಲಂಗಾರರು ಮತ್ತು ಚಿಟ್ ಫಂಡ್ ಪ್ರವರ್ತಕರು)

ನೂತನಿಕ ಮತ್ತು ದಿನನಿಹ ಚಿಟ್ ವಿಭಾಗಗಳನ್ನು ನಾವು ಪ್ರಾರಂಭಿಸುತ್ತೇವೆಂದು ತಿಳಿಸಲು ಹರ್ಷಿಸುತ್ತೇವೆ. ದಿನಂಪ್ರತಿ ನಿಲಂಕರಿಯಲ್ಪಡುವ ರೂ. 6,250ರ ಅಕರ್ಷಣೀಯ ಚಿಟ್ ವಿಭಾಗವು ಪ್ರತಿಯೊಬ್ಬರಿಗೂ ಅನುಕೂಲವಾಗುವಂತಹ ರೀತಿಯಲ್ಲಿ ರಚಿಸಲ್ಪಟ್ಟಿದೆ. ತಾ. 15—12—1966ರೊಳಗೆ ಈ ಗ್ರೂಪಿಗೆ ಸದಸ್ಯರಾಗಿ ಪ್ರಯೋಜನ ಪಡೆಯಿರಿ.

VIJAYALATHA CHIT FUND (P). LTD.

ಸದ್ಯದಲ್ಲಿಯೇ ದಿನನಿತ್ಯ 50 ಪೈಸೆ ಅಥವಾ 25 ಪೈಸೆ ಪ್ರಕಾರ ಹಣ ಉಳಿತಾಯದಂತಹ "ಭಾಗ್ಯ ನಿಧಿ" (ಪಿಗ್ಮಿ)ಯನ್ನು ಆರಂಭಿಸುತ್ತೇವೆಂದು ತಿಳಿಸಲು ಸಂತೋಷಪಡುತ್ತೇವೆ.

ಕುಂದಾಪುರ, ಪುತ್ತೂರು, ಕಾರ್ಕಳ ಮತ್ತು ಇತರ ಕಡೆಗಳಲ್ಲಿ ನಮ್ಮ ಬ್ರಾಂಚ್ ಮತ್ತು ಸಬ್ ಆಫೀಸು ತೆರೆಯಲಾಗುವುದು.

ಕೇನ್ವಾಸರರು, ಇನ್‌ಸ್ಪೆಕ್ಟರರು ಮತ್ತು ಏಜಂಟರು ಬೇಕಾಗಿದ್ದಾರೆ. ಸ್ವತಃ ಬಂದು ವಿಚಾರಿಸಿರಿ.

ಪಿ. ಸಾ: ಆಫೀಸಿನ ಅಧಿಕೃತ ರಸೀದಿ ಇಲ್ಲದ ಯಾವ ಸಣಕಲ್ಯ ಕಂಪೆನಿಯು ಜವಾಬ್ದಾರಿಯಲ್ಲ.

(ಟೋರ್ಡಿನ ಅಪೂರ್ಣ ಮೇಕರ್)

ಸಿ. ಮಹಾಬಲ ಶೆಟ್ಟಿ,
ಮೆನೇಜಿಂಗ್ ಡೈರೆಕ್ಟರ್.

ಖಗೋಳ

ನಕ್ಷತ್ರಗಳು ಸಿಡಿಯುವುದೇಕೆ?

ಕೆಲವೊಮ್ಮೆ ಆಂತರಿಕ್ಷದಲ್ಲಿ ಕೆಲವು ಅತ್ಯುಜ್ವಲ ನಕ್ಷತ್ರಗಳು ಇದ್ದಕ್ಕಿದಂತೆ ಸಿಡಿಯುವ ರಸಸ್ಯಾತ್ಮಕ ಘಟನಾ ವಿಶೇಷ ನಡೆಯುತ್ತವೆ. ಈ ಅತ್ಯುಜ್ವಲ ಕಾಂತಿ ಸ್ಫುರಣಕ್ಕೆ ಸಂಬಂಧಿಸಿ ಅನೇಕ ಅಧ್ಯಯನಗಳನ್ನು ನಡೆಸಲಾಗಿದೆ.

ಕೆಲವೊಮ್ಮೆ ಆಂತರಿಕ್ಷದಲ್ಲಿ ಕೆಲವು ಅತ್ಯಂತ ಕಾಂತಿಯುತ ನಕ್ಷತ್ರಗಳು ಸಿಡಿಯುವ ಘಟನೆ ಕಂಡು ಬರುತ್ತದೆ. ಈ ಘಟನೆ ಇಂದಿಗೂ ರಹಸ್ಯಾತ್ಮಕವಾಗಿಯೇ ಉಳಿದಿದೆ. ಇದರ ಭೌತಿಕ ಗುಣಗಳನ್ನು ನ್ನೂ ಸಂಪೂರ್ಣವಾಗಿ ವಿವರಿಸಲಾಗಿಲ್ಲ. ಕೆಲವು ಆಂತರಿಕ ಪ್ರಕ್ರಿಯೆಗಳಿಂದಾಗಿ ಕೆಲವು ನಕ್ಷತ್ರಗಳು ಅನಿರೀಕ್ಷಿತವಾಗಿ ಗಾತ್ರದಲ್ಲಿ ಹಿಗ್ಗಿ ತಮ್ಮ ಅನಿಲದ ವರಣವನ್ನು ಬಿಟ್ಟು ಹೊರಬಂದು ಅಕ್ಕಪಾರ ಪ್ರದೇಶದ ಶಕ್ತಿಯನ್ನು ಹೊರ ಚಿಮ್ಮುತ್ತ ಸಿಡಿಯುತ್ತವೆ. ಈ ಶಕ್ತಿ ಸೂರ್ಯನಿಂದ ಬರುವ ಶಕ್ತಿಗೂ ಕೋಟ್ಯಾಂತರ ಪಟ್ಟು ಹೆಚ್ಚು ಪ್ರಮಾಣದ್ದಾಗಿರುತ್ತದೆ. ಈ ಘಟನೆಯ ಸ್ವಭಾವ ಸ್ವರೂಪಗಳನ್ನು ಅಭ್ಯಸಿಸಲು ಅನೇಕ ತೊಂದರೆಗಳಿವೆ. ಇವು ಜರುಗುವುದು ಅಪರೂಪವಾಗಿ. ಅದರೂ ನಮ್ಮ ಕ್ಷೀರಪಥದಲ್ಲಷ್ಟೆ ಅಲ್ಲ ಇತರ ಕ್ಷೀರಪಥಗಳಲ್ಲೂ ಸಂಭವಿಸುವ ಈ ಕ್ರಾಂತಿ ಸ್ಫುರಣ ಘಟನೆ ಖಗೋಳ ವಿಜ್ಞಾನಿಗಳಿಗೆ ಅತ್ಯಂತ ಆಸಕ್ತಿದಾಯಕವಾಗಿದೆ.

ಇದು ವರೆವಿಗೂ ೧೬೦ಕ್ಕೂ ಹೆಚ್ಚು ಇಂಥ ಕಾಂತಿಸ್ಫುರಣ ಘಟನೆಗಳನ್ನು ದಾಖಲು ಮಾಡಿದ್ದಾರೆ. ಕೆಲವು ಕ್ಷೀರಪಥಗಳಲ್ಲಿ ಇವು ಅನೇಕ ಬಾರಿ ಜರುಗುತ್ತವೆಯೆಂದು ಸುಮಾರು ಹತ್ತು ವರ್ಷಗಳ ಹಿಂದೆ ಖ್ಯಾತ ನೋವಿಯೆತ್ ಖಗೋಳ ವಿಜ್ಞಾನಿ ಇಯೋಸಿಫ್ ಷ್ಲೋವ್‌ಸ್ಕಿಯವರು ಗಮನಿಸಿದರು. ಇದೇ ರೀತಿ ಇತ್ತೀಚೆಗೆ ಮಾಸ್ಕೋದ ಖಗೋಳ ವಿಜ್ಞಾನಿ ಬೋರಿಸ್ ಕುಕಾರ್ಕಿನ್‌ರವರು ಇತರ ಪ್ರೇಕ್ಷಪಥಗಳಲ್ಲಿ ಕಂಡು ಬಂದ ಕಾಂತಿಸ್ಫುರಣಗಳಿಗೆ ಸಂಬಂಧಿಸಿ ವಿಜ್ಞಾನಿಗಳ ಬಳಿಯಿರುವ ಅಂಕಿ ಅಂಶಗಳ ವಿವರವಾದ ವಿಶ್ಲೇಷಣೆ ನಡೆಸಿದರು. ೧೫೫ ಕ್ಷೀರ ಪಥಗಳಲ್ಲಿ ಇಂಥ ಕಾಂತಿಸ್ಫುರಣ ಒಂದೊಂದು ಬಾರಿಯೂ, ೩ ಕ್ಷೀರ ಪಥಗಳಲ್ಲಿ ಎರಡೆರಡು ಬಾರಿಯೂ, ಐದು ಕ್ಷೀರಪಥಗಳಲ್ಲಿ ಮೂರು ಮೂರು ಬಾರಿಯೂ ಜರುಗಿದುದು ದಾಖಲಾಗಿದೆ. ಇದು ಸಂಪೂರ್ಣ ಮಾಹಿತಿಯೇನೂ ಅಲ್ಲ. ಇಂಥ ಕಾಂತಿಸ್ಫುರಣಗಳಿಗಾಗಿ ಶೋಧ ಈಗಲಂದರ್ಪಗಳಿಂದಷ್ಟೆ ನಡೆಯುತ್ತಿದೆ. ಆದರಲ್ಲೂ ಕಳೆದ ಎರಡು ದಶಕಗಳಲ್ಲಷ್ಟೆ ಇದು ವ್ಯವಸ್ಥಾಬದ್ಧವಾಗಿ ಜರುಗುತ್ತಿದೆ.

ಇದುವರೆಗೆ ನೋಡಿರುವ ಅಂಕಿ ಅಂಶಗಳ ಆಧಾರದ ಮೇಲೆ ಕೆಲವು ಉಹಾತ್ಮಕ ವಾದಗಳನ್ನು ಮುಂದಿಡಲು ಅವಕಾಶವಿದೆ. ಇವು ನಿಸ್ಸಂದೇಹವಾಗಿವೆ. ಆವುಗಳೆಲ್ಲಿಂದು ಇಂಥ ಕಾಂತಿಸ್ಫುರಣಗಳ ನಾನಾ ಪಥದಲ್ಲಿ ಸಮೂಹ ಸಂಭವನೀಯತೆಯೊಂದಿಗೆ ಕಾಣಿಸಿಕೊಳ್ಳುತ್ತವೆ ಎಂಬುದಾಗಿದೆ. ಈ ಪ್ರಸಂಗದಲ್ಲಿ ಕಾಂತಿಸ್ಫುರಣಗಳ ಚಿತ್ರ 'ಪಾಯ್ಸನ್ ವಿತರಣೆ'ಗೆ— ಆಕಸ್ಮಿಕ ಘಟನೆಗಳ ವಿತರಣೆಯ ನಿಯಮಕ್ಕೆ ಹೊಂದಿಕೊಂಡಿರಬೇಕು. ಬೇರೊಂದು ರೀತಿಯಲ್ಲಿ ನಾನಾಭೌತಿಕ ಮೂದರಿಗಳ ಕ್ಷೀರಪಥಗಳಲ್ಲಿ ಇಂಥ ಕಾಂತಿಸ್ಫುರಣಗಳು ವಿಭಿನ್ನ ಸಂಭವ ಪ್ರಮಾಣಗಳಲ್ಲಿ ಜರುಗುವುದೂ ಸಾಧ್ಯವುಂಟು. ಇದುವರೆವಿಗೂ ಖಗೋಳ ವಿಜ್ಞಾನಿಕ್ಕೆ ಲಭ್ಯವಾಗಿರುವ ವಾಸ್ತವಾಂಶಗಳು ಈ ಎರಡನೆಯ ಊಹೆ ಸರಿ ಎಂದು ಸಮರ್ಥಿಸುತ್ತವೆ. ಇದು ಹೀಗಿದ್ದಲ್ಲಿ, ಕಾಂತಿ ಸ್ಫುರಣಗಳು ವಿಶೇಷವಾಗಿ ಆಗಾಗ್ಗೆ ಕಾಣಬರುವಂಥ ಭೌತಿಕವಾದ ಮೂದರಿಗಳ ಕ್ಷೀರಪಥಗಳನ್ನು ಗೊತ್ತು ಹಚ್ಚುವ ಸಮಸ್ಯೆ ಉದ್ಭವಿಸುತ್ತದೆ.

ಉನ್ನತ ಕಾಂತಿಯ ಸುರುಳಿ ರೂಪದ ಕ್ಷೀರಪಥಗಳಲ್ಲಿ ಇಂಥ ಕಾಂತಿಸ್ಫುರಣಗಳು ಹೆಚ್ಚು ಜರುಗುತ್ತವೆಂದು ಪ್ರೊ. ಕುಕಾರ್ಕಿನ್‌ರವರು ತೀರ್ಮಾನಕ್ಕೆ ಬಂದಿದ್ದಾರೆ. ಇದಕ್ಕೆ ಕ್ಷೀರಪಥದ ಉನ್ನತ ಕಾಂತಿಯೊಂದೇ ಕಾರಣವೆನ್ನುವುದಾದರೆ, ಇಂಥ ಗುಣಹೊಂದಿರುವ ಎಲ್ಲ ಕ್ಷೀರಪಥಗಳಲ್ಲೂ ಒಂದೇ ರೀತಿಯ ಕಾಂತಿಸ್ಫುರಣ ವಿತರಣೆ ಕಂಡು ಬರಬೇಕು. ಆದರೆ ವಾಸ್ತವವಾಗಿ ಹೀಗಿಲ್ಲ. ಇದರ ಫಲವಾಗಿ ನಾವು ಒಂದು ಅತ್ಯಂತ ನುಮ್ಮಿ ತೀರ್ಮಾನಕ್ಕೆ ಬರುತ್ತೇವೆ— ಯಾವುದೇ ಕ್ಷೀರಪಥದಲ್ಲಿ ಕಾಂತಿ ಸ್ಫುರಣ ಆಗಾಗ್ಗೆ ಆಗುವುದಕ್ಕೆ ಅದರ ಉನ್ನತ ಕಾಂತಿಯಷ್ಟೇ ಅಲ್ಲದೆ ಇತರ ಕೆಲವು ಭೌತಿಕ ಅಂಶಗಳೂ ಕಾರಣ ವಿರಬೇಕು. ಇದರ ಪರಿಶೋಧನೆಯೇ ಕ್ಷೀರಪಥ ಹಾಗೂ ನಕ್ಷತ್ರ ಖಗೋಳ ವಿಜ್ಞಾನದ ಅತ್ಯಂತ ಮುಖ್ಯ ಸಮಸ್ಯೆಯಾಗಿದೆ.

ಪ್ರೊ. ಕುಕಾರ್ಕಿನ್ ಗುರುತಿಸಿರುವ ಮತ್ತೊಂದು ವಿಷಯವೂ ಮುಖ್ಯವಾಗಿದೆ. ಕೆಲವು ಕ್ಷೀರಪಥಗಳಲ್ಲಿ ತೀವ್ರತರ ವಾವಂಧ ರೇಡಿಯೋ— ವಿಕಿರಣ ಉಂಟಾಗುತ್ತಿರುವುದಕ್ಕೆ ಅವುಗಳಲ್ಲಿ ಆಗಾಗ್ಗೆ ಜರುಗುವ ಕಾಂತಿ ಸ್ಫುರಣವೇ ಕಾರಣವೆಂದು ಅನೇಕ ಖಗೋಳ ವಿಜ್ಞಾನಿಗಳು ಭಾವಿಸಿದ್ದಾರೆ. ಆದರೆ ಅನೇಕ ಕಾಂತಿಸ್ಫುರಣಗಳುಂಟಾಗಿರುವ ಯಾವ ಕ್ಷೀರಪಥದಿಂದಾದರೂ ರೇಡಿಯೋ— ತರಂಗಗಳ ಆಕರವೇನೂ ಆಗಿಲ್ಲ. ಆದ್ದರಿಂದ ಕ್ಷೀರಪಥಗಳಲ್ಲಿ ಕಂಡು ಬರುವ ರೇಡಿಯೋ ವಿಕಿರಣಕ್ಕೆ ಬೇರೆಯೇ ಆದ ಭೌತಿಕ ಮಾಧ್ಯಮವಿರಬೇಕೆಂಬುದಕ್ಕೆ ಇದು ಗಹನವಾದ ಸಾಕ್ಷ್ಯ ಒದಗಿಸುವ ಅಂಶವಾಗಿದೆ.

ಕನ್ನಡದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಗ್ರಂಥವನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ:

ನವಯುಗ ಪೈಸ್, ಉಡುಪಿ.

ಮಣಿ ಮಂಜಾಗಿತ್ತು

(ಎರಡನೇ ಸುರುಳಿಂದ)

"ಏನೋ ಪ್ರಯತ್ನಿಸಿ ನೋಡುತ್ತೇನೆ" ಎಂದರು ರುದ್ರನ್ನ.

೦ ೦ ೦ ೦ ೦ ೦ ೦

"ಕಂಗ್ರಾಚು ಲೇಶನ್ಸ್' ಎಂದು ಕೈ ಕುಲುಕುತ್ತಾ "ಭಸಂಡಿಸಿದರು ಡಾಕ್ಟರ್ ಬದ್ಮನ್ನಿಸ್ಸಾ.

'ಹೆಪ್ಪಿ ನ್ಯೂಸ್' ಎಂದರುಷ್ಟಿಡಾಕ್ಟರ್ ನಿರ್ಮಲಾ.

"ಸಿಹಿ ಯೊವಾಗ" ಎಂದರು ಡಾಕ್ಟರ್ ವನಜಾ.

ಎಲ್ಲರೂ ಮುತ್ತಿಗೆ ಹಾಕಿ ಜಭಿಸಂದಿಸಿ ಸಂತೋಷ ವ್ಯಕ್ತಪಡಿಸಿದರು.

"ಥ್ಯಾಂಕ್ಸ್' ಎಂದಳು ಡಾ. ಮೂಲಿನಿ.

ಕೇವಲ ಎರಡು ತಿಂಗಳುಗಳಲ್ಲಿ ಡಾ. ಮೂಲಿನಿಯು ಮದುವೆ ಡಾ. ಶಚೀಂದ್ರ ರೊಡನೆ ನಡೆದು ಹೋಯಿತು.

ಮೂಲಿನಿಯು ಈ ಮನೆಯಿಂದಅಮನೆಗೆ ಬದಲಿ ಹೋದಳು. ಮದುವೆ ಮುಗಿದ ಬಳಿಕ ಮೂರು ತಿಂಗಳ ರಜೆ ಬರೆದು ತನ್ನ ಪತಿಯೊಡನೆ ಊಟಿ, ದೊಂಬೈ ಬೆಂಗಳೂರನ್ನು ತಿರುಗಿ ಬಂದಳು. ಮೂರು ತಿಂಗಳು ತಿರುಗಾಡಿ ಮನೆಗೆ ಬಂದ ಆರೇಳು ದಿನಗಳಷ್ಟೆಯೇ ಮೊದಲ ಗರ್ಭವಾತವನ್ನು ಅನುಭವಿಸಿದಳು. ಮನಸ್ಸು ಒಂದು ಬಗೆಯಾಗಿನೊಂದಿತು.

"ಬೇಸರವೇ' ಎಂದರು ಶಚೀಂದ್ರರು

"ಆಗದೆ ಇರುತ್ತದೆಯೇ? ಎಂದಳುಮೂಲಿನಿ.

"ಮಂಜಾಗ್ರತೆ ಬಹಳಬೇಕಾಗಿತ್ತು,' ಎಂದರು ಶಚೀಂದ್ರರು.

"ಹೀಗೆ ಎಂದು ನನಗೆ ತಿಳಿದಿರಲಿಲ್ಲ' ಎಂದಳು ಮೂಲಿನಿ ಉದಾಸೀನತೆಯಿಂದ.

'ವೈದ್ಯರಾಗಿ ವ್ಯರ್ಥವಾಯಿತು"ಎಂದು ಹಾಸ್ಯವಾಗಿ ನುಡಿದು ಡ್ಯೂಟಿಗೆ ತೆರಳಿದರು ಶಚೀಂದ್ರರು.

ದಿನ ಉನ್ಮಳಿಸಿ ಬಂದಂತಾಗಿ ಕೆಲ ಹೊತ್ತು ಅಳುತ್ತಲೇ ಇದ್ದಳು ಮೂಲಿನಿ. ಕೋಣೆಗೆ ಬಂದ ರುದ್ರನ್ನ ಮೂಲಿನಿಯನ್ನು ಬಹಳ ಸಂತೈಸಿದರೂ ಮೂಲಿನಿಯ ಮಾನಸಿಕ ಕಳವಳ ಕೆಳಗಾಗಲಿಲ್ಲ.

೦ ೦ ೦ ೦

'ಇದೀಗ ಎಷ್ಟ ತಿಂಗಳಾಯಿತು?" ಎಂದರು ನಗುತ್ತಾ ಶಚೀಂದ್ರರು.

'ನಿಮಗೆ ತಿಳಿಯದೇ?' ಎಂದಳು ಮೂಲಿನಿ.

'ಇಬ್ಬರೂ ವೈದ್ಯರು. ಈಗ ಯಾರು ಯಾರ ವೈದ್ಯರು ಎಂದು ಹೇಳ ಬೇಕಾದ ಪಳ್ಳನೀನ." ಎಂದರು. ನಸು ನಕ್ಕಳು ಮೂಲಿನಿ.

ತಿಂಗಳು ಒಂಭತ್ತು ತುಂಬಿ ಹೆರಿಗೆಯ ನೋವು ಕಾಣಿಸಿಕೊಂಡಿತು. ಕೂಡಲೇ ಳರು ಮಾಡಿ ಹೆರಿಗೆಯ ಆಸ್ಪತ್ರೆಗೆ ಹೋದರು. ಎರಡು ದಿನಗಳ ಸತತ ನೋವಿನ ನರಳಾಟದ ಕೊನೆಯಲ್ಲಿ ಗಂಡು ಹೆಂಡಿರಿಬ್ಬರೂ ನೋವ ಮುಖ ಹಾತಕೊಳ್ಳಬೇಕಾಯಿತು. ಮಗು ಸತ್ತು ತಾಯಿ ಬದುಕಿದಳು.

ಎಚ್ಚರದ ಬಳಿಕ ಮೂಲಿನಿ ಮಗುವೆಲ್ಲಿ?" ಎಂದಳು ತನ್ನ ಮುಗ್ಗುಲಲ್ಲಿ ಮೌನವಾಗಿ ನಿಂತಿದ್ದ ಪತಿಯನ್ನು ಕಂಡೊಡನೆ ಆವಳಿಗೆ ಎಲ್ಲವೂ ತಿಳಿಯಿತು. ಕಣ್ಣೀರು ಹಂಯತೊಡಗಿತು. ಮೌನದಲ್ಲೇ ಹೊತ್ತು ಕಳೆದುದೀಪಗಳು ಬೆಳಗಿದವು.

೦ ೦ ೦ ೦ ೦ ೦ ೦

ಈ ಬಾರಿಯ ಘಟನೆಯಿಂದ ಮೂಲಿನಿಯ ಮನಸ್ಸು ಯೋಚನೆಗೀಡಾಯಿತು. ಇದು ತನಗಿರುವ ಶಾಪವೆಂದೇ ಆವಳು ತಿಳಿಯ ತೊಡಗಿದಳು. ಹೀಗೆ ಒಂದು ದಿನ ಮಾತನಾಡುತ್ತಿರುವ ವೇಳೆ,

"ಇದು ದೇವರ ಶಾಪ" ಎಂದಳು ಮೂಲಿನಿ.

"ಏಕೆ, ನೀನೇನು ಮಾಡಿದೆ?."

"ಹಲವು ತಾಯಂದಿರಿಗೆ ಉಪದೇಶ ಮಾಡಿದ ಫಲ'

"ಅದು ನಿನ್ನ ಕೆಲಸದ ಗುರಿ'

"ನನ್ನದು ತಪ್ಪಿಸಿ ಉಪದೇಶ. ಇದಕ್ಕಾಗಿಯೇ ಈ ಶಿಕ್ಷೆ"

"ಸಲ್ಲ. ಹೀಗಾದುದು ಶಾಪ ಎಂದು ನಾನು ಹೇಳಲಾರೆ"

'ನನಗಂತೂ ಮನಸ್ಸು ಹೀಗೆ ಹೇಳುತ್ತಿದೆ'

"ಇಷ್ಟು ಕಲಿತೂ, ತಿಳಿದು, ವಿಜ್ಞಾನದ ಪ್ರಗತಿಯಲ್ಲಿ ನಂಬಿಗೆ ಇಟ್ಟು ಕೆಲಸ ಮಾಡಿದ ನೀನೇ ಹೀಗೆಂದರೆ ಹೇಗೆ ಮೂಲಿನಿ?' ಎಂದ. ನಿಟ್ಟುಸಿರು ಬಿಟ್ಟರು ಶಚೀಂದ್ರರು.

'ಇದು ಖಂಡಿತಕ್ಕೂ ನನಗೆ ಶಾಪ! ನನಗೆ ಮಕ್ಕಳಾಗದು. ನಾನು ಈ ಕೈಗಳಿಂದ ಮಾಡಿದ ಒಂದೊಂದು ಒಪರೇಶನ್ ನನ್ನ ಒಂಎಂದೇ ಕುಡಿಯನ್ನು ಹಿಜ್ಜಾಳತ್ತದೆ.' ಎಂದು ಹೇಳುತ್ತಲೇ ಒಂದೇ ಸವನೆ ಅಳಲು ಆರಂಭಿಸಿದಳು.

೦ ೦ ೦

"ಮೂಲಿನಿ" ಎಂದದು ಶಚೀಂದ್ರರು.

"ಯಾರು?"

"ಡಾಕ್ಟರ್ ಬದ್ಮನ್ನಿಸ್ಸಾ ಬಂದಿದ್ದಾರೆ."

"ಯಾಕೆ, ನನ್ನನ್ನ ಹೀಯಾಳಿಸಲೇ?"

"ಇವರು ನಿನ್ನ ಗೆಳತಿಯಲ್ಲವೇ?"

"ಹೌದು ಹೌದು ಗೆಳತಿ. ಮಿತ ಸಂತಾನದ ಕುರಿತು ಬೋಧಿಸಲು ಬಂದಿದ್ದಾರೆಯೆ? ಆಹಾರದ ಅಭಾವ—ಮಕ್ಕಳು ಬೇಡ ಎನ್ನುತ್ತಿರೆಯಲ್ಲವೇ? ರಾಷ್ಟ್ರದ ಪ್ರಗತಿಯಾಗ ಬೇಕಾದರೆ ಮಿತ ಸಂತಾನ ಬೇಕೆನ್ನುತ್ತಿರೆ. ಆಲ್ಲವೇ? ನನಗೆಲ್ಲವೂ ಗೊತ್ತು. ಅವರನ್ನು ಹೋಗಲು ಹೇಳಿ. ನಾನಿಷ್ಟು ಎನ್ನಿ. ನಾನವರನ್ನು ನೋಡ..ವುದಿಲ್ಲ..." ಎನ್ನುತ್ತಾ ಕಣ್ಣೀರು ಒರ್ತಾಂಭಿಸಿದವು ಮೂಲಿನಿ ಒಂದೇ ಸವನೆ.

ಡಾಕ್ಟರ್ ಶಚೀಂದ್ರರು ಒಂದು ನಿಮಿಷ ನಿಂತು ಆಕೆಯನ್ನು ಕಂತರು. ನಿಟ್ಟುಸಿರಿಡುತ್ತಾ ಜೊತ ಬಂದು ಮೂಲಿನಿಯ ಗೆಳತಿಯರಿಗೆ ಏನೋ ಹೇಳಬೇಕು ಎನ್ನುವಷ್ಟರಲ್ಲಿ ಒಬ್ಬಾತ್ಕಿಡಿ ಬಂದು "ಡಾಕ್ಟ್ರೆ, ಹೆರಿಗೆ ನೋವು ಕಾಣಿಸಿದೆ ನನ್ನ ಹೆಂಡತಿಗೆ. ಮಿಡ್‌ವೈಫ್‌ನಿನ್ನು ನ್ನು ಕರಿತರಲು ಹೇಳಿದ್ದಾಳೆ; ದಯವಿಟ್ಟು ಬನ್ನಿ" ಎಂದ.

"ಸರಿ" ಎನ್ನುತ್ತಾ ಮೂಲಿನಿ ಕುಳಿತಿದ್ದ ಕೊಯ್ಯ ಕಡೆಗೊಮ್ಮೆ ನೋಡಿ ನಕ್ಕರು ಡಾ. ಶಚೀಂದ್ರರು.

READ & ADVERTISE IN NAVAYUGA WEEKLY

NAVAYUGA 8—12—1960
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನಮ್ಮ ಸಾಧನೆ

ಅಮೆರಿಕೆಗೆ ಬೆಂಗಳೂರಿನ ಹೂ ಬೀಜ

ಕ್ಯಾಲಿಫೋರ್ನಿಯದ ಉದ್ಯಾನಗಳಲ್ಲಿ ಬೆಳೆದ ಮನ ಮೋಹಕ ಪೆಟುನಿಯ ಹೂಗಳನ್ನು ಕಂಡು ಮುಂದಿನ ವರ್ಷ ಅಮೆರಿಕಕ್ಕೆ ಹೋಗುವ ಭಾರತೀಯರ ಮನ ಸೂರೆ ಹೋಗಬಹುದು. ಆದರೆ ಅಮೆರಿಕದ ಗೆಳೆಯರು ಪೆಟುನಿಯ ಬೀಜಗಳ ತಾಯಿ ಭಾರತ ಎಂದಾಗ ಆಶ್ಚರ್ಯ ಪಡಬೇಕಾಗುವುದಿಲ್ಲ.

ಅಮೆರಿಕದ ಉದ್ಯಾನಗಳಲ್ಲಿ ಭಾರತದ ಪೆಟುನಿಯ ಹೂಗಳು ಬೆಳೆಯಲಿವೆಯೇ? ಎಂದರೆ ಹೌದು ಎನ್ನುವ ಸಂದರ್ಭ ಒದಗಿಬರುತ್ತಿದೆ. ಭಾರತದ ಸುಂದರ ಉದ್ಯಾನಗಳಲ್ಲಿ ಒಂದಾದ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಭಾರತದ, ಕರ್ನಾಟಕದ ವಿಜ್ಞಾನಿಯೊಬ್ಬರು ಈ ದಿಕ್ಕಿನಲ್ಲಿ ಶ್ರಮವಹಿಸಿ ದುಡಿಯುತ್ತಿರುವುದೂ ಪ್ರಪಂಚದ ಪುಷ್ಪಕೃಷಿಯ ನಕ್ಷೆಯಲ್ಲಿ ಭಾರತದ ಸ್ಥಾನವನ್ನು ಭದ್ರಪಡಿಸುವಲ್ಲಿ ಮಹತ್ವದ ಪಾತ್ರವಹಿಸಲಿದೆ ಎಂದು ವಿಜ್ಞಾನಿ ಮನ ಮೋಹನ ಅತ್ತಾವರ್ ಅವರು ದೃಢ ನಿರ್ಧಾರದಿಂದ ಕೆಲಸ ಮಾಡುತ್ತಿದ್ದಾರೆ.

ಹೂದೋಟವೆಂದರೆ ಭಾರತೀಯರಿಗೆ ಕಣ್ಣು ಮನಸ್ಸುಗಳಿಗೆ ಔತಣ ನೀಡುವ ಕ್ಷೇತ್ರ ಎಂಬ ಅರ್ಥವಷ್ಟೆ. ತೋರಿಬಂದರೂ ಪುಷ್ಪ ಕೃಷಿ ವ್ಯಾಪಾರೋದ್ಯಮವೂ ಆಗಿದ್ದು, ಆ ದಿಕ್ಕಿನಲ್ಲಿ ಪೂರ್ಣ ಪ್ರಯೋಜನ ಪಡೆವ ಯತ್ನ ಇನ್ನೂ ನಡೆಯಬೇಕಾಗಿದೆ.

ಸೌಂದರ್ಯೋಪಾಸನೆಯ ಈ ಕ್ಷೇತ್ರದಲ್ಲಿ ವಾಣಿಜ್ಯದ ದಿಗಂತವನ್ನು ಗುರುತಿಸುವ ಉದ್ದೇಶ ಅತ್ತಾವರಂದಾಗಿದೆ. ಭಾರತದ ಪುಷ್ಪ ಕೃಷಿಯನ್ನು ಪೇಟೆಯ ಬಂಗಲೆಯ ಒಯ್ಯುವುದರ ಜತೆಗೆ, ಅಮೆರಿಕದಲ್ಲಿರುವಂತೆ ಭಾರತದಲ್ಲಿಯೂ ಅಡಕ್ಕೆ ತೆಗೆಗಾರಿಕಾ ತಳಹದಿಯನ್ನು ಒದಗಿಸಬೇಕಾದುದು ಮುಖ್ಯವೆಂಬ ಅಭಿಪ್ರಾಯ ಅವರದಾಗಿದೆ.

ಬಹುಪಾಲು ಅಮೆರಿಕನ್ನರಿಗೆ ತೋಟಗಾರಿಕೆ ಕೇವಲ ಹವ್ಯಾಸವಾಗಿ ಉಳಿದಿಲ್ಲ. ಜೀವನ ವಿಧಾನವೇ ಆಗಿದೆ. ತತ್ಫಲವಾಗಿ ಹೂಗಿಡಗಳ ಮಿಶ್ರ ತಳಿಗಳಿಗೆ ಬೇಡಿಕೆ ಹೆಚ್ಚಿದೆ. ತೋಟಗಾರಿಕೆ ಅಮೆರಿಕದಲ್ಲಿ ಸುವ್ಯವಸ್ಥಿತ ಕೈಗಾರಿಕೆಯಾಗಿದೆ.

ವೈಜ್ಞಾನಿಕವಾಗಿ ಸಿದ್ಧಪಡಿಸಿದ ಮಿಶ್ರ ತಳಿಯ ಹೂ ಗಿಡಗಳ ಬೀಜಗಳಿಗಾಗಿ ಸತತವಾಗಿ ಕೇಳಿಬರುತ್ತಿದ್ದ ಬೇಡಿಕೆಗಳ ಪೂರೈಕೆಗಾಗಿ ಪ್ರಪಂಚದ ಅಶ್ಯಂತ ದೊಡ್ಡ ವ್ಯಾಪಾರಿಗಳಾದ ಕೊಲರಾಡೋದ ಪಾವೋನಿಯದ ಪ್ಯಾನ್ ಅಮೆರಿಕನ್ ಸೀಡ್ಸ್ ಕಂಪೆನಿಯವರು ಬೀಜಗಳಿಗಾಗಿ ಹೂಸ ಮೂಲಗಳನ್ನು ಹುಡುಕುತ್ತಿದ್ದರು.

ವೈಯೆಲ್ಲ ಕಣ್ಣಾಗಿದ್ದ ಅತ್ತಾವರಂಗೆ ಈ ಪರಿಸ್ಥಿತಿ ಅತ್ಯಂತ ಅನುಕೂಲವಾಗಿ ಕಾಣಿಸಿತು. ಇದರಿಂದ "ರಫ್ತಿನ ದೃಷ್ಟಿಯುಂದ ವ್ಯಾಪಾರದ ಅಧಾರದ ಮೇಲೆ ಮಿಶ್ರ ತಳಿಯ ಹೂ ಗಿಡಗಳ ಬೀಜಗಳನ್ನು ಭಾರತದಲ್ಲಿ ಉತ್ಪಾದಿಸುವ ಆಲೋಚನೆಯುಂಟಾಯಿತು" ಎಂಬುದಾಗಿ ಅತ್ತಾವರ್ ತಿಳಿಸಿದರು.

ಆಗ ಪಶ್ಚಿಮ ಚಿಕಾಗೋದಿನ ಡೂಪೇಜ್ ಹಾರ್ಟಿಕಲ್ಚರ್ ಸ್ಕೂಲಿನಲ್ಲಿ ಹೂಪ್ಪ ಕೃಷಿಯಲ್ಲಿ ತರಬೇತಿ ಪಡೆಯುತ್ತಿದ್ದ ಇಳಿ ವರ್ಷಗಳ ಭಾರತದ ವಿಜ್ಞಾನಿ ಪ್ಯಾನ್ ಅಮೆರಿಕನ್ ಸೀಡ್ಸ್ ಕಂಪೆನಿಯನ್ನು ಸಂಧಿಸಿ ಭಾರತ ಮೂಲದ ಮಿಶ್ರ ತಳಿಯ ಬೀಜಗಳ ಸರಬರಾಜಿನ ಸಲಹೆಯನ್ನು ಮುಂದಿಟ್ಟರು.

ಅತ್ತಾವರರ ಉತ್ಸಾಹಕ್ಕೆ ಅವೆರಿಕದ ಕಂಪೆನಿಯಲ್ಲಿ ಆದರದ ಸ್ವಾಗತಲಭಿಸಿತು. ೫೦,೦೦೦ದಿಂದ ೧೦೦,೦೦೦ ಡಾಲರುಗಳಷ್ಟು ಪೆಟುನಿಯ ಬೀಜಗಳನ್ನು ಕೊಳ್ಳಲು ಅಮೆರಿಕದ ಕಂಪೆನಿ ಒಪ್ಪಿಗೆ ನೀಡಿತು. 'ಭಾರತದ ತೋಟಗಾರಿಕೆಯ ಇತಿಹಾಸದಲ್ಲಿ ಪ್ರಪಂಚದ ಸ್ಪರ್ಧಾತ್ಮಕ ಪೇಟೆಗೆ ಭಾರತ ಕಾಲಿಡುತ್ತಿರುವುದು ಮಿಶ್ರ ತಳಿಯ ಪೆಟುನಿಯೂ ಬೀಜಗಳ ರಫ್ತು ಇದೇ ಮೊದಲು' ಎಂದರು ಅತ್ತಾವರ್.

ತುಂಬು ಉತ್ಸಾಹದಿಂದ ಈ ವರ್ಷದ ಆದಿಯಲ್ಲಿ ಭಾರತಕ್ಕೆ ಹಿಂತಿರುಗಿದ ಅತ್ತಾವರ ಅಪ್ಪೇ ಶ್ರದ್ಧೆಯಿಂದ ಕಾರ್ಯಾರಂಭ ಮಾಡಿದರು. ನೈಸರ್ಗಿಕ ತೋಟಗಾರಿಕೆಯ ಡೈರೆಕ್ಟರಾದ ಡಾ| ಎಂ. ಹೆಚ್. ವಿರಿನ್ನಾಣ್ಣನ್ನು ಭೇಟಿಮಾಡಿದರು. ಅವರು ಈ ಕಾರ್ಯದ ಯಶಸ್ಸಿಗೆ ಅವಶ್ಯವಾದ ಎಲ್ಲ ಸೌಕರ್ಯಗಳನ್ನೂ ಒದಗಿಸಿದರು. ಲಾಲ್‌ಬಾಗಿನಲ್ಲಿರುವ ಜಲಾಯೆಯ ಪ್ರಯೋಗ ಶಾಲೆಯಲ್ಲಿ ಮಿಶ್ರ ತಳಿಗಳನ್ನು ಸಿದ್ಧಪಡಿಸುವ ಕಾರ್ಯ ಈಗ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆ. ಬಹು ಜಟಿಲವಾದ ಆದರೆ ಅತ್ಯಾಕರ್ಷಕವಾದ ಈ ಕಾರ್ಯದಲ್ಲಿ ಅಯ್ಕೆ ಮಾಡಿದ ಕೆಲಸಗಾರರ ತಂಡವೊಂದು ಅತ್ತಾವರರ ನೆರವಿಗಿದೆ.

ಭಾರತದಲ್ಲೇ ಪ್ರಪ್ರಥಮವಾದ ಈ ಕಾರ್ಯದಲ್ಲಿ ಪರಿಪೋಷಣೆಯನ್ನು ಬಹು ಎಚ್ಚರಿಕೆಯಿಂದ ನಡೆಸಬೇಕಾಗಿದೆ. ಪ್ಯಾನ್ ಅಮೆರಿಕನ್ ಸೀಡ್ಸ್ ಕಂಪೆನಿಯಿಂದ ಪುರುಷ ಹಾಗೂ ಸ್ತ್ರೀ ತಳಿಗಳೆರಡರ ಬೀಜಗಳನ್ನು ಪಡೆದು ಕಾಂಡಗಳಲ್ಲಿರೋಗ ವಿಮುಕ್ತ ಮಿಶ್ರ ಮಣ್ಣಿನಲ್ಲಿ ಪಸಿಗಳನ್ನು ಬೆಳೆಸಲಾಗುವುದು. ಪುರುಷ ತಳಿಯ ಹೂವುಗಳಿಂದ ಪರಾಗವನ್ನು ಸಂಗ್ರಹಿಸಿ ಕೈತೃಬಂಧಕದಲ್ಲಿ ಇಡಲಾಗುವುದು. ಸ್ತ್ರೀ ತಳಿಯ ಗಿಡಗಳು ಸಿದ್ಧವಾದಾಗ ಅವುಗಳಿಗೆ ಪರಾಗ ಸಂಪರ್ಕ ಮಾಡಿಸಲಾಗುವುದು. ಆಗ ಪುಷ್ಪ ಫಲವಂತವಾಗುವುದು. ಒಣಗಿದ ಬೀಜ ಕೋಶಗಳನ್ನು ಸಂಗ್ರಹಿಸಿ ಜೀವ ಶಕ್ತಿಯಿರುವ ಬೀಜಗಳನ್ನು ರಫ್ತಿಗೆ ಸಿದ್ಧಪಡಿಸಲಾಗುವುದು.

ಬೀಜಗಳ ಮೊದಲ ಕಟ್ಟನ್ನು ಈ ವರ್ಷದ ಕೊನೆಯೊಳಗೆ ಅಮೆರಿಕಕ್ಕೆ ವಿಮಾನದಲ್ಲಿ ರವಾನಿಸಲಾಗುವುದು. ಅಮೆರಿಕದ ಕಂಪೆನಿಯೊಂದಿಗೆ ಮಾಡಿಕೊಂಡಿರುವ ಒಪ್ಪಂದ ಆನೇಕ ವರ್ಷಗಳ ಕಾಲ ನಡೆಯುವುದೆಂದು ಅತ್ತಾವರರು ನಿರೀಕ್ಷಿಸಿ, ಭಾರತದಲ್ಲಿ ಉತ್ಪಾದನೆಯು ವೆಚ್ಚ ಕಡಿಮೆಯಾದುದರಿಂದ ಈ ವ್ಯವಹಾರ ಸಾಧ್ಯ. ಈ ಸೌಲಭ್ಯದಿಂದ ವಿದೇಶಿ ಪೇಟೆಯ ಹೊಸ ಕ್ಷೇತ್ರವೊಂದಕ್ಕೆ ಪ್ರವೇಶಿಸುವುದರ ಜತೆಗೆ, ಸಣ್ಣ ಪ್ರಮಾಣದಲ್ಲಿ ರಾಷ್ಟ್ರದ ಆದಾಯವನ್ನು ಹೆಚ್ಚಿಸಲಿದ್ದೇವೆ ಎಂದೂ ಅತ್ತಾವರ ಹೇಳಿದರು.

ಭಾರತದ ತೋಟಗಾರಿಕೆಗೆ ಅತ್ತಾವರರ ಸಂಶೋಧನೆ ಒಂದು ಶುಭಾರಂಭವಾಗಿದೆ. 'ಹೊಸ ಹೊಸ ಕ್ಷೇತ್ರಗಳ ದ್ವಾರಾ ತೆರೆದು, ತೋಟಗಾರಿಕೆಯನ್ನು ಕೈಗಾರಿಕೆಯಾಗಿ ವರ್ತಿಸಲು ಅವಶ್ಯವಾದ ಪ್ರೇರೇಪಣೆ' ಈ ಪ್ರಯತ್ನದಿಂದ ಒದಗುವುದು.

ಅತ್ತಾವರರು ತಮ್ಮ ಪ್ರಯತ್ನಗಳನ್ನು ನಾನಾ ಬಗೆಯ ಪುಷ್ಪ ಕೃಷಿಯ ಹಾಗೂ ತರಕಾರಿಗಳ ಕ್ಷೇತ್ರಕ್ಕೆ ವಿಸ್ತರಿಸಬೇಕೆಂದಿದ್ದಾರೆ. ಭಾರತ ಉಪಖಂಡದ ನಾನಾ ವಾಯುಗುಣದ ಪ್ರದೇಶಗಳಿಗೆ ಪ್ರಯೋಜಕವಾಗಿ ಹೊಂದಿಕೊಳ್ಳಬಲ್ಲ ರೋಗ ನಿರೋಧಕವಾದ ಅಧಿಕೋತ್ಪನ್ನದ, ಬಹು ಕಾಲ ಬಾಳುವ ವಿವಿಧ ಬೀಜಗಳನ್ನು ಸಿದ್ಧಪಡಿಸುವ ಉದ್ದೇಶ ಅವರದಾಗಿದೆ.

ಮನಮೋಹನ್ ಅತ್ತಾವರರು ದಕ್ಷಿಣ ಕನ್ನಡ ಜಿಲ್ಲೆಯವರಿದ್ದು ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾನಿಲಯದ ತೋಟಗಾರಿಕೆ (ಹಾರ್ಟಿಕಲ್ಚರ್) ಯ ಪದವಿಧರರು. ಸಸ್ಯ ವಿಜ್ಞಾನದಲ್ಲಿ ಎಂ. ಎಸ್. ಪದವಿಯನ್ನು ಅಲಂಕಾರಿಕ ತೋಟಗಾರಿಕೆಯಲ್ಲಿ ಪದವಿನಂತರದ ಡಿಪ್ಲೊಮವನ್ನು ಪಶ್ಚಿಮ ಚಿಕಾಗೋದ ಡುವೇಜ್ ಹಾರ್ಟಿಕಲ್ಚರ್ ಸ್ಕೂಲಿನಿಂದ ಪಡೆದಿದ್ದಾರೆ. ಅಮೆರಿಕದಲ್ಲಿಯ ಅಧ್ಯಯನವನ್ನು ಪ್ರಮುಖ ತೋಟಗಾರಿಕೆಯ ಕೈಗಾರಿಕೋದ್ಯಮದ ಸಂಸ್ಥೆಯಾದ ಪಶ್ಚಿಮ ಚಿಕಾಗೋದ ಜಾರ್ಜ್ ಜೆ. ಬಾಲ್ ಕಂಪೆನಿಯ ಆಶ್ರಯದಲ್ಲಿ ನಡೆಸಿದರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.೨ರಷ್ಟು. ಉತ್ತಮ ಪ್ರತಿ:ರೂ.೨ರಷ್ಟುವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಪೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು
ಮುಂಗಡವಾಗಿ ಮಾಡಿ ತರಿಸಿಕೊಳ್ಳಬಹುದು.
—ಪ್ರಕಾಶಕರಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳು, ಕಾರಣ ಮತ್ತು ಪರಿಹಾರ ತೋರಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರಕಾಶಕರು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

నవయుగ

15—12—1966

NAVAY

ಕಥಾ ಪ್ರಪಂಚ

ಮುರುಕು ದೋಣಿ

ಲೇಖಕರು

ಶ್ರೀ ಹಳೆನಾಡು ಸುಬ್ರಾಯ ಭಟ್ಟ, ಜೊನಾಳಿ

ಮುರುಕು ದೋಣಿಯು ನಾವೆಯಲ್ಲಿಯೇ ಶೇಲ ಹೊರಟಿದ್ದಳು ನಾಗಮ್ಮ. ನಾವೆಯೊಡೆದು ಎಂದು ಮುಳುಗುವುದೋ ಎಂಬ ಸಂದೇಹವೇ ವ ನದಲ್ಲುಳಿದಿತ್ತು. ಜೀವನದ ಸುಳಿಯಲ್ಲಿ ಸಿಕ್ಕ ನಾವೆ ಅದೆಷ್ಟೋ ಅಲೆಗಳ ಹೊಡೆತಗಳನ್ನು ತಾಳಿ ಕೊಂಡು ಬಂದಿತ್ತು.

ಆದರೆ ಅದು ದಡ ಸೇರಬಹುದೆಂಬ ಎಣಿಕೆ ಎಂದೋ ಮಾಯವಾಗಿತ್ತು. ಆದರೂ ಬದುಕಬೇಕೆಂಬ ಬಯಕೆಯಿಂದಲೇ ಜೀವನ ಸಾಗರದಲ್ಲಿ ಮುರುಕು ದೋಣಿಯನ್ನೇರಿ ಅಡ್ಡಾಡಿದ್ದನಾಗಿ ಹುಟ್ಟು ಹಾಕುತ್ತಿದ್ದಳು.

ನಾಗಮ್ಮನ ನಾವೆ ಮೊದಲಬಾರಿ ಬಂಡೆಗಪ್ಪಳಿಸಿದಾಗ ಜೀವನದ ಆಸೆಯನ್ನೇ ತೊರೆದು ಕೈಬಿಟ್ಟು ಕುಳಿತಿದ್ದಳು. ಆದರೆ ಅಂದು ಉದರದಲ್ಲಿ ಬೆಳೆಯು ತೊಡಗಿದ್ದ ಕುಡಿಯೊಂದು ಮತ್ತೆ ಬದುಕಬೇಕೆಂಬಾಸೆಗೆ ನಾಂದಿ ಹಾಡಿದ್ದರಿಂದ ಮತ್ತೆ ಮುರುಕು ದೋಣಿಯನ್ನೇ ಸಿಕ್ಕತ್ತ ಒಡಿಸ ತೊಡಗಿದ್ದಳು.

ಮುರುಕು ದೋಣಿ ಒಗ್ಗಾಲಿ ಗಾಡಿಯಂತೆ ಕುಂಟುತ್ತಾ ನಡೆಯಿತು. ಜೀವನದ ಒಂದೊಂದೇ ಮೈಲಿಗಲ್ಲನ್ನು ಎಣಿಕೆ ಮಾಡುತ್ತಾ ಹೋಯಿತು.

ಸಾಗರದ ದಂಡಿಯಲ್ಲಿ ಹೊರಟ ನಾಗಮ್ಮ ಹಿಂದೆ ಯಾರು ಬಂದ ಮೈಲಿಗಲ್ಲನ್ನೇ ಈಗ ಪುನ: ಎಣಿಸ ಹೊರಟಿದ್ದಳು.

ಸುಖದ ದಿನಗಳೆಂದೂ ಮರವೆಯೊಗ ಲಾರವು ಹಾಗೆಯೇ ತುಳಿದು ಬಂದ ದಾರಿ ಮನದಲ್ಲಿ ಮಾಸಿರಲಿಲ್ಲ. ನಾನೆ ಹಿಂದೆ ಹಿಂದೆ ಬಲು ಹಿಂದೆ ಓಡತೊಡಗಿತು.

೦ ೦ ೦ ೦ ೦ ೦ ೦

ಆಗ ನಾಗವ್ಮನಿಗೆ ಬರೇ ಹದಿನಾರು ವರುಷ. ರತಿಯಂತಹ ರೂಪು. ರೂಪಿಗೊಪ್ಪಿದ ದೇಹ. ನಾಗಮ್ಮ ಸುಂದರಿ. ಇದು ಜನರಾಡುವ ಮಾತು.

ಆದರೆ ನಾಗಮ್ಮ ಕಾಡು ಕುಸುಮ. ಯಾರೂ ಕೊಯ್ದು ಮೂಸುವವರಿದ್ದಿಲ್ಲ. ಅರ್ಪಿಸಿಕೊಳ್ಳುವ ದೇವರಿಲ್ಲದ ಫಲಾಗ್ಯ ಕುಸುಮ. ಅದಕ್ಕ ಕಾರಣ ನಾಗಮ್ಮ ಬಾಲ ವಿಧವೆ.

ಅರಳುವ ದೀಪಕ್ಕೊಪ್ಪಿದ ಉಡುಸು ಬಳಿ ಪತ್ತಲು. ಮಂಟ್ಟಿಪ್ಪ ಬೆಳಕಿನಂತೆ ಯಿಂದಲೇ ಕಿರಣ ಹೊರ ಸೂಸುವಂತೆ, ನಾಗಮ್ಮನ ಸೌಂದರ್ಯ ಆ ಪತ್ತಲಿನೆಡೆಯಿಂದಲೇ ಮೇಲೆದ್ದು ಕಾಣುತಿತ್ತು. ನಾಗವ್ಮನ ರೂಪು ಕಂಡ ಯಾರ ಮನಸಿಳೆಯುವದರಲ್ಲಿ ನಾ ಆಶ್ಚರ್ಯವಿದ್ದಿಲ್ಲ.

ತಾನು ವಿಧವೆ ಎಂಬ ಅರಿವು ಅಂದಿನ ವರೆಗೆ ನಾಗಮ್ಮನಿಗಿರಲಿಲ್ಲ. ಆದು ಬಾಳ ನಡವಾಗಿಯೇ ತಿಳಿಯಿತು ತಂಗಿ ಶಾಲಿನಿಗೆ ಗಂಡು ನಿಶ್ಚಯವಾದಾಗಿಲೇ ತನ್ನ ಬಾಳಿ ದೋಣಿ ಮುಳುಗಿತೆಂಬ ಅರಿವಾಗಿ ಕಣ್ಣೀರ ಕಾಲುವೆಯನ್ನೇ ಹರಿಸಿದೆಳು.

ದಿನವೂ ಮೂಕ ವೇದನೆಯನ್ನನುಭವಿಸುತ್ತಾ ಅಣ್ಣ ಅತ್ತಿಗೆಯರ ಭದ್ರಕಾವಲ್ಲಿಯೇ ಶಾಲ ನೂಕುತ್ತಿದ್ದಳು

ಮನಗೆ ಬಂದ ಪರಪುರುಷರಿದುರು ಬಂದಾಗ ಅಣ್ಣನ ಕೆಂಗಣ್ಣು ಒಳ ಹೋಗುವಂತೆ ಸೂಚಿಸಲ್ಪಟ್ಟು. ನೆರೆ ಮನೆಗೆ ಬೇಕರ ಬಳೆಯಲು ಹೊರಟು ನಿಂತಾಗ ಅತ್ತಿಗೆಯ ಅತಂಕ ತಡೆ ಹಿಡಿಯುತಿತ್ತ

ಅಣ್ಣನ ಶಂಗಾತಿ ರಶಿ ಕೆಲಕಾಲ ಹಕ್ಕದ ಮನೆಯಲ್ಲಿಯೇ ವಾಸವಾಗಿದ್ದನು. ಆಗಾಗ ಅವನು ಅಣ್ಣನೂಡನೆ ಹರಟಲು ಬರುತ್ತಿದ್ದನು ದಿನವ ಅವಳೆಯಲ್ಲಿಯೂ ಬಂದು ಹೋಗಲು ಅವನಿಗಾವ ಅತಂಕವೂ ಇರಲಿಲ್ಲ. ಅಣ್ಣ ಅತ್ತಿಗೆಯರು ಹೊರ ಕೆಲಸಕ್ಕ ಹೋದಾಗ ನಾಗಮ್ಮನೊಬ್ಬಳೆ ಮನೆಯಲ್ಲುಳಿಯುತ್ತಿದ್ದಳು.

ದಿನದ ಕಲುಗೆ ಬೆಳೆದಂತೆ ನಾಗಮ್ಮ ಧೈರ್ಯವಾಗಿ ಶಶಿಯನ್ನು ಎದುರಿಸಿಡಲು ಹತ್ತಿದಳು. ಆಗ ಅಣ್ಣ ಅತ್ತಿಗೆಯರು ಇಲ್ಲದಿರುವಾಗ ಅವನು ಬಂದು ಕಂಡು ಬರಲಿಲ್ಲ.

ಇಪ್ಪತ್ತೈದರ ಮೈಲಿಗಲ್ಲನ್ನು ದಾಟಿದ ಶಶಿಗೆ ಸ್ವಾಭಾವಿಕವಾಗಿಯೇ ನಾಗಮ್ಮನ ಅಕ್ಕರೆ ಒಲವು ಹರಿಯತು. ನಾಗಮ್ಮನ ಅಕರ್ಷಣೆ ಮಿಗಿಲಾದಂತೆ ಒಲವಿನ ರಭಸ ಹೆಚ್ಚಾಯಿತು ಆ ರಭಸ ಹೆಚ್ಚಿದಂತೆ ಇಬ್ಬರೂ ಅದರಲ್ಲಿ ಕೊಚ್ಚಿ ಹೋಗ ತೊಡಗಿದರು.

ಶಶಿಯನ್ನು ಕಂಡಾಗ ಅವಳಿಗ ಎಲ್ಲಿಲ್ಲದ ಆನಂದ; ಉತ್ಸಾಹ ಬತತೊಡಗಿತು. ಇಬ್ಬರಿಗ್ಲಯೂ ಅವರಿವಿಲ್ಲದಯೇ ಪ್ರೇಮ ಮೊಳೆಯಿತು.

ಪ್ರೇಮ—

ಪ್ರೇಮವೆಂಬುದು ಸುಮಧುರ ಹಾಗೂ ಕಾರ್ಣನಂದಕರ. ಅದನ್ನು ಅನುಭವಿಸುವಾಗಲಂತೂ ಅಗರಿಂದುಂಟಾಗುವ ಆನಂದ ವರ್ಣನಾತೀತ

ಇಬ್ಬರೂ ಪ್ರೇಮದ ರಸಿಗೆ ಒಲವಿನ ನೀರನ್ನೆರೆಯ ಹೋಟರು. ಪ್ರೇಮದ ರಸಿಗೆ ಒಲವಿನ ನೀರನ್ನೆರೆದಾಗ ಅದ ಬಲಿತು ಮರವಾಗ ತೊಡಗಿತು.

ತನ್ನ ಬಾಳದೋಣಿ ಹಸನಾಗಬಹುದೆಂಬ ಹಿರಿಯಾಸೆ ಆಗ ಮತ್ತೆ ನಾಗಮ್ಮನಲ್ಲಿ ಅಂಕುರಿಸಿತು

ಒಂದುದಿನ ಶಶಿ ಗುಟ್ಟಾಗಿಯೇ ತನ್ನ ಪ್ರೇಮದ ಕಾಣಿಕೆಯನ್ನಿತ್ತನು. ಗರಿಗಳಿಲ್ಲದ ಎರಡು ಮರಿ ಹಕ್ಕಿಗಳು ಪ್ರೇಮ ಸರೋವರದಲ್ಲಿ ಈಜಾಡ ಹೊರಟುವು. ಗುರಿ ಇಲ್ಲದ ನೆಲೆಯುತ್ತ ಸಾಗುತ್ತಲೇ ಇದ್ದುವು.

ಪ್ರೇಮ ಸರೋವರದಲ್ಲಿ ಪ್ರಾಪಂಚಿಕ ಜ್ಞಾನವನ್ನೇ ಮರೆತರು. ಎರಡು ಜೀವಗಳು ಪ್ರೇಮವಾಹಿನಿಯಲ್ಲಿ ಬಿದ್ದು ಕೂಚ್ಚಿ ಹೋಗುವುದನ್ನು ಬೇರಾರೂ ಕಾಣದಾದರು.

ಶಶಿ ಜೀವಕ್ಕಂಟಿದ ಪ್ರಾಣವಾಯುವಿನಂತೇ ಬಗೆದನು. ಹಣ್ಣಿಗಂಟಿದ ಸಿಪ್ಪೆ ಎಂದೇ ಭಾವಿಸಿದಳು. ಪ್ರೇಮ ಸಾಮ್ರಾಜ್ಯದಲ್ಲಿ ಶಶಿ ತನ್ನವನೆಂದೇ ಸಂಪೂರ್ಣ ನಂಬಿ ನಡೆದಳು.

ಸುಂದರವಾದ ನಾವೆ ಸಂತೋಷ ಸಾಗರದಲ್ಲಿ ತೇಲ ಹೊಂಟಿತು. ಮುಂಬರುವ ಬಿರುಗಾಳಿ ಅನುಹುತದ ಅರಿವಿಲ್ಲದೆ ಮುನ್ನಡೆಯಿತು.

ಪ್ರೇಮದ ಹೃವಾಹ ಬಲಿತಾಗ ಎದ್ದುರುಗಡೆ ನೋಡಿದ್ದರೆ ನಿಂತ ಕಪ್ಪು ಬಂಡೆ ಭಕ್ಕನೆ ಗೋಚರಿಸಿತು ಆದರೆ ಆಗಲೇ ನಾಗಮ್ಮನ ಕೈಯಿಂದ ಹುಟ್ಟು ಜಾರಿತ್ತು.

ನಾಗವ್ಮನಿಗೆ ಅನಾಯಕಳು. ಇಡ್ಡ ನೀರಿನಲ್ಲಿ ಕಂಗೆಟ್ಟಿದ್ದಳು. ನಂಬಿ ನಾವೆಯನ್ನೇರಿದ್ದ ಶಶಿ ಮೊಯವಾಗಿದ್ದನು. ಅಣ್ಣ ಅತ್ತಿಗೆಯರು ಮನೆಯಿಂದ ಹೊರ ದೂಡಿದ್ದರು

ಕನಸಿನ ಬಾಳ ಸೋಣಿ ಪ್ರೇಮ ಪ್ರವಾಹದಲ್ಲಿ ಕೂಚ್ಚಿ ಹೋಗಿತ್ತು. ಶಶಿಯ ಪ್ರೇಮದ ನಂಬಿಕೆಯ ನುಡಿಗಳು ಬರಿಯ ಮಾತುಗಳಾಗಿಯೇ ಉಳಿದಿದ್ದುವು.

ಪ್ರೇಮದ ಮಬ್ಬಿನಲ್ಲಿ ಕಾಮನಾಟವಾಡಿದ್ದಳ; ಅದರ ಪ್ರತೀಕ ಆಗಲೇ ಉದರದೊಳಗ ಕುಡಿಯೊಡೆದಿತ್ತು.

ಶಶಿಯ ಪ್ರೇಮ ಈಗ ಬರಿಯ ಭ್ರಮೆ ಸೂಗಾಯ ಕಾಣತೊಡಗಿತು. ಅದು ಪ್ರೇಮವಲ್ಲ. ಪ್ರೇಮದ ಸಮೂಧಿಯೂ ಕಾಮನಾಟದ ಬಗಲ ನೋಟ ಪ್ರೇಮದಲ್ಲಾಸಿ ಹುಟ್ಟಿದ್ದನಷ್ಟೆ.

ಕಗ್ಗಲ್ಲು ಬಂಡೆಗಪ್ಪಳಿಸಿದ ದೋಣಿ ಮುಕ್ಕಾಗಿ ಮುಳುಗಿರಲಿಲ್ಲ. ಅಲೆಗಳ ಹೊಡೆತಕ್ಕೆ ಸಿಕ್ಕತ್ತ ಓಡತೊಡಗಿತು.

ಈಗ ಪ್ರೇಮನಳಿದು ಕಾಮ ತೋರ ತೊಡಗಿತು

ಶಶಿಯ ನುಡಿಗಳೆಲ್ಲವೂ ಬರಿಯ ಕಾಮವಾಗಿ ಕಂಡಿತು

ಕಾಮ—

ಪ್ರೇಮದ ಹಿನ್ನೆಲೆ ಕಾಮವೆಂಬುದು ಆಕೆಗೆ ಎಂದಲು ತಿಳಿದಿರಲಿಲ್ಲ. ಹಾಗೆಂದಾದರೂ ತಿಳಿದಿದ್ದರೆಆ ದಾರಿಯನ್ನೆಂದೂ ತುಳಿಯುತ್ತಿರಲಿಲ್ಲ. ಅನಾಯಕಳಾಗಿ ಬಾಳಿ ಅಲೆಗಳತ್ತ ದೃಷ್ಟಿ ಹರಿಸಿದಾಗ ಕಾಮಣ್ಣಿದುರು ಗೋಚರಿಸಿತು

'ಕಾಮಕ್ಕ ಕಣ್ಣಿಲ್ಲ ಪ್ರೇಮಕ್ಕ ನಯನ ದಲ್ಲಿ' ಯಾರೋ ಎಂದ ಮಾತು ನೆನಪಿಗ ಬಂತು.

ಶಶಿಯಿಂದ ಪಡೆದ ಪ್ರೇಮ ಸೌಧ ಎಂದೋ ಕುಸಿದಿತ್ತು. ಕಣ್ಣಿಲ್ಲದ ಕಾಮ ಕಗ್ಗತ್ತಲಲ್ಲಿ ಅವಳನ್ನು ಏಕಾಂಗಿಯನ್ನಾಗಿ ಮಾಡಿತು.

ಜೀವನದ ದೋಣಿ ಎಂಬುದಲೆಂದು ಬೀಸಿದ ಬಿರುಗಾಳಿ ತನ್ನ ದಾರಿಯನ್ನೇ ಬದಲಿಸಿತು.

ನಾಗಮ್ಮನೀಗ ಬರೀ ಭಿಕ್ಷುಕಿ. ಹೊಟ್ಟೆಯಿಲ್ಲ ಹೊತ್ತ ಹೊರೆಯನ್ನು ಒಂದು ದಿನ ಹಾಳು ಗಾಡಿಯಲ್ಲಿಯೇ ಭೂಮಿ ತಾಯಿಯ ಮಡಿಲಲ್ಲಿಕ್ಕಿದಳು.

ಅನಾಯಕಳಾದ ಅವಳ ಬಾಳ ದೋಣಿಗ ವತ್ತೊಂದು ಅನಾಯಕ ಜೀವ ಅಂಟಿಕೊಂಡಿತು. ಹಣ್ಣು ಜನ್ಮದ ವಲೆಯೇ ತುಂಬಿಸ್ಸರ ತಾಳಿದ ಅವಳಿಗ ಮತ್ತೊಂದು ಯಜ್ಞ ಜೀವ ಹೊರೆಯಾಗಿ ಕಾಣ ತೊಡಗಿತು.

ಕಾಮನಾಟಕ್ಕ ಆಗಲೇ ಕಾಮುಕರ ತಂಡ ಧಾವಿಸಿ ಹತ್ತಿತು. ಹಾರು ಜೆಂಡಿಯ ಒಳಗಡೆ ಎದ್ದ ತೋರುವ ಮೊಂಡ ದಾಸಗೆ ಹಸಿದ ನಾಯಿಗಳು ಬೆಂಬತ್ತಿದ್ದುವು

ಆದರೆ ಮೂಡಿದ ತಪ್ಪನ್ನೇ ಪುನಃ ಮಾಡಲು ಅವಳ ಮನ ಒಪ್ಪದಾಯಿತು. ಕಾಮದ ಕರೆಗೆ ಕಿವಿ ಸರ್ವಥಾಂತ ಬಿಸುಟ್ಟಹತ್ತಿದಳು.

ಆದರೆ ಮಾಗುವಿನ ಮೇಲಿನ ವ್ಯಾಮೆ ಹಬದುಕಬೇಕೆಂಬಾಸೆಗೆ ನೀರೆರೆದ ಕಾರಣ ಮತ್ತೊಮ್ಮ ಹಿಂದಿನ ಪದವನ್ನೇ ಪುಡ ಹೆಜ್ಜೆಯಿಟ್ಟಳು.

ಈಗ ನಾಗಮ್ಮ ಕಾಮನಾಟದ ಬಗ ಎಂಬ. ಅವಳ ಭಕ್ತರ ತಂತ ಹನ್ನಂಮಂತೆ

(ಉನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸೆಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್:77 ಕುಂದಾಪುರ, ದ. ಕ.



ಸಲ್ಲತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

++

ಜಾಹೀರಾತು ದರಗಳು:

ಅಧಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ಕಾಸಿನ ಪ್ರಮೂದ ಹಾಳೆಯ ಒಂದೇ ಮಗ್ಗುಲಲ್ಲಿ ಬರಿಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಿಸಿರಬೇಕು. ಅಧಿಕಾರಿಕ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ಜಮೆ ಮಾಡುವ ಸೌಕರ್ಯವಿರುವುದು.

ಸಂಪುಟ ೪೬ | ಉಡುಪಿ | Vol. 46

ಸಂಚಿಕೆ ೧೬ | ೧೫—೧೨—೧೯೬೬ | No. 16

ಚುನಾವಣೆ — ಕ್ರೀಡೆ

ಪ್ರಪಂಚದಲ್ಲಿಯೇ ಅತಿ ದೊಡ್ಡದಾದ ಪ್ರಜಾಪ್ರಭುತ್ವ ಭಾರತದಲ್ಲಿ ಮುಂದಿನ ಫೆಬ್ರವರಿ ಮಧ್ಯಾವಧಿ ೧೬ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು ನಡೆಯುವು ವೆಂಬುದೀಗ ಖಚಿತವಾಗಿದೆ. ಜನವರಿ ೨೦ನೆಯ ದಿನ ನಾಮಪತ್ರ ಪಲ್ಲಿಸಲು ಕೊನೆಯ ದಿನವೆಂದೂ ತಿಳಿಯುತ್ತದೆ. ಹಿಂದಿನ ಚುನಾವಣೆಗಳನ್ನು ಸವಾಲೋಚಿಸುವುದಾದರೆ, ಈ ಬಾರಿ ಚುನಾವಣಾಗಳಿ ಇನ್ನೂ ಬೇಸ ತೊಡಗಿಲ್ಲವೆಂದೇ ಹೇಳಬೇಕು. ಏಕೆಂದರೆ, ಪ್ರಧಾನ ಪಕ್ಷ ಕಾಂಗ್ರೆಸ್ಸು ತನ್ನ ಅಧಿಕೃತ ಉಮೇದ್ವಾರರು ಯಾರು ಎಂಬುದನ್ನಿನ್ನೂ ಗೊತ್ತು ಮಾಡುತ್ತಲೇ ಇದೆ. ಇದು ಪ್ರಕಟವಾಗ ದೆ ವಿರೋಧಿ ಪಕ್ಷಗಳು ತಮ್ಮ ಹುರಿಯಾಳುಗಳನ್ನು ಆಯ್ಕೆಮಾಡುವುದು ತುಂಬ ಕಷ್ಟವೆನಿಸುತ್ತದೆ. ಅದೇನೇ ಇರಲಿ, ಪಕ್ಷದ ಪ್ರಚಾರ ಕಾರ್ಯ ಮಾತ್ರ ಅಲ್ಲಲ್ಲಿ ಈಗ ಪ್ರಾರಂಭವಾಗಿದೆಯೇ ಹೊರತು ಹುರಿಯಾಳುಗಳ ನೆಲೆಯಲ್ಲಿ ಪ್ರಚಾರವಿನ್ನು ತೊಡಗಬೇಕಷ್ಟೆ. ಇದುವರೆಗೆ ಮೂರು ನಾಲ್ಕು ತಿಂಗಳುಗಳ ಕಾಲ ಚುನಾವಣಾ ಪ್ರಚಾರಕ್ಕೆ ದೊರೆಯುತಿತ್ತು; ಈ ಬಾರಿ ಎರಡು ತಿಂಗಳಿಗೂ ಕಡಿಮೆಯೇ.

ಇದು ನಮ್ಮ ಪ್ರಜಾಪ್ರಭುತ್ವದ ಭದ್ರ ಬುನಾದಿಯನ್ನೇ ತೋರಿಸುತ್ತದ. ಅಮೆರಿಕೆಯ ಜನ ಸಂಖ್ಯೆಗೂ ಮೂರಿದ್ದಾರೆ ನಮ್ಮ ಮತದಾರರು. ಇಷ್ಟ ಮತದಾರರನ್ನು ಗುತ್ತುವಂಗಿ, ನಿರ್ಭಯವಾಗಿ ಚುನಾವಣೆಗಳಲ್ಲಿ ಭಾಗವಹಿಸುವ ವ್ಯತ್ತೊಂದು ದೇಶ ಪ್ರಪಂಚದಲ್ಲಿಲ್ಲ. ಹೇಳಿ ಕೇಳಿ ಅನಕ್ಷರಸ್ಥರು, ಒಲ್ಲ ಮತಿಗರೆಂದು ಹೆಸರು ತಳೆದ ಭಾರತೀಯರ ಚುನಾವಣೆಗಳನ್ನು ಶಾಂತ ರೀತಿಯಿಂದ ನಡೆಸಲಾರರು ಎಂದು ಅನೇಕ ವಿದೇಶೀಯರು ನಂಬಿದ್ದರು. ಆದರೆ, ಅವರ ಈ ನಿಲುಮೆ ಸೂರ್ವಗ್ರಹ ಪೀಡಿತವಾದುದೆಂದು ನಾವು ಸಾರಿ ತೋರಿಸಿದೆವು; ಒಂದಲ್ಲ, ಮೂರು ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿದೆವು. ಇಂದೀಗ ಇನ್ನೂ ಹೆಚ್ಚಿನ ಮತದಾರರಿಂದ ಕೂಡಿ ನಾಲ್ಕನೆಯ ಚುನಾವಣೆಗೆ ಸಿದ್ಧರಾಗುತ್ತೇವೆ. ಇದನ್ನೂ ನಮ್ಮ ಪರಂಪರೆಯಂತೆ ನಿರ್ವಹಿಸುತ್ತೇವೆ. ಚುನಾವಣೆಯ ವೇಳೆ ಚಕಮಕಿಯೇಳುವುದು ಸಹಜ. ಆದರೆ ಎಲ್ಲ ಪಕ್ಷಗಳೂ ರಂಜಕೀಯ ನಡವಳಿಯನ್ನು ತಪ್ಪದ ಅನುಸರಿಸಿದರೆ, ಯಾವ ತೊಂದರೆಯೂ ಆಗದು. ನಮ್ಮ ದೇಶ ಈ ನಡವಳಿಯನ್ನು ಅನುಸರಿಸಿ ಕೊಂಡು ಬಂದಿದೆ; ಈ ಬಾರಿಯೂ ಇನ್ನು ಮುಂದೆಯೂ ಇದನ್ನು ಆಚರಿಸುತ್ತ ಚುನಾವಣೆಗಳು ಸುಗಮವಾಗಿ ನಡೆಯುವುದಕ್ಕೆ ಸೂಕ್ತ ವಾತಾವರಣ ಕಲ್ಪಿಸಬೇಕು. ಪ್ರಜಾಪ್ರಭುತ್ವವು ಭದ್ರವಾಗಿ ಬೇರು ಬಿಡುವುದಕ್ಕೆ ಇದೂ ಒಂದು ಸಾಧನವಾಗುವುದು. ರಾಜಕೀಯಪ್ರಜ್ಞೆಯು ಸಾಗರಿಕರಲ್ಲಿ ಹೆಚ್ಚುವುದಕ್ಕೂ ಇದು ಸಹಾಯಕವೆನಿಸುವುದು. ಚುನಾವಣೆಯಲ್ಲಿ ಗೆಲ್ಲುವುದನ್ನು ಮಾತ್ರವನ್ನಮ್ಮ ಪಕ್ಷಗಳು ಧ್ಯೇಯವಾಗಿರಿಸಿ ಕೊಂಡರೆ ಸಾಲದು; ಚುನಾವಣೆಗಳ ಮಹತ್ವವನ್ನು ಅರಿತು ಜೀವನ್ನು ಅವಗತವಾಡಿಸುವ ಸ್ಥಾನಕ್ಕೆ ತರಬೇಕು ಚುನಾವಣೆಯೊಂದು ಕ್ರೀಡಾಸ್ಪರ್ಧೆ. ಕ್ರೀಡಾಸ್ಪರ್ಧೆಯಲ್ಲಿ ಬರಿಯ ಗೆಲ್ಲುವುದಕ್ಕಾಗಿಯೇ ಭಾಗವಹಿಸುವುದಲ್ಲ; ಕ್ರೀಡಾಪಟುತ್ವವನ್ನು ಬೆಳಸುವುದು; ಕ್ರೀಡೆಗಳಿಗೆ ಸಂಬಂಧಿಸಿದ ನೀತಿ ನಿಯಮಗಳನ್ನು ಅನುಸರಿಸಲು ಕಲಿಯುವುದೂ ಅಷ್ಟೇ ಪ್ರಮುಖವಾದುದು. ನಮ್ಮ ರಾಜಕೀಯ ಪ್ರಜ್ಞೆಯನ್ನು ಉಳಿಸಲು, ಮತ್ತು ಬೆಳಸಲು ಎಲ್ಲ ರಾಜಕೀಯ ಪಕ್ಷಗಳೂ ಪ್ರತಿಜ್ಞೆ ತೊಡಬೇಕು; ಇಲ್ಲಿ ನಡೆಯುವ ಪ್ರತಿಯೊಂದೂ ಅನಾಹುತ ದೇಶದ ಗೌರವಕ್ಕೆ ಕುಂದು ತರುವುದೆಂಬುದನ್ನೂ ಮರೆಯಬಾರದು.

ಬಹುಶಃ ನಮ್ಮ ದೇಶದಲ್ಲಿ ಚುನಾವಣಾ ವೆಚ್ಚವು ಬಹಳ ಹೆಚ್ಚಿನಿಸಿದೆ. ಪಕ್ಷ ಮತ್ತು ಹುರಿಯಾಳುಗಳು ಮಾಡುವ ವೆಚ್ಚ ಹೆಚ್ಚಿನಿಸುತ್ತದೆ—ಇದು ದೊರೆತ ಅಂಕೆ ಸಂಖ್ಯೆಗಳ ಆಧಾರದಲ್ಲಿ. ನಿಜವಾದ ವೆಚ್ಚ ಇದಕ್ಕೂ ಬಹು ದೊಡ್ಡದು. ಈ ಹೆಚ್ಚು ಖರ್ಚು ಮಾಡುವ ಹವ್ಯಾಸಕಾಂಗ್ರೆಸ್ ಒಂದಕ್ಕೆ ಮಾತ್ರವಲ್ಲ, ಎಲ್ಲ ರಾಜಕೀಯ ಪಕ್ಷಗಳಿಗೂ ಅಂಟಿದೆ. ಮತದಾನ ಕ್ಷೇತ್ರದ ವಿಸ್ತಾರ, ಅಲ್ಲಿ ಮುಟ್ಟುವ ಸಾಧನಗಳ ನೆಚ್ಚ ನೆವ್ಯಲ್ಲಿ ಹೆಚ್ಚಿನಸುವ ಹುದಾವರೂ ಅನ್ಯಾನು ಮಾರ್ಗದಲ್ಲಿ ಹರಿಯುವ ಹಣಕ್ಕೂ ಕಡಿವಾಣವಿಲ್ಲ ವೆನ್ನಬೇಕಾಗುತ್ತದೆ. ಚುನಾವಣೆಯೆಂಬುದು ಸಾಮ್ರಾಜ್ಯ ಶಾಹಿ ಎಲ್ಲಿ ನಡೆದ ನಾಟಕದಂತೆಯೇ ವೆಚ್ಚವೂಡಬಲ್ಲವರು ಪರಸ್ಪರ ಆಹಿಂಸಾತ್ಮಕವಾಗಿ ಹೊಡೆದಾಡುವ ಆಟವೆಂಬ ಮಾಧ್ಯಸ್ಥಿಯ ನಮ್ಮಲ್ಲಿ ಮೂಡುವಂತಾಗಿದೆ. ಇನ್ನು ಚುನಾವಣಾ ಪ್ರಚಾರಕ್ಕಾಗಿ ದೇಶದೊಳಗಡೆ ನೂತ್ತವ್ವಲ್ಲ ಹೊರಗಿನಿಂದಲೂ ಹಣ ಪಡೆಯಲಾಗುತ್ತಿದೆಯೆಂಬ ದೂರುಗಳು ಕೇಳಿಬರುತ್ತವೆ. ಇದು ಈ ಮೊದಲೇ ನಡೆದಿರುವುದು ನಿಜವಾದರೆ, ಈ ಬಾರಿ ಇಂತಹ ದುರ್ವ್ಯವಹಾರ ಮತ್ತೂ ಹೆಚ್ಚು ಬಹುದು. ಕೆಂಪುಚೀನೀ ಸರಕಮ್ಯುನಿಸ್ಟರು ಚೀನಾದಿಂದ ಏಪುಲ ನೆರವು ಪಡೆದರೆ ಆಶ್ಚರ್ಯವಿಲ್ಲ. ಹಾಗೆಯೇ ಕಾಶ್ಮೀರವನ್ನು ಕಬಳಿಸಲು ಪಾಕಿಸ್ತಾನ ಪೂ ಸ್ವೀಕರಿಸುವವರು ದೊರೆತರೆ, ಸಹಾಯ ಮಾಡುವುದಿಲ್ಲವೆನ್ನಲಾಗದು ಅದುದರಿಂದ ಇಂತಹ ಹೇಯ ದೇಶ ದ್ರೋಹಿ ನೀತಿಯನ್ನು ನಾವು ಕಡೆಯ ಪಕ್ಷ ಹೋದರೆ, ನಮ್ಮ ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೊಳ್ಳುಂತೆ. ಹೀಗಾಗದಿರಲಿ ಎಂಬುದೇ ಪ್ರತಿ ಭಾರತೀಯನ ಶುಭ ಕಾಮನೆ.

ವಚನ ಸುಧೆ

ಏಕಃ ಪಾಪಾನಿ ಕುರುತೇ
ಫಲಂ ಭುಂಕ್ತೇ ಮಹಾಜನಃ
ಭೋಕ್ತಾರೋ ವಿಪ್ರಮುಚ್ಯಂತೇ
ಕರ್ತಾ ದೋಷೇಣ ಲಿಪ್ಯತೇ||

ಪಾಪವೆಯ್ಮುತ್ತವನೊಬ್ಬ; ಆದರೆ ಕರ್ತ ಫಲ ವುಣ್ಣುತವರು ಅನೇಕರು. ಮುಂದೆ, ಫಲವನ ಬವಿಸಿದರು ದೂರವಾಗುತ್ತಾರೆ; ಮಾಡಿದವನನ್ನು ಮಾತ್ರ ಪಾಪ ಅಂಟಿಕೊಳ್ಳುತ್ತದೆ.

ಬ್ರಿಟನ್ನಿಟ್ಟ ಹೆಜ್ಜೆ

ಕೊನೆಗೂ ಬ್ರಿಟನ್ನು ರೊಡೇಸಿಯಾದ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಬೇಕು ಎಂಬ ಸೂಚನೆಯನ್ನು ಭದ್ರತಾ ಮಂಡಳಿಯಲ್ಲಿ ಮಂಡಿಸಿತು. ಅಲ್ಲಿನ ಆರ್ಥವ್ಯವಸ್ಥೆಯ ಮೂಲಗಳಾದ ೧೨ ಮುಖ್ಯ ಸರಕುಗಳನ್ನು ಅಲ್ಲಿಗೆ ಹೊರಯ್ಸಬಾರದೆಂದೂ ಅದು ಕೇಳಿಕೊಂಡಿತು. ರೊಡೇಸಿಯಾದ ಬಹು ಸಂಖ್ಯಾಕ ಮೂಲ ನಾಗರಿಕರನ್ನು ಮೆಟ್ಟಿ ಅಲ್ಪ ಸಂಖ್ಯಾತ ಬಿಳಿಯರ ನಾಯಕರಾಗಿ ಏಕ ಪಕ್ಷೀಯವಾಗಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಪ್ರಧಾನಿ ಸ್ಮಿತ್ ಮತ್ತು ಅವರ ಸರಕಾರದ ವಿರುದ್ಧ ಬ್ರಿಟನ್ನು ಕೈಗೊಂಡ ಉಗ್ರ ಕ್ರಮವಿದು. ಇಂತಹ ದಿಗ್ಬಂಧನ ರೊಡೇಸಿಯಾದ ಮೇಲೆ ಯಾವ ಪರಿಣಾಮ ಬೀರೀತು? ದಕ್ಷಿಣ ಆಫ್ರಿಕೆಯು ವರ್ಣಭೇದ ನೀತಿಯನ್ನು ಕಟ್ಟೆಕ್ಕೆಗೆಯಲು ನಿರಂಕರಿಸಿದಾಗ, ಅದರ ನೆರೆಯ ರಾಷ್ಟ್ರಗಳೂ ಇಂತಹ ದೇ ದಿಗ್ಬಂಧನ ಹೇರಲಾಯಿತಾದರೂ ಏನು ಪ್ರಯೋಜನವಾಯಿತು? ಕೈಗೊಳ್ಳುವ ಯಾವುದೇ ಕ್ರಮವು ಉಗ್ರವಾಗಿರಬೇಕು. ಒಲ್ಲದ ಮನಸ್ಸಿನ ಕ್ರಮ ನಿರ್ಬಲವಾಗುತ್ತದೆ—ಬ್ರಿಟನ್ನಿನ ಸಲಹೆ ಹಾರ್ದಿಕವಾಗಿರದೆ ಒತ್ತಾಯ ಪೂರ್ವಕ ಲ್ಲವೆಂದು ನಂಬುವುದು ಕಷ್ಟ ಆದುದರಿಂದಲೇ ಈ ಕ್ರಮ ಪರಿಣಾಮಕಾರಿಯಾಗುವ ಸಂಭವವಿಲ್ಲ.

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆ

ದಶಂಬರ್, ತಾ. ೪೦ರಂದು ಸಿಂಡಿಕೇಟ್ ಬ್ಯಾಂಕಿನ ಶಾಖೆಯು 712, ಜಾರಿವಾಡೆ, ನಾರಾಯಣಪೇಟೆ, ಲಕ್ಷ್ಮಿ ರೋಡ್ಕು, ಪೂನ.—೨ ಎಂಬಲ್ಲಿ ತೆರೆಯಲ್ಪಟ್ಟಿತು. ಬೊಂದಾಯಿಯಲ್ಲಿರುವ 5 ಶಾಖೆಗಳನ್ನೊಳಗೊಂಡು ಮಹಾರಾಷ್ಟ್ರದಲ್ಲಿ ಈಗಾಗಲೇ 18 ಶಾಖೆಗಳಿವ್ದು ಪೂನದ ಈ ಶಾಖೆಯು ಮಹಾರಾಷ್ಟ್ರದಲ್ಲಿ 19ನೆ ಮತ್ತು ಬ್ಯಾಂಕಿನ 216 ಶಾಖೆಯಾಗಿದೆ.

ನರಸಣ್ಣನ ನರಸ



"ಚುನಾವಣೆಗೆ ಎಂತೇ ತಿಂಗಳು ಬಾಕಿ, ಯಾರಿಗೆ ಏನು ಬೇಕು, ಎಲ್ಲವನ್ನೂ ಮಾಡುತ್ತೇವೆ ಅಂತ ಹಂಗುರ ಹೊಡೆಯುವುದು.....,

ಲೋಕ ಸಭಾಧ್ಯಕ್ಷ ಸರ್ದಾರ ಹುಕುಂ ಸಿಂಗರು ಬಲ್ಲರಿಯೂದ ಪಾರ್ಲಿಮೆಂಟಿನ ಅಧ್ಯಕ್ಷ ಜಾರ್ಜ್ ಟ್ರಾಯ್ಯೋವರನ್ನು ಇತ್ತೀಚೆಗೆ ಬಲ್ಲರಿಯೂದಲ್ಲಿ ಭೆಟ್ಟಿಯಾದರು.

ಮುಖಪತ್ರದಲ್ಲಿ:

ಗೇಹರಾಚ್ಛದಲ್ಲಿ

ವಸಂತವೆಂದು ಬಂದೀತು ?

"ಅಲ್ರೀ, ಒಮ್ಮೆ ನುಡಿದೀಶೂಂತ ತೃಪ್ತಿಯ ಉಸಿರು ಬಿಟ್ರೆ ಈಗ ಮತ್ತೆ ಆರಂಭ ಮಾಡಿದ್ರಲ್ಲಾ?"

'ಯಾರು?"

"ಮತ್ತೆ ಯಾರು? ಆದೇ ಪಂಜಾಬದ ಸಿಂಗರು...."

'ಸಂತ ಪತ್ತೇಸಿಂಗರು ಅಲ್ವೆ?"

'ಹೌದು....ನೋಡಿ, ಅವರು ತೀಖಿರಿಗಾಗಿ ಪ್ರತ್ಯೇಕ ರಾಜ್ಯಬೇಕು ಎಂದರು; ಅದನ್ನು ಕೊಟ್ಟು ಆದ ಮೇಲೆ ಈಗ ಮತ್ತೆ ಉಪವಾಸ ಆರಂಭಿಸಿದ್ದಾರೆ...."

'ಸರಿಯೇ, ಅದ್ರಲ್ಲಿ ತಪ್ಪೇನು?"

'ತಮ್ಮ ಆಶಯವನ್ನು ಸರಕಾರ ಪೂರಯಿಸಿದ ಮೇಲೆ ಏಕೆ ರಂಪಾಟ?'

"ನೋಡು, ನಿನಗೆ ಇಷ್ಟು ಪ್ರಾಯ ಆದದ್ದೂ ವ್ಯರ್ಥ...."

"ಇಷ್ಟು ಪ್ರಾಯ ಅಂತೆ! ಆಯ್ತು ನನಗೆ ಛಾರಿ...."

"ಅಯ್ಯೋ, ನೀನೀಗ ಮುದುಕೀಂತ ಹೇಳಿದ್ದು ಯಾರು?'

'ಸಾಕು ಬಿಡೀಂದ್ರೆ....ನಾನು ಮುದುಕಿಯೂದ್ರೆ ಏನಂತೆ? ಇನ್ನ್ಯಾರಾದ್ರೂ ತಾಳಿ ಕಟ್ಟೋದು ಬೇಡ ತಾನೆ?"

"ಪಾಪ, ಈಗ ಕಟ್ಟೋರೋ ಒಂದು ತಾಳೀ ಛಾರಾನೇ ಹೊರೋಕೆ ಸಾಧ್ಯವಾಗುತ್ತಿಲ್ಲ....'

'ನಾಕು ಬಿಡೀಂದ್ರೆ...."

'ಎಂಥದು?'

"ಏನೂ ಇಲ್ಲ...."

'ಮತ್ತೆ ಬಿಡೋದೇನು?'

'ಉಪವಾಸ....'

"ಹ್ಞೂಂ...ಎನೋ ಕಾರ್ಯನಿಮಿತ್ತ ಹೊತ್ತು ಹೊತ್ತಿಗೆ ಸರಿಯಾಗಿ ಉಟೋಪಚಾರ ನಡೀಲಿಲ್ಲ ಬಿರೆ ...ಇನ್ಯಾಕೆಲುಪವಾಸ ಮಾಡ್ಬೇಕು?'

'ನೂಡೀ ರಾತ್ರಿ ಕೇಳ್ಬೇಕು...."

'ಎಂಥದೇ ನೀನನ್ನುವುದು?...'

'ಏನು ಇಲ್ಲ ಅಂದೆಲ್ಲಾ'

'ಭಾರೀದೊಡ್ಡ ಪೊಲಿಟೀಷಿಯನ್ ಮಾತಾಡಿದಾಂಗೆ ಎತಾಡ್ತಿಯಲ್ಲ...."

'ಹೇಗೂ ಇಲೆಕ್ಷನ್ನಿಗೆ ನಿಂತುಬಿಡೋಕೆ ಅನುಮತಿ ನೀಡಿದ್ರಲ್ಲಾ...."

'ನೋಡು, ಸಾಧ್ಯವಿದ್ರೆ, ಗೋವೆಇಲೆಕ್ಷನ್ನಿನಲ್ಲಿ ಹೆಸ್ರು ನೋಂದಾಯಿಸ ಬಹುದಿತ್ತು...'

"ಅಲ್ರಿ, ಅಲ್ಲಿ ಯಾವಾಗಾಂತ ಇಲೆಕ್ಷನ್ನು?'

'ಅದು ಇಲೆಕ್ಷನಲ್ಲ...ಪಬ್ಲಿಸಿಟಿ'...'

'ಅಂದ್ರೆ....?'

'ಜನಮತ ಗಣನೆ...'

"ಹ್ಞೂಂ....ಸರಿ, ಮುಂದಿನ ಹದಿನೈದರಂದು ನಡೆಯುತ್ತಂತೆ...."

'ಗೋವಾಮ್ಮಳ ಮದುವೆ ೧೪—೧೫ರಂದು ನಿಶ್ಚಯವಾಗಬಹುದು, ಮತ್ತೆತಾಸು ಸಮಯದಲ್ಲೇ ಮದುವೆಯೂ ನಡೆದು ಬಿಡಬಹುದು.'

'ಬರೋವ್ರು ಯಾರು ಒಬ್ರೆ, ಇಬ್ರೆ?'

'ಗೋವಾಕ್ಕು ತನಗೆ ತನಗೆ ಅಂತ ನುಂಗಿರಿಗ, ಮೈಸೂರಾಗ ಇಬ್ರೂ ಹೇಳ್ತಾನೇ ಇದ್ದಾರೆ. ಆದ್ರೆ ನಾಳದ್ದು ನೋಡೋಕೆ ಬರೋವ ಒಬ್ಬನೇ ನುಂಗಿರಿಗ ಮಾತ್ರ. ಆತ ಬೇಡಾಂತ ವಧು ಹೇಳಿಬಿಟ್ರೆ ಮುಂದೆ ತಂದೆ ಮನೆಯಲ್ಲೇ ಉಳಿಯುತ್ತೆ...."

"ಅದು ಎಲ್ಲಿ ವರೆಗೆ?'

"ಮತ್ತೆ ಕಾಯಕಲ್ಪ ಕುಡಿದು ನುಂಗಿರಿಗ ಗಂಡು ಗಂಡಾಗಿ ಬರೋವರೆಗೆ...'

"ಅಲ್ರಿ, ಮೈಸೂಂಗನನ್ನೂ ಅದೇ ದಿನ ಕರೆಯ ಒಹೆದಿತ್ತಲ್ಲಾ?'

"ಇತ್ತು.."

"ಮತ್ತೇಕೆ ಕರೀಲಿಲ್ಲ?'

"ಯಾಂಗೆ ಗೆಡತ್ತು?"

"ಅದ್ರೂ..."

'ಅಯ್ಯೋ, ನೋಡು ಮೈಸೂರಿಗ ಹೇಳುತ್ತಲೇ ಬಂದಿದ್ದಾನೆ. ಹೆತ್ತು ವರ್ಷಗಳ ಕಾಲ ಗೋವಮ್ಮನ ವಿವಾಹ ಮಾಡದಾರದೂಂತ....'

'ಆದ್ರೆ ಈಗ ವಿವಾಹವಾಗುವ ಅತುರ ಹೆಚ್ಚಿರುವಾಗ...?'

"ಹತ್ತು ವರ್ಷ ಮದುವೆಯಾಗಬಾರದು ಅಂದ್ರು, ಆದರೊಳಗೆ ತಾನು ಮಾಡಿಕೊಳ್ಳಕ್ಕೆ ಸಿದ್ಧನಿಲ್ಲಾಂತ ತನೇ ಅರ್ಥ? ಯಾಗಿರ ವಾಗ ಮೈಸೂರಿಗನನ್ನು ಕರೆಯ ಬೇಕಾದರೂ ಯಾಕೆ?"

'ಅದ್ರೂ ಕರೆದಿದ್ದರೆ ನಪ್ಪನೆ ನಿತ್ತು?'

'ತ್ರಿಮುಖ ಸ್ಪರ್ಧೆ ಹತ ದ್ವಿಮುಖ ಸ್ಪರ್ಧೆಯೇ ಲೇಸು ಅಲ್ಲವೆ?"

"ಅಂದ್ರೆ?' ನುಂಗಿರಿ— ಮೈಸೂರಿಗ ಕೇಂದ್ರಿಗರಲ್ಲಿ ಯಾರ ಬಳಿಯಿರುತ್ತೆ ಎಂದು ಕೀಳುವಾಗ ನುಂಗಿರಿಗನಿಗೆ ಬೆಂಬಲ ಕಡಮೆಯಾದರೂ ಆಗಬಹುದು— ಆದಕ್ಕಾಗಿ ಇಷೂ ಒಂದು ತಂತ್ರ— ಸಂಯುಕ್ತ ಸ್ವಯಂವರ....'

'ಅಯ್ಯೋ, ಕೃಷ್ಣರಾಜ ಒಡಿಬಂದು ಎತ್ತಿ ಹೋದರೆ...'

"ಅದು ವೀರರ ಕಾಲ --ಇದು ನಿರ್ವೀರ್ಯರ ಕಾಲ ಹಂದಿನವರು ನ್ಯಾಯ — ಧರ್ಮ ನೀತಿಗಾಗಿ ಪ್ರಾಣಪಣವಿಟ್ಟು ಹೋರಾಡುತ್ತಿದ್ದರೆ.... ಇಂದಿನವರು...'

'ಏನು ಮಾಡ್ತಾರೆ?'

'ಮಾಡೋದೇನ ? ತಮ್ಮ ಸ್ವಾರ್ಥಸಾಧನೆಗಾಗಿ ನ್ಯಾಯ— ಧರ್ಮ— ನೀತಿಗಳನ್ನು ಗಾಳಿಗೆತೂರಿ ಉಪವಾಸ ಮಾಡ್ತಾರೆ— ಆತ್ಮಾರ್ಪಣೆ—ಬಲಿದಾನಗಳ ಬೆದರಿಕೆ ಹಾಕೆ ತಮ್ಮ ಬೇಳೆ ಬೇಯಿಸೋಕೆ ಹೊರಡ್ತಾರೆ— ಮುಂದೆ ಹಿಂಸೆ—ಅನ್ಯಾಯ—ಅತ್ಯಾಚಾರಗಳಲ್ಲೇ ಮೈಮರೆಯುತ್ತಾರೆ."

'ಹ್ಞೂಂ....ಅದೂ ಹೌದು, ನೋಡಿ .. ಈಗ ಮತ್ತೆ ಸಂತ ಸಿಂಗರು ಯಾಕೆ ಬೆದರಿಕೆ ಹಾಕೋದು?"

"ಯಾಕೆ ಅಂದರೆ? ಅವರ ಇಂಗಿತದಂತೆ ಪಂಜಾಬಿ ರಾಜ್ಯ ದೊರೆಯಿತು. ಆದರೆ, ಮತ್ತೆ ಉಳಿದಿದೆಯಲ್ಲಾ ಸೀಮಾ ವಿವಾದ?'

"ಅಂದರೆ?'

"ಸೀಮೆಯನ್ನು ಗೊತ್ತುನೂಡುವಾಗ ಪಂಜಾಬಿಗಳಿಗೆ ಅನ್ಯಾಯವಾಗಿದೆ. ಚಂಡೀಗಡವು ಕೇಂದ್ರಾಧೀನ ಪ್ರದೇಶವಾಗಿಯೇ ಉಳಿದಿದೆ.... ಹೀಗೆ ಒಳಜೇ, ಎರಡೇ?"

ಅಂದರೆ, ಪ್ರಾಪ್ತ ವಸ್ತುವಿನಿಂದ ತೃಪ್ತಿಯಿಲ್ಲ ಎಂಬಂತಾಯಿತು....."

"ಹೌದು. ಈ ಸಂಬಂಧದಲ್ಲೇ ರಾಜ್ಯಸಭೆಯಲ್ಲಿ ಗೃಹಮಂತ್ರಿ ಚವಾಣರು ಹೇಳಿಕೆ ಸೀಡಿ ಸಮಗ್ರಾವಧಾನಪಡಿಸಬೇಕಾಯಿತು.

'ಈ ಉಪವಾಸ— ಸತ್ಯಾಗ್ರಹ—ಸಂಪುಗಳಿಗೆಲ್ಲಾ ಹೇಳಿಕೆ ನೀಡಲೆಂದೇ ಒಂದು ಪ್ರತ್ಯೇಕ ವಂಶ ಶಾಖೆ ಆರಂಭಿಸಬೇಕಾಗಬಹುದು....'

"ಮತ್ತೆ ಏನು ಮಾಡುವುದು? ಗಮನ ಸೆಳೆಯುವ ಸೂಚನೆಗಳಿಗೆ ಇಂದು ಬೆಲೆಯೆಂಬುದಿಲ್ಲ....'

"ಅದಿಂಲಿ, ಚನವರು ಏನೆಂದರು?'

'ಅನ್ನುವುದೇನು? ಸಂತ ಪತ್ತೇಸಿಂಗರ ಜೀವ ಅತ್ಯಂತ ಬೆಲೆಯುಳ್ಳದು ಎಂದು ಹೊಗಳಿದರು...'

'ಪಾಪ ಉಳಿದವರ, ಜೀವ ಧರ್ಮಕ್ಕೆ ಬರುತ್ತದೆಂತತೋರುತ್ತೆ.."

'ಇವರು ಆತ್ಮ ಸಮರ್ಪಣೆಯ ವಿಚಾರವನ್ನು ಬದಿಗಿಟ್ಟು ತೀಖಿ ಜನಾಂಗದ, ಪಂಜಾಬ ರಾಜ್ಯದ, ದೇಶದ ಸೇವೆಗಾಗಿ ಅದನ್ನು ಬಳಸಬೇಕೆಂದು ಕಳಕಳಿಯಿಂದ ಕೇಳಿಕೊಂಡರು....ಅದಕ್ಕಾಗಿ ಜೀವವನ್ನು ಉಳಿಸಿಕೊಳ್ಳಬೇಕೆಂದರು...'

"ಹ್ಞೂಂ....ಮತ್ತೆ?'

"ಪಕ್ಷೇದ ವ್ಯವಸ್ಥೆಯಲ್ಲಿ ಒಮ್ಮತವಿಲ್ಲ ಬದಲಾವಣೆ ನೂಡಬೇಕಾದರೆ, ಕೇಂದ್ರವು ಸಿದ್ಧವೆಂದು ಭರವಸೆಯನ್ನೂ ಇತ್ತರು ಅವರು...."

"ಅಂದರೆ?"

"ಅಂಬ್ರೀ, ಪಕ್ಷ ಹರಿಯಾನಾ—ಪಂಜಾಬಿ ರಾಜ್ಯಗಳಿಗಾಡರ ರಾಜ್ಯಪಾಲರೂ ಒಬ್ಬರೇ, ಒಂದೇ ಉಚ್ಚ ನ್ಯಾಯಾಲಯ ಎರಡೂ ರಾಜ್ಯಗಳಿಗೂ ಇದೆ. ಇದನ್ನು ಬೇರೆ ಬೇರೆ ನೂಡ ಬೇಕಾದ್ದಿಲ್ಲ ಮೂಡಬಹುದು."

"ಮತ್ತೆ ರಾಜಧಾನಿ?"

'ಆದೂ ಮುಂದೆ ಆಗಬಹುದು..."

'ಚಂಡೀಗಡ ಪಂಜಾಬದಲ್ಲಿ ಲೀನಗೊಳ್ಳುವುದು....."

'ಆದೂ ಕೆಲಗಾಲದ ನಂತರ ಏಕೆ ಆಗಬಾರದು?"

'ಮತ್ತೆ ಸೀಮಾ ವಿವಾದ?"

'ಅದನ್ನೂ ತೀರಿಸಿಬಿಟ್ಟರೆ, ಪಂಜಾಬದ ಹುಲಿಗಳು ಯಾವ ಮೂಂಸ ಜಗಿಯಬೇಕು?'

'ಅಂದರೆ, ಎಲ್ಲಾ ರಮಸ್ಯೆಗಳನ್ನು ಒಂದೇ ಬಾರಿ ತೀರಾ ನಿಶ್ಚಯಾಗಬಾರದು..."

'ಅದೇ ಇಂದಿನ ಮುಖ್ಯ ಪ್ರಶ್ನೆ...'

'ಯಾಕೆ?'

'ಎಲ್ಲವನ್ನೂ ನಿರ್ಣಯಿಸಿದರೆ, ಮುಂದೇನು? ಆಡಕ್ಕೆ ಅಂಶ ಜಂಶನಾಗಿ ಪರಿಹಾರವರ್ಧಕ; ಆಗ ಹೊಸ ಸಮಸ್ಯೆಗಳು ಹುಟ್ಟಿ ಹಳೆಯುವು ಮಾಯವಾಗಿ ಶೂನ್ಯವೇ....ಅದೇ ಶುಭಾದಣಿ...."

'ಹ್ಞೂಂ....ನೀವು ಹೀಗೇ ಅನ್ನಿ....'

ಅಂತೂ ನಿನ್ನನ್ನೂ ನಂತರ ನಾಲಿಗೆ ಸೇರಿಸಿದ್ದಕ್ಕೆ ಧನ್ಯವಾದಗಳು..."

"ನನಗೇನೂ ಧನ್ಯವಾದ ಬೇಕಿಲ್ಲ....'

(ಬಂಭತ್ತನೇ ಪುಟ ನೋಡಿರಿ)

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಳ

ಸುಬ್ರಹ್ಮಣ್ಯ, ದ. ಕ.

ಚಂಪಾ ಷಷ್ಠಿ ಮಹಾ ರಥೋತ್ಸವ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹಾಪೋಷಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವಶಿಸ್ತ ಸಂಸ್ಪದಾಯ ಪ್ರಕಾರ ಇವೇ ಪಂಚಾಂಗ ಸಂವತ್ಸರದ ಕಾರ್ತೀಕ ಬಹುಳ ಗುರುವು ಶುಕ್ರವಾರ ತಾ. 9—12—66ರಿಂದ ಉತ್ಸವವು ಪ್ರಾರಂಭವಾಗಿ ತಾ. 11—12—66ರಲ್ಲಿ ಲಕ್ಷದೀಪೋತ್ಸವ, ತಾ. 16—12—66ರಲ್ಲಿ ಹೂವಿನ ತೇರು ಉತ್ಸವ, ತಾ. 17—12—66ರಲ್ಲಿ ಪಂಡಿಮ ರಥೋತ್ಸವ

ತಾ. 18-12-66ರಲ್ಲಿ **ಚಂಪಾ ಷಷ್ಠಿ ಮಹಾ ರಥೋತ್ಸವ**

ತಾ. 19—12—66ರಲ್ಲಿ ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ವಿ. ಸೂ.— ಕೆರುಷಷ್ಠಿ ಉತ್ಸವವು ತಾ. 16-1-67ಕ್ಕೆ ಜರಗುವುದು.

ಕುಂದಾಪುರ ಮುನ್ಸಿಫ್ ಕೋರ್ಟ್ ನೆಲ್ಲಿ

ನ್ಯಾಲ ನಂಬ್ರ 489/1966

(S. C.)

ತಿಮ್ಮಪ್ಪ ಪೆಜಾರ್ —ವಾದಿ.

ಮತ್ತು

ನುಮಾರಿಯಕೆ ಶೆಟ್ಟಿ ಕೂಡಾ ಪ್ರತಿವಾದಿಗಳು

ತನೇ ಪ್ರತಿವಾದಿಯು ದಿವಂಗತ ಶೆಟ್ಟಿ —ಲಿಂಗಪ್ಪ ಶೆಡ್ತಿ ರ ಮಗಳು. ಕುಂದಾಪುರ ತಾಲೂಕು ಅನೆಗುಳ್ಳಿ ಗ್ರಾಮದಲ್ಲಿರುವ ವಳು—

ವಾದಿಯು 3ನೇ ಪ್ರತಿವಾದಿಯಿಂದ ಬರಬೇಕಾದ ಸಾಲ್ತನವು ಸಂಪತ್ತರದ ಬಾಬ್ತು ತಾ. 2—12—65ರ ಇರಿಸಿನ ಗೇನೆ ಬಾಕಿ ಬಗ್ಗೆ ನೂಡಿದಮೇಲೆ ಕಾಣಿಸಿದ ದಾವೆಯು ತಾ. 7—1—67ಕ್ಕೆ ಅಮ್ಮಿರೆ ತನ್ನಾಗೆ ಯಿಟ್ಟಿರುತ್ತದೆಂತಲೂ ಆ ದಿನ್ನ ಇಗಲು 10 ಗಂಟೆಗೆ ಸದ್ರಿ 3ನೇ ಪ್ರತಿವಾದಿಳು ಹಾಜ್ರಾಗಲಿಕ್ಕೆ ತಪ್ಪಿದ್ರೆ ಸದ್ರಿ ದಾವೆಯು ಮುಂದಿನ ಕಸ್ಟಮು ನಡೆಯುಳಿದಂತಲೂ ಸಹಾ ಈ ಮೂಲಕ ಸದ್ರಿ 3ನೇ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

G. Sanjiva Rao

Vakil for Plff.

ತಾ. 6—12—66, ಕುಂದಾಪುರ.

ಪ್ರಚಲಿತ ಪ್ರಸಂಗ

ಸಂಘಟನೆಯ ಸಂಜೀವಿನಿ- ಶಂಕರ

ಬರೆದವರು

ಶ್ರೀ ಶಿವ ಶಂಕರ

ಶೃಂಗೇರಿಯ ಜಗದ್ಗುರು ಶಂಕರಾಚಾರ್ಯರವರ ಏಳನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಗೌರವ ಸಲ್ಲಿಸಲು ರಾಷ್ಟ್ರಾಧ್ಯಕ್ಷರಾಗಿದ್ದ ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ಅವರು ಸ್ವತಃ ಶೃಂಗೇರಿಗೆ ಹೋಗಿದ್ದರು. ಅಂದು ನೆಂಜಿದ ಶಂಕರ ವಿದ್ಯಾ ಕೇಂದ್ರದವರು ಸತ್ಕಾರ ಸಭೆಗೆ ಏರ್ಪಾಡು ಮಾಡಿದ್ದರು. ಅಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಭಾಷಣ ಮಾಡಿದರು. ಅವರು ಮಾತನಾಡುತ್ತ, ದೇಶವು ಅನುಸರಿಸಲು ಇಚ್ಛಿಸುವ ಆದರ್ಶ ಸಭೆಯು ಆದಿ ಶಂಕರರು ತೋರಿಸಿದ್ದೇ ಇದೆ; ಅವರು ಏಕತೆಗಾಗಿಯೇ ಶ್ರಮಿಸಿದ್ದು, ದೇಶವು ಒಂದೆಂಬುದನ್ನು ತೋರಿಸಿರುವರೆಂದು ಹೇಳಿದರು.

ಶ್ರೀಮತಿ ಇಂದಿರಾ ಗಾಂಧಿಯವರು ಇಂತೆಂದಿರುವದು ತಿಳಿದು ಖಂದೊಡನೆ ರಾಜ್ಯಸಭಾ ಹಾಗೂ ಲೋಕಸಭೆಯಲ್ಲಿರುವ ಕಮ್ಯೂನಿಸ್ಟ್ ಸದಸ್ಯರು ರಾದ್ಧಾಂತ ಗೈದು ಅವರಿಗೆ ಕೀಟಲೆ ಮಾಡಿದರು. ಆಗ ಅವರು ಹಾಗಲ್ಲಾಂದ್ರೆ ಹೀಗಲ್ಲಾಂ ನ್ರು..... ಅಂದರೆಗಳನ್ನು ಮುಂದಕ್ಕೆ ಹಾಕಿದರು. ಅಂತೂ ಪ್ರಧಾನಿಯವರು ಅಲ್ಲಿ ಅಂದು ಆಂತಾಡಿದುದನ್ನು ಅಲ್ಲಗಳೆದಿರುವದಿಲ್ಲ. ಹಾಗಿದ್ದರೂ ಅಂದರೆಗಳನ್ನು ಅಂದಿಯವಾಗ ಅದರು ಧಾವನಾಪರವಶರಾಗಿ ಹಾಗೆ ಹೇಳಿದರೇ, ಅಥವಾ ಇಂದಿನ ಪರಿಸ್ಥಿತಿಗೆ ಪ್ರಯೋಜನಕ್ಕೆ ಬರುವ ಮಾತುಗಳನ್ನಾಡಿರುವರೇ ಎಂಬ ಪ್ರಶ್ನೆ ಬರುತ್ತದೆ.

ಭಾವನಾಪರವಶತೆಯು ವಿಷಯವನ್ನು ಬಿಟ್ಟು ಈ ಮಾತು ಇಂದಿನ ಪರಿಸ್ಥಿತಿಗ ತಕ್ಕದಾಗಿ ಹೇಗಿದೆಂಬುದನ್ನು ನೋಡೋಣ. ಇಂದಿನ ದಾಯುಣ ಪರಿಸ್ಥಿತಿಯಲ್ಲಿ ನಮಗೆ ಆ ಮಾತಿನಲ್ಲಡಗಿರುವ ಗಹನವಾದ ಅರ್ಥ ತಟ್ಟನೆ ಅರ್ಥವಾಗಲಿಕ್ಕಿಲ್ಲ. ಆದಿ ಶಂಕರಾಚಾರ್ಯರ ದಾರಿಯಲ್ಲೇ ಹೋಗುವದೆಂದರೆ ಅವರು ಹೋದಂತೆ ಹೋಗುವದು. ಅವರು ಹುಟ್ಟಿದರು, ಹೆಸರು ಗಳಿಸಿದರು, ಹೋದರು. ಹೌದು, ಹೋಗಲೇಬೇಕು. ಕಾಲಚಕ್ರವನ್ನು ವಿರಿ ನಿಲ್ಲುವ ವರ್ಯಾರು? ಯಮನ ಕರೆಗೆ ಓಗೊಡದವರ್ಯಾರು? ಎಲ್ಲರೂ ನಚಿಕೇತಂತಾಗಲು ಸಾಧ್ಯವೇನು? ಹಾಗಿರುವಾಗ ಹುಟ್ಟಿರುವ ಹಾಗೂ ಹುಟ್ಟುವ ಹುಲುಮಾನವರಲ್ಲೂ ಹೋಗಲೇಬೇಕು. ಇಲ್ಲಿ ನಿಲ್ಲುವವರ್ಯಾರೂ ಇಲ್ಲ. ಎಸ್ಸರ ಬಾಳೂ ನೀರ ಮೇಲಣ ಗುಳ್ಳೆಯೇ! ಅದರಲ್ಲಿ ಆದಿ ಶಂಕರರು ಮುಂ ನಾವುದು ಹಿಂದ ಆಷ್ಟೆ. ಇಂದಿರಾ ಗಾಂಧೀಜಿಯವರು ಅದೇ ಮಾತನ್ನಾಡಿರುವರೇ ನು! ಛೇ! ಛೇ! ದೇಶದ ಪ್ರಧಾನಿ ಇಂತಹ ಮಾತನ್ನಾಡಲಿಕ್ಕಿಲ್ಲ. ಮಂಕಿಗಳನ್ನು ಬೇರೆ ಮಾಡಿಯೋ, ಮಾತ್ರೆಗಳನ್ನು ಬೀರಮಾಡಿಯೋ, ಗರ್ಭ ತಡೆಗಳ ಗರ್ಭ ವನ್ನೇ ಛೇದಿಸಿ ಹುಟ್ಟುವದೇ ಕಷ್ಟ. ಅವೆಲ್ಲವುಗಳ ಕಣ್ಣು ತಪ್ಪಿಸಿಕೊಂಡು ಜನ್ಮ ತಾಳಿದರೂ, ಶೃಂಗಾರವ ವಸ್ತುಗಳಿಗೆ ಬಿಟ್ಟುಬಿಡುವ ಹಾಲೀಯುವ ಸ್ತನವ್ಯಯ ಆಕಾಶದತ್ತ ನೋಡುತ್ತಿವೆಯಲ್ಲದೆ ಶಿಶುವಿನತ್ತ ಇಳಿದು ಬರುವದಿಲ್ಲ. ಮಾತೆಯ ವಾತ್ಸಲ್ಯ ಭರಿತ ಕ್ಷೀರ ಪಾನದಿಂದ ವಂಚಿತವಾಗಿರುವ ಶಿಶುವಿಗೆ ಗೋಮಾತೆಯು ಪವಿತ್ರ ಕ್ಷೀರವನ್ನು ಕೊಡುತ್ತಿದ್ದರೂ ಬದುಕಿರುವ ಯೋಚನೆ ಮಾಡಲೂ ಇಂದು ಸಾಧ್ಯವಿರುವದಿಲ್ಲ. ಸರಕಾರದ ದೈತ್ಯಕಸಾಯಖಾನೆಗಳಿಗೆ ಪೂಜ್ಯಾರ್ಹ ಗೋಮಾತೆಯ ಸಂಖ್ಯೆಯನ್ನು ಪೂಜ್ಯಗೊಳಿಸುವದೇ ಕೆಲಸವಾಗಿರುತ್ತದೆ. ಅಂದಶ್ಯದ್ದೆರು ಅಥವಾ ಮೂಢಜನರು ಕ್ರಿಸ್ತಪೂರ್ವ ಇಪ್ಪತ್ತನೇ ಶತಮಾನದಲ್ಲಿ ಕೊಡುತ್ತಿದ್ದ ನೈಸರ್ಗಿಕ ಹಾಲಿನ ಹಾಡೇ ಬೇಡ, ಆಧುನಿಕ ಅಥವಾ ನವನಾಗರಿಕತೆಯ ಕೆಸ್ತಶಕ ಇಪ್ಪತ್ತನೇ ಶತಮಾನದ ನಾವು ಕೃತಕ ಹಾಲನ್ನಾದರೂ ಕರುಣಾಜನಕ ಕಂದಗಳಿಗೆ ಕೊಡೋಣ ವೆಂದರೆ ರಾಜಕೀಯ ಪಾಂಡ್ಯಾಟದಲ್ಲಿ ಪರವಶರಾಗಿರುವ ರಾಜಕೀಯೋದ್ಯಮಿಗಳಿಗೆ ಧನಸಹಾಯ ಸಲ್ಲಿಸುತ್ತಿರುವ ಹಾಲಿಗೆ ಹುಡಿಯ ಉದ್ಯಮಿಗಳು ಕಾಳಕಂತೆಯು ತೋಳತೆಕ್ಕೆಯಲ್ಲಿ ಸುಖೋಪಭೋಗಗಳಾಗಿರವಾಗ, ಕರುಣಾಜನಕ ಕಂದರ ಆಕ್ರಂದನ ಅವರಿಗೆ ಕೇಳುವದಾದರೂ ಹೇಗೆ? ಹೀಗೆ ಭಾರತಮಾತೆಯ ಮಂಡಿಯನ್ನು ಪಾಕಿಸ್ತಾನಿ ಪಿಶಾಚಿಗಳ ಕೈಗೊಪ್ಪಿಸಿ ಜನ್ಮ ನೀಡುವ ಮಾತೆಯನ್ನು ವಿಚಿತ್ರ ರೀತಿಯ ನವನಾಗರಿಕತೆಯು ನರಕಯಾತನೆಗೊಳಪಡಿಸಿ, ಪೂಜ್ಯಗೋಮಾತೆಯನ್ನು ಕ್ರೂರ ಕಟುಕರ ಕೈಗೆಪ್ಪಿಸಿ ನಾವು ಬದುಕುವ ಭವಿಷ್ಯತ್ತಿನತ್ತ ದೃಷ್ಟಿ ಹಾಯಿಸುವವರಾದರೂ ಹೇಗೆ? ಇವೆಲ್ಲವುಗಳಿಂದ ಪಾರಾಗಿ, ಕೇವಲ ಪಾವನ ಗಂಗಾಜಲ ಹಾಗೂ ವಾಯುದೇವನ ಕೃಪೆಯಿಂದಾಗಿ ಉಳಿಯಬೇಕಾಗಿರುತ್ತದೆ. ಆದಕ್ಕೂ ಈಗೀಗ ಸಂಚಕಾರ ಬರುತ್ತಾ ಇದೆ. ಹೀಗಿರುವಾಗ ಆದಿ ಶಂಕರಾಚಾರ್ಯರು ಹೋಗಿರುವ ದಾರಿಯಲ್ಲಿ ನಾವೆಲ್ಲರೂ ಇಂದು ಹೋಗುತ್ತಿದ್ದೇವೆಂದು ಇಂದಿರಾಜೀ ಹೇಳಿರುವದರಲ್ಲಿ ಆಶ್ಚರ್ಯವೇನೂ ಇಲ್ಲ. ನಾವು ಮಾತ್ರವಲ್ಲ, ಅದರೊಂದಿಗೆ 'ಅಂತ್ಯ' ಶಂಕರ ಕೂಡಾ ಹೋಗಬೇಕಾಗಿಬಂದಿದೆಂಬುದು ಇಂದಿರಾಜೀಯವರ ಇಂಗಿತವೇ ಇದ್ದರೂ ಆಶ್ಚರ್ಯವಿಲ್ಲ. ಪರಿಸ್ಥಿತಿ ಹಾಗಾ ಇದೆ. ಪಾಪ! ಪ್ರಚಲಿತ ಪ್ರಧಾನಿ ಜವರು ಮಾಡುವದಾದರೂ ಏನು? ಹಿಂದಿನ ಪ್ರಧಾನಿಗಳು, ಅವರ ಅನ್ಯೋನ್ಯ ಸಹಚರರೂ ಅಂತಹ ದುಃಸ್ಥಿತಿಗಿಳಿಸಿ ಬಿಟ್ಟಿದ್ದಾರೆ. ಅವರಾದರೋ, ಬಹಳ ಸುಲಭವಾಗಿ ಧೂರ್ತ ಬ್ರಿಟಿಷರ ಬೆಡಗು ಬಿನ್ನಾಣದಾಟದ ಬಲೆಯಲ್ಲಿ ಬಿದ್ದಾರೆ ಇದ್ದಾರೆ. ಆ ಪ್ರಪಾತದಿಂದ ಮೇಲೆ ಬರಲು ಅವರಿಂದ ಸಾಧ್ಯವಾಗದೆ, ಬಾಲ ಕಳೆದುಕೊಂಡ ಪ್ರಾಣಿಯಂತೆ, ಇತರರನ್ನು ಅತ್ತನೇ ಎಳೆದುಕೊಂಡು ಬಿಟ್ಟರು. ಹಾಗಿರುವಾಗ ಪ್ರಧಾನಿಯವರ ಮಾತುಗಳಿಗೆ ಬೇರೆ ಅರ್ಥ ಮಾಡಿಕೊಳ್ಳುವದಾದರೂ ಹೇಗೆ?

ಪಾಕಿಂಡಿಗಳನ್ನು ಸಂಭವಗೊಳಿಸಿ ವೈದಿಕ ವೈಜಯಂತಿಯನ್ನು ದೇಶದ ದಶದಿಕ್ಕುಗಳಲ್ಲೂ ಹಾರಾಡಿಸಿದ ಆ ಮಹಾನ್ ಪುಣ್ಯ ಪುರುಷ— ಜಗದ್ಗುರು ಶಂಕರಾಚಾರ್ಯ! ಭಾರತ ಮಾತೆಯ ಕಾಲಡಿ ಕೇರಳದಲ್ಲಿ ಜನ್ಮತಾಳಿದ ಕಂದ! ಸಂಸಾರದ ಸಕಲ ಬಂಧನಗಳನ್ನು ಬದಿಗೆ ಸಂಸಿ ಬಿಟ್ಟು ಧೀರತನದಿಂದ ಎದ್ದು ನಿಂತ ಧೀಮಂತ ವ್ಯಕ್ತಿ! ಆಚಾರ—ವಿಚಾರ, ಪೂಜಾಪದ್ಧತಿ ಉಡುಗೆ—ತೊಡುಗೆ, ಭಾಷೆ—ಬಳಕೆಗಳಲ್ಲಿ ವೈತ್ಯಾಸ ಕಂಡು ಬಂದರೂ ಈ ಎಲ್ಲಾ ಭಾರತೀಯು ಜನರನ್ನು ಗೋಮಾತೆಯು ನಾವೋಚ್ಚಾರಣೆಯಿಂದ ಪವಿತ್ರವೇ ಒಂದುಗೂಡಿಸಬಹುದೆಂದು ಅರಿತುಕೊಂಡ ಅದ್ವಿತೀಯ ಜನತಾ ಜ್ಞಾನಿ! ಈ ಒಗ್ಗಟ್ಟನ್ನು ಕಾಪಾಡಲಿಕ್ಕಾಗಿ ದೇಶದ ನಾಲ್ದೆಸೆಗಳಲ್ಲಿ ನಾಲ್ಕು ಮಹಾನ್ ಪೀಠಗಳನ್ನು ಸ್ಥಾಪಿಸಿದ ಆ ಭಗವತ್ಪಾದ ಶಂಕರಾಚಾರ್ಯ! ಉತ್ತರದ ತುತ್ಕತುದಿಯಲ್ಲುಳ್ಳ ದೇವಸ್ಥಾನದಲ್ಲಿ ಪೂಜೆ ಮಾಡಲು ದಕ್ಷಿಣದ ತುತ್ಕತುದಿಯಿಂದ ಪೂಜಾರಿಯೆ, ಯೋಗಬೇಕೆಂದು ಏರ್ಪಾಡು ಮಾಡಿದ ಆ ದಿವ್ಯ ಭವಿಷ್ಯತ್ಜ್ಞಾನಿ!.... ಇಂತಹ ಭಗವತ್ಪಾದ ಶಂಕರಾಚಾರ್ಯರನ್ನ ಅನುಸರಿಸಿದೆ ಭಾರತೀಯರು ಇನ್ಯಾರನ್ನು ಅನುಸರಿಸಿಯಾರು?

ಅದರೆ! ಆ ಶಂಕರಾಚಾರ್ಯ— ಬೋಳು ಮುಂಡೆ, ಜುಟ್ಟು, ಚಿಕ್ಕ ದೋತಿ—ಆದೂ ಕಾವಿ, ಕೈಯಲ್ಲಿ ಧ್ವಜ.... ಇವರನ್ನು ನಾವಿರುವರು ವರ್ಷಗಳ ಹಿಂದಿನ ಅಜ್ಞಾನ ಜ್ಞಾನ ಅಲದ ಮರತ್ಯೆ ನಾವು ನೇಣು ಹಾಕಿಕೊಳ್ಳುವದೇ? ನಾವು ಪ್ರಗತಿಶೀಲರಲ್ಲವೇನು? ಆ ಉಂಡಾಡಿ ಶಂಕರನ ಪರಂಪರೆಯವರು ನಾವೆಂದು ಹೇಳಿಕೊಂಡಲ್ಲಿ ರಷ್ಯನರು ನನ್ನನ್ನು ಮುಟ್ಟತಾರೇನು? ವೇದವಾಕ್ಯವೇ ದೇವವಾಕ್ಯವೆಂದಲ್ಲ ಅಮೇರಿಕನ್ನರು ನಮ್ಮನ್ನು ಬಳಿಗೆ ಬರಲು ಬಿಟ್ಟಾರೇ? — ಇದಕ್ಕೆ ನಾವು ಸಿದ್ಧವೇನ.—ಶಂಕರ ಉಂಡಾಡಿಯಲ್ಲ— ಗೌರವಾರ್ಹ ಮಹಾನ್ ವ್ಯಕ್ತಿಯೇ ಸರಿ. ನಮ್ಮದೇಶದ ಗೌರವ ಬಾವುಟವನ್ನು ಬಾನೆತ್ತರಕ್ಕೆ ಹಾರಿಸಿರುವ ಮಹಾಪುರುಷನೇ ಸರಿ. ಇದು ರಾಷ್ಟ್ರೀಯತೆಯ ವಿಷಯ— ಇದನ್ನು ಧೈರ್ಯದಿಂದ ನಾವು ಹೇಳಬಲ್ಲೆವು— ನಮ್ಮ ಪ್ರಧಾನಿಯವರು ಅದನ್ನರಿತೇ ಭಗವತ್ಪಾದ ಶಂಕರರ ಪಥದಲ್ಲಿ ನಾವು ಸಾಗುವೆವೆಂದಿಂಲೇಬೇಕಾದೆ!

ನಾಲ್ಕು ದಿಕ್ಕಿನ ಜಗದ್ಗುರು ಶಂಕರಾಚಾರ್ಯರುಗಳನ್ನು ಗೋಮಾತೆ ಒಂದುಗೂಡಿಸಿದ್ದಾಳೆ. ನೀವೇ ನನ್ನ ನಾಲ್ಕು ಮಾತಾಗ

[ಎಂಟನೇ ಪುಟ ನೋಡಿರಿ]

ವಿಳಾಸದಲ್ಲಿ ವಲಯ ಸಂಖ್ಯೆಯನ್ನು ಬರೆಯಿರಿ

ಕಾಗದಪತ್ರಗಳ ನಿಂಗಡಣೆ ಸುಲಭವಾಗಿ ಶೀಘ್ರವಾಗಿ ಆಗಬೇಕಾದರೆ ನೀವು ಬರೆಯುವ ವಿಳಾಸದಲ್ಲಿ ವಲಯ ಸಂಖ್ಯೆಯನ್ನು ಕಾಣಿಸುವುದು ಅತ್ಯಂತ ಅಗತ್ಯ.

ಅಂಚೆ ಕಚೇರಿಯ ಹೆಸರಿನೊಂದಿಗೆ ಅದರ ವಲಯ ಸಂಖ್ಯೆಯನ್ನು ಬಗೆಯಲು ಮರೆಯಬೇಡಿ.

ನಿಮ್ಮ ಸ್ವಂತ ವಿಳಾಸ ಬರೆಯುವಾಗಲೂ ವಲಯ ಸಂಖ್ಯೆಯನ್ನು ಸೂಚಿಸಿರಿ.



ವಿಳಾಸ ಪೂರ್ಣವಾಗಿರಲು
ವಲಯ ಸಂಖ್ಯೆ ಅಗತ್ಯ

ನಿಮ್ಮ ಸೇವೆ ಉತ್ತಮವಾಗಿ
ಮಾಡಲು ನಮಗೆ ನೆರವಾಗಿರಿ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ

DA-66/473

ಅದ್ವಿತೀಯ ದಾರ್ಶನಿಕ ಗ್ರಂಥ

ಶ್ರೀಕೃಷ್ಣನ ಭಗವದ್ಗೀತೆ

ಬರೆದವರು
ಶ್ರೀ ಸ ನಾರಾಯಣ.

ಭಗವದ್ಗೀತೆ ವಿಶ್ವದ ಶ್ರೇಷ್ಠ ದಾರ್ಶನಿಕ ಗ್ರಂಥಗಳಲ್ಲೊಂದು ಭಾರತೀಯರಿಗೆ ಮಾತ್ರವೇ ಅಲ್ಲದ ಪಶ್ಚಿಮದ ಪಂಡಿತರಿಗೆ, ಜಿಜ್ಞಾಸುಗಳಿಗೆ ಸೂಕ್ತ ಸಮಾಧಾನ—ಜ್ಞಾನ ನೀಡಿದ ಉಗ್ರಗ್ರಂಥ. ವಿಶ್ವ ಮಾನ್ಯತೆಯನ್ನು ಪಡೆದ ಭಾರತೀಯ ಮಹಾಕೃತಿ. ಪಂಚಮ ವೇದವೆಂದು ಪ್ರಸಿದ್ಧವಾದ ಮಹಾಭಾರತದಲ್ಲಿ ಗೀತೆಯ ಉಪನಿಷತ್ತಿನೋಪಾದಿಯಲ್ಲಿ ಸೇರಿದೆ. ಹಿಂದೂಗಳಿಗೆ ಸನಾತನ ಧರ್ಮ ಸಾರ ಸ್ವರೂಪ ತಾಳಿ ವೇದಗಳು ಉಳಿದಿವೆ. ವೇದಗಳ ಸಾರಾಂಶವನ್ನು ಉಪನಿಷತ್ತುಗಳು ಬೆಳಕಿಗೆ ತಂದಿವೆ. ವೇದ ಮತ್ತು ಉಪನಿಷತ್ತುಗಳ ಸಾರ ಸಂಗ್ರಹಕ್ಕೆ 'ಗೀತೆ' ಅರ್ಥಾತ್ ಭಗವದ್ಗೀತೆ. ವಿಶ್ವಕ್ಕೆ ಬೆಳಕು ಬೀರುವ ಶಕ್ತಿ ಈ ಕಿರು ಕೃತಿಗಿದೆ.

ಪಂಚಮ ವೇದವೆಂದು ಪ್ರಸಿದ್ಧವಾದ ಮಹಾಭಾರತದ ಭೀಷ್ಮ ಪರ್ವದಲ್ಲಿ ಕೃಷ್ಣಾರ್ಜುನರಿಗೆ ಪ್ರದೆದ ಸಂಭಾಷಣೆಯೇ ಭಗವದ್ಗೀತೆ. ಸುಮಾರು ೬೫೦ ಶ್ಲೋಕಗಳು ೧೮ ಅಧ್ಯಾಯಗಳಲ್ಲಿ ಅಡಗಿವೆ. ರಣರಂಗದಲ್ಲಿ ತನ್ನವರನ್ನು ಕಂಡು ಕನಿಕರ ಪಟ್ಟು ಬಂಧುಬಾಂಧವರನ್ನು ಕೊಲ್ಲಲಾರೆ. ನನಗೆ ರಾಜ್ಯಾಭಿಷೇಗಳೇನೂ ಬೇಡವೆಂದು ಶಸ್ತ್ರಾಸ್ತ್ರಗಳನ್ನು ನೆಲಕ್ಕೆ ಹಾಕಿ ಕರ್ತವ್ಯ ಭ್ರಷ್ಟನಾಗಲಿದ್ದ ವಾರ್ಥನನ್ನು ಭಗವಾನ್ ಶ್ರೀಕೃಷ್ಣ ತನ್ನ ವೀರವಾಣಿಯಿಂದ ಬೋಧನೆಯಿಂದ ಕರ್ತವ್ಯ ಸಂನನ್ನಾಗಿ ಮಾಡುತ್ತಾನೆ. "ನೀನು ಕ್ಷತ್ರಿಯ. ನೀನು ನಿನ್ನ ನೆಲಕ್ಕಾಗಿ ಯುದ್ಧ ಮಾಡಬೇಕಾದದ್ದು ಧರ್ಮ. ಇಲ್ಲಿ ಹಿಂಸೆ ಅಹಿಂಸೆಗಳ ಚಿಂತೆ ಇಲ್ಲ. ಕರ್ಮವನ್ನು ಚಿಂತಿಸದೆ ನಿನ್ನ ಕರ್ತವ್ಯವನ್ನು ನೀನು ಮಾಡು" ಎಂದು ಬೋಧಿಸುತ್ತಾನೆ. ಭಗವಾನ್ ಶ್ರೀಕೃಷ್ಣ ಬೋಧಿಸಿದುದು ಪಾರ್ಥನೊಬ್ಬನಿಗೇ ಅಲ್ಲ, ಎಲ್ಲ ಕರ್ತವ್ಯ ಭ್ರಷ್ಟರಿಗೂ. ಶ್ರೀಕೃಷ್ಣನದು ವೀರವಾಣಿ ವಿವೇಕ ವಾಣಿ, ವೇದಾಂತ ವಾಣಿ, ಜ್ಞಾನ ವಾಣಿ.

ಭಗವದ್ಗೀತೆಯ ಅರು ಅಧ್ಯಾಯಗಳಲ್ಲಿ ಕರ್ಮಯೋಗ, ಜ್ಞಾನ ಯೋಗ ಮತ್ತು ಭಕ್ತಿಯೋಗದ ಮಹತ್ವವನ್ನು ಶ್ರೀಕೃಷ್ಣ ಸೂಕ್ತ ನಿವರಗಳೊಂದಿಗೆ ವಿವೇಚಿಸಿದ್ದಾನೆ. ಮೋಕ್ಷ ಸಾಧನೆಗೆ – ಭಗವತ್ ಪ್ರಾಪ್ತಿಗೆ, ಭಕ್ತಿ, ಜ್ಞಾನ ಮತ್ತು ಕರ್ಮ ಮಾರ್ಗಗಳು ಮುಖ್ಯವಾದುವು ಎಂಬುದು ಸ್ಪಷ್ಟವಾಗಿದೆ. ಗೀತೆ ವೇದಾಂತ ತತ್ತ್ವೀಪದೇಶ ಮಾಡುವ ಉತ್ತಮ ಕೃತಿ.

ಭಾರತೀಯ ಋಷಿಮುನಿಗಳಿಗೆ ವೇದಾಂತಿಗಳಿಗೆ, ತತ್ತ್ವಜ್ಞಾನಿಗಳಿಗೆ, ದಾರ್ಶನಿಕರಿಗೆ ಬೆಳಕು ಬೀರಿದ ಭವ್ಯ ಜ್ಯೋತಿ ಭಗವದ್ಗೀತೆ. ಎಲ್ಲ ಒಳಿತನ ಸಮಸ್ಯೆಗಳಿಗೂ ಸಂಬಂಧಿಸಿದ ಗ್ರಂಥ, ಮಾರ್ಗದರ್ಶಿ ಸಂಗತಿಗಳ ಪ್ರಸ್ತಾಪಕ್ಕೆಂತಲೂ ತಾತ್ಪರ್ಯ ಸಂಗತಿ— ಸಮಸ್ಯೆಗಳನ್ನೂ ವಿಶೇಷವಾಗಿ ವಿವೇಚಿಸಿದೆ. ಯೋಗ್ಯ ಪರಿಹಾರ ಮಾರ್ಗವೂ ಈ ಕೃತಿಯಲ್ಲಿ ಸೂಚಿಸಲ್ಪಟ್ಟಿದೆ. ಸಾಮಾನ್ಯ ಮಾನವನ ಬಾಳು ಭವ್ಯವಾಗಲು ಸಾಧ್ಯ ಭಗವಂತನನ್ನೂ ಕಾಣಲು ಸಾಧ್ಯ ಮೂರ್ತಿಮಂತನನ್ನು ವಿಶೇಷವಂತನನ್ನಾಗಿ ಮಾಡಲು ಸಾಧ್ಯ ಎಂಬುದನ್ನೂ ಗೀತೆ ನಿರೂಪಿಸುತ್ತದೆ ವ್ಯಕ್ತಿಗು ಮನಸ್ಸಿಗೆ ತಾತ್ವಿಕ ಸಂಗತಿಗಳನ್ನೆವೂ ವೇ ಚಿಂತಿಸಿದರೆ ಭಾರದ. ಪರವರ್ಧಿಕ ಸಂಗತಿಗಳನ್ನು ವಿವೇಚಿಸಲು ಎಂಬುದು ಇಲ್ಲಿಯ ಮುಖ್ಯ ಅಂಶ ಕರ್ತವ್ಯ ನಿಷ್ಠೆಯಿಂದ, ನಿಷ್ಕಾರ್ಥ ಸೇವೆಯಿಂದ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಆತ್ಮ ಕಲ್ಯಾಣಹೊಂದ ಬಹುದು ಎಂಬುದನ್ನು ಗೀತೆ ಸೂಚಿಸುತ್ತದೆ

ಭಗವದ್ಗೀತೆ ನಮ್ಮ ಸಂಪ್ರದಾಯಗಳಿಗೆ ಸೂಕ್ತ ಸಮಾಧಾನವನ್ನು ಮುನ್ನಡೆಗೆ ಮಾರ್ಗದರ್ಶನವನ್ನು ನೀಡತ್ತದೆ. ಗೀತೆಯ ಪ್ರತಿ ಶ್ಲೋಕವೂ ಈ ಸಂಗತಿಗಳ ಬಗ್ಗೆ ಬೆಳಕು ಬೀರುತ್ತದೆ. ಆತ್ಮಸಮರ್ಪಣೆ— ಉದ್ಧಾರ, ಲೋಕಕಲ್ಯಾಣ ಮತ್ತು ಭಗವತ್ಪ್ರಾಪ್ತಿಯ ಬಗ್ಗೆ ಗೀತೆ ರಾಜಮಾರ್ಗವಾಗಿದೆ. ಶಂಕರೂ ಜ್ಞಾನಿಗಳು, ಮತಾಚಾರ್ಯರು, ಗೀತೆಯ ಸಂಗತಿಯನ್ನು ಎತ್ತಿ ಹಿಡಿದಿದ್ದಾರೆ. ಆ ಮೂಲಕ್ಯ ಅದರ ಸತ್ಯವನ್ನು ತೇಜಸ್ಸನ್ನು ಬೆಳಕಿಗೆ ತಂದಿದ್ದಾರೆ.

ಆಚಾರ್ಯ ಶಂಕರ, ರಾಮಾನುಜ, ಮಧ್ವರು ಮತ್ತು ಅನೇಕ ತತ್ವ ಜ್ಞಾನಿಗಳು ಭಗವದ್ಗೀತೆಗೆ ತಮ್ಮದೇ ಆದ ಶೈಲಿಯಲ್ಲಿ ಧರ್ಮ ದೃಷ್ಟಿಯಲ್ಲಿ ಅರ್ಥವಿವರಣೆ ನೀಡಿದ್ದಾರೆ. ಆಚಾರ್ಯ ಶಂಕರ, ರಾಮಾನುಜ ಮತ್ತು ಮಧ್ವರ ಗೀತಾ ಭಾಷ್ಯಗಳು ಇಂದಿಗೂ ಯೋಗ್ಯ ಪ್ರಮಾಣ ಗ್ರಂಥಗಳು.

ಕೆಲವು ಪಂಡಿತರು ಮತ್ತು ವಿಮರ್ಶಕರು "ರಣರಂಗದಲ್ಲಿಯೇ ಕೃಷ್ಣಾರ್ಜುನರಿಗೆ ಆ ಒಗೆಯ ದೀರ್ಘ ಸಂವಾದ ನಡೆದಿರಲಾರದು. ಅವರ ಸಂವಾದ ಚಿಕ್ಕದಿರಬಹುದು. ಅನಂತರ ವೇದವ್ಯಾಸರು ತಮ್ಮ ಮಹಾಭಾರತದ ಭೀಷ್ಮ ಪರ್ವದಲ್ಲಿ ಸಂಕಲಿಸಿ ಪರಿಷ್ಕರಿಸಿ ಮಾಡಿಕೊಟ್ಟಿರಬಹುದು ಎಂದು ಹೇಳಿ ನೀಡಿರುವುದು ಪ್ರಸ್ತುತವಾಗಿದೆ

ಸಂಸ್ಕೃತ ಸಾಹಿತ್ಯ ಕ್ಷೇತ್ರದ ಹೆಸರಾಂತ ಕವಿ ಬಾಣ (ಕ್ರಿ ಶ. 9ನೆಯ ಶತಮಾನ) ಮತ್ತು ವಿಖ್ಯಾತ ಶಬ್ದಜ್ಞಾನಿ, ಅದ್ವೈತ ಧರ್ಮಪ್ರತಿಪಾದಕ ಆಚಾರ್ಯ ಶಂಕರ (ಕ್ರಿ ಶ. ೮ನೆಯ ಶತಮಾನ) ಭಗವದ್ಗೀತೆ ಕೃಷ್ಣನಿಗೆ ಅನ್ಯ ಗೀತೆವ ತ್ತು ಸರಾಣದ ಶ್ರೇಷ್ಠ ಬಾಗ ಎಂದು ನಿರೂಪಿಸಿದ್ದಾರೆ. ಜಿಜ್ಞಾಸಿಕ ಸಂಶೋಧಕರು ಮತ್ತು ಪಂಡಿತರು ಭಗವದ್ಗೀತೆಯ ಕೆಲವು ಭಾಗಕ್ಕೆ, ಪ್ರೂಳಅರ್ಥವ ೩ನೆಯ ಶತಮಾನದಲ್ಲಿ ಬರೆದಿರಬಹುದು ಎಂದು ಸಂಕರ ಕ್ರಿ ಶ. ೨ನೆಯ ಶತಮಾನದಲ್ಲಿ ಮಹಾಭಾರತದ ಕಥೆಯಲ್ಲಿ ಸಂಗ್ರಹಿತವಾಗಿರಬಹುದು ಎಂದ ಅಭಿಪ್ರಾಯ ಪಡುತ್ತಾರೆ ಸಂಶೋಧಕರು, ದರ್ಶನಿಕರು ಪಂಡಿತರು ಅಭಿಪ್ರಾಯ ಏನೇ ಇರಲಿ ಭಗವದ್ಗೀತೆ ಶ್ರೇಷ್ಠ ಜ್ಞಾನ ಭೋದನಾ ಗ್ರಂಥ ವೇದಾಂತ ರಹಸ್ಯವನ್ನು ಪ್ರಚಾರ ಮಾಡುವ ಮುಖ್ಯ ಕೃತಿ ಎಂಬುದು ನಿರ್ವಿವಾದದ್ದು.

ಭಗವದ್ಗೀತೆ ಕೇವಲ ಒಂದು ರಾಷ್ಟ್ರ ಒಂದು ಮತ, ಒಂದು ಜಾತಿ, ಒಂದು ಧರ್ಮಕ್ಕೆ, ಒಂದು ಒನಂಗಕ್ಕೆ ಮಾತ್ರವೇ ಏಕೆ ಲಂದ ಗ್ರಂಥವಲ್ಲ, ಅದರ ಎತ್ತರ, ಒತ್ತರ, ಮಹತ್ತರಗಳನ್ನು ಅಳೆಯುವುದು ಅನಾವಶ್ಯ. ಇದ ದೇಶ-ಕಾಲಗಳ ಪರಿಮಿತಿಗೆ ಒಳಪಡದ ಸೇವಾತೀತ ವಿಶ್ವಮಾನ್ಯ ವೇದಾಂತ ಗ್ರಂಥ, ಸನಾತನ ಧರ್ಮ ಸಂಪ್ರದಾಯಾನುಯಾಯಿಗಳಾದ ಭಾರತೀಯ ಜ್ಞಾನಿಗಳು, ಪಂಡಿತರು, ವಿದ್ವಾಂಸರು, ಪ್ರಶಂಸೆಗೆ, ಆದರ ಅಭಿಮಾನಗಳಿಗೆ ಪಾತ್ರವೇ ಒಳಪಡದೆ ಮ್ಯಾಕ್ ಮುಲ್ಲರ್, ರಥೆಲ್, ಕೇತ್, ಮೂಕ್ಕೆ— ನಾಲ್ಕೈದು ನೊದಲಾದ ವಿಶ್ವ ವಿಖ್ಯಾತ ದಾರ್ಶನಿಕರ ಪ್ರಶಂಶೆಗೆ ಪಾತ್ರವಾಗಿ ಕೀರ್ತಿ ಪಡೆದು ವೆಂದಿದೆ ಪಶ್ಚಿಮರಾಷ್ಟ್ರಗಳಲ್ಲೆ ಸಂಚರಿಸಿ ತಮ್ಮ ವೇದಾಂತವಾಣಿಯಿಂದ ಭಗವದ್ಗೀತೆಯ ಶ್ಲೋಕಗಳ ಅರ್ಥನಿರೂಪಣೆಯಿಂದ ಗೀತೆಗೆ ಶ್ರೇಷ್ಠ ಯೋಗ್ಯ ಸ್ಥಾನಗಳಿಸಿಕೊಟ್ಟ ಕೀರ್ತಿ ವಿಶ್ವವಿಖ್ಯಾತ ವೇದಾಂತ ಕೇಸರಿ ವಿವೇಕಾನಂದರಿಗೆ ಸಲ್ಲುತ್ತದೆ.

ಭಗವದ್ಗೀತೆ ವಿಶ್ವದಲ್ಲಿ ಲಿಪಿ ಇರುವ ಎಲ್ಲ ಭಾಷೆಗಳಿಗೂ ಭಾಷಾಂತರಿಸಲ್ಪಟ್ಟಿದೆ. ವೇದ ಂತ (ತತ್ವಜ್ಞಾನ) ಸಾಹಿತ್ಯದಲ್ಲಿ ಇರುವ ವಿಶ್ವ ವಿಖ್ಯಾತ ಶ್ರೇಷ್ಠಪೂರ್ಣ ಗ್ರಂಥವೆಂಬ ಪ್ರಶಸ್ತಿಗೂ ಪಾತ್ರವಾಗಿರುವ ಈ ಗೀತೆಯ ಪ್ರತಿಭಾವಂತ ಪಂಡಿತರು ವ್ಯಾಖ್ಯಾನಿಸಿದ ಸಂಗತಿಗಳನ್ನು ಸ್ವಾಗತಿಸಲಾಗುವುದು. ಅನ ಮೀಮಾಂಸಿಸಲಾಗುವುದು ಸ್ವಾರಣೀಯ ಸಂಗತಿ.

ನಿನ್ನೆ ಇಂದು ನಾಳೆ ಎಂಬ ಭೇದವಿಲ್ಲದೆ ಭಗವದ್ಗೀತೆ ಮಾನವ ಜನಾಂಗದ ನೋವಿಗೆ ತನ್ನ ವಿಚಾರ ಪೂರ್ಣ ಸಂಗತಿಗಳ ಬೆಳಕನ್ನು ಬೀರುತ್ತಿದೆ. ವಿಜ್ಞಾನದ ಸ್ಫೂರ್ತಿಯ ಬಲದಿಂದ ಲೋಕವನ್ನೇ 'ಕಕ್ಷೆಯೋಪಗ' ತೆಗೆದು ಕೊಳ್ಳುತ್ತೇನೆ ಎಂದು ಹೇಳುವ ಜನ ಸಮುದಾಯಕ್ಕೆ ಈ ವೇದಾಂತ ಸ್ಫೂರ್ತಿಯಾಗಲಾರದು.



ಅಪೊಲೊ ಹಾರಾಟದ ಗಗನ ಯಾತ್ರಿಗಳು ತರಬೇತಿ ಪಡೆಯುತ್ತಿದ್ದಾರೆ. ಎಡದಿಂದ ಬಲಕ್ಕೆ— ಏರ್‌ಜಿಲ್ಗ್ರಿಸಮ್ ರೋಗರ್ ಚಾಫೆ ಪಕ್ಕ ಎಡ್ವರ್ಡ್ ವೈಟ್. ಗ್ರಿಸಮ ಮತ್ತು ವೈಟ್ ಜೆಮಿನಿ ಹಾರಾಟದಲ್ಲಿ ಭಾಗವಹಿಸಿದವರು. ಗ್ರಿಸಮ್‌ರವರು ಮರ್ಕ್ಯರಿ ಯೋಜನೆಯಲ್ಲೂ ಯಶಸ್ಸಿಗಳಿಸಿದ್ದರು. ಅಪೊಲೊ ಹಾರಾಟ ಮುಂದಿನ ವರ್ಷದ ಅರಂಭದಲ್ಲಿ ನಡೆಯಲಿದೆ.

ಹತ್ತರ ಮೇಲೆ ಹನ್ನೊಂದನೆಯ ಪಕ್ಷ

ದಶಂಬರ ೩.

ಹೊಸ ದಿಲ್ಲಿಯಲ್ಲಿಂದು ಹೊಸ ಘಟನೆ

ಒಂದು ಹೊಸ ಅಖಿಲ ಭಾರತೀಯ ರಂಜಕೀಯ ಪಕ್ಷ ಕೆಲವು ಜನ್ಮವಿತ್ತರು—ಇದರ ಹೆಸರೇ ಜನ ಕಾಂಗ್ರೆಸ್.

ಒಂದು ಪ್ರಶ್ನೆಯೊಂದು ದೇಶದಲ್ಲಿ ಚರ್ಚೆಯಾಗಲಿದೆಯೆಂದು ಕೆಂದಂತಿ ಹಬ್ಬಹ ಸಮಾಚಾರವಾಯ್ತು— ಅಂದರೆ ಇದು ಪರ್ವತ ಪ್ರದೇಶದಿಂದ ಬೇರೆ ಬೇಕೇನು?

ಸ್ವತಂತ್ರ ಭಾರತೀಯ ಕಾಂಗ್ರೆಸಿಗರ ಪ್ರತಿನಿಧಿಗಳು ಜನ್ಮೋತ್ಸವದಲ್ಲಿ ಭಾಗವಹಿಸುವರೆಂಬ ವಿರೀಕ್ಷೆಯಿದ್ದರೂ ಒಡಿಸ್ಸ, ಬಂಗಾಳ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ ಮೊದಲಾದ ಹತ್ತು ರಾಜ್ಯಗಳ ಪ್ರತಿನಿಧಿಗಳು ಮಾತ್ರ ಬಂದಿದ್ದರು.

ಮೊತ್ತ ಮೊದಲ ಬಾರಿಗೆ ಕಾಂಗ್ರೆಸ್ಸಿನಿಂದ ಸಿಡಿದು ಹೊರಬಂದು ಪ್ರಜಾಸಮಾಜವನ್ನು ಹುಟ್ಟಿಹಾಕಿದ ಆಚಾರ್ಯ ಜೆ. ಬಿ. ಕೃಪಲಾನಿಯವರು ಸಾಯ್ಸಿಲ್ಲಗೆ ಇಂದು ಪಕ್ಷ ಬಿಟ್ಟಿದರೆ—ತಾನು ಹುಟ್ಟು ಪಕ್ಷವನ್ನೇ ತೊರೆದು ಸ್ವತಂತ್ರವಾಗಿ ಸ್ಪರ್ಧಿಸಿ ಎರಡು ಕಲಾಸಿನಿಂದ ಆಕ್ಷತೀರಿಗಾದ್ದರ(?)

ಹೊಸ ಪಕ್ಷದಲ್ಲಿ ಮುಖ್ಯ ಮುಖ್ಯ ತಲೆಗಳು ಸೇರಿಕೊಂಡವ—

ಕೇಂದ್ರದಲ್ಲಿ ಬಹುಕಾಲ ಮಂತ್ರಿಯಾಗಿದ್ದು ಶ್ರೀಮತಿ ಇಂದಿರಾ ಗಾಂಧಿಯವರ ಸಂಪುಟದಿಂದ ಉರುಳಿ ಹೋದ ಪ್ರೋ. ಹುಮಾಯೂನ್ ಕಬೀರೊಬ್ಬರು. ಒಡಿಸ್ಸದಲ್ಲಿ ಬಿದ್ದೂ ಎದ್ದೂ ಮಂತ್ರಿ ಮಂಡಲ ರಚಿಸಿಕೊಂಡ ಬಂದಿದ್ದ ಮುಜಿ ಮುಖ್ಯಮಂತ್ರಿ ಡಾ। ಹಂಕೃಷ್ಣ ಮೆಹತಾಬರೂ ಈ ತಂಡ್ಡಿಬ್ಬರು.

ಕೇರಳದ ಭಿನ್ನಾಭಿಪ್ರಾಯಿಗಳ ನಾಯಕ ಶ್ರೀ ಕೆ. ಎಂ. ಜಾರ್ಜ್, ಪಂಜಾಬ್ ಪ್ರದೇಶದ ಸಂತ ಫತೆ ಸಿಂಗ್ ಒಬ್ಬರೆಂಬಲಂ... ಹೀಗೆ ಹಲವು ಬಾರಿ ಮುಂದಿ ನಾಂಗಳ ಸಮ್ಮೇಳನದಲ್ಲಿ ಸಾರಲಾಯಿತು. ಹೊಸ ಪಕ್ಷವನ್ನು ರಚಿಸುವ ಸರ್ಜಾಸುವನ್ನು

ಆದ ಹೀಗೆ ಅ—

"ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೇಂದ್ರ ಮಂತ್ರಿ ಮಂಡಲವು ತೆಗೆದುಕೊಂಡಿದ್ದ ಹಲವಾರು ನಿರ್ಧಾರಗಳು ಜನತೆಯ ಹಿತಾಸಕ್ತಿಗಳಿಗೆ ವಿರುದ್ಧವಾಗಿದ್ದವು. ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮಗಳು ಹೆಚ್ಚಿದ್ದವು. ಈ ಪರಿಸ್ಥಿತಿಯನ್ನು ಎದುರಿಸಲು ಮತ್ತು ಜನತೆಯ ಹಿತಾಸಕ್ತಿಗಳನ್ನು ರಕ್ಷಿಸಲು ಕಾಂಗ್ರೆಸ್ ಪಕ್ಷವು ಅಶಕ್ತವಾಗಿದೆ. ಆದುದರಿಂದ ಜನ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಲಾಗಿದೆ.

ಪಕ್ಷವೇನೋ ಹುಟ್ಟಿದರೂ ಆದಕ್ಕೆ ಕಂವಿಧಾನವಿಲ್ಲ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಇದು ಚಟುವಟಿಕೆಗಳನ್ನು ಬೇರೆಬೇರೆ ರಾಜ್ಯಗಳು ಬೇರೆ ಬೇರೆ ಪಕ್ಷಗಳೊಡನೆ ಹೊಂದಾಣಿಕೆಗಳನ್ನು ಬೇಕಾದಂತೆ ಮಾಡಿಕೊಳ್ಳಲು ಸ್ವತಂತ್ರವಿದೆ

—ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವಂತೆಯೇ ಜನಕಾಂಗ್ರೆಸ್ಸಿನ ಕಾರ್ಯಕರ್ತರಲ್ಲಿ ಉತ್ಸಾಹ ಪ್ರಾರಂಭವಾಗಿದೆ. ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಪಕ್ಷಾಂತರ ಸಂವಿಧಾನ ರಚನೆಗೊಳ್ಳುತ್ತಿದೆ.

ಹತ್ತಾರು ಪಕ್ಷಗಳನ್ನು ಹೊತ್ತು ಬಾರತಾಂಬೆ ಈ ಪಕ್ಷವನ್ನೂ ಹೊರಲಿರುವಳೆ?

ಜನ ಕಾಂಗ್ರೆಸ್ಸಿನ ಆಶಯವೇನು?

—ಒಳ್ಳೆಯ ಆಡಳಿತವನ್ನು ಸಹಕಾರ ಸಂಘಗಳು ಮತ್ತು ಜಾಯಿಂಟ್ ಸ್ಟಾಕ್ ಕಂಪೆನಿಗಳಿಗೆ ವಹಿಸಿಕೊಟ್ಟು, ಹಾಗೂ ಸರಕಾರಿಯದ್ದಾಗಿ ನಡೆಸಿ ಐದು ವರುಷಗಳಲ್ಲಿ ಆರ್ಥಿಕ ಸ್ವಾವಲಂಬನೆಯ ಸಾಧನೆ.

ಖಾಸಗಿ ಮತ್ತು ಸರಕಾರಿರಂಗಗಳೆರಡಕ್ಕೂ ಅವಕಾಶವಿರುವಂತಹ ಸಮ್ಮಿಶ್ರ ಔದ್ಯಮಿಕ ಧೋರಣೆಯನ್ನು ಅನುಸರಿಸುವುದು ಉದ್ದಿಮೆಗಳು ಎಲ್ಲ ಮಟ್ಟಗಳಲ್ಲಿಯೂ ಪರಸ್ಪರರಲ್ಲಿ ಸ್ಪರ್ಧೆಗೆ ಅವಕಾಶ ಕೊಡುವುದು ಮೂಲ ಉದ್ದಿಮೆಗಳನ್ನು ರಾಷ್ಟ್ರದ ನಿರ್ಬಂಧದಲ್ಲಿ ಇರಿಸುತ್ತದೆ. ಹೀಗಿದ್ದರೂ ಏಕ ಸ್ವಾಮ್ಯಕ್ಕೆ ಜನಕಾಂಗ್ರೆಸ್ ವಿರೋಧಿ.

ವಧ್ಯವ, ಚಿಕ್ಕ ಮತ್ತು ಗೃಹ ಕೈಗಾರಿಕೆಗಳ ಪಾತ್ರ ಹೆಚ್ಚುವಂತೆ ರಾಷ್ಟ್ರೀಯ ಯೋಜನೆಗಳನ್ನು ಪುನರ್ಘಟಿಸುತ್ತದೆ

ರಾಷ್ಟ್ರೀಯ ಹಿತವನ್ನು ಹೆಚ್ಚಿಸಲು, ಅಲ್ಪಸಂಖ್ಯಾಕರ, ಪರಿಶಿಷ್ಟ ವರ್ಗದವರ ಹಿತ ಸಂರಕ್ಷಿಸಲು ಜನ ಕಾಂಗ್ರೆಸ್ ವಚನ ಬದ್ಧವಾಗಿದೆ

—ಈ ಉದ್ದೇಶಗಳಲ್ಲಿ ಹೆಚ್ಚಿನವೇನು ಕಾಂಗ್ರೆಸ್ಸು ಘೋಷಿಸಿದ, ಅನುಸರಿಸುವ ನೀತಿಗಳಿಗೂ ಈಯೆಲ್ಲಾ ಪೋಷಣೆಗಳಿಗೂ ಪರಸ್ಪರ ಹೊಂದಾಣಿಕೆ ತುಂಬವಿದ.—ಅಂದರೆ, ಇದು ಬಹುತೇಕ ಕಾಂಗ್ರೆಸ್ ಪಕ್ಷದ ನೀತಿನಿಲುಮೆಯಿಟ್ಟೇ ಹೊಂದಿದೆ—

ಅದುದರಿಂದಲೇ ಹೆಸರಿಟ್ಟುಕೊಂಡಿರಬೇಕು—ಜನಕಾಂಗ್ರೆಸ್ ..



ಗಣ್ಯರ ಆರಂಭದಲ್ಲಿ ನಡೆಯಲಿರುವ ಮಾನವಜಾಲಿಕ ಎಪೊಲೊ ಹಾರಾಟ-ಲ್ಲಿ ತೊಡಗುವ ಯಾತ್ರಿಗಳು ವೈದ್ಯಕೀಯ ಕೊಟ್ಟಿಯಲ್ಲಿ ತರಬೇತಿ ಪಡೆಯುತಿದ್ದಾರೆ



ಮಂಡಿಂತರ ಟೆಲಿವಿಜನ್ ಮತ್ತು ಟೆಲಿಫೋನ್ ಸಂಪರ್ಕ ಬೆಳೆಸುವ ಬಗ್ಗೆ ಪಂಚಿಲನೆಗೆ ತೊಡಗುವ ಎರಡು ಉಪಗ್ರಹಗಳು

ಕಾಂಗ್ರೆಸ್ಸಿಂದ ಬಂಗಲಾ ಕಾಂಗ್ರೆಸ್ ಕೇರಳ ಕಾಂಗ್ರೆಸ್ ಮೊದಲ ದುರಂಗಳು, ಹುಟ್ಟಿದುದು—ಜನ ಕಾಂಗ್ರೆಸ್ ಉದಯ ದೊಡನೆ ಈ ಮರಿಕಾಂಗ್ರೆಸ್‌ಗಳು ಜನ ಕಾಂಗ್ರೆಸ್‌ನಲ್ಲಿ ಒಂದಾದರೂ ಆಗಬಹುದು.

ಸರಿಯಾಗಿ ನಡೆದರೆ ಪ್ರಬಲ ಒಬಿಲ ಭಾರತೀಯ ಪಕ್ಷವೊಂದಿಗೆ ಎನ್ನಬಹುದು—

ಆದರೆ, ಒಂದು ರಂಗಕ್ಕೆ—ಇಂಥಾ ಹುಟ್ಟಿದ ಜನಕಾಂಗ್ರೆಸ್ ಬಿನ್ನಾಭಿಪ್ರಾಯಗಳಿಗೆ ಕಾರಣಂಶ. ಒಬ್ಬೊಬ್ಬ ಒಂದಾದರಿಂದ ಕಾರಣದಿಂದ ಕಾಂಗ್ರೆಸ್ಸನೊಡನೆ ಹೆಣೆದಾಡಿದವರಿಂದಲೂ ಅಧಿಕಾರಿಂದ ಎಗ್ಗಿನ ಡೆದ ಹೋರಾಟವೇ ಮುಖ್ಯ. ಈ ಭಿನ್ನಾಭಿಪ್ರಾಯದ ಒಂದು ಗಿಡುವಿದ ಸಾಧ್ಯವೆ?

ಅಧಿಕಾರ ಸ್ವೀಕರಿಸುವಂತಹ ಪರಿಸ್ಥಿತಿ ತಲೆದೋರುವ ವರೆಗೆ ಹೇಗಾದರೂ ನಡೆದೀತು, ಮುಂದೆ?

ಹತ್ತು ಕಳ್ಳರು ಗೂಟು ಕದ್ದುಕೊಂಡು ಅದನ್ನು ಹಂಚಿಕೊಳ್ಳಲಾಗದೆ ಹೊಡೆದಾಡಿಕೊಂಡಂತೆ ಆದೀತೆ?

ಕಾದು ನೋಡಬೇಕಷ್ಟೆ.

ಸೃಷ್ಟಿಕರ್ತನ ಸಂದೇಶ

ಸರಕಾರವನ್ನು ತೆಗೆಯುವ ಅಧಿಕಾರವು ತರಗತಿ ಮತ್ತು ಪ್ರತಿನಿಧಿಗಳು ಸಂವಿಧಾನಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಮಾಡುವುದಕ್ಕಾಗಿ ಸಂಸತ್ತಿನ ಅಧಿವೇಶನವನ್ನು ಕರೆಯಲು ಅಧ್ಯಕ್ಷರಿಗೆ ಅಧಿಕಾರವಿದೆ. ಅಧ್ಯಕ್ಷರು ಸಂವಿಧಾನದ ಪ್ರಕಾರ ಕಾರ್ಯ ನಿರ್ವಹಿಸಲು ಅಸಮರ್ಥರಾಗಿದ್ದಾರೆ ಎಂದು ಸಂಸತ್ತಿನ ಎರಡು ಸದನಗಳು ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ಸಭೆ ಸೇರಿ ಅಭಿಪ್ರಾಯ ವ್ಯಕ್ತಪಡಿಸಿದಾಗ ಅಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯಬೇಕು. ಸಂಸತ್ತಿನ ಅಧಿವೇಶನವನ್ನು ಕರೆಯಲು ಅಧ್ಯಕ್ಷರು ನಿರಾಕರಿಸಿದರೆ ಅಥವಾ ಅಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯಲು ಅಸಮರ್ಥರಾಗಿದ್ದರೆ ಸಂಸತ್ತಿನ ಸದಸ್ಯರೇ ಅಧಿವೇಶನವನ್ನು ಕರೆಯಬಹುದು.

ಅಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯಲು ಅಸಮರ್ಥರಾಗಿದ್ದಾರೆ ಎಂದು ಸಂಸತ್ತಿನ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದಾಗ ಅಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯಬೇಕು. ಸಂಸತ್ತಿನ ಅಧಿವೇಶನವನ್ನು ಕರೆಯಲು ಅಧ್ಯಕ್ಷರು ನಿರಾಕರಿಸಿದರೆ ಅಥವಾ ಅಧ್ಯಕ್ಷರು ಸಂಸತ್ತಿನ ಅಧಿವೇಶನವನ್ನು ಕರೆಯಲು ಅಸಮರ್ಥರಾಗಿದ್ದರೆ ಸಂಸತ್ತಿನ ಸದಸ್ಯರೇ ಅಧಿವೇಶನವನ್ನು ಕರೆಯಬಹುದು.

ಅದರೆ ನಿಮ್ಮ ಕರ್ತವ್ಯ ಮಾಡು, ಕಷ್ಟಕ್ಕೆ ಆಸಾಡ ಬಾರದು, ನೀತಿ ಧರ್ಮಗಳಿಗಾಗಿ ಯುದ್ಧಂ, ಕರ್ಮ ಭ್ರಮೆಯನ್ನು ಬೇಡ, ಕ್ರಮಾಂತರಲಿಯೋಗ—ಎಂದು ಹೇಳುವುದನ್ನು ಗೀತೆ ಮರೆತಿಲ್ಲ. ಮಾನವೋತ್ತರತೆಯಿಂದ ಎಲ್ಲ ಲೌಕಿಕ ಜೀವಿಗಳಿಗೆ ಗೀತೆ ಒಂದು ಅಮೃತ ಬಿಂದು.

ಸಂಘಟನೆಯ ಸಂಜೀವಿನಿ—ಶಂಕರ

[ಐದನೆಯ ಪುಟದಿಂದ]

ಳೆಂದು ಅವಳು ಕೇಳುತ್ತಿದ್ದಾಳೆ. ಆಕೆಯ ಕೊಲೆಯನ್ನು ಕೊನೆಗಾಣಿಸಬೇಕೆಂದು ನಾಲ್ಕು ಶಂಕರಾಚಾರ್ಯರುಗಳಲ್ಲಿ ಒಬ್ಬೊಬ್ಬರಿಂದ ಕೇಳಿಕೊಂಡಾಗಲೂ, ನಂದಿಯನ್ನೇ ಚ ನಾವಣಾ ನಿಶಾನೆಯನ್ನಾಗಿ ಇಟ್ಟುಕೊಂಡಿರುವ ಆಡಳಿತ ಪಕ್ಷ ಅವರ ಮೇಲೆಯೇ ಧೌರ್ಜನ್ಯ ನಡೆಸಿಲ್ಲವೇನು? ಹಾಗೂ ಆದಕ್ಕೆಂದೇ ನಮ್ಮ ಪ್ರಧಾನಿಯವರು ಚಾಣಾಕ್ಷತನದಿಂದ ಆದಿ ಶಂಕರರೆಂದೇ ಹೇಳಬೇಕು. ನಾಲ್ಕು ಮಠಗಳೂ ಅದೇ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟವಾಗಿದ್ದು, ಅವರಂದರೋ ಗೋಮಾತೆಯ ಕೊಲೆಯನ್ನು ಕೊನೆಗಾಣಿಸಲು ಬಸವಣ್ಣ ಸರಕಾರದ ಬಳಿ ಕೇಳಿಕೊಂಡರು ಆಷ್ಟೆ. ಅದಕ್ಕಾಗಿ ಅವರನ್ನು ರಾಜಕೀಯ ಗೊಂಬೆಗಳಂತೆ ಕುಣಿಸಲು ಮುಂದಾದ ಪ್ರಧಾನಿಯವರು ತಾವೀಗ ಆದ್ಯ ಶಂಕರರ ಪಥದವಲ್ಲಿ ಸಾಗುತ್ತಿದ್ದೇವೆಂದು ಹೇಳಿಕೊಳ್ಳುವದಾದರೂ ಹೇಗೆ?

ಆದಿ ಶಂಕರಾಚಾರ್ಯರಾದರೋ ಕೇರಳದಲ್ಲಿ ಒಂದೇ ಒಂದು ಮಠವನ್ನು ಸ್ಥಾಪಿಸದೆ ದೇಶದ ನಾಲ್ಕೆಡೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ನಾವಿಂದು ವಿಶ್ವಾತ್ಮ ಮನೋಭಾವನೆಯಿಂದ ಹೊಡೆದಾಡಿಕೊಳ್ಳುತ್ತಿದ್ದೇ ಆದಿಶಂಕರ ಪಥದಲ್ಲಿ ಸಾಗುತ್ತಿದ್ದೇವೆಂದು ಹೇಗೆ ಹೇಳಿಕೊಳ್ಳಲು ಸಾಧ್ಯ? ನಮ್ಮ ಖಾತ್ಯಂತ್ಯದಲ್ಲಿ ನಮ್ಮ ಮನೆಯ ಹತ್ತಿರವೇ ಉಕ್ಕಿನ ಕಾರ್ಖಾನೆ ಬೇಕು, ಉಚ್ಚ ನ್ಯಾಯಾಲಯ ಇತ್ಯಾದಿ ಬೇಕು!...ಹೀಗಿರುವಾಗ ನಾವು ಆದಿಶಂಕರರ ಪಥದಲ್ಲಿ ಸಾಗುವದಾದರೂ ಹೇಗೆ?

ಇವಲ್ಲಾ ಇಂದಿನ ದುಸ್ಥಿತಿಯಂಬ ಸಾಗರದಲ್ಲೇಳುತ್ತಿಯವ ಯೋಚನೆಯ ಹೆದ್ದೆರೆಗಳೇ ಸರಿ. ಬಾಳ ನೌಕೆ ಆದರಲ್ಲಿ ಅಡಿಮೇಲಾಗುತ್ತಿದೆ. ಆಗ--ಆಗ ಅದೋ ಅಲ್ಲಿ ಬೆಳಕು—ಧರ್ಮದೀಪ, ಭಗತ್ಪಾದ ವೃದ್ಯ ಶ್ರೀ ಶಂಕರಾಚಾರ್ಯರು ನಮ್ಮನ್ನು ಆಶೀರ್ವದಿಸುತ್ತಿದ್ದಾರೆ. ನಾವದನ್ನು ಅಂತು ಕೊಂಡು, ನೌಕೆಯನ್ನ ಬಿಡೋಣ. ಬಿಕ್ಕಟ್ಟಿನಯೂವ ಹೆದ್ದೆರೆಯಿನ್ನಮ್ಮ ಒಕ್ಕಟ್ಟನ ನೌಕೆಯನ್ನು ಮುಳುಗಿಸಲಾರದು.

ಶಿಷ್ಟ್ರೀಯತೆ ಅಂದರೆ ಏಕ್ಯತೆಯ ಪ್ರಜ್ಞೆ ಇಲ್ಲದೆ ಬಿಕ್ಕಟ್ಟಿನ ಭೂಮಿಯಲ್ಲಿ

ಬಿದ್ದು ಕೊಂಡಿರುವ ಭಾರತೀಯರಿಗೆ ಶಂಕರಾಚಾರ್ಯರ ಹೆಸರೇ ಸಂಘಟನೆಯ ಸಂಜೀವಿನಿ ಇದೆ. ಅದನ್ನು ಸಮರ್ಥ ರಾಮದಾಸರೂ, ಗುರುಗೋವಿಂದ ಸಿಂಹ, ವಿದ್ಯಾರಣ್ಯ, ವಿವೇಕಾನಂದವುಂತಾದ ಮಹಾಪುರುಷರು ಅರ್ಥಮಾಡಿಕೊಂಡು ನಮಾರಿಗೆ ತಿಳಿಸಿರುವರು. ಆದೇ ಪಥದಲ್ಲಿ ಪಥ ವಿಮುಖರಾಗದೆ ಧ್ಯೇಯದೀಪಸದತ್ಯ ಸಾಗುವ ಪಥಿಕರು ನಾವಾಗೋಣ.

ಬರಿಯ ಮನರಂಜನೆಯ

ರಸದಲ್ಲಿ ಕಸ ಕಾಣುವ ಯಕ್ಷಗಾನ

ಬರೆದವರು

ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ನವನಾಗರಿಕ ಯುಗದಲ್ಲಿ ಯಕ್ಷಗಾನ—ಬಯಲಾಟವನ್ನು ಪೇಟೆಗಳಲ್ಲಿರುವವರೂ, ಹಳ್ಳಿ ವಾಸಿಗಳೂ ನೋಡದವರು ರಸಾಸ್ವಾದನೆ ಮಾಡದವರು ವಿರಳ. ಲಲಿತಕಲೆಯೆನಿಸಿದ ಬಯಲಾಟವನ್ನು ನೋಡಿದಷ್ಟೂ—ತಣಿಯದು— ಸಾಲದು. ಜನರ ರಂಜನೆಯೇ ಮುಖ್ಯ ಗುರಿಯೂಳಿಲು ಳ್ಳ ಈ ಯಕ್ಷಗಾನವು ಒಂದು ಜಾನಪದ ಕಲೆ, ಸಂಗೀತ, ನೃತ್ಯ, ವೇಷ, ಮಾತು—ಹೀಗೆ ನಾಲ್ಕು ಮುಖಗಳಿರುವ ಈ ಕಲೆ ಪ್ರತಿಯೊಂದು ವಿಚಾರಗಳಲ್ಲೂ ಪ್ರಚಂಡ. ಇಷ್ಟೊಂದು ಬಹುಮುಖವೆನಿಸಿದ ಕಲೆ ಬೇರೆ ಸೂವುದೂ ಇರಲಾರದು. ಶ್ರೀ ಶಿವರಾಮ ಕಾರಂತರು ಯಕ್ಷಗಾನದ ಕುರಿತು ಹೇಳಿದ್ದೇನೆಂದರೆ—"ಅದು ಒಂದು ಸ್ವಂತ ಗಾನ ಮಾರ್ಗ ಎನ್ನುವದಕ್ಕಿಂತ ಒಂದು ಶೈಲಿ" (Style of Singing) ಎಂದರೇ ಲೇಸು. ಅದರ ಹೂವತ್ತೂ ಕೆಲಸ—ಧ್ವನಿ ತರಂಗಗಳ ವಿನ್ಯಾಸದ ಮೇಲೇ ಹೊಂದಿಕೊಂಡಿದೆ" ಎಂಬುದಾಗಿ, ಯಕ್ಷಗಾನದಲ್ಲಿ ತೆಂಕತಿಟ್ಟು, ಬಡಗತಿಟ್ಟುಗಳೆಂಬ ಎರಡು ವಿಭಾಗಗಳನ್ನೂ ಕೇಳುತ್ತಿದ್ದೇವೆ.

ಬಯಲಾಟಗಳ ಪ್ರಸಂಗಗಳು ನಾವು ಕಾಣದ ದೇವ— ದಾನವರ ಕತೆಗಳನ್ನೂ, ನಮ್ಮ ಪೂರ್ವದ ಮಾನವರ ಕಥೆಗಳನ್ನೂ— ವಿವರಿಸುತ್ತ ದೇವಾಲಯ ಸಂದರ್ಭಗಳಲ್ಲಿ ಹಲವು ಕಡೆಯ ದೇವಾಲಯಗಳಿಂದ ಕಲವು "ಮೇಳ"ಗಳು ಹೊರಟು ಆರು ತಿಂಗಳು ನಾಡಿನ ಬೇರೆ ಬೇರೆ ಕಡೆಗಳಲ್ಲಿ ಪ್ರಸಂಗಗಳನ್ನು ಪ್ರದರ್ಶಿಸುವವು. ಕಟೀಲು ದುರ್ಗಾ ಪರಮೇಶ್ವರಿ, ಧರ್ಮಸ್ಥಳ, ಕುತ್ಯಾಳ ಗೋಪಾಲ ಕೃಷ್ಣ, ಕರ್ನಾಟಕ ಯಕ್ಷಗಾನ ನಾಟಕ ಸಭಾ, ಸುರತ್ಕಲ್ ಮಹಮ್ಮಾಯಿ, ಅಮೃತೇಶ್ವರಿ, ಕೊಲ್ಲೂರು—ಇತ್ಯಾದಿ ಮೇಳಗಳು ಹೊರಡುತ್ತವೆ.

ಗಾನಗಳಲ್ಲಿ ದೇವಗಾನ, ಗಂಧರ್ವ ಗಾನ, ಯಕ್ಷಗಾನಗಳೆಂಬ ಮೂರು ವಿಧದ ಗಾನಗಳು ಎಂದು ಬಲ್ಲವರು ಹೇಳುವರು. ದೇವಪೂಜನೆ, ಹೋಮೊದಿಗಳಲ್ಲಿ ವಿಂಶತದ ಸ್ವರಬದ್ಧವಾಗಿ ವೈದಿಕರು ನುಡಿಯುವ ವೇದ ಮಂತ್ರಗಳೇ ದೇವ ಗಾನ ಎಂದು ಹೇಳಿದರೆ ನಾಟಕಗಳಲ್ಲಿ ಹೇಳುವ ಹಾಡುಗಳು ಗಂಧರ್ವಗಾನ ವೆನ್ನಬಹುದು. ಬಯಲಾಟಗಳಲ್ಲಿ ಹಾಡುವದನ್ನೇ "ಯಕ್ಷಗಾನ" ಎನ್ನಲು ಸಂಶಯವಿಲ್ಲ.ಋಷಿಗಳಿಂದ ಉಂಟಾದ ಗಾನ ದೇವಗಾನ. ಇನ್ನು ದೇವೇಂದ್ರನ ಆಸ್ಥಾನದಲ್ಲಿ ಚಿತ್ರಸೇನಾದಿ ಗಂಧರ್ವರು ಹಾಡುತ್ತಿದ್ದುದರಿಂದ 'ಗಂಧರ್ವ ಗಾನ' ವಾಯಿತು ಎನ್ನುತ್ತಾರೆ. ಹಾಗೆಯೇ ಯಕ್ಷೇಶ್ವರ ಕುಬೇರನ— ಸೇವಕರಾದ ಯಕ್ಷರು ಆತನ ಆಸ್ಥಾನದಲ್ಲಿ ಹಾಡುವ ಪದ್ಧತಿಯಿಂದ ಮೊದಲಾಯಿತೆಂದು ಹೇಳುವ ಈ ಗಾನಕ್ಕೆ "ಯಕ್ಷಗಾನ" ವೆನ್ನುತ್ತಾರೆ. ಈ ಯಕ್ಷಗಾನವನ್ನೇ ಶಿವನ ತಾಂಡವ ನೃತ್ಯದ ವಿಕೃತ ರೂಪವೆಂದೂ ಕೆಲವರು ಅಭಿಪ್ರಾಯವಿಡಿದೆ.

ದೇಸೀ ಗೀತೆಯಿಂದ ಹಾಡುವ ಈ ಯಕ್ಷಗಾನವನ್ನ 'ಎಕ್ಕಲಗಾನ' ವೆಂದೂ, ತಕ್ಕ ಪಕ್ಕವಾದ್ಯಗಳಾದ ವ್ಯದಂಗ, ಚಂಡೆ, ತಾಳಗಳಿಂದ ಬಾಜಿಸಿ ಹಾಡುವುದರಿಂದ "ಬಾಜನ ಗಬ್ಬ" ವೆಂದೂ, ಹಿಂದಿನವರ ಅಭಿವ್ಯಾಯವಾಗಿದೆ.

ಯಕ್ಷಗಾನವನ್ನ ನಾಟಕಕ್ಕೆ ತಂದಲ್ಲಿ ನಿಜವಾಗಿಯೂ ಆದೊಂದು ದೊಡ್ಡ ಕುಂದು. ವೇಷ ಭೂಷಣಗಳ ಸುಧಾರಣೆ ಆಗತ್ಯ. ಆದರೆ ನಾಟಕೀಯ ಅಭಿನಯ ನಿಜವಾಗಿಯೂ 'ಬಯಲಾಟ' ಕ್ಕೆ ರುಚಿಸದು. ರಾವಣ, ಕಂಸ, ಕೌರವ, ಭೀಮ, ಇಂದ್ರಜಿತು—ಇವರೆಲ್ಲಾ ರೇಷನ್ ಅಂಗಡಿ ಬಡಪಾಯಿಯೂಗುವರೆಂಬ ನೂತು ಇಲ್ಲಿಗೆ ಹೊಂದಿಸಬಹುದಲ್ಲವೆ? ಸುಧಾರಣೆಯೂದಂತೆ ವಿಪರೀತವಾಗಿ ಕಲೆಗೆ ಕುಂದುಂಟಾಗಿ ಬಾರದು. ಇನ್ನು ಇತ್ತೀಚೆಗೆ ತುಳು ಯಕ್ಷಗಾನಗಳೇ ಆಗುತ್ತಿವೆ. ಇದು ದಕ್ಷಿಣ ಕನ್ನಡದ ಗಡಿಯನ್ನು ದಾಟಲಿಕ್ಕಿಲ್ಲ ಎಂಬ ಬಲ್ಲವರ ನುಡಿಯೂ ಸತ್ಯಕ್ಕೆ ದೂರವಿಲ್ಲ. ಒಮ್ಮೆಗೆ ಜನರಂಜನೆಯನ್ನು ಪಡೆದೀತು. ಅಷ್ಟೆ.

ಯಕ್ಷಗಾನ ತಾಳಮದ್ದಳೆ

"ಅಗ್ನಿ, ಯಮ, ವಾಯು, ಕುಬೇರಾದಿ ಅಷ್ಟ ದಿಕ್ಪಾಲಕರೇ ನೆರೆದಿರುವ ಮಹಾ ಮುನಿ ಮಂಡಲದೀ, ಎಂದಿನ ನಿಯಮದಂತೆ ಇಂದೂ ನಾವು ಸಭೆ ಸೇರಿದ್ದೇವೆ. ಇಂದು ನನಗೊಂದು ಪ್ರಶ್ನೆ ತಲೆದೋರಿದೆ. ಇಡೀಯ ಧರಿತ್ರಿಯಲ್ಲಿ, ಇದುವರೆಗೆ ಸುಳ್ಳು ಹೇಳದ ವ್ಯಕ್ತಿ ಇರುವರೇ? ಹಿಂದಕ್ಕೆ ಇದ್ದನೇ ? ಎಂಬುದು. ಮುನಿ ಶ್ರೇಷ್ಠಂರಾದ ವಶಿಷ್ಠರೇ ಇದಕ್ಕೆ ಉತ್ತರಿಸಿ ಸಮಾಧಾನ ಕೊಡಬೇಕು' ಎದು ದೇವೇಂದ್ರ ಪಾತ್ರಧಾರಿ ನುಡಿಯಲು, ವಸಿಷ್ಠ ವಾತ್ರಧಾರಿ ವೇಣು ಭಟ್ಟರು ಭಾಗವತರ ಹಾಡು ನಿಂತೊಡನೆಯೇ—"ಸುರರೊಡೆಯ, ನೀನೆನ್ನುವ ಆ ಗುಣರು ವರು ಇದುವರೆಗೆ ಯಾರೂ ಇದ್ದಿಲ್ಲ. ಆದರೆ ಈಗ ಒಬ್ಬ ಇದ್ದಾನೆ. ಅವನೇ ಇ ಕ್ಷ್ವಾಕು ವಂಶಜನಾದ ಹರಿಶ್ಚಂದ್ರ ಚಕ್ರವರ್ತಿಯು. ನೀನೆಂದಸಕಲ ಗುಣಾಗ ಮಂಡಿತನು. ಇದು ಖಂಡಿತ" ಎನ್ನುತ್ತಿದ್ದಂತೆಯೇ, ಭೂವಲ್ಯಕಾಶಗಳೇ ಅಡಿಪಾಯವಾದವೋ, ಕಟ್ಟಡದ ಹೊಡಕೆಯೇ ಹಾರಿ ಹೋಗುವದೋ ಎಂಬಂತೆ ಅಬ್ಬರಿಸಿ ಕೊಂಡು, ವಿಶ್ವಾಮಿತ್ರ ಪಾತ್ರಧಾರಿ ಶ್ರೀ ಶಿವಪ್ಪನವರು ಸೆಟೆದು ಕುಳಿತು, ಕಣ್ಣು ತಿರುಗಿಸುತ್ತಾ—"ಛೇ ವಸಿಷ್ಠರಂತೆ! ವಸಿಷ್ಠರಿಗೆ ಏನೂ ತಿಳಿಯದು. ನೀವೂ ಹೀಗೆನ್ನಬಹುದೇ? ಖಾವಿಯೊಳಗಿನ ಕಪ್ಪೆಯಂತೆ ಇಂತಹ ಮಾತುಗಳನ್ನು ನೀವಿ ಹೇಳಿ ಬಹುದೇ? ಸ್ವಲ್ಪವಾದರೂ ನಿಮಗೆ ಹೊರಗಿನ ಜ್ಞಾನ ಬೇಡವೆ? ಸತ್ಯ ಹೇಳುವ ಒಂದು ಮನುಷ್ಯ ಭೂಲೋಕದಲ್ಲಿದ್ದಾನೆಯೆ? ಸ ಹ...ಅಂತಹ ಧರ್ಮರಾಜನೂ ಸುಳ್ಳ



ರೈತ ಭಾಂದವರ ಜೀವನ ಸಂಗಾತಿ.....

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.....

ಎಸ್. ಇ. ಬಿ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಪೀಟರ್ ಸ್ಪಾರ್ಟರುಗಳು.....

ಪ್ರಪ್ರಥಮ ವಿವೂ ರಕ್ಷಣೆಗೆ ಒಳಪಟ್ಟಿರುವ ಸ್ಪಾರ್ಟರ್‌ಗಳು.

ವಿಶೇಷ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

ಕೇಳಿದ್ದಾನೆ! ಎಂದ ಮೇಲೆ ಸತ್ಯನುಡಿದ ರ—ನುಡಿಸುವವ ಇದ್ದಾನೆಯೇ?"

"ಧರ್ಮರಾಜನ್ನ ಅಧರ್ಮ ರಾಜ—ಸಳ್ಳ ಹೇಳಿದವ ಎಂದು ಹೇಳ ಬಿಸುಲ್ಲ. ಅಯ್ಯೋ, ಕೃಷ್ಣಂಡವನ್ನು ಬ್ರಹ್ಮಾಂಡ ಮಾಡುವಿ. ಕಪಿಂದ ರಕ್ಷ ತಗೆಯಬೇಕು ವಿಶ್ವಾಮಿತ್ರಾ! ನೀನು ಇವದಿಂದ ಕರವ ನ್ನೇ ಹೊಡಕುವಿಯಲ್ಲ! ಇದಕ್ಕೆ ನಾನು ಏನು ಹೇಳಲಿ?"'

"ನಸಿಷ್ಟ, ನಾನು ಹೇಳುವ ಮಾತು ವಗಿಯುವ ಮೊದಲೇ ನೀನು ಆಡ್ಡ ಮಾಡಿದೆ ನಿನಗೆ ಅಷ್ಟೂ ತಾಳ್ಮೆಯಿ ಲ್ಲ—ತಾಳ್ಮೆಯೇ ಮೈಲ್ಲಿ ದ್ದೂತದಿಂದ ಸೋತ ಪಾಂಡವರು ಎಷ್ಟ ವರ್ಷ ವನವಾಸ ಮಾಡಿದರು?"

'ಹನ್ನೆರಡು ವರ್ಷ! ..."

ಸರಿ., ಮತ್ತಿನ ಒಂದು ವರ್ಷದ ಅಜ್ಞಾತವಾಸವನ್ನು ಎಲ್ಲಿ ಕಳೆದರು?'

"ಮತ್ತೆಲ್ಲಿ? ವಿರಾಟರಾಯನ ಅಸ್ಥಾನದಲ್ಲಿ"

'ಅದೂ ಹೇಗೆ? ಅಲ್ಲಿ ಅವನ ಧರ್ಮ, ಸತ್ಯ ಎಲ್ಲಿ ಹೋಗಿತ್ತು? ಧರ್ಮರಾಯನು ಪಗಡೆಯಾಡುವ 'ಕಂಕಭಟ್ಟ'ನಾಗಿ, ಭೀಮ—"ವಲಲ"ನೆಂಬ ಅಡುಗ ಭಟ್ಟನಾಗಿ, ಅರ್ಜುನನು "ಬೃಹನ್ನಳೆ"ಯಾಗಿ, ನಕುಲನು 'ಗ್ರಂಥಿಕ' ನೆಂಬ ಅಶ್ವವಿಲಕನಾಗಿಯೂ, ಸಹದೇವನು 'ಂತ್ರಿಪಾಲ' ನೆಂಬ ಗೋಪಾಲನಾಗಿಯೂ—ಕಸಟ ದೇವರಳಿಂದ ಒಂದುವನ ವಲ್ಲ—ಒಂದುವರ್ಷ ದಿನಕಳೆದರ್ನ? ಇ ವನು ಧರ್ಮಂಜನೋ? "ಹೆಸರು ಕ್ಷೀರಸಂಗರ ಭಟ್ಟ—ನಜ್ಜಿಗೂ ಗತಿಯಿಲ್ಲ ಎಂಬಂತಿಯಿತಲ್ಲ. ಅವಂಗಳ ದಿನಕ್ಕೆ ಮಂಗಳವಾರ ಎಂತಹಾಗ ಅಧರ್ಮ ಯುನಿಗ ಧರ್ಮಂ ಎ ನ್ನಬಹುದು. ಇತಿಯೇ ಅಸತ್ಯ ಹರಿಶ್ಚಂದ್ರನಿಗೆ ಸತ್ಯ ಹರಿಶ್ಚಂದ್ರ ಎಂದು ಹೇಗೆ ತಿಳಿಯಬಹುದು.'

"ವಿಶ್ವಾಮಿತ್ರ ಮುನಿ ಳೇ, ಹುಂಡಾಣ ವನ್ನೂ, ಧರ್ಮವನ್ನೂ, ನೀತಿಯನ್ನೂ ಬಿಡುಮಲು ಮಾಡಬೇಡಿ ಕೌಂವರ ಅನ್ಯಾಯಕ್ಕೆ ಧರ್ಮರಾಯನು ಮಾಡಿದು ಯೂ ಅವನ ಧರ್ಮ ಅಲಿರಲಿ. ಅಷ್ಟೆಲ್ಲಾ ಸಂಶಯವಿದ್ದಲ್ಲಿ ಪರೀಕ್ಷಿಸಿಯೇ ನೋಡಬಹುದಲ್ಲ?'

"ಪರೀಕ್ಷೆ! ಪರೀಕ್ಷ! ಈಗೀಗ ಪರೀಕ್ಷೆಗೇ ಬೆಲೆ ಬಂಚಕಾಟ್ಟ ಪರೀಕ್ಷೆಯಲ್ಲ ವಿನಾಸಾಗುತ್ತಾರೆ. ಹರಿಶ್ಚಂದ್ರನನ್ನ ಪರೀಕ್ಷೆ ಮಾಡ ಮನಸು ಮಾಡಿ! ..."

ಹೀಗೆ ತಾಳವ ದ್ದಳೆ ಎಲ್ಲ ವಾದವಿ ಜಿ ಸರಿಪಳೆಯಂತೆ ಯೋಗಿ ವೌರಂಜಕವು ಸಾಮಾಜಿಕಕ್ಕೆ ತಿಯಾಗಿ, ಸಾಮಾಜಿಕದಿಂದ ರಿಂಜಕೇಯಕ್ಕೆ ತರಳಿ ಕೈಗೆ ಕೈ ಹೊಡೆಗಿ ಡಗಳ ಎಂಟಾಗು ವುದೂ ಇದ. ಎ ದವೇನೋ ಕೇಳಿಲು ಒಳ್ಳೆಯ ದಾಗಿರುತ್ತದ ಆದರೆ ಕೈಗೆ ಕೈ, ಬಾಯಿಗೆ ಬಾಯಿ ಎಂದು ಕಷ್ಟ? ಕೃಷ್ಣನು ಳಳ್ಳ—ಭಂಗಿವಂತನಲ್ಲ ರಿಂಮನು ಮನುಷ್ಯ—ಮಾಂಸಕಂದಿ ದ್ದಿನ್ನೆ,' ಇತ್ಯಾದಿ ವೌರಂಜಿಂಗಳನ್ನು ತಿಳಿಳ್ಳ ಮನುಷ್ಯ ಮಾಡಿ ಜನರಲ್ಲಿ ವಿಪರೀತ ಪರಿಣಾಮವನ್ನು ಬೀರುವಂತಾಗಬಾರದು. ಅಂತೂ ತಾಳಮದ್ದಳೆಯೂ ಒಂದು ಮನೋರಂಜನೆಯ ಕಲೆ.

ವಸಂತವೆಂದು ಬಂದೀತು ?

(ನಾಲ್ಕನೇ ಪುಟದಿಂದ)

"ಮತ್ತೇನ ಬೇಕು'

"..'

"ಕೇಳ ..'

" ....'

"ಂಕೆ ಮೂಕಿಯಾಗಿ ಬಿಟ್ಟೆ?'

"ಅಲ್ಲಾ ಅದನ್ನು ನನ್ನ ಬಾಯಿಂದ್ಲೇ ಕೇಳಬೇಕೆಂದು ಯಾಕೆ ಅಷ್ಟು ಆಗ್ರಹ?"

'ಹೇಳಲ್ಲಾ. ."

' .. ಹೆಜ್ಜಿಂ ..ಇದು _'

'ಓಹೋ... ಅಷ್ಟೇನೆಯೇ ತಾಳು, ಹಾಗೆಲಾ ಯೋಚ್ನೆ ಮಾಡಿದ್ರೆ ಏನ ಬಂತ ? ಇದೀಗ ಒದೊಂದೇ ಸಮಸ್ಯೆ, ಅದು ಪರಿಹಾರವಾಯ್ತೂಂತಾದ್ರೆ ಮತ್ತೆ ನೂರು ಸಮಸ್ಯೆ ಹುಟ್ಟಿಕೊಳ್ಳುತ್ತೆ ..."

"ಅದಕ್ಕೆ ಹೆದ್ರಿ ಈ ಸಮಸ್ಯೆಗ ಪರಿಹಾರ ಮಾಡದೇ ಇರೋದೇನ ?"

"ಇಲ್ಲ ...ಮೊನ್ನೆ ಮಾಡಿದ್ದೆಂಥದು? ಯಾವುದಕ್ಕೂ ಕಾಲ ಪಕ್ವವಾಗಿಬೇಕು. ತೋಟಗಾರ ನೂರು ಕೊಡ ನೀರು ಸರಿದರನ್ನು? ವಸಂತ ಕಾಲ ಬಂದೆ ಫಲ ಸಿಗ ವುದಿಲ್ಲ ..."

"ವಸಂತ ಎಂದು ಬಂದೀತು?"

"ಎಂದು ಬಂದೀತು!'

'ಇದೀಗ ಶರದೃತು ಕೊನೆಗೊಂಡಿತು ... ತಿನ್ನೇನು, ನಾಲ್ಕು ತಿಂಗಳ್ಲೇ..'

"ಕ್ಷಿಂ.."

— ಗೋರಾ.

ಮನುಕುಲ ಮತ್ತು ಆಶಾಲತಾದ ಉದ್ಘಾಟನೆ

ಮುಂಬೈಯಲ್ಲಿ ಜೋಡಿಂಗ ಆರಂಭಿಸಲ್ಪಟ್ಟ 'ಮಾನುಕುಲ' ಪ್ರಕಾಶನ ಸಂಸ್ಥೆ ಹಾಗೂ ಆದರ ಮೊದಲ ಪ್ರಕಟನೆಯೂದ ಆಶಾ-ಲತಾ' ಎಂಬ ಕಪಸಂಕಲನದ ಉದ್ಘಾಟನಾ ಸಮಾರಂಭವು ದಶಂಬರ ತಿರಂದು ಬ್ರಪ್ಪಲಗಿಲ್ಲಸಲ್ಲಿ ಸ್ರಾ. ಚಿದಂಬರ ದೀಕ್ಷಿತರ ಅಧ್ಯಕ್ಷತೆಯಲ್ಲಿ ನೆರವೇರಿತು. "ಮಾನುಕುಲ' ಸಂಪಾದಕ ಪ್ರಯುಕ್ತವೂ ಅವರು ಸ್ವಾಗತ ಭಾಷಣ ಗೈದ ಬಳಿಕ, ಶ್ರೀ ಶಿವಮಂಜೆ ಖಂಡಿಂಅವರು ಈ ಸಂಸ್ಥೆಯ ಯೋಜನೆಗಳನ್ನು ವಿವರಿಸುತ್ತಾ, ಕಥೆಮಾಸ್ತ ಪಿಸುಶೆಗೆ ಪಿಸಲಾದ ಒಂಬತ್ತು ತ್ರೈವಾಸಿಕ ಹಾಗೂ ತರುಣ ಬರಹಗಾರರ, ಕೃತಿಗಳನ್ನು ಪ್ರಕಟಿಸುವ ಸಂಸ್ಥಾಕೃತಿ ಈ ಸಂಸ್ಥೆಯು ಕೈಯಿಕ್ಕಿದೆ, ಅಂದರು. ಶ್ರೀ ಕೆ. ಗಣೇಶ ಮಲ್ಯರು ಸ್ವಸ್ತಿ ವಾಚನ ಗೈದ ಬಳಿಕ, ಸರ್ವ ಶ್ರೀ ಎಂ. ಎ. ಪೈ, ಜೆ. ಪೈ, ವ್ಯಾಸರಾವ್ ನಿಂಜೂರು, ಮೋಹನ ಕಡುಬಿತ್ತಿ, ಎ. ಸಿ. ಕುಂದರ್ ಮುಂತಾದವರು 'ಮಾನುಕುಲ' ಪ್ರಕಾಶನ ಹಾಗೂ 'ಆಶಾ-ಲತಾ'ದ ತರುಣ ಬಾಹಗಾರ ಶ್ರೀ ಎಲ್. ಎಂ. ಕಾಮತ ಅವರಿಗೆ ಶುಭಕೋರಿದರು

ಅಧ್ಯಕ್ಷ ಪೀಠದಿಂದ ಶ್ರೀ ದೀಕ್ಷಿತರು ನಮ್ಮ ಪ್ರತಿಭಾವಂತ ತರುಣ ಬರಹಗಾರರು ಹೆಚ್ಚು ಹೆಚ್ಚು ಓದುವ ಹಾಗೂ ಬರೆಯುವ ಮನಸ ಮಾಡಿಕೊಳ್ಳುವ ಕಾರ್ಯಸನಸ್ತು ಬೆಳಿಸಿಕೊಳ್ಳಬೇಕೆಂದು ಸಂದೇಶವಿತ್ತರು, ಹಾಗೂ 'ಮನುಕುಲ ಮತ್ತು ಲೇಖಕ ಕಾಮತರನ್ನು ಹರಸಿ—ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಸಿಂಡಿಕೇಟ್ ಬ್ಯಾಂಕಿನ ಪಾಂಶೆಂಬಿಗೆ ಎಗ್ಸಾಂಗರವಾಗಿ ಹೊಗೆ ಅಲಾಂ ಮುಂಬೈಯ ತರುಣ ಕವಿ ಕೆ.ಸಿ.ಗೋಪಿ ಪುಂಡಲೀಕ ನುಲ್ಲ ಆನರನ್ನೂ ಸನ್ಮಾನಿಸಲಾಯಿತು. ಶ್ರೀ ಎಲ್. ಎಂ. ಕಾಮತ್ ಅವರು ಆಭಾರ ಮನ್ನಾಜಿಯನ್ನು ಸಲ್ಲಿಸಿದರು.

ಮಂಡಾರ್ತಿ ಕ್ಷೇತ್ರ ಮಹಾತ್ಮೆಕೃತಿ

ಮಂಡಾರ್ತಿ ಶ್ರೀ ನುಂಡಾರ್ತಿ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದ ದತಾವತಾರ ಮೇಳದವರು ಶ್ರೀ ಸೀತಾನದಿ ಗಣಕಯ್ಯ ಶೆಟ್ಟರಿಂದ ರಚಿತವಾಲ್ಪಟ್ಟ "ಶ್ರೀ ಮಂಡಾರ್ತಿ ಕ್ಷೇತ್ರ ಮಹಾತ್ಮೆ' ಎಂಬ ಯಕ್ಷಗಾನ ಕಥಾ ಭಾಗವನ್ನು ಅತೀ ಸೊಗಸಾಗಿ ತಾ. 27—11—66ರಂದು ಶ್ರೀ ದೇವೀ ಸನ್ನಿಧಿಯಲ್ಲಿ ಅಡಿ ತೋರಿಸಿರುವರು. ಸುಮಾರು ನಾಲ್ಕು ಸಾವಿರಕ್ಕೂ ಮಿಕ್ಕಿ ಒಂದೆ ಹಾಗೂ ಪರಿಸರದ ಕಲಾಭಿಮಾನಿಗಳು ನೆರೆದಿದ್ದ ಕಲಾಗಾರರನ್ನು ಪ್ರೋತ್ಸಾಹಿಸಿದರು

ಅ. ನ. ಕೃ ಅವರಿಗೆ ಸತ್ಕಾರ

ಇತ್ತೀಚೆಗೆ ಮುಂಬಯಿಗೆ ಆಗಮಿಸಿದ ಕನ್ನಡದ ಸುಪ್ರಸಿದ್ಧ ಸಾಹಿತಿ ಶ್ರೀ ಅ. ನ. ಕೃ ಅವರಿಗೆ ಮುಂಬಯಿ ಯ 'ಬಿಂತನ ಪಬ್ಲಿಕೇಶನ್ಸ್'ನ ವತಿಯಿಂದ ಒಂದು ಸತ್ಕಾರಕೂಟವು ಇದೇ ಕಳೆದ ನವಂಬರ್ ದಿನಾಂಕ ತಿರಂದು, ಸ್ಥಳೀಯ ಪ್ರಿನ್ಸೆಸ್ ಗ್ರಿಲ್ಸ್‌ನಲ್ಲಿ ವಿಸ್ತರಿಸಲಾಯಿತು. ಅಂದಿನ ಅಧ್ಯಕ್ಷತೆಯನ್ನು ಮುಂಬಯಿಯ ಹೆಸರಾಂತ ಕಾದಂಬರಿಗಾರರಾದ ಶ್ರೀ ವ್ಯಾಸರಾಯ ಬಲ್ಲಾಳರು ವಹಿಸಿದ್ದರು. ಮುಂಬಯಿಯ ಹಲವಾರು ಸಾಂಘಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಅಭಿಮಾನ ಸೂಚಕವಾಗಿ ಅ. ನ. ಕೃ. ರವರಿಗೆ ಶಲ್ಯ ಪಾಂಗಳನ್ನು ಅರ್ಪಿಸಿದರು. ಬೀಳ್ಕೊಡುವ ಸಭಾಕಾರ್ಯವನ್ನು ನಡೆಸಿಕೊಂಡುಬರುವ ಸಭಾನಡತೆ ಸಂಪಾದಕರಾದ ಶ್ರೀ ಪಂಕರ ಹೆಜಮಾಡಿಯವರು ಅ. ನ. ಕೃ. ರವರನ್ನು ಸ್ವಾಗತಿಸಿದರು. ಈ ಸಮಾರಂಭದಲ್ಲಿ ಮುಂಬಯಿಯ ಹಿರಿಯರು ಲೇಖಕರು, ಪತ್ರಿಕಾಕರ್ತರು, ಮದ್ರಾಸಿನಿಂದಲೂ ಪ್ರಕಾಶಕರು ಬಾಜರಾಗಿದ್ದರು

ಕಲಾವಿದ ಶ್ರೀ ಎಸ್. ಎಂ. ಬಾಬುರಾಯರು

ಶ್ರೀ ಕ್ಷೇತ್ರಧರ್ಮಸ್ಥಳದಲ್ಲಿ ವರ್ಷಂಪ್ರತಿ ಸರ್ವಧರ್ಮ ಮತ್ತು ಸಾಹಿತ್ಯ ಮೈತ್ರೀಸಮ್ಮೇಳನಗಳು ವೈಭವದಿಂದ ನೆರವೇರುತ್ತದೆ. ಊರು—ಪರವೂರುಗಳಿಂದ ಕಿಕ್ಕಿರಿದು ಸೇರುವ ಜನಸಂದಣಿಯ ಮನರಂಜಿಸಲು ಕಲಾವಿದರಿಗೆ ಸೂಕ್ತ ಪ್ರೋತ್ಸಾಹ ನೀಡಲು ಅದೇ ವೇಳೆಯಲ್ಲಿ ನಾಟಕಾದಿ ಕಾರ್ಯಕ್ರಮಗಳೂ ನಡೆಯುತ್ತವೆ. ಶ್ರೀಕ್ಷೇತ್ರದ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಕಲಾವಿದರನ್ನು ಗುರುತಿಸಿ ಅವರನ್ನು ಉತ್ತೇಜಿಸುತ್ತಿರುವರು. ಸ್ಥಳೀಯ ಮತ್ತು ಪರಸ್ಥಾನೀಯ ಕಲಾವಿದರು ಇವರಿಂದ ಪ್ರೋತ್ಸಾಹ ಪಡೆಯುತ್ತಿರುವರು.

ಶ್ರೀ ಎಸ್. ಎಂ ಬಾಬುರಾಯರು ಶ್ರೀ ಕ್ಷೇತ್ರದ ದೇವಾಲಯದ ಕಾರ್ಯ ಚಟುವಟಿಕೆಗಳಲ್ಲೇ ತಮ್ಮ ಹೆಚ್ಚಿನ ಸಮಯವನ್ನು ಕಳೆಯುವವರು. ಆದೂಕ ಕಲಾರಾಧನೆಯ ಆಸಕ್ತಿಯು ಕನ್ನ ಅವಿಶ್ರಾಂತ ದುಡಿಮೆಯ ನಡಾವೆಯೂ ಅವರನ್ನು ಕಲೆಯತ್ತ ಒಯ್ದು ನಿಂದಿದೆ. ಶ್ರೀ ಬಾಬುರಾಯರು ಉತ್ತಮ ಅಭಿನಯ ನೀಡುವ ಶ್ರೀ ಪವಾಡ ದ ಅಮೆಚೂರ್ ಕಲಾವಿದರಲ್ಲಿ ಒಬ್ಬರು. ಮೀಲಿನ ಚಿತ್ರದಲ್ಲಿ ಶ್ರೀಯುತರು "ಪ್ರತಿಕ್ಷ್ಯ" ನಾಟಕದಲ್ಲಿ ಸುದೇಶನ ಪಾತ್ರವನ್ನೂ, ಕೆಳಗಡೆ ಚಿತ್ರದಲ್ಲಿ 'ಕಾಲೇಜ್ ಗರ್ಲ್' ಎಂಬ ಹಾಸ್ಯರಸ ಪ್ರಧಾನವಾದ ನಾಟಕದಲ್ಲಿ ಭಗವಂತಪ್ಪನ ಪಾತ್ರವನ್ನೂ ಯಶಸ್ವಿಯಾಗಿ ನಿರ್ವಹಿಸುತ್ತಿರುವ ದೃಶ್ಯವನ್ನು ಕಾಣಬಹುದು.

ಶ್ರೀ ತಿರುಗುಂದೀ ಜಗದ್ಗುರು ಆರಾಧನೆ

ಮಂಗಳೂರು, ಅನೆಗುಂದಿ ಜಗದ್ಗುರು ಶ್ರೀ ಶ್ರೀನಿವಾಸಾನಂದ ತೀರ್ಥ ಮಹಾಸ್ವಾಮಿಗಳವರ ತಿರುಗುಂದಿ ಶ್ರೀ ಕಂಕಾಲ ಬಾಲಕೃಷ್ಣ ಮೇಸ್ತ್ರಿಯವರ ದಿವಸ್ತಾನಪ್ರತಿಷ್ಠಾಪಿತ ಶ್ರೀ ಶ್ರೀನಿವಾಸ ವರ ಸವಾಧಿ ಕ್ಷೇತ್ರದಲ್ಲಿ ಹಾಗೂ ಮಂಗಳೂರು ಶ್ರೀ ಪದ್ಮಾವತೀರಮಣ ಸನ್ನಿಧಿಯಲ್ಲಿ ತಾ. 6—12—66 ಮಂ ವಿಧ್ಯುಕ್ತವಾಗಿ ಜರಗಿತು.

ರಸ್ತೆ ಸಾರಿಗೆ

ಸರಕಾರ ಆಹ್ವಾನ ಸ್ವೀಕರಿಸಲಿ

ಬಸ್ ಸಾರಿಗೆಯನ್ನು ರಾಷ್ಟ್ರೀಕರಿಸುವುದು ರಾಜ್ಯ ಸರಕಾರದ ನೀತಿ. ಜನತೆಗೆ ಕಡಿಮೆ ವೆಚ್ಚದಲ್ಲಿ ಸುಖಪ್ರಯಾಣದ ಅನುಕೂಲತೆಗಳನ್ನು ಒದಗಿಸುವುದೇ ಈ ನೀತಿಯನ್ನು ಸರಕಾರ ಸ್ವೀಕರಿಸಿದುದರ ಮುಖ್ಯ ಉದ್ದೇಶವಾಗಿತ್ತು. ಆದರೆ, ಇಂದೇನು ನಡೆಯುತ್ತಿದೆ? ಉದ್ದೇಶ ಬರಿಯ ಕಾಗದ ಪತ್ರಗಳಲ್ಲಿ ಮಾತ್ರ ಉಳಿದಿದೆ. ರಾಷ್ಟ್ರೀಕರಣಕ್ಕೆ ಮೊದಲು ಖಾಸಗಿ ಬಸ್ಸು ಕಂಪೆನಿಗಳು ಬಹುಮುಖ ಸ್ಪರ್ಧೆಯನ್ನು ಎದುರಿಸಿಯೂ ಲಾಭಗಳಿಸುತ್ತಿದ್ದವು; ತನ್ನ ನೌಕರರಿಗೆ ಬೋನಸ್ ನೀಡುತ್ತಿದ್ದುವು. ಆದರೆ, ರಾಜ್ಯ ರಸ್ತೆ ಸಾರಿಗೆ ಕಾರ್ಪರೇಶನ್ ವರ್ಷಂಪ್ರತಿ ನಷ್ಟವನ್ನೇ ಹೆಚ್ಚಿಸುತ್ತಿದೆ. ನೌಕರರ ಹಿತಾಸಕ್ತಿಗಳನ್ನು ಹೆಚ್ಚಿಸಲು ಅದು ಹಿಂದಿರುಗುತ್ತಿದೆ. ಹಾಗಿದ್ದರೂ ಸಾರಿಗೆಯ ದಂವನ್ನು ಏರಿಸುತ್ತಲೇ ಹೋಗುತ್ತಿದೆ. ಹೆಚ್ಚಿನ ದರಗಳನ್ನು ಪ್ರತಿ ಭಟಿಸಿದರೂ ಯಾವ ಪ್ರಯೋಜನವಾಗಲಿಲ್ಲ—ಏಕೆಂದರೆ, ಸಾರಿಗೆಯು ಜನ ಸಾಮಾನ್ಯರ ಅವಶ್ಯಕತೆಗಳಲ್ಲಿ ಒಂದಾಗಿದೆ. ರಾಷ್ಟ್ರೀಕೃತ ಹೆದ್ದಾರಿಗಳಲ್ಲಿ ಸರಕಾರದ ಏಕ ಸ್ವಾಮಿತ್ವ ಬೇರೆಯಿದೆ. ಇವೆರಡರ ಮುಂದೆ ನಾಗರಿಕ ಕಲೆಬಾಗಲೇ ಬೇಕಾಗುತ್ತದೆ.

ರಾಜ್ಯದ ಬಸ್ಸು ಮಾಲೀಕರು ರಾಜ್ಯ ಸರಕಾರಕ್ಕೊಂದು ಆಹ್ವಾನವಿತ್ತಿದ್ದಾರೆ: ರಾಷ್ಟ್ರೀಕರಣ ರದ್ದು ಮಾಡಿ ತಮಗೆ ಪರ್ಮಿಟು ನೀಡಿದರೆ ರಾಜ್ಯ ರಸ್ತೆ ಸಾರಿಗೆ ಕಾರ್ಪರೇಶನ್‌ಗಿಂತ ಕಡಿಮೆ ದರದಲ್ಲಿ ತಾವು ಬಸ್ಸು ಓಡಿಸುತ್ತೇವೆ—ಇದು ಕಲವೆಡೆ ನಡೆಯುತ್ತಲೂ ಇದೆ. ಸಾರಿಗೆ ದರ ಮಾತ್ರ ಕಡಮೆಯಲ್ಲ; ಸರಕಾರಿ ಬಸ್ಸುಗಳಿಗಿಂತ ಬೇಗನೇ ಖಾಸಗಿ ಬಸ್ಸುಗಳು ಗುರಿ ಸೇರುತ್ತವೆ. ಜನ ಖಾಸಗಿ ಬಸ್ಸುಗಳನ್ನೇ ಮೆಚ್ಚುತ್ತಿದ್ದರೂ— ಒಂದು ಪುಟ್ಟ ಬಾಟ್ಟಿ ಕೈಲಿದ್ದರೆ ಅವನು ಸೈಟ್ ಬಸ್ಸಿನಲ್ಲಿ ಪ್ರಯಾಣಿಸುವ ಯೋಗ್ಯತೆ ಕಳೆದುಕೊಳ್ಳುತ್ತಾನೆ. ಹಾಗಾಗಿ ನೇರ ಪ್ರಯಾಣಿಕರನ್ನುಳಿದರೆ ಮತ್ತಾರೂ ಸರಕಾರಿ ಬಸ್ಸುಗಳನ್ನು ಹತ್ತುವುದಿಲ್ಲ—ಉಭಯ ರಹದಾರಿ ಹಾದಿಯಲ್ಲಿ.

ಸುಖಾಸನಗಳು, ಸುಖ ಸೌಲಭ್ಯಗಳು ಆರಾಮ ಪ್ರಯಾಣ ಸೌಕರ್ಯ ಎಸ್. ಟಿ. ಬಸ್ಸುಗಳಲ್ಲಿರಲಿ ಬಹುದು; ಆದರೆ; ಖಾಸಗಿ ಬಸ್ಸುಗಳೂ ಇದರಿಂದ ಹಿಂದುಳಿದಿಲ್ಲ. ಖಾಸಗಿ ಬಸ್ಸು ಮಾಲೀಕರು ಬೇಕಷ್ಟು ಬಸ್ಸುಗಳನ್ನು ಒಡಿಸಲು ಸಿದ್ಧರಿದ್ದಾರೆ; ಸಮಯ ಪಾಲನೆ, ಪ್ರಯಾಣಿಕರೊಡನೆ ನಯ—ವಿನಯದ ವ್ಯವಹಾರ, ಕಡಿಮೆ ದರ, ಹೆಚ್ಚು ಸೌಕರ್ಯಗಳನ್ನು ಅವರು ನೀಡುತ್ತಾರೆ. ಆದರೆ, ಎಸ್. ಟಿ. ಬಸ್ಸುಗಳ ಕ್ರಮವೇ ಬೇರೆ. ಪ್ರಮಾಣಿಕರ ಸೌಕರ್ಯಕ್ಕಿಂತ ನಿಯಮ ಪಾಲನೆಗೆ ಅಲ್ಲಿ ಮಹತ್ವ ಹೆಚ್ಚು—ಬಸ್ಸು ನಿಲ್ಲಿಸುವಲ್ಲಿ ಮಾತ್ರ—ಟಿಕೇಟು ಕೊಡುವಲ್ಲಿ ಅಲ್ಲ.

ಸರಕಾರಿ ಬಸ್ಸುಗಳ ಸಾಂಗೆ ದರ ಹೆಚ್ಚಿದ್ದರೂ ಅವುಗಳು ಲಾಭಕರವಲ್ಲ. ವಸೂಲಾದ ಹಣದ ಬಹುಪಾಲು ಸಿಬ್ಬಂದಿ ವರ್ಗದವರ ಹೊಟ್ಟೆಯನ್ನು ಅಗ್ರಮವಾಗಿ ಸೇರುತ್ತದ ಎಂಬುದು ಸಾಮಾನ್ಯ ಆರೋಪ. ಬೇಲಿಯೇ ಹೊಲ ನುಂಗುವುದೂ ಸರ್ವ ಸಾಮಾನ್ಯ. ತನಗೆ ನಷ್ಟವಾಗುವ ಕೆಲಸವನ್ನು ಯಾರಿಂದರೂ ಯಾಕಾಗಿ ನೂಡಬೇಕು? ಸರಕಾರವು ರಾಷ್ಟ್ರೀಕರಣವನ್ನು ಹಿಂತೆಗೆದುಕೊಂಡು, ರಹದಾರಿಯನ್ನು ಖಾಸಗಿ ರಂಗಕ್ಕೆ ನೀಡಿದರೆ ಅದರ ಬೊಕ್ಕಸ ಹೆಚ್ಚಬಹುದು. ಈಗ ಸರಕಾರಿ ಒಡೆತನದ ಬಸ್ಸುಗಳನ್ನು ಹರಾಜು ಮಾಡಿದರೆ, ಕಾರ್ಪರೇಶನ್ ತನ್ನ ಬಂಡವಾಳವನ್ನು ಮಾತ್ರವಲ್ಲ, ಆಗಿರುವ ನಷ್ಟವನ್ನೂ ತುಂಬಿಕೊಳ್ಳಬಹುದು.

ಬಸ್ಸು ಮಾಲೀಕರು ನೀಡಿದ ಖಂಡಿತ ಆಹ್ವಾನ ಸ್ವೀಕರಿಸುವುದೇ ಇಂದಿನ ದಿನಗಳಲ್ಲಿ ರಾಜ್ಯ ಸರಕಾರಕ್ಕೆ ಹಿತಕಾರಿಯೆನಿಸುತ್ತದೆ.

ಸ್ಕೌಟು ಭವನದ ಉದ್ಘಾಟನೆ

ಚೇಳಾರ್ಡಿ, ಸ್ಥಳೀಯ ಶಾರದಾ ಹೈಸ್ಕೂಲಿನ ಸ್ಕೌಟು ಭವನದ ಉದ್ಘಾಟನೆಯನ್ನು ರಾಜ್ಯದ ಆರೋಗ್ಯ ಸಚಿವರಾದ ಡಾ|| ಶ್ರೀ ಕೆ. ನಾಗಪ್ಪ ಅಳ್ವರು ತಾ. 7—12—65ರಂದು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ವಾಚೇಲ್ ಶ್ರೀನಿವಾಸನಾಯಕ್, ಎಂ. ಎಲ್. ಎ. ಇವರು ವಹಿಸಿದ್ದರು. ಆರಂಭದಲ್ಲಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಯು. ಮಾಧವ ನಾಯಕರು ಅತಿಥಿಗಳನ್ನು ಸ್ವಾಗತಿಸಿ ಹಾರಾರ್ಪಣೆ ಗೈದರು. ಸ್ಕೌಟ್ ಮಾಸ್ಟರ್ ಶ್ರೀ ಕೆ. ಗೋಪಾಲ ನೆಟ್ಟಿಗಾರರು ಅಧ್ಯಕ್ಷರ ಹಾಗೂ ಅತಿಥಿಗಳ ಪರಿಚಯ ಮಾಡಿಸಿ ಶಾಲೆಯಲ್ಲಿ ಸ್ಕೌಟ್‌ದಳದ ಸ್ಥಾಪನೆಯ ಮಹತ್ವವನ್ನು ವಿವರಿಸಿದರು. ಮುನ್ನ ಸಚಿವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಶಾಲಾ ವಿದ್ಯಾರ್ಥಿಗಳು ಈ ಸ್ಕೌಟ್ ದಳಕ್ಕೆ ಸೇರಿ ಶಿಸ್ತುಬದ್ಧರಾಗಿ ಹಾಗೂ ಆದರ್ಶ ಪ್ರಜೆಗಳಾಗಿ ಬಾಳುವ ಮಾರ್ಗವನ್ನು ಕಂಡುಕೊಂಡು ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂದರು. ಅಲ್ಲದೆ ಸ್ಕೌಟ್‌ದಳದ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆಗೈದರು. ಅಧ್ಯಕ್ಷರು ಶಾಲಾ ವಿದ್ಯಾರ್ಥಿಗಳ ಶಿಸ್ತು ಹಾಗೂ ಇನ್ನಿತರ ಚಟುವಟಿಕೆಗಳನ್ನು ಕಂಡು ಮೆಚ್ಚುಗೆಯನ್ನು ವ್ಯಕ್ತಪಡಿಸಿದರಲ್ಲದೆ ಶಾಲೆಯು ಸರ್ವತೋಮುಖವಾದ ಪ್ರಗತಿಗೆ ಶ್ರಮತೋರ್ವ ವಿದ್ಯಾರ್ಥಿಯೂ ಶಕ್ತನಾಗಿ ದುಡಿಯುವಂತೆ ಕರೆನೀಡಿದರು. ಕೊನೆಯಲ್ಲಿ ಅಧ್ಯಾಪಕ ಶ್ರೀ ಸಿ. ನುಂಡಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಚೇಂಬರ್ ಆಫ್ ಎಗ್ರಿಕಲ್ಚರ್

ಮ. ಕ. ಚೇಂಬರ್—ಆಫ್ ಅಗ್ರಿಕಲ್ಚರಿನ ಸಭೆಯು ಶ್ರೀ. ಎಂ. ಕೆ. ದೇವಂತಾರರ ಅಧ್ಯಕ್ಷತೆಯಲ್ಲಿ ಜರಗಿತು.

ಹೊಸ ವರ್ಷದ ಆಡಳಿತ ಕಮಿಟಿ ಶ್ರೀಗಳಾದ ಕೆ. ಕೆ. ಶೆಟ್ಟಿ (ಅಧ್ಯಕ್ಷರು) ಎಂ. ಕೆ. ದೇವರಾಜ (ಉಪಾಧ್ಯಕ್ಷರು), ಕೆ. ಸಿ. ಶೆಟ್ಟಿ (ಗೌ. ಕಾರ್ಯದರ್ಶಿ), ಬಿ ಮಂಜಯ್ಯ ಹೆಗ್ಡೆ (ಖಜಾಂಜಿ) ಆರಿಸಲಾಯ್ತು.

ಜಿಲ್ಲಾಧ್ಯಂತ ಪ್ರತಿಯೊಂದು ಹಳ್ಳಿಯಿಂದಲೂ ರೈತಬಾಂಧವರನ್ನು ಚೇಂಬರಿನ ಸದಸ್ಯರನ್ನಾಗಿ ಸೇರಿಸಿಕೊಳ್ಳುವ ವಿಚಾರದಲ್ಲಿ, ಪ್ರತೀ ತಾಲೂಕುಕೇಂದ್ರದಲ್ಲೂ ಅರಿಸಲ್ಪಟ್ಟ ಸದಸ್ಯರುಳ್ಳ ಉಪಸಮಿತಿಯೊಂದನ್ನು ನೇಮಿಸಲಾಯ್ತು. ಈ ಸಂಧರ್ಭದಲ್ಲಿ ಜಿಲ್ಲಾ ಸಹಕಾರಿ ಬಾಂಧವರಿಗೆ ನೆರವನ್ನು ಪಡೆದು, ಅವರಿಗೆ ಕಾ ದೇಶದ ವಿದೇಶ ಸಂಪರ್ಕ ಇಲಾಖೆಯನ್ನು ರು ಚೇಂಬರಿಗೆ ಒದಗಿಸಿರುವ ಕೃಷಿಗೆ ಸಂಬಂಧಿಸಿರುವ ಚಲಚಿತ್ರಗಳ ಪ್ರದರ್ಶನದ ವ್ಯವಸ್ಥೆಯನ್ನು ಹಳ್ಳಿಗಳಲ್ಲಿ ಮಾಡುವುದೆಂದು ತೀರ್ಮಾನಿಸಲಾಯ್ತು.

ಭೂ ಸುಧಾರಣಾ ಕಾನೂನಿನನ್ವಯ, ಭೂಮಿಯ ಎಂತಹವರು ತರಗತಿ ಮತ್ತು ಉತ್ಪತ್ತಿಯನ್ನು ಸರಕಾರವು ನಿಶ್ಚೈಸಿದ್ದು, ಅಸ್ಸೆಂಟು ಕಮಿಷನರುಗಳು ಮತ್ತು ತಹಶೀಲ್ದಾರರು ಬಹಿರಂಗಪಡಿಸಿದ ಈ ಪಟ್ಟಿಗಳಲ್ಲಿ ದೋಷ ಪರಿಹಾರಗಳಿರುವುದನ್ನು ಗಮನಿಸಿ, ಈ ಬಗ್ಗೆ ಕೃಷಿಕರಲ್ಲಿ ಜಾಗೃತಿಯನ್ನುಂಟುಮಾಡಿ, ಸಾಧ್ಯವಾದಷ್ಟು ಸರಿಯಾಗಿ ಅವರ ಆಕ್ಷೇಪಣೆ ಮತ್ತು ಸಲಹೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ತಕ್ಕ ಕ್ರಮಗಳನ್ನು ಕೈಗೊಳ್ಳುವಂತೆ ತೀರ್ಮಾನಿಸಲ್ಪಟ್ಟಿತು.

ಸರಕಾರದ ಲೆವಿ ಧೋರಣೆಯ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆದು, ಬೆಲೆಯೇರಿಕೆಯ ಈ ದಿನಗಳಲ್ಲಿ ಸಾಗುವಳಿಯ ಖರ್ಚು ವಿವರಿತ ಏರಿದ್ದು, ಸರಕಾರ ನಿಗದಿ ಪಡಿಸಿದ ಬೆಲೆಗೆ ಲೆವಿ ಹಾಕ್ವ ಸಾಧ್ಯಾಸಾಧ್ಯತೆಗಳನ್ನು ವಿಮರ್ಶಿಸಿ, ಮುಂದಿನ ಮೂರು ತಿಂಗಳೊಳಗೆ ವರದಿ ಒಪ್ಪಿಸಲು ಒಂದು ಉಪಸಮಿತಿಯನ್ನು ನೇಮಿಸಲಾಯ್ತು.

ಸುಧಾರಣೆಯು ಹದ್ದು

೧

ತಾಯಿ ಬಳ್ಳಿಯು ಹೊಟ್ಟೆಯಲ್ಲಿ
ಹುಟ್ಟಿ ಬಂದಿದ್ದ
ಕೊಯ್ದು ಕೊಟ್ಟರು ನನ್ನ ಕೈಗೆ
ಬೇರೊಬ್ಬನಿಗೆ
ಬೂಡಿಗೊಬ್ಬರವಿಕ್ಕಿ ನಾಟಿದನು
ನನ್ನನವ
ತಾನೆ ಬೆಳೆಸಿಟ್ಟಿದ್ದ ಎಳೆಗಿಡದ
ಬಳಗ||

೨

ಜತೆಯು ಗಿಡವನು ಒಬ್ಬ ಮುತ್ತಿಟ್ಟು
ಸುತ್ತುವರಿ
ದೊಯ್ಯನೊಯ್ಯನೆ ಕೆಂದಲಂಚ ದೋರಿ
ತೋಳತೆಕ್ಕೆಯೊಳಿ ಬೊಗವಟ್ಟು ಮೈ
ಮರಿಯ
ಸಗ್ಗಸುಖಿಯಂಡಿಹೆವು ಮೇರೆ ಏರಿ||

೩

ಒಂದುದನ ಬಲಗಾಳಿ ಗುದ್ದಿ
ವಿಂಡುಗಳಿದುರಿ
ಗಿಡವದೊಂಗಿತು ಭೂಮಿತೊಡೆಯ
ಮೇಲೆ
ಜೀವರಸ ಹೀರಿ ಬೆಳೆದಾಕೆಯೂತನ
ಕೂಡೆ
ಸಗ್ಗವಾರಿಯ ಬಿಡದೆ ಹಿಡಿಯು
ಬೆಳೆಸಿದಳು

೪

ರುದ್ರ-ಕೋಪಾರುಣನೇತ್ರ ದಗ್ಧ ಮನುಷ್ಯ
ಕಾನನದ
ಗ ಮನಸಿಜನಾಗಿ ರತಿಗೆ ಸುಖವೀವ
ಒಂದು ಗಿಡ ಹೋದರೇನ್ ಕೊರಡಿ
ಗೆಲ್ಲಿಯ ಕೊರತೆಯೆ
ಕಟ್ಟಿದರು ಅಹ, ಕಣ್ಣೀರ ವಿಮಹ||

೫

ಸಲುಗೆ ಯೆಳ್ಳನಿತಿಲ್ಲ, ಸಮರಸದ
ಬಾಳ್ವೆ
ಒಲುಮೆಯೆಂಬುದು ಬರಿಯ
ಬಾಯ ಸದ್ದು
ಮಸುಳಿಸಿದ ಯೌವನದ ವೇಳೆ
ಯದು ನೀರಸವ
ಹೆದರಿಪರು ಸೂತ್ರವಿದ
ಸುಧಾರಣೆಯ ಹೆದ್ದ

—ಗೋರಾ

ಕನಸಿಗೊಂದು ರೂಪ....

ಮಕ್ಕಳ ಕಲ್ಪನೆಯ ಲೋಕದಲ್ಲಿ ಅಸಾಧ್ಯವಾದುದೇನೂ ಇಲ್ಲ. ಕನಸಿನಲ್ಲಿ ತೇಲುವಷ್ಟು ಕಾಲ ಎಲ್ಲವೂ ಸಾಧ್ಯವೇ! ಆದರ ವಿದ್ಯಾಭ್ಯಾಸ, ಉದ್ಯೋಗ ಜೀವನಸ್ಥ, ಕುಟುಂಬದ ಬದುಕು, ಹೊಸಮನೆ, ಆಧುನಿಕ ಅಭಿರುಚಿಗೆ ಒಗ್ಗುವ ಸಾಧನ ಸೌಕರ್ಯಗಳು.... ಹೀಗೆ ಹತ್ತು ಹಲವು ಅವಶ್ಯಕತೆಗಳು ಮಕ್ಕಳು ಬೆಳೆದಂತೆ, ನಿಮಗೆ ಇವಿರಾಗುವ ಸಮಸ್ಯೆಗಳು. ಕನಸನ್ನು ನನಸಾಗೊಳಿಸಲು ಉಳತಾಯವೊಂದೇ ಸರಳ ಮಾರ್ಗ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದು, ಹಣ ಸಂಸಾದನೆಯಾದಂತೆ ಅದರಲ್ಲಿ ಉಳಿಸಿಕೊಂಡು ಬನ್ನಿರಿ. ಖಾತೆಯಲ್ಲಿ ಹಣ ಬೆಳೆದಂತೆ ನಿಮ್ಮ ಮಕ್ಕಳ ಕನಸಿಗೆ ಕ್ರಮೇಣ ರೂಪ ಬರಲು ತೊಡಗುವುದು.

ಕನಿಷ್ಠ ರೂಪ್ಯ 5ನ್ನು ತೆತ್ತು ತೆರೆಯಬಹುದಾದ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ 25 ಪೈಸೆಯನ್ನೂ ಕಟ್ಟುತ್ತಾ ಬರಬಹುದು. ಚೆಕ್ ಪುಸ್ತಕದ ಸೌಲಭ್ಯವಿದೆ. ವರ್ಷದಲ್ಲಿ 150 ಬಾರಿ ಖಾತೆಯಿಂದ ಹಣವನ್ನು ಹಿಂಪಡೆಯಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಯುಕ್ತಿಣಿ ಭವಿಷ್ಯ

೧) ೧೯೦೦ ಪ್ರಶ್ನೆ ಕೇಳಿದರೆ ೨೦೦.— ಪ್ರಶ್ನೆಗಳನ್ನೆಷ್ಟು ಕೇಳಿದರೆ ೪೦೦.

೨) ಇನಿದನಿ ಆಂಕಾಂಕ್ಷೆ —ಸ್ವಂತ ಆನುಭವದ ಖಾತ್ರಿ ಪುಲಾಸು. ೧ ಡಬ್ಬಿಗೆ 100ರೂ.— ಬೇಕಾದವರು ವ್ಹಿ. ಪಿ ಯಿಂದ ತರಿಸಿಕೊಳ್ಳಿರಿ.

ಪಂಡಿತ. ಎ. ಗುಂಡುಪುಶ್ರಯ್ಯ ಶಾಸ್ತ್ರಿ ಮು. ಪೊ.—ಬೈಲೂರು, ತಾ. ಬೈಲಹೊಂಗಲ. ಜಿ. ಬೆಳಗಾಂವ್.

ಮುರುಕು ದೋಣಿ

(ಎರಡನೇ ಸುಟದಿಂದ)

ನ ಬಾಲದಂತೆ ಬೆಳೆದು ತೊಡಗಿತು.

ಶ್ರೀಮಂತ—ಬಡವ; ಯುವಕ—ಮುದುಕರೆಂಬ ಭೇಧವಿಲ್ಲದೆ ನಾಗಮ್ಮನ ನಾವೆ ಹತ್ತಿದರು. ಅಲ್ಲಲ್ಲಿ ಮುಳುಗಿದವರ ಸಂಖ್ಯೆಗೇನೂ ಮಿತಿಯಿಲ್ಲ.

ಹೆರವರ ದೋಣಿ ಮುಳುಗುವುದನ್ನು ಕಂಡಾಗಲೇ ನಾಗಮ್ಮನಿಗೆ ಸಂತೃಪ್ತಿಯೆಂಬುದಿತ್ತು.

ನಾಗಮ್ಮ ಎಲ್ಲರ ಬಾಯಲ್ಲೂ ಕುಣಿಯ ಹತ್ತಿದಳು. ಮಗುವೊಂದು ದಿನ ಅಕಸ್ಮಾತ್ತಾಗಿಯೇ ಅಸುನೀಗಿದಾಗ ಕಣ್ಣೀರು ಹರಿದಿದ್ದರೂ ಮುಂದೆ ಅದು ಆದು ನೊಳಿತಾಯಿತೆಂದೇ ಭಾವಿಸಿದಳು.

ಹಗಲು ರಾತ್ರಿಗಳೆರಡೂ ನಾಗಮ್ಮನ ಪಾಲಿಗೆ ಒಂದೇ ಆಗಿ ತೋರ ತೊಡಗಿತು. ಮನೆಯಿಂದ ಹೊರ ಬೀಳುವಾಗ ಎಂದು ಬಾರದೀ ಮೊಡಲಿನವರಂತೆ ಕೊನೆಯುದ್ದೂ ಆಯಿತು.

ನಾಗಮ್ಮನ ನೈವಾರನೆ ಸೇವಿಸಲು ಬಾಗಿಲು ಬಳಿ ಬಿದ್ದಿರುವ ನಾಯಿಗಳೆಣಿಕೆ ಮಾಡುವಂತಿರಲಿಲ್ಲ. ಎಂಜಲೆಲೆ ನೆಕ್ಕಲು ಹಾತೊರೆದು ಅಲೆದಾಡುವ ನಾಯಿಗಳು ಒಂದೆರಡಲ್ಲ.

ಕಾಮುಕರ ತಂಡ ಬೆಳೆದಂತೆ ಬಂಡಿ ಮೇಲೆದ್ದು ಉರುಳಿ ತೊಡಗಿತು. ಉರುಳುವ ರಭಸ ಹೆಚ್ಚಿದಂತೆ ಮೈಲಿಗೆಗಳ ಎಣಿಕೆ ತಪ್ಪುತ್ತಿತ್ತು. ಬಾಳ ಹೊಸ್ತಿಲಲ್ಲಿ ಮೊದಲೊಮ್ಮೆ ಪ್ರೇಮವಾದಾಟದ ಕಣಿವೆಗೆ ನಾಗಮ್ಮನ ದೋಣಿ ನುಗ್ಗಿದ್ದರೂ ಅದು ಮುಗ್ಗುಗದೆ ಮತ್ತೆ ಕಾಮನಾಟದ ಶ್ರವಾಹದಲ್ಲಿ ತೇಲತೊಡಗಿತು.

ಪ್ರವಾಹದ ರಭಸ ಹೆಚ್ಚಿದಂತೆ ದೋಣಿ ಸಿಕ್ಕತ್ತ ಓಡತೊಡಗಿತು. ತೇಲುವ ದೋಣಿಯಲ್ಲಿ ಹುಟ್ಟು ಹಾಕುವ ನಾಗಮ್ಮ ಅದೇ ಸ್ವರ್ಗವೆಂದು ಭಾವಿಸಿದಳು.

ಅದರ ಅಲೆಗಳ ಹೊಡೆತ ಬಿರುಸಾದಂತೆ ನಾಗಮ್ಮನ ಕಕ್ಕೆ ಕಡಿಮೆಯಾಗ ತೊಡಗಿತು.

ದಿನಗಳೆದಂತೆ ಏನೋ ಆಲಸ್ಯ, ಯಾವುದೋ ವೇದನೆ ಕಾಣತೊಡಗಿತು. ಆಗಾಗ ಮೇಲೆದ್ದು ತೋರುವ ರೋಗದ ಚಿಹ್ನೆ, ದೋಣಿ ಮುಂದೆ ಹಿಂದಿನ ಗತಿಯಿಂದಲೇ ಸಾಗಲಾರದೆಂಬ ಸೂಚನೆಯಾಗಿ ಕಂಡಿತು.

ಇಷ್ಟಲ್ಯಾದಿನ ಸರಿಯಾಗಿ ಕಂಡರೂ ಮತ್ತೆ ಅದೇ ಪಿಡುಗು. ಮುರುಕು ದೋಣಿ ಎಡವುತ್ತಾ ಇಂಟುತ್ತಾ ನಡೆಯಿತು.

ಮಧು ಹೀರಿದ ತುಂಬಿಗಳು ಹೊಸ ಹೂವನ್ನು ಹುಡುಕಿ ಹಾರಾಟಿದ್ದವು. ಬಾಡಿದ ಹೂ ಮನಸಾದ ದಂಡಿಯನ್ನು ಸೀರೀ ಸ್ಲೈ ಕುಳಿತಿತ್ತು. ಕಾಮದ ಹೂ ಕಂಪಿದಾಗ ಇಣುಕರಲ್ಲಿ ಕಾಣದಂತಾದರು.

ನಾಗಮ್ಮನ ಅದಾಯದ ಮಂಡ್ಯೆ ಕೊಡಲಿ ಏಟು ಬಿದ್ದಿತ್ತು. ಆಗಲೇ ಅವಳ ಒಡಲು ನಾವೆಯ ಬಾಯ್ತು ಬಿರಿಯಿತು.

ಅದರ ಹಿಂದಿನ ನೆನಪು ಮಾಸರಲಿಲ್ಲ. ಅಂದು ಆಚೆಯ್ಕೋ ಜನರು ಅಂದಿದ್ದರು—"ನೀನು ಅಪ್ಸರೆ; ಇದೇ ಸ್ವರ್ಗ ಲೋಕ; ನೀನು ನವೆಲ್ಲರ ದೇವತೆ".

ಅಂದು ದೀನ ವದನಂಗಿ ಕಾಣಿಕೆಯ ಹರಿವಾಣವನ್ನು ಮುಂದಿಟ್ಟು ವರ ನೀಡೆಂದ. ಬೇಡಿದ ಭಕ್ತರಿಗೆಲ್ಲಾ ಇಷ್ಟಾರ್ಥ ನೀಡಿದ್ದಳು.

ಅಂದಿನ ಹಣದ ರ್ಣಿ ರ್ಣಿಣ ಶಬ್ದ ಇನ್ನೂ ಕಿವಿಯಲ್ಲಿ ಗುಂಯ್ ಗುಡುತಿತ್ತು.

ಆದರೀಗ ಎಲ್ಲವೂ ವಾಯ. ಬರುವ ಶ್ವಾಸ. ನಾನಿನ ಭೃಮೆಯಂಗಿ ತೋರುತಿತ್ತು. ಕಾಲಚಕ್ರದ ಸುಳಿಯಲ್ಲಿ ಉರುಳುಳಿ ಹೋಗಿತ್ತು.

ಪಾದುಷವಿಲ್ಲದ ಕನ್ನಡಿ ನೂತ್ರ ಕೈಯಲ್ಲಿದಿತ್ತು.

ಮುಖಕಾಣದ ಕನ್ನಡಿ ಜೀವನದ ಪೆರಗನ್ನು ವರೆಯಿಸಿತು. ರಗ ಹೀರಿದ ಸಿವೆಯಾಗಿದ್ದಳು. ಸವೆದು ಹೋದ ಪಾದ ಕ್ಕೆಯಾಗಿದ್ದಳು. ಯೋಚಿಸುವಾಗ ಈ ಜೀವನ ನಂತ—

ಹೌದು. ಇದೇ ನರಕ. ಇದಕ್ಕಿಂತಲೂ ಕೀಳೆನಿಸಿದ ಜೀವನ ಇನ್ನು ಸಿಗಲಾರದು. ನ್ಯೆಯೆಲ್ಲಾ ಹುಣ್ಣು. ನಾರುತ್ತಿರುವ ದೇಹದಲ್ಲಿ ಸೋರ ವ ಕೀವು; ಅಸಹ್ಯ ದುರ್ವಾಸನೆ. ಎಂದೆಂದೂ ಗುಣವಾಗದ ರೋಗ. ಯಾರಾದರೂ ಮುಟ್ಟುವುದಂತಿರಲಿ, ಮನೆಯ ಬಳಿಯೂ ಸುಳಿಯುತ್ತಿರಲಿಲ್ಲ.

ಎಷ್ಟೋ ಸಂಸಾರ ಹಾಳು ಮಾಡಿದ, ಅದೆಷ್ಟೋ ಮನೆ ಮುಳುಗಿಸಿದ ಬೀದಿಯ ಬಸವಿಗೆ ಆದದ್ದು ಒಳ್ಳತಾಯಿತೆಂಬ ನುಡಿ ಕಿವಿಗಳಿಗೆ ಕೇಳದೆ ಇರುತ್ತಿರಲಿಲ್ಲ. ಆಗ ಅವಳಿಗೆ ಈ ಕಿವಿಗಳಾದರೂ ಕಿವುಡಾಗ ಬಾರದಿತ್ತೇ ಎನಿಸುವುದ.

ಕೂಡಿಟ್ಟ ಹಣ ನೀರಿನಂತೆ ಕರಗುತ್ತಿದೆ. ಪಂಡಿತನ ಚೀಲ ತುಂಬುತ್ತಿದೆ. ಆದರೆ ನನಗೆ ಇದೇ ನರಕ.

ಕಣ್ಣಾಲ್ಲಾ ಪಂಜಾಗತೊಡಗಿದ್ದವು. ಈ ನರಕದಲ್ಲಿಯೇ ಬಿದ್ದು ಇನ್ನೆಷ್ಟು ದಿನ ಕೊಳೆಯುವಿ. ನನ್ನ ಸೇವೆ ಗೆಂದು ನಿಂತ ಗೌರಿಯ ಕಣ್ಣೆಲ್ಲಾ ಹಣದ ಗಂಟಿನ ವೇಲೆಂದು, ತಿಳಿದದ್ದು ಇಂದಲ್ಲ. ಆದರೀನು ಮಾಡಲಿ? ನೆರವಿಗೊಬ್ಬಳಾದರೂ ಬೇಕಲ್ಲ?

ಬಾಳ ಸಾಗರವಲ್ಲಿ ಒಗ್ಗಾಲಿ ಗಾಡಿ ಮುರುಕು ದೋಣಿಯಾಗಿ ತೇಲ ಹತ್ತಿದೆ.

ಆದನ್ನು ಯೋಚಿಸುತ್ತಲೇ ಇದ್ದಳು. ಏಕೆನ್ನು ಮಳಿಗಿಲ್ಲ? ಪಾಪದ ಕೊಡ ತುಂಬಿಲ್ಲವೇ? ಬರ ಗಾಳಿ ಬೀಸಲಾರದೇ? ಅಲೆಗಳೇಳಲಾರದೇ? ಎಲ್ಲವೂ ದರೂ ಬಂಡೆಪ್ಪಳಿಸಬಾರದೇ?

ಘನ ರೋಗವಂದ ಕೊಳೆ ಕೊಳೆತು ಹೋಗುತ್ತಿದೆ ಈ ದೇಹ. ಅಂದ ಚೆಂದವಾದ ದೇಹ ಇಂದು ಹೇಗಾಗಿದೆ? ಎಲ್ಲವೂ ಕ್ಷಣಿಕವಾಗಿಯೇ ತೋರುವುದು.

ಹೊಸನ ಕಂಡು ಜಾಳಿದಾಗ; ಕಣ್ಣಿನ ಸರು ಮಾಗಿದಾಗ; ಹೆಣ್ಣಿನ ಬಯಕೆ ಕಾವೇರಿದಾಗ ಮಾತ್ರ ಕಾಣುವುದು.

ಈಗ ಎಲ್ಲವೂ ಬಯಲು ಭ್ರಾಂತಿ ಬಡಿದ ಹೂವನ್ನು ಮೂಸುವವರಿಲ್ಲ. ಕೊಳೆತ ಹಣ್ಣನ್ನು ತಿನ್ನುವವರಿಲ್ಲ. ನಾರುವ ದೇಹವನ್ನು ಬಯಸುವವರಿಲ್ಲ. ಜೀವನವ ಜೀವಿಯೆಂಬ ಸಹಾನುಭೂತಿಯು ನುಡಿಯು ಕೂಡಾ ಕೇಳಿ ಬರುತ್ತಿಲ್ಲ. ಈಗ ಇದೇ ನರಕ.

ಆಗಲೇ ನೆರೆಮನೆಯಿಂದ ಕೇಕೇ ನಗುವಿನ ಅಲೆಗಳು ಗಾಳಿಯಲ್ಲಿ ತೇಲಿ ಬಂದು ಕಿವಿಗಳಿಗಪ್ಪಳಿಸುತಿತ್ತು. ಒಂದು ಕಾಲದಲ್ಲಿ ಈ ಮನೆಯಲ್ಲಿಯೂ ಅದೇ ನಗುವಿನ ಹೊನಲಿತ್ತು. ಈಗ ಅದರ ಸ್ಮೃತಿ ಮಾತ್ರ ಉಳಿದಿತ್ತು. ಮತ್ತೆಲ್ಲವೂ ಮಾಯವಾಗಿತ್ತು.

ಪಂಡಿತನ ಮೊಕಗಳೆಲ್ಲವೂ ಈಗ ಬರಿಯ ಟೊಳ್ಳಾಗಿಯೇ ಕಾಣುತಿತ್ತು. ಬೆಪಧ ಬೇಡವೆಂದರೂ ಕೇಳಲಾರ. ಇಂದು ಗುಣವಾಗುತ್ತೆ; ನಾಳೆ ಗುಣವಾಗುತ್ತೆ ಎಂಬ ಕಲ್ಪನೆಯನ್ನು ದಿನವೂ ಹಾಡಿ ಹೊಗಳಿ ಜೀವಪನ್ನೇ ಸೂರೆಗೊಂಡಿದ್ದನು. ಆದರೂ ಸಾವು ಸಮೀಪಿಸಿಲಿಲ್ಲ.

ಅದೆಲ್ಲಿಯೋ ಮಂಗಳ ವಾದ್ಯದ ಧ್ವನಿ ಸವಿಯಾದ ಸಂಗೀತ ಎಲ್ಲವೂ ಗಾಳಿಯಲ್ಲಿ ತೆಳುಗಿ ತೇಲಿ ಬರುತ್ತಿದೆ. ಅದೀಗ ಎಲ್ಲವನ್ನೂ ಹಿಂದಿನದನ್ನೇ ನೆನಪಿಗೆ ತರುತ್ತಿದೆ. ಎಷ್ಟು ಸಂಗೀತ ಕಚೇರಿಗಳನ್ನು ಎಳೆತನದಲ್ಲಿ ತಾನು ಏರ್ಪಡಿಸಿರಲಿಲ್ಲ. ಗಾನ ಶಾರದೆ ನೀನೆಂದು ಅಡಿಪ್ಪ ಜನ ನನ್ನ ಕರೆದಿಲ್ಲ. ಸವಿಮಾತಿಗಾಗಿ ಎಷ್ಟು ಜನ ಕಾದು ನಿಂತಿರಲಿಲ್ಲ. ಈಗ ಎಲ್ಲವೂ ಬರಿಯ ಕನಸು.

ಕಣ್ಣುಜ್ಜಿಕೊಂಡೇ ಕಣ್ಣೆರೆದು ನೋಡುವಾಗ ಸತ್ಕ ಶವದ ಪೆರವಣಿಗೆ ಶ್ಮಶಾನಕ್ಕೆ ಹೊರಟಿದೆ. ದಾರಿಯ ಸೂಚಕ ಮಂತ್ರದ ಪರನ ಕಿವಿಗಳಲ್ಲಿಯನ್ನು ನೇರುತ್ತಿದೆ. ಜನ ಮಧ್ಯದಲ್ಲಿ ಯಾರೋ ಬಿಕ್ಕತ್ತಿರುವ ಸದ್ದು ಶಾಂತವಾಗಿಯೇ ಕೇಳಬರುತ್ತಿದೆ. ಹತ್ತಿರು ಜನರಿದ್ದರೂ ಮೌನವೃತವೇ ಸಾಗಿತ್ತು. ವೈರಾಗ್ಯದ ಬಳಿಯು ಎಲರೆಲ್ಲರ ಮನಿದ ಮೇಲೆದ್ದು ಕಾಣುತಿತ್ತು.

ಎಲ್ಲರಿಗೂ ಒಂದು ದಿನ ಸಾವು ಸಿದ್ಧ. ಸತ್ತಾಗಲೇ ನಮಶಾಂತಿಯೂದೀತು. ಚಿರ ನಿದ್ರೆಯೇ ಹರಮ ಸೌಖ್ಯ.

ಆಗ ಈ ನರಕಯಾತನ ತಪ್ಪೀತು. ಆದರೆ ಸಾವು ಕರೆದಾಗ ಬಂದೀತೆ? ಎಲ್ಲವೂ ಬರಿಯ ಮಾಯೆ—

ಈಗೆಲ್ಲವೂ ಮಾಯೆಯಾಗಿ ಕಾಣುತ್ತಿದೆ. ಒಂದರ ಹಿಂದೊಂದು ಬೀಸಿದ ಬಿರುಗಾಳಿಯುಷ್ಟೆ ಸಿಕ್ಕು ತೇಲುತ್ತಿದ್ದ ನಾವೆ ಇಂದು ಮಾಯೆಯಾಗಿ ಕಾಣುತ್ತಿದೆ. ಪ್ರೇಮ—ಕಾಮ—ನರಕ ಇಂದರ ಹಿಂದೊಂದು ವಿಶೇಷಿಸಿ ಮಾಯವಾಗಿತ್ತು. ಜೊತೆಗೆ ಶಕ್ತಿ—ಉದಯ—ನಾಟ—ಬ್ಯಾರಿ—ಪಿಳಾದು—ಮೂರಾಡ—ಗೌಡ—ಶೆಟ್ಟಿ—ಅಧಿಕಾರಿ; ನೂರಲ್ಲ ಸಾವಿರ ಸಾಲುಗಳ ಪದರು ಎಲ್ಲವೂ ಈಗ ಬರಿಯ ನೆನಪು.

ಆಗಲೇ ಮತ್ತೆ ಬರುಗಾಳಿ ಬೀಸಿತು. ಮುರುಕು ದೋಣಿ ತಲ್ಲಣಿಸಿತು. ಈಗ ಕಣ್ಣು ಕಾಣಿಸದು. ಕಿವಿ ಕೇಳಲಾರದು. ಸೇವೆ ಮಾಡುತ್ತಿದ್ದ ಗೌರಿ ಎಂದೋ ಹಣದ ಗಂಟೆನೊಡನೆ ಮಾಯವಾಗಿದ್ದಳು. ಈಗ ಜೀವಂತ ಹೆಣ. ಹೆಣದ ಜೀಲ ಬದಿ ದಾದಾಗ ಜಂಡಿಕ ಕಾಣದಾಗಿದ್ದ. ಈಗ ಗಳಿಗೆಯು ಎಣಿಕೆ ಆರಂಭವಾಗಿತ್ತು. ಹಿಂದಿನದೆಲ್ಲದರ ಮರೆವೆ. ಭವಿಷ್ಯತ್ತಿನ ಆಲೋಚನೆಯಲ್ಲದೆ ನರಕ ಕೂಪದಲ್ಲಿ ಬಿದ್ದು ಉಸಿಳಾಡುವ ಕ್ರಿಮಿ. ಮುರುಕು ದೋಣಿ ಮುಳುಗಿ ಹತ್ತಿದೆ. ಆಗಲೇ ಕತ್ತಲಾವರಿಸಿತ..

ಎಲ್ಲೆಲ್ಲಿಯೂ ಕಗ್ಗತ್ತಲೆ. ಬೆಳಕಿಲ್ಲದ ಕತ್ತಲೆಯಲ್ಲಿ ದೋಣಿ ಸಾಗಹತ್ತಿತ್ತ. ಗುರಿ ಇಲ್ಲದ ನೆಲೆಗಾಗಿ ತೇಲಿ ತೇಲಿ ಹೋಗುತಿತ್ತು. ಸಾವಿಕಸಿಲ್ಲದ ನಾವೆ ಗಾಳಿ ಕೊಂಡೊಯ್ದತ್ತ ತೇಲಿ ಹೋಗುತಿತ್ತು. ದೂರ ಬಹುದೂರ ಸಾಗಿತ್ತ. ಕೊನೆಗೊಮ್ಮೆ ಶೂನ್ಯದತ್ತ ಸಾಗಿದ ದೋಣಿ ಮತ್ತೊಮ್ಮೆ ಕಾಣದಾಯಿತು. ಆಗೆಲ್ಲವೂ ಶಾಂತವಾಯಿತು.

Prohibitory Order

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R E P 117/1966.

(O.S. 183/65)

of Karkal Munsif Court

ಕಲಂ ಬೆಟ್ಟು ಲಕ್ಷ್ಮಿನಾರಾಯಣ ಭಟ್ಟ—ಆರ್ಜದಾರ. (ವಾದಿ)

ಸದಾಶಿವ ಶೆಟ್ಟಿ, ಕೃಷ್ಣ ಶೆಟ್ಟಿ ಮಗ—ಬೆಳ್ತಂಗಡಿ ತಾಲ್ಲೂ ಸೂಡುಮೊಗರು ಗ್ರಾಮದ ಬಿದ್ರಕ್ಕ ಮನೆ—P. O. — Venoor —ವಿದ್ [ಪ್ರತಿವಾದಿ]

ಸದ್ರಿ ಎದ್ರಿಗೆ ಕೆಳಗಿನ ಷ್ಟುಂ ಪ್ರಕಾರ ಈ ಮಾಲ್ಕು ಕೊಡಿಸಬೇಕಾಗುವ ಪ್ರೊಹಿಬಿಟರಿ ಆರ್ಡರ್ ಬರಂದ್ರ

ಆರ್ಜದಾರನು ನಿಮ್ಮ ಮೇಲೆ ಸಲ್ಲಿಸಿದ ಮೇಲಿನ ಅನ್ಯಜ್ಞಾರಿಯಲ್ಲಿ 21ನೇ ಆರ್ಡರು 54ನೇ ರೂಲ್ ಮೇರೆಗೆ ನಿಮ್ಮ ಹಕ್ಕಿನ ಬೆಳ್ತಂಗಡಿ ತಾಲ್ಲೂ ಮುಂಡುಮೊಗರು ಗ್ರಾಮದ ಸ. ನಂ. 24—2 ಪುಂಜ 0.05 .1.

3. ನಂಜ		1.55	10.15.
5. ಡಿ		0.66	4 11.
6. ಬಾಗ್ಯತ		0.49	1.3.
23—6. ನಂಜ		0.55	3.14.
24—6. ಡಿ		0.75	5.5.
7. ಬಾಗ್ಯತ		0.09	.3.
104—3. ಪುಂಜ		0.15	.1.
140—4	ಡಿ	0.07	.1.
66.1A 2.	ಡಿ	0.34	.5.
101.1B.	ಡಿ	0.80	.11.
179.2—	ಡಿ	4.44	3.5.
181.2—	ಡಿ	1.22	.16.
6—	ಡಿ	1.72	1.5.

ಈ ಆಸ್ತಿ, ಯಿಪ್ಪ ಕುಮ್ಕಿ, ಕಾಡುಕರೆ, ಕಟ್ಟಡಗಳು ಬಾರಿ, ನೀರ್ ಹಳ್ಳ ಯಿತ್ಯಾದಿ ಕೂಡಿರುವ ಸಮಸ್ತ ಮೂಲಹಕ್ಕಿನ ಆಸ್ತಿಯನ್ನು ಕೋರ್ಟ್ ಹುಕುಂ ಶ್ರಕಾರ ಜಪ್ತು ಮಡ್ಡಿಯಲ್ಲಿರುವ ನೀವು ಸದ್ರಿ ಆಸ್ತಿಯನ್ನು ಯಾವ ರೀತಿಯಲ್ಲೂ ಇವರ್ಬಾರಿ ಯಾ ಪರಾಧೀನ ಮಾಡಕೂಡದೆಂತ ಆಜ್ಞಾಪಿಸಲ್ಪಟ್ಟಿದೆ. ಅಂತೆಯೂ, ಈ ಕುರಿತು ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ತಾ. 21—12—66 ರಂದು ಬೆಳಿಗ್ಗೆ 10ಗಂಟೆಗೆ ಕೋರ್ಟು ಮುಂಗಡ ಹಾಜರಾಗಿ ಉದಹರ್ಸಿ ತಕ್ಕದ್ದಂತಲೂ ಈ ಮಾಲ್ಕು ನಿಮಗೆ ತಿಳಿಯ ಬನ್ನಿಯದೆ.

B K. Suryanarayana Rao

Advocate for Petitioner

ಬೆಳ್ತಂಗಡಿ, ತಾ. 7—12—1966.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

NAVAYUGA 15-12-1966
Registered with the Registrar of News Papers for India under No. R. N. 3546/'57

REGD. No. B G. 176
LICENCE No. 31
Licensed to Post without Prepayment

ಗಾಂಧೀ ಮಾರ್ಗ

ಸಂತ ಹಣವಾದರೂ ದುಂದು ವೆಚ್ಚ ಸಲದು

ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ೧೯೪೬ನೆಯ ಶಿವರಾತ್ರಿ ಮಲ್ಲಿ ಗಾಂಧಿಯವರ ಜತೆ ಇರುವಾಗಲೇ ನೆರೆಮನೆಯಲ್ಲಿ ಸ್ವರ್ಗಸ್ಥರಾದರು. ಭಾರತ, ಪೂರ್ಣ ಶೋಕದಲ್ಲಿ ಮುಳುಗಿತು. ಅನಂತರ ಗಾಂಧಿಜಿಯ ಬಿಡುಗಡೆಯೊದ ನಂತರ, ಕೃತಜ್ಞ ಭಾರತ ಕಸ್ತೂರಿಬಾರವರ ಸ್ಮರಣೆಯಲ್ಲಿ ದೇಶದ ಕಾರ್ಯದಲ್ಲಿ ತೊಡಗಿಸಲು ಒಂದು ಕೋಟಿ ರೂಪಾಯಿಗಳ ಒಂದು ನಿಧಿಯನ್ನು ಸಂಗ್ರಹಿಸಿತು. ಈ ನಿಧಿಯನ್ನು ಒಂದು ಸರಳ ಸಮಾರಂಭದಲ್ಲಿ ಗಾಂಧಿಯವರಿಗೆ ಅರ್ಪಿಸುವ ಏರ್ಪಾಡಾಗಿತ್ತು. ಗಾಂಧಿಯವರು ಬಂದು ವೇದಿಕೆಯ ಮೇಲೆ ಕುಳಿತರು. ಕಾರ್ಯಕ್ರಮದ ಹೊಣೆಗಾರಿಕೆ ಕವಿಯತ್ರಿ ಸರೋಜಿನಿ ನಾಯ್ಡುರವರ ಮೇಲೆ ಬಿದ್ದಿತ್ತು.

ವಾತಾವರಣ ದುಗುಡವಾಗಿದ್ದುದರಿಂದಲೋ ಏನೋ ಶ್ರೀಮತಿ ಸರೋಜಿನಿ ನಾಯ್ಡುರವರು ಗಾಂಧಿಯವರ ಮುಂದೆ ಒಂದು ಕೋಟಿ ರೂಪಾಯಿಗಳ ಚೆಕ್ಕನ್ನು ಹಿಡಿದು "ಬಾಪು ಇದನ್ನು ನಾನು ಈಗ ಹೊಸ್ತುಕೊಂಡು ಓಡಿ ಬಿಟ್ಟರೆ ನೀವು ಏನು ಮಾಡ ತ್ರೀರಿ?" ಎಂದು ಸ್ವಲ್ಪ ಗಟ್ಟಿಯಾಗಿ ಎಲ್ಲರಿಗೂ ಕೇಳುವಂತೆಯೇ ಹೇಳಿದರು. ಕೂಡಲೇ ಸಭೆಯು ಎಂತಾನ ನಗುವಿನಿಂದ ಕಲಕಿಹೋಯಿತು. ಗಾಂಧಿಯವರೂ ಮುಗುಳು ನಗುತ್ತಾ 'ನೀನು ಅಂತಹ ಗಟ್ಟಿಗಿತ್ತಿಯೇ ಹೌದು' ಎಂದರು. ಮತ್ತೂ ಒಂದು ನಿಮಿಷ ಸಭೆಯಲ್ಲಿ ನಗುವಿನ ಹಗುರತೆ ಹಂಡಿತು. ಗಾಂಧಿಯವರು ಕೈ ಎತ್ತಿ ಒಂದು ಬೆಂಳನಿಂದ ಸನ್ನೆ ಮಾಡಿದರು. ಸಭೆಯಲ್ಲಿ ಮತ್ತೆ ಗಂಭೀರ ವ್ಮೌನ ನೆಲಸಿತು. ಗಾಂಧಿಯವರು 'ಇದು ನಗುವಿನ ವಿಷಯವಲ್ಲ. ನಮ್ಮ ಹೊಣೆಗಾರಿಕೆ ವಿಶೇಷವಾಗಿದೆ. ಜನತೆಯು ಈ ಉದಾರ ದಾನಕ್ಕೆ ನಾವು ಅರ್ಹರಾಗಬೇಕು' ಎಂದು ಹೇಳಿದರು.

ಶ್ರೀಮತಿ ಸರೋಜಿನಿ ನಾಯ್ಡುರವರನ್ನು ಗಾಂಧಿಯವರು 'ನೀನು ಅಂತಹ ಗಟ್ಟಿಗಿತ್ತಿಯೇ ಹೌದು' ಎಂದು ಹೇಳಿದುದರಲ್ಲಿ ಸ್ವಲ್ಪ ಅರ್ಥಪೂರ್ಣ ವಿನೋದವು ಇತ್ತು. ಅಂದಿನ ಕಾಲದಲ್ಲಿ ಬಡವರು ಬಲ್ಲಿದರು ಅದಿಯಾಗಿ ಎಲ್ಲರೂ ಕಾಂಗ್ರೆಸ್ಸಿಗೆ ಸೇವೆ ಸಲ್ಲಿಸುವುದಕ್ಕಾಗಿಯೇ ಸೇರುತ್ತಿದ್ದರು. ಖಾದಿ ಕಾರ್ಯ, ಹರಿಜನ ಕಾರ್ಯ, ಅಸ್ಪೃಶ್ಯತಾನಿವಾರಣೆ, ಮದ್ಯಪಾನ ವಿಮೋಚನೆ, ಗ್ರಾಮೋದ್ಯೋಗ ಮುಂತಾದ ಕಾರ್ಯಗಳನ್ನೆಲ್ಲಾ ಕಾಂಗ್ರೆಸ್ ಕೆಲಸಗಾರರು ತಮ್ಮ ಕೈಯಿಂದಲೇ ಖರ್ಚುಮಾಡಿಕೊಂಡು ಮಾಡುತ್ತಿದ್ದರು. ಆದರೂ ಗಾಂಧಿಯವರು, ಕೆಲಸಗಾರರೂ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂಬುದನ್ನು ಹಣ ಕೆಲಸಗಾರರದೇ ಆದರೂ, ಕಣ್ಣಿಟ್ಟು ನೋಡುತ್ತಿದ್ದರು. ಸಾರ್ವಜನಿಕ ಕಾರ್ಯದಲ್ಲಿ, ದುಂದು ವೆಚ್ಚ ಪ್ರದರ್ಶನದಿಂದ ಜನತೆಯ ನೀತಿಯ ಅವನತಿಯಾಗುವುದೆಂದು ಅವರ ನಂಬಿಕೆಯಾಗಿತ್ತು. ಕಾಂಗ್ರೆಸ್ಸಮುಖಂಡರನ್ನೂ ನಾಯಕರನ್ನೂ ಕಾಂಗ್ರೆಸ್ ಕೆಲಸಕ್ಕೆ ನಿಯಮಿಸಿದಾಗ, ಅವರು ಸಹ ತಮ್ಮ ಸ್ವಂತ ಹಣವನ್ನೇ ಖರ್ಚು ಮಾಡಿದರೂ ಗಾಂಧಿಯವರಿಗೆಲ್ಲಾ ಒಪ್ಪಿಸಬೇಕಾಗಿತ್ತು. ಒಂದು ಸಲ ಶ್ರೀಮತಿ ಸರೋಜಿನಿ ನಾಯ್ಡುರವರು ಬಿಹಾರ್‌ನಲ್ಲಿ ಕಾಂಗ್ರೆಸ್ ಕಾರ್ಯಕ್ಕಾಗಿ 'ಫಂಡ್' ವಸೂಲ್ಮಾಡಲು ಹೋಗಿದ್ದಾಗ, ವಸೂಲಿ ಮಾಡಿದ ಹಣಕ್ಕಿಂತಲೂ ಅವರಿಗೂ ಅವರ ಪರಿವಾರದವರ ಕ್ಕೂ ಆದ ಖರ್ಚು ಹೆಚ್ಚಾಗಿತ್ತು. ತನ್ನ ವೈಯಕ್ತಿಕ ಪರಿವಾರದ ಖರ್ಚನ್ನೆಲ್ಲ ಶ್ರೀಮತಿ ಸರೋಜಿನಿ ನಾಯ್ಡುರವರೇ ವಹಿಸಿಕೊಂಡು ಕಾಂಗ್ರೆಸಿಗಾಗಿ ವಸೂಲಾಗಿದ್ದ ಹಣವನ್ನು ಕಾಂಗ್ರೆಸ್ ಅಧಿಕಾರಿಗಳಿಗೆ ವಹಿಸಿದ್ದರು. ಆದರೂ ವಿಷಯ ಗಾಂಧಿಯವರಿಗೆ ತಿಳಿದಾಗ ಅವರು "ಇಷ್ಟು ಖರ್ಚು ಮಾಡಿದ ಮೇಲೆ ಇದರ ನಾಲ್ಕು ರಷ್ಟಾದರೂ ಹಣ ಕೇಳುರಣೆ ಮಾಡಬೇಕಿತ್ತು" ಎಂದರು. ತಮ್ಮ ಖರ್ಚನ್ನು ತಾವೇ ವಹಿಸಿಕೊಂಡರೂ ಸಹ ಸರೋಜಿನಿ ನಾಯ್ಡು ರಾಣಿಯಂತೆ ಹಣ ಜೆಲ್ಲಿ ಕ್ತಾಳೆ ಎಂಬುದು ಎಲ್ಲರಿಗೂ ಗೊತ್ತಾಗಿತ್ತು. ಆದುದರಿಂದಲೇ ಗಾಂಧಿಯವರು ಅಕೆಗೆ ನೀನು ಅಂತಹ ಗಟ್ಟಿಗಿತ್ತಿಯೇ ಹೌದ.' ಎಂದು ಹೇಳಿದುದು.

ತನ್ನ ಸ್ವಂತ ಹಣವನ್ನೂ ಹೆದ್ದು ವಿಾರಿ ಖರ್ಚು ಮಾಡುವುದಕ್ಕೆ ವಿರೋಧ ವಿದ್ದ ಗಾಂಧಿಯವರ ಅನುಯಾಯಿಗಳು ಇಂದು ಸಾರ್ವಜನಿಕ ಹಣವನ್ನು ಹೋಲ ವಾಡುವುದನ್ನು ನೋಡಿದ್ದರೆ ಅದಕ್ಕಾಗಿ ಗಾಂಧೀಜಿ ಉಪವಾಸ ಬಿದ್ದು ಪ್ರಾಣ ತ್ಯಜಿಸುತ್ತಿದ್ದರ!

ಅನ್ಯತ ಬಿಂದು

ಸಂಪತ್ತಿನ ಸುಪ್ಪತ್ತಿಗೆಯಲ್ಲಿ ಮನುಷ್ಯ ಕೊಳೆಯುವಂತೆ ರಷ್ಟ್ರಗಳು ಕೊಳೆಯುತ್ತವೆ.

ಂ ಂ ಂ

ಭಗವಂತನ ಭಕ್ತಿ ಮತ್ತು ಅಂಜಿಕೆಗಳೇ ನಮಗೆ ಮನುಷ್ಯತ್ವ ಹೆದರಿಕೆ ಇಲ್ಲದಂತೆ ಮಾಡಬಲ್ಲವು.

ಂ ಂ ಂ

ತಪ್ಪೇ ಮಾಡದವನು ತಿಳಿಗೇಡಿ; ತಪ್ಪು ಮಾಡಿ ತಿದ್ದಿಕೊಳ್ಳದವನು ಮೂರ್ಖ.

ಂ ಂ ಂ

ಸಾಧಿಸುವೆನೆಂಬ ನಿರ್ದಿಷ್ಟ ನಿಲುವೇ ಯಶಸ್ಸಿನ ಮೂಲ. ಹರ ನಿರ್ಧಾರದಲ್ಲಿಯೇ ಬುದ್ಧಿಯ ಉಗಮವೂ ಇದೆ.

ಂ ಂ ಂ

ಓದುವುದರಿಂದ ಜ್ಞಾನ ಸಂಪಾದಿಸಬಹುದು. ಆದರೆ ಜ್ಞಾನಸಂಪನ್ನರಿಂದ ಎಲ್ಲ ಮುಳ್ಳು ಬೇಪರ್ಡಿಸಿ ಬೇಕಾದರೆ ಚಿಂತನೆ ಇನ್ನಷ್ಟೆ ಆಗದು.

ಂ ಂ ಂ

ತನ್ನ ಲಾಭಕ್ಕಾಗಿಯೇ ಜೀವಿಸುವ ಮನುಷ್ಯನು ವ್ಯರ್ಥ ಬಂದಾಗ ಎಲ್ಲವನ್ನೂ ಇತರರ ಲಾಭಕ್ಕಾಗಿ ಬಿತ್ತಬೇಕಾಗುತ್ತದೆ.

ಇಂಗ್ಲಿಷ್ಕೈ ನೀವೇ ಇಂಗ್ಲಿಷ್ ಕಲಿಯಬೇಕೆಂದಿದರೆ—
ದಿ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು ಮಫಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪುಸ್ತಕಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ವಿತಾಳ, ಎಂ.ಡಿ.ಡಿ.ಎಸ್
ಇವರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ಪರಿಹಾರ ತೋರಿಸಿ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ದಾಸಶ್ರೀನಾದದಲ್ಲಿ ದೀಪಾವಳೀ ತುಳಸೀ ಪೂಜಾ ಸಮಾರಂಭ

ಮದ್ರಾಸ್, ದಾಸ ಸಾಹಿತ್ಯ ಪ್ರಕಾಶದ ಮೂಲಿಕರಾದ ಶ್ರೀ ಕೆ. ಸೀತಾರಾಮರಾಯರ ವಾಸಗೃಹವಾದ "ದಾಸಶ್ರೀನಾದ"ದಲ್ಲಿ ಎಂದಿನಂತೆ ಈ ವರ್ಷದ ತುಳಸೀ ವೃಂದಾವನೋತ್ಸವದ ಪೂಜಾ ಸಂಕೀರ್ತನೆ, ನರ್ತನ ಭಜನೆಗಳು ಬಹು ವಿಜೃಂಭಣೆಯಿಂದ ನಡೆಯಿತು.

ಅತ್ಯಾಕರ್ಷಕ ರೀತಿಯಲ್ಲಿ ದೇವರಿಗೂ, ವೃಂದಾವನಕ್ಕೂ ಮಹಾ ಮಂಗಳಾರತಿಯಾದ ಮೇಲೆ ಶ್ರೀ ಸೀತಾರಾಮಯ್ಯನವರು ತಮ್ಮ ಪೂಜ್ಯ ಪಿತೃವಾದ ಭಕ್ತ ಶ್ರೀ ಗೋವಿಂದದಾಸರ ಭಜನ ಪದ್ಧತಿಯನ್ನು ಅನುಸರಿಸಿ ಅವರ ಮತ್ತು ಕುಟುಂಬ ಪರಿವಾರದೊಡನೆ ಒಟ್ಟು ಕೂಡಿಕೊಂಡು ತಾಳ ಸಂಕೀರ್ತನೆಗಳೊಡನೆ ಮಂಟಪದ ಸುತ್ತಲೂ ಪ್ರದಕ್ಷಿಣಾಕಾರವಾಗಿ ನರ್ತನ ಮಾಡುತ್ತಿರುವ ದೃಶ್ಯವು ಜನರನ್ನು ಭಕ್ತಿಯ ಆನಂದದಲ್ಲಿ ರೋಮಾಂಚಗೊಳಿಸುತ್ತಿತ್ತು.

ಆನಂತರ ಅತಿಥಿಗಳಿಗೆ ಪ್ರಸಾದ ವಿತರಣೆಯಾಗುತ್ತಿದ್ದಿತು. ಈ ರೀತಿಯಲ್ಲಿ ಅತಿಥಿಗಳಿಗೆ ಕಾರ್ತಿಕ ಶುದ್ಧ ಪ್ರತಿಪದೆಯಂದ ಉತ್ಥಾನ ದ್ವಾದಶೀ ಪೂರ್ತಿಯಾಗಿ ಉತ್ಸವದ ವೈಭವವು ಜರಗಿತು. ಈ ಉತ್ಸವಕ್ಕೆ ಅನೇಕಾನೇಕ ಗಣ್ಯ ವ್ಯಕ್ತಿಗಳು ಭಕ್ತಿಯಿಂದಾಗಿ ಬಂದು ಭಾಗವಹಿಸಿದ್ದಲ್ಲದೇ ಕಡೆಯ ಎರಡು ದಿನಗಳ ಉತ್ಸವಕ್ಕೆ ದ. ಕನ್ನಡದ ಸಾಪ್ರಸಿದ್ಧ ಮೂರನೆ ಹಿರಿಯ ಶ್ರೀ ಪಾದಂಗಳವರು ದಯಮಾಡಿಸಿ ತಾವೂ ಸಂಕೀರ್ತನೆಯಲ್ಲಿ ಭಾಗವಹಿಸಿ ಬಯಸಾದೇಪಪಟ್ಟು ಕೊಂಡು ನೆರೆದಿದ್ದ ಭಕ್ತ ವೃಂದವನ್ನು ಫಲಮಂತ್ರಾಕ್ಷತೆಗಳೊಡನೆ ಅನುಗ್ರಹಿಸಿದರು.

Edited, Printed & Published by K. H. Shetty at the Navayuga Press, Udipi, S. India.

ನವಯುಗ

22—12—1966



೨೦
ಪೈಸೆ

ಕಥಾ ಪ್ರಪಂಚ

ಮುತ್ತು ಕೈ ಸೇರಿದಾಗ

ಕಥೆಗಾರರು : ಶ್ರೀ ಗೋಪಾಲ ರಾವ್ ಎ.

— ೧ —

ಮಟ್ಟು ಗ್ರಾಮದಲ್ಲಿ ಆ ರಾತ್ರಿ ಏನೋ ಕೋಲಾಹಲ ನಡೆದಂತಿತ್ತು. ಮನುಕುಲ ಮನುಕಾದ ಕತ್ತಲಲ್ಲಿ ಆ ಹಳ್ಳಿಯ ಗುಡಿಸಲುಗಳೆಲ್ಲಾ ಕಣ್ಣು ಕಣ್ಣು ಬಿಡುತ್ತಿರುವಂತೆ ಕಂಡು ಬರುತ್ತಿತ್ತು. ಕಡಲ ಮೇಲಿಂದ ಬೀಸಿ ಬರುತ್ತಿರುವ ಉಪ್ಪು ಗಾಳಿಗೆ ಗುಡಿಸಲುಗಳ ಮೇಲೆ ಹೊದಿಸಿದ ಒಣಗಿದ ತಾಳೆ ಎಲೆಗಳು ಕದಲಿ ಒಂದು ವಿಚಿತ್ರವಾದ ಧ್ವನಿಯನ್ನೆಬ್ಬಿಸುತ್ತಿದೆ. ಸಮುದ್ರದ ಪಡಪಡ ಹೊಯಿಗೆಯಲ್ಲಿ ಕೆಲವರು ಅಲ್ಲಲ್ಲಿ ಕಳಿತು ಉದ್ದನೆಯ ಚುಟ್ಟಾಗಳನ್ನು ಸೇದುತ್ತಿದ್ದಾರೆ. ಬ್ರಹ್ಮದಾಕಾರವಾಗಿ ಅಲೆಗಳೆದ್ದು ದಡದೆಡೆಗೆ ಬಂದು ಬಡಿಯುತ್ತಿವೆ. ದಡದಿಂದ ಮತ್ತೆ ಕಡಲಕಡೆಗೆ ನೀರು ರಭಸದಿಂದ ನುಗ್ಗಿ ಹೊಡುಗುತ್ತದೆ. ಕಡಲಿನ ಮೊರೆತ ಕೇಳಿ ಬರುತ್ತಿದೆ.

ದೂರದ ತೆಂಗಿನ ತೋಟದಲ್ಲಿ ಆಗೊಮ್ಮೆ ಈಗೊಮ್ಮೆ ಎಂಬಂತೆ ತೆಂಗಿನಕಾಯಿಗಳು ಬಿದ್ದ ಸದ್ದು ಕೇಳಿಸುತ್ತಿತ್ತು. ಪ್ರತಿನಿತ್ಯವೂ ಆ ಸದ್ದು ಕೇಳಿಸುತಿತ್ತು. ಇದರಿಂದಾಗಿ ಹಳ್ಳಿಯವರು ಹೆಚ್ಚಾಗಿ ಆ ಕಡೆಗೆ ಗಮನ ಹರಿಸುತ್ತಿರಲಿಲ್ಲ. ಸ್ವಲ್ಪ ಸಮಯದ ತನಕ ಕೇಳಿಬರುತಿದ್ದ ಸದ್ದು ಒಡಗಿ ನಿಶ್ಶಬ್ದ ವಾಯಿತು. ಅದನ್ನು ಭೇದಿಸಿಕೊಂಡು ಇದ್ದಕ್ಕಿದ್ದಂತೆ ಏನೋ ಬಿದ್ದ ಸದ್ದು ಕೇಳಿ ಬಂತು. ಅದರ ಜತೆ ಒಬ್ಬ ಮನುಷ್ಯನೋದನದ ಬೊಬ್ಬೆಯೂ ಕೇಳಿಬಂತು. ಊರಿನ ಮೇಲೆ ಆಕ್ರಮಣ ಕಳಿತ ಜನಬಬ್ಬೆಗಿಂತೆ ತೋಪಿನ ಕಡೆಗೆ ಧಾವಿಸತೊಡಗಿದರು.

ಒಂದು ತೆಂಗಿನ ಮರದ ಬುಡದಲ್ಲಿ ಒಂದು ವ್ಯಕ್ತಿ ಬೋರಲಾಗಿ ಬಿದ್ದಿತ್ತು. ಸುತ್ತಲು ತೆಂಗಿನ ಕಾಯಿಗಳು ಜೆಲ್ಲುಹೋಗಿವೆ. ಬಂದಿದ್ದವರಲ್ಲಿ ಕೆಲವರು ವ್ಯಕ್ತಿಯನ್ನೆಬ್ಬಿಸಿ ಉಪಚರಿಸಲು ತೊಡಗಿದರು. ಆತನ ಸರಿಯಷ್ಟಿದ್ದ ಕೆಲವರು—

"ಮೂರಣ್ಣ! ಈತ ಇಲ್ಲಿಗೆ ಹೇಗೆ ಬಂದ?" ಎಂದು ಉದ್ಗಾರ ತೆಗೆದರು.

ಮೂರಣ್ಣನನ್ನು ಎಬ್ಬಿಸಿ ಆತನನ್ನು ಹೊತ್ತು ಕೊಂಡು ಮೇಲ್ತೋಟದ ಗುಡಿಸಲ ಕಡೆಗೆ ಕರೆದ್ದು ಹೊರಟರು. ಬಾಗಿಲು ಸಪೂರತ್ಯಕ್ಕೆ ಕಾರಣವಿತ್ತು. ಬಾಗಿಲನ್ನು ದೂಡಿ ಒಳ ಪ್ರವೇಶಿಸಿ ಮೂರಣ್ಣನನ್ನು ಮಲಗಿಸಿದರು. ಅಲ್ಲೇ ಒಂದು ಮೂಲೆಯಲ್ಲಿ ಮಲಗಿದ್ದ ಲಚ್ಚಿಯನ್ನೆಬ್ಬಿಸಿ ವಿಷಯವನ್ನು ತಿಳಿಸಿದರು. ಧಡಕ್ಕೆ ಮೂತ್ರ ಪಟ್ಟಾಗಿದೆ ಎಂದೂ ಗಾಬರಿಯಾಗುವ ಪ್ರಸಂಗ ಇಲ್ಲವೆಂದೂ ಧೈರ್ಯ ಹೇಳಿ ಬಂದಿದ್ದ ಜನ ಚದರಿದರು.

ಲಚ್ಚಿ ಮೂರಣ್ಣನ ಒಳ ಪಂದಾಗ ಮೂರಾಗಿ ವೈದ್ಯ ಎಂಬಿನೆ ಬಡಿಯುತ್ತಿತ್ತು. ಮೂರಣ್ಣನ ಹತ್ತಿರ ಬಂದಂಗೆ ಅವಳಿಗೆ ಓರಂತೆ ಬಂದ ಹಾಗಾಯಿತು.

ಸ್ವಲ್ಪ ತಡವಾದ ನಂತರ ಮೂರಣ್ಣ ಅತ್ತಿತ್ತ ಹೊರಳಲಾರಂಭಿಸಿದ. ಮುನುಕಳೆದುಕೊಂಡು ಮಲಗಿದ. ಅವನ ತಲೆ ಒಂದೇ ಸವನೆ ಒಡಿಯುತ್ತಿತ್ತು. ಬಾಯಿಯಲ್ಲಿ ಒಂದು ತರದ ಜೊಲ್ಲು ತುಂಬಿ ಬರುತ್ತಿದ್ದಿತು. ಅದನ್ನು ಬೇಗ ಬೇಗನೇ ನುಂಗಲು ಪ್ರಯತ್ನಿಸಿದ. ಗಂಟಲಿಗೆ ಬೆರಳು ಹಾಕಿ ಒಮ್ಮೆ ಪೂರ್ಣ ವಾಂತಿ ಮಾಡಿ ಬಿಡಬೇಕೆಂದು ಅವನಿಗೆನಿಸಿತು. ಆದರೆ ಏಕೆ ವಾಂತಿ ಮಾಡುವಂತಿಲ್ಲ. ಹರಿದ ಹಳೆಯ ಕಂಬಳಿಯ ನಸು ಬೆಚ್ಚಗಿನ ನೆರಿಗೆಗಳಲ್ಲಿ ಮೂರಣ್ಣ ನಿದ್ರಿಸಿದ.

— ೨ —

ಮೂರಣ್ಣ ಹುಟ್ಟಿ ಕುರುಡ. ಇಪ್ಪತ್ತು ಇಪ್ಪತ್ತೊಂದು ವರ್ಷಗಳ ತರುಣ. ಐದು ಅಡಿ ಆರು ಅಂಗುಲಗಳಷ್ಟು ಎತ್ತರ. ಸಾಮುಮಾಡಿ ಸ್ಪುಟಗೊಂಡ ಸ್ನಾಯುಗಳು, ಒಳ್ಳೆಯ ಬಿಳಿ ಮೈ ಬಣ್ಣ. ಗಂಭೀರವಾದ ಮುಖ. ಚಿಗುರು ಮೀಸೆ. ಗುಂಗುರು ಕೂದಲಿನ ಕಾಯ್ದು. ನೋಡಿದರೆ ಯಾರಾದರೂ ಆತನಲ್ಲಿ ಆಕರ್ಷಿತರಾಗುವುದು ಆಶ್ಚರ್ಯವೇನಲ್ಲ ಎಂಬಷ್ಟಿದ್ದ.

ಮೂರಣ್ಣ ಕುರುಡನಾದರೂ ತೆಂಗಿನ ಸಮಾರು ಹತ್ತು ಮರದಲ್ಲಿ ಜಾಗದ ಕೈ. ಬಾಲ್ಯದಲ್ಲಿ ತಂಬಿಯಿಂದ ಕಲಿತ ವಿದ್ಯೆಯೇ ಮರು ಹತ್ತುವುದು, ಅದೂ ರಾತ್ರಿ ಹೊತ್ತಿನಲ್ಲಿ ಯಾರಿಂದಲೂ ಮುಂಕ್ಕೆ ಹತ್ತಿ ಕಾಯಿ ಕೊಯ್ಯುವುದರಲ್ಲಿ ನಿಸ್ಸೀಮ. ತೋಟ ಯಾರದೇ ಇರಲಿ, ಕೇವಲ ಅಂದಾಜಿನಲ್ಲೇ ಕಷ್ಟಪಟ್ಟು ಎತ್ತುತ್ತಿದ್ದ. ಕಾಯಿಡನೆ ದಿಂದಿಂದ ಯಾರೂ ಆತನಿಗೆ ಎದುರು ಬೀಳುವ ಸಾಹಸ ಮಾಡುತಿರಲಿಲ್ಲ.

ತಪ್ಪೇಭಟ್ಟರಂದು ಮೂರಣ್ಣನಿಗೆ ಬಲು ಪ್ರೀತಿ. ತಿಂಗಳಲ್ಲೇ ಊರಾಗದವನಾಗಿದ್ದ ತನ್ನಂಬಂದಷ್ಟು ಕೆಲಸವನ್ನು ತೆಪ್ಪೇಭಟ್ಟರೂ ಇಷ್ಟೇ. ಮೂರಣ್ಣನನ್ನು ಎಗ್ಗಿನಂತೆ ಇಟ್ಟಿಕೊಂಡು ಬಂದಿದ್ದರು.

ಮೂರಣ್ಣನ ತಂದೆ ಸತ್ತಾಗ ಸ್ವತಃ ತೆಪ್ಪೇಭಟ್ಟರೇ ಮೂರಣ್ಣನ ಮನೆಗೆ ಬಂದು ಎಂದಿದ್ದರು—

'ಮೂರಣ್ಣ!'

ಸ್ವರದಿಂದಲೇ ಗುರುತು ಹಿಡಿದ ಮೂರಣ್ಣ ಏನು ಹೊರಗೆ ಬಂದ

'ಏನ್ಸಮಿ ಕಡೆದು ಮಾಡ್ಸಿದ್ರಿ?" ಎಂದ.

"ಮೂರಣ್ಣ! ನಿನ್ನ ತಂದೆ ಹೇಗೂ ತೀರಿಹೋದ್ರು. ಇನ್ನು ನಿನ್ನ ಹೊಟ್ಟೆ ಪಾಡಿಗೆ ಏನು ಮಾಡ್ಬೇಕಂತಿದ್ದಿಯಾ?"

"ಏನ್ಮಾಡೋದು ಬದ್ಕಿ! ಆ ಪರಮಾತ್ಮ ದೃಷ್ಟಿನಾದ್ರೂ ಕೊಟ್ಟಿದ್ರೆ ಏನಾದ್ರೂ ಮಾಡ್ತಿದ್ದೆ. ನನ್ನಿಂದ ಏನ್ತಾನೆ ಮಾಡೋಕೆ ಸಾಧ್ಯ?' ತಗ್ಗಿದ ಧ್ವನಿಯಲ್ಲಿಯೇ ಅಂದಿದ್ದ ಮೂರಣ್ಣ

'ನಾನ್ಹೇಳಿದ್ಯಾಗೆ ಕೇಳ್ತಿಯಾ?'

'ಏ ಬದ್ಕಿ! ತಾಯ್ತಿ ಹೇಳೀದ ಹೆಜ್ಜೇ ನಾನು ಕೇಳುದು ಹೆಜ್ಜೇನ್ರೀ?"

"ಅಲ್ಲ, ಮೂರಣ್ಣ, ನನ್ತೋಟದ ಯಜಮಾನಿಕೆ ನಿನ್ ಕೈಯಲ್ಲಿ ಏಕೆ ಇಗೋ ಲ್ಲಂತಿ? ನನ್ಸಹಾಯಕ್ಕೆ ದಾಮನನ್ನ ತಗೊ. ಮೇಲ್ತೋಟದ ಗುಡಿಸಲು ನಿನ್ನ ವಾಸಕ್ಕೆ"

"ಅಧ್ಯಾಕ ಧನೇರ! ಹೊರಗೇ ಏಂತಿದ್ರಿ? ಒಳಗಡೆ ಬನ್ನಿ" ಎಂದ ಮೂರಣ್ಣ ಭಟ್ಟರನ್ನು ಆಹ್ವಾನಿಸಿದ.

ಅಂದಾಜಿನಿಂದ ಬಾಗಿಲನ್ನು ಕಡವಿ ಕೊಂಡು ಮೂರಣ್ಣ ಒಳಹೊಕ್ಕ.

ಆತನ ಹಿಂದೆಯೇ ಪ್ರವೇಶಿಸಿದ ಭಟ್ಟರು ಯೋಗ್ಯತೆಗನುಸಾರವಾಗಿ ಕಳತಿ ಮುತ್ತು ಕಣ್ಣು ಹೊಳಿಸಿದರು.

ಒಳಬಾಗಿಲ ಬಳಿ ಲಚ್ಚಿ ನಿಂತಿದ್ದಳು.

ಕಂಪ ಸಿನಿಂದ ಕೂರಿಸಿ ದುಂಡು ಮಲ್ಲಿಗೆ ರೈತುರು ಒಳಿ ಕೊಂಡಲ್ಲಿ ಎಂತಹುದೋ ಎರಡು ಸರಗಳು. ಅಂಗಳಿಟ್ಟಿದ್ದ ಅತಿಕ್ಷಾಗಿನ ಸೀರೆಯಿಂದ ಬಿಳಿ ಮಣಿಕ್ಯ ಒಳಗೆ ಹೊಂದಿಕೆಯಾಗುತ್ತು. ಎದೆಯೊಳಗನನ್ನು ಸಂಯುತ್ತಿತ್ತು. ಅವಳ ತುಂಬಿದ ವಯ್ಯಂದಾಗಿ ಎತ್ತರ ಇಷ್ಟಾಗಿ ಕಾಣಿಸುತ್ತಿರಲಿಲ್ಲ.

ಅವಳನ್ನೇ ನಟ್ಟ ನೋಟದಿಂದ ನೋಡುತ್ತಿದ್ದ ಭಟ್ಟರು ಮೂರಣ್ಣನ ಕವಿಸಿದ ಬಾಹ್ಯ ಪ್ರಪಂಚಕ್ಕೆ ಬೆಳಕಿಸಿದರು.

'ಮೂರಣ್ಣ! ಈಕೆ ಯಾರೋ?"

ಲಚ್ಚಿಯೇ ಇರಬೇಕೆಂದಡಿಸಿದ ಮೂರಣ್ಣ.

"ನನ ಹೆಂಡ್ತಿ ದಣೇರ. ಇನ್ನೆ ಹೆಸ್ರು ಲಕ್ಷ್ಮಿ ಎಂದು. ಆಕ್ರಿ ಸಾನ್ಕರಿಯೊದ್ದು ಬ್ಯಾ ಎಂದ."

'ರತ ಬಾ ಲಚ್ಚೂ ಮೂರಣ್ಣ ನಿನ್ನ ಪುಣ್ಯ ಎಂದ' ಭಟ್ಟರ.

ಚಿಕ್ಕಂದಿನಲ್ಲೇ ತಾಯ್ತಂದೆಯರ ನಡೆ, ತಂಕೆ ಧಣಿಯರಿ, ಇಲ್ಲುಪ್ಪೆ ನನ್ನ ಮದುವೆ ಈ ಜನ್ಮದಲ್ಲಿ ಸಾಧ್ಯವಾಗುತ್ತಿರಲಿಲ್ಲ. ರತಿಯಂತಿದ್ದಳೆ ಕೋತಿಯಂತಿದ್ದಾಳೆಂಬ, ಕೇಳಿದ್ರೆ ನನ್ಗೇನ ಧಣೇರ? ನನ್ನ ಕಣ್ಣಾ ನಾನು ನಂಬಿಸ್ತಿದ್ದೀನಿ? ವಿಶ್ವವನ್ನೇ ನೋಡಿ ತಿಳಿಯುವ ಮೂರಣ್ಣನೆಂದ.

ಮೂರಣ್ಣನೆಡನೆ ನಾಳೆ ಮನೆಯ ಕಡೆ ಬರಹೇಳಿದ ಭಟ್ಟರು ಮನೆಯತ್ತ ಸಾಗಿದರು.

— ೩ —

ತೆಪ್ಪೇ ಭಟ್ಟರಿಗೆ ಐವತ್ತು ವರುಷಗಳಾಗಿ ಹೋಗಿದ್ದರೂ ಅವರ ಕಪ್ಪು ಕೂದಲು ಮತ್ತು ಸದೃಢ ಶರೀರ 'ಛೆ! ಆಗಿರಲಾರದು' ಎಂದೇ ಹೇಳುತ್ತಿತ್ತು.

ದಿನವೂ ಮಲಗಿದ ಕೂಡಲೇ ನಿದ್ರೆ ಹೋಗುತ್ತಿದ್ದ ಭಟ್ಟರಿಗೆ ಆ ರಾತ್ರಿ ನಿದ್ರೆ ಬರಲಿಲ್ಲ. ಮೂರಣ್ಣನ ಹೆಂಡತಿ ಲಚ್ಚಿ ಎದುರು ನಿಲ್ಲುತ್ತಿದ್ದಳು. ತನ್ನನ್ನು ನೋಡಿ ಕೆಲಕೆಲನೆ ನಗುವಂತೆ ಭಟ್ಟರಿಗೆ ಭಾಸವಾಯಿತು. "ಎಂಥ ತಪ್ಪು ಮಾಡಿದೆ? ಅಲ್ಲೇ ಅವಳಿಗೆ ಕಣ್ಣನ್ನೆ ಮಾಡಿ ತನ್ನ ಇಂಗಿತವನ್ನು ತಿಳಿಯಹಿದಿತ್ತು. ಎಂದು ಭಟ್ಟರ ತನ್ನನ್ನು ತಾನೇ ಹಳಿದುಕೊಂಡರು. ಭಟ್ಟರಿಗೆ ನಿದ್ದೆ ಹತ್ತಿದಾಗ ಬೆಳಗಿನ ಜಾವ. ನಾಲ್ಕು ಗಂಟೆ ಮೂಗರ ಬಹುದು.

ಮುಂಜಾನೆ ಲಚ್ಚಿಯೆಂದಿಗೆ ಮೂರಣ್ಣ ಭಟ್ಟ ಮನೆಗೆ ಬಂದ.

ಮೂರಣ್ಣನನ್ನು ಭಟ್ಟರು ತೋಟದ ಮನೆಯ ಗುಡಿಸಲಿಗೆ ಕರೆದುಕೊಂಡು ಹೋಗಿ ಕಳ್ಳಂಬ ಬಂದರು.

ಲಚ್ಚಿಯೆಂದಿಗೆ "ಅದೇ ನಿನ್ನ ವಾಸಕ್ಕೆ ಗುಡಿಸಲು. ಮುಂಜಾನೆ ಮತ್ತು ಸಂಜೆ ಎಂಡು ಹೊತ್ತು ಮನೆ ಕಡೆ ಬಂದು ಹೋದರೆ ತೀರಿತು ನಿನ್ನ ಕೆಲಸ. ಪ್ರತಿ ವರ್ಷಕ್ಕೆ ಈ ನಾರು ರೂಪಾಯಿ ಇರಲಿ" ಎಂದು ಭಟ್ಟರು ಲಚ್ಚಿಯನ್ನು ಸಮಾಧಿಸಿದರು.

ಅಷ್ಟುಹೊತ್ತಿಗೆ ಭಟ್ಟರ ಮನೆಯ ಪರಸ್ಪತಮ್ಮ ಹಿಂದಿನ ಬಾಗಿಲಿನಿಂದ ಬಂದಿದ್ದರು. ಅವರನ್ನು ನೋಡಿದ ಭಟ್ಟರು ಮನಸ್ಸಿನಲ್ಲೇ ತಪಿಸಿ ಲಚ್ಚಿಯತ್ತ ಕಣ್ಣು ಮಿಟುಕಿಸಿ ಹೋದರು.

ಇನ್ನು ಮುಂದಿ ವ್ಯಾಯದಲ್ಲಿ ಹೆಣ್ಣಿನ ಹುಚ್ಚು ಈ ಭಟ್ಟರಿಗೆ. ತನ್ನಲ್ಲೇ ಹೇಳಿಕೊಳ್ಳಲಚ್ಚಿ ಗುಡಿಸಲತ್ತ ಹೆಜ್ಜೆ ಹಾಕಿದಳು.

(ಪದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.



ನಲ್ಮತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಬಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಪಾದಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ತಾಪಿಸ ಪ್ರಮಾಣದ ಹಾಳೆಯು ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಥವಾ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ದೇಂತಿ ಯಾವುದೇ ಪಾಪಯಲ್ಲಿ ಯಾವ ಪಟ್ಟೂ ಇಟ್ಟಿದೆ 'ನವಯುಗ'ದ ಪಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ನ್ಯೂ ಲಂಡನಿನ ಕನ್ನೆಕ್ಟಿಕಟ್ ಕಾಲೇಜಿನಲ್ಲಿ 1966ರ ಜೂನಿಗೆ ಕಾರ್ಯಕ್ರಮದ ಚರ್ಚಾಗೋಷ್ಠಿಯೊಂದರಲ್ಲಿ ಭಾರತದ ಕುಮಾರಿ ಶ್ರೀಲತಾ ರೇ ಅವರು ಪ್ರಮುಖ ಭಾಗವಹಿಸಿ ಮಾತನಾಡಿತ್ತಿರುವುದು.

ನವಯುಗ ೨೨—೧೨—೧೯೬೬

ನವಯುಗ

ಸಂಪುಟ ೪೬. | ಉಡುಪಿ | Vol. 46

ಸಂಚಿಕೆ ೧೭ | ೨೨—೧೨—೧೯೬೬ | No. 17

ಉಪವಾಸ ತ್ಯಜಿಸಿರಿ

ಗೋಹತ್ಯಾ ಆಂದೋಲನದ ಗಾಳಿಯೂಗ ಇಡಿಯು ದೇಶದಲ್ಲಿ ವ್ಯಾಪಿಸಿದೆ. ಗೋವನ್ನು ಆದರ ಭಾವನೆಯಿಂದ, ಪೂಜ್ಯ ಭಾವನೆಯಿಂದ ನೋಡುವ ಭಾರತದಲ್ಲಿ ಗೋವಧೆಯನ್ನು ಪ್ರತಿಬಂಧಿಸುವುದು ಅಪರಾಧವೇನೂ ಅಲ್ಲ. ಆದರೆ, ಜಾತ್ಯತೀತದ ಬಿರುದು ಹೊತ್ತಿರುವ ನಮಗೆ ಈ ಸಂಬಂಧದಲ್ಲಿ ಶಾಸನ ಮಾಡಬೇಕಾದರೆ, ಸಂವಿಧಾನದಲ್ಲಿ ತಿದ್ದುಪಡಿಯನ್ನು ಮಾಡಿಕೊಳ್ಳಬೇಕಾಗುವುದು. ಕೇಂದ್ರ ಸರಕಾರವಾದರೂ ಗೋವಧೆಯನ್ನು ಪ್ರತಿಬಂಧಿಸುವ ವಿಚಾರದಲ್ಲಿ ಆಸಕ್ತಿಯನ್ನು ತೋರಿಸತೊಡಗಿದೆ. ಕೆಲವು ರಾಜ್ಯ ಸರಕಾರಗಳೂ ಅನುಕೂಲವಾಗಿದೆ. ಹಿಂದ್ಯೇತರದ ಮತಾವಲಂಬಿಗಳೂ ಈ ಸಂಗತಿಯಲ್ಲಿ ಉದಾರತೆಯನ್ನು ತೋರಿಸುತ್ತಿರುವುದು ಅಭಿನಂದನೀಯ ಮತ್ತು ಗೋವಧಾ ನಿರೋಧ ಶಾಸನ ತರುವುದಕ್ಕೆ ಅನುಕೂಲ ವಾತಾವರಣವನ್ನು ನಿರ್ಮಿಸಲು ಸಹಾಯಕಾರಿಯಾಗಿದೆ.

ಗೋಹತ್ಯೆಯನ್ನು ಸಂಪೂರ್ಣವಾಗಿ ಪ್ರತಿಬಂಧಿಸುವ ಶಾಸನವನ್ನು ಜಾರಿಗೆ ತರಬೇಕೆಂಬ ಬೇಡಿಕೆಯನ್ನು ಮುಂದಿರಿಸಿ ಪುರಿಯ ಗೋವರ್ಧನ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯರು ಅನಿರ್ದಿಷ್ಟಾವಧಿಯ ಉಪವಾಸ ಆರಂಭಿಸಿದ್ದಾರೆ! ಅವರನ್ನು ಆರಂಭದಲ್ಲಿ ಸಾರ್ವಜನಿಕ ರಕ್ಷಣೆಗಾಗಿ ಬಂಧಿಸಿ ಪುರಿಗೆ ಕಳುಹಿಸಿ ಬಿಡುಗಡೆ ಮಾಡಲಾಯಿತು. ಒಂದು ಧರ್ಮದ ಜಗದ್ಗುರುಗಳನ್ನು ಬಂಧಿಸುವುದಕ್ಕೆ ಸರಕಾರ ತುಂಬ ಆಲೋಚನೆ ಮಾಡಿರಬೇಕು; ಅವರನ್ನು ಮುಕ್ತಗೊಳಿಸಿ ಒಳ್ಳೆಯ ಕೆಲಸವನ್ನೇ ಮಾಡಿತು. ಇದನ್ನು ಬರೆಯುವ ಹೊತ್ತಿಗೆ ಶ್ರೀ ಆಚಾರ್ಯರು ತಮ್ಮ ಉಪವಾಸದ ಮೂವತ್ತನೆಯ ದಿನದಲ್ಲಿ ಕಾಲಿಟ್ಟಿದ್ದಾರೆ. ಉಪವಾಸ ಭಾರತ ದೇಶದ ಒಂದು ಪವಿತ್ರ ವ್ರತ. ಯಾವುದೇ ಧಾರ್ಮಿಕ ಕಾರ್ಯವಾಗಬೇಕಾದರೂ ಮೊದಲು ಉಪವಾಸವು ಅತ್ಯಗತ್ಯ. ಆತ್ಮೋನ್ನತಿಯ ಪ್ರಥಮ ಗೋಪಾನ ತ್ಯಾಗವಾದರೆ ಈ ತ್ಯಾಗದ ಮೊದಲ ಮೆಟ್ಟಿಲು ಉಪವಾಸ. ಮಹಾತ್ಮಾ ಗಾಂಧಿಯವರೂ ಸ್ವಾತಂತ್ರ್ಯಾಂದೋಲನದ ಹೇಳಿ ಒಂದಲ್ಲ ಹಲವು ಬಾರಿ ಉಪವಾಸ ಕೈಗೊಂಡಿದ್ದರು. ಆದರೆ, ಮಹಾತ್ಮರ ಉಪವಾಸ ಸರರ ಹೇಳಿ ಒತ್ತಾಯವು ಇರುವುದಕ್ಕಾಗಿಯಲ್ಲ; ತಮ್ಮ ಆತ್ಮ ತೃಪ್ತಿಗಾಗಿಯೆಂಬುದನ್ನು ಮರೆಯುವಂತಿಲ್ಲ. ಶ್ರೀ ಜಗದ್ಗುರುಗಳ ಉಪವಾಸವು ದಿನಗಳಲ್ಲಿ ಜಾಗತಿಕ ದಾಖಲೆಯನ್ನು ನಿರ್ಮಿಸಿದೆಯೆನ್ನಬಹುದು. ಪರಿಣಾಮವಾಗಿ ಅವರ ಆರೋಗ್ಯ ಬಿಗಡಾಯಿಸಿರುವುದು ಮಾತ್ರವಲ್ಲ, ದೇಹ ಸ್ಥಿತಿಯು ಕೆಟ್ಟು ಹೋಗಿದೆ. ಶ್ರೀ ಜಗದ್ಗುರುಗಳು ತಮ್ಮ ಉಪವಾಸ ವ್ರತದಲ್ಲಿ ತೀವ್ರತೆಕ್ಕೆ ಪಟ್ಟಿದ್ದಾರೆ; ಹಣ್ಣಿನ ರಸ, ಉಪ್ಪು ಮೆಣಸಿನಲಾದ ಪುಗಳನ್ನಾದರೂ ತುಸು ಸೇವಿಸುತ್ತಿದ್ದರೆ ಆರೋಗ್ಯ ಇಷ್ಟು ಶೀಘ್ರವಾಗಿ ಕೆಡುತ್ತಿರಲಿಲ್ಲ. ಆದರೆ, ಶ್ರೀ ಆಚಾರ್ಯರು ತಮ್ಮ ಉಪವಾಸದಲ್ಲಿ ದೃಢತೆಯಿಂದಿದ್ದಾರೆ. ಹೀಗಾಗಿ ಇವರ ಉಪವಾಸವನ್ನು ಹೇಗೆ ನಿಲ್ಲಿಸುವುದು ಎಂಬುದೇ ಎಲ್ಲರಿಗೂ ಇರುವ ಕಳವಳ. ಏಕೆಂದರೆ, ಉಪವಾಸದಿಂದಾಗಿ ಏನಾದರೂ ಅನಾಹುತ ಸಂಭವಿಸಿದರೆ, ಅದೊಂದು ದೊಡ್ಡ ದುರಂತವೆನಿಸುವುದು, ಹೀಗಾಗಿ ಉಪವಾಸವನ್ನು ಬಿಟ್ಟು ಕೊಡುವಂತೆ ಅವರ ಮನವೊಲಿಸುವ ಪ್ರಯತ್ನಗಳು ನಿರಂತರವಾಗಿ ಸಾಗುತ್ತಿವೆ.

ಗೋಹತ್ಯಾ ಪ್ರತಿಬಂಧನವನ್ನು ಬಯಸಿ ಶ್ರೀ ಶಂಕರಾಚಾರ್ಯರಂತೆಯೇ ಉಪವಾಸ ಕೈಗೊಂಡ ಕೆಲವು ಧರ್ಮಗುರುಗಳೂ ಇನ್ನಿಸಂರೂ ಇದ್ದಾರೆ. ಆದರೆ ಅವರೆಲ್ಲರೂ ನಿರ್ದಿಷ್ಟ ಅವಧಿಯ, ಉಪವಾಸ ಕೈಗೊಂಡು ಪಲ್ಲಿಸಿದ್ದಾರೆ. ಅಲ್ಲದೆ, ಶ್ರೀ ಆಚಾರ್ಯರನ್ನೂ ಗೋಹತ್ಯಾ ಪ್ರತಿಬಂಧಕ್ಕೆ ಅನುಕೂಲ ವಾತಾವರಣ ನಿರ್ಮಿಸುವುದಕ್ಕಾಗಿಯಾದರೂ ಉಪವಾಸವನ್ನು ನಿಲ್ಲಿಸುವಂತೆ ಕೇಳಿಕೊಂಡಿದ್ದಾರೆ. ಅನೇಕ ರಾಜಕಾರಣಿಗಳ ವಿನಂತಿಯನ್ನೂ ಜಗದ್ಗುರುಗಳು ಕೇಳಲಿಲ್ಲ. ಅವರು ತಮ್ಮ ನಿಲುವಿಗೆ ಬಲವಾಗಿ ಅಂಟಿಕೊಂಡಿದ್ದಾರೆ. ಈ ತಿಂಗಳ ಆರಂಭದಲ್ಲಿ ಗೃಹಮಂತ್ರಿ ಚವನರು ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆ ಇತ್ತು, ಗೋವಧೆ ನಿರೋಧ ಸಂಬಂಧದಲ್ಲಿ ಸರಕಾರದ ನಿಲುವಿನ ಸ್ಪಷ್ಟೀಕರಿಸಿದ್ದಾರೆ. ಜಗದ್ಗುರುಗಳು ಉಪವಾಸ ನಿಲ್ಲಿಸಿಯೂರೆಂಬ ಆಶಯವನ್ನು ಒಂದಲ್ಲ, ಹಲವು ಬಾರಿ ವ್ಯಕ್ತಪಡಿಸಿದ್ದಾರೆ. ಒರಿಸ್ಸಾದ ಮುಖ್ಯಮಂತ್ರಿಗಳೂ ಕಳಕಳಿಯು ವಿನಂತಿ ಸಲ್ಲಿಸಿದ್ದಾರೆ.ಮೊನ್ನೆ ಮೊನ್ನೆ ಸ್ವತಾನ ತ್ರಿಯವರೂ ಒಂದು ತಂತಿಯನ್ನು ಕಳಿಸಿ ಉಪವಾಸವನ್ನು ಬಿಟ್ಟು ಕೊಡವಂತೆ ಕೇಳಿಕೊಂಡಿದ್ದಾರೆ. ಇದನ್ನು ಸಹಾನುಭೂತಿಯಿಂದ ಅಪೀಲ ಭಾರತ ಗೋರಕ್ಷಾ ಮಹಾಭಿಯಾನ ಸಮಿತಿಯು ಪರಿಶೀಲಿಸುತ್ತಿದೆ. ಇಷ್ಟರಲ್ಲಿಯೇ ಉಪವಾಸದ ಭವಿಷ್ಯ ತಿಳಿಯುತ್ತದೆ.

ಇಷ್ಟೆ ನಾವು ಒಂದು ಮಾತನ್ನು ನೆನಪಿಡಬೇಕು. ಭಾರತದಲ್ಲಿ ಎಲ್ಲ ಮತೀಯರೂ ಧರ್ಮಾಯರೂ ಇರುವಾಗ ಜಾತ್ಯತೀತತೆಯೊಂದೇ ನಮ್ಮ ಧಾರ್ಮಿಕ ಸಹಬಾಳ್ವೆಯನ್ನು ಉಳಿಸಿಕೊಳ್ಳುವ ದಾರಿ. ಜಾಗರುವಾಗ ಧರ್ಮಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಏನಾದರೂ ಶಾಸನ ಮಾಡುವುದು ಸುಲಭದಲ್ಲಿ ಸಾಧ್ಯವಿಲ್ಲವೆಂಬುದು ಸ್ಪಷ್ಟವಿದೆ. ಉದಾಹರಣೆಗಾಗಿ ಗೋಹತ್ಯಾ ಪ್ರತಿಬಂಧಿಸಬೇಕಾದರೂ ಉಳಿದ ಧರ್ಮೀಯರ ಸಹಾನುಭೂತಿಯನ್ನು ಪಡೆಯಲೇ ಬೇಕಾಗುತ್ತದೆ. ಅದಕ್ಕಾಗಿ ವಾತಾವರಣವನ್ನು ತಿಳಿಗೊಳಿಸಬೇಕಾಗುತ್ತದೆ. ಧಾರ್ಮಿಕ ಕ್ಷೇತ್ರದಲ್ಲಿ ರಾಜಕೀಯ ಇಣಿಕಿ ಹಾಕಬಾರದು; ಇದಕ್ಕಾಗಿ ಅನುಕೂಲ ಪರಿಸ್ಥಿತಿಯನ್ನು ನಿರ್ಮಿಸಿ ತಮ್ಮುದ್ದೇಶವನ್ನು ಸಾಧಿಸುವುದಕ್ಕಾದರೂ ಪ್ರಧಾನಿಯು ಕೇಳಿಕೆಯಂತೆ ಶ್ರೀ ಶಂಕರಾಚಾರ್ಯರು ಉಪವಾಸ ಬಿಟ್ಟುಕೊಡಬೇಕು. ಕಪ್ಪಿದರೆ ಈ ವಿಷಯದಲ್ಲಿ ಸದ್ಯ ಅನಹಾಯಕವಾದ ಸರಕಾರವನ್ನು ದೇಶಕ್ಕೆ ಸಲುಕಿಸಿದಂತಾಗುತ್ತದೆ.

ನುಂಗಲಾರದ ತುತ್ತು

ಚುನಾವಣೆಗಳು ಸಮೀಪಿಸಿದುವು. ಕಾಂಗ್ರೆಸ್ಸಿನ ಹುರಿಯಾಳುಗಳ ಯಾದಿಯೂ ಪ್ರಕಟವಾಗುತ್ತಿದೆ. ಧಾನು ಮತಿಯು ಪ್ರಸವವೇದನೆ ಕಾಂಗ್ರೆಸಿಗೆ; ಈ ಗಾಗಲೇ ಕಾಂಗ್ರೆಸ್ಸಿಗ ಪ್ರಚಂಡ ಜಯ ಸ್ವಯಂಸಿದ್ಧವೆಂಬ ಘೋಷಣೆ ಎಲ್ಲೆಲ್ಲೂ ಪ್ರತಿಧ್ವನಿಸತೊಡಗಿದ. ಕೇಂದ್ರದ ರೇಲ್ವೆ ಮಂತ್ರಿ ಎಸ್. ಕೆ. ಪಾಟೀಲರು ತುಂಬ ಮತಾತೀತ ವಹಿಸಿ ಶ್ರೀ ನಿ. ಕೆ. ಕೃಷ್ಣ ಮೆನನ್ನರಿಗೆ ಕಾಂಗ್ರೆಸ್ ಟಕೇಟು ದೊರೆಯದಂತೆ ಮಾಡಿದರು —ಅಲ್ಲ, ಚೀನೀಯರ ಆಕ್ರಮಣದ ವೇಳೆ ಕಾಂಗ್ರೆಸ್ಸು ಮಾಡಿದ್ದ ನಿರ್ಧಾರವನ್ನು ಕಾಂಗ್ರೆಸ್ಸಿಗ ನೆನಪು ಮಾಡಿಕೊಟ್ಟು, ಮೆನನ್ನರಿಗೆ ಟಿಕ್ಕಟ್ಟು ಪ್ಪರು. ಮೆನನ್ನರನ್ನು ಕಂಡರೇ ಪಟಾಲಂಗೆ ಏನೇನೂ ಒಗ್ಗವುದಿಲ್ಲವೋ ಏನೋ! ಒಲ್ಲದವನಿಗೆ ಎಲ್ಲೆಲ್ಲೂ ಕಲ್ಲು ತಾನೆ! ಮೊನ್ನೆ ಮೊನ್ನೆ ಸದೂರಿನಲ್ಲಿ ಚುನಾವಣಾ ಭವಿಷ್ಯ ನುಡಿಯುತ್ತ ಕೇರಳದಲ್ಲಿ ಬಿಜ್ಜು ಉಳಿದಡೆಯಲ್ಲಿ ಕಾಂಗ್ರೆಸ್ ಬಹುಮತ ಗಳಿಸುವುದು ಎಂದು. ಕೇರಳ ಮೆನನ್ನರ ರಂಜ್ಯ—

(ಪದಿನಾಲ್ಕನೇ ಪುಟ ನೋಡಿರಿ)

ವಜೆನ ಸುಧೆ

ಏಕಃ ಕ್ಷಮಾಕರಾಂ ದೋಷೋ
ದ್ವಿತೀಯೋ ನೋಪಪದ್ಯತೇ
ಯದೇನಂ ಕ್ಷಮಯೂ ಯುಕ್ತ—
ಮಶಕ್ತಂ ಮನ್ಯತೇ ಜನಃ॥

ಕ್ಷಮಾಶೀಲನಲ್ಲಿ ಒಂದೇ ಒಂದು ದೋಷವಿದೆ, ಬೇರಾವುದೂ ಇರುವುದಿಲ್ಲ: ಅದಾವುದು? ಅತನನ್ನು ಜನರು ಅಸಮರ್ಥನೆಂದು ತಿಳಿದುಕೊಳ್ಳುತ್ತಾರೆ.

ನರಸಿಂಹನ ಸರಸ

[ಶ್ರೀನಿವಾಸ ಸಸ್ಯ ಅಭಿಕಾಂಕ್ಷೆ ಬಂದರೆ ಸಮೋಹನವಾದ ಎತ್ತಿ ಹಿಡಿಯುವುದು...']

ಅಂತಿಮ ಅವತಾರ ನಮ್ಮ ಕಾಲದಲ್ಲಿ ಬರಲಾರದು—'

ಗೇಹ ರಾಜ್ಯದಲ್ಲಿ

ಎಪತ್ತರ ಜೆಲುವೆ ಯಾರಿಗೆ ಬೇಕು?

"ನೋಡೀಂದ್ರೆ...."

"ಹ್ಞೂಂ, ನೋಡುತ್ತೇ ಇದ್ದೀನಲ್ಲಾ..."

"ಏನನ್ನ?'

"ಅದೂ ಗೊತ್ತಿಲ್ಲವೇನು?"

'ಹ್ಞೂಂ... ದೃಢ ಮೂಡಿಕೊಳ್ಳೋದಕ್ಕೆ ನಿನ್ನ ಬಾಯಿಂದ್ಲೇ ಕೇಳಿ ಬಿಡೋಣ...'

"ಓಹೋ ಅದಕ್ಕೇನಡ್ಡಿ?"

"ಹೇಳಿ ಹಾಗಾದರೆ...'

'ಕುರುಳೋ ತುಂಬಿಯ ಬಂಬಲೋ .....'

'ನಾಕು ನಾಕು. ನಿಮ್ಮಂತಹ ಕುರುಡರಿಗೆ ಏನೂ ಕಂಡೀತು...."

'ಏನು, ನಾನು ಕುರುಡನೇನು?"

"ಮತ್ತೆ ತಲೆಕೂದಲನ್ನು ತಲೆಗೂಡಲೆಂದು ನಂಬುವ್ದಕ್ಕೂ ನಿಮಗೆ ಧೈರ್ಯವಿಲ್ಲಾಂತಂದ್ರೆ ಮತ್ತೆ ಹೇಳ್ಬೇಕಾದರೂ ಏನು? ತಲೆಗೂದಲನ್ನು ಕಾಣಿಬೇಕಾದರೆ ನಿಮಗೆ ತುಂಬಿಯ ಬಂಬಲು ಬೇಕಲ್ಲ....!

'ಆಯ್ಯೋ ಮಹಾರಾಯ್ತಿ, ನಿನ್ನ ಸೌಂದರ್ಯವನ್ನು ಕಣ್ಣಿಗೆ ಕಟ್ಟುಸುವಂತೆ ವರ್ಣಿಸುವಂತಹ ಶಬ್ದಕೋಶ್ದಲ್ಲಿ ಕಂಡಿಯಂತೆ ಬಾಯಿ, ಯಾಕೆ ಕೆಡಿಸಿ ಬಿಟ್ಟಿಯಲ್ಲ!"

"ನನ್ನ ಸೌಂದರ್ಯ ನೀನೊಂತ ನನಗೆ ಗೊತ್ತು. ಅದನ್ನು ನೀವು ಹೊಗಳಿ ಆಗಬೇಕಾದ್ದೇನು?"

"ನೋಡು, ಹೇಳಿದ್ದಾರೆ ಕವಿವರ್ಯರು— ನಾರೀ ರೂಪವೆ ರೂಪಂ; ನೀವಿನೋಕ್ಷವೆ ಮೋಕ್ಷಂ.....'

'ಓಹೋ, ಹಾಗಂದ್ರು ಒಂದು ನಿಶ್ಚಯವಾದಂತಾಯಿತು....'

'ಏನು?"

'ನಿಮ್ಮಂತಹ ಹುಚ್ಚರು ಹಿಂದೆಯೂ ಇದ್ದಾರೂಂತ....'

"ಏನೆಂದೆ? ನಾನು ಹುಚ್ಚನ?'

"ಮತ್ತೆಂಥದು?"

'ಪ್ರಮಾಣ?"

'ಇದು ಅನುಮಾನವಲ್ಲ, ಪ್ರತ್ಯಕ್ಷಕ್ಕೆ ಪ್ರಮಾಣಂ ಏಂ?

"ಅಂತೂ ನನ್ನನ್ನು ಹುಚ್ಚ ಅಂತ ಹೇಳಿದಿ. ಆದರೆ, ನೀನು?'

"ನಾನು...ನಾನೂ...."

'ಬೇಷ್— ಆದ್ರಿಂದ್ಲೆ ನನ್ನ ಕೈಹಿಡಿಯೋಕೆ ಓಡಿ ಬಂದದ್ದು....'

"ಊಹ್ಞೂಂ...."

"ಮತ್ತೆ..."

'ಉಂಡಬಿಸಲ್ಲಿ ಕಂದಿ ಕೆಂದು ಬಸವಳಿದು ಬಳಿಗೆ ಬಂದ್ರಲ್ಲಾಂತ ಹ್ಞೂಂ ಅಂತ ತಲೆದೂಗಿದ್ದು...'

"ಹ್ಞೂಂ... ಒಬ್ಬೊಬ್ಬರಿಗೆ ಒಂದೊಂದು ಹುಚ್ಚು...."

'ಅಂದ್ರೆ?"

"ನೋಡುತ್ತಿಯಲ್ಲ ಈಗಿನ ಹುಡುಗಿಯರಿಗೆ ಅದಷ್ಟು ಕಡಿಮೆ ಬಟ್ಟೆ ಉಟ್ಟಯೋಗಿನೋ ಹುಚ್ಚು —ಹುಡುಗರಿಗೆ ಬಟ್ಟೆಯಿರದ ದೇಹ ನೋಡೋ ಹುಚ್ಚು...'

'ಅವ್ರು ನೋಡ್ತಾರಂತೆ.... ಬಾಯಿ ನೀರು ಸುರಿಸುತ್ತಾರಂತೆ. ಮತ್ತೆ ಹುಡುಗಿಯರಿಗೇನು? ತಮ್ಮ ಸೌಂದರ್ಯಕ್ಕೆ ಮೂರಿಕೊಳ್ಳೋ ಆರೆ ಹುಚ್ಚರೂ ಸಿಕ್ಕರೆ ಪೂರ್ತಾ ಹುಚ್ಚರನ್ನಾಗಿ ಮಾಡ್ತಾರೆ ನೋಡಿ—ನಿನೇನೂ ಇಲ್ವೆ ಖಾಶ್ಚಿತ್ಕರ ಶುದ್ಧ ಅನ್ಕರಣಿ..."

'ಅದೂ ನಿಜ ಅನ್ನು, ಆದರೆ, ಈ ಸಾಂದರ್ಯೋಪಾಸನೆಯು ಹೆಸರಲ್ಲಿ ಮಾನವತೆಗೆ, ರಾಷ್ಟ್ರಕ್ಕೆ ಸುತೆಗೆ ಕಲಂಕ ತಟ್ಟುತ್ತಿದೆಯಲ್ಲಾ ಅಂತ ಬೇಜಾರು...'

"ಎಲ್ಲ ದೇಶಗಳ ಹಣೆ ಬರಹವೂ ಅಷ್ಟೆ. ಯಾರ್ಯಾರ ಮಕ್ಕಳು ಕೆಡೋಕೆ ಸಿದ್ಧರಿದ್ದರೆ ಅವ್ರನ್ನ ಕೆಡಿಸೋಕೆ ಎಲ್ಲರೂ ತಯಾರು..."

"ಹಾಗಾಗಿಯೇ ದೀನರು— ದಲಿತರು ಪ್ರಪಂಚದಲ್ಲಿ ಹೆಚ್ಚಾಗುತ್ತಾ ಹೋಗ್ತಿರೋದು...."

"ಆಲ್ರಿ, ಈಗಂತೂ ಈ ಸಾಂದರ್ಯೋಪಾಸನೆಯ ಮೇಲೂ ರಾಜಕೀಯ ಪ್ರಭಾವ ಬೀರಿದೆಯಂತೆ..'

"ಹ್ಞೂಂ...ಹೌಗೇಂತಾರೆ..."

'ಯಾಕ?

'ನೋಡು, ಇಂದು ಜೀವನವೇ ಒಂದು ರಾಜಕೀಯ. ಆಲ್ಲೇ ಹೊಡೆದಾಟ ನಡೆಯುತ್ತಿರುವಾಗ ಅದರ ಪ್ರಭಾವ ಯಾಕೆ ಎಲ್ಲವುಗಳ ಮೇಲೂ ಬೀಳಿಬಾರದು?'

"ಅಂದರೆ?'

"ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಪ್ರತಿಯೊಂದೂ ನಾಟಕದ ಕಲಾಪ್ರದರ್ಶನ ರಾಜಕೀಯ ಸ್ವಾರ್ಥಭಾವನೆಯಿಂದ ಪ್ರೇರಿತ..."

"ಅಂದರೆ?'

'ಏನೇ ಆಗಲಿ ಭಾರತಕ್ಕೆ ನೆರವು ನೀಡಲು ಮುಂದೆ ಬಂದುದೂ ಒಂದು ರಾಜಕೀಯ. ಈಗ ಸಮಾಯದ ಪಗಡೆಯಾಟ ನಾಡುತ್ತಿರುವುದೂ ಅದರ ಇನ್ನೊಂದು ದೃಶ್ಯ...'

"ವಿವರಿಸೀಂದ್ರೆ...."

"ನೋಡು, ಅಮೆರಿಕೆಯ ವಿಯತನಾಮ ನೀತಿಯನ್ನು ಬಹಿರಂಗವಾಗಿ ಪ್ರತಿಭಟಿಸುವ ರಾಷ್ಟ್ರ ಭಾರತ. ತಾನು ಪೂರಯಿಸಿದ ಅನ್ನ ಹಿಟ್ಟು ತಿನ್ನುತ್ತಿರುವ ಈ ನರಕುರಿಗಳನ್ನು ಅಂಕೆಗೆ ತರಲು ಅಮೆರಿಕೆ ಸಹಾಯದ ಹಗ್ಗ ಜಗ್ಗುತ್ತಿದೆ.'

'ಆದರೆ, ಭಾರತ ಅಮೆರಿಕೆಯ ನೀತಿಯನ್ನು ಒಪ್ಪುವುದಿಲ್ಲವಲ್ಲಾ..."

"ಸರಿಯೇ. ನೋಡು, ಯಾರಿಗೂ ಬಗ್ಗದ ಸಾಲಜಾರ ದೊರೆ ಕೆಂಪು ಚೀನೀಯರಿಗೆ ಶರಣು ಹೋದ?"

"ಹ್ಞೂಂ...ಅದೂ ಹೌದು....'

"ನೋಡು, ಈಗ 'ವಿಶ್ವಸುಂದರಿ'ಯ ರಾಜಕಾರಣವೇನು ಕಡಿಮೆಯದ್ದ?"

"ಹೌದು, ಏನಾಯಿತು?"

"ಆಗುವುದೇನು? ಮಿಸ್ ರೀಟಾ ಫರಿಯಾ ಲೋಕ ಸುಂದರಿಯೂಗಿ ಆಯ್ಕೆಯಾಗಬೇಕಾದರೆ, ಬಹಳಷ್ಟು ಪ್ರಯತ್ನಿಸಬೇಕು. ನೋಡು – ಇದು ಆಕೆ ವಿಶ್ವಸುಂದರಿಯ ಆಯ್ಕೆಯಲ್ಲಿ ಎಹಿಸಿದ ನಗ್ನ ಪಾತ್ರ...."

'ಶಿ ಶಿ ಶೀ....'

"ಏನ?'

ಆಯ್ಯೋ, ಎಂಥ ವೇಶವಿದೂಂದ್ರೆ....'

'ಆಗಿ ಸೌಂದರ್ಯ ರಾಜ್ಯದಲ್ಲಿ ಪೂರ್ತಿಯ ಚ್ಚನ ಗಿಯೇ ತರ ಬೇಕಾಗುತ್ತದೆ....'

'ಏಂಥದೋ...ಏನೋ....'

'ನೀನಿನ್ನೂ ಗಟ್ಟಿಮೊಳ ಸೀರೆಯುಡೋ ಗಟ್ಟಿನೆ ಶತಮಾನದಲ್ಲಿದ್ದೀ. ವಿಶ್ವದ ಸವ ಸ್ಯ ಗಳ ಪರಿಚಯವೇ ಇಲ್ಲ....'

'ಏಂಥದ?'

"ಹೆಚ್ಚು ಪ್ರಮಾಣದಲ್ಲಿ ಉಡುವ ಜನರಿಗೆ ಉಡುಪುದಕ್ಕೆ ಬಟ್ಟೆ ಬೇಡವೇ? ಅದಕ್ಕೆಂದೇ ಹೊಸ ಆಂದೋಲನ— ಕಡಿಮೆ ಆಹಾರ ಬಳಸಿ; ಒಂದು ಹೊತ್ತು ಉಪವಾಸವಿರಿ ಘೋಷಣೆಗಳಂತೆ — ಕಡಿಮೆ ಬಟ್ಟೆ ಬಳಸಿ —ಒಂದು ಹೊತ್ತು...."

"ಛಿ... ನಾಚಿಕೆಯೆನಿಸುವುದಿಲ್ಲವೆ!'

"ಇದ್ದದ್ದನ್ನ ಇದ್ದಂತೆ ಹೇಳೋಕೆ ನಾಚಿಕೆ ಯಾಕೇಂತೆ?'

'ಹೌದೌದು..... ಭಾರೀ ಯಥಾರ್ಥವಾದಿಗಳು ನೀವು... ಅಪ್ಪಾ....'

'ನೋಡು, ಹೇಗಸರಿಗೆ ವಂಕಿ ತೊಡಿಸಿ ಜನನ ಪ್ರಮಾಣ ತಗ್ಗಿಸುವಂತಹ ಅಂದೋಲನ; ಜತೆಗೆ ವಂಕಿ ತೊಟ್ಟವರಿಗೆ ಅಲ್ಪ ಬಹುಮಾನ ಕೊಡುತ್ತದೆ ನವ್ಯ ಬಡ ಸರಕಾರ. ಹಾಗೆಯೇ ವಿಶ್ವ ಸುಂದರಿಯ ಆಯ್ಕೆ ನಡೆಸಿ ಬಟ್ಟೆ ಉಳಿತಾಯ ಆಂದೋಲನ ನಡಯುತ್ತ. ಬಹುಮಾನವೂ ದೊರಯುತ್ತೆ....'

'ಹೌದು... ಬಾರಿ ಉಳಿತಾಯ— ಯಾವ ವೇಶ ಚಂದಂತ ನೋಡೋಕೆ ಅದೆಷ್ಟು ಬಟ್ಟೆ ಬೇಕಾಗದೋ ಎಷ್ಟು ಣ ವೆಚ್ಚವಾಗದೆಯೋ....."

'ಇಲ್ಲನಾರೆ, ಗಟ್ಟಿಮೊಳದ ಒಷ್ಟು ಸೀರೆ ಬೇಕಾಗುತ್ತಿತ್ತಲ್ಲಾ....."

'ಸಂಯುಲಿ ಬಿಡು. ಈಗ ಏನಾಯಿತು? ನಮ್ಮಲ್ಲಾ ಲೋಕ ಸುಂದರಿಯೊಬ್ಬಳ ಹುಟ್ಟಿ ಬಂದಳು ಅಂತ ಸಮಾಧಾನ ಪಡೋಣ....?'

'ಪಡೋಣ. ಯಾರು ಬೇಡಾಂತಾರೆ ಆದ್ರೆ ಆಕ ನಮ್ಮ ದೇಶದಳಿಂಗ ಬಯ ದಿನ ಉಳಿಯುವಂತಿಲ್ಲ...'

'ಯಾಕೆ ವಿಯತನಾಮದಲ್ಲಿ ಕಂಪು ಕ್ಯಸರನ್ನು ಪದೆ ಬಡಿಯುವ ಅಮೆರಿಕನ್ ಸೈನಿಕರ ಮನರಂಜನೆಲು ಆಕೆ ಅಲ್ಲಿಹೋಗುವ ನಿರ್ಧಾರ ಮಾಡ್ತಾಳೆ. ಧಾರತ ಹಿತ ದೃಷ್ಟಿಯಿಂದ ಇದು ಉಚಿತವಲ್ಲವೆಂದು ತಿಳಿಸಲಾಯಿತಾದರೂ ಆಕೆ ತನ್ನ ವಿಶ್ವ ಖ್ಯಾತಿಯು ಹುಚ್ಚಿನ ಮುಂದೆ ದೇಶ ಪ್ರೇಮವು ಹುಚ್ಚನ್ನು ದುಂಬಾಲು ಬಿತ್ತಳೆ....'

"ಆಯ್ಯೋ—ಇದು ಹೇಗೆ ಸಾಧ್ಯ?

'ಹೇಗೆ ಂದರೆ, ಆಕೆಗೆ ತಮ್ಮ ದೇಶದ ಪಾರತ್ವ ನೀಡಲು ವಾಕಿಸ್ತಾನ ಅಧ್ಯಕ್ಷ ವಾ ವೋರ್ಜ್ಯಗಾಲಗಳು ಮುಂದೆ ಬಂ ಬಹುದು— ಆಗ....'

"ಏನು?'

"ತ್ಕಿಲೋಕ ಸುಂದರಿಯರ ಕಾಲ ಗತ ಕಾಲವಾಯಿತು. ಅನ್ಯಾಯವಾಗಿ ಹುಟ್ಟಿ ಬಂದ ಲೋಕ ಸುಂದರಿಯನ್ನ ನಾವು ಮದುವೆಮಾಡಿಕೊಟ್ಟಂತೆ.."

'ಹ್ಞೂಂ...ಸಾಧ್ಯವಾದ್ರು ಒಳ್ಳೆಯದು. ಯಾವುದು ಕೆಟ್ಟದ್ದು ಅಂತ ಅನ್ನುವ ವಿವೇಚನೆ ಈ ತಂಡ ಹುಡುಗಿಗೆ ಎಲ್ಲಿಂದ ಬಂಬೇಕು?'

"ಮತ್ತೇನು ತಂಡರವರು ಹುಚ್ಚು ಹಿಡಿಸಿಕೊಳ್ಳುತ್ತಾರೆಯೆ?'

'ಸಂಜೆ ಬನ್ನಿಂದ್ರೆ, ಗಂಟೆ ಹತ್ತು ಬಡಿಯಿತು...."

"ಹ್ಞೂಂ...."

"ಆಯ್ಯೋ...ಏನಿದು?"

'ನನ್ನ ಹುಚ್ಚು ಹಿಡಿಸಿದ ಹುಡುಗಿ..."

'ಹ್ಞೂಂ' —ಗೋಪಾ

ಸಿಂಡಿಕೇಟ್ ಬ್ಯಾಂಕ್

ಇವರ

ಬಂಟ್ವಾಳ ಶಾಖೆಯು

ತನ್ನ ವಿಸ್ತೃತ ಗಿರಾಕಿಗಳಿಗೆ ವ್ಯಾಪಕ ಪ್ರಮಾಣದ ಸೇವೆಯನ್ನು ದಕ್ಷತೆಯಿಂದಲೂ ಶೀಘ್ರ ರೀತಿಯಲ್ಲೂ ನೀಡಲು ಅನುಪಯೋಗವಂತೆ ಈಗಿನ ಕಾರ್ಯಾಲಯವಿರುವ ಬೀದಿಯಲ್ಲೇ ಬ್ಯಾಂಕಿನ ಸ್ವಂತ ಹೊಸ ಕಟ್ಟಡಕ್ಕೆ

ಇದೇ ದಶಂಬರ ತಾ. 7ರಂದು ಸ್ಥಳಾಂತರಗೊಂಡಿರುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಇಂದಿನ ಸಮಸ್ಯೆ

ಜಾತೀಯತೆಯ ಪೆಡಂಭೂತ

ಬರೆದವರು : ಶ್ರೀ ಶಿವಶಂಕರ.

ಸ್ವಾತಂತ್ರ್ಯ ಸಿಕ್ಕಿ ಇಪ್ಪತ್ತು ವರ್ಷಗಳು ಕಳೆದಿದೆ ನಂತರವೂ, ಈಗಲೂ, ಅಲ್ಲಿ—ಇಲ್ಲಿ ಜಾತೀಯತೆಯ ಪೆಡಂಭೂತ ತಲೆ ಬೆಳೆಸುತ್ತಿರುವುದು ವಿಷಾದನೀಯ ವಿಷಯವೇ ಇದೆ. ಅದು ಅಂತರಿಕವಾಗಿ ದೇಶದ ಬಲವನ್ನು ಕುಗ್ಗಿಸಿರುತ್ತದೆ. ಪರಂಪರೆಗಳಲ್ಲಿ ಗೌರವಕ್ಕೆ ಪಾತ್ರವಾಗಿದ್ದ ತಂದಿರುತ್ತದೆ. ಬಲಶಾಲೀ ಹಾಗೂ ಐಕ್ಯ ಭಾರತಕ್ಕೆ ಮಾತ್ರ ಶಾಂತಿ ಸ್ಥಾಪನೆಗೆ ಶಕ್ತಿಯೂ ಬೇಕೆಂದು ಭಾರತದ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸಿದ್ದಾರೆ. ಇದು ನೂರಕ್ಕೆ ನೂರು ಸತ್ಯವಿದೆ. ಇದನ್ನು ಅಲ್ಲಗಳೆಯಲು ಎದ್ದಾರಿಗೂ ಸಾಧ್ಯವಾಗದು. ಆದರೆಲ್ಲಾ ಕಾಂಗ್ರೆಸ್ಸಿನ ಎಐಸಿ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರ ಪ್ರಚಲಿತ ಪ್ರಧಾನಿ ಯವರ ಮನದಿಂಗಿತ ಇಂಥ ಮಾತುಗಳು ಬರಬೇಕಾದಲ್ಲಿ ಈ ಹುತ್ತವನ್ನು ಹಾಳು ಮಾಡಿದವರಾರು ಎಂಬುದರಲ್ಲಿ ಸಂದೇಹವೇ ಇಲ್ಲ. ಇದೇ ಮಾತನ್ನು ಕೆಲವರು ಹೇಳುತ್ತಾರೆ, ಕಾಂಗ್ರೆಸ್ಸಿಗರು. ಹೇಳ ತಕ್ಕದ್ದು, ಅಖಿಲಿಗರೂ ಹೇಳುತ್ತಾರೆ, ಕ್ರೈಸ್ತರು ನಾಗಾಗಲೂ ಹೇಳುತ್ತಾರೆ, ಮುಸ್ಲಿಂ ಲೀಗಿನವರೂ ಹೇಳುತ್ತಾರೆ, ಹಿಂದಿನ ಪೆಡರೇಶನ್‌ನವರೂ ಹೇಳುತ್ತಾರೆ. ಎಲ್ಲರೂ ರಿಪಬ್ಲಿಕನ್ ಪಾರ್ಟಿಯವರೆನ್ನಿಸಿಕೊಳ್ಳುವ ಪಕ್ಷದವರು..... ಎಲ್ಲರು ಹೇಳುವವರೇ! ಮುಂದಿನ ಎಲೆಕ್ಷನ್‌ಗೆ ನಿಂತಾಗ ಹಿಂದಿನ ಎಲೆಕ್ಷನ್ ಇಸ್ಟಿ, ಬಸ್ಟಿಲೆ ಹೋಗುತ್ತಿದೆಯೆಂದು ಕಿಸ್ಕಿನಸೆ ಸಕ್ಕಿಕಂತೆಹಾಗೆ ಇವು ಈ ಮಾತ, ಈ ಮಾತಿನ ಅರ್ಥವಾದರೂ ಏನು? ಜಾತೀಯತೆಯೆಂದರೇನು?

ಸ್ವಾತಂತ್ರ್ಯವನ್ನೇ ಜಾತೀಯತೆಯು ಭಾರತದ ಮೇಲೆ ಸಿಕ್ಕಿದ್ದೆಂಬುದನ್ನು ಮರೆಯಲು ಸಾಧ್ಯ ಇಲ್ಲವಲ್ಲ ಧೂರ್ತ ಬ್ರಿಟಿಷ್ ಆಕ್ರಮಣಕಾರರು ಭಾರತದ ಐಶ್ವರ್ಯವನ್ನು ಕೊಂಡೊಯ್ಯುತ್ತಿದ್ದರು. ರಿಪ್ಬ್ಲಿಯತೆಯ ಪ್ರವಾಹದಲ್ಲಿ ತೇಲಿ ಕೊಚ್ಚಿಕೊಂಡು ಹೋಗದಂತಾಗ ಬೇಕೆಂದು ಅವರಿಗೆ ಆಣೆಕಟ್ಟನ್ನು ಕಟ್ಟಲು ಪ್ರಯತ್ನಿಸಿದರು. ಪ್ರವಾಹಕ್ಕೆ ಅಡ್ಡ ಹಾಕಿದರೆ, ಪ್ರವಾಹದ ವೇಗ ಕಮ್ಮಿಯಾಗುತ್ತದೆ. ನೇಗಿಲ ಮಾತ್ರವಲ್ಲ ಅವನ್ನೆವರಿಗೂ ಉದ್ಯೋಗವುಂಟಾಗಿ ಇಬ್ಬಾಗಗಳಾಗಿದ್ದ ಭಾರತ ಭಾಗವಾಯಿತು. ಜಾತೀಯತೆಯ ಪೆಡಂಭೂತ ತಲೆಯೆತ್ತಿತು.

ತಲೆಯೆತ್ತಿದ ಭೂತ ಅಲ್ಲಲ್ಲಿ ಕಾಣಿಸಿಕೊಳ್ಳಲಾರಂಭಿಸಿತು. ಅಖಿಲಿಗರ ಅಭಿಪ್ರಾಯವಾಯಿತು. ಅದನ್ನು, ವಿಡಿಯಲ್ಲಿ ಬೆಂಕಿಯನ್ನು ಕಟ್ಟಿಕೊಂಡು ಇದ್ದಂತೆ, ಸಹಿಸಿಕೊಂಡು ಬಂದೆವು. ನಾಗಾಲೋಂಡಿನವರು ಬೇಸ್ಪಿಸ್ಟ್ ಇಗರ್ಜಿಯವರು ಬೊಬ್ಬೆ ಹೊಡೆಯಲಾರಂಭಿಸಿದರು. ಅವರು ಭಾರತ ಸಂಕಲ್ಪವನ್ನೇ ಬಹಿಷ್ಕರಿಸಿ ಮಾತಾಡಿಬಿಟ್ಟರು. ಅವರಿಗೆ ಪ್ರತ್ಯೇಕ ಸ್ವತಂತ್ರವನ್ನೇ [ರಾಜ್ಯವನ್ನೇ] ಕೊಡಲಾಯಿತು. ಇದಂಥಲೂ ಅವರಿಗೆ ತೃಪ್ತಿಯೇ ಆಯಿತು. ಅವರಿಗೆ ಪಾಕಿಸ್ತಾನದ ರೂಪದ ಪ್ರತ್ಯೇಕ ದೇಶವೇ ಬೇಕು. ಇದರಿಂದ ವಿಶ್ವ ಕ್ರೈಸ್ತಯರಿಗೆ ಉತ್ಸಾಹ ಬಂತು ಕೇರಳದಲ್ಲಿ ಜಾತೀಯತೆಯ ಪೆಡಂಭೂತದ ಕೇಳಿ ಭರದಿಂದ ಸಾಗಿದೆ. ಕ್ರೈಸ್ತಿಯನರು ಕಾಂಗ್ರೆಸ್ಸಿನೊಳಗೆ ತಮ್ಮ ಬೇಳೆ ಬರಿಗೂಗಿ ಬೇಯಿದಿರುವದನ್ನು ಕಂಡು ತಮಗೆ ಇಷ್ಟು ಬಂದಂತೆ ವರ್ತಿಸುತ್ತಿದ್ದಾರೆ. ಮುಸ್ಲಿಮರೀಗೂ ಮುಂದೆ ಬಂದಿದೆ. ನಯರುಗಳ ಸಂಸ್ಥೆಯೂ ನಾಯರ್ ರೆಂದು ಗೊತ್ತೇ ಎಂದು ಕೇಳುವಷ್ಟು ಪ್ರಬಲವಾಗಿ ಇದೆ ಇತ್ತೀಚೆಗೆ ಸೇರಿದ ಕ್ರೈಸ್ತರ ಸಭೆಯಲ್ಲಿ ಕಾಂಗ್ರೆಸ್ಸಿಗರಾಗಿ, ಕಮ್ಯೂನಿಸ್ಟ್, ಸ್ವತಂತ್ರ ಪಾರ್ಟಿಗಳಾಗಿ ಸೋಷ್ಯಲಿಸ್ಟ್ ಪಕ್ಷಿಗಳಾಗಿ ಪಂಡಿತ್ ನಡೆಸುತ್ತಿವೆ. ಮುಸ್ಲಿಂ ಜಾತೀಯತೆಯು ಪೆಡಂಭೂತಕ್ಕೆ ಕಾಂಗ್ರೆಸ್ಸಿನಿಂದ ಒಂದು ಕೈಕೊಟ್ಟು ಕರೆದೂ ಇದ್ದು ಅಧಿಕಾರದ ಸಿಂಹಾಸನದಲ್ಲಿ ಕೂತುಕೊಳ್ಳುತ್ತಿತ್ತು. ಇಂದೂ ಈ ಪರಿಸ್ಥಿತಿ ಇದೆ. ಇತ್ತೀಚೆಗೆ ಕೇಂದ್ರಾಡಳಿತ ಮುಸ್ಲಿಂ ಪ್ರಿಯಾಬ್ಬರು ಕೇಳಿಕೆಗೆ ಭುಜಂಗೈದು ಜನಾವಾಣಿಯ ವ್ಯವಹಾರದಲ್ಲಿ ಮುಸ್ಲಿಂ ಪತಗಳ ಬೆಲೆಯನ್ನು ಕೇಳಿಕೊಂಡು ಹೋದರು. ಇವರು ಸಂಶ್ರವಿದ ಫಲಿಸ್ಕೆಂಬಂತೆ ಮಂತ್ರಿ ಪದವಿ ಖಾಲಿ ಆವರಿಗೆ ವಿಶ್ರಾಂತಿ ಸಿಕ್ಕಿಯಿತ್ತದಾ! ಹೀಗೆ ಈ ಪೆಡಂಭೂತ ಕೇರಳದಲ್ಲಿ ಪ್ರಬಲ ತಲೆಯೆತ್ತಿರುವದಲ್ಲದೆ ಅಲ್ಲಲ್ಲಿ ಕನ್ನಡಿಗರಾಗಿ ಮುಖವನ್ನೂ ತೋರಿಸುತ್ತಿದೆ. ಕ್ರೈಸ್ತಿಯನರು ಮುಸ್ಲಿಮರು ಹೀಗೂ ಇರಲ್ಲಿರೂ ಒಂದೇ ರೀತಿಯ ಪ್ರಚೋದನೆಗಳಿಂದ ಹೇಳಲಂಗತ್ತಿದೆ. ಆದರೆ ಭಾರತ ಸಂಕಲ್ಪದ ಕನ್ನಡಿಗರಿಗೆ ಅವರಿಗೆ ಅನ್ವಯವಾಗುವದಿಲ್ಲ! ಇತರರಿಗೆ ಮಾತ್ರ ಕೊಡಲಿ ಇತ್ಯಾದಿ. ಮುಸ್ಲಿಮರಿಗೂ ಕೊಡಲಿ ಬರುತ್ತದೆಂದು ಲೋಕಸಭೆ ಅಧಿವೇಶನದ ಸಭೆಯಲ್ಲಿ ಯಾರಾದರೂ ತೂಕನಡೆದರೆ ಸಾಕು, ಒಡನೆ ಪತ್ರಿಕೆಯಲ್ಲಿ ಪ್ರತಿಕ್ರಿಯೆ ಕಾಣಬಹುದು. ಅದಕ್ಕೆ ಅವರು ಅವಾಗಲೇ ಭಯ ಹುಟ್ಟಿಸುವ ರೀತಿಯಲ್ಲಿ ಉತ್ತರಿಸಿಬಿಡುತ್ತಾರೆ!

ಅಧಿಕಾರದ ಲಗಾಮನ್ನು ಹಿಡಿದು ಕೊಂಡವರು ಸುವ್ಯವಸ್ಥಿತರೇ ಆಗಿರುತ್ತಾರೆ. ಅವರಿಗೆ ಎಲ್ಲಿ ಮತೀನಕ್ಕೆ ಹೋಗಲು ವಿಶೇಷ ಸೌಲಭ್ಯ! ಈಗ ಕ್ರಿಶ್ಚಿಯನರೂ ಅಂತಹ ಸೌಲಭ್ಯಗಳನ್ನು ಕೇಳುತ್ತಿದ್ದಾರೆ. ಅವರಿಗೆ ರೋಮ್‌ಗೂ ಲೇಟೀಮಿಗೆ ಹೋಗಲು ಸೌಲಭ್ಯಬೇಕಂತೆ. ಅದಕ್ಕೆ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀಕಾಮರಾಜ್‌ರವರು ವಾರ್ಕಲಾಂ(ನೋಡೋಣ) ಎಂದಿದ್ದಾರೆ. ಜಾತೀಯತೆಯ ಪೆಡಂಭೂತವು ಒಂದು ವೇಷ ಇದು. ರಾಜಕೀಯೋದ್ಯಮಿಗಳಿಗೆ ಇದು ಜೊಂಡವಾದ ಊಟವೇ ಇಷ್ಟೆ. ಇದರಲ್ಲಿ ಕ್ರೈಸ್ತಿಯನರಲ್ಲೂ, ಮುಸ್ಲಿಮರಿಲ್ಲೂ ಒಳಗಿಂದೊಳಗೆ ಕೆಲವು ಎಂಬ ಜಾತಿ ಪಂಗಡಗಳಿದ್ದರೂ, ಅವರು ಬಹಿರಂಗವಾಗಿ ಬಂದಾಗಿ ಬಿಡುತ್ತಾರೆ. ಆಲ್ಲದೆ ಅನೇಕರು ಅವರಲ್ಲಿ ಜಾತಿಪಂಗಡಗಳೇ ಇಲ್ಲವೆಂದೂ, ಹಿಂದೂಗಳಲ್ಲಿ ಮಾತ್ರ ಜಾತೀಯತೆಯು ಜಾಂಡ್ಯ ಬೆರುವೆದೆಂದು ಬಂಬಡ ಬಾರಿಸುವದುಂಟು. ಹಿಂದೂಗಳಲ್ಲಿ ಜಾತೀಯತೆ ಇದ್ದ ಅವರು ಹಂಜನನ್ನು ಪೆತ್ತಿರಕ್ಕ ಒರಲಿ ಬಿಡುವುದೆಂಬ ಹದ್ದುಮೂರಿತನಗಳೂಡಿಲ್ಲವಾಗುತ್ತಿದ್ದ ಅದರಿಂದ ಇತ್ತೀಚೆಗೆ ಸೇರಿದ ಕ್ರೈಸ್ತಿಯರು ಕೂಟವು ಸ್ವತಂತ್ರವಾಗಿರಂತೆ ಹಂಜನರಿಗೂ ರಿಯೂ ಒಂದೆ ಸಿಗಬೇಕೆಂದು ಸಂಕಲ್ಪವನ್ನು ಕೇಳಿಕೊಂಡರೆಂದಲ್ಲದ, ಅದಕ್ಕೆ ನೆಪಮಾಗಿ ಬೇಕೆಂದು ಅಡಳಿತ ಪಕ್ಷದ ಅಧ್ಯಕ್ಷತೆ ರಂಕಮಂಡಂಡಿಯವನ್ನು ಕೇಳಿಕೊಳ್ಳಲಾಗಿದೆ. ಅವರು ಕೂಡಲೆ ತಮ್ಮ ಸದಸ್ಯಸಿದ್ಧ ಉತ್ತರ 'ವಾರ್ಕಲಾಂ' ಹೇಳಿದ್ದಾರೆ. ಹೀಗೆ ಈ ಜಾತೀಯತೆಯು ಪೆಡಂಭೂತಗಳು ನಾನಾ ವೇಷಗಳಲ್ಲಿ ನಾನಾ ಎಡೆಗಳಲ್ಲಿ ಮುಖವನ್ನು ತೋರಿಸುತ್ತವೆ. ಅವುಗಳ ವಿಷ ತಮ್ಮ ಪಕ್ಷಕ್ಕೆ ಸಿಗುವ ವರಗೆ ಅಧಿಕಾರಗ್ರಸ್ಥ ಪಕ್ಷಕ್ಕೆ ಅಲ್ಪ ಜಾತೀಯ ಪೆಡಂಭೂತಗಳಲ್ಲ, ಉಚ್ಚಕುಲ ರಾಷ್ಟ್ರೀಯತೆಯು ಎಂದಂಥೇ ಇದ! ತಮ್ಮಕ್ಕಲ ಮುಗಿದ ಮೇಲೆ ಅವು ಭೂತಗಳು!

ಇನ್ನೊಂದು ರೀತಿಯ ಜಾತೀಯತೆಯು ಪೆಡಂಭೂತಗಳವು. ಹಂಜನರು ಫೆರೇಶನ್, ರಿಪಬ್ಲಿಕನ್ ಪಕ್ಷ, ವನ್ನಿಯರ ಪಕ್ಷ ಇತ್ಯಾದಿ ಇದಕ್ಕೆ ಉದಾಹರಣೆ. ನಿಜವಾಗಿ ಕ್ರೈಸ್ತ ಸಿಕ್ಕಿ ಇಪ್ಪತ್ತು ವರ್ಷಗಳಿಂದ ನೇಗಿಲೂ ಕಾಂಗ್ರೆಸ್ಸು ಹೋರಾಗಿಲು ಈ ಜಾತೀಯತೆಯ ನೊಗವನ್ನು ಹೊತ್ತಿಕೊಂಡೇ ಇವೆ. ದೂರದಿಂದ ನೋಡಲು ಇವು ಹರಿಜನರ ಹಾಗೆಯೇ. ವನ್ನಿಯರ ಪಕ್ಷಗಳು ಜಾತೀಯ ಪಕ್ಷಗಳಂತೆ ತಂದು ಬಂದರೂ ಒಳಗಿಂಯೊಳಗೆ ಅವರೂಳಗನೇ ಹಲವಾರು ಜಾತಿ ಪದ್ಧತಿಗಳಿಯವದನ್ನು ಕಾಣಬಹುದು. ಸ್ವಲ್ಪ ಜಾತೀಯತೆಯು ಜೊತೆ ಟ್ಟನೊಳಗೆ ಅವು ಬರದಿದ್ದರೂ ಅದನ್ನಿಂದ ಜಾತೀಯತೆಯ ಪೆಡಂಭೂತಗಳಿಲ್ಲ ದೆ ಪಥಿ ಇಲ್ಲ. ಪಕ್ಷಗಳ ಪಟ್ಟಿಗೇ ಈ ಜಾತೀಯತೆ ಸೀಮಿತವಾಗಿಲ್ಲ. ಯಾರಾದರೂ ಹುಟ್ಟಿದಾಗಲೂ, ಶಾಲೆಗೆ ಸೇರುವಾಗಲೂ, ಕೆಲಸಕ್ಕೆ ಸೇರುವಾಗಲೂ ಕೊನೆಯಲ್ಲಿ ಸತ್ತಾಗಲೂ ಅರ್ಜಿ ಪತ್ರದಲ್ಲಿರುವ ಜಾತಿಗೆ ಉತ್ತರಿಸುತ್ತೇ ಆಗಬೇಕು. ಅಲ್ಲಿ ಜಾತಿ ಅಥವಾ ಕಾಸ್ಟ್ (ಕಾಸ್ಟ್?) ಸಿದ್ಧವಾಗಿದೆ. ಇದನ್ನು ಭೇರ್ತಿ ಮಾಡಲೇಬೇಕು ಅದು ಮೇಲೆ ರಿಯಾಯಿತಿ ವಗೈರೆ ತೆಗೆಯಲಾಗುತ್ತಿದೆ. ಶಿಷ್ಯರಲ್ಲಾ ಏಕೆ, ಜನಾವಣೆಗೆ ಅಭ್ಯರ್ಥಿಗಳನ್ನು ಆರಿಸುವಾಗಲೂ ಈ ಅಭ್ಯಾಸ ಇದ್ದೇ ಇರುತ್ತದೆ. ಯಾವ ಕ್ಷೇತ್ರದಲ್ಲಿ ಯಾವ ಜಾತಿಯವರು ಜಾಸ್ತಿ ಇದ್ದಾರೆಂಬುದೂ ಆ ಜಾತಿಯ ಅಭ್ಯರ್ಥಿಗಳಲ್ಲಿ ಜಾಗರೂಕತೆ! ವಾಸ್ತವ್ಯ ಸ್ಥಿತಿ ಹೀಗೆ ಇದೆಯಾದರೂ, ತತ್ವ ಎಲೆಯಲ್ಲಿ ಕೋಣದ ಹೆಣ ಇದೆಯೂದರೂ ಅನ್ಯರ ಎಲೆಯಲ್ಲಿರುವ ನೊಣದ ಹೆಣದತ್ತವೇ ರಾಜಕೀಯ ಪಟುಗಳ ಗಮನ ಹೋಗುತ್ತಿದೆ. ಇದನ್ನು ಮರೆ ಮಾಚಲು ಅವರು ಯದ್ವಾತದ್ವಾ ಅದೇನನ್ನೋ ಆಡುತ್ತಾರೆ.

ಮತ್ತೆ ನೀವು... ಎರಡೆ ಸಾವಿರ ಕಳ್ಳವತ್ತರ ೭೦—೭೦ ಕ ಗ್ಯಾಗೆ ಹುಟ್ಟಿಲ್ಲವಾ ತಾಂಕ. ನಮ್ಮ ಆಯುಷ್ಯವೋ ೬೦—೭೦ ವರ್ಷಗಳು! ಮನುಷನ ಅಲ್ಪ ತಾರುಣ್ಯದ ಅವನ ಮನಸ್ಸನ್ನು ಸ್ವಾರ್ಥ ಮುಳ್ಳು, ಸಂಕಲ್ಪಸ್ಪಷ್ಟ ಮಾಡಿ ಬಿಟ್ಟು ಕ್ಷುಲ್ಲಕ ಮೇಲ ದ್ಯಾಜವು ಸಂಧಿಸಲಿದ್ದ ನೈಸರ್ಗಿಕ ಶಕ್ತಿಗಳೊಂದಿಗೆ ಕಟ್ಟದ ಸಣ ಸಾಟ ನಡೆಸಿ ವಿಜಯಿಯಾಗಿ ಹೊರಬರ

ಳಿಸಿ ಅಲ್ಲಿಂದ ೭ ಗಂಟೆ ರಾತ್ರಿಗೆ ನಾಲ್ಕು ಜನರು ಒಟ್ಟಾಗಿ ಹೊರಟೆವು. ಎಲ್ಲರೂ ಮರುದಿನ ಮಧ್ಯಾಹ್ನ ೧೨ ಘಂಟೆಗೆ ಬಂ ದಿರುಗಬೇಕೆಂದು ಗಟ್ಟಿ ಮನಸ್ಸು ಮಾಡಿ ಚಾರ್ಮಾಡಿ ಘಾಟಿಯನ್ನು ಹೊಕ್ಕೆವು. ನಿಸರ್ಗ ಸೌಂದರ್ಯವನ್ನು ಚಿತ್ರಕವಿತೆ, ಲೇಖನ ನೀನೇವು ಮಾಲಕ ತುಂಬಾ ಹೊಗಳುತ್ತಿದ್ದ ನಾವು ಅಂದು ಬಹು

ಲಿದ್ದಾನೆ. ಸೂರ್ಯನು ಎಂಬ' ಸ್ವರೂ ಪಿಯಾದ, ಅನಂತ ವಿಸ್ತಾರ ಈ ಬ್ರ ಹ್ಮಾಂಡದ ಒಂದು ತೃಣಕಾದರೂ ಅವರು ಇಡೀ ಬಹ್ಮಾಂಡವನ್ನೇ ಗೆಲ್ಲಬಲ್ಲ ಶಕ್ತಿವಂತ. ಸೃಜನಾತ್ಮಕ ಶಕ್ತಿ ಇವನ ಮಾನವನು ನಂಬಿನ ಬಗಗೆ, ಮಾನವಕೋ ಟಿಯ ಭವಿಷ್ಯತ್ತಿನ ಬಗಗೆ ವಿಚಾರಿಸುತ್ತಾ ನೆ. ತನ್ನ ಸ್ವಂತ ಭವಿಷ್ಯದ ಕಡೆಗೂ ಗ ಮನ ನೀಡುತ್ತಿಲ್ಲವೆನಿಸಿ, ಆದರ ಅ ಸೈಬೀರಿ ಯದ ವರ್ತಕನ ಗುಂಡಿಯ ಮೇಲೆ ಬರೆ ದಿರುವಂಥ "ಇಷ್ಟೆ..." ಎಂಬ ಉತ್ತರ, ನಂಬಿಕೆ—ಈ ಮಾನವನಿಗೆ ಎಷ್ಟೂ ಶಕ್ತಿ ನೀಡದು.

ಸ್ಪಾಟ್‌ವಾಗಿ ಘಾಟಿ ಇಳಿದರೆ ಸಾಕೆಂದು ಯೋಚಿಸುತ್ತಿದ್ದೆವು. ಘಾಟಿಯೇನೂ ತೊಂ ದರೆ ಇಲ್ಲದೆ ಇಳಿದಾಯಿತು. ನಾವಿಬ್ಬರು ಸ್ವಲ್ಪ ಜೋರಾಗಿ ಬಂದು ಬೆಳ್ತಂಗಡಿ ಪೆ ಟ್ರೋಲ್ ಬಂಕ್‌ನಲ್ಲಿ ಇಳಿದೆವು. ರಾತ್ರಿ ೧೧ ಗಂಟೆ ಮಾದರೂ ನಮ್ಮಲ್ಲಿ ಇನ್ನಿಬ್ಬರ ಸುಳಿವೇ ಕಾಣಲಿಲ್ಲ. ಸ್ವಲ್ಪ ದೂರದಲ್ಲಿ ಅವರಿಬ್ಬರೂ ಮೋಟರ್ ಸೈಕಲ್ ಸ ಸವೇತ ವೈನ್ಸ್ ಕೊಂಡು ಹೋಗುವ ಲಂರಿಯಲ್ಲಿ ಪ್ರಯಾಣ ಮಾಡಿಕೊಂಡು ಬ ರುವ ದೃಶ್ಯ ಕಂಡು ಬಂತು. ಕಾರಣ ನಾ ವೆರುವಲ್ಲಿಂದ ೮ ಮೈಲಿ ಹಿಂದೆ ಅವರ ಮೋಟರ್ ಸೈಕಲ್ ಚಕ್ರ 'ಪಂಕ್ಚರ್' ಆಯಿತಂತೆ. ಸರಿ ಈ ಕಾಡುದಂಗಲ್ಲಿ ನಡುವೆ ಏನಾದರೂ ತೊಂದರೆ ಬಂದರೆ ಬ್ರಹ್ಮನೇಗತಿ.

ಅಲ್ಲೇ ರಿಪೇರಿ ಮಾಡುವ ವ್ಯವಸ್ಥೆ ಮಾಡಿದೆವು. ರಾತ್ರಿ ೧೦ ಗಂಟೆ ೧೧ ಆಯಿತು. ರಿಪೇರಿ ಮಾಡಿದ ಕೆಲಸಗಾರರಿಗೆ ಬೇಕಾ ದಷ್ಟು 'ಬಕ್ಷೀಸ್' ಕೊಟ್ಟು 'ಟಾಟಾ' ಮಾಡಿ ನಾವು ನಾಲ್ವರೂ ಹೊರಟೆವು. ಅರ್ಧ ಫರ್ಲಾಂಗ್ ಬಂದಿದ್ದೆವೆ ಜೆಟ್ ನಾವಿದ್ದ ಮೋಟಾರ್ ಸೈಕಲ್



ಚಿಮುನಿ ರಾತ್ರಿ ಗಗನನೆಳತ್ರಿ ಎಡ್ವಿನ್ ಆಲ್ಡ್ರಿನ್ (ಎಡ) ಜೀಮ್ಸ್ ಬೊವೆಲ್ (ಬಲ) ಹಾರಾಟದ ಅಭ್ಯಾಸದಲ್ಲಿ ಮಗ್ನರಾಗಿದ್ದಾರೆ.

ತನ್ನಷ್ಟಕ್ಕೆ ಪ್ರಯಾಣ ನಿಲ್ಲಿಸಿತು. ನೋಡುವಾಗ ಅದರ ಹಿಂದಿನ ಚಕ್ರ ಪಂ ಕ್ಚರ್ ಆಗಿತ್ತು. ಸರಿ ದೇವಂದ್ರರಿ ಅವನೇ ಗತಿಯೆಂದು ಎಣಿಸಿ ಹಿಂತಿರುಗಿಸಿ ನಮ್ಮ ಲ್ಲಿದ್ದ ಹೊಸ ಟ್ಯೂಬನ್ನು ಜೋಡಿಸುವ ವಿರ್ಯಾಡು ಮಾಡಿದೆವು. ಅದನ್ನು ಹೊಂ ದಿಸಿ ಹೊರಡಲನುವಾದಾಗ ನಮ್ಮ ಹೊ ಸ ಟ್ಯೂಬ್ ತನ್ನಷ್ಟಕ್ಕೆ ಎಲ್ಲಾ ಗಾಳಿಯ ನ್ನು ಕಳಕೊಂಡಿತು. ಪುನಃ ಬಿಚ್ಚಿ ತೆಗೆದು ಪರೀಕ್ಷೆ ಮಾಡಿದಾಗ ಸರಿಯೂದ ಉಪಕ ರಣವಿಲ್ಲದೆ ಅದನ್ನು ಹೊಂದಿಸುವಾಗ ಅ ದು ತೂತಾಗಿತ್ತಂದ್ರೆ. ಹಾಗಾದರೆ ಹಳೆ ಟ್ಯೂಬ್‌ಗೇ 'ಪ್ಯಾಚ್' ಹಾಕುವುದು ಲೇ ಸೆಂದು ಬಗೆದೆವು. ಅಷ್ಟರಲ್ಲಿ ಹೊಟ್ಟೆ ಹಸಿ ನೆಯ ನೆನಪಾಯಿತು. ಬಸ್‌ನಿಲ್ದಾಣದ ಅಂದಿಯವರೊಬ್ಬರಿಗೆ ಶರಣು ಹೂಡಿದು ಎಬ್ಬಿಸಿದೆವು. ಸಿಹಿಯೂಳ ಬಾಳೆಹಣ್ಣು ಗ ಳಿಂದ ಹೊಟ್ಟೆ ಹಸಿನೆಯನ್ನು ತಣಿ ಸಿಕೊಂಡೆವು.

ಮರುದಿನದ ಕಾರ್ಯಕ್ರಮಗಳೆಲ್ಲಾ ಪರಿಸ್ಥಿತಿಗೆ ಸರಿಯಾಗಿ ಹೊಂದಿಸಿಕೊಂಡೆ ವು. ಈ ನಡುವೆ ನಮ್ಮ ಸ್ನೇಹಿತರು ತನ್ನ ಕೈಗೆ ಹಾಕುವ ಗ್ಲೌಸ್‌ಗಳು ಕಳೆದುಕೊಂ ಡದ್ದಕ್ಕೆ ತುಂಬಾ ಪಶ್ಚಾತ್ತಾಪ ಸೂಚಿಸಿ ದರು. ಅವು ಈ ಹುಂಬ 'ಪಂಕ್ಚರ್' ಆದ ಜಾಗದಿಂದ ಬರುವಾಗ ಕಳೆದು ಹೋದು ಎಂತ ದನ್ನು ಅವ ನವದಹಲಿಯಿಂ ದ ತಂದಿದ್ದ ವಂತೆ. ಅವನ್ನು ಹುಟ್ಟಿಸಿದ ಸ: ಹುಬಹೋಗ.ವ ಇ ಜ್ಞೆ ನ್ನು ಸೂಚಿಸಿದ ಎ ಲಿ ಅರ್ಥ ಮಿಳಿಗದವರಿಗೆ ಳಿಯೇನೆಂಬಣಿಸಿ ಮು ನಃ ಹಂದಕ್ಕೆ ಹೋಗಿ ಅವನ್ನ ಹ ಡಕಲು ಮನಸ್ಸುಮಾಡಿದವು. ನಾನು ಅಂಗಿ ಜೊತೆ ೨ ಗಂಟೆ ರಾತ್ರಿಯಲ್ಲಿ ನಾವಿಬ್ಬರೂ ಎಮ ಮೋಟರ್ ಸೈಕಲಿ ನಲ್ಲಿ ಘಾಟಿಯಿಂತಿಗೆ ಹೊಂಟೆವು. ರಸ್ತೆ ಯ ಎ ಡು ಬದಿಗಳಲ್ಲಿ ಇತ್ತೂ ಸೃಷ್ಟಿ ದಾಯಿಸಿತ್ತಾ ಬಂದವು. ಸುಮಾರು 7 ೈಲಿ ಬಂದಿಲಾ ಬಂದು. ನೀಲಾಂಬರನು ಕ ಕ್ಷೀರ ನಮ್ಮನ್ನಾಕಾಶಲ್ 'ಗಡಕ' ಎಂಬ ಶಬ್ದ ಮಾಡಿತು. ಇಳಿದು ನೋಡಿದಾಗ

(ಹದಿಮೂರನೇ ಪುಟ ನೋಡಿರಿ)

ಜರ್ಮನಿಯಲ್ಲಿ ಕ್ರಿಸ್‌ಮಸ್

ಪ್ರಪಂಚದಲ್ಲಿಯೂ ಅಂಧಶ್ರದ್ಧೆ ತಪ್ಪಿಲ್ಲ

ಜರ್ಮನಿಯಲ್ಲಿ ಫಾರ್ಮರ್ ಕ್ರಿಸ್‌ಮಸ್ ಹಬ್ಬದ ಸಂಕೇತ ಹೇಗಾಯಿತೆಂಬುದು ಯಾರಿಗೂ ತಿಳಿಯದು. ವ್ಯಾಯಶಃ ಅದು ಕ್ರಿಸ್‌ಮಸ್ ಹಬ್ಬದ ಹನ್ನೆರಡು ಪವಿತ್ರ ರಾತ್ರಿಗಳ ಮತಾಚರಣೆಯ ಅಂಗವಾಗಿರ ಬಹುದೆಂಬುದು ಒಂದು ಊಹೆ. ಸೈಲೇಷಿಯಾದಲ್ಲಿ ಈ ಹನ್ನೆರಡು ಪವಿತ್ರ ರಾತ್ರಿಗಳ ಮತಾಚರಣೆ ಕ್ರಿಸ್‌ಮಸ್ ಹಬ್ಬಕ್ಕೆ ಮೂರಲೇ ಆಚರಿಸಲಾಗುವುದು. ಆದರೆ ಮ್ಯೂಕ್ಲೆನ್‌ಬರ್ಗ್‌ನಲ್ಲಿ ಹೊಸ ವರ್ಷ ಹುಟ್ಟಿದಂದಿನಿಂದ ಆಚರಿಸಲಾಗುವುದು.

ಈ ಹನ್ನೆರಡು ಪವಿತ್ರ ದಿನಗಳ ರಾತ್ರಿ ಹಗಲುಗಳ ಬಗ್ಗೆ ಕೆಲವೊಂದು ಮೂಢ ನಂಬಿಕೆಗಳು ಇವೆ. ಭೂತಗಳು ಸಂಚರಿಸುವುವೆಂಬ ಇತ್ಯಾದಿಗಳಲ್ಲಿಂದಾದ ಮೂಢನಂಬಿಕೆಯನ್ನು ಇಂದೂ ನಂಬಲಾಗುತ್ತಿದೆ. ಬೆಂಕಿ, ಶಬ್ದ ಮಾಡುವಿಕೆ—ಮುಂತಾದವುಗಳಿಂದ ಅವನ್ನು ಅಟ್ಟಲಾಗುವುದಂತೆ ಈ ಹನ್ನೆರಡು ರಾತ್ರಿಗಳಲ್ಲಿ ಕಾಣುವ ಕನಸುಗಳೆಲ್ಲವೂ ಸತ್ಯವಾಗುವುವೆಂಬುದು ಮತ್ತೊಂದು ಮೂಢನಂಬಿಕೆ. ಈ ಕಾಲದಲ್ಲಿ ಬಟ್ಟೆ ಒಗೆಯುವುದು, ರೊಟ್ಟಿ ಮಾಡುವುದು, ಅಥವಾ ಬಟ್ಟೆ ನೇಯುವುದು—ಇವುನಿಷೇಧ. ಈ ಮೂಢ ನಂಬಿಕೆಗಳ ಬಗೆಗಿನ ವೈಶಿಷ್ಟ್ಯವೆಂದರೆ ಇವಕ್ಕೂ ಕ್ರಿಸ್‌ಮಸ್ ಹಬ್ಬಕ್ಕೂ ಯಾವ ಸಂಬಂಧವೂ ಇಲ್ಲದಿದ್ದರೂ ಇವು ಇಂದಿಗೂ ಆಚರಣೆಯಲ್ಲಿದ್ದು ಬಂದಿದೆ.

ಜರ್ಮನಿಯ ಕೆಲವು ಭಾಗಗಳಲ್ಲಿ ಈ ಮೂಢನಂಬಿಕೆಗಳು ಇನ್ನೂ ಸ್ವಲ್ಪ ಮಟ್ಟಿಗೆ ಯಾಗಿವೆಯೆಂದೇ ಹೇಳಬಹುದು. ಆದರೆ ಕ್ರಿಸ್‌ಮಸ್ ಹಬ್ಬದಾಚರಣೆಯಲ್ಲಿ ನವೀನತೆ ಮೂಡಿದಂತೆ ಇವು ಮಾಯವಾಗತೊಡಗಿವೆ.

ರಿಫಾರ್ಮೇಷನ್‌ನಿಂದಾಗಿ ಕ್ರಿಸ್‌ಮಸ್ ಕೆರೋಲ್ ಬಳಕೆಗೆ ಬಂತು. ಮೊದಮೊದಲು "ಕ್ಯಾಂಪಾಸ್" ಹಾಡುಗಳನ್ನು ಈ ಹಬ್ಬದಆಚರಣೆಯ ಅಂಗವಾಗಿ ಹಾಡಲಾಗುತ್ತಿತ್ತು. ಎರಡನೆಯ ಮಹಾಯುದ್ಧದ ವರೆಗೂ ಈ ಪದ್ಧತಿ ಜರ್ಮನಿಯ ಬಹು ಭಾಗಗಳಲ್ಲಿ ಆಚರಣೆಯಲ್ಲಿತ್ತು. ಬೇಗಿನ ಜಾವ ಐದು ಗಂಟೆಗೇ ಭಕ್ತವೃಂದ ಚರ್ಚಿನಲ್ಲಿ ನೆರೆದು ಮೇಣದ ಬತ್ತಿಗಳನ್ನು ಹಚ್ಚಿಸಿ ಕರೋಲ್ ಹಾಡುತ್ತಾ ಚರ್ಚಿನ ಒಂದು ತುದಿಯಿಂದ ಮತ್ತೊಂದು ತುದಿಗೆ ನಡೆಯುವುದು ರೂಢಿಯಾಗಿತ್ತು.

ಜರ್ಮನಿಯ ಅನೇಕ ರೋಮನ್ ಕ್ಯಾಥೊಲಿಕ್ ಪ್ರದೇಶಗಳಲ್ಲಿ ಕ್ರಿಸ್‌ಮಸ್‌ನ ಹಿಂದಿನ ದಿನ ಉಪವಾಸವಿರುವುದು ಸಂಪ್ರದಾಯ. ಕ್ರಿಸ್‌ಮಸ್ ದಿನ ಪ್ರಾರ್ಥನೆ ಮುಗಿಯುವುದಕ್ಕೆ ಮೊದಲು ಕೊಡುವುದಿಲ್ಲ. ಇನ್ನು ಇತರ ಜಾಗಗಳಲ್ಲಿ ಕ್ರಿಸ್‌ಮಸ್ ಹಿಂದಿನ ದಿನ ಕತ್ತಲಾದ ಮೇಲೆ ಹಬ್ಬದೂಟ ಮಾಡುವುದು ಸಂಪ್ರದಾಯ. ಕೂಡುಗೆಗಳನ್ನು ನೀಡುವುದನ್ನು ತೋರುವುದರಲ್ಲಿಯೂ ವೈವಿಧ್ಯತೆಯಿದೆ. ಲಿಥ್ಲೀಸ್‌ನಲ್ಲಿ ಕ್ರಿಸ್ತ ಬಾಲಕ, ಬೆಳಿ ಉಡುಪು ಧರಿಸಿದ ವಾಹಳೆಯಂತೆ ತೋರುವುದು ರೂಢಿ, ಆಕಯ ಜೊತೆಯಲ್ಲಿ ಹ್ಯಾನ್ಸ್ ಟ್ರಾಪ್ ಎಂಬ ಕುಬ್ಜನನ್ನು ತೋರಿಸುವರು. ಸ್ವಾಬಿಯಾದಲ್ಲಿ ಈ ಕುಬ್ಜ ದೇವತೆಕ ವ್ಯಾಪಿರುವಂತೆ ತೋರಿಸಲಾಗುವುದು.

ಫ್ರಾಟ್ಸೆಂಟರ ಉತ್ತರಭಾಗದಲ್ಲಿ ಕೊಡುಗೆಗಳನ್ನೂ ನೀಡುವ ದೇವತೆ ಅದೃಶ್ಯವಾಗಿರುವಂತೆ ನಿರೂಪಿಸುವುದು ರೂಢಿ, ಮಕ್ಕಳ ಆಟಿಗಗಳು ಅದೃಶ್ಯ ದೇವತೆಯಿಂದ ಗುಪ್ತವಾಗಿ ನೀಡಲ್ಪಡುವುವು.

ಕ್ರಿಸ್‌ಮಸ್ ಕಾಲದಲ್ಲಿನಾಟಕಗಳನ್ನಾಡುವುದು ಇಟಲಿಯಿಂದ ಬಂದ ಸಂಪ್ರದಾಯ. ಆ ದೇಶದಲ್ಲಿ ಇದು ಹತ್ತನೆ ಶತಮಾನದಲ್ಲಿ ಆರಂಭವಾಯಿತಂತೆ. ಈಗಲೂ ಅಲ್ಲಿ ಈ ಪದ್ಧತಿ ಆಚರಣೆಯಲ್ಲಿದೆ. ಕ್ರಿಸ್ತ ಬಾಲಕನನ್ನು ತೊಟ್ಟಿಲಲ್ಲಿಟ್ಟು ತೂಗುವುದು ಈ ಕಾಲದಲ್ಲಿ ಆಚರಿಸುವ ಸಂಪ್ರದಾಯ. ತೊಟ್ಟಿಲು ತೂಗುವಾಗ ವಾದ್ಯ ಗೋಷ್ಠಿಯಿಂದ ಕೂಡಿರುತ್ತದೆ.

ಏನೇ ಆದರೂ ಕ್ರಿಸ್‌ಮಸ್‌ನಲ್ಲಿ ಹಬ್ಬದೂಟ ಮಾತ್ರ ಯಥೇಚ್ಛವಾಗಿ ದೊರಕುವುದಕ್ಕಡ್ಡಿಯಿಲ್ಲ. ತಿಂಡಿ ವಗೈರೆಗಳನ್ನು ಸಿದ್ಧಿಗೊಳಿಸುವ ಕಾರ್ಯ ಹಲವು ವಾರಗಳ ಮೊದಲಿನಿಂದಲೇ ಪ್ರಾರಂಭವಾಗುವುದು. ಹೋಲ್‌ಸ್ಟೇನ್‌ನಲ್ಲಿ ಕ್ರಿಸ್‌ಮಸ್‌ನ ಹಿಂದಿನ ದಿನವನ್ನು ದ್ವಾದಶ ದಿನವೆಂದು ಕರೆಯುವುದು ರೂಢಿ.

ತಂಗಿ ನಿರ್ಮಲೆಗೆ

—ಪುನರ್ವಸು ಯೇತತ್ಸ.

ನಿನಗೂ ನನಗೂ ಒಂಟಿತನ ಬಿಡು
ಕೊನೆ ಮೊದಲಿಲ್ಲದ ನೀಳವಿದು.
ಆವುದೊ ಘಟನೆ ಕೂಡಿತು ಒಡನೆ
ನಿರ್ಮಲ ನೀಹದ ಸಂಘಟನೆ.
ಹೃದಯದ ವೀಣೆ ಮಿಡಿಯುತಲಿರಲು
ಬಂಧುರ ಬಂಧನ ಬಂಧಿಸಿತು
ಪಾವನ ಪ್ರೇಮದ ಮಮತೆಯು ನಡತೆಯು
ಸೋದರ ಜ್ಯೋತಿಯು ಬೆಳಗಿತ.
ಬಿಸಿ ಬಿಸಿ ಕಂಬನಿ ಧಾರಾವಾಹಿನಿ
ನಿರ್ಮಲ ಹೃದಯ ದದ್ಯೋತಕವೆ?
ಕಂಬನಿ ತುಂಬಿದ ನೀಲಿಯು ಗೋಳಾ
ನೆನಪಿನ ಕಣ್ಣಿಗೆ ಕಿಣಿಕಯೆ.
ಅಂತರಾಳದಾ ಜೊಂಪಿಗೆ ಸೋಕಿಹೆ
ನಿಶ್ಚಲ ಚಿತ್ತದ ಭಾವನೆಗೆ.
ಭಾವುಕ ಬಗೆಯೆಂಬ ಮೂರನೆ ಪೂಜೆಗೆ
ನೀನೇ ಒಬ್ಬಳು ಸಾಕ್ಷಿನಗೆ.
ಶಿವನೂ ಶಿವೆಯೂ ಹರಿಯುತಲಿರಲೀ
ಬಾಳಿಗೆ ಬೆಳಕನು ಕರುಣಿಸಲಿ
ಶ್ರೀಗುರು ಕೃಪೆಯೇ ರಕ್ಷೆಯು ನಿನಗೆ
ನಿಶ್ಚಲ ಚಿತ್ತದ ನಿರ್ಮಲೆಯೆ.

ಮಾತೃಹೃದಯ

— ಎಸ್. ಪದ್ಮನಾಭ ನಾಯಕ್,
ಉಡುಪಿ.

"ಏನು ಕತಕರಿ
ಸಹಿಸಲಾರೆನು
ಹೊರಗೆ ಹಾಕುವೆನೀಗಲೆ"
ಬಡಿಸಿದನ್ನವ
ಉಣಲು ಬಿಡದೆ
ಹಿಡಿದು ಒಯ್ದಳು ಕೊರಗದೆ.
"ಕೊಂಡು ಹೋಗಲಿ
ಗುಮ್ಮ ನಿನ್ನನು
ಎಲ್ಲಬೇಕಾದಲ್ಲಿಗೆ"
ಸುತ್ತಕತ್ತಲು
ಎತ್ತನೋಡಲು
ಭಯವು ಉದಿಸಿತು ಮನದಲಿ.
ಕಣ್ಣು ಪಿಳಿಪಿಳಿ
ಬಾಲ ಪಟಪಟ
ಸದ್ದು ಕೇಳಿತು ಮಂಗವಿಗೆ.
ಹೆದರಿಕೊಳ್ಳುತ
ಕದವ ಬಡಿಯುತ
ಕರೆದಿನಮ್ಮನ ಕೂಗುತ.
"ಬಡಿಸಿದನ್ನವ
ಉಣುವೆನಮ್ಮ
ನೀ ಹೇಳಿದಂತೆ ಕೇಳುವೆ
ಕಣ್ಣು ಪಿಳಿಪಿಳಿ ಬಾಲ ಪಟಪಟ
ಗುಮ್ಮ ಬಂದಿತೆ ಇಲ್ಲಿಗೆ"
ಕರಗಿ ಕೊಂಡಿತು
ಮಾತೃ ಹೃದಯವು
ಒಡನೆ ಕದವನ ತೆರೆದಳು

ರತ್ನಗಳ ಸ್ಥಾನಮಾನಗಳು

(ಎಳನೀರು ಪುಟದಿಂದ)

ಬೈಬಲ್‌ನಲ್ಲಿಯೂ ರತ್ನಗಳ ಬಗ್ಗೆ ಪ್ರಸ್ತಾವಿಸಲಾಗಿದೆ. ಕೆಲವು ಜಾತಿಯ ರತ್ನಗಳನ್ನು ಧರಿಸಿದ ಕೂಡಲೇ ಜ್ವರ ಬರುವುದಾಗಿಯೂ ಇಂತಹ ರತ್ನಗಳ ಸಹಾಯದಿಂದ ಅನೇಕ ಅಧಿಕಾರಿಗಳು 'ಮೆಡಿಕಲ್ ರಜೆ' ಸಿದ್ಧಿಸುತ್ತಿರುವುದಾಗಿಯೂ ಹೇಳಲಾಗಿದೆ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚುಗಳನ್ನೇ**

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಅನಾವೃಷ್ಟಿ ಪೀಡಿತ
ಪ್ರದೇಶಗಳ ಜನರಿಗೆ
ಸಹಾಯ ಮಾಡಿರಿ

ನಗದು ಹಣ ಅಥವಾ ವಸ್ತುಗಳ ರೂಪದಲ್ಲಿ
ನಿಮ್ಮ ಕಾಣಿಕೆಗಳನ್ನು ಇಲ್ಲಿಗೆ ಕಳುಹಿಸಿರಿ:

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿ
ಕ್ಯಾಬಿನೆಟ್ ಸಚಿವಾಲಯ
ರಾಷ್ಟ್ರಪತಿ ಭವನ
ನವದೆಹಲಿ—4

ನವಯುಗ

ಪ್ರಜಾರಾಜ್ಯ ವಿಶೇಷಾಂಕ—1967

ಕರ್ನಾಟಕದ ಖ್ಯಾತ ಬರಹಗಾರರ
ಕತೆ, ಕವನ, ಲೇಖನಾದಿಗಳಿಂದ ಕೂಡಿ
ವಿಶಿಷ್ಟ ರೀತಿಯಿಂದ
ತಾ. 26—1—1967ರಂದು ಪ್ರಕಟಿಸಲಾಗುವುದು.

ಅಖಿಲ ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಹೊರನಾಡುಗಳಲ್ಲಿಯೂ ಪ್ರಚಾರವಾಗುವ ನವಯುಗ ವಿಶೇಷ ಸಂಚಿಕೆಯು ಜಾಹೀರಾತಿಗೆ ಉತ್ತಮ ಸಾಧ್ಯವಾಗಿದೆ. ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಆದಷ್ಟು ತ್ವರ್ಯ ಕಳುಹಿಸುವಂತೆ ವಿನಂತಿ.

ಮೆನೇಜರ್, ನವಯುಗ, ಉಡುಪಿ.

ದೃಷ್ಟಿ ನಮ್ಬಾದರೆ ಹೆದರಬೇಡಿ

(ಅರನೇ ಪುಟದಿಂದ)

ಪಡಿಸುವ ಈ ಸಾಧಕಗಳಿಗೆ ತಕ್ಷಣ ಹೊಂದಿಕೊಳ್ಳುವುದು ಸುಲಭವಲ್ಲ ಎಂಬುದನ್ನು ಡಾ। ಹೆಲ್ಲಿಂಗರ್ ಒಪ್ಪುತ್ತಾರೆ. ಕಾಲಾನುಕ್ರಮದಲ್ಲಿ ಅವರಿಗೆ ಪ್ರಯೋಜನವಾಗಬಹುದು; ಕೆಲ ಪರಿಸ್ಥಿತಿಗಳಲ್ಲಿ ನೆರವು ಉಪಯುಕ್ತವಾಗುವುದಲ್ಲ ಎಂದೂ ಅವರು ಹೇಳಿದರು.

"ಕಣ್ಣಿನ ಬಳಕೆ ಹಾಸಿಕರವೆಂಬ ತಪ್ಪು ಅಭಿಪ್ರಾಯಕ್ಕೆ ಅನೇಕ ಮಂದಿ ರೋಗಿಗಳು ಈಡಾಗುವುದುಂಟು. ದೃಷ್ಟಿಕರ್ಮವನ್ನು ತ. ಇದಕ್ಕಿಂತ ಸತ್ಯಕ್ಕೆ ದೂರವಾದ ಸಂಗತಿ ಇನ್ನೊಂದಿಲ್ಲ. ಸೂಜಿನೆಯಂತೆ ಸತತ ಎಂಗ ಕಣ್ಣುಗಳನ್ನು ಬಳಸುವುದರಿಂದ ದೃಷ್ಟಿಗ ಬಲ ಬರುತ್ತದೆ, ಕಳೆದುಳಿದ ದೃಷ್ಟಿಯನ್ನು ಹೆಚ್ಚು ಸಮರ್ಥವಾಗಿ ಕವರು ಬಳಸಬಹುದಾಗುತ್ತದೆ" ಎಂದೂ ಡಾ। ಹೆಲ್ಲಿಂಗರ್ ಹೇಳಿದರು.

ನ್ಯೂಯಾರ್ಕಿನ ವೈದ್ಯ ಕ್ಷೇತ್ರದಲ್ಲಿ ಪ್ರಸಿದ್ಧರ ಯಶಸ್ಸನ್ನು ಸಂಪಾದಿಸಿರುವ ಡಾ।। ಹೆಲ್ಲಿಂಗರ್ ಅವರು ಗಾಟಿಂಜೆನ್ನಲ್ಲಿ ಬ್ರಿಕ್ಲೆಸ್ನಿನ ಅಂಧರ ಕೈಗಾರಿಕಾ ಗೃಹದ ಮಂದ ದೃಷ್ಟಿ ಚಿಕಿತ್ಸಾಲಯವನ್ನು ತೆರೆದರು, ಅಲ್ಲಿ ಹಣವಿಲ್ಲದವರಿಗೆ ಪರೀಕ್ಷೆ ಹಾಗೂ ನೆರವು ಉಚಿತ. ಗಾಟಿಂಗರ್ನಲ್ಲಿ ಈ ಚಿಕಿತ್ಸಾಲಯವನ್ನು ನೋಡಿದ ಡಾ। ವೆಂಕಟಸ್ವಾಮಿಯವರು, ಭಾರತದಲ್ಲೂ ಇಂಥ ಪ್ರಯತ್ನ ಅವಶ್ಯವೆಂದು ಖಚಿತಪಡಿಸಿಕೊಂಡರು.

ಡಾ। ಹೆಲ್ಲಿಂಗರ್ ಅವರು ಮದ್ರಾಸಿನಲ್ಲಿ ಚಿಕಿತ್ಸಾಲಯಕ್ಕೆ ಅನೇಕ ದೃಷ್ಟಿ ಸಹಾಯಕ ಸಾಧನಗಳನ್ನೂ, ಪೀಠೋಪಕರಣಗಳನ್ನೂ ತಂದಿದ್ದಾರೆ. ಹೊಸ ಸಾಧನ ಹಾಗೂ ಉಪಕರಣಗಳ ಬಳಕೆಯ ಅಪ್ತಾಲ್ಮಾಲಜಿಸ್ಟ್ ಡಾ. ನಂಸೆಯ ಪೂಳ್ ಸ್ವಾಮಿ ಹಾಗೂ ರಿಫ್ರಾಕ್ಷನಿಸ್ಟ್ ಎಂ. ಪಿ. ಕುರ್ಯಕೋಸ್ ಅವರುಗಳಿಗೆ ತರಬೇತಿ ನೀಡಿದ್ದಾರೆ.

ಮಧುರೆಗೆ ಬಂದು ಭಾರತೀಯ ರೋಗಿಗಳ ಹಾಗೂ ವೈದ್ಯಂ ಸಂಪರ್ಕ ಪಡೆದುದರಿಂದ ತಮಗೆ ಪ್ರಯೋಜನವಾಗಿದೆ ಎಂದು ಡಾ। ಹೆಲ್ಲಿಂಗರ್ ಹೇಳಿದರು. ಡಾ। ವೆಂಕಟಸ್ವಾಮಿ ಅವರು ಭವಿಷ್ಯದ ಕಡೆ ನೋಡುತ್ತ, ವರ್ಷದಲ್ಲಿ ಕೆಲ ಕಾಲವಾದರೂ ಈ ಕೇಂದ್ರ ದೇಶದ ಇತರ ಕಡೆಗಳ ವೈದ್ಯರ ತರಬೇತಿಯ ಕೇಂದ್ರವಾಗುವಂತೆ, ಡಾ। ಹೆಲ್ಲಿಂಗರ್ ಅವರು ಪ್ರತಿ ವರ್ಷವೂ ಕೆಲ ವಾರಗಳ ಕಾಲ ಮಧುರೆಗೆ ಬಂದಿರಲು ಸಾಧ್ಯವಾದೀತೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದರು.

"NAVAYUGA" Kannada Weekly is recommended for high Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1965.

ಅಭಿಪ್ರಾಯ

ನಿರ್ಧಾಕ್ಷಿಣ್ಯ ಮುಂದಾಳು ಬೇಕು

ಭಾರತೀಯ ಸಂಸ್ಕೃತಿ, ಸಾಹಿತ್ಯ ಹಾಗೂ ನಾಗರಿಕತೆ ಬಹಳ ಸುಂತನವಾದುದು. ಜಗತ್ತಿನಲ್ಲೇ ಶ್ರೇಷ್ಠವಾದುದು. ವಿಶಾಲ ವಿಶ್ವದ ಇತರ ರಾಷ್ಟ್ರಗಳಿಗೆ ಆದರ್ಶವೆನಿಸಿದ್ದ ನಮ್ಮ ಸಂಸ್ಕೃತಿ, ಇಂದು ತನ್ನ ಹಿರಿಮೆಯನ್ನು ಕಳೆದುಕೊಂಡು, ನಾವು ಬೇರೆಯವರಿಂದ ಕಲಿತುಕೊಳ್ಳುವಂತಾಗಿದೆ. ನಮ್ಮ ನೀತಿ, ನಿಷ್ಠೆಗಳ ಬಗ್ಗೆ, ಪರರೇಯರಿಂದ ಅಪಹಾಸ್ಯಕ್ಕೆ ನಾವು ಗುರಿಯಾಗಿದ್ದೇವೆ.

ರಾಜಕೀಯದಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ, ಆಡಳಿತೆಯಲ್ಲಿ, ಮತ್ತಿತರ ರಂಗಗಳಲ್ಲಿ ನಾವು ಅನಾಗರಿಕರಂತೆ, ವರ್ತಿಸುತ್ತಿದ್ದೇವೆ ನಮಗಾಗಿ ನಮ್ಮ ಹಿಂದಿನವರು ಬಿಟ್ಟು ಹೋಗಿದ್ದ ಗ್ರಂಥಗಳನ್ನು ನಾವಿಂದು ಓದುತ್ತಿಲ್ಲ. ಬದಲು ತೆಗಳುವಷ್ಟು ಹೀನತೆಗಿಳಿದಿದ್ದೇವೆ.

ಜನತೆ, ಸರಕಾರವನ್ನು ಸಹಕರಿಸದ ಅಸಹಕಾರವನ್ನು ತೋರಿಸಿ ದೇಶದಲ್ಲಿ ಅನುದಿನ ಗಲಭೆ ಗಲಾಟೆಗಳನ್ನು ಎಬ್ಬಿಸಿ, ಅಶಾಂತಿ, ಅರಾಜಕತಾವಸ್ಥೆಯ ಕೂಪಕ್ಕೆ ರಾಷ್ಟ್ರವನ್ನು ತಳ್ಳುತ್ತಿದೆ. ಜನತೆಯು ಬಳಕೆಗಾಗಿ ದುಡಿಯು ಬೇಕಾದ ಸರಕಾರ, ಜನರನ್ನು ಹಿಂಸಿಸಿ, ಪೀಡಿಸಿ, ಸ್ವಾರ್ಥ ಸಾಧಕ ಅಧಿಕಾರಿಗಳನ್ನು ಪೋಷಿಸುತ್ತಿದೆ. ಲಂಚ, ಸ್ವಾರ್ಥಗಳ ವಿಷದ ಬೆಳೆ ಬೃಹದಾಕಾರವಾಗಿ ಬೆಳೆಯುಲಾರಂಭಿಸಿದೆ.

ಸ್ವಾತಂತ್ರ್ಯ, ಸಹಕಾರಗಳೆಂಬುದು ಸ್ವಾರ್ಥ ಸರ್ವಾಧಿಕಾರಗಳೆಂದು ತಿಳಿದುಕೊಂಡ ಸಾಮಾನ್ಯ ಜನತೆ, ಮತ್ತು ಅಧಿಕಾರಿಗಳು ರಾಷ್ಟ್ರವನ್ನು ಅವನತಿಯ ಆಳಕ್ಕೆ ತಳ್ಳುತ್ತಿದ್ದಾರೆ.

ಏಕೆ ಹೀಗಾಯಿತು? ಶತಮಾನಗಳಬ್ರಿಟಿಷ್ ಆಳರಸರ ದಾಸ್ಯದಲ್ಲಿ ನಲಿದ ನಾವು ರಾಷ್ಟ್ರಶ್ರೇಯವನ್ನು ಮರೆತು, ಸ್ವಾರ್ಥಿಗಳೂ, ಅಲಸಿಗಳೂ ಆಗುವಂತಾಯಿತು. ಸಾಮ್ರಾಜ್ಯವನ್ನು ಚಿರಕಾಲ ಉಳಿಸಬೇಕೆಂದು ಬಯಸಿದ ಆಂಗ್ಲರು ನಮಗಿತ್ತ ಶಿಕ್ಷಣ ನಮ್ಮ ಅವನತಿಗೆ ಕಾರಣವಾಯಿತು.

ನಮ್ಮ ಸುತ್ತ ಮುತ್ತಲಿನ ವಾತಾವರಣ ನಮ್ಮ ಅನುಭವವನ್ನು ಬೆಳೆಸುತ್ತದೆ. ಬಾಲ್ಯದಲ್ಲಿ ಮೈಗೂಡಿ ಬಂದ ಅನುಭವ, ಶಿಕ್ಷಣ ಜೀವನದಲ್ಲಿ, ಕಟ್ಟಪರಿಲಿ ಅದು ಕೂನುಬು ತನಕ ಉಳಿಯುತ್ತದೆ. ಮೈಗೂಡಿ ಬಂದ ನಿರ್ಲಜ್ಜತನ, ಅನೈತಿಕ ಜಿಜ್ಞಾಸೆ, ಅನಾಗರಿಕತನ ವಿಶ್ವಾಯ ಹೆಚ್ಚಿದಂತೆ ಹೆಚ್ಚುತ್ತದಯೇ ಹೊರತು, ಕಡಮೆಯಾಗುವುದಿಲ್ಲ. ನಮ್ಮ ಬಾಲ್ಯದ ಶಿಕ್ಷಣ, ನಮ್ಮ ಹಿರಿಯರ ರೀತಿ ನೀತಿ ನಮ್ಮ ಒಳಿತು ಕೆಡುಕಿನ ಮಾರ್ಗದರ್ಶನ.

ಹೆಣ್ಣು ಗಂಡುಗಳಲ್ಲಿರಬೇಕಾದ ನೈತಿಕ ಪಾವಿತ್ರ್ಯ ದಿನದಿಂದ ದಿನಕ್ಕೆ ಲಯವಾಗುತ್ತಾ ಬಂದು,ಅನೈತಿಕ ಅನಾಚಾರ ನಿರ್ಲಜ್ಜತನಗಳು ಬೆಳೆಯಲು ಹುಲುಸಾದ ಹೊಲಗಳು ಇಂದಿನಪಟ್ಟಣಗಳು, ಆಗಾಗ ತನ್ನ ಅಗತ್ಯಕ್ಕಾಗಿ ಪಟ್ಟಣಕ್ಕೆ ಹೋಗಬೇಕಾದ ಹಳ್ಳಿಯ ಹೈದ ಪಟ್ಟಣಗಳಲ್ಲರುವ ಈ ಹೊಲಸು ನಾಗರಿಕತೆಗೆ ಮರುಳಾಗಿ ತಾನೂ ಪಟ್ಟಣ ವಾಸಕ್ಕೆ ಅರ್ಪಿತನಾಗುತ್ತಾನೆ.

ಫ್ಯಾಶನ್ ಮತ್ತು ನಾಗರಿಕತೆಯು ಹೆಸರಿನಲ್ಲಿ ಭಾರತೀಯ ಪವಿತ್ರ ಪುರಾತನ ಸಂಸ್ಕೃತಿಗಳ ಅವಹೇಳನ ಪಟ್ಟಣಗಳಲ್ಲಿ ಸದಾ ನಡೆಯುತ್ತದೆ. ಸೀತೆ ಸಾವಿತ್ರಿಯರ ರಕ್ತ ನಮ್ಮ ಹಂಗಳೆಯರಲ್ಲಿ ಹರಿಯುತ್ತಿಲ್ಲ. ಬತ್ತಿಹೋಗಿದ ರಾಮ ಭೀಮರ ಧೀರತೆ ಇಂದು ನಮ್ಮಲ್ಲಿ ಉಳಿದಿಲ್ಲ. ರಾವಣ ಕೀಚಕರ ಸಂತಾನ ಇಂದು ಭಾರತದಲ್ಲಿ ಬಳೆಯುತ್ತಿರುವುದು ದುರದೃಷ್ಟ.

ಪಟ್ಟಣಗಳರ ವಿಷಯುಲ ಜನಸಂಖ್ಯೆ, ಅಲ್ಲಿನ ಪ್ರಜಾಸಾಂಪತ್ಯ, ವಸತಿಯ ಅಸೌಕರ್ಯ, ಮತ್ತು ವಿದೇಶಿ ಜನರನ್ನು ಆಕರ್ಷಿಸಲೆಂದು ಕಟ್ಟಲಾದ ಭೋಗೋಪಭೋಗಗಳು, ಹಾಗೂ ವಿಹಾರ ಸ್ಥಳಗಳು, ಭಾರತೀಯರನ್ನು ನಾಗರಿಕತೆಯ ಹೆಸರಲ್ಲಿ ಅನಾಗರಿಕರನ್ನಾಗಿ ಮಾಡುತ್ತಿವೆ. ನಗರ ನಾರಿಯರು ಬೀದಿ ಬಸದಿಯರಾಗಿ, ತಮ್ಮ ಅಂಗ ಪ್ರದರ್ಶನ ಹವ್ಯಾಸಕ್ಕೆ ಬಲಿ

(ಹದಿನೈದನೇ ಪುಟ ನೋಡಿರಿ)

ಕ್ಷಯ ರೋಗದ ವಿರುದ್ಧ ಧರ್ಮಯುದ್ಧ

ಕ್ಷಯ ರೋಗಿಗಳನ್ನು ಅವರ ಮನೆಯಲ್ಲೇ ಆರೈಕೆ ಮಾಡುವುದು ಇಂದು ಹಚ್ಚೆಚ್ಚು ರೂಢಿಯಾಗಿದೆ. ಕ್ಷಯ ರೋಗಿಗಳ ಚಿಕಿತ್ಸೆಗಾಗಿ ಪ್ರತಿ ಜಿಲ್ಲೆಯಲ್ಲಿ ಒಂದೊಂದು ಸುಸಜ್ಜಿತ ಚಿಕಿತ್ಸಾಲಯವನ್ನು ಸ್ಥಾಪಿಸುವುದಕ್ಕಾಗಿ ಸರಕಾರವು ಯೋಚಿಸುತ್ತಿದೆ. ಮನೆಯಲ್ಲೇ ನಡೆಸುವ ಚಿಕಿತ್ಸೆಯು ಪರಿಣಾಮಕಾರಿಯಾಗಬೇಕಾದರೆ, ಚಿಕಿತ್ಸಾಲಯಗಳಲ್ಲಿ ಸೂಕ್ತ ಸಲಕರಣೆಗಳು, ಸಾಕಷ್ಟು ತರಬೇತಾದ ಸಿಬಂದಿ ಮತ್ತು ರೋಗಿಗಳಿಗೆ ಧರ್ಮಾರ್ಥವಾಗಿ ಕೊಡುವ ಔಷಧಿಗಳಿರಬೇಕು. ಎಲ್ಲೆಲ್ಲೂ ಕೇಳಿಬರುತ್ತಿರುವ ಸಾಮಾನ್ಯ ದೂರೆಂದರೆ ರೋಗಿಗಳು ಡಾಕ್ಟರರ ಸಲಹೆಯಂತೆ ಕ್ರಮಬದ್ಧವಾಗಿ ಔಷಧಿಗಳನ್ನು ಸೇವಿಸುತ್ತಿಲ್ಲ ಎಂಬುದಾಗಿದೆ. ಅಂತಹ ರೋಗಿಗಳು ಗುಣಮುಖರಾಗುವುದಿಲ್ಲ ಮಾತ್ರವಲ್ಲ ತಮ್ಮ ಕುಟುಂಬ ಹಾಗೂ ಸಮಾಜಕ್ಕೆ ಅಪಾಯಕಾರಿಗಳಾಗಿಯೇ ಉಳಿಯುತ್ತಾರೆ. ಇಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಅತ್ಯಂತ ಪ್ರಾಮುಖ್ಯ ಪಾತ್ರವನ್ನು ನಿರ್ವಹಿಸಲು ಸಾಧ್ಯವಿದೆ. ಇಂತಹ ಸಂಸ್ಥೆಗಳಲ್ಲಿ ತರಬೇತಾದ ಸ್ವಯಂ ಸೇವಕರಿದ್ದು ಇವರು ಸರಕಾರೀ ಪ್ರತಿನಿಧಿಗಳ ಜೊತೆಗೂಡಿ ಯೋಜನೆಯನ್ನು ಮಾಡುವಲ್ಲಿ ಮತ್ತು ರೋಗಿಗಳು ಡಾಕ್ಟರ ಸೂಚನೆಯಂತೆ ಔಷಧಗಳನ್ನು ಸೇವಿಸುವಲ್ಲಿ ಸಹಾಯ ಮಾಡಬಹುದು.



ಕ್ಷಯರೋಗ ನಿವಾರಣಾ ಸಂಸ್ಥೆಗಳಲ್ಲಿ ಸಾಕಷ್ಟು ಧನ ಸಂಗ್ರಹವಿಲ್ಲದೆ ಇಂತಹ ಸ್ವಯಂಸೇವಕರನ್ನು ತರಬೇತುಗೊಳಿಸಲು ಸಾಧ್ಯವಿಲ್ಲ. ಬಡ ರೋಗಿಗಳನ್ನು ಅವರ ಮನೆಯಲ್ಲಿ ಆರೈಕೆ ಮಾಡುವವರು ಯಾರೂ ಇಲ್ಲದ್ದರಿಂದ, ಅವರಿಗ ಆಹಾರ, ಅವರ ಮಕ್ಕಳ ವಿದ್ಯಾಭ್ಯಾಸ ಇವುಗಳ ಸಲುವಾಗಿ ಸಹಾಯ ಮಾಡಲು ಪ್ರಾಂತ ಸಂಸ್ಥೆಗಳಲ್ಲೂ ಸಾಕಷ್ಟು ಧನ ಸಂಗ್ರಹವಿರಬೇಕು. ಕ್ಷಯರೋಗ ಮುದ್ರೆಗಳ ಮಾರಾಟ ಚಳವಳಿಯ ನಿಧಿ ಸಂಗ್ರಹಿಸುವ ಪ್ರಾತ್ಯಕ್ಷಿಕ ಪದ್ಧತಿಯಾಗಿದೆ.

ಇದೀಗ ಕ್ರಿಸ್ಮಸ್. ಎಷ್ಟೋ ಬಡ ಕ್ಷಯರೋಗಿಗಳು ಕ್ರಿಸ್‌ಮಸ್‌ನ ಆನಂದವನ್ನು ಪಡೆಯುವ ಬರ. ನೀವು ಅವರನ್ನು ಸಂಪರ್ಕಿಸಬಹುದಾದ ಸುಲಭ ಉಪಾಯವೆಂದರೆ ಕ್ಷಯರೋಗ ಮುದ್ರೆಗಳನ್ನು ಖರೀದಿಸಿ ಅವುಗಳನ್ನು ನಿಮ್ಮ ಗ್ರೀಟಿಂಗ್ಸ್ ಕಾರ್ಡ್‌ಗಳು ಹಾಗೂ ಉಡುಗೊರೆ ಪಾರ್ಸೆಲುಗಳಲ್ಲಿ ಅಂಟಿಸುವುದು.

ಮುದ್ರೆಗಳು ದೊರೆಯುವ ಸ್ಥಳಗಳು— ಪ. ಶ. ಜಿಲ್ಲಾ ಟಿ ಬಿ ಎಸೋಸಿಯೇಶನ್, ಮಂಗಳೂರು. 2. ಮೈಸೂರು ರಾಜ್ಯ ಟಿ ಬಿ ಎಸೋಸಿಯೇಶನ್ ಕಾರ್ಮಿಕರ ಸಂಘ ಹೊಸ್ಟೆಲ್ ಬಿಲ್ಡಿಂಗ್, ಬೆಂಗಳೂರು-9 ಮತ್ತು ಇತರ ಬೇರೆ ಬೇರೆ ಏಜನ್ಸಿಗಳು.

17ನೆ ಟಿಬಿ ಮೊಹರು ಮಾರಾಟ ಚಳವಳಿ

(ಭಾರತದ ಕ್ಷಯರೋಗ ನಿರೋಧಕ ಸಂಘ, ನವದಹಲಿ, ಇವರಿಂದ ಸಂಘಟಿತ)

ಈ ಸ್ಥಳದ ಉದಾರ ದಾತೃಗಳು:

Indian Aluminium Co. Ltd., Calcutta.

ಶೂರರು ಮಾತ್ರ ಅದೃಷ್ಟಶಾಲಿಗಳು

(ಐದನೇ ಪುಟದಿಂದ)

ಯಾನಿಕ ಗೊಬ್ಬರಗಳ ಬಳಕೆಗೆ ಪ್ರೋತ್ಸಾಹಿಸಿದರು. ಸಾಲದ ನೆರವಿಲ್ಲದೆ ಹಳ್ಳಿಗರಿಗೆ ರಾಸಾಯನಿಕ ಗೊಬ್ಬರವನ್ನು ಕೊಡಲಾಗುತ್ತಿತ್ತು.

ಶೂರರನ್ನು ಅದೃಷ್ಟವು ಬೆಂಬಲಿಸುತ್ತದೆ. ಅದರಂತೆ ಅದೃಷ್ಟವು ಕನಸು ಕಾಣುವವರನ್ನು ದುರ್ಬೀನಿನ ಬೆನ್ನು ಹತ್ತುತ್ತಿದೆ. ಮುಂದೆ ಕೆಲಕಾಲದಲ್ಲಿ ಹೊಲದಲ್ಲಿಯು ಭತ್ತದ ವೈರಿಗೆ ಕ್ರಿಮಿಕೀಟಗಳ ಹಾವಳಿ ಹಬ್ಬಿತು. ಈ ಸವಾಲನ್ನೂ ಎದುರಿಸಲೇಕು. ತಂಡುವಾ ರೈತರು ಕೊನೆಯಯುದ್ಧವನ್ನು ಕೈಗೊಳ್ಳಲು ಸಜ್ಜಾದರು, ಅತ್ಯಾಧುನಿಕ ಕ್ರಿಮಿನಾಶಕ ದ್ರವ್ಯ ಮತ್ತು ಸಿಂಜನ ಉಪಕರಣಗಳ ಉಪಯೋಗವನ್ನು ಸ್ವಾಗತಿಸಿದರು. ಸರಕಾರದಿಂದ ಇವು ಉಚಿತವಾಗಿ ಪೂರೈಸಲ್ಪಟ್ಟವು, ಇವುಗಳನ್ನು ವಿಸ್ತೃತ ಪ್ರಮಾಣದಲ್ಲಿ ಪ್ರಯೋಗಿಸಲಾಯಿತು. ಭತ್ತದ ಪೈರು ಪುಷ್ಟವಾಗಿ ತಲೆ ಎತ್ತಿತ್ತು!

ಭತ್ತದ ಸುಗ್ಗಿ ನಡೆಯಿತು. ಪ್ರತಿ ಎಕರೆಗೆ ಸರಾಸರಿ ೨೪ ಮಣ ಭತ್ತ ದೊರಕಿತ್ತು. ಫಸಲು ಅಪ್ಪೇನು ಹೆಚ್ಚಿನದಲ್ಲ ಎಂದು ಹಳ್ಳಿಗರೇ ಹೇಳಿದರು. ಆದರೆ ಇದು ತುಲನಾತ್ಮಕ ದೃಷ್ಟಿಯಿಂದ ಗಣನೀಯ ಹೆಚ್ಚಳವೇ ಎಂದು ಒಪ್ಪಿದರು.

ಹಳ್ಳಿಯು ಹಿಂದಿನ ಪರಿಸ್ಥಿತಿಯು ಇವಲೋಕನ ಮಾಡುತ್ತಾ ಕೆಂಡುವಾ ಗ್ರಾಮಸ್ಥರು ತಮ್ಮ ಹಳ್ಳಿಯ ಕಥೆಯಲ್ಲಯೇ ಅನೇಕ 'ಮೊದಲು' ಸಂಗತಿಗಳು ನಡೆದವೆಂದು ಹೇಳುತ್ತಾರೆ. ಮೊದಲ ಬಾರಿಗೆ ಬೋರ್ ಜಾತಿಯ ಭತ್ತದ ಬೀಜವನ್ನು ಇಲ್ಲಿ ಬಿತ್ತಲಾಯಿತು. ಮೊದಲ ಬಾರಿಗೆ ಸಂಕಾರದ ಅಧಿಕಾರಿಗಳೂ ಮತ್ತು ಗ್ರಾಮ ಸಂಚಾಯತಿಯವರೂ ಕೂಡಿ ಇಲ್ಲಿ ಕೆಲಸ ಮಾಡಲು ಉಪಕ್ರಮಿಸಿದರು. ಮೊದಲು ಬಾರಿ ದಾನೋದ್ಧರ ಶಾಲೆಯ ಯೋಜನೆಯಿಂದ ನೀರು ದೊರಕಿಸಲು ಸಾಧ್ಯವಾಯಿತು. ಮೊದಲು ಬಾರಿಗೆ ತಂಡುವಾ ಹಳ್ಳಿಗರು ತಮ್ಮ ಜೀವನದಲ್ಲಿ ಬಟ್ಟ ಅತ್ಯಾವಿಶ್ವಾಸದಿಂದ ಕಾರ್ಯೋನ್ಮುಖರಾದರು. ಭವಿಷ್ಯ ಆಶಾದಾಯಕವಾಗಿದೆ.

ಮುಂದಿನ ವರ್ಷ ಇವರು ೩,೦೦೦ ಎಕರೆ ಭೂಮಿಯಲ್ಲಿ, ಅಂದರೆ ಸದ್ಯದ ವರುಷದ ಎರಡರಷ್ಟು ಪ್ರದೇಶದಲ್ಲಿ ಉತ್ತಮ ಭತ್ತದ ತಳಿಯ ಬೀಜವನ್ನು ಉಪಯೋಗಿಸುವರು.

ಗ್ರಾಮದ ಆರ್ಥಿಕ ವ್ಯವಸ್ಥೆಯಲ್ಲಿ ಚಿಕ್ಕ ಪರಿವರ್ತನೆಯೂ ಎಂತಹ ಮಹತ್ವದ ವಿಷಯವು! ಕಂಡುವನದ ಕೆಲ ನೂರಿರ ಎಂಬಗಳ ಒಕ್ಕಲಿಗರ ಕೂಡುಗ ನಿಜವಾಗಿಯೂ ಮಹತ್ವದ ಸಂಗತಿಯೇ!

ಯಕ್ಷಪ್ರಶ್ನೆ ಭವಿಷ್ಯ

1) ಗಂಡಿಂದ ಪ್ರಶ್ನೆ ಕೇಳಿದರೆ ತಾಯಿಗೆ.— ಪ್ರಶ್ನೆಗಳಿಗೆ ಕೇಳಿದರೆ ಶಿವನಿಗೆ.

2) ಇಸವಿನ ಅಂಕಿಯ ಸ್ವಂತ ಅನುಭವದ ಖಾತ್ರಿ ಮೂಲಾಮೃತ ೧ ಡಬ್ಬಿಗೆ ೬ ರೂ.— ಬೇಕಾದವರು ಪ್ಲಿ. ವಿ. ಮಾಂಜ ತರಿಸಿಕೊಳ್ಳಿರಿ.

ಪಂಡಿತ ಎ. ಗುರುಪ್ರಶ್ನಯ್ಯ ಶಾಸ್ತ್ರಿ
ಮು.ಪೋ.— ಬೈಲೂರು ತಾ. ಬೈಲಹೊಂಗಲ, ಜಿ. ಬೆಳಗಾಂವ.

ಸಮಸ್ಯಾ ಪರಿಹಾರಕ್ಕೆ

ಹಳ್ಳಿ ಟೆಲಿಫೋನೂ ಕಾಮಧೇನು

ಭಾರತದ ಕೆಲವು ಕಾಸ್ಮೋಪೋಲಿಟನ್ ನಗರಗಳಲ್ಲಿ ನಿರ್ದಿಷ್ಟ ನಂಬರಿಗೆ ಫೋನ್ ಮಾಡಿದೊಡನೆಯೇ ಸಂಬಂಧಿಸಿದ ನಗರಗಳಲ್ಲಿನ ಆಂದಿನ ಮನರಂಜನಾ ಪಟ್ಟಿಯನ್ನು ಒದಗಿಸಲಾಗುತ್ತದೆ. ಆದರೆ ಪಶ್ಚಿಮ ಜರ್ಮನಿಯಲ್ಲಿ ಟೆಲಿಫೋನ್ ಒಂದು ಕಾಮಧೇನುವಾಗಿ ಪರಿಣಮಿಸತೊಡಗಿದೆ. ನಿರ್ದಿಷ್ಟ ನಂಬರಿಗೆ ಫೋನ್ ಮಾಡಿದೊಡನೆಯೇ ಈ ಲೋಕದಿಂದ ಮೊದಲ್ಗೊಂಡು ಪರಲೋಕದ ನಿಮ್ಮ ಸಮಸ್ಯೆಗಳಿಗೆಲ್ಲಾ ಉತ್ತರಿಸಿಗುತ್ತದೆ.

ಪಶ್ಚಿಮ ಜರ್ಮನಿಯಲ್ಲಿ ಈಗ ಸುಮಾರು ಒಂದು ಲಕ್ಷ ಮಂದಿ ಜರ್ಮನ್ನರು ಟೆಲಿಫೋನ್ ಮೂಲಕ ಸಲಹೆ ಮತ್ತು ಸಾಂತ್ವನ ಪಡೆಯುತ್ತಿದ್ದಾರೆ. ಯಾರ ಮುಂದೂ ಮುಖತಃ ಕಾಣಿಸಿಕೊಳ್ಳಲು ಇಚ್ಛಿಸದ, ಆದರೆ ಬಂದೊದಗಿದ ಕಷ್ಟವನ್ನು ಎದುರಿಸಲು ನಿರ್ಧಾರಿಸಲು ಶಕ್ತರಿಲ್ಲದ ಅನಾಮಿಕರಿಗಾಗಿ ತಲೆಯೆತ್ತಿರುವ ಅರಂಭ್ಯಾತ "ಟೆಲಿಫೋನ್ ಎ.ನಿಶ್ಚರ್ಸ್"ಗಳ ಈ ಸೇವೆಯನ್ನು ಉಚಿತವಾಗಿ ನೆರವೇರಿಸುತ್ತಿದ್ದಾರೆ. ಇದನೇನೋ ಮಹತ್ವದ ಮಿಷನರಿ ಕಲಸವೆಂದು ಅವರು ಭಾವಿಸಿಲ್ಲ. "ನೆರೆಯವನಿಗೆ ನೆರವಾಗು" ಎಂಬ ತಮ್ಮ ಕ್ರೈಷ್ಟಿಯನ್ ಮತದ ಸಂಕ ನಡಿಯಂತೆ ಅವರು ನಡೆದುಕೊಳ್ಳುತ್ತಿದ್ದಾರೆ. ಆಷ್ಟೆ.

ವ್ಯಕ್ತಿಯ ಸಮಸ್ಯೆಗಳು ಒಂದು ಸಮುದ್ರವಿದ್ದಂತೆ ಆದರೂ ಗಾಬರಿಯಲ್ಲದೆ ಪಶ್ಚಿಮ ಬರ್ಲಿನ್‌ನಲ್ಲಿ ಮೊದಲ 'ಟೆಲಿಫೋನ್ ನೆರವು ಕೇಂದ್ರ' ಸ್ಥಾಪನೆಗೊಂಡ ನಂತರದ ಹನ್ನೆರಡು ವರ್ಷಗಳ ಅನುಭವದಿಂದ ತಿಳಿದಿದ್ದಾಗ್ಗೆ ವ್ಯಕ್ತಿಯ ತಲೆ ತಿನ್ನುವ ಕೆಲಸಗಳು ಯಾವುವಂದ. ಅಭಿಪ್ರಾಯಕ್ಕೆ ಬಂದಿವೆ. ಸಮಸ್ಯೆಗೂ ವಯಸ್ಸಿಗೂ ಒಂದು ವಿಧದ ನಂಟಿಯವುದು ಇಲ್ಲಿ ಸ್ಪಾವಸ್ಯ. ವಾಸ್ತವಿಕತೆಯು ಬಣ್ಣವನ್ನು ಕಳೆದು ಕೊಂಡ ಪ್ರಶ್ನೆಗಳು ಇಂಬು ಕಡಿಮೆಯಾಗುತ್ತಿದ್ದು ಸುಜ್ಜು ಪ್ರಶ್ನೆಗಳು ಕಣ್ಣಿಗೆ ಕಾಣದ ಮನಶಾಸ್ತ್ರಕ್ಕೆ ಸಂಬಂಧಿಸಿದ್ದಾಗುತ್ತಿವೆ. ಸಕಲ ಸಂಪತ್ತಿನೊಡನೆ ಜನಸಮೂಹದ ನಡುವೆ ಏಕಾಂಗಿಯಾಗಿರುವ ವ್ಯಕ್ತಿ, ಸಹ ಹೆಚ್ಚಾಗಿ ಒಂದು ತಲೆ ತಿನ್ನುವ ಸಮಸ್ಯೆ. ಅದೆಂದರೆ ದಾಂಪತ್ಯ ಜೀವನ ಸಂಬಂಧದ್ದು! ೫೫ ಮತ್ತು ೭೦ ವರ್ಷಗಳ ಹಿಂದೆ ನುದುವೆಯಾದ ಇವರಿಗೆಲ್ಲಾ ಈಗ ದಾಂಪತ್ಯ ವಿರಸದ ಗೋಳು. ಚಿಕ್ಕ ವಯಸ್ಸಿನಲ್ಲಿ ಆಥವಾ ಅವರವರದಲ್ಲಿ ವಿವಾಹವಾಗಿ ಈಗ ಹಣೆ ಬರಹವನ್ನು ಹಳಿಯುತ್ತಿರುವ ಈ ಗುಂಪಿನವರೇ ಟೆಲಿಫೋನ್‌ನಲ್ಲಿ ನೆರವು ಕೇಳುವವರಲ್ಲಿ ಅಧಿಕ.

ಅನಂತರ ಬರುವವರು ಸುತ್ತಮುತ್ತಲಿನ ವಾತಾವರಣಕ್ಕೆ ಬಲಿಯಾದವರು. ಜಗಳಗಂಟಿ ನರಿಯೊಕ್ಕೆ, ಕಛೇರಿಯಲ್ಲಿನ ಪಿಕಾರಿ, ಇನ್ನೇ ಮುಂತಾದುವು ಇವರ ಸಮಸ್ಯೆಗಳು. ಭೌತಿಕ ಸಾಮಗ್ರಿಗಳ ಆಥವಾ ಸಾಮಾಜಿಕ ಸಮಸ್ಯೆಗಳಿಗಾಗಿ ಆಶಿಸಿ ಚಿಂತಿಸುವವರು ಶೇಕಡಾ ಹತ್ತು ಮಾತ್ರ. ಶೈಕಣಿಕ ಆಥವಾ ಕುಟುಂಬವನ್ನು ನೋಡಿಕೊಳ್ಳುವ ಸಂಬಂಧವಲ್ಲ ಮಗ್ಗರಿಸುತ್ತಿರುವವರ ಸಂಖ್ಯೆ ಸಹಜಸ್ಥಿತಿ. ಇನ್ನಾಸ್ಥೆ ಶೇಕಡಾ ಎಂಟು. ಮಂದಿಗೆ ತಿನ್ನಿಸ್ಥಿತ ಆಥವಾ ಮುಖ್ಯವಾಗಿ ವಿದಿಂಕ್ಕೆಯ ರೋಗ. "ಜೀವನದ ಉದ್ದೇಶವೇನು?" ಇದು ಅವರ ಬಗಹಂಯಿದ ಪ್ರಶ್ನೆ. ಅತ್ಮಹತ್ಯ ಮಾಡಿಕೊಳ್ಳುವವರಿಂದ ಕಲಹಗಂಗಿ ಫೋನ್ ಕರೆ ಬಂಯುವುದು ಅಂಥ ಇಟ್ಟೆಯೆದ್ದೇನಲ್ಲ. ಉದಾಹರಣೆಗ ಹ್ಯಾಂಬರ್ಗ್‌ನಿಂಥ ಬಂದರು ನಗರದಲ್ಲಿ ವಾಂಪೊಂದಕ್ಕೆ ತಿಳಿ ಫೋನ್ ಕರೆಗಳು ಬರುವುದಾದರೆ ಅಲ್ಲಿ ನೈರಕ್ಷಿ ಆಥವಾ ಳಿಯಂದಿ ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುವವರಿರುತ್ತಾರೆ.

ಫೋನ್ ಮುಖಾಂತರ ನೀವು ಕೇಳುವ ಮೊದಲ ಪ್ರಶ್ನೆ ಸಾಂಧ್ಯಾಣಿ ೬೦ ವರ್ಷ ವಯಸ್ಸಿನಲ್ಲಿ ನಡುವಿನವರೇ ಹೆಚ್ಚು. ಶೇಕಡಾ ೫೫ ಮಂದಿ ಮಾತ್ರ ಯುವಕರಿರುತ್ತಾರೆ. ಶೇಕಡಾ ೪೦ ಮಂದಿ ಮಧ್ಯವಯಸ್ಕರಿದ್ದಾರೆ. ಈ ನೊಂದ ಮನಸ್ಸಿನ ವ್ಯಕ್ತಿಗಳು ಏನನ್ನು ಹೇಳುತ್ತಾರೆಂಬುದನ್ನು ತಿಳಿಯುವುದಕ್ಕಿಂತ ಒಂದು ಗಂಟೆ ಕೇಳುವುದೇ ಇಲ್ಲ ಮುಖ್ಯ ಕೆಲಸ. ಒಂದೊಂದು ಸಲ ಟೆಲಿಫೋನ್ ಮುಖಾಂತರ ಪ್ರಥಮ ಪರಿಚಯವಾದ ವ್ಯಕ್ತಿ ಕರೆ ನೀಡಿ ನೈತ್ಯಕ್ಕೆ ಅನಾಮಿಕತೆಯನ್ನು ಮುರಿಯಲು ಇಚ್ಛಿಸುವುದಾದರೆ ಆತನ್ನು ಟೆಲಿಫೋನ್ ಸಿಬ್ಬಂದಿಯವರು ಭೇಟಿಯಾಗಿ ಸಂಪರ್ಕ ಬೆಳೆಸುವರು. ಈ ಸಮಾಲೋಚಕ ತಂಡದಲ್ಲಿ ವೈದ್ಯರು, ವಕೀಲರು, ನ್ಯಾಯಾಧೀಶರು, ಮತ್ತು ಶಿಕ್ಷಣ ಪಜ್ಞರು, ಮನಶಾಸ್ತ್ರಜ್ಞರು ಮತ್ತು ಸಮಾಜ ಕಾರ್ಯಕರ್ತರು ಎಲ್ಲರೂ ಉತ್ಸಾಹತವಾಗಿ ಸೇವೆ ಸಲ್ಲಿಸುವವರೇ.

೧೩೦ ಲಕ್ಷ ಜನಸಂಖ್ಯೆಯ ಜರ್ಮನಿಯು ೧೭ ನಗರಗಳಲ್ಲಿ ಒಟ್ಟು ೩೪ ಟೆಲಿಫೋನ್ ನೆರವು ಕೇಂದ್ರಗಳು ಅಸ್ತಿತ್ವದಲ್ಲಿವೆ. ಅ ಪೈಕಿ ೨೨ಕ್ಕೆ ಅರ್ಥಿಕ ಬೆಂಬಲ ವಿದೆ. ಜರ್ಮನಿಯು ಎರಡು ಜರ್ಮನಿಗಳು ಇವುಗಳಿಗೆ ಆರ್ಥಿಕ ನೆರವನ್ನೀಯುತ್ತಿವೆ.

ಮಂಡಳಿಯ ವಾರ್ಷಿಕೋತ್ಸವ

ಮೊಗವೀರ ವ್ಯವಸ್ಥಾಪಕ ಸಮಿತಿ, ಮಂಬಯಿ, ಇವರ ೮೭ನೇ ವಾರ್ಷಿಕೋತ್ಸವವು, ಮೊಗವೀರ ರಾತ್ರಿ ಹೈಸ್ಕೂಲಿನ ಪಾರಿತೋಷಕ ವಿತರಣ ಸಮಾರಂಭವೂ, ೧೨—12—೬೬ ರಂದು ಸರ್ ಕಾವಾಸ್ಜಿ ಜಹಂಗೀರ್ ಸಾಸ, ಜನಕ ಮಂದಿರದಲ್ಲಿ ಸುಪ್ರೀಮ್ ಕೋರ್ಟ್ ವಕೀಲರಾದ ಶ್ರೀ ಜಿ. ಎನ್. ವೈದ್ಯರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀಮತಿ ರಂಭಾಬಾಯಿ ಜಿ. ವೈದ್ಯರು ಒಡಿಸ್ಸಾ ನೃತ್ಯ ಪ್ರದರ್ಶನ ಮಾಡಿದರು.

ಮಂಡಳಿಯ ಅಧ್ಯಕ್ಷ ಶ್ರೀ ಎಚ್. ಬಿ. ಪುತ್ರನವರು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಶಾಂತಾರಾಮರು ಶುಭ ಸಂದೇಶ ವಾಚನವನ್ನೂ, ಜೊತೆ ಕೋಶಾಧಿಕಾರಿ ಶ್ರೀ ಎಂ. ಕೆ. ಕೋಟ್ಯಾನರು ಧನ ಸಹಾಯವಿತ್ತವರ ಹಾಗೂ ಹೊಸತಾಗಿ ಸದಸ್ಯತ್ವ ಪಡೆಯುವವರ ಹೆಸರುಗಳನ್ನೂ ಓದಿ ಹೇಳಿದರು.

ಸಭೆಯಲ್ಲಿ ಶ್ರೀಗಳಾದ ಮೈಸೂರು ವಿಧಾನ ಸಭಾಸದಸ್ಯ ಯುವ ಸುಧ್ಯೋದ್ಯಮಿ ಕೆ. ಎನ್. ಧಾರಿಯಾ, ಬಿ. ಕೆ. ಬೋಳಾರ ಬೆಸೆಂಟ್ ಥಿಯೊಸಾಫಿಕಲ್ ಕಾಲೇಜಿನ ಪ್ರೊ. ಬಿ.ಎಂ. ಕೋಡಿಕಲ್, ಟಿ.ಕೆ.ಆರ್ ಪ್ಲಾಸ್ಟರ್ ಸುತ್ತು ಶಂಕರ ಹೆಜಮಾಡಿ, ಇವರು ಮಂಡಳಿಯು ಕಳೆದ ೮೩ ವರ್ಷಗಳಲ್ಲಿ ಮಾಡಿರುವ ಸರ್ವತೋಮುಖ ಅಭಿವೃದ್ಧಿ ಕಾರ್ಯ ಸಮಾಜ ಸೇವಾ ಕಾರ್ಯಗಳನ್ನು ಪ್ರಶಂಸಿಸಿ, ಮಂಡಳಿಯು ಮುಂದೆ ಮಾಡಬೇಕಾಗಿರುವ ಬೃಹತ್ ಕಾರ್ಯಗಳ ಬಗ್ಗೆ ತಮ್ಮ ಸೂಕ್ತ ಸಲಹೆಗಳನ್ನಿತ್ತು ಮಂಡಳಿಗೆ ಅಭಿವೃದ್ಧಿಯನ್ನು ಹಾರೈಸಿದರು.

ಅಧ್ಯಕ್ಷರು ತನ್ನ ಭಾಷಣದಲ್ಲಿ ಮಂಡಳಿಯ ಕಾರ್ಯಕರ್ತರ ಉತ್ಸಾಹವನ್ನೂ, ಮಂಡಳಿಯು ತನ್ನ ಧ್ಯೇಯ ಸಾಧನೆಯು ದಿಶೆಯಲ್ಲಿ ಮಾಡಿರುವ ತ್ಯಾಗಮಯ ಸೇವೆಯನ್ನೂ ಕೊಂಡಾಡುತ್ತಾ, ಸಾಮಾಜಿಕ ಶೈಕ್ಷಣಿಕ ಹಾಗೂ ಇನ್ನಿತರ ಕಾರ್ಯರಂಗದಲ್ಲಿ ಮಂಡಳಿಯು ಮುಂದೆಯೂ ಎಸಾಧಿಸಬೇಕಾದ ಸೇವೆಯನ್ನು ಮಾಡುವರೆ ಸಾಕಷ್ಟು ಪ್ರೋತ್ಸಾಹವನ್ನು ಕನ್ನಡಿಗರಿಂದಲೂ ಮಂಡಳಿಗಿಂತ ಜೀರಂದು ವಿನಂತಿಸಿಕೊಂಡರೊಂದಿಗೆ ಮಂಡಳಿಯ ಕಾರ್ಯದಲ್ಲಿ ತನ್ನ ಸಂಪೂರ್ಣ ಸಹಕಾರ ನೀಡುವರೆ ಸದಾ ಸಿದ್ಧರಿರುವೆನೆಂದು ತಿಳಿಸಿದರು.

ಶ್ರೀ ಜಿ. ಕೆ. ಕರ್ಕೇರರಿಂದ ಧನಸಹಾಯ ಪಡೆದ ಬಳಿಕ ಶ್ರೀ ಸುಧಾರ್ಮ ಡಿ. ಪುತ್ರನ ರಿಂದ ಶಾರೀರಿಕ ಪ್ರದರ್ಶನವು, ಭಂಡಾರಿ ಮ್ಯೂಸಿಕ್ ಸರ್ಕಲಿನವರಿಂದ ಸಂಗೀತದ ಕಾರ್ಯಕ್ರಮವಾಗಿ, ರಾತ್ರಿ ೧೨ ಗಂಟೆಯಷ್ಟಿಂದಿಗೆ ಆರಂದಿನ ಸಮಾರಂಭವು ಕೊನೆಗೊಂಡಿತು.

ಸುವ್ಯವಸ್ಥಿತ ನುತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 3% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಶ

ಕೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

'ಪಂಕ್ಚರ್'

(ಒಂಭತ್ತನೇ ಪುಟದಿಂದ)

ನುಂದಿನ ಚಕ್ರ ಪಂಕ್ಚರ್' ಆಗಿತ್ತು. ಮಧ್ಯರಾತ್ರಿ ಸಮಯ, ಒಬ್ಬರನ್ನೊಬ್ಬರು ನೋಡುತ್ತಾ ಮೌನವಾಗಿ ತಲೆಗೆ ಕೈ ಇಟ್ಟು ಒಂದೆರಡು ನಿಮಿಷ ಅಲ್ಲೇ ಕುಳಿತೆವು. ಬದಿಗೆ ನೋಡಿದಾಗ ನದಿಯೊಂದು ಹಗಲು ರಾತ್ರಿಗಳನ್ನು ಲೆಕ್ಕಿಸದೆ ಹಸನಾಗಿ ಹರಿಯುತ್ತಿದ್ದದು ಕಂಡು ಬಂತು. ನದಿಯ ಜನ್ಮನೇ ಶ್ರೇಷ್ಠವೆಂದು ಕಂಡು ಬಂತು. ನನಗೆ. ಇನ್ನೊಂದು ಬದಿಗೆ ದೃಷ್ಟಿ ಹಾಯಿಸಿದೆವು. ದಟ್ಟಗಾದ ಗಿಡಮರಗಳು ಗಾಳಿಯೊಡನೆ ತೆಲಾಡುತ್ತಿದ್ದವು. ನಾವು ಗಿಡಮರಗಳಾಗಿ ಹುಟ್ಟಿ ಬೇಕಿತ್ತೆಂದು ಎಣಿಸಿಕೊಂಡೆವು.

ಸರಿ ಮುಂದೆ ಎಲ್ಲಿಯೂದರು ಮನೆ ಬಗಲಿಗಳು ಕಾಣಿಸಿಗಬಹುದೆಂದು ಮೋಟಾರ್ ಸ್ಕೈಕಲ್ ದೂಡಿಕೊಂಡು ಹೊರಟೆವು ಒಂದು ಚಿಕ್ಕ ಪೂರ್ಣ ಖಾಲಿಯೂ ಗುರುವುದರಿಂದ ಆದು ರಸ್ತೆಯಲ್ಲಿ ನೇರವಾಗಿ ಹೋಗಲು ಕೇಳುತ್ತಿರಲಿಲ್ಲ. ನವ್ಮನ್ನು ಇಷ್ಟು ದೂರ ಹೊತ್ತು ತಂದದ್ದಕ್ಕೆ ಅದರ ಸೇವೆಯನ್ನು ಮಾಡಬೇಕಾಯಿತು. ಸ್ವಲ್ಪ ದೂರದಲ್ಲಿ ಮನೆಗಳ ಸಾಲು ಕಾಣುತ್ತಿತ್ತು. ರಾತ್ರಿಯಲ್ಲಿ ಯಾವುದೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಒಂದು ಮನೆಯ ಜಗಲಿ ಖಾಲಿಯಾಗಿ ಕಂಡು ಬಂತು. ಮೆಲ್ಲನೆ ಸ್ಕೈಕಲ್ ಬದಿಗಿಟ್ಟ ನಾವು 'ಕೋಳಿ ನಿದ್ದೆ' ಮಾಡುವ ಆಂದಾಜು ಮಾಡಿದೆವು. ಎಲ್ಲಿ ಮನೆಯವರು ಎದ್ದು ನೋಸ್ಲೆ ಕಡಿಯುತ್ತಾರೋ ಎಂಬ ಹೆದರಿಕೆ ಸೇರಿ ಹೋಗಿತ್ತು. ಪರಿಸ್ಥಿತಿ ಧೈರ್ಯ ತೊಪ್ಪಿಸ್ತು. ಕಾಲಿನ ಬೂಟನ್ನು ತೆಗೆದು ತಲೆದಿಂಬಾಗಿ ಮಾಡಿದವು. ಅಷ್ಟರಲ್ಲಿ ಮನೆ ಹಿಂದಿನಿಂದ ನಾಯಿ ಒಮ್ಮೆಲೇ ಘೆರ್ಜಿಸಲು ತೊಡಗಿತು. ನನ್ನ ಎದೆ 'ಧಡಕ್' ಎಂದಿತು. ನನ್ನ ಸ್ನೇಹಿತರಿಗೆ ಇಂತಹ ಅನುಭವ ತುಂಬಾ ಇದ್ದುದರಿಂದ ಧೈರ್ಯ ತಂದು ಕೊಂಡರು. ಹೇಗಂದರೂ ಸರಿ ಬೆಳಿಗ್ಗೆ ಬೇಗ ಎದ್ದಾ ಮನೆಯ ಯಜಮಾನರ ಕಾಲು ಹಿಡಿಯುವುದೇ ಮಾಸಿಯೆಂದೂ ಯೋಚಿಸಿ ಮಲಗಿದೆವು. ಆದರೆ ನಿದ್ದೆ ಎಲ್ಲಿ ಬರುತ್ತದೆ? ಹಳೆ ಬೆಳೆದಲ್ಲಿ ಜವರೆಗಿನ ಜೀವನ ಚರಿತ್ರೆ ನೆನಪಿಗೆ ಬಂತು. ಸಂಕಟ ಬಂದಾಗ ವೆಂಕಟರಮಣ ಎಂದ ಹಾಗೆ ಅಂದು ನಾವು ಇದ್ದ ಭೂತದೇವರುಗಳನ್ನೆಲ್ಲಾ ಸ್ಮರಿಸಿದವು. ಲಾಂಗಲ ಓಡಾಟ ನಾಗುತ್ತಿಲೇ ಇತ್ತು. ಬೆಳಿಗ್ಗೆ ಬೇಗ ಎಚ್ಚರವಾಯಿತು. ಆಗ ನಾವು ಮಲಗಿದ ಜಾಲಿಯ ಬದಿಯಲ್ಲಿ 'ಗ್ರಾಮಪಂಚಾಯತ್' ಎಂದು ಬರೆದ ಬೋರ್ಡ್ ಕಂಡು ಬಂತು. ಅದನ್ನು ನೋಡಿ ನವ್ಮಗಾದ ಆನಂದಕ್ಕೆ ಪಾರವೇ ಇರಲಿಲ್ಲ.

ಎದ್ದವರು ನದಿಗೆ ಹೋಗಿ ಮುಖ ತೊಳೆದ ಕೊಂಡು ಬಂದೆವು. ಸ್ಕೈಕಲನ್ನು ಅಲ್ಲೇ ಬಿಟ್ಟು ಲಾಂಯಲ್ಲ ಬೆಳ್ಳಂಗಡಿ ಕಡೆ ಹೊಂಟೆವು. ನಮ್ಮನ್ನಿನ್ನಿಬ್ಬರು ಸ್ನೇಹಿತರು ರಾತ್ರಿ ಇಡೀ ಎಲ್ಲೇ ಕಾದು ಗ್ರಾಮೀಜಿನಲ್ಲೇ ನಿದ್ದೆ ಹೋಗಿ ನವ್ಮನ್ನು ಹುಡುಕುತ್ತಾ ಬಯತ್ತಿದ್ದರು. ನಡುವೆ ನಡೆದ ಕಷ್ಟಗಳನ್ನೆಲ್ಲಾ ತಿಳಿಸಿದೆವು. ಆ ನ್ಯಾಯಕ್ಕನ್ನು ಲಾಂಯಲ್ಲಿ ಹಾಕಿ ಮಂಗಳೂರಿಗೆ ತ

ನಿರ್ದಾಕ್ಷಿಣ್ಯ ಮುಂದಾಳು ಬೇಕು

(ಒನ್ನೊಂದನೇ ಪುಟದಿಂದ)

ಯೂಗಿ, ಕಾಮ ಪ್ರಜೋದಕ ಪ್ರಚಾರ ಯಂತ್ರಗಳಾಗುತ್ತಿದ್ದಾರೆ.

ದಿಲ್ಲಿಯಿಂದ ಹಳ್ಳಿಗೆ ಈ ವಿಷಪ್ರಜಾಹ ನಿಧಾನವಾಗಿ ಹರಿದು ಬರುತ್ತದೆ. ದಿಲ್ಲಿಯಿಂದ ಬಂದದ್ದು ಅವೃತವೆಂದು ಬಗೆದು ಹಳ್ಳಿಯ ಜನ ವಿಷವನ್ನೇ ಹೀರುತ್ತಾರೆ.

ಹೆಣ್ಣಿನ ಲಜ್ಜೆಗೆಟ್ಟ ವರ್ತನೆಗೆ ಮರುಳಿಗಿ ಗುಂಡು ತನ್ನ ಗಾಂಭೀರ್ಯ, ಧೀರತನ, ಪ್ರಾಮಾಣಿಕತೆ, ಮತ್ತು ಧೀಶಕ್ತಿಯನ್ನು ಕಳೆದ ಕೊಳ್ಳುತ್ತಿಲ್ಲವೆ. ಪ್ರವಾಣಿಕರಲ್ಲದ ಜನತೆಯಿಂದ ದೇಶಭಕ್ತಿಯನ್ನು ನಿರೀಕ್ಷಿಸುವುದು ವ್ಯರ್ಥವಲ್ಲವೆ?

ಲಾಲಸೆಗೆ ಬಲಿಯಾದ ರಾವಣ ತನ್ನ ಸರ್ವನಾಶವನ್ನೇ ಮಾಡಿಕೊಂಡಂತೆ, ಭಾರತೀಯ ಜನತೆ ದಿನದಿಂದ ದಿನಕ್ಕೆ ಕ್ಷೀಣಿಕೃಷಿಯ ಬೆನ್ನು ಹತ್ತಿ, ಸ್ವಾರ್ಥಲಾಲಸೆಯನ್ನು ಬೆಳೆಸಿ ಪಾಶವಶಕ್ತಿ ಮನ್ನಣ್ಗುಸ್ತಿದೆ. ರಾಷ್ಟ್ರವಿಂದು ಅಪಾಯದ ಹಂಚಿಕ್ಕೆ ತಲುಪಿದೆ.

ದೇಶದ ಒಳಗೆ ಅನವರತ ಗಲಭೆ, ಅಶಾಂತಿ, ಬಡ ನ, ನಿರ್ದಾರ್ಥಿಗಳು ತಾಂಡವವಾಡುತ್ತಿದ್ದರೆ, ಹೊರಗಿನಿಂದ ಅವಾಯಕಾರಿ, ಬಲಿಷ್ಟ ರಾಷ್ಟ್ರಗಳು ಸಾಮ್ರಾಜ್ಯದಾಹದಿಂದ ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಅಪಾಯತರವ ಸಿದ್ಧತೆಯಲ್ಲಿವೆ.

ರಾಷ್ಟ್ರಭಕ್ತಿ ಹೆಚ್ಚಿದಂತೆ ರಾಷ್ಟ್ರಶಕ್ತಿ ಹೆಚ್ಚುತ್ತದೆ. ನಿಬಾಲ, ಸರಕಾರವಂದಿಗೂ ರಾಷ್ಟ್ರ ಶಕ್ತಿಯನ್ನು ಹೆಚ್ಚಿಸಲಾರದು. ನಿಸ್ವಾರ್ಥ, ನಿರ್ದಾಕ್ಷಿಣ್ಯ, ನ್ಯಾಯನಿಷ್ಠುರ ವ್ಯಕ್ತಿಗಳಿಂದ ಮಾತ್ರ ಸಬಲ ರಾಷ್ಟ್ರವನ್ನು ಕಟ್ಟುವುದು ಸಾಧ್ಯ. ಬಲಹೀನ, ಲಂಚಕೋರ ಗುಂಪಿನ ಸ್ವಜನಪ್ರಭುತ್ವಕ್ಕಿಂತ, ನಿರ್ದಾಕ್ಷಿಣ್ಯ ನಿಸ್ವಾರ್ಥಿಯಾ ಬ್ಬನ ಸರ್ವಾಧಿಕಾರೀ ಸರಕಾರ ರಾಷ್ಟ್ರ ಶಕ್ತಿಯನ್ನು ಹೆಚ್ಚಿಸೀತೆಂಬುದಕ್ಕೆ ಸಂದೇಹವಿಲ್ಲ.

ಜಾಣಕ್ಯ ಶಕ್ತಿಯ ಗುಪ್ತ ಸಾಮ್ರಾಜ್ಯ, ಅಲೆಕ್ಸಾಂಡರನ ಗ್ರೀಕ್ ಪ್ರಭುತ್ವ, ನೆಪೋಲಿಯನನ ಫ್ರಾನ್ಸ್, ಶಿವಾಜಿಯ ಮಹಾರಾಷ್ಟ್ರ, ಹಿಟ್ಲರನ ಜರ್ಮನಿ, ಸ್ಟಾಲಿನನ ರಷ್ಯಾ, ಚರ್ಚಿಲನ ಇಂಗ್ಲಂಡ್, ಟಪ್ಪುವಿನ ಮೈಸೂರು, ಮುತ್ತಿತರರ ನಿರ್ದಾಕ್ಷಿಣ್ಯ ಮುಂದಾಳುಗಳು ರಾಷ್ಟ್ರಶಕ್ತಿಯನ್ನು ಹೆಚ್ಚಿಸಿ, ಅಜೇಯರಾಗಿದ್ದಾರೆ. ಅಂತಹಮುತ್ಸದ್ದಿಯೋರ್ವನಿಂದಮೂ ಕಭಾರತವನ್ನು ರಕ್ಷಿಸಲು ಸಾಧ್ಯ ಎಂಬ ಭಾವನೆ ಹಲವರಲ್ಲಿ ಮೂಡಿದೆ. ಇದು ಸತ್ಯವಾಗದಿರಲಿ.

— ಪುನರ್ವಸು ಯೇಶಪ್ಪ,
ಕಾರಗೋಡು.

ಮುದ್ದಣ ಸ್ಮಾರಕ ಸಾಹಿತ್ಯೋತ್ಸವ

ಉಡುಪಿ ತಾ. 17, ಎಂ. ಜಿ. ಎಂ. ಕಾಲೇಜಿನಲ್ಲಿ ಮುದ್ದಣ ಸ್ಮಾರಕ ಸಾಹಿತ್ಯೋತ್ಸವ ಪದ ಅಂಗವಾಗಿ ತಾ 17 ರಂದು ಪೂರ್ವಾಹ್ನ ಕವಿಸಮ್ಮೇಳನವು ಸಂಜೆ ಭಾಷಣ, ನಾಟಕ ವೇ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರಗಿದವು. ಕರ್ನಾಟಕದ ವೀರವೀರ ಭಾಗದ ಅರು ಮಂದಿ ಕವಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸರ್ವಶ್ರೀ ಪಿ. ಕೃಷ್ಣಕುಮಾರ, ನಿಸಾರ್ ಅಹ್ಮದ್, ಚಂದ್ರಶೇಖರ ಕಂಬಾರ, ಅ ಗೌ. ಕಿನ್ನಿಗೋಳಿ, ಬನ್ನಂಜೆ ಗೋವಿಂದಾಚಾರ್ಯ ಮತ್ತು ಗುಂಡ್ಮಿ ಚಂದ್ರಶೇಖರ ಪಾಡಾಳ ಇವರು ತಾವು ರಚಿಸಿದ ಕವನಗಳನ್ನು ಓದಿದರು. ಅಧ್ಯಕ್ಷ ಸ್ಥಾನವನ್ನು ಪ್ರೊ| ಬಿ. ಎಚ್. ಶ್ರೀಧರ ಅವರು ವಹಿಸಿದ್ದರು. ಸಮ್ಮೇಳನದ ಸಮಾರೋಪ ಭಾಷಣ ಮಾಡುತ್ತಾ ಅವರು ಓದಲಾದ ಕವನಗಳ ಗುಣ ವಿಮರ್ಶೆ ಮಾಡಿ ಆಧುನಿಕ ಕನ್ನಡ ಕಾವ್ಯದ ಗತಿಯನ್ನು ನಿರೂಪಿಸಿದರು. ಕೊನೆಗೆ ತಮ್ಮದೇ ಕವನಗಳನ್ನು ಹಾಡಿದರು. ಗಣ್ಯ ಅತಿಥಿಗಳಾಗಿ ಮೈಸೂರು. ವಿಶ್ವವಿದ್ಯಾಲಯದ ಪ್ರೊ| ವೈ ಬಿ. ತೋಟಪ್ಪ ಹಾಗೂ ದೇ. ಜವರೇಗೌಡರು ಉಪಸ್ಥಿತರಿದ್ದರು. ಶ್ರೀ ಎಚ್. ಕೆ. ಶ್ರೀಪತಿ ಆಚಾರ್ಯರು ಅತಿಥಿಗಳನ್ನು ಸ್ವಾಗತಿಸಿದರು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಧನ್ಯವಾದ ಅರ್ಪಿಸಿದರು. ಸಂಜೆ ದೇ. ಜವರೇಗೌಡರು ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪ್ರಾಚೀನತೆಯ ಕುರಿತು ಭಾಷಣ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಶ್ ಕನ್ನಡ ಆಟೋಟಗಳಿಗನ್ನು ಪ್ರಸ್ತಾಪಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಅತಿಥಿಗಳು ಬಹುಮಾನ ವಿತರಣೆ ಮಾಡಿದರು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು, ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಚಂದ್ರಶೇಖರ ಕಂಬಾರರು ಲಾಂಛನವೊಂದನ್ನು ಪಾಡಿದರು. ರಾತ್ರಿ ಕಾಲೇಜಿನ ವಿದ್ಯಾರ್ಥಿಗಳು ವೀರಾವಳಿ ಎಂಬ ಕನ್ನಡ ನಾಟಕವನ್ನು ಅಭಿನಯಿಸಿದರು. ಕಾರ್ಯದರ್ಶಿ ಶ್ರೀ ತೀನ ಅವರು ಧನ್ಯವಾದಗಳನ್ನರ್ಪಿಸಿದರು.

ದಾನಪತ್ರದ ಮಳಿಗೆಯ ಉದ್ಘಾಟನೆ

ತೆಲ್ಲೂರು, ತಲ್ಲೂರು ಸೇವಾ ಸಹಕಾರಿ ಸಂಘವು ಸರಕಾರೀ ಧನಸಹಾಯದಿಂದ ಕಟ್ಟಿಸಿದ ದಾನಪತ್ರದ ಮಳಿಗೆಯ ಉದ್ಘಾಟನೆಯನ್ನು ಶಾಸನಸಭಾಸದಸ್ಯ ವೈ. ಮಂಜಯ್ಯ ಶೆಟ್ಟರು 18-13 1966ರಂದು ನೆರವೇರಿಸಿದರು. ಶ್ರೀ ಕಾಪು ಸಂಜೀವ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಪರಿವೀಕ್ಷಣಾಧಿಕಾರಿ ಬಳಿಕ ಉದ್ಘಾಟಕ ಶ್ರೀ ಮಂಜಯ್ಯ ಶೆಟ್ಟರು ಸಹಕಾರೀ ಭಾಗನೆಯ ಬಗ್ಗೆ ಮಾತನಾಡಿದರು. ಅವಶ್ಯಕತೆಯು ಕಂಡಾಗಿ ಒತ್ತಿ ಹೇಳಿದರು. ಕುಂದಾಪುರ ತಾಲೂಕು ಬೋರ್ಡಿನ ಉಪಾಧ್ಯಕ್ಷೆ ಶ್ರೀ ಎ. ಜಿ. ಕೊಡ್ಗಿಯವರು ಸಂಯೋಜಕ ಭಾಷಣ ಮಾಡಿದ ಬಳಿಕ ಅಧ್ಯಕ್ಷರ ಭಾಷಣ ಆ ಭಾರ ಮಧ್ಯಾಹ್ನದೊಂದಿಗೆ ಸಭೆ ಮುಕ್ತಾಯಗೊಂಡಿತು.

ಸಿಂಡಿಕೇಟಿನ ಹೊಸ ಶಾಖೆ

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಯೊಂದು ಅನಂತಪುರ ಜಿಲ್ಲೆಯ ಯಡಿಕಿಯಲ್ಲಿ ತಾ. 22—12—66ರಂದು 8/91, ಮೈನ್ ರೋಡ್, ಯಡಿಕಿ, ಎಂಬಲ್ಲಿ ತೆರೆಯಲ್ಪಟ್ಟಿರುವುದು. ಇದು ಆಂಧ್ರ ರಾಜ್ಯದಲ್ಲಿ ಸಿಂಡಿಕೇಟಿನ 25ನೇ ಶಾಖೆಯಾಗಿದೆ. ಯಡಿಕಿಯು ಬ್ಯಾಂಕಿಂಗ್ ಸೌಕರ್ಯವಿಲ್ಲದ ನಗರವಾಗಿತ್ತು. ಈ ಶಾಖೆಯು ತೆರೆಯುವಿಕೆಯಿಂದ ಸಿಂಡಿಕೇಟಿಗೆ ಒಟ್ಟು 217 ಶಾಖೆಗಳಾದವು.

1966ರಲ್ಲಿ ಸಿಂಡಿಕೇಟು ಬ್ಯಾಂಕು ಒಟ್ಟು 18 ಶಾಖೆಗಳನ್ನು ತೆರೆಯಿತು. ಅವುಗಳಲ್ಲಿ 3 ಮೊದಲು ಬ್ಯಾಂಕಿಂಗ್ ಸೌಕರ್ಯಗಳಲ್ಲಿದ್ದ ಪ್ರದೇಶಗಳಾಗಿದ್ದವು 1966ರ ಶಾಖೆಗಳ ವಿಸ್ತರಣಾ ಕಾರ್ಯಕ್ರಮದಲ್ಲಿ ಮೈಸೂರಿನ ವಾಣಿವಿಲಾಸ ಮೊಹಲ್ಲಾದ ಸರ್ವ ಮಹಿಳಾ ಶಾಖೆಯೂ ಭಾರತದ ರಾಜಧಾನಿಯಲ್ಲಿ ಅತ್ಯಂತ ಮುಂದುವರಿದ ವ್ಯಾಪಾರ ಕೇಂದ್ರವಾದ ಸಾಗರ್ ಬಜಾರ್ ಶಾಖೆಯೂ ಒಳಗೊಂಡಿವೆ.

ಶಿವ ಸೇವಾ ಸಹಕಾರಿ ಸಂಘ

ಸ್ಥಳೀಯ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾ ಸಭೆಯು ಇತ್ತೀಚೆಗೆ ಡಾ| ಎಮ್. ರಾಜಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ವಂದಿವಾಡನ, ಆಯವ್ಯಯಗಳ ಮಂಜೂರಾತಿಯ ಅನಂತರ ಈ ಕೆಳಗಿನ ಆಡಳಿತ ಮಂಡಳಿ ಸರ್ವಾನುಮತದಿಂದ ಆರಿಸಲ್ಪಟ್ಟಿತು. ಡಾ| ಎಮ್. ರಾಜಶೇಖರ ಹೆಗ್ಡೆ (ಅಧ್ಯಕ್ಷರು) ಶ್ರೀ ಕೆ. ವಾಸುದೇವ ಶೆಟ್ಟಿ (ಉಪಾಧ್ಯಕ್ಷರು), ಶ್ರೀಗಳಾದ ಕೆ. ಶಿವರಾಂ ಹೆಗ್ಡೆ, ಎಸ್. ಗೋಪಾಲ ಹೆಗ್ಡೆ, ಎಸ್. ಎಮ್. ಹೆಗ್ಡೆ, ಎಲ್ಲಪ್ಪ ಶೆಟ್ಟಿ, ಕೆ. ಎಲ್. ಶರ್ಮ, ಕೆ. ಕೃಷ್ಣ ಶೆಟ್ಟಿ, ಎಸ್. ಸಂಜೀವ ಶೆಟ್ಟಿ ಮತ್ತು ಸೀತಾರಾಮ ಶೆಟ್ಟಿ (ವೈರೆಕ್ಟರರು).

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

H R. A. 9/1966

ಉಮಾಮ್ಮಕ್ಕೆ ಹೆಂಗ್ಸು — ಅಪೀಲಾಂಟೆಳು.
ದಾಸಪ್ಪ ನ್ಯಾಯಕ ಕೂಡಾ — ಎದ್ರಿರು.

3ನೇ ಎದ್ರಿ ಅನಂತ ನ್ಯಾಯ, 4ನೇ ಎದ್ರಿ ಸಂಜೀವ ನ್ಯಾಯ —

ಗಣೇಶ ನ್ಯಾಕರ ಮಕ್ಕಳು, ಪುತ್ತೂರು ತಾಲ್ಲೂ ನಂಮೊಗ್ರು ಗ್ರಾಮದ ಉದ್ದ ಮಜ್ಲು ಎಂಬಲ್ಲಿರುವವರೂ.

ಸದ್ರಿ ಎದ್ರಿರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ —

ಮೇಲಿನ ಅಪೀಲಾಂಟೆಳು ಪುತ್ತೂರು ತಾಲ್ಲೂ ತಶಿಲ್ದಾರರ ಕೋರ್ಟಿನ ತೀರ್ಪನ್ನು ರದ್ದು ಪಡಿಸಬೇಕೆಂತ ದಾಖ್ಲು ಮಾಡಿದ ಮೇಲಿನ ಅಪೀಲು ತಾ. 3—1—1967ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ, ನಿಮ್ಮ ಉದಾಸೀನತೆಯನ್ನು ದಾಕ್ಲು ಮಾಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ, ಕೋರ್ಟಿನ ವಂಗೆ ಯುಕ್ತಕಂಡಂತೆ ತೀರ್ಮಾನಿಸಲಾಗುವುದು.

(ಕೋರ್ಟು ಸ್ಯುಂ ಪ್ರಕಾರ)

P. A. Ariga

Advocate for Appellant

Puttur, 13—12—1966.

ಕನ್ನಡದಾಸ ರಚಿತ

ಹರಿಭಕ್ತಿಸಾರ

ಎಂಬ ಅನುಪೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಾಂ ಪ್ರತಿಗಳಿಗೆ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

ಕಾಸರಗೋಡು ವಾರ್ತಾ ಪತ್ರ

(ನವ್ಯ ವಿಶೇಷ ಪ್ರತಿನಿಧಿಯಿಂದ)

ಕಾಸರಗೋಡು — ಮಂಗಳೂರುಗಳ ಮಧ್ಯೆ ಕರಾವಳಿ ರಸ್ತೆಯಲ್ಲಿ ನೋಟಾರು ವಾಹನ ನಿಗಳ ಓಡಾಟ ವ್ಯಾಪಕವಾಗಲು ಇನ್ನು ಹೆಚ್ಚು ಕಾಲ ಬೇಕಾಗದು. ಕೇವಲ ೩೦ ಮೈಲು ಉದ್ದದ ಈ ರಸ್ತೆಯಲ್ಲಿ ಮೊಗ್ರಾಲ್ ವತ್ತು ಕುಂಬಳೆ ನದಿಗಳ ಸೇತುವೆಗಳು ಕೇಂದ್ರ ಸಚಿವ ಶ್ರೀ ಪುಣಚ್ಚರಿಂದ ಇತ್ತೀಚಿಗೆ ಉದ್ಘಾಟಿಸಲ್ಪಟ್ಟವು. ಶಿರಿಯ ಮತ್ತು ಉಪ್ಪಳ ಸೇತುವೆಗಳ ಪತ್ತು ಅವುಗಳ ಸಾಮೀಪದ ರಸ್ತೆಗಳ ಕಾರ್ಯವೂ ಮುಗಿಯುತ್ತಾ ಬಂದಿದೆ. ಇನ್ನು ಮೂರು ತಿಂಗಳಲ್ಲೇ ಈ ಸೇತುವೆಗಳೂ ಚಲಾವಣೆಗೆ ಯೋಗ್ಯವಾಗಲಿವೆ.

ಮೊಗ್ರಾಲ್ ಸೇತುವೆಗೆ ರೂ. ೧೧ ಲಕ್ಷ ನ್ಯಾ ಕುಂಬಳೆ ಸೇತುವೆಗೆ ರೂ. ೯ ಲಕ್ಷ ವೆಚ್ಚವಾಗಿದೆ.

ಇನ್ನು ಕಿದೆ ಎರಡು ಸೇತುವೆಗಳೂ ಉದ್ಘಾಟನೆಯಾದ್ದಾಗ ಕಾಸರಗೋಡಿನಿಂದ ಮಂಗಳೂರಿಗೆ ಈಗ ೫೬ ಮೈಲಿದ್ದುದು ಕೇವಲ ೩೦ ಮೈಲಿಯಾಗುವುದು.

ಕುಂಬಳೆ — ಮಂಗಳೂರು ಜಿಲ್ಲೆ ೫೦ ಮೈಲಿ ಇದ್ದುದು. ೨೧ ಮೈಲಿನ್ನು ಮಂಗಳ್ವಾಡಿ — ವಂಗಳೂರು ೪೭ ಮೈಲಿದ್ದುದು ೧೫ ಮೈಲಿನ್ನು ಮಂಜೇಶ್ವರ — ಮಂಗಳೂರು ೪೫ ಮೈಲಿದ್ದುದು ೧೧ ಮೈಲಿಯಾಗಿ ಪ್ರಯಾಣ ಸೌಕರ್ಯಗಳು ಹೆಚ್ಚುವವು.

ಕರಾವಳಿ ರಸ್ತೆಯು ಕರಾವಳಿ ಗ್ರಾಮಗಳ ಜೀವನಾಡಿಯಾಗಿಯೂ ಪರಿಗಣಿಸಲ್ಪಡುವುದು.

ಈ ತಾಲೂಕಿನ ಕರಾವಳಿ ರಸ್ತೆಯಲ್ಲಿನ ಸೇತುವೆಗಳ ನಿರ್ಮಾಣ ಪೂರ್ತಿಗೊಂಡಾಗ ಮಂಗಳೂರು — ಕನ್ಯಾಕುಮಾರಿಗಳ ನಡುವೆ ನೇರ ಮೋಟಾರು ಸಂಚಾರಕ್ಕೆ ಅನುವಾಗುವುದು.

ಕನ್ನಡ ವಿದ್ಯಾಲಯಗಳು

ಈ ತಾಲೂಕಿನಲ್ಲಿ ಕನ್ನಡ ವಿದ್ಯಾಲಯಗಳೇ — ೧೦ ವರ್ಷಗಳ ಬಳ್ಳದ ಒಡೆತನದ ಪತ್ತಡವನ್ನು ದಿರಿಸಿಯೂಡರೂ — ಇನ್ನೂ ಹೆಚ್ಚಿಗಿನೆ.

ಮಂಜೇಶ್ವರ, ಕೊಡ್ಲಮೊಗರು, ಪೈವಳಿಕೆ, ಮಂಗಲ್ಪಾಡಿ, ಕುಂಬಳೆ, ನೀರ್ಚಾಲು, ಬದಿಯಡ್ಕ ಆಗಲ್ಪಾಡಿ, ಪೆರ್ಲ, ಎಡನೀರು, ಕಾಸರಗೋಡಿನ ಮೂರರಂ ಪೈಕಿ ಎರಡು ಮತ್ತು ಅತೂರು ಹೀಗ್ಯಾಕ್ಕಾಲುಗಳಲ್ಲಿ ಕನ್ನಡವೂ ಧ್ಯೇಮ ತರಗತಿಗಳು.

ಮ್ಯಾಸಾಡಿಯು ಅಧ್ಯಾಪಕರ ತರಬೇತಿ ಶಾಲೆಯಲ್ಲಿಯೂ ಕನ್ನಡ.

ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ತೀರ್ಗಡೆಗೊಂಡ ಕನ್ನಡ ವಿದ್ವಾನ್ ಲೇ ಕರ್ನಾಟಕದ ಹಲವೆಡೆಗಳಲ್ಲಿಯೂ ಕನ್ನಡ ಪಂಡಿತರಾಗಿರುವುದು.

ಪಂಚಾಯತ್ ಅಧ್ಯಕ್ಷರ ಮನವಿ

ಈ ತಾಲೂಕಿನ್ನು ಮಂಗಳೆ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೇ ವಿಲೀನಗೊಳಿಸ ಬೇಕೆಂದು ಮಹಾಜನ ಅಯೋಗವನ್ನೂ ಕೇಂದ್ರ ಸರಕಾರವನ್ನೂ ವಿನಂತಿಸುವ ನ್ಯಾಯವಿಗಳನ್ನು ಪುತ್ತಿಗೆ, ಬದಿಯಡ್ಕ, ಪೆರ್ಲ, ಪೈವಳಿಕೆ, ಮಂಗಲ್ಪಾಡಿ, ಕುಂಬ್ಳಾಜೆ, ಬೆಳ್ಳೂರು ಇತ್ಯಾದಿ ೭೦ ಪ್ರಾಥಮಿಕ ಅಧ್ಯಕ್ಷರುಗಳು ಕಳುಹಿಸಿದ್ದಾಗಿ ತಿಳಿದು.

ಕೇರಳದಲ್ಲಿ ಜನತಾ ಸರಕಾರ ರೂಪಿತವಾಗುವ ವರೆಗೂ ಕಾಯದೆ ಅದಷ್ಟು ಬೇಗನೇ ಅಯೋಗವು ಅನ್ಯೇಷಣೆ ಪ್ರಾರಂಭಿಸಬೇಕೆಂದೂ ಮನವಿಯಲ್ಲಿ ವಿಜ್ಞಾಪಿಸಲಾಗಿದೆಯೆನ್ನಲಾಗಿದೆ.

ಆಡೂರು, ಕಾರಡ್ಕ ಪಂಚಾಯತ್ ಅಧ್ಯಕ್ಷರೂ ಇದೇ ಅಭಿಪ್ರಾಯವನ್ನು ಸಂಭಾಷಣಾವೇಳೆ ವ್ಯಕ್ತಪಡಿಸಿದರಂ.

ಮಂಜೇಶ್ವರ್ರ, ಮತ್ತು ಪೊರ್ಕಾಡಿ ಪಂಚಾಯತ್ ಅಧ್ಯಕ್ಷರೂ ಈ ವಿಲೀನೀಕರಣಕ್ಕೆ ವಿರೋಧವಿಲ್ಲ.

ಕಾಸರಗೋಡು ಪುರಸಭೆಯು ಸಲಹಾ ಸಮಿತಿ ಅಧ್ಯಕ್ಷರ ಅಭಿಪ್ರಾಯವೂ ಮೈಸೂರು ಪರವಾಗಿರುವುದಾಗಿ ತಿಳಿದು.

ಗತಿ ಸಮಿತಿಗೆ ಆಯ್ಕೆ

ಮೈಸೂರು ಸರಕಾರ ನೇಮಿಸಿದ್ದ 'ಮಳೆ ಮರಿ ಸಮಿತಿ'ಗೆ ಕಾಸರಗೋಡಿನ ಧುರೀಣ ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಗಳನ್ನೂ ಮೈಸೂರು ಸರಕಾರ ಆಯ್ಕೆ ಮಾಡಿದೆ. ಇದು ಸ್ವಾಗತಾರ್ಹ.

ಧನ ಸಹಾಯ

ಶಂಕರ ವಿಷ್ಣು ಮೋಟಾರು ಕಂಪೆನಿಯು ದಿನಾ ತಾ. 14—12—66ರಂದು ಈ ಕೆಳಗಿನಂತೆ ರೂ 10,000 1966ನೇ ಸಾಲಿಗೆ ಧನ ಸಹಾಯ ನಂಜೂರು ಮಾಡಿರುವರು.

1. ಡಾ|ವಿ. ವಿ. ಬಾಳಿಗ ಇನ್ಸ್ಟಿಟ್ಯೂಟ್ ಆಫ್ ಸರ್ಜರಿ, ಮಣಿಪಾಲ ರೂ.5000/- 2. ಶ್ರೀ ಕೃಷ್ಣ ಮಠ ಭಕ್ತ ರೂ. 2000/- 3. ಹಿಂದೂ ಕುಷ್ಠ ನಿವಾರಣಾ ಸಂಘ, ಪ. ಕ. ರೂ. 1000/- 4. ಗೊರೆಟ್ಟಿ ಹೊಸ್ಪಿಟಲ್, ಕಲ್ಯಾಣಪುರ ರೂ. 500/- 5. ಹಿಂದೂ ಕುಷ್ಠ ಸೇವಾರಣಾ ಸಂಘ, ಉಡುಪಿ ತಾಲೂಕು ಶಾಖೆ, ಉಡುಪಿ ರೂ. 500/- 6. ಉಡುಪಿ ತಾಲೂಕು ಟಿ. ಬಿ. ಎಕೋಸಿಯೇಶನ್, ಉಡುಪಿ ರೂ.1000/- 7. ಶ್ರೀ ಯು. ಎಸ್. ಮಲ್ಯಾ ಮೆಮೋರಿಯಲ್ ಫೌಂಡ್, ಮಂಗಳೂರು ರೂ. 2000/- ಆಂತೆಯೇ ಯುನೈಟೆಡ್ ಟ್ರೇಡಿಂಗ್ ಕೋರ್ಪರೇಶನ್ ಎಂಡ್ ವರ್ಕ್ಸ್ ಕೋಪಿನವರು ಈ ಕೆಳಗಿನಂತೆ ರೂ.5000/- ಮಂಜೂರು ಮಾಡಿರುವರು. 1) ಶ್ರೀ ರಾಮಕೃಷ್ಣ ಮಿಷನ್ ಬಾಲಿಕಾಶ್ರಮ, ಮಂಗಳೂರು ರೂ. 2000/- 2) ಹಿಂದೂ ವಿದ್ಯಾ ದಾಯಿನಿ ಸಂಘ, ಮುರತ್ಕಲ್ ರೂ. 2000/- 3) ಸ್ವಾಮಿ ಶ್ರದ್ಧಾನಂದ ಸೇವಾಶ್ರಮ, ಮಂಗಳೂರು ರೂ. 1000/-.

ದ. ಕನ್ನಡದ ಕಾಂಗ್ರೆಸ್ ಅಭ್ಯರ್ಥಿಗಳು

ನುಂದಿನ ಮಹಾಚುನಾವಣೆಯಲ್ಲಿ ಸ್ಪರ್ಧಿಸಲು ಈ ಕೆಳಗಿನವರನ್ನು ಕೇಂದ್ರ ಚುನಾವಣಾ ಸಮಿತಿಯು ಸಿಫಾರಸು ಮಾಡಿದೆ.

ವೈ ಯೂರು ಎಸೆಂಬ್ಲಿಗೆ

ಸುಳ್ಯ — ಸುಬ್ಬಯ್ಯ ನಾಯಕ್

ಪುತ್ತೂರು — ಜೆ. ವಿಠಲಪಾಟ್ರ ಶೆಟ್ಟಿ

ಬೆಳ್ತಂಗಡಿ — ಬಿ. ವಿ. ಬಂಳಿಗ

ಬಂಟ್ವಾಳ — ಲೀಲಾವತಿ ರೈ.

ಮಂಗಳೂರು I: — ಎಂ. ಶ್ರೀನಿವಾಸ ನಾಯಕ್

ಮಂಗಳೂರು II: — ಬಿ. ಎಂ. ಇದಿನಬ್ಬ

ಸಾರ್ವಜನಿಕ ಡಾ|| ಕೆ. ನಾಗಪ್ಪ ಅಳ್ವ

ಕಾಪು — ಡಿ. ರತ್ನವರ್ಮ ಜೈನ್ಡಿ

ಉಡುಪಿ — ಎಂ. ಮಾಧವರಾಜ (ಇವರೀ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದಿರುವರೆಂದು ತಿಳಿದು ಬಂದಿತ್ತು.)

ಬ್ರಹ್ಮಾವರ — ಎಫ್. ಎಕ್ಸ್. ಡಿ. ಪಿಂಟೋ

ಕುಂದಾಪುರ — ಎಂ. ಎಂ. ಹೆಗ್ಡೆ

ಬೈಂದೂರು — ವಿ. ಜಿ. ಕೊಡಿ

ಕಾರ್ಕಳ — ಎ. ನಾರಾಯಣ ಹೆಗ್ಡೆ

ಮೂಡಬಿದ್ರೆ — ಗಂಗಾಧರ ಡಾನಾ

ವಿಧಾನ ಪರಿಷತ್ತಿಗೆ

ಉತ್ತರ ವಿಭಾಗಕ್ಕೆ — ಎಸ್. ಎಸ್. ಕೊಳ್ಳಬೈಲ್

ದಕ್ಷಿಣ ವಿಭಾಗಕ್ಕೆ — ಸಿ. ಎಂ. ಹುಣಚ್ಚ

ರಷ್ಯ ದೇಶದ ಹತ್ತು ವಿಖ್ಯಾತ ವಿಜ್ಞಾನಿಗಳ ನಿಯೋಗವು ವಾಸ್ಕೊನಿಂದ ನವದೆಹಲಿಗೆ ಭಾರತ ಸರಕಾರದ ಆಹ್ವಾನದ ಮೇಲೆ ಇವತ್ತು ಡಿಸೆಂಬರ್ 27ರಂದು ಆಗಮಿಸಿದೆ. ಇವರಲ್ಲಿ ಬೆಂಗಳೂರಿಗೂ ಆಗಮಿಸಿ ಭೇಟಿ ಕೊಡಲಿದ್ದಾರೆ.

ಪುತ್ತೂರು II A ಮುನ್ಸಿಫ್ ಕೋರ್ಟಿನಲ್ಲಿ

O. S. 62/66.

ಲಕ್ಷ್ಮೀ — ವಾದಿ

ಜೈತ್ತೆ ಹೆಂಗಸ್ಸು ಕೂಡಾ — ಪ್ರತಿವಾದಿಯು

೨೬ನೇ ಪ್ರತಿವಾದಿ ಡಗ್ಗನ್ನ, ೪೭ನೇ ಪ್ರತಿವಾದಿ ಪೂವಪ್ಪ, ೪೪ನೇ ಪತಿವಾದಿ ಜಿಂದಪ್ಪ, ೪೯ನೇ ಪತಿವಾದಿ ನಾಂಗಪ್ಪ, ೫೦ನೇ ಪ್ರತಿವಾದಿ ಮುಂಡಪ್ಪ, ೧೨೪ನೇ ಪ್ರತಿವಾದಿ ವಿಶ್ವನಾಥ, ೪೮ ರಿಂದ ೪೯ನೇಯವರು ಬಾಲು ಹೆಂಗ್ಸಿನ ಮಕ್ಕಳು, ನುಂಗ್ಲೂರು ತಾಲೂಕು ಕೂರ್ನಾಡು ಗ್ರಾಮದ ಅವ್ಯಂಬಳ ೫೦ನೇ ಪ್ರತಿವಾದಿ ಶೀತಲ ಹೆಂಗ್ಸಿನ ಮಗ ಮತ್ತು ೧೨೪ನೇ ಪ್ರತಿವಾದಿ ಪಿಲ್ಲನಂಧ ಪೂಜಾರಿ ದಾಮು ಹೆಂಗ್ಸಿನ ಮಗ ಇಬ್ಬರೂ ಬಂಟ್ವಾಳ ತಾಲೂಕು ಕೊಲ್ನಾಡು ಗ್ರಾಮದ ಮಕ್ಕಳಿದ್ದಿಲ್ಲ.

ಆಡಮನ ಅಳ್ಳು ಬಡ್ಡಿ ಲೃವೇಜು ರೂ. 8878.67ರಂ ಎನೂಲಿ ಬಗ್ಗೆ ನಿಮ್ಮ ಮೇಲೂ ಮಾಡಿದ ಈ ದಾವೆಯು ನಿಮ್ಮ ಹಾಜ್ರಾತಿಗೆ ತಾ. 28—1—67ಕ್ಕೆ ಇಟ್ಟಿರುವುದರಿಂದ ನೀವು ಆ ದಿನ ಬಾವ್ದಿ ಆಗಲಿ ವಯೇಲರ ಮೂಲಕವಾಗ್ಲಿ ಈ ಕೋರ್ಟಿಗೆ ಹಾಜ್ರಾಗಿ ಉತ್ತರಿಸಿದ್ದಿಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ ಕಾನೂನಾಗಿದ್ದೀತು.

B. Chidananda Rao
Vakil for plaintiff.

ನಮ್ಮ ನಿಮ್ಮೊಳಗೆ...

ಗೋಪು, ತೆಗೋಪಾ ನಿನ್ನೆ ಸೈಕಲು



ಕುಂಟಾ ದಿನದಿಂದ ಆನೆ ಹಟ್ಟೊಂಡಿದೀಯಲ್ಲ. ಇವತ್ತು ನಿನ್ನಂತೆ ನನಗೂ ಬಲೇ ಸಂತೋಷ ಕಣಪಾ.

ನಾನು ದುಡುಗನಾಗಿದ್ದಾಗ ನಮ್ಮ ಹಳ್ಳೀಲಿ ಒಂದೇ ಒಂದು ಸೈಕಲು ನೋಡೋದಕ್ಕೆ ಸಿಗ್ತಾಯಿರಲಿಲ್ಲ. ದೂರ ಹೋಗ್ಬೇಕೂಂದ್ರೆ ಎತ್ತಿನ ಗಾಡಿ ಉಳ್ತಾಂದ್ರೆ ನಡೀಬೇಕು. ನಾನು ಶೈಲು-ಗಾಡಿ ಕಂಡಿದ್ದು ನನ್ನ ಹದಿವಟಿನ ವಯಸ್ಸಲ್ಲಿ! ನಮ್ಮ ಸೊಂದರ ಮಾವನಿಗೆ ಬೆಂಗಳೂರಿನ ಹುಣ್ಣು ಗೊತ್ತಾದಾಗ, ಶೈಲಾಗಾಡಿ ಹತ್ಕೊಂಡು ಹೋಗಿದ್ದಿ.

ಈಗ ರಾನುಣ್ಣನ ಮಗ ತೀರಾ ಹೊಂಜಾಯಿವೆ ಡಿಲ್ಲಿನೆ ಏರ್ ಕಂಡೀಷನ್ಡ್! ಗಾಡೀಲಿ ಹೋಗ್ತಾನಂರೆ! ಮೂರನೆ ದರ್ಜೆ ಆದರೂ ಗಾಡಿ ತುಂಬಾಗಿರ್ತವೆ ಅಂತಿನೆ. ರೈಲು ಇಂಜಿನ್ನು ನಮ್ಮ ದೇಶದಲ್ಲಿ ತಯಾರಿಸೋದಲೆ ಹೊರದೇಶಗಳಿಗೂ ಮಾರಾಟ ಮಾಡ್ತಾರಂತೆ.

ನಮ್ಮ ಕಾಗವನತ್ರಗಳೆಲ್ಲ ಈಗ ವಿಮಾನದಲ್ಲಿ ಹೋಗ್ತಾವೆ ಅಂತಲ್ಲ? ಬೆಂಗಳೂರಿನಲ್ಲಿ ಮಾತಾಡಿದ ಪತ್ರ ಡಿಲ್ಲಿಗೆ ರಲು ಒಬೆದಿನ ಸಾಕೂಂದ್ರೆ ನನಗಂತೂ ಆಶ್ಚರ್ಯ. ಹಿಂದೆ, ನೀನು ದುಟ್ಟಿದ ಸಮಯ ನಿನ್ನೂರು ಬೈಲಿ ದೂರವಿದ್ದಿರುವ ನಿನ್ನ ನೋಡೆರಕ್ಕೆಗೆ ಸಮಾಚಾರ ತಿಳಿಸಬೇಕಾದರೆ ಮೂರು ದಿನ ಹಿಡಿದಿತ್ತು!

ಹಾದಪ್ಪ, ಈಗ ಕಾಲ ಬದಲಾಗಿದೆ. ಇದ್ದೆಲ್ಲ

ಬಿಳಿಪಿನೆಯ ಸಾಧನೆ

DA-65/AS-1

45

ಅಮೃತ ಹಸ್ತ

(ಎರಡನೇ ಸುಟದಿಂದ)

'ತುಂಬ ಬೇಸರ ಪಟ್ಟು ಕೊಂಡಿದ್ದೀ ಯೇನ್ರೀ"

'ಹೇಳುವುದಕ್ಕೆ ಬಾಯಿಬರುವುದಿಲ್ಲ ಸ್ಮ್ಯ. ಹೇಳದೆ ಇರಲು ಮನಸ್ಸು ಒಪ್ಪು ವುದಿಲ್ಲ'

'ಸಂಕೋಚ ಪಟ್ಟೋಬೇಡಿ ಹೇಳಿ ಬಿಡೋಜ'

"ನಿಮ್ಮ ಸೌಂದರ್ಯ, ಉಡುಗೆ ತೊಡುಗೆ, ಸುಖ ಕೆಲವರಿಗೆ ಕಣ್ಣುರಿ ಕಣ್ರೀ ಸುಧಾ" ಎಂದಳು ಸರೋಜ ಸುಧಾಳ ನಿಸ್ಕಲ್ಮಷ ಹೃದಯದಲ್ಲಿ ಸಂತಸದ ಬೀಜ ಪಿತ್ತತ್ತಾ. ಸುಧಾ ಆಶ್ಚರ್ಯದಿಂದ 'ನಾನು ಯಾರಿಗೂ ಕೇಡು ಎಣಿಸಿಲ್ಲ ಸರೋಜ' ಎಂದಳು.

"ನಿಮ್ಮ ಹಾಗೆ ಎಲ್ಲರೂ ತಾಂತ್ರಿರೆಯೇ ನಮ್ಮ. ಬೆಳೆಗಿಂತ್ತಿದೆಲ್ಲ ಹಾಲೇ?'

'ತಿನ್ನ ಬಿಡಿಸಿ ಹೇಳಿ ಸರೋಜ, ನನ್ನಗ್ಗೋ ಗಾಬರಿಯಾಗುತ್ತಿದೆ'

'ನಿಮಗೆ ಬೇಸರವಾಗುತ್ತಿದ ನನ್ನ ನುಂತಿನಿಂದ,'

'ಹೇಳಿ ಸರೋಜ, Please.'

'ನೋಡಿ ಸುಧಾ ನಿಮ್ಮ ಮೀನಾಕ್ಷಿ ಮ್ಮನವರು ನನ್ನ ಯತ್ತ ತಂಯಿ ಇದ್ದ ಹಾಗೆ ಎಂದು ಹೊಗಳಿತ್ತಿದ್ದೀರಿ. ಇವರು ಬೀದಿ ಬೀದಿಗೆಲ್ಲಾ ಸುಧಾ ಹಾಗೆ ತಲೆ ಬಾಚುತ್ತಾಳೆ. ಹೀಗೆ ಮುಡಿ ಕಟ್ಟುತ್ತಾಳೆ, ಸೀರೆ ಉಡುತ್ತಾಳೆ, ನಯವಿಲ್ಲ ವಿನಯವಿಲ್ಲ ಶುದ್ಧ ಜಲ್ಲು ಎಂದು ಹೇಳಿಕೊಂಡು ಬರ್ತಿದ್ದರೆ" ಎಂದಳು ಸರೋಜ.

"ನಿಜವೇನ್ರೀ"

"ನಿಜವಾಗಿಯೂ ಇನ್ರೀ. ನಾನೇಕೆ ಸುಳ್ಳು ಹೇಳಲಿ. ಅವರ ಜೊತೆಗೆ ಅವರ ಸೊಸೆ ರಂಜಲಕ್ಷ್ಮಿಯೂ ಸೇರಿಕೊಂಡಿದ್ದಾಳೆ."

'ಮನೆಗೆ ಒಂದಂಗ ಕೇಳಿಯೇ ಬಿಡುತ್ತೇನೆ.

'ಸದ್ಯ ನನ್ನ ಹೆಸರು ಹೇಳಬೇಡ್ರಿ. ದೊಡ್ಡ ಗಲಾಟೆಯಾದೀತು."

"ನೀವೇನು ಯೋಚಿಸಬೇಡಿ ಸರೋಜ. ನಾನಿದ್ದೇನೆ. ಜನಕ್ಕೆ ಸಲುಗೆ ಕೊಟ್ಟರೆ ನಮ್ಮನ್ನೇ ತಳಿಯುತ್ತಾರೆ' ಎಂದಳು ಸುಧಾ ಜೋರಾದಿಂದ.

'ಒಂದು ಕೆಲಸ ಜಯಪ್ರದವಾಯಿತು' ಎಂದುಕೊಂಡು ಸರೋಜ ಅತಿ ವಿನಯದಿಂದ ನಮಸ್ಕಾರ ಹೇಳಿ ಮನೆಯ ದಾರಿ ಹಿಡಿದಳು.

ಮೀನಾಕ್ಷಮ್ಮನವರ ಬಗ್ಗೆ ಸರೋಜ ಹೊದಲ ಬಾರಿಗೆ ಅಸಹ್ಯವಾಗಿ ಮಾಡಿದಾಗ ಸುಧಾ ಒಪ್ಪಲಿಲ್ಲ. ಆದರೆ ಸಮಯ ದೊತಿಂತೆಲ್ಲಾ ಸರೋಜ ಮತ್ತಿ ಅವಳ ಗಳಿಯರು ಮಾಲತಿ, ಸುನ್ನ ಮೊದಲಾದವರು ಸುಧಾಳ ಕೆವಿಯಲ್ಲಿ ಮೀನಾಕ್ಷಿ ಮ್ಮನವರ ಮೇಲೆ ವಿಶ್ವಾಸ ಒಳಗೆ ದ್ವೇಷ' ಎಂದು ಸಲ್ಲದ ಅಭಿಪ್ರಾಯವನ್ನು ಊದಿದರು. ಮೀನಾಕ್ಷಿಮ್ಮನವರಿಂದ ಬಗೆಗಿದ್ದ ಸದಭಿಪ್ರಾಯ ಸುಧಾಳ ಅಂತರಂಗದಿಂದ ಬದಲಾಯಿತು.

ಮೀನಾಕ್ಷಮ್ಮನವರು ಇಂದಿನ ಯುವತಿಯರ ನೀಳಗೇಡಿತನ, ಸ್ವೇಚ್ಛಾಚಾರ, ವಿವಿಧ ಫ್ಯಾಷನ್‌ಗಳನ್ನು ಟೀಕಿಸಿದಾಗ ಸುಧಾಗೆ ಪರೋಕ್ಷವಾಗಿ ನನ್ನನ್ನೇ ಅವಹೇಳನ ಮಾಡುತ್ತಿದ್ದಾರೆಂದು ಭಾವಿಸಿದಳು.

— ೫ —

ಒಂದುದಿನ ಅನಾವಶ್ಯಕವಾಗಿ ಮೀನಾಕ್ಷಮ್ಮ ಮತ್ತ ಸುಧಾ ಗೆ ಮಾತು ಬರುವಾಗಿ ನಡೆಯಿತು. ಕಾರಣ ಸುಧಾ ಅವರ ಮನೆಗೆ ಬರಲು ನಿರಾಕರಿಸಿದುದರಿಂದ.

"ನಿಮ್ಮನ್ನ ತಾಯಿ ಎಂದು ಭಾವಿಸಿದ್ದೆ. ನೀವು ನನ್ನ ಬಗ್ಗೆ ಎಲ್ಲರ ಮುಂದೆಯೂ ಇಲ್ಲದಿಲ್ಲದ ವಿಷಯಗಳನ್ನು ಹೇಳಿ ಅಪಹಾಸ್ಯ ಮಾಡಿದ್ದೀರಿ"

"ರಾಮ, ರಾಮ, ಯಾರೇ ತಾಯಿ ನಿನಗೆ ಆ ಸುದ್ದಿ ಹೇಳಿದ್ದು"

"ಬೇರೆಯವರು ಯಾಕೆ ಹೇಳಬೇಕು, ನನಗೆ ತಿಳಿದಿದೆ'

'ಸಳ್ಳು ಕಣಮ್ಮ, ನಿನಗೆ ದುಃಖ ಬಾರದೆ, ನಿನ್ನ ಬಗ್ಗೆ ಕೆಟ್ಟ ಮಾತನಾಡಿದರೆ ನನಗೆ ಬರುವ ಭಾಗ್ಯವೇನೇ ತಾಯಿ"

'ನಿಮ್ಮ ಸಹವಾಸ ನಾಕು. ಹೊರಟು ಹೋಗಿ. ಈ ಬಗೆಯ ನೊಸಳೆ ಕಣ್ಣೀರು ಸುರಿಸುವುದು ಬೇಡ.'

'ನೀನು ಬೇರೆ, ರಾಜ ಬೇರೆ ಎಂದು ಭಾವಿಸಿಲ್ಲ ಕಣಮ್ಮ"

"ದಯವಿಟ್ಟು ಕಾಡಬೇಡಿ ಹೊರಟು ಹೋಗಿ' ಎಂದು ಅಂತ್ತಾ ಹೇಳಿದಳು ಸುಧಾ.

'ಸಂತೋಷವವ್ಮ ಆದರೆ ಕೊನೆಯ ದಾಗಿ ಒಂದು ಮಾತು: ನಿನ್ನ ಬಗ್ಗೆ ನನಗೆ ಕೋಪವಿಲ್ಲ. ನಿನ್ನ ದುಃಖ ಕಡಿಮೆಯಾ ದಾಗ, ನಾನು ನಿರಪರಾಧಿ ಎಂದು ನಿನಗೆ ತಿಳಿದಾಗ, ನಿನ್ನ ಕಷ್ಟ, ಸುಖ, ದುಃಖ ಎಲ್ಲವುಗಳಲ್ಲಯೂ ಭಾಗಿಯಾಗುವ ಜೀವ ಪೊಂದಿದೆ ಎಂಬುದನ್ನು ಮರೆಯ ಬೇಡ ಮ್ಮ...' ಎಂದು ಮೀನಾಕ್ಷಮ್ಮ ಮನೆಯ ದಾರಿ ಹಿಡಿದರು.

ಶಂಕರ ಮೂರ್ತಿಗೆ ಸಂಗತಿ ತಿಳಿಯಿತು. ಅವನ ಹೃದಯ ನೊಂದಿತು.

"ಅವರ ಬಗ್ಗೆ ತಾಳ್ಮೆಗೆಟ್ಟ ಮಾತಾಡ ಬಾರದಿತ್ತು ಸುಧಾ'

'ಅವರು ನನ್ನನ್ನು ಸಿನಿಮಾ ನಟಿ ಎಂದು ಎಲ್ಲರಿದುದೆಲ್ಲಿಲ್ಲಾ ಪ್ರಸಾರ ಮಾಡಿ ಕೊಂಡು ಬರಲಿ'

'ಅವರು ಅಂತಹವರಲ್ಲ ಕಣೆ. ಅವರದು ಹೆಂಗರುಳು. ಇನ್ನೊಬ್ಬರಿಗಾಗಿ ಮರುಗುವ ಜೀವ'

"ಅವರು ಸಭ್ಯಸ್ಥರು, ನಾನು ಕೆಟ್ಟವಳು ಆಷ್ಟೇ ತಾನೇ?" ಎಂದು ಅಳುತ್ತಲೇ ಪ್ರಶ್ನಿಸಿದಳು ಸುಧಾ.

"ಇನ್ನೊಬ್ಬರ ಬಗ್ಗೆ ಅವರು ಕೆಟ್ಟಮಾತು ಆಡಿದ್ದು ಕೇಳಿದ್ದೀಯೂ ಸುಧಾ'

"ನನ್ನ ಮಾತಲ್ಲಿ ನಿಮಗೆ ನಂಬಿಕೆಯೇ ಇಲ್ಲ"

"ಹೋಗಲಿ ಬಿಡು ಆಗಿ ಹೋಯ್ತು. ಬರಕ್ಕಾಗಿ ಕಣ್ಣೀರು ಹಾಕ ಬೇಡ. ಮಂದಿ ನಿನಗೆ ತಿಳಿಯುತ್ತದೆ" ಎಂದ ಶಂಕರ ಮೂರ್ತಿ.

ಸುಧಾ ಬೇಸರದಿಂದ ಒಳಕ್ಕೆ ನಡೆದಳು

೦ ೦ ೦ ೦

"ನನ್ನ ಮಾತು ಕೇಳ್ತೀಯೇನವ್ಮ... ಇನ್ನೊಬ್ಬರಿಂದ ಮಾತು ಕೇಳಿ ಬೇಸರಪಟ್ಟುಕೊಳ್ಳುವುದು—ಎಂದ ವಾಸು. ಪತ್ರಿಯಿಂದ ಎಲ್ಲ ಸಂಗತಿಯನ್ನು ತಿಳಿದು.

'ನನಗೇನು ಬೇಸರವಿಲ್ಲ ವಾಸು. ಅದು ಲೋಕ ಕಾಣದ ಮಗು, ಒಂದು ಮಾತು ಅಂದರೇನಂತೆ" ಎಂದ. ಸಮಾಧಾನದಿಂದ ಲೇ ಹೇಳಿದರು ವಿಮಲಾಕ್ಷಮ್ಮ.

ಕೆಲವು ತಿಂಗಳು ಕಳೆದವು.

ಶಂಕರ ಮೂರ್ತಿಯ ತಮ್ಮ ರವಿ ರಜೆಯಲ್ಲಿ ಹೊಸಪೇಟೆ, ಹಂಪೆ ಸಂದರ್ಶಿಸಲು ಬಂದ. ಶಂಕರ ಮೂರ್ತಿ ರವಿ ಮತ್ತು ಸುಧಾ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತು ಹಿಂತಿರುಗಿದರು.

ಅಣ್ಣನ ಸಲಹೆಯಂತೆ ರವಿ ಕೆಲದಿನಗಳ ಮಟ್ಟಿಗೆ ಹೊಸ ಪೇಟೆಯಲ್ಲಿಯೇ ಉಳಿಯಬೇಕಾಯಿತು. ಶಂಕರ ಮೂರ್ತಿ ರಜೆ ಮಡೆದು ಬೆಂಗಳೂರಿಗೆ ಪ್ರಯಾಣ ಬೆಳೆಸಿದ.

ಒಂದು ದಿನ ಸುಧಾ ಬಚ್ಚೆಲ. ಮನೆಯಲ್ಲಿದ್ದ ಕೊಡವನ್ನು ಎತ್ತಿ ಒಳತರಲು ಪ್ರಯತ್ನಿಸಿದಳ. ಆದರೆ ಅವಳಿಂದ ಕೊಡವನ್ನು ಎತ್ತಲೂ ಸಾಧ್ಯವಾಗಲಿಲ್ಲ. ಶಕ್ತಿಯನ್ನೆಲ್ಲಾ ಉಪಯೋಗಿಸಿ ಕೊಡವನ್ನು ಎತ್ತಿ ಸೊಂಟದಮೇಲಿಕ್ಕುಕೊಂಡಳು. ಅವಳಿಗೆ ಏನೂ ತೋಚದಾಯಿತು. ಕೊಡ ಕೆಳಗುರುಳಿ ಬಿತ್ತು. ಶಬ್ದ ಕೇಳಿದೊಡನೆಯೇ ರವಿ ಒಳಕ್ಕೆ ಓಡಿ ಬಂದು ದಿಗ್ಭ್ರಾಂತನಾಗಿ ನಿಂತ. ಸುಧಾ ಎಚ್ಚರವಿಲ್ಲದೆ ಮಲಗಿದ್ದಳು. ರವಿಗೆ ಗಾಬರಿಯಾಯಿತು. 'ಅತ್ತಿಗೆ ಅತ್ತಿಗೆ' ಎಂದ. ಸುಧಾ ಉತ್ತರಿಸಲಿಲ್ಲ

ರವಿಗೆ ದಿಕ್ಕೇ ತೋಚದಂತಾಯಿತು. ಹೊರಕ್ಕೆ ಓಡಿಬಂದ. ಒಂದೋದ. ಕ್ಷಣವೂ ಅವನಿಗೆ ಯುಗವಾಗಿತ್ತು. ಪಿರಿತಿರುಯೂರೂ ಇಲ್ಲಲ್ಲಿ. ಯಾರನ್ನು ಕರೆಯುವುದು ಯಾರಿಗೆ ಈ ಸಂಗತಿ ತಿಳಿಸುವುದು? ಯಾವ ಹೆಂಗಸು ಬಂದು ಅತ್ತಿಗೆಗೆ ಸಹಾಯ ಮಾಡಬಲ್ಲರು ಎಂದು ಬೀದಿಗೆ ಬಂದ.

ಮೀನಾಕ್ಷಮ್ಮ ಸುಧಾಳ ಮನೆಯ ಮುಂದೆಯೇ ಅವರ ಮನೆಗೆಹೊರಟಿದ್ದರು. ರವಿ ಅವರ ಬಳಿಗೆ ಬಂದು"ಅಜ್ಜಿ ಒಂದು ಉಪಕಾರವಾಗಬೇಕಿತ್ತು" ಎಂದ.

'ಯಾರಪ್ಪ ನೀನು'

"ನಾನು ಯಾರಾದರೂ ಆಗಲಿ ಅಜ್ಜಿ. ಅಣ್ಣ ಊರಲ್ಲಿಲ್ಲ ಅತ್ತಿಗೆ ಜೀನ್ನಾಗಿದ್ದರು. ಆದರೆ...ಅವರ ಪ್ರಜ್ಞೆ ಇಲ್ಲದೆ ಮಲಗಿದ್ದಾರೆ. ನನಗೆ ಏನೂ ತೋಚುತ್ತಿಲ್ಲ ಬನ್ನಿ

"ಹುಚ್ಚ ಹುಡುಗಿ" ಎನ್ನುತ್ತಾ ಮೀನಾಕ್ಷಮ್ಮ. ಸೊಸೆಯನ್ನು ಕರೆತರುವಂತೆ ಒಬ್ಬ ಹೆಂಗಸನ್ನು ಕರೆದುಕೊಂಡು ರವಿಯೊಂದಿಗೆ ಮನೆಯೊಳಕ್ಕೆ ನಡೆದರು.

ಪ್ರಜ್ಞಾಹೀನಳಾಗಿ ಬಿದ್ದಿದ್ದ ಸುಧಾಳನ್ನು ಕಂಡಾಗ ಅವರ ಕಂಬಳು ಮರುಗಿತು. ರಾಜಲಕ್ಷ್ಮಿ ಧಾವಿಸಿ ಬಂದಳು. ಅತ್ತೆ ಸೊಸೆ ಸುಧಾಳನ್ನು ಕರೆತಂದು ಮಂಚದ ಮೇಲೆ ಮಲಗಿಸಿ ಶೈತ್ಯೋಪಚಾರ ಮಾಡಿದರು. ಮೀನಾಕ್ಷಮ್ಮನವರೆ ಚಿಕಿತ್ಸೆ, ಉಪಚಾರ ನೆರವೇರಿಸಿಯಾಯಿತು.

ರವಿ ಗಾಬರಿಗೊಂಡಿದ್ದು, ಮೀನಾಕ್ಷಮ್ಮ ಹೊರಕ್ಕೆ ಬಂದು "ಗಾಬರಿಯಿಂದ ಬೆಡುಪ್ಪು, ನಿನ್ನ ಅತ್ತಿಗೆ ಆರೋಗ್ಯವಾಗಿದ್ದಾರೆ ಎಂಬ ನಗುತ್ತಾ ನುಡಿದಳು.

ಸುಧಾಗೆ ಒಂದು ಗಂಟೆಯ ತರುವಾಯ ಎಚ್ಚರವಾಯಿತು. ಅವಳ ತಲೆಯ ಬದಿಯಲ್ಲಿಯೇ ಮೀನಾಕ್ಷಮ್ಮನ್ನು ಕುಳಿತಿದ್ದರು. ರಾಜಲಕ್ಷ್ಮಿ ಕಾಫಿಯನ್ನು ಲೋಟಕ್ಕೆ ಹಾಕಿ ಅಲ್ಲಿ ಬಂಯ ಬಳಿ ಹಿಡಿದು 'ಕಾಫಿ ಕುಡಿಯಮ್ಮ ಸಧಾ ಆಯಾಸ ಪರಿಹಾರವಾಗುತ್ತದೆ "ಎಂದಳು.

'ಸುಧಾ ಆಶ್ಚರ್ಯದಿಂದ ಸುತ್ತಲೂ ನೋಡಿದಳು. ಎಲ್ಲಿಗೂ ಯಾತ್ರೆಯೂ ತೋಚದಾಗಿತ್ತು.

ಮೀನಾಕ್ಷಮ್ಮ ಮೃದುವಾಗಿ 'ಕಾಫಿ ಕುಡಿ ತಾಯಿ' ಎಂದರು. ಸುಧಾ ಒಮ್ಮೆ ದೀನಭಾವದಿಂದ ಅವರನ್ನು ನೋಡಿ ಅವರ ಕೈಯಿಂದ "ಅಮ್ಮಾ" ಎಂದಳು ಕ್ಷೀಣ ಯಾಚನೆಯ ಭಾವದಲ್ಲಿ.

ಮೀನಾಕ್ಷಮ್ಮ 'ಹುಚ್ಚು ಹುಡುಗಿ' ಎಂದು ಮೃದುವಾಗಿ ಅವಳ ಹಣೆಯನ್ನು ಸವರಿದರು. ಅಮ್ಮ ಮಮತೆಯ ಅಮೃತ ಹಸ್ತದಿಂದ.

ಕುಂದಾಪುರ ಮುನ್ಸೀಫ್ ಕೋರ್ಟ್‌ನಲ್ಲಿ

S. C. 461/1966.

ವಾದಿ— ಕಳವಡಿ ವೆಂಕಪ್ಪ ಸಟ್ಟಿ

ಪ್ರತಿವಾದಿರು— 1 ದೇವಿ ಹೆಂಗ್ಸು

2. ನಾಣು.

ಕುಂದಾಪುರ ತಾಲ್ಲೂ ಬೈಂದೂರು ಗ್ರಾಮದಲ್ಲಿರುವ ಮಂಗಿ ಹೆಂಗ್ಸಿನ ಮಗಳು ದೇವಿ ಹೆಂಗ್ಸು. ಈಕೆಯ ಮಗ ನಾಣು 1 ಕೂಡಾ 2 ಜನರಿಗೆ ಈ ಸಮನ್ಸು ತಿಳಿಯಪಡಿಸುವುದೇನೆಂದರೆ

ಪ್ರತಿವಾದಿಂದ ವಾದಿಗೆ ಬರತಕ್ಕ ಕಳೆದ ತಾ. 2-10-1963ರ ಪರಿಗಿನ ಚಾಲಗೆಣ ಬಾಕಿ ಅರವಾದಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾವ್ಲು ಮಾಡಿದ ಪೀಲಿನ ದಾವೆಯು ತಾ. 2-1-1967ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇರುತ್ತದೆ. ಆ ಕಾರಣ ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀರು ಸಾಕಿಕೊಳ್ಳಕ್ಕದ್ದು ಎಂಬ ಸಂಗ್ತಿ. ಮೂಲ್ಯ ತಿಳಿಯಪಡ್ಸಿಯಿದೆ.

N. S. Parameshwariah
Advocate for Plff.

Date. 17—12—1966. Coondapoor.

ರೈತ ಭಾಂದವರ ಜೀವನ ಸಂಗಾತಿ.....

ಇಂಪಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.....

ಎಸ್. ಕೆ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬುಲ್ಲೊ ಪೀಟರ್ ಸ್ಟಾರ್ಟರುಗಳು.....

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ನಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

೨, ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

NAVAYUGA 29—12—1966
Registered with the Registrar of News Papers for India under No. K. N. 3646/'57

REGD. No. B. G. 176
LICENCE No. 31
Licensed to Post without Prepayment

ಸತ್ಯ ಸಂಗತಿ

ಎಂಟು ಸೆಕೆಂಡಿಗೊಂದು ಜನತಾ ಕಾರು

ಆ ಸೆಕೆಂಡಿಗೊಂದು ಕಾರು! ದಿನಕ್ಕೆ ೭೦೦೦ ಕಾರುಗಳು. ಜರ್ಮನಿಯ ವೋಲ್ಕ್ಸ ವ್ಯಾಗನ್ ಕಾರ್ಖಾನೆಯಲ್ಲಿ ಕಾರುಗಳು ತಯಾರಾಗುತ್ತಿರುವ ಪ್ರಮಾಣ ಇದು. ೩೦ ವರ್ಷಗಳ ಹಿಂದೆ ವೋಲ್ಕ್ಸ ವ್ಯಾಗನ್ ಕಾರನ್ನು ನಿರ್ಮಿಸಿದ ಪ್ರೊ. ಫರ್ಡಿನೆಂಡ್ ಪೋರ್ಷ್ಚರು ಶ್ರೀ ಸಾಮಾನ್ಯನಿಗೂ ನಿಲುಕುವ ಕಮ್ಮಿ ಬೆಲೆಯ ಉತ್ತಮ ಕಾರನ್ನೊದಗಿಸುವುದನ್ನು ತಮ್ಮ ಧ್ಯೇಯವಾಗಿಟ್ಟು ಕೊಂಡರು.

ಸ್ಟುಟ್‌ಗಾರ್ಟ್‌ನ ಕಿಲ್ಸ್‌ಬರ್ಗ್‌ನ ಗ್ಯಾರೇಜೊಂದರಲ್ಲಿ ತಿಂಗಳುಗಟ್ಟಲೆ ಯಂತ್ರಗಳು ನಡೆಯುತ್ತಿರುವ ಸದ್ದು ನಿರಂತರವಾಗಿ ಕೇಳಿ ಬರುತ್ತಿತ್ತು. ಅನಂತರ ೧೯೩೬ರ ಅಕ್ಟೋಬರ್ ತಿಂಗಳಲ್ಲಿ ದುಂಬಿಯ ಆಕಾರವನ್ನು ಹೋಲುವ, ಮತ್ತು ಇಂದಿನ ಅಭಿರುಚಿಯನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಅಷ್ಟೊಂದು ಅಂದವೆಂದು ಹೇಳಲಾಗದ ಮೂರು ಕಾರುಗಳು ಈ ಗ್ಯಾರೇಜಿನಿಂದ ಹೊರಬಂದವು. ಇವೇ ಪ್ರೊ. ಫರ್ಡಿನೆಂಡ್ ಪೋರ್ಷ್ಚರು ನಿರ್ಮಿಸಿದ ವೋಲ್ಕ್ಸ ವ್ಯಾಗನ್. ಇದಕ್ಕಾಗಿ ಫರ್ಡಿನೆಂಡರು ಮೂವರು ಇತರ ಜರ್ಮನ್ ಎಂಜನಿಯರರ ಜೊತೆ ಸತತ ಪ್ರಯೋಗ ದುಡಿತಗಳಲ್ಲಿ ನಿರತರಾಗಿದ್ದರು. ಜರ್ಮನಿಯ ಪ್ರಪಂಚ ವೋಲ್ಕ್ಸ ವ್ಯಾಗನ್‌ನಲ್ಲಿ ತಾಂತ್ರಿಕ ಮುನ್ನಡೆಯನ್ನು ಗಮನಿಸದಿರಲು ಸಾಧ್ಯವಾಗಲಿಲ್ಲ.

೧೯೩೭ರಲ್ಲಿ ತಮ್ಮ ೭೬ನೆ ವಯಸ್ಸಿನಲ್ಲಿ ನಿಧನರಾದ ಫರ್ಡಿನೆಂಡ್ ಪೋರ್ಷ್ಚರು ಕಾರು ಪ್ರಯೋಗಿಕ ಕ್ಷೇತ್ರವನ್ನು ಮನಸ್ಸಿನಲ್ಲಿಟ್ಟ ವ್ಯಕ್ತಿ. ಹುಡುಗರಾಗಿದ್ದಾಗಲೇ ಅವರಿಗೆ ವಿಚಿತ್ರವಾದ ತಾಂತ್ರಿಕ ಪ್ರಜ್ಞೆಯಿತ್ತು. ಹುಡುಗನನ್ನು ಕೊಳಾಯಿ ಹಾಕುವ ವೃತ್ತಿಯಲ್ಲಿ ನಿಪುಣನನ್ನಾಗಿ ಮಾಡಬೇಕೆಂಬ ಆಸೆ ಹೊಂದಿದ್ದ ಅವರ ತಂದೆಗೆ ಇದು ಸಹಿಸಲಾಗಲಿಲ್ಲ. ಆದರೆ ತನ್ನ ಮಾರ್ಗವನ್ನು ಬಿಡದ ಬಾಲಕ ಆಸ್ಟ್ರಿಯದ ಕಾರು ತಯಾರಿಕಾ ಕೈಗಾರಿಕಾ ಸಂಸ್ಥೆಯಲ್ಲಿ ಕೆಲಸಕ್ಕೆ ನಿಂತರು. ಹೊಸ ರೀತಿಯ ಎಂಜಿನ್ ತಯಾರಿಕೆಗೆ ವ್ಯಾಪಾರ ಭವಾಯಿತು. ಹೊಸ ರೀತಿಯ ಕಾರು ಯಂತ್ರ, ಅನಂತರ ರೇಸ್ ಕಾರು—ಇವುಗಳ ತಯಾರಿಕೆ, ಅನಂತರ ವಿಮಾನ ಯಂತ್ರಗಳನ್ನೂ ಪೋರ್ಷ್ ನಿರ್ಮಿಸಿದರು. ಇಷ್ಟಾದರೂ ಆ ಜನಸಾಮಾನ್ಯರಿಗೂ ನಿಲುಕುವಂತಹ ಉತ್ತಮ ಕಾರನ್ನು ನಿರ್ಮಿಸುವುದು ಅವರ ಜೀವನದ ಗುರಿಯಾಯಿತು. ಇದರ ಪರಿಣಾಮವೇ ಇವರು ೧೯೩೭ರಲ್ಲಿ ನಿರ್ಮಿಸಿದ ಹೊಸ ಬಗೆಯ ಕಾರು, ವೋಲ್ಕ್ಸ ವ್ಯಾಗನ್.

೧೯೩೭ರಲ್ಲಿ —ಆಗ ವೋಲ್ಕ್ಸ ವ್ಯಾಗನ್‌ಗಳು ಇನ್ನೂ ಸ್ಟುಟ್‌ಗಾರ್ಟಿನ ಡೈಮ್ಲರ್—ಬೆಂಜ್ ಕಾರ್ಖಾನೆಯಲ್ಲಿ ತಯಾರಾಗುತ್ತಿದ್ದವು— ೩೦ ವೋಲ್ಕ್ಸ ವ್ಯಾಗನ್‌ಗಳನ್ನು ಪೋರ್ಷ್‌ರು ಪರೀಕ್ಷಾರ್ಥವಾಗಿ ಕಳುಹಿಸಿಕೊಟ್ಟರು. ಆಗ ಈ ವೋಲ್ಕ್ಸ ವ್ಯಾಗನ್ ಇನ್ನೂ ಪರೀಕ್ಷಾ ವಸ್ತುವಿದ್ದಲ್ಲಿಯೇ ಇತ್ತು. ವೋಲ್ಕ್ಸ ವ್ಯಾಗನ್‌ನಿಂದ ಆಕರ್ಷಿತರಾದ ಹಿಟ್ಲರ್ ವೊಲ್ಕ್ಸ್‌ಬರ್ಗ್‌ನಲ್ಲಿ ವೋಲ್ಕ್ಸ ವ್ಯಾಗನ್ ಕಾರ್ಖಾನೆ ಸ್ಥಾಪಿಸಲು ೧೯೩೭ರಲ್ಲಿ ಕಟ್ಟಡದ ಶಂಕುಸ್ಥಾಪನೆ ನೂಡಿದರು. ವರ್ಷಕ್ಕೆ ದಶಲಕ್ಷ ಕಾರುಗಳನ್ನು ತಯಾರಿಸಬೇಕೆಂಬುದು ಅಗಿನ ಗುರಿ. ರಾಜಕೀಯ ಕಾರಣಗಳಿಂದಾಗಿ ಈ ಯೋಜನೆ ಕೈಬಿಡಬೇಕಾಯಿತು. ಜೀಪ್, ಟ್ಯಾಂಕ್ ಮುಂತಾದ ಯುದ್ಧೋಪಕರಣಗಳು ವೊಲ್ಕ್ಸ್‌ಬರ್ಗ್‌ನ ಕಾರ್ಖಾನೆಯಲ್ಲಿ ತಯಾರಾಗಲಾರಂಭಿಸಿದವು. ಯುದ್ಧಾನಂತರ ೧೯೪೫ರಲ್ಲಿ ವೋಲ್ಕ್ಸ ವ್ಯಾಗನ್‌ನ ಕಾರ್ಖಾನೆಯ ಸೇ. ೬೦ರಷ್ಟು ನಾಶ ಹೊಂದಿದ್ದು ಅದನ್ನು ಮತ್ತೆ ಚೇತನಗೊಳಿಸಬೇಕಾಯಿತು. ನಾರ್ಡೋಫ್‌ರ ನೇತೃತ್ವದಲ್ಲಿ ವೋಲ್ಕ್ಸ ವ್ಯಾಗನ್‌ನ ಪುನಶ್ಚೇತನ ಪ್ರಾರಂಭವಾಯಿತು. ವೋಲ್ಕ್ಸ ವ್ಯಾಗನ್ ನೊದಲು ಜರ್ಮನಿ ಅನಂತರ ಯುರೋಪ್ ಮತ್ತು ವಿದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನಪ್ರಿಯವಾಗ ತೊಡಗಿದವು.

ಯುದ್ಧಾನಂತರದ ದಶಕಕ್ಕೆ ವೋಲ್ಕ್ಸ ವ್ಯಾಗನ್ನಿನ ದಶಲಕ್ಷ ಕಾರು ತಯಾರಿಕೆ ಪೂರೈಸಿತು. ೧೯೬೫ಕ್ಕೆ ಅದರ ಸಂಖ್ಯೆ ೫ ದಶಲಕ್ಷಕ್ಕೇರಿತು; ೧೯೬೪ಕ್ಕೆ ಅದು ೮ ದಶಲಕ್ಷವಾಯಿತು.

ವೋಲ್ಕ್ಸ ವ್ಯಾಗನ್‌ನ ಪುನರ್‌ನಿರ್ಮಾಣದ ಪ್ರಾರಂಭದ ನಂತರ ಅದರ ಸಂಖ್ಯೆ ಈಗ ೧೫ ದಶಲಕ್ಷಕ್ಕೇರುವ ನಿರೀಕ್ಷೆಯಿದೆ. ವೊಲ್ಕ್ಸ್‌ಬರ್ಗ್, ಹ್ಯಾನೋವರ್, ಬ್ರಾನ್ಸ್‌ವಿಗ್ ಕ್ಯಾಸೆಲ್ ಮತ್ತು ಎಮ್ಡೆನ್‌ಗಳಲ್ಲಿ ೫ ವೋಲ್ಕ್ಸ ವ್ಯಾಗನ್ ಕಾರ್ಖಾನೆಗಳಲ್ಲಿ ಒಟ್ಟು ೧೫೫,೦೦೦ ಮಂದಿ ಕೆಲಸಗಾರರು ನೇಮಿಸಲ್ಪಟ್ಟಿರುವರು. ದಿನ1ಕ್ಕೆ ೭೦೦೦ ವೋಲ್ಕ್ಸ ವ್ಯಾಗನ್‌ಗಳು ತಯಾರಾಗುತ್ತಿವೆ.

ಜನತಾ ಕಾರನ್ನು ನಿರ್ಮಿಸುವ ವೋರ್ಷ್ಚರ ಆಸೆ ಒಂದು ರೀತಿ ಸಫಲವಾಗುತ್ತಿದೆ.

ಬೊಂಬಾಯಿಯಲ್ಲಿ ಯಕ್ಷಗಾನ

ತಾ. 10-12-66ರಲ್ಲಿ ಬೊಂಬಾಯಿ ಘಾಟಿಕೋಪರ್ ಪಂಥನಗರದ ಸನಾತನ ಮಂಡಲದಲ್ಲಿ ದ. ಕ. ಜಿಲ್ಲೆಯಿಂದ ಬಂದಿರುವ ಪ್ರಸಿದ್ಧ ಯಕ್ಷಗಾನ ಕಲಾವಿದರ ಮತ್ತು ಮುಂಬಾಯಿಯ ಕಲಾವಿದರ ಕೂಡುವಿಕೆಯಿಂದ ಶರಾಪರ್ವ ಎಂಬ ಯಕ್ಷಗಾನ ಕೂಟವು ಪಂಥನಗರ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಬಿ. ವಿಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ನಿಂಜೂರು ಸಾದು ಶೆಟ್ಟಿಯವರು ಕಲಾವಿದರನ್ನು ಸ್ವಾಗತಿಸಿದ ಬಳಿಕ ಶ್ರೀ ಉಪ್ಪಿ ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ಮಂಜುನಾಥ ಅಚಾರಿ ಮೃದಂಗವಾದನ, ಸರ್ವಶ್ರೀ ಪೂಲ್ಕ ದೇವಪ್ಪ ಶೆಟ್ಟಿಯವರ (ಕರ್ಣ) ಸೀತಾನದಿ ಗಣಪಯ್ಯ ಶೆಟ್ಟಿಯವರ (ಶಲ್ಯ) ಮಾಣಯೂರು ಪಿಲಿಂದ ಶೆಟ್ಟಿ (ಶಕುನಿ) ಅಡ್ಡೆ ವಾಸು ಶೆಟ್ಟಿ (ಅರ್ಜುನ) ಕ್ರಿಸ್ತನಿವಾಸ ಭಟ್ಟ (ಕೃಷ್ಣ) ರಾಜು ಶೆಟ್ಟಿ (ಸುಹಸೇನ) ಇವರೇ ಮೊದಲಾದ ಕಲಾವಿದರ ಕೂಡುವಿಕೆಯಿಂದ ಜರಗಿದ ಬಳಿಕ ಅಧ್ಯಕ್ಷರು ಬಿ. ವಿಠಲ ಶೆಟ್ಟಿಯವರ ಧನ್ಯವಾದದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. P. No. 30/66.

A. ಅಚ್ಯುತ —ಅರ್ಜಿದಾರ

ಮತ್ತು

1. ಜಾನಕಿ 2. ವಾಸು 3. ಗೋಪಾಲ 4. ಎಕೋದರ —ಎದ್ರಿರು

ಯಿನಕೊಳಗೆ

ಸರ್ವರಿಗೂ ಯಿಂ ಮೂಲ್ಕ ತಿಳಿಯಪಡಿಸುವುದು.

ಉಡುಪಿ ತಾಲ್ಲೂ ಮೂಡನಡಂಬೂರು ಗ್ರಾಮದ ಕಾಪ್ಟೆಟ್ಟುನಲ್ಲಿದ್ದು ತಾ. 14.7.65ರಲ್ಲಿ ಮಿಶ್ಯನ್ ಆಸ್ಪತ್ರೆಯಲ್ಲಿ ವ್ಯಕರಾದ ಮಾಣಕ್ಕದನ್ ನಾರಾಯಣ ಬ್ಯಾಯನ ನಾರಾಯಣಿ ಅಂಮಳ್ ಉಡ್ಡಿಹರ್ ಪೋಷ್ಟಾಫೀಸಿನಲ್ಲಿ ಡಿಪೋಜಿಟಾಗಿ ಯಿಟ್ಟರುವ ಹಣ—ರೂಪ್ಯಾ 6668—88ರನ್ನು ವಸೂಲು ಪಡಿಯುವರೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೋರ್ಟಿಗೆ ಮಾಡಿದ ಅರ್ಜಿಯು ತಾ. 19—1—67ಕ್ಕೆ ತನ್ನಿಗೆ ಯಿಟ್ಟುರುವದ್ರಿಂದ ಅಕ್ಷೇಪಸಕ್ಕವಯಸ್ಸಾದ್ರೆ ಆ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಸ್ವತಹ ಆ ಮುಲಕರು ಮುಕ್ತಾರರು ಹೇಳಿಕೊಳ್ಳತಕ್ಕದ್ದು. ಇಲ್ಲವಾದ್ರೆ ಅರ್ಜಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟ್ ಹ್ಯುಂ ಪ್ರಕಾರ)

B. Yogishwara Holla
B. A., L. L. B.
Advocate for Petitioner.

Udipi, 20—12—66.

In the Court of the Munsiff of Coondapoor.

I. P. No. 1/1966.

Between:

Rama Poojari ... Petitioner

and

A. Kristappa Shetty and others' Respondents.

Notice is hereby given that the petitioner has applied to this Court for adjudging himself as an insolvent. The said matter is posted to 16—1—1967 for hearing. All persons who are interested in the matter may come and urge their objections, at 11 A. M. before the said Court.

M. Madhava Rao,
Advocate.

Station: Coondapoor.
Dated : 14-12-1966.

ವಿದ್ಯಾರ್ಥಿಗಳಿಗೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ|| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟಿ.ಪಿ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟಿ.ಪಿ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೆಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. Kanara, India.